ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳು ಹಾಗೂ ಕರ್ನಾಟಕದ ರಾಜಕಾರಣ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ, ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕೆ.ಎನ್. ಮಂಜುನಾಥ

ಮಾರ್ಗದರ್ಶಕರು

ಡಾ.ಸಿ.ಆರ್. ಗೋವಿಂದರಾಜು

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳು ಹಾಗೂ ಕರ್ನಾಟಕದ ರಾಜಕಾರಣ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕೆ.ಎನ್. ಮಂಜುನಾಥ

ಮಾರ್ಗದರ್ಶಕರು

ಡಾ.ಸಿ.ಆರ್. ಗೋವಿಂದರಾಜು

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳು ಹಾಗೂ ಕರ್ನಾಟಕದ ರಾಜಕಾರಣ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪಿಎಚ್.ಡಿ. ಪದವಿಗಾಗಿ **ಕೆ.ಎನ್. ಮಂಜುನಾಥ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಸಿ.ಆರ್. ಗೋವಿಂದರಾಜು
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : 2.೧.೨೦೨೦

ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣಪತ್ರ

ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳು ಹಾಗೂ ಕರ್ನಾಟಕದ ರಾಜಕಾರಣ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಸಿ.ಆರ್. ಗೋವಿಂದರಾಜು,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ **ಚರಿತ್ರೆ** ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಕೆ.ಎನ್. ಮಂಜುನಾಥ)
ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ: ೭.೨.೨೦೨೦
ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅನುಬಂಧಗಳು / ೨೩೮-೨೬೫

ಅನುಬಂಧ - ೧

೧. ಪ್ರಾಥಮಿಕ ಆಕರಗಳು

ಅ. ಶಾಂತವೇರಿ ಗೋಪಾಲಗೌಡರ ಲೇಖನಗಳು, ಪತ್ರಗಳು, ಡೈರಿ, ಕೈ ಬರಹ ಇತ್ಯಾದಿ

ಆ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೨

ಇ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೩

ಈ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೪

ಉ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೫

ಊ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೬

ಋ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩

ಎ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೪

ಏ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೬

ಐ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೭

ಒ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೭೦

೨. ಪಿಎಚ್.ಡಿ. ಹಾಗೂ ಎಂ.ಫಿಲ್. ಪ್ರಬಂಧಗಳು (ಪ್ರಕಟಿತ ಹಾಗೂ ಅಪ್ರಕಟಿತ)

೩. ಪೂರಕ ಸಾಹಿತ್ಯ

ಅ. ಕನ್ನಡ ಕೃತಿಗಳು

ಆ. ಆಂಗ್ಲ ಕೃತಿಗಳು

ಇ. ಕನ್ನಡ ಸಂಪ್ರಬಂಧಗಳು ಹಾಗೂ ಲೇಖನಗಳು

ಈ. ಇಂಗ್ಲೀಶ್ ಸಂಪ್ರಬಂಧಗಳು ಹಾಗೂ ಲೇಖನಗಳು

೪. ನಿಯತಕಾಲಿಕೆಗಳು, ವಾರಪತ್ರಿಕೆಗಳು ಹಾಗೂ ದಿನಪತ್ರಿಕೆಗಳು

ಅನುಬಂಧ - ೨

ಸಂದರ್ಶನದ ವಿವರಗಳು

ಅನುಬಂಧ - ೩

ಛಾಯಾಚಿತ್ರಗಳು

ಅಧ್ಯಾಯ : ಒಂದು

ಅಧ್ಯಯನದ ಹಿನ್ನೆಲೆ – ಆಶಯ ಮತ್ತು ಮಹತ್ವ – ಸಮೀಕ್ಷೆ – ವ್ಯಾಪ್ತಿ ಹಾಗೂ ಮಿತಿಗಳು – ವೈಧಾನಿಕತೆ – ಸ್ವರೂಪ

೧.೧ ಅಧ್ಯಯನದ ಹಿನ್ನೆಲೆ-ಆಶಯ ಹಾಗೂ ಮಹತ್ವ

೧.೨. ಅಧ್ಯಯನದ ಸಮೀಕ್ಷೆ

೧.೩. ಅಧ್ಯಯನದ ವ್ಯಾಪ್ತಿ ಹಾಗೂ ಮಿತಿಗಳು

೧.೪ ಅಧ್ಯಯನದ ವಿಧಿ-ವಿಧಾನಗಳು

೧.೫ ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಹಿನ್ನೆಲೆ – ಆಶಯ ಮತ್ತು ಮಹತ್ವ – ಸಮೀಕ್ಷೆ – ವ್ಯಾಪ್ತಿ ಹಾಗೂ ಮಿತಿಗಳು – ವೈಧಾನಿಕತೆ – ಸ್ವರೂಪ

೧.೧. ಅಧ್ಯಯನದ ಹಿನ್ನೆಲೆ, ಆಶಯ ಹಾಗೂ ಮಹತ್ವ

ಇಂಡಿಯಾವು ವಸಾಹತುಶಾಹಿ ಬಂಧನದಿಂದ ಬಿಡುಗಡೆ ಹೊಂದುವುದಕ್ಕೆ ಮೊದಲು ಹಾಗೂ ಬಿಡುಗಡೆ ಹೊಂದಿದ ಅನಂತರ ಸಂಕೀರ್ಣವೂ, ಅಮೂರ್ತವೂ ಆದಂಥ ಸನ್ನಿವೇಶಗಳಿಗೆ ಈಡಾಯಿತು. ಕನ್ನಡದ ಸಂದರ್ಭವು ಸಹ ಇದಕ್ಕಿಂತ ಭಿನ್ನವಾಗಿತ್ತು ಎಂದು ಪ್ರತ್ಯೇಕವಾಗಿ ನೋಡಬೇಕಾದ ಜರೂರು ಇಲ್ಲ. ಏಕೆಂದರೆ ನಾಡು ಹಾಗೂ ದೇಶಗಳೆರಡರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳು ಒಂದೇ ಆಗಿದ್ದವು. ಅದರಲ್ಲೂ ಕಳೆದ ಶತಮಾನದ ೧೯೫೦ರಿಂದ ೧೯೭೦ರ ನಡುವಿನ ಎರಡೂ ದಶಕಗಳ ರಾಜಕಾರಣ ಹಾಗೂ ಸಾಮಾಜಿಕ ಪರಿಚಲನೆಗಳು ಅಧ್ಯಯನ ಯೋಗ್ಯವಾದುವು. ಈ ದಶಕಗಳಲ್ಲಿನ ಸಮಾಜ ಹಾಗೂ ರಾಜಕಾರಣದ ನೆಲೆಗಳು ಹಲವು ಬದಲಾವಣೆಗಳನ್ನು ಕಂಡವು. ಭಾರತಕ್ಕೆ ಸ್ವಾತಂತ್ರ್ಯ ಬಂದಿತು ಎಂಬ ಹೆಮ್ಮೆ, ಸಂತಸ ಹಾಗೂ ಸಂಭ್ರಮಗಳು ಒಂದು ಕಡೆಗೆ. ಆ ಸ್ವಾತಂತ್ರ್ಯದ ಫಲಗಳು ಸಾಮಾನ್ಯರ ಬದುಕನ್ನು ಸಮಗ್ರವಾಗಿ ಬದಲಾಯಿಸಬಹುದೇ ಎಂಬ ಅನುಮಾನ ಹಾಗೂ ಗುಮಾನಿಗಳು ಮತ್ತೊಂದು ಕಡೆಗೆ. ಭಾರತದ ಪ್ರಜಾಪ್ರಭುತ್ವವು ತನ್ನದೇ ಆದ ಅಭಿವೃದ್ಧಿಯ ಮಾದರಿಗಳನ್ನು ರೂಪಿಸುತ್ತಿತ್ತು. ಮತ್ತೊಂದು ಕಡೆಗೆ ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ಆ ಅಭಿವೃದ್ಧಿಯ ಮಾದರಿಗಳನ್ನು ವಿಮರ್ಶಿಸಿ ಪರಿಶೀಲಿಸಲು ಮುಂದಾಗಿದ್ದರು. ಇದರ ಫಲವಾಗಿಯೇ ಹಲವು ಪ್ರಗತಿಪರ ಚಳವಳಿಗಳು ಹುಟ್ಟಿಕೊಂಡದ್ದು. ೧೯೪೬ರಿಂದ ೧೯೫೨ರವರೆಗಿನ ತೆಲಂಗಾಣ ಹೋರಾಟದ ನೆಲೆಗಳು ಹಲವು ಪರಿಣಾಮಗಳಿಗೆ ಎಡೆಮಾಡಿಕೊಟ್ಟಿತ್ತು. ಅವಿಭಜಿತ ಸಿ.ಪಿ.ಐ. ಪಕ್ಷ ಹೋರಾಟದ ನೇತೃತ್ವವನ್ನು ವಹಿಸಿತ್ತು. ಸಾಮಾನ್ಯ ರೈತರು, ಭೂ ಹೀನ ಕೃಷಿ ಕೂಲಿಕಾರ್ಮಿಕರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದು ಗಮನಾರ್ಹ. ಹೈದರಾಬಾದ್ ನಿಜಾಮನ ಊಳಿಗಮಾನ್ಯ ಆಡಳಿತದ ವಿರುದ್ಧದ ಹೋರಾಟವು ಗಂಭೀರವಾಗಿತ್ತು. 'ಉಳುವವನಿಗೇ ಭೂಮಿ' ಎಂಬ ಘೋಷಣೆಯ ಅಡಿಯಲ್ಲಿ ಈ ಹೋರಾಟವನ್ನು ನಡೆಸಿದ್ದು ವಿಶೇಷವಾಗಿತ್ತು. ಈ ಹೋರಾಟದ ಪ್ರಭಾವ-ಪರಿಣಾಮಗಳು ಭಾರತದ

ಬೇರೆ ಬೇರೆ ಪ್ರದೇಶಗಳಲ್ಲಿಯೂ ಆಗದೆ ಇರಲಿಲ್ಲ. ರೈತರು ಮತ್ತು ಕಾರ್ಮಿಕರು ತಮ್ಮ ಮೇಲೆ ನಡೆಯುತ್ತಿದ್ದ ಅನ್ಯಾಯ ಮತ್ತು ಶೋಷಣೆಗಳನ್ನು ಗಮನಿಸತೊಡಗಿದ್ದರು. ಅವುಗಳ ವಿರುದ್ಧದ ಅಸಹನೆ ಹಾಗೂ ಪ್ರತಿರೋಧಗಳು ಸಮಾಜದ ಆಳದಲ್ಲಿ ಚಿಗುರೊಡೆಯಲಾರಂಭಿಸಿದ್ದವು. ಇಂತಹ ಹೋರಾಟಗಳಿಗೆ ಹಲವು ಚಿಂತಕರ ಚಿಂತನಾ ನೆಲೆಗಳೇ ತಳಹದಿಯಾಗಿದ್ದವು ಎಂದರೆ ತಪ್ಪಾಗಲಾರದು.

ಪ್ರಗತಿಪರ ಚಳವಳಿಗಳ ಮೂಲಕ ಆ ಹೊತ್ತಿನ ಸಮಾಜವು ಅನೇಕ ಸ್ಥಿತ್ಯಂತರಗಳನ್ನು ಕಾಣತೊಡಗಿತು. ಇಂಥ ಪ್ರಗತಿಪರ ಚಳವಳಿಗಳಲ್ಲಿ ಸಮಾಜವಾದಿ ಚಳವಳಿಯೂ ಒಂದು. ಈ ಚಳವಳಿಯು ಇನ್ನುಳಿದ ಚಳವಳಿಗಳಿಗಿಂತ ಬೇರೆಯದೇ ಆದ ಪಾತ್ರ ಹಾಗೂ ಪರಿಣಾಮಗಳನ್ನು ಹುಟ್ಟುಹಾಕಿದ್ದು ಗಮನಾರ್ಹ. ಗೇಣಿದಾರರ ಮೇಲಿನ ಶೋಷಣೆಯನ್ನು ವಿರೋಧಿಸುವ ಭಾಗವಾಗಿ ಹುಟ್ಟಿದ 'ಕಾಗೋಡು ರೈತ ಹೋರಾಟ'ವು 'ಉಳುವವನಿಗೇ ಭೂಮಿ' ಎಂಬ ಆಶಯವನ್ನು ಗೇಣಿದಾರರ ಮುಂದಿಟ್ಟಿತು. ಸಮಾಜವಾದಿ ಆಶಯಗಳು ಹಾಗೂ ಸಮಾಜವಾದಿ ಚಿಂತನೆಗಳೇ ಇದಕ್ಕೆ ವೈಚಾರಿಕವಾಗಿ ತಳಹದಿಯಾಗಿದ್ದವು. ಈ ಸನ್ನಿವೇಶದಲ್ಲಿ ಕಾಣಿಸಿಕೊಂಡವರೇ ಶಾಂತವೇರಿ ಗೋಪಾಲಗೌಡರು.

ಕರ್ನಾಟಕದ ಸಮಾಜವಾದಿ ಚಳವಳಿಯ ಬಗೆಗೆ ಚರ್ಚೆ ಮಾಡುವಾಗ ಶಾಂತವೇರಿ ಗೋಪಾಲಗೌಡ ಅವರನ್ನು ಹೊರತುಪಡಿಸಿ ನೋಡಲಾಗದು. ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದ ಗೋಪಾಲಗೌಡರನ್ನು ಗಾಂಧೀಜಿ, ಲೋಹಿಯಾ ಹಾಗೂ ಜಯಪ್ರಕಾಶ್ ನಾರಾಯಣ ಅವರ ಚಿಂತನೆಗಳು ಸಾಕಷ್ಟು ಪ್ರಭಾವಿಸಿದ್ದವು. ಹಾಗಾಗಿಯೇ ಇವರು ಸಮಾಜವನ್ನು ವಿಮರ್ಶಾತ್ಮಕವಾದ ನೋಟಗಳಿಂದ ನೋಡಲು ಆರಂಭಿಸಿದರು. ತಮ್ಮ ವಿದ್ಯಾರ್ಥಿ ದೆಸೆಯಲ್ಲೆ ದೇಶದ ಸ್ವಾತಂತ್ರ್ಯ ಹೋರಾಟದ ಬಗೆಗೆ ಆಸಕ್ತಿ ತಳೆದು ಸಮಾಜವಾದಿ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದರು. ಆದ್ದರಿಂದಲೇ ಯುವಜನರ ಮತ್ತು ಶೋಷಿತ ಕೃಷಿಕ ಸಮುದಾಯಗಳಲ್ಲಿ ಪ್ರಗತಿಪರವಾದ ಚಿಂತನೆಗಳನ್ನು ಹುಟ್ಟುಹಾಕುವಂತಾಗಿದ್ದು.

ಕರ್ನಾಟಕದ ರಾಜಕಾರಣದಲ್ಲಿ ಕೆಲವು ವರ್ಷಗಳ ಕಾಲ ತಮ್ಮದೇ ಆದ ಭಿನ್ನವಾದ ಛಾಪನ್ನು ಮೂಡಿಸಿದವರು ಗೋಪಾಲಗೌಡರು. ಸ್ವಾತಂತ್ರ್ಯ ನಂತರದಲ್ಲಿ ಸಮಾಜದ ಅಂಕು-ಡೊಂಕುಗಳನ್ನು ತಿದ್ದಲು ಸಮಾಜವಾದದ ಮೂಲಕವೇ ರಾಜಕಾರಣವನ್ನು ಮಾಡಿದ್ದು ಗಮನಾರ್ಹ. ಜೊತೆಗೆ ಸಮಾಜದ ಹಿಂದುಳಿದ ರೈತರು ಮತ್ತು ಕೂಲಿಕಾರ್ಮಿಕರಲ್ಲಿ ಜಾಗೃತಿ ಮೂಡಿಸಲು ಹಾಗೂ ಪರ್ಯಾಯ ನಾಯಕತ್ವವನ್ನು ಬೆಳೆಸಲು ಅವಿರತವಾಗಿ ಶ್ರಮಿಸಿದವರು.

ಇಂದು ಸಮಾಜವಾದಿ ಹೋರಾಟಗಳಾಗಲಿ, ಚಳವಳಿಗಳ ರಾಜಕಾರಣವಾಗಲಿ ಇಲ್ಲದಂಥ ಪರಿಸರದಲ್ಲಿ ನಾವಿದ್ದೇವೆ. ಎಲ್ಲೆಡೆ ಕಾರ್ಪೋರೇಟ್ ಹಾಗೂ ಜಾಗತೀಕರಣದ ಶಕ್ತಿಗಳು ಮೇಲುಗೈ ಸಾಧಿಸುತ್ತಿವೆ. ಹೋರಾಟ ಹಾಗೂ ಚಳವಳಿಗಳು ದಿಕ್ಕೆಟ್ಟಂಥ ಪರಿಸ್ಥಿತಿಯಲ್ಲಿವೆ. ಎಲ್ಲಾ ಬಗೆಯ ಅಸಮಾನತೆ ಮತ್ತು ಶೋಷಣೆಗಳನ್ನು ಕುರಿತು ಇದು ಅಸಮಾನತೆಯೂ ಅಲ್ಲ, ಶೋಷಣೆಯೂ

ಅಲ್ಲ ಎಂದು ಒಪ್ಪಿಕೊಳ್ಳುವ ಕಾಲ ಇದಾಗಿದೆ. ಆದರೆ ಅಸಮಾನತೆ ಹಾಗೂ ಅನ್ಯಾಯಗಳನ್ನು ವಿರೋಧಿಸುವ ಚಿಂತನೆಗಳು ಸಮಾಜದಿಂದ ಸಂಪೂರ್ಣ ಮರೆಯಾಗಿಲ್ಲ ಎಂಬುದೇ ಸಮಾಧಾನಕರ ಸಂಗತಿ. ಸಮಾಜದಲ್ಲಿ ಸಮಾನತೆಯನ್ನು ಬಯಸುವ ಆಶಯಗಳು ಇನ್ನು ಸಮಾಜದಿಂದ ದೂರವಾಗಿಲ್ಲ ಎಂಬುದು ಸಹ ಮುಖ್ಯವಾದುದು.

ಇಂಥ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳನ್ನು ಅಧ್ಯಯನ ಮಾಡುವ ತುರ್ತು ಇದೆ. ಅದರ ಭಾಗವಾಗಿ ಕರ್ನಾಟಕದ ರಾಜಕಾರಣದ ಅಧ್ಯಯನವನ್ನು ಸಹ. ಈ ಹಿನ್ನೆಲೆಗಳಿಂದ ಪ್ರಸ್ತುತ ಪಿಎಚ್.ಡಿ. ಅಧ್ಯಯನಕ್ಕೆ 'ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳು ಹಾಗೂ ಕರ್ನಾಟಕದ ರಾಜಕಾರಣ' ಎಂಬ ಶೀರ್ಷಿಕೆಯನ್ನು ರೂಪಿಸಿ, ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ರೈತರ ಹಾಗೂ ಜನಸಾಮಾನ್ಯರ ಬದುಕು ಅಷ್ಟೇನೂ ಸಮೃದ್ಧವಾಗಿರಲಿಲ್ಲ. 'ಗೇಣಿ' ಎಷ್ಟಿರಬೇಕೆಂಬ ಒಂದು ವಿವಾದವೇ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದ ಜಮೀನುದಾರ-ರೈತರ ನಡುವೆ ಸಂಘರ್ಷವನ್ನೇ ಉಂಟುಮಾಡಿತು. ರಾಜಿ-ಸಂಧಾನಗಳು ಫಲಿಸದೆ ಚಳವಳಿ ಆರಂಭವಾಗಿದ್ದು ಗಮನಾರ್ಹ. ಪೊಲೀಸರಿಗೆ ದೂರು ಹೋಯಿತು. ಇದನ್ನರಿತ ಶಾಂತವೇರಿ ಗೋಪಾಲಗೌಡ ಅವರು ಗೇಣಿರೈತರ ಪರವಾಗಿ ಚಿಂತನೆ ಹಾಗೂ ಹೋರಾಟಗಳನ್ನು ರೂಪಿಸಿ ರೈತರಲ್ಲಿ ಜಾಗೃತಿ ಮೂಡಿಸಿದ್ದು ದಾಖಲಾರ್ಹ. ಇದರಿಂದಾಗಿ ರೈತರೆಲ್ಲಾ ಒಗ್ಗೂಡಿ ಭೂಮಾಲೀಕರ ಸ್ವೇಚ್ಛಾಚಾರವನ್ನು ಪ್ರಶ್ನಿಸುವಂತೆ ಆಯಿತು. ಈ ದಿಸೆಯಲ್ಲಿ ಉಂಟಾದ ಎಚ್ಚರವೇ ಮುಂದೆ 'ಕಾಗೋಡು ರೈತ ಸತ್ಯಾಗ್ರಹ' ರೂಪುಗೊಳ್ಳಲು ಕಾರಣವಾಯಿತು. ಅಂದರೆ ರೈತ ಸತ್ಯಾಗ್ರಹಕ್ಕೆ ಸೈದ್ಧಾಂತಿಕ ದೃಷ್ಟಿಕೋನ ನೀಡಿದವರು ಸಮಾಜವಾದಿಗಳೇ. 'ಉಳುವವನೇ ಹೊಲದೊಡೆಯ' ಎಂಬ ಘೋಷಣೆ ಮನೆಮಾತಾಯಿತು. ಇದಕ್ಕೆಲ್ಲ ಮೂಲ ಕಾರಣಕರ್ತರು ಶಾಂತವೇರಿ ಗೋಪಾಲಗೌಡರ ಮುಂದಾಳತ್ವ. ಈ ಚಿಂತನೆ, ಚಳವಳಿಗಳಿಗೆ ಮುಂದೆ ಸಿಕ್ಕ ಉತ್ತರಗಳೇನು ಎಂಬುದನ್ನು ಪರಿಶೀಲಿಸುವ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ಅವರ ಚಿಂತನೆ ಹಾಗೂ ಹೋರಾಟಗಳನ್ನು ಸಾಕಾರಗೊಳಿಸುವಲ್ಲಿ ಎದುರಾದ ಅಡೆ-ತಡೆಗಳನ್ನು ಕುರಿತು ಪರಿಶೀಲಿಸಿ ಅಧ್ಯಯನ ನಡೆಸುವ ಪ್ರಯತ್ನ ಇಲ್ಲಿನದು.

ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಯ ಹೋರಾಟಗಳು ಶಿವಮೊಗ್ಗ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಭದ್ರವಾದ ನೆಲೆಯನ್ನು ಕಂಡುಕೊಂಡು, ಸಾಮಾಜಿಕ ಬದಲಾವಣೆ ತರಲು ಯಾವ ರೀತಿ ಒತ್ತಾಯಿಸುತ್ತಿದ್ದವು ಎಂಬುದು ಮೂಲಭೂತವಾದ ಪ್ರಶ್ನೆ. ಅಂದಿನ ಸಮಾಜವಾದಿ ಪಕ್ಷವು ರೂಪಿಸುತ್ತಿದ್ದ ಜನತೆಯ ಪರವಾದ ಹೋರಾಟಗಳು ಚಿಕ್ಕ ಪ್ರಮಾಣದಲ್ಲಿದ್ದರೂ ಅವುಗಳ ಸೈದ್ಧಾಂತಿಕ ನಿಲುವು ಹೇಗೆ ಖಚಿತವಾಗಿರುತ್ತಿತ್ತು ಎಂಬುದನ್ನು ವಿಶ್ಲೇಷಿಸುವುದು ಸಹ ಅಧ್ಯಯನದ ಆಶಯಗಳಲ್ಲಿ ಒಂದು.

ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದವು ಕೇವಲ ಬೌದ್ಧಿಕ ಗ್ರಹಿಕೆಯಾಗಿರಲಿಲ್ಲ. ಬದಲಾಗಿ ಅದೊಂದು ಅವರ ಜೀವನ ವಿಧಾನವೇ ಆಗಿತ್ತು. ಅವರ ನಿತ್ಯ ಜೀವನದಲ್ಲಿ ಕಂಡುಬಂದ ಕಟುವಾಸ್ತವವೂ ಹೌದು. ತಮ್ಮ ಖಾಸಗಿ ಹಾಗೂ ಸಾರ್ವಜನಿಕ ಜೀವನಗಳೆಡರಲ್ಲಿ ನಡೆ-ನುಡಿಗಳಲ್ಲಿ ಒಂದಾಗಿ ಜೀವಿಸಿದವರು. ಇವರಲ್ಲಿದ್ದ ಸರಳತೆ, ನೈತಿಕ ಧೈರ್ಯ, ಅಗಾಧವಾದ ಜೀವನ ಪ್ರೀತಿ, ಸೌಂದರ್ಯ ಪ್ರಜ್ಞೆಯ ಬಗೆಗೆ ಚೆನ್ನಾಗಿ ಅರಿತುಕೊಂಡಿದ್ದ ಅವರ ವಿರೋಧಿಗಳು ಹಾಗೂ ಹಲವು ವಿಷಯಗಳಲ್ಲಿ ಶಾಂತವೇರಿ ಗೋಪಾಲಗೌಡರೊಂದಿಗೆ ಭಿನ್ನಮತ ಹೊಂದಿದ್ದ ಸ್ನೇಹಿತರೂ ಕೂಡ ತುಂಬು ಗೌರವದಿಂದಲೇ ಕಂಡದ್ದಕ್ಕೆ ಕಾರಣ ಏನು ಎಂಬುದನ್ನು ಅಧ್ಯಯನಕ್ಕೆ ಒಳಗಾಗಿಸುವ ಜರೂರು ಇದೆ.

ನಾಡಿನ ರಾಜಕಾರಣದಲ್ಲಿ ಒಬ್ಬ ಶಾಸಕರಾಗಿ, ಚಿಂತಕರಾಗಿ, ರೈತಪರ ಹೋರಾಟಗಾರರಾಗಿ, ಸಮಾಜವಾದಿ ಚಳವಳಿಯ ಮುಖಾಂತರ ಶಾಸನಸಭೆಗಳಲ್ಲಿ, ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಶಾಂತವೇರಿ ಗೋಪಾಲಗೌಡರು ನಿರ್ವಹಿಸಿದ ಪಾತ್ರವನ್ನರಿತು ಪರಿಶೀಲಿಸಬೇಕಿದೆ. ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ, ಗಾಂಧಿ, ಅಂಬೇಡ್ಕರ್ ಅವರ ಚಿಂತನೆಗಳು ಯಾವ ರೀತಿ ಪ್ರಸ್ತುತ ಸಮಾಜಕ್ಕೆ ಅಗತ್ಯವಾಗಿದೆಯೋ ಹಾಗೆಯೇ ಶಾಂತವೇರಿ ಗೋಪಾಲಗೌಡ ಅವರ ಚಿಂತನೆಗಳನ್ನು ಸಹ ಅಧ್ಯಯನಕ್ಕೆ ಒಳಪಡಿಸುವ ಪ್ರಸ್ತುತತೆ ಇದೆ.

೧೯೭೦ರ ದಶಕದಲ್ಲಿ ನಾಡಿನ ರಾಜಕಾರಣದಲ್ಲಾದ ಬಿಕ್ಕಟ್ಟಿನ ಸನ್ನಿವೇಶವು ಶಾಂತವೇರಿ ಗೋಪಾಲಗೌಡರು ಹಾಗೂ ಸಮಾಜವಾದಿಗಳು ಅಧಿಕಾರ ಪಡೆಯುವಲ್ಲಿ ವಿಫಲರಾಗುವಂತೆ ಮಾಡಿತು. ಆದರೂ ಇದು ಚಾರಿತ್ರಿಕವಾಗಿ ಎಷ್ಟರಮಟ್ಟಿಗೆ ಉಲ್ಲೆಖಾರ್ಹವಾಗುತ್ತದೆ ಎಂಬುದನ್ನು ಅಧ್ಯಯನ ಮಾಡಬೇಕಿದೆ. ಅಲ್ಲದೆ ಪ್ರಸ್ತುತ ಕರ್ನಾಟಕದ ರಾಜಕೀಯ ವ್ಯವಸ್ಥೆಯನ್ನು ತೌಲನಿಕ ಅಧ್ಯಯನಕ್ಕೂ ಒಳಪಡಿಸಬೇಕಿದೆ. ಅಂದರೆ ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳನ್ನು ಹಾಗೂ ರಾಜಕಾರಣವನ್ನು ವೈಚಾರಿಕತೆಯ ನೆಲೆಯಲ್ಲಿ ನೋಡುವುದರ ಜೊತೆಗೆ ಸಮಕಾಲೀನ ರಾಜಕಾರಣದಲ್ಲಿ ಅದರ ಪ್ರಸ್ತುತತೆಯನ್ನು ಕುರಿತು ಅಧ್ಯಯನ ಮಾಡುವ ಆಶಯವನ್ನೂ ಹೊಂದಲಾಗಿದೆ.

'ಸಮಾಜವಾದ' ಮತ್ತು 'ಸಮಾಜವಾದಿ ಚಿಂತನೆ'ಗಳು ಎಂಬುವು ಇವತ್ತು ಪ್ರಾಯೋಗಿಕವಾಗಿ ಅನುಷ್ಠಾನದಲ್ಲಿ ಇಲ್ಲ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಶೋಷಣೆಗಳೇ ಮೇಲುಗೈ ಸಾಧಿಸುತ್ತಿವೆ. ಇವುಗಳ ಪರವಾದ ಚಿಂತನೆಗಳು ಸಮಾಜವಾದವನ್ನು ಮತ್ತು ಸಮಾಜವಾದಿ ಆಶಯದ ನೆಲೆಗಳನ್ನು ಹಗುರವಾಗಿ ನೋಡುವ ಮಟ್ಟಕ್ಕೆ ಹೋಗಿವೆ. ಸಮಾಜವಾದ ಮತ್ತು ಸಮಾಜವಾದಿ ಚಿಂತನೆಗಳು ಕೇವಲ ಆದರ್ಶವೆಂತಲೊ ಅಥವಾ ಅವು ಕೇವಲ ಗ್ರಾಂಥಿಕ ವಿಚಾರಗಳು ಎಂದೋ ಪ್ರಚಾರ ಮಾಡಲಾಗುತ್ತಿದೆ. ಆ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಬಯಸುವಂಥ ಆಸಕ್ತಿ ಹಾಗೂ ಆಶಯಗಳನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂದರೂ ತಪ್ಪಾಗಲಾರದು. ಈ ಕುರಿತು ಪರಿಶೀಲಿಸುವ ಜರೂರು ಇದೆ.

ಸಮಕಾಲೀನ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರ ಚಿಂತನೆಗಳನ್ನು ಚರ್ಚಿಸುವುದು, ಕರ್ನಾಟಕದ ಚಳವಳಿ ರಾಜಕಾರಣವನ್ನು ಪರಿಶೀಲಿಸುವುದು ಮತ್ತು ಅವುಗಳನ್ನು ವಿಮರ್ಶೆ ಮಾಡುವುದು ಮಹತ್ವದ್ದು ಎಂದು ತಿಳಿಯಲಾಗಿದೆ. ಗೋಪಾಲಗೌಡರ ಚಿಂತನೆಗಳನ್ನು ಪ್ರಶ್ನಾತೀತವಾಗಿ ವೈಭವೀಕರಿಸುವ ಇರಾದೆ ಈ ಅಧ್ಯಯನಕ್ಕಿಲ್ಲ. ಎಲ್ಲಾ ಕಡೆಗಳಲ್ಲೂ ಅನ್ಯಾಯ ಹಾಗೂ ಅಸಮಾನತೆಗಳು ತುಂಬಿರುವಾಗ ಸಮಾನತೆಯನ್ನು ಬಯಸುವುದೂ ತಪ್ಪಲ್ಲ. ಇಂಥ ಸಮಾನತೆಗೆ ಅಪೇಕ್ಷಿಸಿದ ಹಾಗೂ ಸಮಾನತೆಯ ಸ್ಥಾಪನೆಗೆ ಪ್ರಯತ್ನಿಸಿದ ಹೋರಾಟ ಹಾಗೂ ಚಿಂತನೆಗಳನ್ನು ಕುರಿತು ಅಧ್ಯಯನ ಮಾಡುವುದೇ ಇಲ್ಲಿನ ಮಹತ್ವದ ಉದ್ದೇಶವಾಗಿದೆ. ಹೀಗಾಗಿ ನಾಡಿನ ಚಾರಿತ್ರಿಕ ಸನ್ನಿವೇಶದಲ್ಲಿ ರಾಜಕಾರಣ, ಆರ್ಥಿಕತೆ, ಸಾಮಾಜಿಕ ಸಂಘರ್ಷ ಹಾಗೂ ಸಾಂಸ್ಕೃತಿಕ ಸಂಕಥನಗಳನ್ನು ಸಮಾಜವಾದಿ ಹೋರಾಟಗಾರನೊಬ್ಬನ ಸೈದ್ಧಾಂತಿಕ ನೆಲೆಗಳಲ್ಲಿ ಪರಿಶೀಲಿಸಿ ವಿಶ್ಲೇಷಿಸುವ ಪ್ರಯತ್ನ ಈ ಅಧ್ಯಯನದ್ದು.

೧.೨. ಅಧ್ಯಯನದ ಸಮೀಕ್ಷೆ

ಶಾಂತವೇರಿ ಗೋಪಾಲಗೌಡ ಅವರು ಕರ್ನಾಟಕದ ಪ್ರತಿಭಾನ್ವಿತ ಸಂಸದೀಯ ಪಟುವಷ್ಟೇ ಅಲ್ಲದೆ, ಧೀಮಂತ ಸಮಾಜವಾದಿ ಹೋರಾಟಗಾರರೂ ಆಗಿದ್ದರು. ಕರ್ನಾಟಕದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಸಂದರ್ಭಗಳಲ್ಲಿನ ಶಾಂತವೇರಿ ಗೋಪಾಲಗೌಡರ ತತ್ವಾದರ್ಶ, ಸಿದ್ಧಾಂತಗಳು, ಹೋರಾಟಗಳು ಇಂದಿಗೂ ಕನ್ನಡಿಗರಲ್ಲಿ ಹುರುಪು ನೀಡುವಂತಿವೆ. ಸಮಾಜವಾದದ ಚಿಂತನೆಗಳಿಂದ ಅವರು ಜನತೆಯನ್ನು ಆಕರ್ಷಿಸಿದ ರೀತಿ ಗಮನಾರ್ಹವಾದುದು. ಅಲ್ಲದೆ ತಮ್ಮ ಸಮಾಜವಾದಿ ಸಿದ್ಧಾಂತದ ಜೊತೆಗೆ ಪ್ರಜಾಪ್ರಭುತ್ವದಲ್ಲಿ ಸಕ್ರಿಯವಾಗಿ ಭಾಗವಹಿಸಿ ನೊಂದವರ ಧ್ವನಿಯಾಗಿದ್ದು ಕಡಿಮೆಯ ಸಂಗತಿಯೇನಲ್ಲ. ಅವರ ಬದುಕು, ಸಿದ್ಧಾಂತ, ರಾಜಕೀಯ ಜೀವನವನ್ನು ಕನ್ನಡದ ಜನತೆ ಕುತೂಹಲಗಳಿಂದ ನೋಡಿದ್ದೂ ಉಂಟು. ಅವರ ಬಗೆಗಿನ ಕುತೂಹಲಗಳನ್ನು ಜೀವನ ಚರಿತ್ರೆಯ ಮೂಲಕವೂ ಹಾಗೂ ಸಾಹಿತಿಗಳು ತಮ್ಮ ಸಾಹಿತ್ಯ ಪ್ರಕಾರಗಳಲ್ಲೂ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಕೆಲವು ಸಹೃದಯರು ಅವರನ್ನು ಕುರಿತು ಅಭಿನಂದನಾ ಗ್ರಂಥಗಳ ಮೂಲಕ ತಮ್ಮದೇ ಆದ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಇವೆಲ್ಲಕ್ಕಿಂತ ಬಹುಮುಖ್ಯವಾಗಿ ಅಕಾಡೆಮಿಕ್ ವಲಯದಲ್ಲಿ ಅವರ ಜೀವನ, ಸಿದ್ಧಾಂತವನ್ನು ಕುರಿತು ಸಂಶೋಧನಾ ಅಧ್ಯಯನಗಳು ನಡೆದಿವೆ. ಸಂಖ್ಯೆಯ ದೃಷ್ಟಿಯಿಂದ ಅವುಗಳು ಕಡಿಮೆಯಿರಬಹುದು. ಆದರೆ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಅವರನ್ನು ಕುರಿತು ನಡೆಸಿದ ಸಂಶೋಧನೆಗಳನ್ನು ಕುರಿತು ಪರಿಶೀಲಿಸಬೇಕಿದೆ. ಅಂಥ ಕೆಲವು ಅಧ್ಯಯನಗಳನ್ನು ಸಮೀಕ್ಷಿಸುವ ಪ್ರಯತ್ನ ಇಲ್ಲಿನದು.

ರಾಜರಾಮ ತೋಳ್ಪಾಡಿ ಅವರು ೨೦೦೦ರಲ್ಲಿ **ರಾಮಮನೋಹರ ಲೋಹಿಯಾ–ಎ ಸ್ಟಡಿ** ಎಂಬ ಶೀರ್ಷಿಕೆ ಅಡಿಯಲ್ಲಿ ಪಿಎಚ್.ಡಿ. ಅಧ್ಯಯನವನ್ನು ನಡೆಸಿದ್ದಾರೆ. ಪ್ರಸ್ತುತ ಅಧ್ಯಯನವು ರಾಮಮನೋಹರ ಲೋಹಿಯಾ ಅವರ ಚಿಂತನೆಯನ್ನು ಮತ್ತು ಭಾರತದ ಸಮಾಜವಾದಿ

ರಾಜಕಾರಣದ ಸನ್ನಿವೇಶವನ್ನು ಕುರಿತು ಚರ್ಚಿಸುತ್ತದೆ. ರಾಮಮನೋಹರ ಲೋಹಿಯಾ ಅವರ ರಾಜಕೀಯ ಪರಿಕಲ್ಪನೆಗಳನ್ನು ವಿಶ್ಲೇಷಣಾತ್ಮಕವಾಗಿ ಸಂಘಟಿಸಿ ಅವರ ರಾಜಕೀಯ ತತ್ವಜ್ಞಾನದ ರೂಪುರೇಷೆಗಳು ಇಲ್ಲಿ ನಿರೂಪಿತವಾಗಿವೆ. ಅಂತೆಯೇ ಅವರ ತತ್ವಜ್ಞಾನದ ವಿವಿಧ ಆಯಾಮಗಳ ಸಾಂದರ್ಭಿಕತೆಯನ್ನು ಚರ್ಚಿಸುತ್ತದೆ. ಅಷ್ಟು ಮಾತ್ರವಲ್ಲದೆ ರಾಜಕೀಯ ಚಿಂತನೆಯ ಇತಿಹಾಸದ ಕಾಲಘಟ್ಟದಲ್ಲಿ ಲೋಹಿಯಾ ಅವರ ರಾಷ್ಟ್ರೀಯತೆ, ಪ್ರಜಾತಂತ್ರ ಮತ್ತು ಸಮಾಜವಾದದ ಪರಿಕಲ್ಪನೆಗಳ ವಿಮರ್ಶೆಯನ್ನು ಸಹ ಗಮನಿಸಬಹುದು.

ಹೊನ್ನಾಂಜನೇಯ ಅವರು ೨೦೦೪ರಲ್ಲಿ **ಶಾಂತವೇರಿ ಗೋಪಾಲಗೌಡ : ಸಾಂಸ್ಕೃತಿಕ ಸಂದರ್ಭದಲ್ಲಿ ಒಂದು ಅಧ್ಯಯನ** ಎಂಬ ಶೀರ್ಷಿಕೆಯಡಿಯಲ್ಲಿ ಪಿಎಚ್.ಡಿ. ಅಧ್ಯಯನವನ್ನು ನಡೆಸಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಶಾಂತವೇರಿ ಗೋಪಾಲಗೌಡ ಅವರ ಕೌಟುಂಬಿಕ ಹಿನ್ನೆಲೆ, ಶೈಕ್ಷಣಿಕ ಹಿನ್ನೆಲೆ, ವೈವಾಹಿಕ ಜೀವನ ಮತ್ತು ರಾಜಕೀಯ ಪ್ರವೇಶವನ್ನು ಕುರಿತ ವಿಷಯಗಳನ್ನು ಆಂಶಿಕವಾಗಿ ಪ್ರತಿಪಾದಿಸಿದ್ದಾರೆ. ಸಂಸ್ಕೃತಿಯ ಒಂದು ಭಾಗವಾದ ರಾಜಕೀಯ ಜೀವನದಲ್ಲಿ ಶಾಂತವೇರಿ ಗೋಪಾಲಗೌಡರು ತಮ್ಮನ್ನು ತೊಡಗಿಸಿಕೊಂಡ ವಿವರಗಳನ್ನು ಇಲ್ಲಿ ನೀಡಿದ್ದಾರೆ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಕಾಲಘಟ್ಟಗಳಲ್ಲಿ ಶಾಂತವೇರಿ ಗೋಪಾಲಗೌಡರು ಕಾಗೋಡು ಸತ್ಯಾಗ್ರಹ, ಭೂಸುಧಾರಣಾ ಚಳವಳಿ, ಕರ್ನಾಟಕ ಏಕೀಕರಣ ಮತ್ತು ಕನ್ನಡ ಚಳವಳಿಗಳಲ್ಲಿ ತಮ್ಮನ್ನು ಸಕ್ರಿಯವಾಗಿ ಸಮರ್ಪಿಸಿಕೊಂಡ ಸಂಗತಿಗಳನ್ನು ತಿಳಿಸಿದ್ದಾರೆ.

ಹೊನ್ನಾಂಜನೇಯ ಅವರು ತಮ್ಮ ಅಧ್ಯಯನದಲ್ಲಿ ಕರ್ನಾಟಕದ ರಾಜಕಾರಣದಲ್ಲಿ ಶಾಂತವೇರಿ ಗೋಪಾಲಗೌಡರು ಪ್ರವೇಶ ಪಡೆದ ಸನ್ನಿವೇಶಗಳನ್ನು ದಾಖಲಿಸಿದ್ದಾರೆ. ಅದರಲ್ಲಿ ಶಾಸನಸಭೆಯಲ್ಲಿ ಗೋಪಾಲಗೌಡರು ತಮ್ಮ ಚಿಂತನೆಗಳನ್ನು ಪ್ರತಿಪಾದಿಸಿರುವುದನ್ನು ಕುರಿತು ವಿವರಿಸಿಯೂ ಇದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರು ಕಾಗೋಡು ಸತ್ಯಾಗ್ರಹದ ಮೂಲಕ ಅಲ್ಲಿನ ಜನರ ಒತ್ತಾಯದ ಮೇರೆಗೆ ರಾಜಕಾರಣ ಪ್ರವೇಶಿಸಲು ಕಾರಣವಾದ ಸಂದರ್ಭಗಳನ್ನು ತಿಳಿಸಿದ್ದಾರೆ. ಶಾಂತವೇರಿ ಗೋಪಾಲಗೌಡರು ೧೯೫೨, ೧೯೫೭, ೧೯೬೨, ೧೯೬೭ ರ ಕರ್ನಾಟಕದ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ನಿಂತು, ನಂತರದಲ್ಲಿ ವಿಧಾನಸಭೆಯನ್ನು ಪ್ರವೇಶಿಸಿದ ಘಟನೆಗಳನ್ನು ದಾಖಲಿಸಲಾಗಿದೆ. ದಲಿತ ಚಳವಳಿಗಳಲ್ಲಿ ಶಾಂತವೇರಿ ಗೋಪಾಲಗೌಡರು ವಹಿಸಿದ ಪಾತ್ರವನ್ನು ಸಹ ಸೂಕ್ಷ್ಮವಾಗಿ ಪರಾಮರ್ಶಿಸಿದ್ದಾರೆ. ಎಡಪಂಥೀಯ ಚಿಂತನೆಗಳ ಮೂಲಕ ಗೌಡರು ಸಮಾಜದ ಬದಲಾವಣೆಗೆ ಶ್ರಮಿಸಿರುವುದನ್ನು ಕೂಡ ಪ್ರಸ್ತುತ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ. ಜಾತಿಪದ್ಧತಿಯ ವಿರುದ್ಧ ಅವರು ತಳೆದ ನಿಲುವುಗಳನ್ನು ಸ್ಪಷ್ಟಪಡಿಸುವುದರೊಂದಿಗೆ, ರಾಮಮನೋಹರ ಲೋಹಿಯಾ ಅವರೊಂದಿಗೆ ಅವರು ಹೊಂದಿದ್ದ ಸಂಬಂಧವನ್ನು ಕೂಡ ವಿಶ್ಲೇಷಿಸಿದ್ದಾರೆ. ಶಾಂತವೇರಿ ಗೋಪಾಲಗೌಡರು ತಮ್ಮ ಸಾಹಿತ್ಯಕ ಪ್ರತಿಭೆಯನ್ನು ಕರ್ನಾಟಕದ ಚಳವಳಿಗಳಿಗೆ ಸ್ಫೂರ್ತಿ ನೀಡಲು ಬಳಸಿಕೊಂಡ ಸಂಗತಿಗಳನ್ನು ಈ

ಅಧ್ಯಯನದಲ್ಲಿ ಗುರುತಿಸಿರುವುದನ್ನು ಕಾಣಬಹುದಾಗಿದೆ. ಆದರೆ ಇವೆಲ್ಲವುಗಳ ವಿಮರ್ಶೆ, ವಿಶ್ಲೇಷಣೆಗಳ ಕೊರತೆ ಎದ್ದು ಕಾಣುತ್ತದೆ.

ಶಶಿರೇಖಾ ಕೆ.ಆರ್. ಅವರು ೨೦೦೮ರಲ್ಲಿ **ಕರ್ನಾಟಕದಲ್ಲಿ ಸಮಾಜವಾದಿ ಚಳವಳಿ (ಶಿವಮೊಗ್ಗ ಜಿಲ್ಲೆಯ ಒಂದು ಅಧ್ಯಯನ)** ಎಂಬ ವಿಷಯವನ್ನು ಕುರಿತು ಪಿಎಚ್.ಡಿ. ಅಧ್ಯಯನ ನಡೆಸಿದ್ದಾರೆ. ಇದರಲ್ಲಿ ಒಟ್ಟು ೬ ಅಧ್ಯಾಯಗಳಿದ್ದು, ಅವುಗಳಲ್ಲಿ ೫ನೆಯ ಅಧ್ಯಾಯವು ಶಿವಮೊಗ್ಗ ಜಿಲ್ಲೆಯ ಜನತೆಯ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯ ಮೇಲೆ ಕಾಗೋಡು ಚಳವಳಿಯ ಪ್ರಭಾವ ಎಂಬ ಶೀರ್ಷಿಕೆಯನ್ನು ಹೊಂದಿದೆ. ಈ ಅಧ್ಯಾಯದಲ್ಲಿ ಕಾಗೋಡು ಚಳವಳಿಯಲ್ಲಿ ಭಾಗವಹಿಸಿದ ಸಮಾಜವಾದಿ ನಾಯಕರಲ್ಲಿ ಹೆಚ್. ಗಣಪತಿಯಪ್ಪ, ಗುಬ್ಬಿಗ ಸದಾಶಿವರಾವ್, ಕಡಿದಾಳ್ ಮಂಜಪ್ಪ, ಡಿ. ದೇವರಾಜ ಅರಸ್, ವೈ ಪರಮೇಶ್ವರಪ್ಪ, ಬಸವಾನಿ ರಾಮಶರ್ಮರು, ಎಂ.ಡಿ. ನಂಜುಂಡಸ್ವಾಮಿ, ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಇವರನ್ನು ಕುರಿತ ವಿವರಗಳಿವೆ. ಇವರ ಸಾಲಿನಲ್ಲಿ ಶಾಂತವೇರಿ ಗೋಪಾಲಗೌಡರನ್ನು ಕುರಿತ ವಿವರಗಳನ್ನು ಆರಂಭದಲ್ಲಿ ನೀಡಲಾಗಿರುವುದನ್ನು ಗಮನಿಸಿದರೆ ಗೋಪಾಲಗೌಡರ ಮಹತ್ವ ತಿಳಿಯುತ್ತದೆ. ದೇವರಾಜ ಅರಸು ಅವರ ಅವಧಿಯಲ್ಲಿ ರೂಪಿತಗೊಂಡು ಜಾರಿಗೊಂಡ 'ಭೂಸುಧಾರಣಾ ಶಾಸನ' ಶಾಂತವೇರಿ ಗೋಪಾಲಗೌಡರ ಹೋರಾಟದ ಪ್ರತಿಫಲ ಹಾಗೂ ಇಚ್ಛೆಗೆ ಪೂರಕವಾಗಿ ರೂಪುಗೊಂಡಿದೆ ಎಂದು ಸ್ವತಃ ದೇವರಾಜ ಅರಸು ಅವರು ಶಾಸನಸಭೆಯಲ್ಲಿ ಪ್ರತಿಪಾದಿಸಿದ ವಿಷಯವನ್ನು ಇಲ್ಲಿ ದಾಖಲಿಸಲಾಗಿದೆ. ಈ ಸಂಗತಿಯು ಗೋಪಾಲಗೌಡರು ಹೊಂದಿದ ಜನಪರ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಶಶಿರೇಖಾ ಅವರ ಈ ಅಧ್ಯಯನವು ಗೋಪಾಲಗೌಡರ ಸಾಧನೆಗಳ ಮಹತ್ವವನ್ನು ಅರಿಯಲು ಸಹಕಾರಿಯಾಗಿದೆ.

ಆರ್.ಎಂ. ಜಗದೀಶ್ ಅವರು ೨೦೧೦ರಲ್ಲಿ **ಕರ್ನಾಟಕದಲ್ಲಿ ಸಮಾಜವಾದಿ ಚಳವಳಿ** (ಕ್ರಿ.ಶ. ೧೯೪೦-೧೯೮೦) ಎಂಬ ವಿಷಯವನ್ನು ಕುರಿತು ಪಿಎಚ್.ಡಿ. ಅಧ್ಯಯನ ನಡೆಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಸಮಾಜವಾದವು ಕರ್ನಾಟಕದಲ್ಲಿ ಬೇರುಬಿಟ್ಟ ರೀತಿ, ಇದರ ತಾತ್ವಿಕ ಚೌಕಟ್ಟು, ಸಮಾಜವಾದಿ ಹೋರಾಟಗಾರರು ಮತ್ತು ಸಮಾಜವಾದ, ಇಲ್ಲಿನ ಸಾಮಾಜಿಕ-ಸಾಂಸ್ಕೃತಿಕ ಪರಿಸರದಲ್ಲಾದ ಪಲ್ಲಟಗಳ ಸ್ವರೂಪವನ್ನು ಚರ್ಚಿಸಿದ್ದಾರೆ. ಇದು ಭಾರತದ ಸಂದರ್ಭದಲ್ಲಿ ಸಮಾಜವಾದ ರೂಪುಗೊಂಡ ಸ್ವರೂಪ ಮತ್ತು ಕರ್ನಾಟಕದ ಸ್ಥಳೀಯ ಸಂದರ್ಭದಲ್ಲಿ ಬೇರುಬಿಟ್ಟ ಸಮಾಜವಾದಿ ಚಿಂತನೆಗಳನ್ನು ವಿಭಿನ್ನವಾಗಿ ಚರ್ಚಿಸಿದ್ದಾರೆ. ಹೀಗೆ ಅಧ್ಯಯನ ಮಾಡುವಾಗ ಲೇಖಕರು ಸಮಾಜವಾದಕ್ಕೂ, ರೈತ ಸಂಘಟನೆ ಮತ್ತು ರೈತ ಚಳವಳಿಗಳಿಗೂ ಇರುವ ಅವಿನಾಭಾವ ಸಂಬಂಧಗಳನ್ನು ಕೂಡ ಒಂದು ಪ್ರತ್ಯೇಕ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಸಮಾಜವಾದಿ ಚಳವಳಿಯನ್ನು ಸಾಮಾನ್ಯ ಜನರ ದೃಷ್ಟಿಕೋನದ ಮೂಲಕ ವಿಶ್ಲೇಷಿಸಿದ್ದಾರೆ ಮತ್ತು ಕಾಗೋಡು ಚಳವಳಿಯಿಂದ ಭೂಮಿಯ ಹಕ್ಕನ್ನು ಪ್ರತಿಪಾದಿಸುವ ಚಳವಳಿಗಳ ಮೇಲೆ ಸಮಾಜವಾದಿ ಚಿಂತನೆಗಳ ಪ್ರಭಾವ ಬೀರುವುದನ್ನು ಗುರುತಿಸಿ ವಿವರವಾಗಿ ಚರ್ಚಿಸಿದ್ದಾರೆ. ಹಾಗೆಯೇ ರಾಜಕೀಯವಾಗಿ ರೂಪುಗೊಂಡ ರೀತಿಯನ್ನು ಮತ್ತು ಸಮಾಜವಾದಿ ಚಳವಳಿಗಳ ಚುನಾವಣಾ ವೈಫಲ್ಯವನ್ನು ಸಹ ಚರ್ಚಿಸಿದ್ದಾರೆ.

ಈ ಪ್ರಬಂಧವು ಸಮಾಜವಾದಿ ಚಳವಳಿಯನ್ನು ತಾತ್ವಿಕವಾಗಿ ಚರ್ಚಿಸುತ್ತದೆ. ಅದರ ಜೊತೆ ನೇರವಾಗಿ ಈ ಚಳವಳಿಯನ್ನು ರೂಪಿಸಿದ ವ್ಯಕ್ತಿತ್ವಗಳಾದ ಗೋಪಾಲಗೌಡ, ಸದಾಶಿವರಾವ್, ಪೊನ್ನಮ್ಮಾಳ್, ಗಣಪತಿಯಪ್ಪ, ನೀಲಗಂಗಯ್ಯ ಪೂಜಾರ, ಜೆ.ಎಚ್. ಪಟೇಲ ಮೊದಲಾದವರನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. ೧೯೭೦-೮೦ ರ ದಶಕಗಳ ಚಳವಳಿಗಳ ಉಗಮ, ಪ್ರಭಾವ ಮತ್ತು ಅದರ ಅವಸಾನವನ್ನು ಈ ಅಧ್ಯಯನವು ನಿರೂಪಿಸುತ್ತದೆ. ಈ ಅಧ್ಯಯನದಲ್ಲಿ ಬಿಟ್ಟುಹೋದ ರಾಜಕಾರಣದ ನೆಲೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕೀರ್ತಿನಾಥ ಜೆ.ಎನ್. ಅವರು **ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಚಳವಳಿಗಳು** ಎಂಬ ವಿಷಯವನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಈ ಅಧ್ಯಯನವು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ೧೯೯೫ರಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧವಾಗಿದೆ. ಈ ಅಧ್ಯಯನದಲ್ಲಿ ಒಟ್ಟು ೯ ಅಧ್ಯಾಯಗಳಿವೆ. ಕಾಗೋಡು ಸತ್ಯಾಗ್ರಹ, ೧೯೫೨ ಮತ್ತು ೧೯೫೪-೫೫ರ ಭೂಸುಧಾರಣಾ ಶಾಸನಗಳು ಮತ್ತು ಸಮಾಜವಾದಿಗಳು, ಭೂಮಿ ಆಂದೋಲನ-೧೯೬೯ಎಂಬ ವಿಷಯಗಳನ್ನು ಪ್ರತಿಪಾದಿಸುವಾಗ ಸಮಾಜವಾದಿ ನಾಯಕರ ಹೆಸರುಗಳು ಅಲ್ಲಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಬಹುಮುಖ್ಯವಾಗಿ ಶಾಂತವೇರಿ ಗೋಪಾಲಗೌಡರ ಹೆಸರನ್ನು ಮತ್ತೆ ಮತ್ತೆ ಪ್ರಸ್ತಾಪಿಸಲಾಗಿದೆ. ಗೋಪಾಲಗೌಡರು ವಿಧಾನಸಭೆಗೆ ಆಯ್ಕೆಯಾದ ಘಟನೆಯು ಸಮಾಜವಾದಿ ಆಂದೋಲನದ ಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವ ಬೀರಿದ ಸಂಗತಿಯನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ಅಲ್ಲದೆ ಕಾಗೋಡು ಸತ್ಯಾಗ್ರಹ ಸೇರಿದಂತೆ ಅನೇಕ ಸಮ್ಮೇಳನಗಳನ್ನು, ಚಳವಳಿಗಳನ್ನು ನಡೆಸುವಲ್ಲಿ ಗೋಪಾಲಗೌಡರು ಪ್ರಮುಖ ಪಾತ್ರವಹಿಸಿದ್ದ ವಿಷಯವನ್ನು ಈ ಅಧ್ಯಯನದಲ್ಲಿ ದಾಖಲಿಸಲಾಗಿದೆ. ಅಲ್ಲದೆ ಗೋಪಾಲಗೌಡರು ಸಮಕಾಲೀನ ಸಂದರ್ಭದ ಮತ್ತು ಮುಂಬರುವ ಹೋರಾಟಗಳ ನೇತೃತ್ವವನ್ನು ವಹಿಸಬಲ್ಲವರಾಗಿದ್ದರೆಂಬುದನ್ನು ತಿಳಿಸಲಾಗಿದೆ. ಕರ್ನಾಟಕದ ಮಲೆನಾಡಿನ ಪರಿಸರದಲ್ಲಿ ಸಮಾಜವಾದಿ ಚಳವಳಿಗಳ ಹಿನ್ನೆಲೆಯಲ್ಲಿ ಶಾಂತವೇರಿ ಗೋಪಾಲಗೌಡರು ವಹಿಸಿದ ಪಾತ್ರವನ್ನು ಅರ್ಥೈಸಿಕೊಳ್ಳಲು ಪ್ರಸ್ತುತ ಅಧ್ಯಯನ ನೆರವಾಗಬಲ್ಲದು.

ಉಮೇಶ್ ಎಸ್.ಟಿ. ಅವರು ೨೦೦೮ರಲ್ಲಿ **ಶಾಂತವೇರಿ ಗೋಪಾಲಗೌಡರ ಸಮಾಜವಾದಿ ತತ್ವನಿಷ್ಠೆ** ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಕೇಂದ್ರದ ಸಾಹಿತ್ಯ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಗೋಪಾಲಗೌಡರ ಜೀವನದ ಸಂಕ್ಷಿಪ್ತ ಹಿನ್ನೆಲೆ, ಸಮಾಜವಾದಿ ತತ್ವದ ಪರಿಚಯ ಮತ್ತು ಪ್ರಭಾವವನ್ನು ತಿಳಿಸಲಾಗಿದೆ. ಶಾಂತವೇರಿ ಗೋಪಾಲಗೌಡರು ತಮ್ಮ ಬದುಕಿನಲ್ಲಿ ಸಮಾಜವಾದಿ ತತ್ವವನ್ನು ಅಳವಡಿಸಿಕೊಂಡ ವಿಷಯಗಳನ್ನು ಹಾಗೂ ಸಮಾಜವಾದದ ತತ್ವಗಳಿಗೆ ಅವರು ಹೇಗೆ ಬದ್ಧರಾಗಿದ್ದರು ಎಂಬ ಸಂಗತಿಗಳನ್ನು ಕುರಿತು ಹಲವಾರು ವಿವರಗಳನ್ನು ನೀಡಿದ್ದಾರೆ. ನಂತರ ಶಾಂತವೇರಿ ಗೋಪಾಲಗೌಡರು ರಾಜಕೀಯದಲ್ಲಿ ಧುಮುಕಿದ ರೀತಿ, ಅಲ್ಲಿ ಎದುರಿಸಿದ ಸವಾಲುಗಳು, ಅಂದಿನ ರಾಜಕೀಯ ಸಂದರ್ಭಗಳನ್ನು

ಕುರಿತ ವಿಷಯಗಳನ್ನು ಕಾಣಬಹುದಾಗಿದೆ. ರಾಜ್ಯ ಚುನಾವಣೆಯಲ್ಲಿ ಗೆದ್ದು ಶಾಸಕರಾಗಿ ಜನತೆಯ ಪರವಾಗಿ ಆಡಿದ ಮಾತುಗಳು, ಜನತೆಯ ಹಿತಾಸಕ್ತಿಯನ್ನು ಕುರಿತು ನಡೆಸಿದ ಚಿಂತನೆಗಳು, ಸಾಧನೆಗಳನ್ನು ಕುರಿತು ವಿವರಿಸಲಾಗಿದೆ. ಈ ಅಧ್ಯಯನದಲ್ಲಿ ಶಾಂತವೇರಿ ಗೋಪಾಲಗೌಡರು ಮಲೆನಾಡಿನಲ್ಲಿ ಸಮಾಜವಾದಿ ಚಳವಳಿಯನ್ನು ರೂಪಿಸಿದ ಬಗೆ ಅಲ್ಲದೆ ಅವರು ಬಿತ್ತಿ ಬೆಳೆಸಿದ ಸಮಾಜವಾದಿ ಚಿಂತನೆಗಳು ಮಲೆನಾಡಿನ ಜನರ ಮೇಲೆ ಬೀರಿದ ಪ್ರಭಾವ, ಪರಿಣಾಮಗಳನ್ನು ಗುರುತಿಸಿರುವುದನ್ನು ಕಾಣುತ್ತೇವೆ. ಈ ಅಧ್ಯಯನವು ಗೋಪಾಲಗೌಡರ ಸಮಾಜವಾದದ ತತ್ವನಿಷ್ಠೆಗಳನ್ನು ಕುರಿತು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಆದರೆ ವಿಶ್ಲೇಷಣಾತ್ಮಕ ಪರಿಶೀಲನೆಯ ಒಳನೋಟಗಳಿಲ್ಲ.

ಅನಿತಾ ಅವರು **ಶಾಂತವೇರಿ ಗೋಪಾಲಗೌಡರ ಸಾಂಪ್ರದಾಯಿಕ ಮತ್ತು ರಾಜಕೀಯ ಜೀವನ** ಎಂಬ ವಿಷಯವನ್ನು ಕುರಿತು ಎಂ.ಫಿಲ್. ಪದವಿಗಾಗಿ ಅಧ್ಯಯನ ನಡೆಸಿದ್ದಾರೆ. ಈ ಸಂಪ್ರಬಂಧವನ್ನು ೨೦೦೮ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಸಾದರಪಡಿಸಲಾಗಿದೆ. ಈ ಅಧ್ಯಯನದಲ್ಲಿ ಒಟ್ಟು ೫ ಅಧ್ಯಾಯಗಳಿವೆ. ಪ್ರಸ್ತುತ ಅಧ್ಯಯನದಲ್ಲಿ ಶಾಂತವೇರಿ ಗೋಪಾಲಗೌಡರ ಸಾಂಪ್ರದಾಯಿಕ ಜೀವನವನ್ನು ಕುರಿತು ಗೋಪಾಲಗೌಡರ ಆರಂಭದ ಬದುಕು, ಅವರ ಕುಟುಂಬದ ವಿವರಗಳು, ಊರಿನ ವಿಷಯಗಳು, ವಿದ್ಯಾಭ್ಯಾಸ, ಚಳವಳಿಯಲ್ಲಿ ಭಾಗವಹಿಸಿದ ಬಗೆ –ಇವೇ ಮುಂತಾದ ಸಂಗತಿಗಳನ್ನು ಪ್ರತಿಪಾದಿಸಲಾಗಿದೆ. ನಂತರ ಶಾಂತವೇರಿ ಗೋಪಾಲಗೌಡರು ರಾಜಕೀಯ ಜೀವನದಲ್ಲಿ ಮೂಡಿಸಿದ ಹೆಜ್ಜೆಗುರುತುಗಳನ್ನು ಕುರಿತು ದಾಖಲಿಸಲಾಗಿದೆ. ಗೋಪಾಲಗೌಡರು ತಮ್ಮ ಬದುಕು ಮತ್ತು ಸಿದ್ಧಾಂತಗಳ ಮೂಲಕ ಜನಸಾಮಾನ್ಯರಿಗೆ, ಬಡಜನರಿಗೆ, ಕೂಲಿಕಾರ್ಮಿಕರಿಗೆ, ದೀನರಿಗೆ, ಅನಾಥರಿಗೆ ಹೇಗೆ ಪ್ರತಿಕ್ರಿಯಿಸಿದರು ಎಂಬ ವಿವರಗಳಿವೆ. ಅಧಿಕಾರಿಗಳನ್ನು ಮಣಿಸುವ ಎದೆಗಾರಿಕೆ, ಅರಸೊತ್ತಿಗೆಯ ವಿರುದ್ಧದ ಕೆರಳಿಕೆ, ಮೈಸೂರಿನ ಜಂಬೂಸವಾರಿಯನ್ನು ವಿರೋಧಿಸಿದ ಸಂಗತಿಗಳು ಅಂದಿನ ಕನ್ನಡಿಗರ ಮನದಲ್ಲಿ ಕ್ರಾಂತಿಕಾರಿ ಮನೋಭೂಮಿಕೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿರುವುದನ್ನು ದಾಖಲಿಸಲಾಗಿದೆ. ಅಲ್ಲದೆ ಜಂಬೂಸವಾರಿಯನ್ನು ವಿರೋಧಿಸಿದ ಪರಿಣಾಮವಾಗಿ ಮೈಸೂರಿನ ದಸರಾ ಮೆರವಣಿಗೆಯ ಆನೆಯ ಮೇಲೆ ರಾಜರು ಅಂಬಾರಿಯ ಮೇಲೆ ಕೂರುವುದು ನಿಂತು ಹೋದ ಸಂಗತಿಯನ್ನು ಪ್ರಸ್ತಾಪಿಸಿರುವುದು ಗಮನಾರ್ಹವಾಗಿದೆ. ಅಸ್ಪೃಶ್ಯರ ಬಗೆಗೆ ಹೊಂದಿದ ಕಾಳಜಿಯನ್ನು ಈ ಅಧ್ಯಯನದಲ್ಲಿ ತೋರ್ಪಡಿಸಿರುವುದು ಅಷ್ಟೇ ಮುಖ್ಯವಾದ ವಿಷಯವಾಗಿದೆ. ಮಲೆನಾಡಿನ ಜನತೆ ಗೋಪಾಲಗೌಡರ ಬಗೆಗೆ ಹೊಂದಿದ್ದ ಪ್ರೀತಿಯ ಭಾವನೆಗಳು, ಗೌರವ ಅಭಿಮಾನಗಳನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ಗೋಪಾಲಗೌಡರ ಜೀವನ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳಲು ಪ್ರಸ್ತುತ ಅಧ್ಯಯನವು ಉಪಯುಕ್ತವಾಗಿದೆಯೆಂದು ಹೇಳಬಹುದಾಗಿದೆ.

ಜೀವಂತಜ್ವಾಲೆ ಕೃತಿಯು ಶಾಂತವೇರಿ ಗೋಪಾಲಗೌಡ ಅವರ ನೆನಪಿನಲ್ಲಿ ತಂದ ಸಂಸ್ಮರಣ ಕೃತಿಯಾಗಿದೆ. ಕೋಣಂದೂರು ವೆಂಕಪ್ಪಗೌಡರು ಈ ಸಂಪಾದಿತ ಕೃತಿಯನ್ನು ೧೯೮೧ರಲ್ಲಿ

ಪ್ರಕಟಿಸಿದ್ದಾರೆ. ಸಮಾಜವಾದಿ ಧುರೀಣರಾದ ರಾಮಮನೋಹರ ಲೋಹಿಯಾ ಅವರಿಗೆ ಈ ಕೃತಿಯನ್ನು ಸಮರ್ಪಿಸಲಾಗಿದೆ. ಈ ಕೃತಿಯು ಎರಡು ಭಾಗಗಳನ್ನು ಹೊಂದಿದೆ. ಮೊದಲನೆಯ ಭಾಗದಲ್ಲಿ ಗೋಪಾಲಕೃಷ್ಣ ಅಡಿಗ, ಜಿ.ಪಿ.ಬಸವರಾಜ್, ಶ್ರೀಕಂಠ ಕೂಡಿಗೆ, ಖಾದ್ರಿಶಾಮಣ್ಣ, ತ.ರಾ.ಸು, ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿದ್ದಯ್ಯ ಪುರಾಣಿಕ, ಬಸವರಾಜ ಕಟ್ಟೀಮನಿ ಮುಂತಾದ ಕನ್ನಡದ ಹಿರಿಯ ಚೇತನಗಳು ಶಾಂತವೇರಿ ಗೋಪಾಲಗೌಡ ಅವರನ್ನು ವಿವಿಧ ರೀತಿಯಲ್ಲಿ ಸ್ಮರಿಸಿಕೊಂಡಿದ್ದಾರೆ. ಗೋಪಾಲಗೌಡ ಅವರೊಂದಿಗೆ ವಿವಿಧ ಲೇಖಕರು ಹಂಚಿಕೊಂಡ ಅನುಭವಗಳು, ಚಿಂತನೆಗಳನ್ನು ಲೇಖನ ರೂಪದಲ್ಲಿ ಇಲ್ಲಿ ಪ್ರಕಟಿಸಿರುವುದನ್ನು ನೋಡಬಹುದಾಗಿದೆ. 'ಕನ್ನಡದ ಕಣ್ಮಣಿ', ಕನ್ನಡ ನಾಡಿನ ಸತ್ಪುತ್ರ', 'ವೀರಕನ್ನಡಿಗ', 'ಉದಾತ್ತಜೀವಿ', 'ಸಮಾಜವಾದಿ ಭಾರ್ಗವ', 'ಮಲೆನಾಡ ಮಹಾತ್ಮ', 'ನಿರ್ಮಲ ವ್ಯಕ್ತಿ', 'ದಲಿತರ ಕೈವಾರಿ', 'ನಿರ್ಭಯವ್ಯಕ್ತಿ', ಸಮಾಜವಾದದ ಜ್ಯೋತಿ', 'ಸಮಾಜವಾದಿ ಚಳವಳಿಯ ಮೂಲವಾಣಿ', 'ದುರ್ಬಲರ ಹಿತಚಿಂತಕ', 'ತತ್ವನಿಷ್ಠ ಹೋರಾಟಗಾರ', 'ಪ್ರಬುದ್ಧ ರಾಜಕಾರಣಿ' ಮುಂತಾದ ಶೀರ್ಷಿಕೆಗಳನ್ನು ಗಮನಿಸಿದರೆ ಗೋಪಾಲಗೌಡರ ವ್ಯಕ್ತಿತ್ವ ಎಂತಹದು ಎನ್ನುವುದು ಅರಿವಾಗುತ್ತದೆ. ಕೃತಿಯ ಎರಡನೆಯ ಭಾಗದಲ್ಲಿ ಸಮತಾವಾದ, ಶಿಕ್ಷಣ ವ್ಯವಸ್ಥೆ, ಮಹಿಳೆ, ಭಾರತದಲ್ಲಿ ಸಮಾಜವಾದಿ ಚಳವಳಿ, ಹೊಸಯುಗದ ಅರುಣೋದಯ, ಜನಭಾಷೆ, ಜಾಗತಿಕ ಕ್ರಾಂತಿ, ಜಾತಿ ಮತ್ತು ಧರ್ಮ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಕಾಣಬಹುದಾಗಿದೆ.

ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟವನ್ನು ಕನ್ನಡದ ಹಿರಿಯ ವಿದ್ವಾಂಸರಾದ ಕಾಳೇಗೌಡ ನಾಗವಾರ ಮತ್ತು ಜಿ.ವಿ. ಆನಂದಮೂರ್ತಿ ಅವರು ಸಂಪಾದಿಸಿ (೧೯೯೭ ಮೊದಲ ಮುದ್ರಣ) ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೂಲಕ ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಏಳು ಅವತರಣಿಕೆಗಳಲ್ಲಿ ಶಾಂತವೇರಿ ಗೋಪಾಲಗೌಡ ಅವರ ಹೃದಯಸ್ಪರ್ಶಿ ನೆನಪುಗಳನ್ನು ಹಂಚಿಕೊಳ್ಳಲಾಗಿದೆ. ೧. ಹೃದಯವಂತನ ನಡೆ-ನುಡಿ ೨. ಸತ್ಯಾಗ್ರಹಿಗಳು ಕಂಡಂತೆ ೩. ಕಾಗೋಡು ರೈತ ಸತ್ಯಾಗ್ರಹ ೪. ಒಡನಾಡಿಗಳ ಕಣ್ಣಲ್ಲಿ ೫. ಮನಸಂಪನ್ನತೆಯ ಕ್ಷಣಗಳು ೬. ಪತ್ರಗಳು, ದಿನಚರಿಯ ಪುಟಗಳಿಂದ, ಶಾಸನ ಸಭೆಯ ಭಾಷಣಗಳು ಮತ್ತು ಲೇಖನಗಳು ೭. ಅನುಬಂಧ -ಹೀಗೆ ಗೋಪಾಲಗೌಡರ ಬದುಕನ್ನು ಅರ್ಥೈಸಿಕೊಳ್ಳಲು ಸುಲಭವಾದ ನೆಲೆಗಳಲ್ಲಿ ಪ್ರಸ್ತುತ ಕೃತಿಯು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಕಡಿದಾಳು ಶಾಮಣ್ಣ, ಎಂ. ನಾಗಪ್ಪ, ಖಾದ್ರಿ ಶಾಮಣ್ಣ, ಕೆ.ವಿ. ಸುಬ್ಬಣ್ಣ, ಪಿ. ಕಾಳಿಂಗರಾವ್ ಸೇರಿದಂತೆ ಹಲವರು ಈ ಲೇಖನಗಳ ಮೂಲಕ ಗೋಪಾಲಗೌಡರ ಬದುಕನ್ನು ಚಿತ್ರಿಸಿದ್ದಾರೆ.

'ಎತ್ತರದ ವ್ಯಕ್ತಿತ್ವ,' ಶತಮಾನದ ರಾಜಕಾರಣಿ', 'ಕ್ರಾಂತಿಯ ತಳಮಳ', 'ಸ್ನೇಹದ ಸವಿ', 'ಜನನಾಯಕ', 'ಎಲ್ಲರ ಮೆಚ್ಚಿನ ವ್ಯಕ್ತಿ' ಮುಂತಾದ ಲೇಖನಗಳು ಮೊದಲ ಭಾಗದಲ್ಲಿ ಒಡಮೂಡಿವೆ. ಎರಡನೆಯ ಭಾಗದಲ್ಲಿ 'ಲೋಹಿಯಾ ಮತ್ತು ಗೋಪಾಲಗೌಡರು', 'ಪ್ರವಾಹಕ್ಕೆ ಎದುರಾಗಿ

ಈಜಿದವರು', 'ಧೀಮಂತ ಪುರುಷ' ಮುಂತಾದ ಲೇಖನಗಳನ್ನು ನೀಡಲಾಗಿದೆ. ಈ ವಿಭಾಗದಲ್ಲಿ ಕೆ.ಎಂ. ರುದ್ರಪ್ಪ, ಬಿ.ಎಸ್. ಚಂದ್ರಶೇಖರ್ ಮುಂತಾದವರು ಲೇಖನಗಳನ್ನು ಬರೆದಿದ್ದಾರೆ. ಕಾಗೋಡು ರೈತ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ 'ಕಾಗೋಡಿನಲ್ಲಿ ಲೋಹಿಯಾ', 'ಗೇಣಿರೈತರ ಹೋರಾಟ', 'ಸಮಾಜವಾದಿಗಳ ತಂಗುಮನೆ' ಮುಂತಾದ ಲೇಖನಗಳನ್ನು ಎಚ್. ಗಣಪತಿಯಪ್ಪ, ಅಂಬಳೆ, ಬಸವಾನಿ ರಾಜಶರ್ಮ ಅವರು ಬರೆದಿರುವುದು ಕಂಡುಬರುತ್ತದೆ. ಒಡನಾಡಿಗಳ ಕಣ್ಣಲ್ಲಿ ಎಂಬ ಭಾಗದಲ್ಲಿ ಕುವೆಂಪು, ಪಿ. ಲಂಕೇಶ್, ಪು.ತಿ.ನ., ಶಿವರಾಮ ಕಾರಂತ, ಗೋಪಾಲಕೃಷ್ಣ ಅಡಿಗ, ಕಾಗೋಡು ತಿಮ್ಮಪ್ಪ ಮುಂತಾದ ಹೆಸರಾಂತ ಸಾಹಿತಿಗಳು ಗೋಪಾಲಗೌಡರ ಬಗೆಗೆ ಸಂಕ್ಷಿಪ್ತ ಬರಹಗಳ ಟಿಪ್ಪಣಿಗಳನ್ನು ನೀಡಿದ್ದಾರೆ. ಮನಸಂಪನ್ನತೆಯ ಕ್ಷಣಗಳು ವಿಭಾಗದಲ್ಲಿ ಭೀಮನಕೋಣೆ ರಾಜಗೋಪಾಲ್, ಎನ್. ಕಿಟ್ಟಪ್ಪಗೌಡ ಮುಂತಾದವರು ತಮ್ಮ ಹೃದಯಸ್ಪರ್ಶಿ ಅನುಭವಗಳನ್ನು ಲೇಖನಗಳ ಮೂಲಕ ಹಂಚಿಕೊಂಡಿರುವುದು ಕಂಡುಬರುತ್ತದೆ. ಕೊನೆಯದಾಗಿ ಶಾಸನಸಭೆಯ ಭಾಷಣಗಳು ಮತ್ತು ಶಾಂತವೇರಿ ಗೋಪಾಲಗೌಡರು ಬರೆದ ಎರಡು ಲೇಖನಗಳನ್ನು ಪ್ರಕಟಿಸಲಾಗಿದೆ. ಗ್ರಂಥದ ಕೊನೆಯ ಭಾಗವಾದ ಅನುಬಂಧದಲ್ಲಿ ಜೆ.ಹೆಚ್. ಪಟೇಲ್, ಜಿ. ರಾಜಶೇಖರ, ಬಿ.ಎಸ್. ಸೋಮಶೇಖರ ಮುಂತಾದವರು ಗೋಪಾಲಗೌಡರ ಬಗೆಗೆ ಬರೆದ ಲೇಖನಗಳನ್ನು ನೋಡಬಹುದಾಗಿದೆ.

ಬಿ.ಎನ್. ಉಮೇಶ್‌ರವರ **ಶಾಂತವೇರಿ ಗೋಪಾಲಗೌಡರ ನೆನಪು** (೨೦೦೯) ಎಂಬ ಕೃತಿಯು ಮೂವತ್ತೆಂಟು ಉಪ ಶೀರ್ಷಿಕೆಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಗೋಪಾಲಗೌಡರನ್ನು ಕುರಿತು ಆಪ್ತಕಥನವಾಗಿ, ಸ್ವಾತಂತ್ರ್ಯೋತ್ತರ ಕರ್ನಾಟಕದ ರಾಜಕೀಯ ಬೆಳವಣಿಗೆಯ ಹೆಜ್ಜೆ ಗುರುತುಗಳನ್ನು ಗುರುತಿಸಿಕೊಡುವ ಪ್ರಯತ್ನವಾಗಿ, ಸ್ಥಳೀಯ ರಾಜಕೀಯ ಬಿಕ್ಕಟ್ಟುಗಳನ್ನು ಅನಾವರಣಗೊಳಿಸುವ ದಾಖಲೆಯಾಗಿ ಗಮನ ಸೆಳೆಯುತ್ತದೆ.

ಜೆ.ಕೆ. ರಮೇಶ ಅವರ ಸಂಪಾದಕತ್ವದಲ್ಲಿ **ಕೋಲಿಂ ಎಂಬ ಕೌತುಕ** (ಕೋಣಂದೂರು ಲಿಂಗಪ್ಪನವರ ಅಭಿನಂದನ ಗ್ರಂಥ) (೨೦೧೫) ಎಂಬ ಕೃತಿಯಲ್ಲಿ ಸಮಾಜವಾದಿ ಧುರೀಣ ಕೋಣಂದೂರು ಲಿಂಗಪ್ಪ ಅವರನ್ನು ಕುರಿತ ಅಭಿನಂದನ ಗ್ರಂಥವೇ 'ಕೌತುಕ.' ಲಿಂಗಪ್ಪ ಒಬ್ಬ ಸಮಾಜವಾದಿಯಾಗಿ ನೀಡಿದ ಕೊಡುಗೆಯನ್ನು ಅವರ ಅನೇಕ ಆಪ್ತರು ಇಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ಒಬ್ಬ ಸಮಾಜವಾದಿಯಾಗಿ ಅವರು ಸಮಾಜವನ್ನು ಗ್ರಹಿಸಿದ ಕ್ರಮವೇ ಭಿನ್ನವಾಗಿದೆ. ಸಾಹಿತ್ಯ, ಕನ್ನಡ ಚಳವಳಿ, ಸಮಾಜವಾದ, ಹಿಂದುಳಿದ ವರ್ಗಗಳ ಬಗೆಗಿನ ಕಳಕಳಿ, ದಲಿತ ಚಳವಳಿ ಮತ್ತು ಪರಿಸರ ಹೋರಾಟಗಳಲ್ಲಿ ತಮ್ಮನ್ನು ತಾವು ಸಕ್ರೀಯವಾಗಿ ತೊಡಗಿಸಿಕೊಂಡವರು. ಗೋಪಾಲಗೌಡರ ನೇರ ಶಿಷ್ಯರಾಗಿ ಸಮಾಜವಾದದ ಗರಡಿಯಲ್ಲಿ ಬೆಳೆದವರು. ತಮ್ಮ ಮೂಲಕ ತೀರ್ಥಹಳ್ಳಿ ಮತ್ತು ಮಲೆನಾಡು ಭಾಗಗಳನ್ನು ಸಮಾಜವಾದಿ ಸಿದ್ಧಾಂತದ ಭೂಮಿಯನ್ನಾಗಿ ಪರಿವರ್ತಿಸಿದವರು. ಕರ್ನಾಟಕದ ಸಮಾಜವಾದಿ ರಾಜಕಾರಣವನ್ನು ಲಿಂಗಪ್ಪರನ್ನು ಹೊರತುಪಡಿಸಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬಂತೆ ಪ್ರಭಾವಿಸಿದವರು.

ಸಮಾಜವಾದಿ ಕುಲುಮೆಯಲ್ಲಿ ಅರಳಿದ ಲಿಂಗಪ್ಪನವರ ಚಿಂತನೆ ಮತ್ತು ಹೋರಾಟ, ಮಲೆನಾಡಿನಲ್ಲಿ ಸಮಾಜವಾದಿ ಚಳವಳಿ ವಿಶಿಷ್ಟವಾಗಿ ಬೇರೂರಲು ಸಹಾಯವಾಯಿತು. ಸಮಾಜವಾದಿ ಹೋರಾಟ ಇಲ್ಲಿ ಹುಟ್ಟಿ ಬೆಳೆದ ಬಗೆಯನ್ನು, ಎದುರಿಸಿದ ಸಂಕಷ್ಟ-ಸಂಕೀರ್ಣತೆಗಳನ್ನು ಕುರಿತಂತೆ ಪ್ರಸ್ತುತ ಕೃತಿಯಲ್ಲಿನ ಅನೇಕ ಲೇಖನಗಳು ಚರ್ಚಿಸುತ್ತವೆ. ನಾಯಕತ್ವ ರೂಪುಗೊಂಡ ಬಗೆ, ಅದು ಸಾಮಾನ್ಯ ಜನರನ್ನು ಪ್ರೇರೇಪಿಸಿದ ರೀತಿ, ಭಿನ್ನ ಚಳವಳಿಗಳೊಂದಿಗೆ ಸಮಾಜವಾದಿಗಳು ಗುರುತಿಸಿಕೊಂಡ ಕ್ರಮಗಳನ್ನು ಇಲ್ಲಿನ ಲೇಖನಗಳು ಚರ್ಚಿಸುತ್ತವೆ. ಒಟ್ಟಾರೆ ಕರ್ನಾಟಕದ ಸಮಾಜವಾದಿ ಚಳವಳಿಗಳ ಪೂರಕವಾಗಿ ಮತ್ತು ವಿಭಿನ್ನವಾಗಿ ಲಿಂಗಪ್ಪನವರ ಹೋರಾಟ ಮತ್ತು ಆಲೋಚನೆಗಳು ರೂಪುಗೊಂಡ ಬಗೆಯನ್ನು ಈ ಕೃತಿಯ ಮೂಲಕ ಗ್ರಹಿಸಲಾಗಿದೆ. ಕೋಣಂದೂರು ಲಿಂಗಪ್ಪ ಹಾಗೂ ಗೋಪಾಲಗೌಡರ ನಡುವಿನ ಅಪರೂಪದ ಅನೇಕ ಸಂಗತಿಗಳನ್ನು ಸಮಕಾಲೀನ ರಾಜಕಾರಣದಲ್ಲಿ ಪರಿಶೀಲಿಸಲು ಈ ಕೃತಿಯು ಪ್ರಮುಖ ಆಕರವಾಗಿದೆ.

ನಟರಾಜ್ ಹುಳಿಯಾರ್ ಅವರ **ಶಾಂತವೇರಿ ಗೋಪಾಲಗೌಡ** (೨೦೧೮) ಎಂಬ ಕೃತಿಯು ಹನ್ನೊಂದು ಅಧ್ಯಾಯಗಳನ್ನು ಒಳಗೊಂಡ ಕೃತಿಯಾಗಿದೆ. ಈ ಕೃತಿಯಲ್ಲಿ ಗೋಪಾಲಗೌಡ ಅವರ ಬಾಲ್ಯದಿಂದ ಹಿಡಿದು ಮರಣದವರೆಗೆ ವಿಸ್ತೃತವಾಗಿ ಅಧ್ಯಯನ ಮಾಡಲಾಗಿದೆ. ಕನ್ನಡ ನಾಡಿನ ಜವಾಬ್ದಾರಿಯುತ ರಾಜಕೀಯ ನಾಯಕರಾಗಿ ರೂಪುಗೊಂಡ ಮಹತ್ತರ ವ್ಯಕ್ತಿಗಳಲ್ಲಿ ಶಾಂತವೇರಿ ಗೋಪಾಲಗೌಡ ಅವರು ಒಬ್ಬರು. ಜನತೆಯ ನಾಯಕರಾಗಿ ಬೆಳೆದ ಗೋಪಾಲಗೌಡರು ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಆದರ್ಶಮಾದರಿಯೊಂದನ್ನು ಸೃಷ್ಟಿಸಲು ಯತ್ನಿಸಿದರು. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲೇ ಸಮಾಜವಾದಿ ವಿಚಾರಧಾರೆಯತ್ತ ಆಕರ್ಷಿತರಾಗಿ, ಕ್ರಮೇಣ ರಾಮಮನೋಹರ ಲೋಹಿಯ ಅವರ ಹಾದಿಯಲ್ಲಿ ಹೊರಟಂತಹ ಗೋಪಾಲಗೌಡರು ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆ, ಹೋರಾಟ ಹಾಗೂ ಸಮಾಜವಾದಿ ರಾಜಕಾರಣವನ್ನು ಹುಟ್ಟುಹಾಕಲು ಪ್ರಯತ್ನಿಸಿದರು. ಸ್ವಂತದ ಲಾಭಗಳ ಹಂಗು ತೊರೆದ ಸಹಜ, ಶುದ್ಧ ರಾಜಕಾರಣ ಸಮಾಜದ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ ಎಂದು ಗೋಪಾಲಗೌಡರು ಆಳವಾಗಿ ನಂಬಿದ್ದರು. ಹಾಗೆಯೇ ಸಣ್ಣ ಪುಟ್ಟ ಸುಧಾರಣೆಗಳಿಂದ ಒಂದು ಅಸಮಾನ ಸಮಾಜದಲ್ಲಿ ತಳಮಟ್ಟದ ಬದಲಾವಣೆ ಆಗಲಾರದು ಎಂಬ ಸತ್ಯವನ್ನು ಅರಿತಿದ್ದರು. ಐವತ್ತರ ದಶಕದಲ್ಲಿ ಯುವಕ ಗೋಪಾಲಗೌಡರ ಕಾಳಜಿಯಿಂದಾಗಿ ಸಮಾಜವಾದಿ ಪಕ್ಷ ಕಾಗೋಡು ಭೂ ಹೋರಾಟದಲ್ಲಿ ಭಾಗಿಯಾಯಿತು. ಆನಂತರ ಕೂಡ ಭೂಮಿಯ ಹಂಚಿಕೆಯ ಪ್ರಶ್ನೆ ಗೋಪಾಲಗೌಡರ ಚಿಂತನೆ ಹಾಗೂ ಹೋರಾಟಗಳ ಭಾಗವಾಗಿಯೇ ಇತ್ತು. ಇಂತಹ ಅಪರೂಪದ ಮಾಹಿತಿಗಳು ಮತ್ತು ಒಳನೋಟಗಳನ್ನು ಸಮಗ್ರವಾಗಿ ಪ್ರಸ್ತುತ ಕೃತಿಯಲ್ಲಿ ಕಾಣಬಹುದಾಗಿದೆ.

ಗೋಪಾಲಗೌಡರು ಖುದ್ದಾಗಿ ಬರೆದ ಲೇಖನಗಳು

ಕಾಗೋಡು ಚಲೋ ಎಂಬ ಹೆಸರಿನ ಲೇಖನವನ್ನು ಸ್ವತಃ ಶಾಂತವೇರಿ ಗೋಪಾಲಗೌಡರು ೧೯೬೭ರ ಪ್ರಜಾವಾಣಿ ವಿಶೇಷಾಂಕ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಆ ಲೇಖನವು 'ಜೀವಂತಜ್ವಾಲೆ' (ಶಾಂತವೇರಿ ಗೋಪಾಲಗೌಡರ ಸ್ಮಾರಕ ಗ್ರಂಥ) ಎಂಬ ಕೃತಿಯಲ್ಲಿ ಕೋಣಂದೂರು ವೆಂಕಪ್ಪಗೌಡ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದೆ. ಗೋಪಾಲಗೌಡರ ಪ್ರಜ್ಞೆಯಲ್ಲಿ ಸದಾ ಜಾಗೃತವಾಗಿರುವ ಒಂದು ಘಟನೆಯೆಂದರೆ ಅದು ಕಾಗೋಡು ಚಲೋ ಅಭಿಯಾನವಾಗಿದೆ. ಗೇಣಿ ಎಷ್ಟಿರಬೇಕೆಂಬ ಒಂದು ವಿವಾದವು ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದ ಜಮೀನುದಾರ ಮತ್ತು ರೈತರ ನಡುವೆ ಹುಟ್ಟಿದ ಪ್ರಸಂಗವು ಪ್ರಸ್ತುತ ಲೇಖನದ ಕೇಂದ್ರ ಭಾಗವಾಗಿದೆ. ಗೋಪಾಲಗೌಡರು ಕಾಗೋಡು ಚಳವಳಿಯ ನೇತೃತ್ವವನ್ನು ವಹಿಸುವುದರ ಮೂಲಕ ಯುವಕರನ್ನು ಆ ನಿಟ್ಟಿನಲ್ಲಿ ತೊಡಗಿಸಿಕೊಳ್ಳುತ್ತಾರೆ. ಆ ವೇಳೆಯಲ್ಲಿ ಪೊಲೀಸರಿಂದ ಬಂಧನಕ್ಕೆ ಒಳಗಾಗುತ್ತಾರೆ. ಪೊಲೀಸರ ಕೈಗೆ ಸಿಕ್ಕಿ ಅವರು ಅನುಭವಿಸಿರುವ ವಿಚಿತ್ರ ಅನುಭವಗಳನ್ನು ಈ ಲೇಖನದಲ್ಲಿ ಹಂಚಿಕೊಂಡಿರುವುದನ್ನು ನೋಡಬಹುದಾಗಿದೆ.

ಶಾಂತವೇರಿ ಗೋಪಾಲಗೌಡರು ಬರೆದ **ಮಹಾಕ್ರಾಂತಿಗೆ ಆಹ್ವಾನ** ಎಂಬ ಮತ್ತೊಂದು ಲೇಖನವನ್ನು 'ಡಾಕ್ಟರ್ ಬಾಬಾ ಸಾಹೇಬ ಅಂಬೇಡ್ಕರ್' ಅವರ ೭೯ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ೧೯೬೯ರಲ್ಲಿ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಪ್ರಸ್ತುತ ಲೇಖನವನ್ನು 'ಜೀವಂತಜ್ವಾಲೆ' (ಶಾಂತವೇರಿ ಗೋಪಾಲಗೌಡರ ಸ್ಮಾರಕ ಗ್ರಂಥ) ಎಂಬ ಕೃತಿಯಲ್ಲಿ ಕೋಣಂದೂರು ವೆಂಕಪ್ಪಗೌಡ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಪ್ರಸ್ತುತ ಲೇಖನದಲ್ಲಿ ಶಾಂತವೇರಿ ಗೋಪಾಲಗೌಡರು ರಾಜ್ಯಾಂಗದ ಪ್ರಕಾರ ದಲಿತರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿ ಕೊಡುವುದು, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ನಿರಾಶ್ರಿತರ ಸಮಸ್ಯೆ, ದಲಿತರ ಮೇಲೆ ನಡೆಯುವ ದೌರ್ಜನ್ಯ, ಹಿಂದೂ ಮುಸ್ಲಿಂ ಸಾಮರಸ್ಯ, ವರ್ಗ ಮತ್ತು ವರ್ಣಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಚರ್ಚೆಗೆ ಕೈಗೆತ್ತಿಕೊಂಡಿರುವುದು ಕಂಡುಬರುತ್ತದೆ.

ಶಾಂತವೇರಿ ಗೋಪಾಲಗೌಡರು **ಸ್ವರಾಜ್ಯ ಬಂತು** ಎಂಬ ಲೇಖನವನ್ನು ತಾವೇ ರಚಿಸಿದ್ದಾರೆ. ಈ ಲೇಖನವನ್ನು ಕಾಳೇಗೌಡ ನಾಗವಾರ ಮತ್ತು ಜಿ.ವಿ. ಆನಂದಮೂರ್ತಿ ಅವರು ಸಂಪಾದಿಸಿದ **ಶಾಂತವೇರಿ ಗೋಪಾಲಗೌಡ : ನೆನಪಿನ ಸಂಪುಟ** ಎಂಬ ಕೃತಿಯಲ್ಲಿ ಕಾಣಬಹುದಾಗಿದೆ. ೧೯೪೨ರಲ್ಲಿ ನಡೆದ ಕ್ವಿಟ್‌ಇಂಡಿಯಾ ಚಳವಳಿ ಅಥವಾ ಬ್ರಿಟಿಶರೇ ಭಾರತದಿಂದ ತೊಲಗಿ ಎಂಬ ಆಂದೋಲನದ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರು ಭಾಗವಹಿಸಿದ ಸಂದರ್ಭಗಳನ್ನು ಇಲ್ಲಿ ದಾಖಲಿಸಲಾಗಿದೆ. ೧೯೪೭ರ ಆಗಸ್ಟ್ ೧೫ರಂದು ಭಾರತ ಸ್ವತಂತ್ರವಾದ ಸಂದರ್ಭದಲ್ಲಿ ನಡೆದ ಘಟನಾವಳಿಗಳನ್ನು ಗೋಪಾಲಗೌಡರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಗಾಂಧೀಜಿಯವರು ದೇಶಸೇವೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳಲಾಗಿದೆ.

'ಶಾಂತವೇರಿ : ಕೆಲವು ನೆನಪುಗಳು' ಮತ್ತು 'ಗೋಪಾಲಗೌಡರ ಗುಡುಗು... ಮಿಣಕಮ್ಮನ ಮಿಡುಕು' ಎಂಬ ಎರಡು ಲೇಖನಗಳನ್ನು ಕಡಿದಾಳ ಶಾಮಣ್ಣನವರು ಬರೆದಿದ್ದಾರೆ. ಪ್ರಸ್ತುತ ಲೇಖನಗಳು 'ನಮ್ಮ ಸಮಾಜವಾದಿಗಳು (ಕರ್ನಾಟಕದ ಸಮಾಜವಾದಿಗಳ ಪರಿಚಯ)' (೨೦೦೯) ಎಂಬ ಕೃತಿಯಲ್ಲಿ ಡಿ.ಎಸ್. ನಾಗಭೂಷಣ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿವೆ.

ಮೊದಲನೆಯ ಲೇಖನದಲ್ಲಿ ಶಾಂತವೇರಿ ಗೋಪಾಲಗೌಡರು ಸರ್ಕಾರಿ ಪ್ರೌಢಶಾಲೆಯಲ್ಲಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ಸೇರಿದ್ದು, ನಂತರ ಅರಗದಲ್ಲಿ ಪ್ರಾಥಮಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು, ರಾತ್ರಿಶಾಲೆ ನಡೆಸಿದ್ದು ಮತ್ತು ಹರಿಜನರ ದೇವಾಲಯ ಪ್ರವೇಶ, ಕಾಗೋಡು ಸತ್ಯಾಗ್ರಹ ರೂಪಿಸಿದ್ದು ಇವೇ ಮುಂತಾದ ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ. ಕಡಿದಾಳ ಶಾಮಣ್ಣನವರು ಶಾಂತವೇರಿ ಗೋಪಾಲಗೌಡರ ಗುಣ, ಅವರ ನಡತೆ, ಅವರ ಆದರ್ಶಗಳನ್ನು ಮುಕ್ತ ಕಂಠದಿಂದ ಹೊಗಳಿರುವುದು ಈ ಲೇಖನದಲ್ಲಿ ಕಂಡುಬರುವ ವೈಶಿಷ್ಟ್ಯವಾಗಿದೆ.

'ಗೋಪಾಲಗೌಡರ ಗುಡುಗು... ಮಿಣಕಮ್ಮನ ಮಿಡುಕು' ಎಂಬ ಎರಡನೆಯ ಲೇಖನದಲ್ಲಿ ಶಾಂತವೇರಿ ಗೋಪಾಲಗೌಡರು ತೀರ್ಥಹಳ್ಳಿ ಶಾಸಕರಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ನಡೆದ ಘಟನೆಯೊಂದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಊರಿನ ಸಮಸ್ಯೆಯನ್ನು ಬಗೆಹರಿಸುವ ಸಂದರ್ಭದಲ್ಲಿ ಗೋಪಾಲಗೌಡರು ಆ ಊರಿನ ಜನರಿಗೆ, ನೀವು ನಮ್ಮ ಪಕ್ಷದ ಬಾವುಟಗಳನ್ನು ಹಿಡಿದು ತಹಸೀಲ್ದಾರ್ ಕಛೇರಿಗೆ ಮೆರವಣಿಗೆ ಹೊರಟು ಅಹವಾಲು ಸಲ್ಲಿಸಬೇಕು ಎಂದು ಪ್ರೇರೇಪಿಸುವ ಸನ್ನಿವೇಶವನ್ನು ಹೊಂದಿದೆ. ಅಹವಾಲು ಸಲ್ಲಿಸಲು ಮೆರವಣಿಗೆ ಬರದೇ ಇದ್ದ ಜನರು ಪರಿಹಾರದ ಹಣ ಬಂದ ನಂತರ ಹೇಗೆ ಎಲ್ಲರೂ ಶೀಘ್ರವಾಗಿ ಜಮಾಯಿಸುತ್ತಾರೆ ಎಂಬ ನೋವನ್ನು ವ್ಯಕ್ತಪಡಿಸುವ ಸಂದರ್ಭ ಇಲ್ಲಿದೆ. ಮೆರವಣಿಗೆಯಲ್ಲಿ ಭಾಗವಹಿಸಿದ್ದ ಮಿಣಕಮ್ಮ ಎಂಬ ಹೆಣ್ಣು ಮಗಳು ಜನರು ಮೆರವಣಿಗೆಗೆ ಬಾರದೇ ಇದ್ದುದರಿಂದ ಮಿಡುಕಾಡಿದ ಸನ್ನಿವೇಶವನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಇಂಥ ಅನೇಕ ಲೇಖನಗಳಲ್ಲಿ ಶಾಂತವೇರಿ ಅವರ ಚಿಂತನೆಗಳ ಸ್ವರೂಪ ಯಾವ ಬಗೆಯದು ಎಂಬುದನ್ನು ಪರಿಶೀಲಿಸಲಾಗಿದೆ.

'ಶಾಂತವೇರಿ ಗೋಪಾಲಗೌಡರು ಹೀಗಿದ್ದರು' ಲೇಖನವನ್ನು ಎಸ್.ಎಚ್. ಪಟೇಲ್ ಅವರು ಬರೆದಿದ್ದಾರೆ. ಪ್ರಸ್ತುತ ಲೇಖನಗಳು **ನಮ್ಮ ಸಮಾಜವಾದಿಗಳು** (ಕರ್ನಾಟಕದ ಸಮಾಜವಾದಿಗಳ ಪರಿಚಯ) ಎಂಬ ಕೃತಿಯಲ್ಲಿ ಡಿ.ಎಸ್. ನಾಗಭೂಷಣ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿವೆ. ಯಾವ ನಾಗರಿಕ ಸೌಲಭ್ಯಗಳು ಇಲ್ಲದ ಆಯನೂರಿನ ಒಬ್ಬ ಬಡರೈತನ ಮನೆಯಲ್ಲಿ ಗೋಪಾಲಗೌಡರು ವಾಸ್ತವ್ಯ ಮಾಡಿದ್ದ ಸಂಗತಿ, ಸಾಮಾನ್ಯರಲ್ಲಿ ಸಾಮಾನ್ಯರಂತೆ ನಡೆದುಕೊಳ್ಳುವ ಅವರ ಗುಣವನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲದೆ ಗೋಪಾಲಗೌಡರ ಚುನಾವಣಾ ಕಾರ್ಯವೈಖರಿ, ಬಡವರ ಮೇಲೆ ಶಾಂತವೇರಿ ಗೋಪಾಲಗೌಡರಿಗೆ ಇದ್ದ ಕಾಳಜಿ ಮುಂತಾದ ವಿಷಯಗಳನ್ನು ಈ ಸಂಕ್ಷಿಪ್ತ ಲೇಖನದಲ್ಲಿ ಸ್ಮರಿಸಿದ್ದಾರೆ.

'ಶಾಂತವೇರಿ ಗೋಪಾಲಗೌಡ' ಎಂಬ ಶೀರ್ಷಿಕೆಯನ್ನು ಹೊಂದಿದ ಸುದೀರ್ಘ ಲೇಖನವು ಪ್ರಕಟಗೊಂಡಿದೆ. ಆದರೂ ಈ ಲೇಖನದ ಕರ್ತೃವಿನ ಹೆಸರು ತಿಳಿದು ಬಂದಿಲ್ಲ. ಪ್ರಸ್ತುತ ಲೇಖನವು 'ಜಗತ್ತಿನ ಸಮಾಜವಾದದ ಚಿಂತನೆಯಲ್ಲಿ ಮಹಾತ್ಮಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರ' ಕೃತಿಯಲ್ಲಿ ಪ್ರಕಟಗೊಂಡಿದೆ. ಡಿ. ಜೀವನ್‌ಕುಮಾರ್ ಅವರು ಈ ಕೃತಿಯ ಸಂಪಾದಕರಾಗಿದ್ದಾರೆ. 'ಶಾಂತವೇರಿ ಗೋಪಾಲಗೌಡ' ಎಂಬ ಲೇಖನದಲ್ಲಿ ೧. ಕಾಗೋಡಿನಲ್ಲಿ ಕಾಣಿಸಿಕೊಂಡವರು ೨. ಶಾಂತವೇರಿಯ ಅನಿಕೇತನರು ೩. ಕಾಲೇಜಿನಿಂದ ರಾಜಕೀಯಕ್ಕೆ ೪. ಸಾಗರದಿಂದ ವಿಧಾನಸಭೆಗೆ ೫. ವಿಧಾನಸಭೆಯಲ್ಲಿ ೬. ದಂತಕತೆಯಾದವರು ೭. ಕೇವಲ ರಾಜಕಾರಣಿಯಲ್ಲ ೮. ಅಂತಿಮ ದಿನಗಳು ಎಂಬ ಉಪವಿಭಾಗಗಳಿವೆ. ಕಾಗೋಡು ಚಳವಳಿಯು ಗೋಪಾಲಗೌಡರ ಪ್ರವೇಶದಿಂದ ಸಮಾಜವಾದಿ ಚಳವಳಿಯಾಗಿ ಮಾರ್ಪಟ್ಟಿರುವ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಮನೋಬಲ, ಅಭಿರುಚಿ, ನಿರ್ಧಾರ, ತತ್ವಗಳಿಗೆ ಅಂಟಿಕೊಂಡು ಬದುಕನ್ನು ಕಟ್ಟಿಕೊಂಡ ಶಾಂತವೇರಿ ಗೋಪಾಲಗೌಡರ ಬದುಕಿನ ವಿವಿಧ ಘಟ್ಟಗಳ, ವಿವಿಧ ಸನ್ನಿವೇಶಗಳ ಸ್ಮರಣಿಕೆಗಳ ಚಿತ್ರಣವನ್ನು ಈ ಲೇಖನದಲ್ಲಿ ಪ್ರತಿಪಾದಿಸಲಾಗಿದೆ.

'ಶಾಂತವೇರಿ ಗೋಪಾಲಗೌಡರು ನಡೆದು ಬಂದ ದಾರಿ' ಎಂಬ ಲೇಖನವನ್ನು ಡಿ.ಆರ್. ಹೊನ್ನಾಂಜನೇಯ ಅವರು **ಸಾಮಾಜಿಕ ಹೋರಾಟದ ಚೈತನ್ಯಗಳು** (೨೦೦೫) ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಜೆ.ಹೆಚ್. ಪಟೇಲ್, ಕಾನ್ಷಿರಾಮ್, ಎಸ್.ಎಂ. ಕೃಷ್ಣ ಮುಂತಾದ ರಾಜಕೀಯ ಮುತ್ಸದ್ದಿಗಳ, ಚಿಂತಕರನ್ನು ಕುರಿತು ಹಲವು ಲೇಖನಗಳನ್ನು ಇದೇ ಕೃತಿಯಲ್ಲಿ ನೋಡಬಹುದಾಗಿದೆ. ಈ ಚಿಂತಕರ ಸಾಲಿನಲ್ಲಿ ಶಾಂತವೇರಿ ಗೋಪಾಲಗೌಡ ಅವರನ್ನು ಕುರಿತು ಬರೆದ ಲೇಖನವು ಈ ಕೃತಿಯಲ್ಲಿ ಅಭಿವ್ಯಕ್ತಗೊಂಡಿದೆ. 'ಶಾಂತವೇರಿ ಗೋಪಾಲಗೌಡರು ನಡೆದು ಬಂದ ದಾರಿ' ಎಂಬ ಲೇಖನದಲ್ಲಿ ಗೋಪಾಲಗೌಡರು ಮಲೆನಾಡಿನ ಪರಿಸರದಲ್ಲಿ ಸಮಾಜವಾದದ ಹಿನ್ನೆಲೆಯಲ್ಲಿ ರೂಪುಗೊಂಡ ಚಳವಳಿಯಲ್ಲಿ ಭಾಗವಹಿಸಿದ ವಿವರಗಳನ್ನು ನೀಡಲಾಗಿದೆ. ಗೋಪಾಲಗೌಡರ ಕೌಟುಂಬಿಕ ಹಿನ್ನೆಲೆ, ಶಾಂತವೇರಿ ಗೋಪಾಲಗೌಡರ ಸಾಹಸಯಾತ್ರೆ, ಶೋಷಣೆಯ ವ್ಯವಸ್ಥೆಯೊಂದಿಗೆ ಗುದ್ದಾಟ, ಸಾಹಿತ್ಯ, ಸಂಸ್ಕೃತಿ, ಸ್ನೇಹ –ಇಂತಹ ಹಲವಾರು ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಲೇಖನದಲ್ಲಿ ಕಾಣಬಹುದಾಗಿದೆ. ಗೋಪಾಲಗೌಡರ ಶೈಕ್ಷಣಿಕ ಹಿನ್ನೆಲೆ, ಕಾಗೋಡು ಚಳವಳಿಯಲ್ಲಿ ಅವರು ವಹಿಸಿದ ಪಾತ್ರ ಮುಂತಾದ ಸಂಗತಿಗಳನ್ನು ಇಲ್ಲಿ ಬಿಂಬಿಸಲಾಗಿದೆ.

'ಶಾಂತವೇರಿ ಗೋಪಾಲಗೌಡರು : ಒಂದು ಚಿತ್ರ' ಎಂಬ ಲೇಖನವನ್ನು ನೀಲಗಂಗಯ್ಯಾ ಪೂಜಾರ ಅವರು ರಚಿಸಿದ್ದಾರೆ. ಈ ಲೇಖನವು **ಸಂಕ್ರಮಣ** ಪತ್ರಿಕೆಯ ೧೯೯೮ರ ಸೆಪ್ಟೆಂಬರ್ ತಿಂಗಳಿನ ೯ನೆಯ ಸಂಚಿಕೆಯ ೩೩ನೆಯ ಸಂಪುಟದಲ್ಲಿ ಪ್ರಕಟವಾಗಿದೆ. ರಾಮಮನೋಹರ ಲೋಹಿಯಾರ ದಾರ್ಶನಿಕ ದೃಷ್ಟಿ, ಇತಿಹಾಸವನ್ನು ಮಾರ್ಕ್ಸ್ ಮತ್ತು ಏಂಗಲ್ಸ್ ಅವರಿಗಿಂತ ಭಿನ್ನ ರೀತಿಯಲ್ಲಿ ಅರ್ಥೈಸುವ ರೀತಿ, ಹೊಸ ಸಮಾಜವಾದಿ ವಿಶ್ವನಾಗರಿಕತೆ ಮುಂತಾದ ವಿಷಯಗಳಲ್ಲಿ ಶಾಂತವೇರಿ ಗೋಪಾಲಗೌಡ ಮತ್ತು ತಮ್ಮ ಚಿಂತನೆಗಳು ಯಾವ ರೀತಿಯಲ್ಲಿ ಸಾಮ್ಯತೆಯನ್ನು

ಹೊಂದಿದ್ದವು ಎಂಬುದನ್ನು ನೀಲಗಂಗಯ್ಯಾ ಪೂಜಾರ ಅವರು ತಿಳಿಸಿದ್ದಾರೆ. ಲೇಖನದುದ್ದಕ್ಕೂ ನೀಲಗಂಗಯ್ಯಾ ಅವರು ಶಾಂತವೇರಿ ಗೋಪಾಲಗೌಡ ಅವರೊಂದಿಗಿನ ಒಡನಾಟದ ಸಂದರ್ಭಗಳು, ರಾಜಕೀಯ ಚಿಂತನೆಗಳು ಮತ್ತು ಮುಖ್ಯವಾಗಿ ಸಮಾಜವಾದಿ ಚಳವಳಿಯ ಹಿನ್ನೆಲೆಯಲ್ಲಿ ನಡೆದ ಘಟನಾವಳಿಗಳನ್ನು ಇಲ್ಲಿ ನೆನಪು ಮಾಡಿಕೊಂಡಿರುವುದು ಕಂಡುಬರುತ್ತದೆ.

ಗೋಪಾಲಕೃಷ್ಣ ಅಡಿಗ ಅವರು, 'ಶಾಂತವೇರಿಯ ಅಶಾಂತ ಸಂತ' ಎಂಬ ಕವಿತೆ ರಚಿಸುವುದರ ಮೂಲಕ ಶಾಂತವೇರಿ ಗೋಪಾಲಗೌಡರನ್ನು ಸ್ಮರಿಸಿಕೊಂಡಿದ್ದಾರೆ. ಪ್ರಸ್ತುತ ಕವಿತೆಯು **ಜೀವಂತಜ್ವಾಲೆ** (ಶಾಂತವೇರಿ ಗೋಪಾಲಗೌಡರ ಸ್ಮಾರಕಗ್ರಂಥ) ಎಂಬ ಕೃತಿಯಲ್ಲಿ ಕೋಣಂದೂರು ವೆಂಕಪ್ಪಗೌಡ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದೆ. ಈ ಕಾವ್ಯದಲ್ಲಿ 'ರಾಶಿ ರಾಶಿ ಮರಳು ಕಲ್ಲು ಮುಳ್ಳು ಮಣ್ಣು ಹೊರೆ ಹೊರೆ ಕೆಳಗೆ ಏರುತ್ತಲೇ ಇದ್ದ ಧೀಮಂತ ಮೊಳಕೆ' ಎಂಬ ಮಾತಿನ ಮೂಲಕ ಗೋಪಾಲಗೌಡರು ಜೀವನದ ಕಷ್ಟನಷ್ಟಗಳ ನಡುವೆ ಬೀಜವು ಮೊಳಕೆಯೊಡೆಯುವಂತೆ ಮೇಲೆದ್ದು ಬಂದರು ಎಂದು ಪ್ರಶಂಸಿಸಿದ್ದಾರೆ. ಜೀವನ ಸಂಗ್ರಾಮದಲ್ಲಿ ಶಾಂತವೇರಿ ಗೋಪಾಲಗೌಡರು ಅಭಿಮನ್ಯುವಿನಂತೆ ಹೋರಾಟ ನಡೆಸಿದರು. ಸಮಾಜದ ಅಸಮಾನತೆಯನ್ನು ಹೊಡೆದೋಡಿಸಲು ಬಾರುಕೋಲು ಬೀಸಿದರು ಎಂಬ ಸಂಗತಿಗಳನ್ನು ಪ್ರತಿಪಾದಿಸಿದ್ದಾರೆ.

೧.೩. ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು

'ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳು ಹಾಗೂ ಕರ್ನಾಟಕದ ರಾಜಕಾರಣ'ವನ್ನು ಕುರಿತ ಪ್ರಧಾನ ಭಿತ್ತಿಯನ್ನಾಗಿ ಹೊಂದಿರುವ ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿ, ಮಿತಿಗಳಿಗೂ ಒಳಪಟ್ಟಿದೆ. ಶಾಂತವೇರಿ ಗೋಪಾಲಗೌಡ ಅವರ ಎಲ್ಲಾ ಬಗೆಯ ಆಲೋಚನೆಗಳು, ಹೋರಾಟಗಳು ಹಾಗೂ ಇನ್ನಿತರೆ ಪ್ರತಿರೋಧದ ಆಲೋಚನೆಗಳನ್ನು ಈ ಅಧ್ಯಯನಕ್ಕೆ ಕೇಂದ್ರಬಿಂದುವನ್ನಾಗಿ ಮಾಡಿಕೊಳ್ಳಲಾಗಿದೆ. ಶಾಂತವೇರಿ ಗೋಪಾಲಗೌಡ ಅವರ ಪ್ರಗತಿಪರ ಚಿಂತನಾ ಕ್ರಮ, ಅವರು ಗ್ರಹಿಸಿದ್ದ ಕೃಷಿ ಉತ್ಪಾದನೆಯ ವಿಧಾನ, ರೈತರ ಸಮಸ್ಯೆಗಳ ಆಳ, ಅಗಲಗಳು, ಸಮಾಜ, ಆರ್ಥಿಕತೆ, ರಾಜಕಾರಣ ಹಾಗೂ ಸಾಂಸ್ಕೃತಿಕ ಪರಿಧಿಗಳನ್ನು ಈ ಅಧ್ಯಯನದ ಚೌಕಟ್ಟಿಗೆ ತರುವ ವ್ಯಾಪ್ತಿಯನ್ನು ಹೊಂದಲಾಗಿದೆ. ಕಳೆದ ಶತಮಾನ ೬೦, ೭೦ರ ದಶಕಗಳನ್ನು ಮುಖ್ಯವಾಗಿ ಶಾಂತವೇರಿಯವರ ರಾಜಕಾರಣದ ಕಾಲಾವಧಿಯನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅಂದಮಾತ್ರಕ್ಕೆ ಸಮಕಾಲೀನತೆಯೊಂದಿಗೆ ಅನುಸಂಧಾನ ಮಾಡಿಲ್ಲ ಎಂಬುದು ಇದರ ಅರ್ಥವಲ್ಲ. ಎಲ್ಲವನ್ನು ಅಧ್ಯಯನ ವ್ಯಾಪ್ತಿಗೆ ಒಳಗು ಮಾಡಿರುವುದು ಗಮನಾರ್ಹ.

ಅಧ್ಯಯನದ ವಸ್ತು ವಿಷಯ ಹಾಗೂ ವ್ಯಾಪ್ತಿಗೆ ಒಳಗಾಗುವ ಎಲ್ಲ ಆಕರ ಸಾಮಾಗ್ರಿಗಳನ್ನು ಸಂಗ್ರಹಿಸಿ, ವರ್ಗೀಕರಿಸಿಕೊಳ್ಳಲಾಗಿದೆ. ಹೀಗೆ ವರ್ಗೀಕರಿಸಿದ್ದನ್ನು ಪರಿಶೀಲಿಸಿ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನಗಳು ನಡೆದಿವೆ. ವಿಶ್ಲೇಷಣೆ ಹಾಗೂ ವ್ಯಾಖ್ಯಾನಗಳನ್ನು ಮಾಡುವಾಗ ಪ್ರಜ್ಞಾಪೂರ್ವಕವಾಗಿ ಇದ್ದಾಗ್ಯೂ ಮಿತಿಗಳಿಗೆ ಒಳಪಟ್ಟಿರಬಹುದು. ವ್ಯಕ್ತಿಕೇಂದ್ರಿತ ಅಧ್ಯಯನದ ಮಿತಿಗಳ ಎಚ್ಚರವನ್ನು ಗಮನಿಸಿಕೊಳ್ಳಲಾಗಿದೆ.

೧.೪. ಅಧ್ಯಯನದ ವಿಧಿ-ವಿಧಾನಗಳು

ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳನ್ನು ಹಾಗೂ ರಾಜಕಾರಣವನ್ನು ಚಾರಿತ್ರಿಕವಾಗಿ ದಾಖಲಿಸಿ, ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಕ್ರಮವನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಶಾಂತವೇರಿ ಗೋಪಾಲಗೌಡ ಅವರ ಆಲೋಚನೆಗಳು, ಸದನದಲ್ಲಿ ದಾಖಲಾದ ಮಾತುಗಳು, ಅವರು ನಡೆಸಿದ ಹೋರಾಟಗಳು ಇವು ಪ್ರಮುಖ ಆಕರಗಳಾಗಿ ಬಳಕೆಯಾಗುತ್ತವೆ. ಈ ನಿಟ್ಟಿನಲ್ಲಿ ಶಾಂತವೇರಿ ಗೋಪಾಲಗೌಡ ಅವರನ್ನು ಕುರಿತ ಎಲ್ಲಾ ಬಗೆಯ ನೇರವಾದ ಹಾಗೂ ಪೂರಕವಾದ ಚಳವಳಿಯ ಕರಪತ್ರಗಳು, ಮನವಿಗಳು, ಖಾಸಗಿ ಪತ್ರಗಳು, ದಿನಚರಿ, ಶಾಸನ ಸಭೆಯಲ್ಲಿನ ಭಾಷಣಗಳ ದಾಖಲೆಗಳನ್ನು ಪತ್ರಾಗಾರ ಹಾಗೂ ಇತರೆ ಮೂಲಗಳಿಂದ ಸಂಗ್ರಹಿಸಿ, ವರ್ಗೀಕರಿಸಿಕೊಂಡು ಬಳಸಿಕೊಳ್ಳಲಾಗಿದೆ. ಆದರೆ ಇವುಗಳನ್ನು ಬಳಸಿಕೊಳ್ಳುವಾಗ ಚರಿತ್ರೆ ಶಿಸ್ತಿನ ವೈಧಾನಿಕತೆಯೇ ಪ್ರಧಾನ ಭಿತ್ತಿ.

'ಸಮಾಜವಾದಿ ಪಕ್ಷ'ವನ್ನು ಒಳಗೊಂಡಂತೆ ಇತರೆ ಸಂಘ ಸಂಸ್ಥೆಗಳು, ಸರಕಾರಿ ಹಾಗೂ ಖಾಸಗಿ ಮೂಲದ ಗ್ರಂಥಾಲಯಗಳು, ಅವರೊಡನೆ ಚಳವಳಿಯ ಅನುಭವಗಳನ್ನು ಹಂಚಿಕೊಂಡ ಒಡನಾಡಿಗಳು, ಗೆಳೆಯರು, ಆಪ್ತರು, ಕುಟುಂಬವರ್ಗ ಮೊದಲಾದವರ ಸಂದರ್ಶನ ಇತ್ಯಾದಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಈ ರೀತಿ ಸಂಗ್ರಹಿಸಿಕೊಂಡ ವಿವರಗಳನ್ನು ಸಮಾಜಶಾಸ್ತ್ರೀಯ ಅಧ್ಯಯನದ ನೆಲೆಗಳಿಂದ ಹಾಗೂ ಚರಿತ್ರೆಯ ಶಿಸ್ತಿನ ಸಂಶೋಧನಾ ವಿಧಿ-ವಿಧಾನಗಳ ಮೂಲಕ ಪರಿಶೀಲಿಸಿ, ವಿಶ್ಲೇಷಿಸಿ ವ್ಯಾಖ್ಯಾನಿಸುವ ವೈಧಾನಿಕತೆಯ ಕ್ರಮವನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ನಿಗದಿತ ಚಾರಿತ್ರಿಕ ಕಾಲಘಟ್ಟ ಹಾಗೂ ವ್ಯಕ್ತಿಕೇಂದ್ರಿತ ಅಧ್ಯಯನವಾಗಿರುವುದರಿಂದ ಬಹುಪಾಲು ಪೂರ್ವಗ್ರಹಗಳಿಗೆ ಒಳಗಾಗುವ ಸಾಧ್ಯತೆಗಳಿರುತ್ತವೆ. ಚರಿತ್ರೆ ಶಿಸ್ತಿನ ವಿಧಿ-ವಿಧಾನದ ಕ್ರಮಗಳಿಂದ ಆಕರ ಹಾಗೂ ವಿಶ್ಲೇಷಣಾ ವಿಧಾನದಲ್ಲಿ ಎಚ್ಚರಗಳನ್ನು ವಹಿಸಲಾಗಿದೆ.

೧.೫. ಅಧ್ಯಯನದ ಸ್ವರೂಪ

'ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಚಿಂತನೆಗಳು ಹಾಗೂ ಕರ್ನಾಟಕದ ರಾಜಕಾರಣ' ಎಂಬ ಶೀರ್ಷಿಕೆಯ ಪ್ರಸ್ತುತ ಅಧ್ಯಯನವು ಈ ಕೆಳಕಂಡ ಒಟ್ಟು ಒಂಬತ್ತು ಅಧ್ಯಾಯಗಳ ಸ್ವರೂಪವನ್ನು ಪಡೆದಿದೆ. ವಿವರಿಸುವುದಾದರೆ,

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಹಿನ್ನೆಲೆ, ಆಶಯ ಹಾಗೂ ಮಹತ್ವ ಯಾವ ಥರದ್ದು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿನ ಸಮಸ್ಯೆ ಹಾಗೂ ಕುತೂಹಲಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ಬಹಳ ಮುಖ್ಯವಾದುದು. ಅಂತೆಯೇ ಇಂಥ ಅಧ್ಯಯನಕ್ಕೆ ಒಪ್ಪುವ ಚರಿತ್ರೆಯ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಸಹ. ಯಾವ ರೀತಿ ಹೇಗೆ ವಿಶ್ಲೇಷಣೆ ವ್ಯಾಖ್ಯಾನಗಳನ್ನು ಅಳವಡಿಸಿಕೊಳ್ಳಲು ಸಾಧ್ಯ ಎಂಬುದನ್ನು ಅಧ್ಯಯನದ ಸ್ವರೂಪದಲ್ಲಿ ನಿರ್ಧರಿಸಿಕೊಂಡು ಅಭ್ಯಾಸ ಮಾಡಲಾಗಿದೆ. ಶಾಂತವೇರಿ ಅವರನ್ನು ಸಮಗ್ರವಾಗಿ ಅಧ್ಯಯನದ ಸಮೀಕ್ಷೆಯಲ್ಲಿ ಈ ಅಧ್ಯಾಯದಲ್ಲಿ ಅಳವಡಿಸಿಕೊಂಡಿರುವುದು ವಿಶೇಷ.

ಎರಡನೆಯ ಅಧ್ಯಾಯದಲ್ಲಿ ಶಾಂತವೇರಿ ಗೋಪಾಲಗೌಡ ಅವರ ಸಮಕಾಲೀನ ಸನ್ನಿವೇಶಗಳ ಚಿತ್ರಣವನ್ನು ನೀಡಲಾಗಿದೆ. ಗೋಪಾಲಗೌಡರು ಹುಟ್ಟಿಬೆಳೆದ ಪರಿಸರಗಳು ಅವರ ಮೇಲೆ ಬೀರಿದ ಪ್ರಭಾವ ಮತ್ತು ಪರಿಣಾಮಗಳನ್ನು ಕುರಿತು ಇಲ್ಲಿ ವಿವರಿಸಿಕೊಳ್ಳಲಾಗಿದೆ. ಮುಂದುವರೆದು ಗೋಪಾಲಗೌಡರ ಚಾರಿತ್ರಿಕ ಸಂದರ್ಭ ಹಾಗೂ ಅವರು ಕರ್ನಾಟಕದ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ವಿವರಗಳನ್ನು ಪರಿಶೀಲಿಸಲಾಗಿದೆ. ರಾಜಕಾರಣದಲ್ಲಿ ಅವರು ನೋಡಿದ, ಅನುಭವಿಸಿದ ಸಮಸ್ಯೆಗಳು, ಸವಾಲುಗಳು ಮತ್ತು ಅವುಗಳಿಗೆ ಹುಡುಕಾಡಿದ ಪರಿಹಾರಗಳನ್ನು ಕುರಿತು ವಿವೇಚಿಸಲಾಗಿದೆ. ಗೋಪಾಲಗೌಡರು ಕರ್ನಾಟಕದ ಸಮಾಜವಾದಿ ತತ್ವ ಸಿದ್ಧಾಂತದ ಹಿನ್ನೆಲೆಯಲ್ಲಿ ರೂಪುಗೊಂಡ ಸಮಾಜವಾದಿ ಚಳವಳಿಗಳಲ್ಲಿ ಭಾಗವಹಿಸಿದ ಸಂಗತಿಗಳನ್ನು ಹಾಗೂ ಅವರು ಸ್ಥಳೀಯ ಜನರೊಂದಿಗೆ ನಡೆಸಿದ ಒಡನಾಟಗಳು, ಸಮಸ್ಯೆಗಳಿಗೆ ಸ್ಪಂದಿಸಿದ ಸನ್ನಿವೇಶಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಮೂರು, ಸಮಾಜವಾದ ಹಾಗೂ ಸೈದ್ಧಾಂತಿಕ ನೆಲೆಗಳು ಎಂಬುದು. ಇದರಲ್ಲಿ ಸಮಾಜವಾದದ ಅರ್ಥ, ವ್ಯಾಖ್ಯೆ ಹಾಗೂ ತಾತ್ವಿಕ ನೆಲೆಗಳನ್ನು ಕುರಿತ ಅಂಶಗಳನ್ನು ಪ್ರತಿಪಾದಿಸಲಾಗಿದೆ. ಭಾರತದಲ್ಲಿ ಸಮಾಜವಾದ ಹಾಗೂ ಕರ್ನಾಟಕದಲ್ಲಿ ಸಮಾಜವಾದಿ ಸಿದ್ಧಾಂತ ಮತ್ತು ಅವುಗಳ ಪ್ರತಿಪಾದಕರು ನಡೆಸಿದ ಚಿಂತನೆಗಳ ಒಟ್ಟು ನೋಟವನ್ನು ಇಲ್ಲಿ ಪರಿಶೀಲಿಸಲಾಗಿದೆ. ಸಮಾಜವಾದದ ನೇತಾರನಾಗಿದ್ದ ರಾಮಮನೋಹರ ಲೋಹಿಯಾ ಅವರೊಂದಿಗೆ ಶಾಂತವೇರಿ ಗೋಪಾಲಗೌಡರು ಹೊಂದಿದ್ದ ಸಂಬಂಧಗಳನ್ನು ಇಲ್ಲಿ ನಿರೂಪಿಸಲಾಗಿದೆ. ಗೋಪಾಲಗೌಡರ ಮೇಲೆ ಲೋಹಿಯಾ ಅವರ ತತ್ವಸಿದ್ಧಾಂತಗಳು ಬೀರಿದ ಪ್ರಭಾವ, ಪರಿಣಾಮಗಳನ್ನು ಕುರಿತು ಈ ಅಧ್ಯಾಯವು ಗಮನಹರಿಸಿದೆ. ಸಮಾಜವಾದ ಮತ್ತು ಮಹಾತ್ಮಾಗಾಂಧೀಜಿಯವರ ಸಂಬಂಧಗಳು ಯಾವ ಬಗೆಯವು ಎಂಬುದನ್ನು ಕುರಿತು ಕುತೂಹಲಗಳಿದ್ದವು. ಈ ಹಿನ್ನೆಲೆಯಲ್ಲಿ ಸಮಾಜವಾದವನ್ನು ಕುರಿತು ಗಾಂಧೀಜಿಯವರ ಚಿಂತನೆಗಳು ಯಾವ ಸ್ವರೂಪದವಾಗಿದ್ದವು ಹಾಗೂ ಸಮಾಜವಾದದ ಬಗೆಗೆ ಅವರು ತಳೆದ ನಿಲುವುಗಳು ಏನಾಗಿದ್ದವು ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅಂತೆಯೇ ಸಮಾಜವಾದ ಮತ್ತು ಅಂಬೇಡ್ಕರ್ ಅವರ ನಡುವಿನ ಸಂಬಂಧಗಳನ್ನು ಸಹ ನೋಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶಾಂತವೇರಿ ಗೋಪಾಲಗೌಡರು ಮತ್ತು ಸಮಾಜವಾದಿ ಚಳವಳಿಗಳ ನಡುವಿನ ಸಂಬಂಧಗಳನ್ನು ಕುರಿತ ವಿವೇಚನೆಯನ್ನು ಮಾಡಲಾಗಿದೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರದ ಕರ್ನಾಟಕದ ಮಲೆನಾಡಿನ ಭಾಗದ ಜನರ ಜೀವನಪದ್ಧತಿಗಳ ಪರಿಚಯದ ಮೂಲಕ ಅಂದಿನ ಸ್ಥಿತಿಗತಿಗಳ ಚಿತ್ರಣವನ್ನು ನೀಡಲಾಗಿದೆ. ಭೂಮಿಯ ಗೇಣಿ ಪದ್ಧತಿಯನ್ನು ನಡೆಸುತ್ತಿದ್ದ ಅಂದಿನ ಪಟ್ಟಭದ್ರ ಹಿತಾಸಕ್ತಿಗಳ ಚಲನೆಗಳು, ನಿಲುವುಗಳು, ಶೋಷಣೆಯ ಸನ್ನಿವೇಶಗಳು ಹಾಗೂ ಗೇಣಿ ಪದ್ಧತಿ ಬಲವಾಗಿ ಬೇರೂರಲು ಕಾರಣವಾದ ಸಂದರ್ಭಗಳನ್ನು ನಿರೂಪಿಸಲಾಗಿದೆ. ಭೂ ಸುಧಾರಣೆಯ ಹಿನ್ನೆಲೆಯಲ್ಲಿ ನಡೆದ ಕಾಗೋಡು ಚಳವಳಿ, ಆ ಚಳವಳಿಯ ಸ್ವರೂಪ,

ಹಿನ್ನೆಲೆ, ಸೈದ್ಧಾಂತಿಕ ವಿಷಯಗಳಿಗೆ ಸಂಬಂಧಿಸಿದ ವಿವರಗಳನ್ನು ಇಲ್ಲಿ ನೀಡಲಾಗಿದೆ. ಸಮಾಜವಾದಿ ಸಿದ್ಧಾಂತ ಕೇಂದ್ರಿತ ಚಳವಳಿಯ ವಿವಿಧ ಆಯಾಮಗಳನ್ನು ಕುರಿತು ಚರ್ಚಿಸಲಾಗಿದೆ. ಅಲ್ಲದೆ ಕರ್ನಾಟಕದ ಪ್ರಗತಿಪರ ಚಳವಳಿಗಳ ಮೇಲೆ ಶಾಂತವೇರಿ ಗೋಪಾಲಗೌಡರ ಪ್ರಭಾವವನ್ನು ಗುರುತಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಗೋಪಾಲಗೌಡರು ಬೀರಿದ ಪ್ರಭಾವಗಳನ್ನು ವಿಶೇಷವಾಗಿ ದಲಿತ-ಬಂಡಾಯ ಸಾಹಿತ್ಯಗಳ ಹುಟ್ಟಿನ ಸಂದರ್ಭಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯವು ಕರ್ನಾಟಕ ರಾಜಕಾರಣ ಹಾಗೂ ಶಾಂತವೇರಿ ಗೋಪಾಲಗೌಡರನ್ನು ಕುರಿತದ್ದು. ಇದರಲ್ಲಿ ಶಾಂತವೇರಿ ಗೋಪಾಲಗೌಡರು ಕರ್ನಾಟಕದ ರಾಜಕಾರಣದಲ್ಲಿ ವಹಿಸಿದ ಪಾತ್ರವನ್ನು ಕುರಿತ ಚಿತ್ರಣವನ್ನು ನೀಡಲಾಗಿದೆ. ಶಾಸನಸಭೆಯಲ್ಲಿ ಶಾಂತವೇರಿ ಗೋಪಾಲಗೌಡರು ಯಾವ ಯಾವ ವಿಷಯಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು ಎಂಬ ವಿಷಯಗಳನ್ನು ಕುರಿತು ಇಲ್ಲಿ ದಾಖಲಿಸಿ ಪರಿಶೀಲಿಸಿದೆ. ಕರ್ನಾಟಕದ ಅಂದಿನ ಚುನಾವಣೆಯ ಸಂದರ್ಭದಲ್ಲಿ ಗೋಪಾಲಗೌಡರು ಪ್ರವೇಶಿಸಲು ಕಾರಣವಾದ ಸಂಗತಿಗಳನ್ನು ಸಹ ಇಲ್ಲಿ ಗಮನಿಸಲಾಗಿದೆ. ಎಡಪಂಥೀಯ ಚಿಂತನೆಗಳು ಗೋಪಾಲಗೌಡರ ಮೇಲೆ ಬೀರಿದ ಪ್ರಭಾವ ಪರಿಣಾಮಗಳನ್ನು ಶೋಧಿಸಲಾಗಿದೆ. ಅಧಿಕಾರ ವಿಕೇಂದ್ರೀಕರಣವನ್ನು ಕುರಿತು ಗೋಪಾಲಗೌಡರು ನಡೆಸಿದ ಚಿಂತನ ಮಂಥನಗಳನ್ನು, ಆ ಕುರಿತು ಅವರು ಪ್ರತಿಪಾದಿಸಿದ ಸಿದ್ಧಾಂತಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಹಳೆಯ 'ಮೈಸೂರು ರಾಜ್ಯ'ವು 'ಕರ್ನಾಟಕ ರಾಜ್ಯ'ವಾಗಿ ಹೊಸ ರೂಪ ಪಡೆಯಲು ಗೋಪಾಲಗೌಡರು ವಹಿಸಿದ ಪಾತ್ರ ಯಾವ ಬಗೆಯದು? ಎಂಬುದನ್ನು ಇದರಲ್ಲಿ ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯವು ಕರ್ನಾಟಕದ ಆರ್ಥಿಕತೆಯ ನೆಲೆಗಳು ಹಾಗೂ ಸಮಾಜವಾದಿ ಚಿಂತನೆಗೆ ಸಂಬಂಧಿಸಿದ್ದು. ಈ ಅಧ್ಯಾಯದಲ್ಲಿ ಶಾಂತವೇರಿ ಗೋಪಾಲಗೌಡರು ವಿಧಾನಸಭೆ, ರಾಜಭವನ ಹಾಗೂ ವಿಧಾನಪರಿಷತ್‌ನೊಂದಿಗೆ ನಡೆಸಿದ ಸಂವಾದ-ಅನುಸಂಧಾನಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ವಿಶೇಷವಾಗಿ ವಿಧಾನಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಗೋಪಾಲಗೌಡರು 'ರಾಜಧನ ರದ್ಧತಿ'ಯನ್ನು ಕುರಿತು ಎತ್ತಿದ ಪ್ರಶ್ನೆಗಳು, 'ಇನಾಂ ಜಮೀನು ರದ್ಧತಿ'ಯನ್ನು ಕುರಿತು ನಡೆಸಿದ ವಾದಗಳನ್ನು ಕುರಿತು ಇಲ್ಲಿ ವಿಮರ್ಶಿಸಲಾಗಿದೆ. ಅಲ್ಲದೆ ರಾಜ್ಯದ ಪ್ರಗತಿಯ ಆಧಾರ ಸ್ತಂಭ ಅನ್ನಿಸಿಕೊಂಡ 'ಆಹಾರ ಪದ್ಧತಿ', 'ಲೆವಿ ವ್ಯವಸ್ಥೆ', 'ಕೈಗಾರಿಕಾ ನೀತಿ', 'ತೆರಿಗೆ ನೀತಿ', 'ಸಮಾನ ಸಂಬಳ' ಮೊದಲಾದ ವಿಷಯಗಳನ್ನು ಕುರಿತು ತಮ್ಮದೇ ಆದ ಚಿಂತನೆಗಳನ್ನು, ವಾದಗಳನ್ನು ಮಂಡಿಸಿದ ಮತ್ತು ಸಮರ್ಥನೆಗಳನ್ನು ನೀಡಿದ ಬಗೆಯನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. ವಿರೋಧ ಪಕ್ಷಗಳು, ಆಡಳಿತ ಪಕ್ಷಗಳು ಮಂಡಿಸಿದ ವಾದ ಪ್ರತಿವಾದಗಳಿಗೆ ತಕ್ಕ ಉತ್ತರ ಮತ್ತು ಸಮಜಾಯಿಷಿಗಳನ್ನು ನೀಡಿದ ಸಂಗತಿಗಳನ್ನು ಸಹ ಇಲ್ಲಿ ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯವು ಕರ್ನಾಟಕದ ಸಮಾಜ, ಸಂಸ್ಕೃತಿ ಮತ್ತು ಸಂಘರ್ಷಗಳು ಎಂಬ ಶೀರ್ಷಿಕೆಯಲ್ಲಿ ನಿರೂಪಿತವಾಗಿದೆ. ಕರ್ನಾಟಕದ ಸಮಾಜ, ಸಂಸ್ಕೃತಿಯ ಅಂಶಗಳ ಕಡೆಗೆ ಚರ್ಚೆಯನ್ನು ಬೆಳೆಸಿಕೊಳ್ಳಲಾಗಿದೆ. ಪಾರಂಪರಿಕ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳನ್ನು ಪ್ರಗತಿಪರ ದೃಷ್ಟಿಕೋನವನ್ನುಳ್ಳ ವ್ಯಕ್ತಿಯು ಅವುಗಳನ್ನು ಯಾವ ನಿಲುವಿನಲ್ಲಿ ನೋಡುತ್ತಾನೆಂಬ ಅಂಶದ ಕಡೆಗೆ ಇಲ್ಲಿ ಚರ್ಚೆಯನ್ನು ಬೆಳೆಸಿರುವುದು ವಿಶೇಷ. ಸಮಾಜವಾದಿ ಅಥವಾ ಪ್ರಗತಿಪರ ವ್ಯಕ್ತಿಯು ಈಗಾಗಲೇ ರೂಢಿಯಲ್ಲಿದ್ದ ಸಂಸ್ಕೃತಿ, ಪದ್ಧತಿ, ಆಚರಣೆಗಳನ್ನು ಸುಲಭವಾಗಿ ಮತ್ತು ದೈವಿಕ ಹಿನ್ನೆಲೆಯಲ್ಲಿ ಒಪ್ಪಿಕೊಳ್ಳುವುದಿಲ್ಲ. ಈ ಹಿನ್ನೆಲೆಯಲ್ಲಿ ಶಾಂತವೇರಿ ಗೋಪಾಲಗೌಡರು ನಮ್ಮ ಕರ್ನಾಟಕದ ಸಂಸ್ಕೃತಿಯ ನಡೆಗಳನ್ನು ಪ್ರಶ್ನಿಸಿದ್ದಾರೆ. ಅವುಗಳಿಗೆ ವಿವರಣೆಗಳನ್ನು ಸ್ಪಷ್ಟನೆಗಳನ್ನು ಕೇಳಿದ್ದಾರೆ. ಈ ನಿಟ್ಟಿನಲ್ಲಿ ಗೋಪಾಲಗೌಡರು ನಮ್ಮ ಸಮಾಜ, ಸಂಸ್ಕೃತಿಯ ಬಗೆಗೆ ತಳೆದ ನಿಲುವುಗಳನ್ನು ಈ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ.

ಎಂಟನೆಯ ಅಧ್ಯಾಯವು ಸಮಕಾಲೀನ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಚಿಂತನೆಗಳ ಪ್ರಸ್ತುತತೆಯನ್ನು ಕುರಿತು ಚರ್ಚಿಸುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಆಡಳಿತ ಪದ್ಧತಿಯ ಹಿನ್ನೆಲೆಯಲ್ಲಿ ನಮ್ಮ ಜೀವನ ಹೇಗಿತ್ತು? ಅದಕ್ಕೂ ಮುಂಚೆ ಇದ್ದ ರಾಜಪ್ರಭುತ್ವವು ಸ್ವಾತಂತ್ರ್ಯಾನಂತರ ಪ್ರಜಾಪ್ರಭುತ್ವವಾಗಿ ಬದಲುಗೊಳ್ಳಬೇಕಾದರೆ ಅನೇಕ ಸ್ಥಿತ್ಯಂತರಗಳು ನಡೆದ ಪ್ರಕ್ರಿಯೆ. ವಸಾಹತೋತ್ತರ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಹೇಗೆ ಸ್ಥಿರಗೊಂಡಿದೆ, ಎಲ್ಲರಿಗೂ ತಮ್ಮ ಅಭಿಪ್ರಾಯ ಸ್ವಾತಂತ್ರ್ಯಗಳನ್ನು ಅಭಿವ್ಯಕ್ತಿಪಡಿಸಿಕೊಳ್ಳುವ ಸಂವಿಧಾನಬದ್ಧವಾದ ಹಕ್ಕು ಇರುವುದರಿಂದ ಇಂದಿಗೂ ತಮ್ಮ ರಾಜಕೀಯ, ಸಾಮಾಜಿಕ ನಿಲುವುಗಳನ್ನು ಪ್ರಕಟಿಸಲು ಇರುವಂಥ ಅವಕಾಶ. ಸಮಾಜವಾದಿ ಸಿದ್ಧಾಂತವನ್ನೊಳಗೊಂಡ ಆಡಳಿತ ಪದ್ಧತಿಗಳು ಅನೇಕ ರಾಜ್ಯಗಳಲ್ಲಿ ಬಂದುಹೋದರೂ ಕರ್ನಾಟಕದ ಸಂದರ್ಭದಲ್ಲಿ ಗೋಪಾಲಗೌಡರ ಸಮಾಜವಾದಿ ಚಿಂತನೆಗಳು ಇಂದು ಪ್ರಸ್ತುತವಾಗಿವೆಯೇ ಅಥವಾ ಇಲ್ಲವೇ ಎಂಬ ಚರ್ಚೆಯನ್ನು ಈ ಅಧ್ಯಾಯದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಅವರ ಚಿಂತನೆಗಳು ಇಂದು ಪ್ರಸ್ತುತ ಎನ್ನುವುದಾದರೆ ಅದಕ್ಕೆ ಕಾರಣಗಳೇನು? ಇಲ್ಲ ಎನ್ನುವುದಾದರೆ ಅದಕ್ಕೆ ಕಾರಣಗಳೇನು? ಎಂಬ ಅನೇಕ ಸಂಗತಿಗಳ ಚರ್ಚೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಒಂಬತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಹಾಗೂ ತಳೆದಂಥ ನಿಲುವುಗಳನ್ನು ಕುರಿತು ದಾಖಲಿಸುವಂಥದ್ದಾಗಿದೆ. ಉಳಿದಂತೆ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಮೂರು ಅನುಬಂಧಗಳಲ್ಲಿ ಮೂಲ ಗ್ರಂಥಗಳು, ಪರಾಮರ್ಶನ ಗ್ರಂಥಗಳು ಹಾಗೂ ಛಾಯಾಚಿತ್ರ ಇತ್ಯಾದಿಗಳನ್ನು ಸಂಯೋಜಿಸಲಾಗಿದೆ.

ಅಧ್ಯಾಯ : ಎರಡು

ಶಾಂತವೇರಿ ಗೋಪಾಲಗೌಡ – ಚಾರಿತ್ರಿಕ ಸಂದರ್ಭ ಹಾಗೂ ಪ್ರಭಾವ

೨.೧ ಶಾಂತವೇರಿ ಗೋಪಾಲಗೌಡ ಹಾಗೂ ಸಮಕಾಲೀನ ಸನ್ನಿವೇಶ

೨.೨ ಶಾಂತವೇರಿ ಗೋಪಾಲಗೌಡ ಹಾಗೂ ಪರಿಸರ-ಪ್ರಭಾವ

೨.೩ ಶಾಂತವೇರಿ ಗೋಪಾಲಗೌಡ ಅವರ ಚಾರಿತ್ರಿಕ ಸಂದರ್ಭ ಹಾಗೂ ರಾಜಕಾರಣ ಪ್ರವೇಶ

೨.೪ ಶಾಂತವೇರಿ ಗೋಪಾಲಗೌಡ ಅವರ ಚಳವಳಿಗಳ ವಿಭಿನ್ನ ಘಟ್ಟಗಳು

೨.೫ ಶಾಂತವೇರಿ ಗೋಪಾಲಗೌಡರು ಮತ್ತು ಸ್ಥಳೀಯ ಸಮಸ್ಯೆಗಳು ಹಾಗೂ ಸಾಮಾಜಿಕ ಸಮಸ್ಯೆಗಳ ಮುಖಾಮುಖಿ

ಅಧ್ಯಾಯ : ಎರಡು

ಶಾಂತವೇರಿ ಗೋಪಾಲಗೌಡ - ಚಾರಿತ್ರಿಕ ಸಂದರ್ಭ ಹಾಗೂ ಪ್ರಭಾವ

ಒಂದು ಆರೋಗ್ಯಕರ ಸಮಾಜದ ನಿರ್ಮಾಣದಲ್ಲಿ ಹಲವಾರು ನೇತಾರರ, ದೇಶಪ್ರೇಮಿಗಳ, ಸ್ವಾರ್ಥರಹಿತ ಮನೋಭಾವದ ಮನಸ್ಸುಗಳ ಪಾತ್ರ ಹಿರಿದಾಗಿರುತ್ತದೆ. ಅದರಂತೆ ಕನ್ನಡ ನಾಡಿನ ಅಥವಾ ಸಮಾಜದ ಏಳಿಗೆಗೆ ಹಲವಾರು ಮಹನೀಯರು ಹಗಲಿರುಳೆನ್ನದೆ ಅವಿರತ ಶ್ರಮದಿಂದ ತಮ್ಮ ಪ್ರಾಣಗಳನ್ನು ಪಣಕ್ಕಿಟ್ಟು ಶ್ರಮಿಸಿದ್ದಾರೆ. ಸಮಾಜ ಸುಧಾರಕರು, ರಾಜಕೀಯ ಧುರೀಣರು, ಧಾರ್ಮಿಕ ನೇತಾರರು, ಹೋರಾಟಗಾರರು, ಸಾಹಿತಿಗಳು, ಕಲಾವಿದರು, ಚಿಂತಕರು, ಸೇರಿದಂತೆ ಹಲವು ಕ್ಷೇತ್ರಗಳ ಸಾಧಕರ ಶ್ರಮ ಮತ್ತು ಆಶಯಗಳಂತೆ ಸಮಾಜ ಮುನ್ನುಡಿ ಇಡುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಮಲೆನಾಡಿನ ಸೀಮೆಯ ಭಾಗದ ಜನರ ಆಶಾಕಿರಣವಾಗಿ, ಬಡವರ, ದಲಿತರ ನೋವಿಗೆ ಧ್ವನಿಯಾಗಿರುವ ಮಹನೀಯರಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಶಾಂತವೇರಿ ಗೋಪಾಲಗೌಡರು ಒಬ್ಬರಾಗಿದ್ದಾರೆ. ಸುಸಂಸ್ಕೃತ ಮತ್ತು ಶ್ರೀಮಂತಿಕೆಯ ಮನೆತನದಿಂದ ಬಂದ ಗೌಡರಿಗೆ ಬಡವರ ಪರವಾಗಿ ಬೀದಿಗಿಳಿದು ಹೋರಾಟ ಮಾಡುವ ತುರ್ತು ಇರಲಿಲ್ಲವೆಂದೇ ಹೇಳಬೇಕು. ಆದರೂ ದಲಿತರ, ಬಡವರ, ಅಸಹಾಯಕರ ನೋವುಗಳನ್ನು ಅರ್ಥಮಾಡಿಕೊಂಡು ಅವರ ಪರವಾಗಿ ಮಾತನಾಡುವ ಧ್ವನಿಯಾಗಿ ನಿಂತದ್ದು ವಿಶೇಷವಾಗಿದೆ. ಉನ್ನತ ಮಟ್ಟದ ಸಾಧನೆಗೈದು ನಾಡಿನಲ್ಲಿ ಪ್ರಸಿಧ್ಧಿಯನ್ನು ಹೊಂದಿರುವ ವ್ಯಕ್ತಿಯ ಜೀವನ ಚಿತ್ರಣವು ಸರಳರೇಖೆಯಲ್ಲಿ ಸಾಗಿರುವುದಿಲ್ಲ. ಹಲವಾರು ಸವಾಲುಗಳನ್ನು, ತೊಡಕುಗಳನ್ನು, ಜೀವಭಯಗಳನ್ನು ಸಹಜವಾಗಿಯೇ ಹಾಯ್ದಿರುತ್ತಾರೆ. ಈ ಎಲ್ಲ ಸವಾಲುಗಳನ್ನು ಎದುರಿಸಿ ತಮ್ಮ ಜೀವನವನ್ನು ರೂಪಿಸಿಕೊಂಡು, ಸಮಾಜವಾದ ಸಿದ್ಧಾಂತಕ್ಕೆ ಬದ್ಧರಾಗಿ ತಮ್ಮ ವೈಚಾರಿಕ ನಿಲುವುಗಳನ್ನು ಜನರಿಗೆ ತಿಳಿಯಪಡಿಸುವಲ್ಲಿ ಶಾಂತವೇರಿಯವರು ನಿರಂತರವಾಗಿ ಶ್ರಮಿಸಿದ್ದಾರೆ. ಅಂದರೆ ಅವರ ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು, ಮುತ್ಸದ್ಧಿ ರಾಜಕಾರಣಿಯಾಗಿ ಹಾಗೂ ಅಪ್ರತಿಮ ಹೋರಾಟಗಾರನಾಗಿ ಬೆಳೆದ ಕ್ರಮವನ್ನು ಈ ಅಧ್ಯಾಯದಲ್ಲಿ ಕಾಣುವ ಯತ್ನ ಮಾಡಲಾಗಿದೆ.

೨.೧ ಶಾಂತವೇರಿ ಗೋಪಾಲಗೌಡ ಹಾಗೂ ಸಮಕಾಲೀನ ಸನ್ನಿವೇಶ

ಮಲೆನಾಡಿನಲ್ಲಿ ಹುಟ್ಟಿದ ಶಾಂತವೇರಿಯವರ ವ್ಯಕ್ತಿತ್ವ ಆ ನೆಲದ ಸತ್ವದಿಂದಲೇ ರೂಪುಗೊಂಡಿತು ಎನ್ನಬಹುದು. ಜಮೀನ್ದಾರಿ ವ್ಯವಸ್ಥೆ ಕೆಳವರ್ಗಗಳನ್ನು ಶೋಷಣೆಗೆ ಒಳಪಡಿಸಿದ್ದರೆ, ಅನಕ್ಷರತೆ, ಅಸ್ಪೃಶ್ಯತೆಯಂಥಹ ಸಂಗತಿಗಳನ್ನು ಸಾಮಾನ್ಯ ಜನರ ಬದುಕನ್ನು ಕನಿಷ್ಠಗೊಳಿಸಿದ್ದವು. ಇದೇ ಸಂದರ್ಭದಲ್ಲಿ ಗಾಂಧಿಯ ಪ್ರಭಾವ ಮಲೆನಾಡಿನ ಅನೇಕ ಭಾಗಗಳಲ್ಲಿ ಕಾಣಬಹುದಾಗಿತ್ತು. ಗಾಂಧಿ ಪ್ರಣೀತ ಅಹಿಂಸಾ ಹೋರಾಟಕ್ಕೆ ಪರ್ಯಾಯವಾಗಿ ಸಮಾಜವಾದಿ ಹೋರಾಟವೂ ರೂಪುಗೊಂಡಿದ್ದಿತು. ಗಾಂಧಿ ತತ್ವದಿಂದ ಪ್ರಭಾವಿತರಾಗಿದ್ದ ಗೋಪಾಲಗೌಡರು ನಂತರದ ದಿನಗಳಲ್ಲಿ ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಅವರಂಥವರ ವಿಚಾರಗಳಿಗೆ ತನ್ನನ್ನು ಒಡ್ಡಿಕೊಂಡರು. ಇದೇ ಸಂದರ್ಭದಲ್ಲಿ ಮಲೆನಾಡಿನವರೇ ಆದ ಜಿ. ಸದಾಶಿವರಾಯರು, ಶಾಮ ಐತಾಳ, ಕಾಳಿಂಗಯ್ಯನ ರಾಮಕೃಷ್ಣಯ್ಯನಂಥವರು ಸಮಾಜವಾದಿ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರು. ಇವರೊಂದಿಗೆ ಗೋಪಾಲಗೌಡರು ಸೇರಿಕೊಂಡಿದ್ದು ಮಲೆನಾಡಿನ ಸಮಾಜವಾದಿ ಹೋರಾಟಕ್ಕೆ ಹೊಸ ಹುರುಪನ್ನು ತಂದುಕೊಟ್ಟಿತು.

ಮಲೆನಾಡಿನ ದೀನದಲಿತರು, ಕೃಷಿ ಕಾರ್ಮಿಕರು, ಗೇಣಿದಾರರು, ಮಹಿಳೆಯರು, ದಿಕ್ಕಿಲ್ಲದ ಜನತೆಯ ಪರವಾಗಿ ನೇರವಾಗಿ, ಯಾವುದೇ ಮುಲಾಜಿಲ್ಲದೆ ಮಾತನಾಡುತ್ತಿದ್ದ ವ್ಯಕ್ತಿಗಳಲ್ಲಿ ಶಾಂತವೇರಿ ಗೋಪಾಲಗೌಡರು ಮುಖ್ಯರು. ಇದಕ್ಕೆ ಪೂರಕವೆಂಬಂತೆ ಇಪ್ಪತ್ತನೇ ಶತಮಾನದ ಮೊದಲೆರಡು ದಶಕಗಳಲ್ಲಿ ಆಗುತ್ತಿದ್ದ ಬದಲಾವಣೆಗಳ ಪ್ರಭಾವ ಕರ್ನಾಟಕದ ಮೇಲೂ ಆಯಿತು. ರಷ್ಯಾದ ಕ್ರಾಂತಿ, ಪ್ರಥಮ ಜಾಗತಿಕ ಯುದ್ಧದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳ ವಿಜಯ, ವಿದೇಶೀ ಕೈಗಾರಿಕಾ ಮುನ್ನಡೆ, ಮುಂದುವರಿದ ಪತ್ರಿಕೋದ್ಯಮ ಮೊದಲಾದವು ಕರ್ನಾಟಕದ ಜನರ ಮೇಲೆ ಪರಿಣಾಮ ಬೀರಿದವು. ಇದರಿಂದಾಗಿ ಜನತೆ ಜನತೆ ಎಚ್ಚೆತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಸ್ಥಳೀಯ ರಾಜರುಗಳ ಕಪಿಮುಷ್ಠಿಯಿಂದ ದೇಶ ಮತ್ತು ಆಡಳಿತವನ್ನು ಬಿಡಿಸಲು ಅಣಿಯಾದರು.[೧]

ಈ ರೀತಿಯ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಶಾಂತವೇರಿ ಗೋಪಾಲಗೌಡ ಅವರು ವೈಯಕ್ತಿಕವಾಗಿ ರಾಮಮನೋಹರ ಲೋಹಿಯಾ ಅವರಿಗೆ ಹತ್ತಿರದವರಾಗಿದ್ದರು. ಈ ಹಿನ್ನೆಲೆಯಲ್ಲಿ ಕರ್ನಾಟಕವು ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಟ್ಟಿತು. ಗೋಪಾಲಗೌಡ ಅವರು ಮಲೆನಾಡಿನ ಯುವಜನರನ್ನು ಸಂಘಟಿಸಿ ಕರ್ನಾಟಕದಲ್ಲಿ ರೈತ ಚಳವಳಿಗೆ ಒಂದು ಹೊಸ ರೂಪ ಕೊಟ್ಟರು. ಜಮೀನ್ದಾರರ ಕಪಿಮುಷ್ಠಿಯಿಂದ ಗೇಣಿದಾರರನ್ನು ಮುಕ್ತಗೊಳಿಸುವುದರ ಮುಖಾಂತರ ಚಳವಳಿ ಫಲಕಾರಿಯಾಗುವಂತೆ ಮಾಡಿದ್ದು ಅವರ ಸಾಧನೆ. 'ಉಳುವವನೆ ಹೊಲದೊಡೆಯ' ಎಂಬ ಘೋಷಣೆಯನ್ನು ಸಾಕಾರಗೊಳಿಸಿದರು. ಹದಿನೈದು ವರ್ಷಗಳ ಕಾಲ ಶಾಸಕರಾಗಿ ಅಪೂರ್ವವಾದ ಕೆಲಸವನ್ನು ಅವರು ಮಾಡಿದರು. ಭ್ರಷ್ಟಾಚಾರವನ್ನು ವಿರೋಧಿಸುತ್ತಿದ್ದ ಶಾಂತವೇರಿ ಗೋಪಾಲಗೌಡ ಅವರಿಗೆ ಹಣಬಲ ಇರಲಿಲ್ಲ. ಆದರೆ ಜನರ ಪ್ರೀತಿ, ವಿಶ್ವಾಸದ ಬಲ ಇತ್ತು. ನಲವತ್ತೊಂಬತ್ತು ವರ್ಷ ಬದುಕಿದ ಅವರು ಜನರು ಸದಾ ನೆನಪಿನಲ್ಲಿಡುವಂತಹ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರು.

೨.೨ ಶಾಂತವೇರಿ ಗೋಪಾಲಗೌಡ ಹಾಗೂ ಪರಿಸರ - ಪ್ರಭಾವ

ಮಲೆನಾಡಿನ ಮಣ್ಣಿನ ಗುಣವೇ ಅಂಥದ್ದು. ತನ್ನ ಮಣ್ಣಿನ ಮೂಸೆಯಿಂದ ಅಪ್ರತಿಮ ಪ್ರತಿಭಾವಂತರನ್ನು ಈ ಸಮಾಜಕ್ಕೆ ನೀಡಿದೆ. ಈ ಹಿನ್ನೆಲೆಯಲ್ಲಿಯೇ ಶಾಂತವೇರಿಯವರ ವ್ಯಕ್ತಿತ್ವವನ್ನು ಗ್ರಹಿಸಬೇಕಿದೆ.

ಗೌಡರು ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿರುವ ಆರಗ ಸಮೀಪದ ಶಾಂತವೇರಿ ಎಂಬ ಸಣ್ಣ ಹಳ್ಳಿಯಲ್ಲಿ. ೧೯೨೩ ಮಾರ್ಚ್ ೧೪ ರಂದು ಜನಿಸಿದ ಗೋಪಾಲಗೌಡರ ತಂದೆ ಕೊಲ್ಲೂರಯ್ಯಗೌಡ, ತಾಯಿ ಶೇಷಮ್ಮ. ಶಾಂತವೇರಿ ಗೋಪಾಲಗೌಡರು ಸುಸಂಸ್ಕೃತ ಮನೆತನದವರು. ಗೌಡರ ತಾತನ ಕಾಲದಲ್ಲಿ ಪಟೇಲಿಕೆಯನ್ನು ಹೊಂದಿದ್ದ ಶ್ರೀಮಂತ ಮನೆತನವಾಗಿತ್ತು. ಮುಂದಿನ ದಿನಗಳಲ್ಲಿ ಗೌಡರ ಕುಟುಂಬ ಗೇಣಿದಾರರ ಕುಟುಂಬವಾಗಿ ಬದಲಾಯಿತು. ಅದು ಈ ರಾಜ್ಯಕ್ಕೆ ವರಪ್ರಸಾದವಾಗಿ ಬಂತೆನ್ನುವುದು ಸೋಜಿಗದ ಸಂಗತಿ.

ಶಾಂತವೇರಿ ಗೋಪಾಲಗೌಡರ ತಂದೆಯವರ ಅಣ್ಣನ (ದೊಡ್ಡಪ್ಪ) ಅಸಮರ್ಪಕ ವ್ಯವಹಾರ ನಿರ್ವಹಣೆಯಿಂದಾಗಿ ಅವರ ವ್ಯವಸಾಯ ಕ್ಷೀಣವಾಯಿತು. ಅವರ ಕುಟುಂಬದ ಆರ್ಥಿಕ ಸ್ಥಿತಿಗತಿ ತುಂಬಾ ತೊಂದರೆಗೆ ಸಿಲುಕಿತು. ಅದೇ ಸನ್ನಿವೇಶದಲ್ಲಿ (ಕ್ರಿ.ಶ. ೧೯೧೨) ಶಾಂತವೇರಿ ಗೋಪಾಲಗೌಡ ಅವರ ತಂದೆ ಕೊಲ್ಲೂರಯ್ಯಗೌಡರು ಮತ್ತು ತಾಯಿ ಶೇಷಮ್ಮನವರು ಅವಿಭಕ್ತ ಕುಟುಂಬದಿಂದ ಹೊರಗುಳಿಯಬೇಕಾದ ಸ್ಥಿತಿ ಒದಗಿ ಬಂದಿತು. ಆಸ್ತಿ ಪಾಲಾದ ಮೇಲೂ ಕೊಲ್ಲೂರಯ್ಯಗೌಡರ ದರ್ಬಾರು ಹಿಂದಿನಂತೆಯೇ ನಡೆಯಿತು. ವಿಪರೀತ ಸಾಲ-ಸೋಲ ಮಾಡಿದರು. ಅಲ್ಲಿ-ಇಲ್ಲಿ ಕೈಗಡ ಜಾಸ್ತಿಯಾಯಿತು. ಕೊನೆಗೆ, ಶಿವಮೊಗ್ಗದ ಶ್ರೀಮಂತ ಕುಟುಂಬವಾದ ಶೀರ್ನಾಳ್ಳಿಯವರ ಹತ್ತಿರ ಸಾಲ ಮಾಡಿದರು. ಸಾಲದ ಬಾಕಿಗಾಗಿ ಇಡೀ ಕುಟುಂಬದ ಆಸ್ತಿಯ ಜಪ್ತಿ ಆಯಿತು. ಅವರ ಆಸ್ತಿಯೆಲ್ಲ ಪೂರ್ಣ ಕ್ರಯವಾಯಿತು. ಇದರಿಂದಾಗಿ ಈ ಕುಟುಂಬವು ೧೯೩೨ರ ಹೊತ್ತಿಗೆ 'ಗೇಣಿದಾರ'ರಾಗಿ ಉಳಿದುಕೊಳ್ಳಬೇಕಾಯಿತು. ಜಮೀನಿನಲ್ಲಿ ಉತ್ಪತ್ತಿಗಿಂತ, ಅಧಿಕ ಗೇಣಿ ಮತ್ತು ಖರ್ಚು ಜಾಸ್ತಿಯಾದುದರಿಂದ ಕೊಲ್ಲೂರಯ್ಯಗೌಡರು ಕೃಷಿಯ ಬಗ್ಗೆ ನಿರ್ಲಕ್ಷ್ಯ ಮಾಡಿದರು. ಸ್ವಲ್ಪ ಭಾಗದ ಜಮೀನನ್ನು ತಾವು ಇಟ್ಟುಕೊಂಡು ಉಳಿದ ಜಮೀನನ್ನು ಅವರಿವರಿಗೆ ಕೊಟ್ಟು ಅಂಚೆಪೇದೆಯಾಗಿ ಮುಂದುವರಿದರು. ಈ ನಡುವೆ ಅಮ್ಮ ಶ್ರೀಮಂತ ಪರಂಪರೆಯ ಕುಟುಂಬದವರಾದ್ದರಿಂದ ಅವರ ಆಡಂಬರದ ಅತಿಥಿ ಸತ್ಕಾರ ಮತ್ತು ಮಿತಿ ಇಲ್ಲದ ಖರ್ಚಿನಿಂದಾಗಿ ಇವರ ಕುಟುಂಬ ಬಡತನಕ್ಕೆ ಸಿಲುಕುವಂತಾಯಿತು. ಈ ರೀತಿಯ ಪರಿಸ್ಥಿತಿಯಲ್ಲಿ ಜನಿಸಿದ ಶಾಂತವೇರಿ ಗೋಪಾಲಗೌಡ ಅವರು ಐತಿಹಾಸಿಕ ಆರಗದ ಪ್ರಕೃತಿ ಸೌಂದರ್ಯದ ನಡುವೆ ಸಾಮಾನ್ಯ ಹುಡುಗನಾಗಿ ತಮ್ಮ ಬಾಲ್ಯವನ್ನು ಕಳೆದರು. ಗೌಡರ ಪ್ರಾಥಮಿಕ ವಿದ್ಯಾಭ್ಯಾಸ ತಮ್ಮ ಏಳನೆಯ ವಯಸ್ಸಿನಿಂದ ಆರಗದ ಪ್ರಾಥಮಿಕ ಶಾಲೆಯಲ್ಲಿಯೇ ನಡೆಯಿತು. ತಮ್ಮ ಮಾಧ್ಯಮಿಕ ಶಾಲೆಯ ಶಿಕ್ಷಣ ಆರಗದ ಸಮೀಪದ ಅಗ್ರಹಾರ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಮುಗಿಸಿದರು.

ಆಗಿನಿಂದಲೇ ಅವರಿಗೆ ಓದಿನಲ್ಲಿ ವಿಶೇಷ ಶ್ರದ್ಧೆ, ಇತರ ವಿಷಯಗಳಲ್ಲಿ ಆಸಕ್ತಿ ಇತ್ತು. ಇದರಿಂದಾಗಿ ಶಿಕ್ಷಕರ ಪ್ರೀತಿಯ ಶಿಷ್ಯನಾಗಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ಆದರೆ ಮುಂದಿನ ಶಿಕ್ಷಣಕ್ಕೆ ಮನೆಯ ಆರ್ಥಿಕ ದುಸ್ಥಿತಿ ಅಡ್ಡ ಬಂದಿತು. ಕೊಲ್ಲೂರಯ್ಯಗೌಡರಿಗೆ ಬರುತ್ತಿದ್ದ ಸಂಬಳ ಕೇವಲ ಸಂಸಾರಕ್ಕೆ ಸಾಲದಾಗಿತ್ತು. ಹೀಗಾಗಿ ಶಾಂತವೇರಿಯವರು ಮುಂದಿನ ವಿದ್ಯಾಭ್ಯಾಸದ ಆಸೆಯನ್ನು ಬಿಟ್ಟು ಮನೆಯ ಕೆಲಸದಲ್ಲಿ ತೊಡಗಬೇಕಾಯಿತು. ಈ ವೇಳೆಯಲ್ಲಿ ಜಮೀನಿನ ಕೆಲಸ, ಜಾನುವಾರುಗಳನ್ನು ಕಾಯುವುದು, ದನದ ಕೊಟ್ಟಿಗೆಗೆ ಸೊಪ್ಪು ತರುವಂತಹ ಕಾಯಕವೂ ಅವರ ಹೆಗಲಿಗೆ ಬಿತ್ತು (ಮಲೆನಾಡಿನಲ್ಲಿ ದನಗಳ ಕೊಟ್ಟಿಗೆಯಲ್ಲಿ ಸೊಪ್ಪನ್ನು ಹರಡಿ ಗೊಬ್ಬರ ಮತ್ತು ಗಂಜಲದ ಮಿಶ್ರಣದೊಂದಿಗೆ ತಿಪ್ಪೆಗೆ ಹಾಕಿ ಗೊಬ್ಬರ ಮಾಡುವ ಕ್ರಮ). ಅಷ್ಟೇ ಅಲ್ಲ ಹೆಸರಿಗೆ ತಕ್ಕಂತೆ ಗೋಪಾಲ–ಗೋಪಾಲಕನೂ ಆಗಬೇಕಾಯಿತು. ಈ ವೇಳೆಗಾಗಲೆ ಗೋಪಾಲಗೌಡರ ಸಹೋದರ ಧರ್ಮೇಗೌಡರು ಶಿಕಾರಿಪುರದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರಾಗಿ ಕೆಲಸಕ್ಕೆ ಸೇರಿದ್ದರು. ಶಾಂತವೇರಿ ಗೋಪಾಲಗೌಡ ಅವರಿಗೆ ಓದುವ ಗೀಳು ಕಾಡುತ್ತಿತ್ತು. ಅಣ್ಣನ ಸಹಾಯದಿಂದ ಅವರು ಶಿಕಾರಿಪುರದಲ್ಲಿ ೧೯೪೧ರಲ್ಲಿ ಲೋಯರ್ ಸೆಕೆಂಡರಿ (ಎಲ್.ಎಸ್.) ಪರೀಕ್ಷೆ ಮುಗಿಸಿದರು.

ಶಾಂತವೇರಿ ಗೋಪಾಲಗೌಡ ಅವರ ಮುಂದಿನ ವ್ಯಾಸಂಗಕ್ಕೆ ಪುನಃ ಸಂಕಟ ಒದಗಿತು. ಗೌಡರಿಗೆ ಓದುವ ಗೀಳು, ತಂದೆಗೆ ಓದು ಮುಗಿಸುವ ಯೋಚನೆ. ಆದರೆ ಆ ಹುಡುಗನ ಭವಿಷ್ಯದ ದಿಕ್ಕು ಬೇರೆಯೇ ಆಗಿತ್ತು. ಜೀವನದ ಸುಖ–ಶಾಂತಿ–ನೆಮ್ಮದಿಯನ್ನೆಲ್ಲ ಬಡತನ ಕಮರಿಸುತ್ತಿದ್ದ ಸಂದರ್ಭದಲ್ಲಿ ಗೌಡರ ಬದುಕಿನ ಬಾನಿನಲ್ಲಿ ಚಂದ್ರಮನಂತೆ ಉದಿಸಿದ ಅನಿರೀಕ್ಷಿತ ವ್ಯಕ್ತಿಯೊಬ್ಬ ಅವರ ಸಂಗಾತಿಯಾದರು. ಮುಂದೆ ಅವರಲ್ಲಿ ಧೈರ್ಯ ತುಂಬಿ, ವಿಶ್ವಾಸ ಹುಟ್ಟಿಸಿ, ಸಹಾಯ, ಸಹಕಾರ ನೀಡಿ, ಆಶೀರ್ವದಿಸಿ ಈ ಹುಡುಗನ ವಿದ್ಯಾಭ್ಯಾಸವನ್ನು ನಿಲ್ಲಿಸಬಾರದೆಂದು ಕೊಲ್ಲೂರಯ್ಯಗೌಡರನ್ನು ಒಪ್ಪಿಸಿ, ಅವರ ಜೀವನವಾಹಿನಿಯ ಗತಿಯನ್ನೇ ಬದಲಾಯಿಸಲು ಕಾರಣಕರ್ತರಾದ ಕಾರಣ ಪುರುಷ ಬಸವರಾಜಶಾಸ್ತ್ರಿ.

ಬಯಲು ಸೀಮೆಯ ಕಡೆಯಿಂದ ಬಂದಿದ್ದ ಬಹುಮುಖ ಪ್ರತಿಭೆಯ ವ್ಯಕ್ತಿಯಾಗಿದ್ದರು. ಈ ಮನುಷ್ಯ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ವೇಷ ಮರಿಸಿಕೊಂಡು ಜನರಲ್ಲಿ ದೇಶಭಕ್ತಿಯ ಜಾಗೃತಿಯನ್ನು ಮೂಡಿಸುತ್ತಿದ್ದವರು. ಇವರು ಆಯುರ್ವೇದ ಪಂಡಿತ, ಭವಿಷ್ಯಶಾಸ್ತ್ರ ಪ್ರವೀಣ, ಅಲೆಮಾರಿ, ಭೂಗತ ಚಟುವಟಿಕೆಯಲ್ಲಿ ನಿಸ್ಸೀಮ. ಸಾಹಿತ್ಯದಲ್ಲಿ ಅಭಿರುಚಿ, ಸಂಗೀತದಲ್ಲಿ ಜ್ಞಾನಿಯಾಗಿದ್ದು, 'ತೋಡಿರಾಗ'ವನ್ನು ಹಾಡುತ್ತಿದ್ದರು. ಶಾಂತವೇರಿ ಗೋಪಾಲಗೌಡ ಅವರಿಗೂ ಚಿಕ್ಕಂದಿನಿಂದಲೂ ಕಲೆ, ಸಾಹಿತ್ಯದ ಬಗ್ಗೆ ಹೆಚ್ಚಿನ ಆಸಕ್ತಿ ಇತ್ತು. ದನಕಾಯುವಾಗ ಕೊಳಲು ನುಡಿಸುವುದು, ಹಾಡಿ ನಲಿಯುವುದು, ಯಕ್ಷಗಾನ ನೋಡುವುದು ಇತ್ಯಾದಿಯಾಗಿ ಅವರ ಕಲಾಭಿರುಚಿ ವ್ಯಕ್ತವಾಗುತ್ತಿತ್ತು. ಈ ಸಮಾನ ಅಭಿರುಚಿ ಅವರಿಬ್ಬರನ್ನು ಅನ್ಯೋನ್ಯವಾಗಿ ಬೆಸೆಯಿತು. ಗೌಡರು ನಿಷ್ಠೆಯಿಂದ ಸಂಗೀತ ಜ್ಞಾನವನ್ನು ಸಾಧನೆಯಿಂದ ಪಡೆದರು. ಕುಮಾರವ್ಯಾಸ ಭಾರತ, ಜೈಮಿನಿ ಭಾರತ,

ಹರಿಶ್ಚಂದ್ರಕಾವ್ಯ, ಆಧುನಿಕ ಭಾವಗೀತೆಗಳನ್ನು ಅವರು ಸುಶ್ರಾವ್ಯವಾಗಿ ಹಾಡುತ್ತಿದ್ದರು ಮತ್ತು ಆ ಮೂಲಕ ಹಳ್ಳಿಗರ ಮನಸ್ಸನ್ನು ಸೂರೆಗೊಳ್ಳುತ್ತಿದ್ದರು. ಈ ಸಂಗೀತ-ಸಾಹಿತ್ಯದ ಅಭಿರುಚಿಯೇ ಮುಂದೆ ಅವರು ಕವಿ-ಸಾಹಿತಿ-ಸಂಗೀತ ತಜ್ಞರ ಸ್ನೇಹ ಬೆಳೆಸಲು ಕಾರಣವಾಯಿತು.

ಶಾಂತವೇರಿ ಗೋಪಾಲಗೌಡ ಅವರು ೧೯೪೧ರಲ್ಲಿ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ತೀರ್ಥಹಳ್ಳಿಯಲ್ಲಿನ ಸರಕಾರಿ ಶಾಲೆಯನ್ನು ಸೇರಿದರು. ಅದೃಷ್ಟವೆಂಬಂತೆ ಗೋಪಾಲಗೌಡರಿಗೆ ವಿದ್ಯಾರ್ಥಿವೇತನ ಮಂಜೂರಾಯಿತು. ಇದರಿಂದಾಗಿ ಅವರು ಅಲ್ಲಿನ ಒಕ್ಕಲಿಗರ ವಿದ್ಯಾರ್ಥಿನಿಲಯಕ್ಕೆ ಸೇರಿಕೊಂಡರು. ಈ ಸದಾವಕಾಶವನ್ನು ಅವರು ಸಂಪೂರ್ಣವಾಗಿ ಅಧ್ಯಯನಕ್ಕೆ ಬಳಸಿಕೊಂಡರು. ಅಲ್ಲದೆ ಪಠ್ಯದ ಜೊತೆಗೆ ಇತರ ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡುತ್ತಿದ್ದರು. ಹೀಗಾಗಿ ಅವರಲ್ಲಿ ಓದುವ ಕಲೆ ತಾರುಣ್ಯದಲ್ಲಿಯೇ ಮೊಳಕೆಗೊಂಡು ಚಿಗುರೊಡೆಯಿತು.

ಗೋಪಾಲಗೌಡರ ಹೈಸ್ಕೂಲು ಶಿಕ್ಷಣದ ಸಂದರ್ಭದಲ್ಲಿ ಗೌಡರಿಗೆ ಪ್ರಭಾವ ಬೀರಿದ ಗುರುಗಳೆಂದರೆ ಪಂಡಿತ ಕಮಕೋಡು ನರಸಿಂಹಶಾಸ್ತ್ರಿಗಳು. ಇವರು ಹೆಗ್ಗೋಡಿನ ನೀನಾಸಂ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರಾದ ಕೆ.ವಿ. ಸುಬ್ಬಣ್ಣ ಅವರಿಗೆ ಹೆಣ್ಣು ಕೊಟ್ಟ ಮಾವ. ಗೋಪಾಲಗೌಡರನ್ನು ಕಂಡರೆ ನರಸಿಂಹಶಾಸ್ತ್ರಿಗಳಿಗೆ ಎಲ್ಲಿಲ್ಲದ ವ್ಯಾಮೋಹ, ಪ್ರೀತಿ. ಅದೇ ರೀತಿ ಅಧ್ಯಾಪಕರಾಗಿದ್ದ ಶಾಸ್ತ್ರಿಗಳನ್ನು ಕಂಡರೆ ಗೌಡರಿಗೆ ವಿಶೇಷ ಗೌರವ, ವಿಶ್ವಾಸ. ಗೋಪಾಲಗೌಡರಲ್ಲಿ ಒಳಗೊಳಗೆ ಕುದಿಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಕಿಚ್ಚಿಗೆ ಅಗ್ನಿಸ್ಪರ್ಶ ಮಾಡಿದವರೇ ಇವರು. ಗೋಪಾಲಗೌಡರು ಹೈಸ್ಕೂಲು ಶಿಕ್ಷಣದ ಸಂದರ್ಭದಲ್ಲಿಯೇ ಸಾರ್ವಜನಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಸಮಸ್ಯೆಗಳಿಗೆ ಪರಿಹಾರ ಹುಡುಕುವ ಮನೋಭಾವವನ್ನು ಬೆಳೆಸಿಕೊಂಡಿದ್ದರು. ಸನ್ನಿವೇಶಕ್ಕೆ ತಕ್ಕಂತೆ ಸಮಕಾಲೀನ ವಿದ್ಯಾಮಾನಗಳು, ಸಾಹಿತ್ಯ ಕೃತಿಗಳು, ರಾಷ್ಟ್ರಪ್ರೇಮ, ಅಧ್ಯಾಪಕರ ದೇಶಪ್ರೇಮಿ ಕಿಡಿನುಡಿಗಳು ಇವರಿಗೆ ದೇಶದ ಬಗ್ಗೆ ಗೌರವ ಪ್ರೀತಿ, ಛಲ ಬೆಳೆಯಲು ಕಾರಣವಾಯಿತು. ಅದೇ ಪರಿಸರದಲ್ಲಿ ೧೯೪೩-೪೪ರ ಹೊತ್ತಿಗೆ ಹೈಸ್ಕೂಲ್ ಶಿಕ್ಷಣ ಮುಗಿಸಿದರು.

ಶಾಂತವೇರಿ ಗೋಪಾಲಗೌಡ ಅವರು ೧೯೪೪ರಲ್ಲಿ ಶಿವಮೊಗ್ಗದ ಇಂಟರ್‌ಮೀಡಿಯಟ್ ಕಾಲೇಜಿಗೆ ಪ್ರವೇಶ ಪಡೆದರು. ಹಣದ ಸಮಸ್ಯೆಯ ನಡುವೆಯೂ ಧೈರ್ಯವನ್ನೇ ಊರುಗೋಲು ಮಾಡಿಕೊಂಡು ಮುಂದಿನ ವ್ಯಾಸಂಗಕ್ಕೆ ಪಯಣ ಬೆಳೆಸಿದರು. ಈ ಸಂದರ್ಭದಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ನ್ಯಾಯಾಲಯಕ್ಕೆ ಅಪೀಲು ಮಾಡಿಕೊಂಡಿದ್ದರಿಂದ ಸೆರೆಮನೆಯಿಂದ ಹೊರಬರುತ್ತಾರೆ. ಕಾಲೇಜಿಗೆ ಬರುವ ಮುನ್ನವೇ ಈ ತರುಣ ಗೋಪಾಲಗೌಡ ಅವರ ಹೆಸರು "ಕ್ರಾಂತಿಕಾರಿ ವೀರ"ನೆಂದು ಪ್ರಸಿದ್ಧಿ ಪಡೆದು ಜನರ ನಾಲಿಗೆಯಲ್ಲಿ ಹರಿದಾಡುತ್ತಿತ್ತು.

ಶಾಂತವೇರಿ ಗೋಪಾಲಗೌಡ ಅವರ ಕಾಲೇಜು ಶಿಕ್ಷಣ ಕಷ್ಟದ ನಡುವೆ ನಡೆಯುತ್ತಿದ್ದರೂ ಇವರ ನಿರಂತರವಾದ ಅಭ್ಯಾಸ ಮತ್ತು ಇವರ ಸಹಜ ಪ್ರತಿಭೆಯಿಂದ ವಿಕಾಸಗೊಂಡ ಜ್ಞಾನ

ಕಾಲೇಜಿನ ಉಪನ್ಯಾಸಕರನ್ನು ಚಕಿತಗೊಳಿಸುವಂತಿತ್ತು. ಶಾಂತವೇರಿಯವರ ಪಠ್ಯೇತರ ಚಟುವಟಿಕೆಗಳ ಆಸಕ್ತಿಗೆ ಅಂದಿನ ಶಿವಮೊಗ್ಗ ಪಟ್ಟಣದ ಪರಿಸರವೂ ಪ್ರೇರಕವಾಗಿತ್ತು. ಸ್ವಾತಂತ್ರ್ಯದ ಚಳವಳಿಗೆ ಸಂಬಂಧಿಸಿದ ಬಹುತೇಕ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ ಶಿವಮೊಗ್ಗದ ರಾಜಕೀಯ ಪರಿಸರ ಶಾಂತವೇರಿ ಗೋಪಾಲಗೌಡ ಅವರ ಮೇಲೆ ಅಗಾಧ ಪ್ರಭಾವ ಬೀರಿತ್ತು. ಅವರ ರಾಜಕೀಯ ಬೀಜ ಮೊಳೆತು ಬೆಳೆಯಲು ತಕ್ಕ ಭೂಮಿಕೆ, ವಾತಾವರಣಗಳು ಒದಗಿದವು. ತಮ್ಮ ಅಸಾಧಾರಣ ಮಾತುಗಳಿಂದ ಜನರನ್ನು ಆಕರ್ಷಿಸಿದರು. ಯಾವುದೇ ಕಷ್ಟಗಳಿಗೆ ಅಳುಕದೆ ಆತ್ಮವಿಶ್ವಾಸ ಹೊಂದಿ, ಹೋರಾಟಗಾರನ ಕೆಚ್ಚನ್ನು ಹೆಚ್ಚಿಸಿಕೊಂಡು, ಒಂದು ಯುವಕರ ದಂಡನ್ನೇ ಕಟ್ಟಿಕೊಂಡು ತಮ್ಮ ಮುಂದಿನ ಜೀವನ ವಿಧಾನವನ್ನು ರೂಪಿಸಿಕೊಳ್ಳಲು ಹವಣಿಸಿದರು. ಆದರೆ ಆರ್ಥಿಕ ಸಮಸ್ಯೆಯಿಂದ ಓದನ್ನು ಮೊಟಕುಗೊಳಿಸಿ ಊರಿಗೆ ಹಿಂದಿರುಗಬೇಕಾಯಿತು. ಆಗ ಅವರಿಗೆ ಆರಗದಲ್ಲಿ ವೈದ್ಯರಾದ ಟಿ. ವಿಶ್ವನಾಥರಾವ್ ಅವರ ಪರಿಚಯವಾಯಿತು. ಅವರು ಸಾಹಿತ್ಯ ಯಕ್ಷಗಾನ, ರಾಜಕೀಯ ಮುಂತಾದ ವಿಷಯಗಳಲ್ಲಿ ಅಭಿರುಚಿ, ಆಸಕ್ತಿ ಹೊಂದಿದವರಾಗಿದ್ದರು. ಕಾರ್ಲ್‌ಮಾರ್ಕ್ಸ್, ಟಾಲ್‌ಸ್ಟಾಯ್, ಜಯಪ್ರಕಾಶ್‌ನಾರಾಯಣ ಮುಂತಾದವರ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ನವ ಸಮಾಜದ ಪರಿವರ್ತನೆಗೆ ಮುಂದಾದರು. ಈ ರೀತಿ ಗುಣಗಳುಳ್ಳ ವ್ಯಕ್ತಿಗೆ ಶಾಂತವೇರಿ ಗೋಪಾಲಗೌಡ ಅವರಂಥ ಕ್ರಾಂತಿಕಾರಿ ಯುವಕ ಆಕರ್ಷಿತನಾದದ್ದು ಸೋಜಿಗವಲ್ಲ. ಆ ದಿನಗಳಲ್ಲಿ ಗೋಪಾಲಗೌಡರು ಜೀವನಕ್ಕಾಗಿ ಬೀಡಿ ಕಟ್ಟುತ್ತಿದ್ದರು, ಹೊಲಿಗೆ ಕೆಲಸವನ್ನು ಕಲಿಯುತ್ತಿದ್ದರು. ಇದನ್ನು ಗಮನಿಸಿದ ವಿಶ್ವನಾಥರಾವ್‌ರವರು ಆರಗದ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿ ಗೋಪಾಲಗೌಡರನ್ನು ಸೇರಿಸಿದರು. ಅಂದರೆ ವಿಶ್ವನಾಥರಾವ್ ಸಂಪರ್ಕದಿಂದ ಗೋಪಾಲಗೌಡ ಅವರ ಸಾಹಿತ್ಯ, ರಾಜಕೀಯ ಪ್ರಜ್ಞೆಯ ಪರಿಧಿ ಹಿಗ್ಗಿ ವಿಶಾಲಗೊಂಡಿತು. ಉಪಾಧ್ಯಾಯ ವೃತ್ತಿಯೊಂದಿಗೆ ಸಮಾಜಸೇವಾ ಕಾರ್ಯದಲ್ಲೂ ತಮ್ಮನ್ನು ತೊಡಗಿಸಿಕೊಂಡರು.

ಶಾಂತವೇರಿ ಗೋಪಾಲಗೌಡ ಅವರು ವಯಸ್ಕರ ರಾತ್ರಿ ಶಾಲೆಯನ್ನು ನಡೆಸುವುದು, ಸ್ವ-ಉದ್ಯೋಗ, ಖಾದಿನೂಲು ತೆಗೆಯುವುದು ಮತ್ತು ಸ್ವಾತಂತ್ರ್ಯ ಚಿಂತನೆಯ ಕಡೆ ಹೆಚ್ಚು ಗಮನಹರಿಸಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಅವರ ಸಮಾಜವಾದಿ ವಿಚಾರಕ್ಕೆ ಸಂಬಂಧಪಟ್ಟಂತೆ ರಿಜಿಸ್ಟರ್ ವಿವಾಹದ ಮುಖಾಂತರ ಕೌಟುಂಬಿಕ ಜೀವನಕ್ಕೂ ಪ್ರವೇಶ ಮಾಡಿದರು. ಅಂದರೆ ಕಡಿದಾಳ್ ಮಂಜಪ್ಪನವರ ಸ್ನೇಹಿತರಾದ ಧಾರವಾಡದ ವಕೀಲರ ಮಗಳಾದ ಸೋನಕ್ಕನನ್ನು ೧೯೫೬ರಲ್ಲಿ ಮದುವೆಯಾದರು.

೨.೩ ಶಾಂತವೇರಿ ಗೋಪಾಲಗೌಡ ಅವರ ಚಾರಿತ್ರಿಕ ಸಂದರ್ಭ ಹಾಗೂ ರಾಜಕಾರಣ ಪ್ರವೇಶ

ಶಾಂತವೇರಿ ಗೋಪಾಲಗೌಡ ಅವರು ರಾಜಕೀಯ ಹೋರಾಟಕ್ಕೆ ಪ್ರವೇಶಿಸಲು ಪ್ರೇರಣೆಯಾದ ಅಂಶಗಳೆಂದರೆ, ಇವರ ಬಾಲ್ಯ ಮತ್ತು ಶಿಕ್ಷಣದ ವೇಳೆಯಲ್ಲಿನ ಭಾರತದ ರಾಜಕೀಯ ಸ್ಥಿತಿಗತಿ.

ಈ ಸಂದರ್ಭದಲ್ಲಿ ಭಾರತದ ಎಲ್ಲಾ ಪ್ರಜ್ಞಾವಂತ ಯುವ ಜನತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದರು. ಬ್ರಿಟೀಷರ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ಆಡಳಿತದ ವಿರುದ್ಧ ಸಿಡಿದೆದ್ದ ಕಾಲಾವಧಿ. ಅದು ಮಹಾತ್ಮಗಾಂಧೀಜಿ ನೇತೃತ್ವದಲ್ಲಿ ಹಲವು ಸ್ವಾತಂತ್ರ್ಯ ಪ್ರೇಮಿಗಳು, ನಾಯಕರು ಹೋರಾಟ ನಡೆಸುತ್ತಿದ್ದರು. ಈ ಹೋರಾಟದ ಹಲವು ಘಟನೆಗಳು ಶಾಂತವೇರಿ ಗೋಪಾಲಗೌಡರ ಬಾಲ್ಯ ಜೀವನದ ಮೇಲೆ ಪ್ರಭಾವ ಬೀರಿದವು.

ಗೋಪಾಲಗೌಡರ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಕಾರ್ಲ್‌ಮಾರ್ಕ್ಸ್ ಮತ್ತು ಟಾಲ್‌ಸ್ಟಾಯ್‌ರವರ ತತ್ವಾದರ್ಶಗಳು ಪ್ರಭಾವ ಬೀರಿವೆ. ರಾಮಮನೋಹರ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣರವರಂತಹ ಸಮಾಜವಾದಿ ನಾಯಕರ ಸ್ಫೂರ್ತಿ ಗೌಡರಲ್ಲಿ ಕಾಣಬಹುದಾಗಿದೆ. ಮಹಾತ್ಮಗಾಂಧೀಜಿಯ ಚಿಂತನೆಗಳನ್ನು ಒಪ್ಪಿಕೊಂಡಿದ್ದ ಶಾಂತವೇರಿ ಗೋಪಾಲಗೌಡ ಅವರು ಜನತೆಯ ಪರವಾಗಿ ಹೋರಾಡಲು ಅಹಿಂಸಾತ್ಮಕ ಸಾಧನ ಮಾರ್ಗವನ್ನು ಅನುಸರಿಸಿದರು. ಜಯಪ್ರಕಾಶನಾರಾಯಣ, ಆಚಾರ್ಯ ನರೇಂದ್ರದೇವ, ರಾಮಮನೋಹರ ಲೋಹಿಯಾ ಅವರುಗಳ ಗರಡಿಯಲ್ಲಿ ಪಳಗಿದ್ದ ಸಮಾಜವಾದಿಯಾಗಿದ್ದರು. ಇದರ ಜೊತೆಗೆ ಶಾಂತವೇರಿ ಗೋಪಾಲಗೌಡರ ಸಮಕಾಲೀನರಾಗಿದ್ದ ಜಿ. ಸದಾಶಿವರಾಯ್, ರಾಘವೇಂದ್ರರಾವ್, ಹೆಚ್. ಗಣಪತಿಯಪ್ಪರಂತವರ ಪ್ರಭಾವ, ಸಹಕಾರಗಳು ಅವರ ರಾಜಕೀಯದ ಮುಂದುವರಿಕೆಗೆ ಬಹುಮುಖ್ಯ ಕಾರಣವಾಗಿದ್ದವು.

ಶಾಂತವೇರಿ ಅವರು ಆಳವಾದ ಅಧ್ಯಯನದ ಮೂಲಕ ಪ್ರಬುದ್ಧ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದರು. ಇದಕ್ಕೆ ಪೂರಕವಾದ ವಾತಾವರಣವನ್ನು ಶಿವಮೊಗ್ಗ ಜಿಲ್ಲೆಯ ಪರಿಸರ ಒದಗಿಸಿತ್ತು. ತಮ್ಮ ಅಸಾಧಾರಣ ಮಾತುಗಾರಿಕೆಯಿಂದ ಜನರನ್ನು ಆಕರ್ಷಿಸಿದರು. ಕಷ್ಟನಿಷ್ಟುರಗಳಿಗೆ ಅಳುಕದೆ ಆತ್ಮವಿಶ್ವಾಸ ಹೊಂದಿ, ಹೋರಾಟಗಾರನ ಕೆಚ್ಚನ್ನು ಹೆಚ್ಚಿಸಿಕೊಂಡು, ಒಂದು ತರುಣರ ದಂಡನ್ನೇ ಕಟ್ಟಿಕೊಂಡು ತಮ್ಮ ಮುಂದಿನ ಜೀವನವನ್ನು ರೂಪಿಸಿಕೊಂಡರು.[೨]

೧೯೪೭ರ ಸ್ವಾತಂತ್ರ್ಯ ಚಳವಳಿ ಶಿವಮೊಗ್ಗ ಜಿಲ್ಲೆಯಾದ್ಯಂತ ಉಗ್ರವಾಗಿ ಮತ್ತು ವ್ಯಾಪಕವಾಗಿ ನಡೆಯಿತು. ಈ ಚಳವಳಿಯಲ್ಲಿ ಗೋಪಾಲಗೌಡ ಅವರು ಮುಂಚೂಣಿಯಲ್ಲಿದ್ದು, ಪ್ರಮುಖ ಪಾತ್ರವನ್ನು ವಹಿಸುವುದರ ಮೂಲಕ ಅದರ ಯಶಸ್ಸಿಗೆ ಕಾರಣರಾದರು. ೧೯೪೬ರಲ್ಲಿ ನಂಜನಗೂಡಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಸಮಾವೇಶ ನಡೆಯಿತು. ಅದು "ಕಾಂಗ್ರೆಸ್-ಸೋಷಿಯಲಿಸ್ಟ್"ನ ಒಂದು ಅಂಗವಾಗಿ ಕೆಲಸ ಮಾಡುತ್ತಿತ್ತು. ಗೋಪಾಲಗೌಡ ಅವರು ಆ ಸಮಾವೇಶದಲ್ಲಿ ಸಕ್ರಿಯ ಪಾತ್ರವಹಿಸಿದರು. ೧೯೪೮ರಲ್ಲಿ ನಾಸಿಕ್‌ನಲ್ಲಿ ಜರುಗಿದ್ದ ಸಮಾಜವಾದಿ ಅಧಿವೇಶನದಲ್ಲಿ ಭಾಗವಹಿಸಿ ಕಾಂಗ್ರೆಸ್ಸಿನಿಂದ ಪ್ರತ್ಯೇಕವಾದ ಸಮಾಜವಾದಿ ಪಕ್ಷ ಕಟ್ಟಲು ಪ್ರೋತ್ಸಾಹಿಸಿದರಲ್ಲದೆ ಅದರ ಅಗತ್ಯತೆಯನ್ನು ಕುರಿತು ಅಧಿವೇಶನದ ಗಮನ ಸೆಳೆದರು. ಒಟ್ಟಿನಲ್ಲಿ ಸಮಾಜವಾದಿ ಪಕ್ಷದ ಸ್ಥಾಪನೆ ಶಾಂತವೇರಿ ಗೋಪಾಲಗೌಡ ಅವರ ರಾಜಕೀಯ ನಾಯಕತ್ವಕ್ಕೆ ಅಧಿಕೃತ ವೇದಿಕೆಯಾಯಿತು.

೧೯೫೧ರಲ್ಲಿ ಕಾಗೋಡು ಸತ್ಯಾಗ್ರಹ ನಡೆಯಿತು. ಕರ್ನಾಟಕದ ಚರಿತ್ರೆಯಲ್ಲಿ ಅದೊಂದು ಮಹತ್ವದ ಘಟನೆಯಾಗಿದ್ದು, ಗೋಪಾಲಗೌಡ ಅವರ ರಾಜಕೀಯ ಪ್ರವೇಶದ ಮಹತ್ತರ ಘಟ್ಟವೂ ಆಗಿದೆ. ಅವರೇ ಹೇಳಿರುವಂತೆ ಈ ಹೋರಾಟ ಅವರ ಜೀವನದಲ್ಲಿ ಮರೆಯಲಾರದ ವಿಶಿಷ್ಟ ಘಟನೆಯಾಗಿದೆ.

ಅಂದರೆ ಕಾಗೋಡು ಸತ್ಯಾಗ್ರಹ ಗೋಪಾಲಗೌಡ ಅವರನ್ನು ಮಲೆನಾಡಿನ ಭಾಗದ ಪ್ರಶ್ನಾತೀತ ರಾಜಕೀಯ ನಾಯಕರನ್ನಾಗಿ ರೂಪಿಸಿತು. ಅಲ್ಲದೆ ಶಾಂತವೇರಿ ಗೋಪಾಲಗೌಡ ಅವರ ಸಮಾಜವಾದಿ ಪಕ್ಷ ಪ್ರಬಲ ರಾಜಕೀಯ ಪಕ್ಷವಾಗಿ ಹೊರಹೊಮ್ಮಿತು. ಜೊತೆಗೆ ಸ್ಥಳೀಯ ಸ್ನೇಹಿತರು, ಸಮಾಜವಾದಿ ಚಿಂತನೆ ಮತ್ತು ಹೋರಾಟಗಳಿಗೆ ಸ್ಪಂದಿಸುವವರು, ಸದಾ ಪ್ರೋತ್ಸಾಹಿಸಿ ಸಹಕರಿಸಿದ ಜಿ. ಸದಾಶಿವರಾಯರು, ವೈ.ಆರ್. ಪರಮೇಶ್ವರಪ್ಪ, ಎಂ.ಪಿ. ಈಶ್ವರಪ್ಪ, ಎಂ.ಸಿ. ಮಹೇಶ್ವರಪ್ಪ, ಡಿ. ಪರಮೇಶ್ವರಪ್ಪ, ಎಸ್.ಕೆ. ಸೀತಾರಾಮ್ ಅಯ್ಯಂಗಾರ್, ಶಾಮ ಐತಾಳ್, ಗುರುಮೂರ್ತಿ, ಬಸವಾನಿ ರಾಮಶರ್ಮ, ಟಿ. ವಿಶ್ವನಾಥರಾವ್ ಇಂತಹ ಮುಖಂಡರುಗಳು ಗೋಪಾಲಗೌಡ ಅವರ ರಾಜಕೀಯ ಪ್ರವೇಶ ಮತ್ತು ಹೋರಾಟಗಳಿಗೆ ಸದಾ ಪ್ರೇರಕ ಶಕ್ತಿಗಳಾಗಿದ್ದರು.

ಕಾಗೋಡು ಸತ್ಯಾಗ್ರಹದ ಜಾಗೃತಿಯ ಫಲವಾಗಿ ಅಂದಿನ ಹೊಸನಗರ-ಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದಿಂದ ಶಾಸನ ಸಭೆಗೆ ಸ್ಪರ್ಧಿಸಿದ್ದ ಶಾಂತವೇರಿ ಗೋಪಾಲಗೌಡ ಅವರು ಚುನಾವಣೆಯನ್ನು ಎದುರಿಸಿ, ಸೋಲಿಸಿದ್ದು ಕಾಂಗ್ರೆಸ್ಸಿನ ಶ್ರೀಮಂತ ಹಾಗೂ ಜನಾನುರಾಗಿ ಅಭ್ಯರ್ಥಿ ಬದರಿನಾರಾಯಣರನ್ನು. ಈ ಗೆಲವು ಗೋಪಾಲಗೌಡ ಅವರ ಅದುವರೆಗಿನ ಹೋರಾಟ-ದುಡಿಮೆಗೂ, ಮುಂದಿನ ಸಾಧನೆ-ಸಿದ್ಧಿಗಳಿಗೂ ಸುವರ್ಣಾವಕಾಶ ಒದಗಿಸಿತು.

೨.೪ ಶಾಂತವೇರಿ ಗೋಪಾಲಗೌಡ ಅವರ ಚಳವಳಿಗಳ ವಿಭಿನ್ನ ಘಟ್ಟಗಳು

ಶಾಂತವೇರಿ ಗೋಪಾಲಗೌಡ ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಚಳವಳಿ, ಸತ್ಯಾಗ್ರಹ, ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯ ಮೂಲಕ ತೀರ್ಥಹಳ್ಳಿ ಸರ್ಕಾರಿ ಪ್ರೌಢಶಾಲೆಯ ಕನ್ನಡ ಪಂಡಿತರಾಗಿದ್ದ ಕಮಕೋಡು ನರಸಿಂಹಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾಗಿದ್ದರು. ಕುಮಾರವ್ಯಾಸ, ಜೈಮಿನಿ ಭಾರತ ವಾಚನ, ಕುವೆಂಪು, ಬೇಂದ್ರೆ ಕವನಗಳ ಭಾವಪೂರ್ಣ ಹಾಡುಗಾರಿಕೆ, ಯಕ್ಷಗಾನ ಅಭಿರುಚಿಯ ಈ ಶಿಷ್ಯನ ಬಗ್ಗೆ ಗುರುವಿಗೂ ಆಸಕ್ತಿ. ನರಸಿಂಹಶಾಸ್ತ್ರಿಗಳೇ ಸ್ವಾತಂತ್ರ್ಯದ ಕೆಚ್ಚನ್ನು ತುಂಬಿದವರು. ೧೯೪೨ರಲ್ಲಿ ಸ್ನೇಹಿತರ ಜೊತೆಗೆ ಪೋಸ್ಟ್ ಡಬ್ಬ ಕೀಳುವುದು, ತೀರ್ಥಹಳ್ಳಿ-ಕೊಪ್ಪ ರಸ್ತೆಯ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದರ ಮುಖಾಂತರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. ಪರಿಣಾಮವಾಗಿ ಸಾಧಾರಣ ಖೈದಿಯಾಗಿ ಸೆರೆಮನೆ ವಾಸ ಅನುಭವಿಸಿದರು. ಈ ರೀತಿ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಕ್ರೂರಮುಖದ ಪರಿಚಯ ಯುವಕ ಶಾಂತವೇರಿ ಗೋಪಾಲಗೌಡ ಅವರಿಗಾಯಿತು. ಜೈಲಿನಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಭಾಷ್ಯಂ, ಮರಿಯಪ್ಪ, ಹೆಚ್. ಸಿದ್ಧಯ್ಯ ಮುಂತಾದವರ

ಸಂಪರ್ಕವಾಯಿತು. ಜೈಲಿನಲ್ಲಿ ಇರುವಾಗ, ಜವಹರ್‌ಲಾಲ್ ನೆಹರೂರವರ 'ಡಿಸ್ಕವರಿ ಆಫ್ ಇಂಡಿಯಾ'ದಿಂದ ಹಿಡಿದು ಮೀನುಮಸಾನಿಯವರ 'ಸೋಶಿಯಲಿಸಂ ರೀಕನ್ಸಿಡರ್ಡ್'ವರೆಗೂ ಮಾರ್ಕ್ಸ್‌ವಾದ, ಗಾಂಧೀವಾದದಿಂದ ಹಿಡಿದು ಟ್ರಾಟ್ಸ್ಕಿ ಸಿದ್ಧಾಂತಗಳವರೆಗೂ ಪರಿಚಯವಾಯಿತು. ಈ ರೀತಿ ಗೋಪಾಲಗೌಡ ಅವರ ವ್ಯಕ್ತಿತ್ವ ರೂಪಿಸಲು ಸೆರೆಮನೆ ವಾಸ ಒಂದು ಸಾಧನವಾಯಿತು.

ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಸಮಾಜ ಸೇವೆ ಸಹ ಗೋಪಾಲಗೌಡರ ಗುರಿಯಾಗಿತ್ತು. ಸಮಾಜಕ್ಕೆ ಅಂಟಿಕೊಂಡಿರುವ ಕೆಲವು ಕಳಂಕಗಳನ್ನು ತೊಡೆದು ಹಾಕದೆ, ಸ್ವಾತಂತ್ರ್ಯ ಅರ್ಥಪೂರ್ಣವಾಗಲಾರದು ಎಂದು ನಂಬಿದ್ದ ಗೋಪಾಲಗೌಡ ಅವರು ಶಿವಮೊಗ್ಗದಲ್ಲಿ ಹರಿಜನರೊಡನೆ ಸೇರಿಕೊಂಡು ದೇವಾಲಯ ಪ್ರವೇಶಿಸಲು ಪ್ರಯತ್ನಿಸಿದರು. ತೀರ್ಥಹಳ್ಳಿಯ ಆರಗದ ವಿರಕ್ತಮಠದಲ್ಲಿ ಹರಿಜನರಿಗಾಗಿ ರಾತ್ರಿ ಶಾಲೆಗಳನ್ನು ತೆರೆದರು. ೧೯೪೬ರಲ್ಲಿ ನಂಜನಗೂಡಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಾವೇಶ ಜರುಗಿತು. ಇದರ ಮುಂದಾಳುವಾಗಿ ಗೋಪಾಲಗೌಡರು ಕೆಲಸ ಮಾಡಿದರು. ೧೯೪೭ರಲ್ಲಿ ಶಾಂತವೇರಿ ಗೋಪಾಲಗೌಡ ಅವರು ಶಿವಮೊಗ್ಗದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಾವೇಶವನ್ನು ಸಂಘಟಿಸಿ, ಅದರಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಸಮಾವೇಶದಲ್ಲಿ ಜಯಪ್ರಕಾಶ್ ನಾರಾಯಣ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದವರು ಭಾಗವಹಿಸಿದ್ದರು.

ನಂತರ 'ಮೈಸೂರು ಚಲೋ' ಚಳವಳಿಯಲ್ಲಿ ಭಾಗವಹಿಸಿ ಮೈಸೂರು ರಾಜ್ಯದಲ್ಲಿನ ಜವಾಬ್ದಾರಿ ಸರ್ಕಾರ ರಚನೆಗೆ ಹೋರಾಡಿದರು. ಈ ಸಂಬಂಧ ಕೆಲವು ತಿಂಗಳು ಜೈಲಿನಲ್ಲಿದ್ದರು. ೧೯೫೧ರಲ್ಲಿ ಜರುಗಿದ 'ಕಾಗೋಡು ಸತ್ಯಾಗ್ರಹ', ಸ್ವಾತಂತ್ರ್ಯ ಭಾರತದ ಒಂದು ಚಾರಿತ್ರಿಕ ಘಟನೆಯಾಗಿದ್ದು, ಶಾಂತವೇರಿ ಗೋಪಾಲಗೌಡ ಅವರ ರಾಜಕೀಯ ಪ್ರವೇಶದ ಮಹತ್ತರ ಘಟ್ಟವೂ ಆಗಿದೆ. ಅವರೆ ಹೇಳಿರುವಂತೆ ಈ ಹೋರಾಟ ಅವರ ಜೀವನದಲ್ಲಿ ಮರೆಯಲಾರದ ವಿಶಿಷ್ಟ ಘಟನೆ.

ಅವರೇ ಸ್ಮರಿಸಿಕೊಳ್ಳುವಂತೆ ಕಾಗೋಡು! ನೆನದೊಡನೆ ನಾನು ಅಲ್ಲಿ, ಆ ಪರಿಸರದಲ್ಲಿ, ಆ ಕಾಲದಲ್ಲಿ, ಹಿಂದಕ್ಕೆ ಮತ್ತೆ ಹೋಗಿ ಬದುಕುವುದು ಅಸಾಧ್ಯ. ನನ್ನ ಪ್ರಜ್ಞೆಯಲ್ಲಿ ಜಾಗೃತವಾಗಿರುವ ಒಂದು ಮಹಾಘಟನೆ 'ಕಾಗೋಡು ಹೋರಾಟ.' ನಾನು ಈಗ ಹೀಗೆ ಆಗಿದ್ದರೆ, ಹಾಗೆ ಆಗುವಲ್ಲಿ ಕಾಗೋಡಿನ ಕೈವಾಡ ಬಹಳವಿದೆ. ನನ್ನ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದಿರುವ, ದಿನ ಕಳೆದಂತೆ ಹೆಚ್ಚು ಹೆಚ್ಚು ಹಸಿರಾಗಿ ನಳನಳಿಸುತ್ತಿರುವ ಒಂದು ಪ್ರಸಂಗ ಕಾಗೋಡು. ಅದು ಒಂದು ಆಳವಾದ ಅನುಭವ. ಅಂತೆಯೇ ಅದು ನನ್ನ ಸ್ಮರಣೆಯಲ್ಲಿ ಚಿರವಾಗಿದೆ[3] ಎನ್ನುತ್ತಾರೆ ಗೌಡರು.

ಅಂದರೆ ಇಂತಹ ಘಟನೆ ಇವರನ್ನು ಮಲೆನಾಡಿನ ಭಾಗದಲ್ಲಿನ ಪ್ರಶ್ನಾತೀತ ರಾಜಕೀಯ ಧುರೀಣರನ್ನಾಗಿ ರೂಪಿಸಿತು. ೧೯೫೧ರಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದಲ್ಲಿ ಗೇಣಿದಾರರ ಸಮಸ್ಯೆಗೆ ಸ್ಪಂದಿಸಿ, ಸಮಾಜವಾದಿ ಪಕ್ಷದ ಮುಖಾಂತರ ಹೋರಾಟ ನಡೆಸಿ ಬಂಧನಕ್ಕೊಳಗಾದರು. ಈ ಹೋರಾಟದಲ್ಲಿ ರಾಮಮನೋಹರ ಲೋಹಿಯಾ,

ಜಯಪ್ರಕಾಶನಾರಾಯಣ, ರಮಾನಂದಮಿಶ್ರ, ಜಾರ್ಜ್‌ಫರ್ನಾಂಡೀಸ್ ಮೊದಲಾದವರು ಭಾಗವಹಿಸಿ ಬಂಧನಕ್ಕೊಳಗಾದರು. ಇದರಿಂದಾಗಿ ಶಾಂತವೇರಿ ಗೋಪಾಲಗೌಡ ಅವರ ಹೆಸರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಚಲಿತವಾಗಲು ಸಹಕಾರಿಯಾಯಿತು.

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ದೇಶೀಯ ಸಂಸ್ಥಾನಗಳು ಆಯಾ ರಾಜ್ಯ ಸರ್ಕಾರದೊಂದಿಗೆ ವಿಲೀನಗೊಂಡವು. ಈ ರೀತಿ ವಿಲೀನಗೊಂಡ ನಂತರ ಪರಿಹಾರ ರೂಪದಲ್ಲಿ ರಾಜ ಮಹಾರಾಜರಿಗೆ ಮಾಶಾಸನವನ್ನು ರಾಜಧನವಾಗಿ (ಪ್ರೀವಿಪರ್ಸ್) ೨೪ ಲಕ್ಷ ರೂಪಾಯಿಗಳನ್ನು ನೀಡಬೇಕಾಗಿತ್ತು. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರೇ, ರಾಜಮಹಾರಾಜರಲ್ಲಿದ್ದುದು ಪ್ರಜೆಗಳ ಸಂಪತ್ತೇ ಹೊರತು, ರಾಜರುಗಳು ಗಳಿಸಿದ ಪಿತ್ರಾರ್ಜಿತ ಸಂಪತ್ತು ಅಲ್ಲ. ಇದನ್ನು ನಿಲ್ಲಿಸಬೇಕು. ಇದು ದೇಶದ ಪ್ರಗತಿಯ ದೃಷ್ಟಿಯಿಂದ ಒಳ್ಳೆಯದು ಎಂದು ಇದರ ರದ್ಧತಿಗಾಗಿ ಹೋರಾಡಿ ಯಶಸ್ವಿಯೂ ಆದರು.

ಶಾಂತವೇರಿ ಗೋಪಾಲಗೌಡರ ಇನ್ನೊಂದು ಪ್ರಯತ್ನವೇ ಇದು. ಆಡಂಬರದ ಮೈಸೂರು ದಸರಾದಲ್ಲಿ ಮಹಾರಾಜರನ್ನು ವೈಭವೀಕರಿಸುವ ಜಂಬೂಸವಾರಿಯನ್ನು ರದ್ದುಗೊಳಿಸಬೇಕು, ಇಲ್ಲದಿದ್ದರೆ ಊಳಿಗಮಾನ್ಯ ಪದ್ಧತಿ ಮುಂದುವರಿದಂತಾಗುತ್ತದೆ. ಇದನ್ನು ಕೈಬಿಡಬೇಕೆಂದು ಕಪ್ಪುಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಪ್ರಜಾಪ್ರಭುತ್ವದಲ್ಲಿ ರಾಜಭವನಗಳು ಆಧುನಿಕ ಮಹಾರಾಜರುಗಳನ್ನು ಮತ್ತು ಅರಮನೆಗಳನ್ನು ಸೃಷ್ಟಿಸುತ್ತವೆ ಎಂದು, (೧೯೫೨ರಲ್ಲಿಯೇ) ಅದರ ಖರ್ಚು ಸುಮಾರು ೦೩ ಲಕ್ಷ ಬರುತ್ತಿದ್ದುದನ್ನು ವಿರೋಧಿಸಿ ಹೋರಾಟ ನಡೆಸಿದರು.

'ಉಳುವವನೇ ಹೊಲದೊಡೆಯ' ಎಂಬ ತತ್ವವನ್ನಾಧರಿಸಿ ಭೂಸುಧಾರಣೆ ಕಾಯಿದೆಯನ್ನು ಜಾರಿಗೊಳಿಸುವಲ್ಲಿ ಶಾಂತವೇರಿ ಗೋಪಾಲಗೌಡ ಅವರ ಪ್ರಯತ್ನ ಮತ್ತು ಪ್ರಭಾವ ವಿಶೇಷವಾಗಿತ್ತು. ಇವರು ಒಂದು ವ್ಯವಸ್ಥಿತವಾದ ಮತ್ತು ಗೇಣಿ ರೈತರ ಪರವಾದ ಕಾಯಿದೆ ಜಾರಿಗೆಯಾಗುವಂತೆ ಪ್ರಯತ್ನಿಸಿದರು. ಒಂದು ಕುಟುಂಬಕ್ಕೆ ಅಗತ್ಯವಿರುವ ಭೂಮಿಯನ್ನಷ್ಟೇ ಉಳಿಸಿ ಉಳಿದದ್ದನ್ನು ಸರ್ಕಾರ ವಶಪಡಿಸಿಕೊಂಡು ಭೂಹೀನರಿಗೆ ಹಂಚಿಕೆ ಮಾಡುವಂತಹ ಭೂಸುಧಾರಣಾ ಕಾಯಿದೆ ಜಾರಿಗೆ ತರಬೇಕು. ಅಲ್ಲದೆ ಯಾರು ಕೇವಲ (ಗೇಣಿ) ಇನಾಂತಿಯಿಂದಲೇ ಜೀವನ ಮಾಡಿಕೊಂಡಿದ್ದಾರೋ, ಯಾರು ಈ ಇನಾಂತಿ ರದ್ದಾಗುವುದರಿಂದ ಜೀವನಕ್ಕೆ ಆಸ್ಪದವಿಲ್ಲದ ಸ್ಥಿತಿ ತಲುಪುತ್ತಾರೋ ಅಂತಹವರಿಗೆ ಮಾತ್ರ ಪರಿಹಾರ ನೀಡಬೇಕು. ಈ ಪರಿಹಾರವನ್ನು ಸಾರ್ವತ್ರಿಕವಾಗಿ ನೀಡಿದರೆ ಅದು ಸರ್ಕಾರಕ್ಕೆ ತುಂಬಲಾರದ ಹೊರೆಯಾಗುತ್ತದೆ. ಆದ್ದರಿಂದ ಇದಕ್ಕಾಗಿ ಕಾಯ್ದೆ ತರಬೇಕೆಂದು ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಿದರು.

ಕ್ರಿ.ಶ. ೧೯೭೨ರಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಸರ್ಕಾರಿ ಬಂಜರು ಭೂಮಿಯನ್ನು ವಶಪಡಿಸಿಕೊಂಡು ಭೂಮಿ ಇಲ್ಲದ ಜನತೆಗೆ ಸಾಗುವಳಿ ಮಾಡಲು ಕೊಡುವ ಚಳವಳಿಯನ್ನು ಪ್ರಾರಂಭಿಸಿದರು.

ಗೋಪಾಲಗೌಡರ ಇಂತಹ ಪ್ರಯತ್ನ ಭೂದಾನಯಜ್ಞ ಚಳವಳಿಯ ಮತ್ತೊಂದು ರೂಪವಾಗಿ ಸಮಾಜವಾದಿ ನೆಲೆಯಲ್ಲಿ ಕಾಣುತ್ತದೆ.

ಪ್ರಾಥಮಿಕ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು ಎಂಬುದು ಶಾಂತವೇರಿ ಗೋಪಾಲಗೌಡರ ಅಭಿಪ್ರಾಯವಾಗಿತ್ತು. ಭಾರತವನ್ನು ಭವ್ಯ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಬೇಕೆಂದರೆ, ಅದಕ್ಕೆ ಪ್ರಾಥಮಿಕ ಶಿಕ್ಷಣವೇ ಅಡಿಪಾಯ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ, ಈಗಾಗಲೇ ನಮಗೆ ಗೊತ್ತಿರುವಂತೆ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ನ್ಯೂನ್ಯತೆಗಳಿವೆ. ಇವುಗಳನ್ನು ಪರಿವರ್ತನೆ ಮಾಡಬೇಕು. ಹಳ್ಳಿ ಜನರಿಂದ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡಿಕೊಂಡಾಗ್ಯೂ ಅವರಿಗೆ ನ್ಯಾಯವಾದ ರೀತಿಯಲ್ಲಿ ಅಗತ್ಯವಾಗಿ ತಾವು ಕೊಡಬೇಕಾದ ಪ್ರಾಥಮಿಕ ಶಿಕ್ಷಣವನ್ನೇ ಒಂದು ಕ್ರಮದಲ್ಲಿ ಅವರಿಗೆ ದೊರೆಯುವಂತೆ ಮಾಡಿಲ್ಲ. ಆದ್ದರಿಂದ ಇದಕ್ಕಾಗಿ ಒಂದು ಕ್ರಮವಾದ ಯೋಜನೆಯನ್ನೇ ತಯಾರಿಸಬೇಕು ಎಂದು ಯೋಚಿಸಿದರು. ಶ್ರೇಷ್ಠ ಶಿಕ್ಷಕರನ್ನು ಕೆಲಸಕ್ಕೆ ನೇಮಿಸಿಕೊಂಡು ಅವರಿಗೆ ಗೌರವಯುತ ಸಂಬಳ ನೀಡಬೇಕು.[೪] ಶಿಕ್ಷಕರ ಗುಣಮಟ್ಟ ಉತ್ತಮವಾಗಿರದೆ ಶಿಕ್ಷಣದ ಗುಣಮಟ್ಟ ಉತ್ತಮವಾಗಿರಲು ಸಾಧ್ಯವಿಲ್ಲವೆಂಬ ಗೌಡರ ಮಾತು ಇವತ್ತೂ ಕೂಡ ಅನ್ವಯವಾಗುವ ಮಾತಾಗಿದೆ.

ಶಾಂತವೇರಿ ಗೋಪಾಲಗೌಡ ಶಾಸಕರಾಗಿ ಹೋರಾಟ ನಡೆಸಿದ ಇನ್ನೊಂದು ಪ್ರಮುಖ ಪ್ರಯತ್ನವೆಂದರೆ ವಿಧಾನಪರಿಷತ್ತಿನ ರದ್ದತಿ. ವಿಧಾನಪರಿಷತ್ತಿಗೆ ಸ್ವತಂತ್ರವಾಗಿ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವಿರುವುದಿಲ್ಲ ಹಾಗೂ ಆರ್ಥಿಕ ವಿಚಾರಗಳಲ್ಲಿಯೂ ತೀರ್ಮಾನ ಕೈಗೊಳ್ಳುವ ಅಧಿಕಾರವಿರುವುದಿಲ್ಲ. ಈ ರೀತಿ ಇರುವಾಗ ವಿಧಾನಪರಿಷತ್ತನ್ನು ಸುಮ್ಮನೆ ಕಾಪಾಡಿಕೊಂಡು ಬರುವುದು ಬಿಳಿ ಆನೆ ಸಾಕಿದಂತೆ. ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆ ಬೀಳುತ್ತದೆ. ಹಾಗಾಗಿ ವಿಧಾನಪರಿಷತ್ತನ್ನು ರದ್ದುಗೊಳಿಸುವುದು ರಾಜ್ಯದ ಹಿತದೃಷ್ಟಿಯಿಂದ ಒಳಿತು ಎಂದು ಶಾಸನ ಸಭೆಯಲ್ಲಿ ಹೋರಾಟ ನಡೆಸಿದ್ದರು. ಆದರೆ ಇವರ ಜೊತೆ ಹೆಚ್ಚಿನ ಸದಸ್ಯರು ಕೈಜೋಡಿಸಲಿಲ್ಲ. ಅದೇನೇ ಇರಲಿ ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ತಮ್ಮ ಸ್ವತಂತ್ರ ಚಿಂತನೆಗಳ ಮುಖಾಂತರ ಸರ್ಕಾರಕ್ಕೆ ಸಲಹೆ ಮಾರ್ಗದರ್ಶನ ನೀಡುವಂತಹ ಜ್ಞಾನವನ್ನು ಬೆಳೆಸಿಕೊಂಡಿದ್ದು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ವಿವಿಧ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕದ ಪ್ರದೇಶವನ್ನು ಒಂದುಗೂಡಿಸಿ ಮೈಸೂರು ಸಂಸ್ಥಾನದೊಂದಿಗೆ ವಿಲೀನಗೊಳಿಸಿ, ವಿಶಾಲ ಕರ್ನಾಟಕ ನಿರ್ಮಾಣ ಮಾಡಬೇಕೆಂಬ ಕನಸು ಶಾಂತವೇರಿ ಗೋಪಾಲಗೌಡರಿಗಿತ್ತು. ಹೀಗಾಗಿ ೧೯೫೫ರ ಜೂನ್‌ನಲ್ಲಿ ವಿಧಾನಸಭೆಯಲ್ಲಿ ಕರ್ನಾಟಕ ರಾಜ್ಯ ನಿರ್ಮಾಣದ ವಿಷಯ ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಶಾಂತವೇರಿ ಗೋಪಾಲಗೌಡ ಅವರು ತಮ್ಮ ಭಾಷಣದಲ್ಲಿ ಸಮಗ್ರ ಏಕೀಕೃತ ಕರ್ನಾಟಕದ ನಿರ್ಮಾಣ ನಮ್ಮೆಲ್ಲರ ಗುರಿ, ಉದ್ದೇಶ ಆಗಿರಬೇಕು. ಅದಕ್ಕಾಗಿ ಕೆಲವು ತ್ಯಾಗಕ್ಕೂ ಸಿದ್ಧರಿರಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಹಳೇ ಮೈಸೂರಿನ ಪ್ರಾಂತ್ಯದ ಹಲವಾರು ಕಾಂಗ್ರೆಸ್

ನಾಯಕರ ವಿರೋಧವಿತ್ತು. ಸ್ಥಳೀಯರ ವಿರೋಧ ಕಟ್ಟಿಕೊಂಡು ಕರ್ನಾಟಕ ಏಕೀಕರಣ ಚಳವಳಿ ನಡೆಸಿದರು. ಕನ್ನಡ ಆಡಳಿತದಲ್ಲಿ ಮಾತ್ರವಲ್ಲ, ಶೈಕ್ಷಣಿಕವಾಗಿ, ಶಿಕ್ಷಣ ಮಾಧ್ಯಮವಾಗಿ, ನ್ಯಾಯಾಲಯಗಳಲ್ಲಿ ಪ್ರಧಾನ ಭಾಷೆಯಾಗಬೇಕೆಂದು ಗೌಡರು ನಿಲುವು ತಾಳಿದ್ದರು. ಈ ವಿಚಾರವನ್ನು ಆಗಾಗ್ಗೆ ಸದನದ ಒಳಗೆ ಮತ್ತು ಹೊರಗೆ ಪ್ರತಿಪಾದಿಸುತ್ತಾ ಬಂದರು.

ಗೋಪಾಲಗೌಡರ ಪತ್ರ ವ್ಯವಹಾರ, ಸದನದಲ್ಲಿನ ಸಂವಾದ, ಬರವಣಿಗೆ, ಭಾಷಣ ಮೊದಲಾದವುಗಳನ್ನೆಲ್ಲ ಗಮನಿಸಿದಾಗ ಕನ್ನಡ ಭಾಷೆಯೇ ಪ್ರಧಾನವಾಗಿ ಕಂಡುಬರುವುದರಿಂದ ಅವರು ಅಪ್ಪಟ ಕನ್ನಡವಾದಿಯಾಗಿದ್ದರು. ಇದರಿಂದ ಕನ್ನಡದ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ ಒಬ್ಬ ಸಾಂಸ್ಕೃತಿಕ ನಾಯಕರಾಗಿದ್ದರು ಎಂಬುದು ವೇದ್ಯವಾಗುತ್ತದೆ.

೨.೫. ಶಾಂತವೇರಿ ಗೋಪಾಲಗೌಡರು ಮತ್ತು ಸ್ಥಳೀಯ ಸಮಸ್ಯೆಗಳು ಹಾಗೂ ಸಾಮಾಜಿಕ ಸಮಸ್ಯೆಗಳ ಮುಖಾಮುಖಿ

ಭಾರತದ ಸಮಾಜವಾದಿ ರಾಜಕಾರಣದ ಮೂಲ ದೃಷ್ಟಿಕೋನ ಸಮಾಜದಲ್ಲಿ ಸಮಾನತೆ ತರುವುದಾಗಿತ್ತು. ಶೋಷಣೆಗೆ ಒಳಪಟ್ಟ ವರ್ಗಗಳನ್ನು ಮೇಲ್ಮಟ್ಟಕ್ಕೆ ತರುವ, ದೀನದಲಿತರಿಗೆ ಸಾಮಾಜಿಕ ನ್ಯಾಯ ಒದಗಿಸುವ, ರೈತರು ಮತ್ತು ಶ್ರಮಿಕರಿಗೆ ಅನ್ಯಾಯವಾಗದಂತೆ ಸಮಸಮಾಜವನ್ನು ರೂಪಿಸುವುದು ಭಾರತೀಯ ಸಮಾಜವಾದಿ ರಾಜಕಾರಣದ ಒಂದು ತಾತ್ವಿಕ ಹಿನ್ನೆಲೆಯಾಗಿದೆ. ಈ ಎಲ್ಲಾ ನೀತಿಗಳನ್ನು ಯಥಾವತ್ತಾಗಿ ಕಾರ್ಯರೂಪಕ್ಕೆ ತರುವುದು ಭಾರತದಂಥ ಜಾತಿವ್ಯವಸ್ಥೆ ಇರುವ ದೇಶದಲ್ಲಿ ಬಹಳ ಕಷ್ಟ, ಆದಾಗ್ಯೂ ಸೈದ್ಧಾಂತಿಕ ಬದ್ಧತೆಯ ಮೇಲೆ ತಾತ್ವಿಕ ದೃಷ್ಟಿಕೋನವನ್ನು ತುಲನೆ ಮಾಡಿ ನೋಡಿದರೆ ಅದು ಕಷ್ಟ ಸಾಧ್ಯವಾಗಲಾರದು ಎಂಬುದು ಹಲವು ಸಮಾಜವಾದಿ ಚಿಂತಕರ ಅಭಿಪ್ರಾಯ.

ರಾಷ್ಟ್ರಮಟ್ಟದಲ್ಲಿ ಸಮಾಜವಾದಿ ರಾಜಕಾರಣಕ್ಕೆ ಅಧಿಕಾರ ಮುಖ್ಯವಾದರೆ, ಕರ್ನಾಟಕದ ಮಟ್ಟದಲ್ಲಿ 'ಭೂಮಿ' ಮುಖ್ಯವಾಗಿತ್ತು. ರಾಮಮನೋಹರ ಲೋಹಿಯಾ ಪ್ರತಿಪಾದಿಸಿದ ಸಮಾಜವಾದಿ ಸಿದ್ಧಾಂತವನ್ನು ಕರ್ನಾಟಕದಲ್ಲಿ ಶಾಂತವೇರಿ ಗೋಪಾಲಗೌಡರ ಕಾಲಘಟ್ಟದಲ್ಲಿ ಪ್ರಚುರಗೊಂಡಿದ್ದನ್ನು ನಾವು ನೋಡಬಹುದು. ಕರ್ನಾಟಕ ಸಮಾಜವಾದಿ ಹೋರಾಟದ ಕಾರ್ಯಕ್ರಮಗಳು ಸಾಮಾಜಿಕ ಸಮಾನತೆ, ಉಳುವವನಿಗೆ ಭೂಮಿ, ಶೋಷಿತರ ಏಳ್ಗೆ, ಬಡವ–ಬಲ್ಲಿದನ ಉದ್ಧಾರ ಹಾಗೂ ಇತರೆ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಿದವು. ಎಲ್ಲಾ ಮೇಲ್ವರ್ಗದವರು ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿ ಹೋರಾಡಿದ್ದು ಮರೆಯುವಂತಿಲ್ಲ.

ಲೋಹಿಯಾರ ಸಮಾಜವಾದಿ ಚಿಂತನೆಗೆ ಮಾರುಹೋದಂತಹ ಪ್ರದೇಶಗಳಲ್ಲಿ ಕರ್ನಾಟಕವೂ ಒಂದು. ಕರ್ನಾಟಕದ ಅನೇಕ ನಾಯಕರು ನೇರವಾಗಿ ಅಥವಾ ಪರೋಕ್ಷವಾಗಿ ಲೋಹಿಯಾರ ವಿಚಾರಗಳಿಂದ ಪ್ರಭಾವಿತರಾದವರು. ಭಾರತದ ಇತರ ಪ್ರದೇಶಗಳಂತೆಯೇ ಕರ್ನಾಟಕದಲ್ಲಿಯೂ ಸಮಾಜವಾದಿಗಳ ನಾಯಕತ್ವದಲ್ಲಿ ಭರವಸೆ ನೀಡುವ ಅನೇಕ ಹೋರಾಟಗಳು ನಡೆದಿವೆ.[೫]

'ಕಾಗೋಡು ರೈತ ಸತ್ಯಾಗ್ರಹ' ನಾಡಿನ ಚರಿತ್ರೆಯಲ್ಲಿ ಒಂದು ಪ್ರಮುಖ ಮರೆಯಲಾಗದ ಘಟನೆ. ಭೂಸುಧಾರಣೆ ಶಾಸನದ ಸ್ಫೂರ್ತಿಯ ನೆಲೆ ಎಂದರೆ ತಪ್ಪಾಗಲಾರದು. ಈ ಚಾರಿತ್ರಿಕ ಸತ್ಯಾಗ್ರಹದ ನಾಯಕ ಶಾಂತವೇರಿ ಗೋಪಾಲಗೌಡರು. ಇಂಥ ಅಪ್ರತಿಮ ನಾಯಕನನ್ನು ಕಾಗೋಡು ಚಳವಳಿ ನಾಡಿಗೆ ನೀಡಿತು.[೬]

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಎಂಬ ಹಳ್ಳಿಯಲ್ಲಿ ೧೮.೦೪.೧೯೫೧ ರಂದು ಸತ್ಯಾಗ್ರಹ ಪ್ರಾರಂಭವಾಯಿತು. ಸಮಾಜವಾದಿ ಪಕ್ಷದ ಮುಖಂಡರು, ರೈತ ಮುಖಂಡರುಗಳಾದ ಡಿ. ಮೂಕಪ್ಪನವರು ಮತ್ತು ಹೆಚ್. ಗಣಪತಿಯಪ್ಪನವರ ಸಹಕಾರದೊಂದಿಗೆ ಸಾವಿರಾರು ರೈತರ ಬೆಂಬಲದಿಂದಾಗಿ ಸತ್ಯಾಗ್ರಹದ ಸ್ಥಳಕ್ಕೆ ಆಗಮಿಸಿದರು. ಸಮಾಜವಾದಿ ಪಕ್ಷದ ಪ್ರವೇಶದೊಂದಿಗೆ ಕಾಗೋಡು ರೈತ ಚಳವಳಿ ಹೊಸ ತಿರುವನ್ನು ಪಡೆದುಕೊಂಡಿತು.

ರೈತ ಮುಖಂಡರಾದ ಗಣಪತಿಯಪ್ಪನವರ ಬಂಧನದ ನಂತರ ಸತ್ಯಾಗ್ರಹ ಇನ್ನಷ್ಟು ತೀವ್ರತರವಾಯಿತು. ರೈತರಿಗೆ ಭೂಮಾಲೀಕರು ತಮ್ಮ ಜಮೀನಿನೊಳಕ್ಕೆ ಉಳುಮೆಗಾಗಿ ಕಾಲಿಡದಂತೆ ಮಾಡಿದರು. ಇದರಿಂದಾಗಿ ಭೂಮಾಲೀಕರ ವಿರುದ್ಧ ಗೇಣಿದಾರರು ತಿರುಗಿಬಿದ್ದರು. ಇದಕ್ಕೆ ಸಮಾಜವಾದಿ ಪಕ್ಷದವರೂ ಕೈಜೋಡಿಸಿದರು. ಭೂಮಾಲೀಕರ ಕಡೆಯವರು ಸತ್ಯಾಗ್ರಹಿಗಳನ್ನು ಮನಬಂದಂತೆ ಥಳಿಸಿದರು. ಈ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರು ಸತ್ಯಾಗ್ರಹಕ್ಕೆ ಪ್ರವೇಶಿಸಿದರು. ಇವರೊಂದಿಗೆ ವೈ.ಆರ್. ಪರಮೇಶ್ವರಪ್ಪನವರೂ ಇದ್ದರು. ಗೋಪಾಲಗೌಡರ ಹರಿತವಾದ ಮಾತುಗಳು ರೈತರಲ್ಲಿ ಹೊಸ ತಿರುವು, ಹೋರಾಟದ ಕೆಚ್ಚನ್ನು ಇಮ್ಮಡಿಗೊಳಿಸಿ, ಸತ್ಯಾಗ್ರಹಕ್ಕೆ ಹೊಸರೂಪ ಬಂದಿತು. ಸತ್ಯಾಗ್ರಹ ಪ್ರಾರಂಭವಾಗಿ ಎರಡು ತಿಂಗಳು ಕಳೆಯಿತು. ಕಾಗೋಡು ಸತ್ಯಾಗ್ರಹ ತೀವ್ರತೆಯ ಹಂತ ತಲುಪಿದಾಗ ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾರವರ ಆಗಮನವಾಯಿತು. ಇವರೊಂದಿಗೆ ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಶಿವಾನಂದಸ್ವಾಮಿ, ಲೋಕಪಾಲ್, ಎಂ.ಪಿ. ಈಶ್ವರಪ್ಪನವರೂ ಆಗಮಿಸಿದ್ದರು. ಭೂಮಾಲೀಕರ ಮತ್ತು ಪೊಲೀಸರ ದೌರ್ಜನ್ಯ ನಡೆದು ತಂಡ ತಂಡವಾಗಿ ಸತ್ಯಾಗ್ರಹಿಗಳ ಬಂಧನವಾಯಿತು. ಸುಮಾರು ನಾಲ್ಕುನೂರಕ್ಕೂ ಅಧಿಕ ರೈತರು, ಸಮಾಜವಾದಿಗಳು ಬಂಧನಕ್ಕೊಳಗಾದರು. ಶಾಂತವೇರಿ ಗೋಪಾಲಗೌಡರು ಭೂಗತರಾಗಿ ಮಾರುವೇಶದಲ್ಲಿ ರೈತರನ್ನು ಸಂಘಟನೆ ಮಾಡಿ ಚಳವಳಿಯನ್ನು ಮುನ್ನೆಡಿಸಿದರು.[೭]

ಕಾಗೋಡು ಸತ್ಯಾಗ್ರಹ ಉದ್ದಕ್ಕೂ ಸತ್ಯಾಗ್ರಹಿಗಳು ಒಮ್ಮೆಯೂ ಹಿಂಸೆಗೆ ಇಳಿಯಲಿಲ್ಲ. ಘೋಷಣೆ ಕೂಗುವುದು, ಮೆರವಣಿಗೆಯಲ್ಲಿ ಗದ್ದೆಗಳಿಗೆ ಹೋಗುವುದು, ಜಮೀನುದಾರರು ಹಾಕಿದ್ದ ಬೇಲಿಗಳನ್ನು ಮುರಿಯುವುದು, ಅವರು ಹಂಗಾಮಿಯಾಗಿ ಜಮೀನಿನಲ್ಲಿ ನೆಟ್ಟಿದ್ದ ಗಿಡಗಳನ್ನು ಕೀಳುವುದು, ನೆಲ ಉಳುಮೆ ಮಾಡುವುದು ಚಳವಳಿಯ ಪ್ರಮುಖ ಕಾರ್ಯಕ್ರಮಗಳಾಗಿದ್ದವು. ಯಾವ ಸತ್ಯಾಗ್ರಹಿಗಳೂ ಎದುರಾಳಿಗಳ ಮೇಲೆ ದೈಹಿಕ ಹಲ್ಲೆ ನಡೆಸಲಿಲ್ಲ. ಗೌಡರ ಮನೆಯ

ಮೇಲೆ ಒಂದು ಕಲ್ಲು ಕೂಡ ಬೀಳಲಿಲ್ಲ. ಆದರೆ ಸತ್ಯಾಗ್ರಹಿಗಳ ಮೇಲೆ ಪೊಲೀಸರು ಧಾರಾಳವಾಗಿ ಹಿಂಸೆ ನಡೆಸಿದರು. ಲಾಠಿ ಹೊಡೆತ, ಬೂಟುಕಾಲಿನ ಒದೆತ, ಮೈಮೇಲೆ ಎಲ್ಲಿ ಅಂದರೆ ಅಲ್ಲಿ ಹೊಡೆತ, ಜೈಲುವಾಸ ಇವುಗಳನ್ನು ಸತ್ಯಾಗ್ರಹಿಗಳು ಬೇಕಾದಷ್ಟು ಅನುಭವಿಸಿದರು.[೮]

ಬೆಂಗಳೂರು, ಕೋಲಾರ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ತೀರ್ಥಹಳ್ಳಿ ಮುಂತಾದ ಊರುಗಳಿಂದ ಸಮಾಜವಾದಿ ತಂಡಗಳು ಬಂದು ಕಾಗೋಡಿನಲ್ಲಿ ಸತ್ಯಾಗ್ರಹ ನಡೆಸಿದವು. ಸಮಾಜವಾದಿಗಳು ಪ್ರಮುಖವಾಗಿ ಸಾಗರ, ಸೊರಬ, ಹೊಸನಗರಗಳ ತಾಲ್ಲೂಕುಗಳಲ್ಲಿನ ಹಳ್ಳಿಗಳಲ್ಲಿ ಸತ್ಯಾಗ್ರಹದ ಬಗ್ಗೆ ವ್ಯಾಪಕವಾದ ಪ್ರಚಾರ ಮತ್ತು ಜಾಗೃತಿ ಮೂಡಿಸಿದರು. ಪ್ರಚಾರ ನಡೆಸಿದ ಕಾರ್ಯಕರ್ತರಲ್ಲಿ ಹೆಚ್ಚಿನವರ ಮೇಲೆ ವಾರೆಂಟುಗಳಿದ್ದವು. ಗೋಪಾಲಗೌಡರ ಮೇಲೂ ವಾರೆಂಟು ಇತ್ತು. ಶಾಂತವೇರಿ ಗೋಪಾಲಗೌಡರು ೩.೭.೧೯೫೧ರಂದು ಪೊಲೀಸರ ಕೈಗೆ ಸಿಕ್ಕಿ ಬಿದ್ದಾಗ ಚಳವಳಿ ಹೆಚ್ಚು ಕಡಿಮೆ ತಣ್ಣಗಾಗಿತ್ತು. ರಾಮಮನೋಹರ ಲೋಹಿಯಾರವರು ೧೯೫೧ ಜೂನ್ ೧೪ರ ರಾತ್ರಿ ಒಂದು ಘಂಟೆಯ ಸುಮಾರಿಗೆ ಸಾಗರ ರೈಲ್ವೆ ನಿಲ್ದಾಣದಲ್ಲಿ ಕಾಗೋಡಿನಿಂದ ವಾಪಾಸ್ಸಾಗುತ್ತಿದ್ದಾಗ, ಇವರನ್ನು ಇವರ ಜೊತೆ ಇದ್ದ ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಈಶ್ವರಪ್ಪ, ಗುರುರಾಜ್ ಮುಂತಾದವರನ್ನು ಪೊಲೀಸರು ಬಂಧಿಸಿದರು. ಲೋಹಿಯಾರವರನ್ನು ಸಾಗರದ ಕೋರ್ಟಿನಲ್ಲಿ ಹಾಜರುಪಡಿಸಿ, ನಂತರ ರೈಲಿನಲ್ಲಿ ತೃತೀಯ ದರ್ಜೆ ಭೋಗಿಯಲ್ಲಿ ಬೆಂಗಳೂರಿಗೆ ಹೊಯ್ದು ಕ್ರೆಸೆಂಟ್ ಹೌಸಿನಲ್ಲಿ ಬಂಧನದಲ್ಲಿಟ್ಟರು. ಆ ಭವ್ಯ ಸೆರೆಮನೆಯನ್ನು ವಿರೋಧಿಸಿ, ಲೋಹಿಯಾ ಪ್ರತಿಭಟಿಸಿದಾಗ ಇವರನ್ನು ಸೆಂಟ್ರಲ್ ಜೈಲಿನಲ್ಲಿಡಲಾಯಿತು. ೧೯೫೧ ಜೂನ್ ೨೩ರಂದು ಸರಕಾರ ಲೋಹಿಯಾರ ಮೇಲೆ ಇದ್ದ ಎಲ್ಲಾ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಂಡು ಜೈಲಿನಿಂದ ಬಿಡುಗಡೆ ಮಾಡಿತು. ಇದು ಅಂತರಾಷ್ಟ್ರೀಯ ಸುದ್ದಿಯಾಯಿತು. ಅದೇ ರೀತಿ ಪಕ್ಷವನ್ನು ಸೈದ್ಧಾಂತಿಕವಾಗಿ ಹೋರಾಟದಲ್ಲಿ ತೊಡಗಿಸಿಕೊಂಡು ಸಂಘಟನೆ, ಹೋರಾಟಗಳನ್ನು ಜೀವಂತಗೊಳಿಸಿದ ಕೀರ್ತಿ ಗೋಪಾಲಗೌಡರು ಮತ್ತು ವೈ.ಆರ್. ಪರಮೇಶ್ವರಪ್ಪನವರಿಗೆ ಸಲ್ಲುತ್ತದೆ. ಹಾಗೆಯೇ ಕಾಗೋಡು ರೈತ ಸತ್ಯಾಗ್ರಹವು ಗೋಪಾಲಗೌಡ, ವೈ.ಆರ್. ಪರಮೇಶ್ವರಪ್ಪನವರಂಥ ದಣಿವರಿಯದ ನಿಷ್ಠಾವಂತರು ಹಾಗೂ ಹೋರಾಟಗಾರರನ್ನು ರೂಪಿಸಿದ್ದಲ್ಲದೆ ಗೋಪಾಲಗೌಡರ ಭವಿಷ್ಯದ ಕ್ರಾಂತಿಕಾರಿ ಹೋರಾಟಕ್ಕೆ ಭದ್ರ ಅಡಿಪಾಯವನ್ನು ಹಾಕಿತು.[೯]

ಈ ಚಳವಳಿ ಸ್ವಾತಂತ್ರ್ಯಾನಂತರ ನಡೆದ ಮೊಟ್ಟಮೊದಲ ರೈತ ಚಳವಳಿ. ಕರ್ನಾಟಕದ ಕೆಲವು ಭಾಗಗಳಲ್ಲಿ ಅಲ್ಲಲ್ಲಿ ರೈತ ಚಳವಳಿ ನಡೆದಿದ್ದಾಗ್ಯೂ ಕಾಗೋಡು ಸತ್ಯಾಗ್ರಹ ಮಾತ್ರ ಸಂಘಟನಾತ್ಮಕವಾಗಿ ನಡೆಯಿತು. ಭೂಸುಧಾರಣೆ ಆಗಲೇಬೇಕೆಂದು ಗೇಣಿದಾರರು ಹೋರಾಡಿದರು. ೧೯೫೨ರಲ್ಲಿ ಶಾಂತವೇರಿ ಗೋಪಾಲಗೌಡರು ಶಾಸನಸಭೆ ಪ್ರವೇಶಿಸಿದ ಮೇಲೆ ಭೂಸುಧಾರಣೆ ಕಾನೂನು ಜಾರಿಗೆ ತರಲು ಮೇಲಿಂದ ಮೇಲೆ ಒತ್ತಡ ಹಾಕಿದರು.

ಶಾಂತವೇರಿ ಗೋಪಾಲಗೌಡರು ಯಾವುದೇ ವ್ಯಕ್ತಿ ಅಥವಾ ಪಕ್ಷದ ಕೆಲಸ ಕಾರ್ಯಕ್ಕಿಂತಲೂ ಜನರ ಒಳಿತಿಗಾಗಿ ಕಾರ್ಯಪ್ರವೃತ್ತರಾಗಿರುತ್ತಿದ್ದರು. ಇವರು ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ವಿಶೇಷ ಕಾಳಜಿ ಹೊಂದಿದವರಾಗಿದ್ದರು. ಅಸ್ಪೃಶ್ಯರ ಬಗ್ಗೆ ಗೋಪಾಲಗೌಡರಿಗೆ ವಿಶೇಷವಾದ ಅನುಕಂಪ. ಸಮಾಜ ಅವರನ್ನು ನಡೆಸಿಕೊಳ್ಳುವ ರೀತಿ ಗೌಡರನ್ನು ಕೆರಳಿಸಿತ್ತು. ಹರಿಜನರ ಬಗ್ಗೆ ತಮ್ಮ ಮಾನವೀಯ ಕಳಕಳಿಯನ್ನು ಹಲವಾರು ಬಾರಿ ತೋಡಿಕೊಂಡು ಅವರ ಏಳಿಗೆಗಾಗಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು ಎಂಬುದರ ಕುರಿತು ಎಚ್ಚರಿಕೆ ಮಾತುಗಳನ್ನು ಸದನದಲ್ಲಿ ಪ್ರಸ್ತಾಪಿಸಿದ್ದರು.

ದೇಶದಲ್ಲಿ, ರಾಜ್ಯದಲ್ಲಿ ಮನೆಯಿಲ್ಲದ ನಿರ್ಗತಿಕರಿಗೆ ಸೂರು ಒದಗಿಸಲು ಮನೆದಳ ನೀಡಲಾಗುತ್ತಿತ್ತು. ಇದರಿಂದಾಗಿ ಹೆಚ್ಚಿನ ಬಡ ಜನತೆ ಸ್ವಂತ ಮನೆ ನಿರ್ಮಿಸಿಕೊಳ್ಳಲು ಅನುಕೂಲವಾಯಿತು. ಇದಕ್ಕಾಗಿ ಪ್ರಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಹೋರಾಟ ನಡೆಸಿದವರು ಶಾಂತವೇರಿ ಗೋಪಾಲಗೌಡರು. ನಿವೇಶನರಹಿತ ಕುಟುಂಬಗಳಿಗೆ ಮನೆದಳ ಕೊಡಿ ಚಳವಳಿಯನ್ನು ಇವರು ಪ್ರಾರಂಭಿಸಿದರು. ಅದು ಪ್ರಪ್ರಥಮಬಾರಿಗೆ ಆರಂಭವಾದದ್ದು ೨೩.೧೦.೧೯೬೪ರಂದು ಕೋಣಂದೂರು-ಹಾದಿಗಲ್ ನಡುವಿನ ಸರ್ಕಾರಿ ಜಾಗದಲ್ಲಿ ಅಂದು ಗೋಪಾಲಗೌಡರೂ ಸೇರಿ ಮುವತ್ತು ಮಂದಿ ಚಳವಳಿಯಲ್ಲಿ ಭಾಗವಹಿಸಿದ್ದರು. ಆ ಪೈಕಿ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು, ಹುಗಳವಳ್ಳಿ ಸುರೇಂದ್ರ, ಬಿ.ಟಿ. ಶ್ರೀನಿವಾಸ್, ಬಾವಿಕೈ ವೆಂಕಟರಮಣ, ಕೋಣಂದೂರು ಶೀನಪ್ಪ ಭಂಡಾರಿ, ಶ್ರೀಮತಿ ಮಿಣುಕಮ್ಮ ಆರಗ, ಕಾಳಮ್ಮನಗುಡಿ ವೆಂಕಟರಮಣ ಮುಂತಾದವರು ಇನ್ನೂ ಇದ್ದಾರೆ. ಹಲವು ಪ್ರಮುಖರು ನಿಧನರಾಗಿದ್ದಾರೆ. ಅಂದಿನ ಚಳವಳಿಯ ಸ್ವರೂಪವನ್ನು ಗೋಪಾಲಗೌಡರು ಹೀಗೆ ವಿವರಿಸುತ್ತಾರೆ. ಬೆಳಗಿನ ಹತ್ತು ಘಂಟೆಗೆ ಚಳವಳಿಗಾರರು ಗೌಡರ ನೇತೃತ್ವದಲ್ಲಿ ಸೇರಿದೆವು. ಅದಕ್ಕೂ ಮೊದಲೇ ೮-೧೦ ಪೊಲೀಸರು ಹಾಜರಿದ್ದರು. ನಾವು ೩೩ ಜನ ಚಳವಳಿಗಾರರು ಸಣ್ಣ ಗುಡಿಸಲು ಹಾಕಿಕೊಂಡು ಅನ್ನ ಮಾಡಿಕೊಳ್ಳಲು ಪ್ರಾರಂಭಿಸಿದೆವು. ಗುಡಿಸಲೆಂದರೆ ನಾಲ್ಕು ಅಡಿ ಉದ್ದದ ಮೂರು ಕೋಲುಗಳನ್ನು ಕಟ್ಟಿ ತ್ರಿಕೋನಾಕಾರದಲ್ಲಿ ನಿಲ್ಲಿಸಿ ಮೇಲೊಂದು ಹುಲ್ಲಿನ ಕಂತೆಯನ್ನು ಇಟ್ಟರೆ ಅದೊಂದು ಗುಡಿಸಲಾಯಿತು. ಕೆಳಗೆ ಮೂರು ಕಲ್ಲುಗಳನ್ನು ಹೂಡಿ ಅದರ ಮೇಲೆ ಮಡಿಕೆಯನ್ನಿಟ್ಟು ಕೆಳಗೆ ಬೆಂಕಿ ಹೊತ್ತಿಸಿದೆವು. ಇವೆರಡೂ ಸಾಂಕೇತಿಕ. ಆಗ ಪೊಲೀಸರು ಬಂದು ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಗುಡಿಸಲು ಕಟ್ಟಿ ವಾಸಕ್ಕೆ ತೊಡಗಿರುವುದಕ್ಕಾಗಿ ಬಂಧಿಸಿ ಪೊಲೀಸ್ ವ್ಯಾನಿನಲ್ಲಿ ತುಂಬಿಕೊಂಡು ಆಗ ತೀರ್ಥಹಳ್ಳಿಯ ರಥಬೀದಿಯಲ್ಲಿದ್ದ ಠಾಣೆಗೆ ಕರೆದೊಯ್ದರು[೧೦] ಎಂದು ಹೇಳುವ ಗೌಡರು ಮುಂದೆ ಶಿವಮೊಗ್ಗದ ಕೋರ್ಟಿನಲ್ಲಿ ಹಾಜರುಪಡಿಸಿದಾಗ ಎಲ್ಲರ ಪರವಾಗಿ ಕಟಕಟೆಯಲ್ಲಿ ನಿಂತು ಹೀಗೆ ಹೇಳಿಕೆ ಕೊಡುತ್ತಾರೆ. ನಾನು ಬಡವ. ನನ್ನೊಟ್ಟಿಗೆ ಬಂದಿರುವ ಇವರೆಲ್ಲರೂ ಬಡವರೇ, ವಾಸಕ್ಕೆ ನಿವೇಶನ ಇಲ್ಲದವರು, ನನ್ನದೊಂದು ಪುಟ್ಟ ಗುಡಿಸಲು ತಂದೆಯಿಂದ ಬಂದಿದ್ದು ಆರಗದ ಶಾಂತವೇರಿಯಲ್ಲಿದೆ. ಆದರೆ ಅದಕ್ಕೆ ನನ್ನ ಅಣ್ಣನೊಬ್ಬ ಪಾಲುದಾರ. ಹಾಗಾಗಿ ನನ್ನದೆ ಒಂದು ನಿವೇಶನಕ್ಕಾಗಿ ನಾನು ಮತ್ತು ನನ್ನಂತಹ ಈ ಬಡ

ಮಿತ್ರರು ಸಣ್ಣದಾಗಿ ಗುಡಿಸಲುಗಳನ್ನು ಹಾಕಿಕೊಂಡು ಅನ್ನ ಬೇಯಿಸಿಕೊಂಡು ತಿನ್ನಲು ಅಣಿಯಾಗುತ್ತಿದ್ದಾಗ ಸರ್ಕಾರದ ಪೊಲೀಸರು ನಮ್ಮ ಗುಡಿಸಲುಗಳನ್ನು ಕಿತ್ತು ಹಾಕಿ ಅನ್ನದ ಮಡಿಕೆಗಳನ್ನು ಒಡೆದು ಹಾಕಿ ದೌರ್ಜನ್ಯವೆಸಗಿ ನಮ್ಮನ್ನು ಬಂಧಿಸಿ ತಮ್ಮ ಮುಂದೆ ತಂದು ಹಾಜರುಪಡಿಸಿರುತ್ತಾರೆ. ಘನ ನ್ಯಾಯಾಲಯ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ'' ಎಂದು ಬಡವರ ಪರವಾದ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ.

ಶಾಂತವೇರಿ ಗೋಪಾಲಗೌಡರು ಅಪ್ರಾಮಾಣಿಕತೆ, ಅದಕ್ಷತೆಯನ್ನು ಕಂಡಾಗ ಅವರು ಅತ್ಯುನ್ನತ ಸ್ಥಾನದಲ್ಲಿರುವ ರಾಜಕೀಯ ನಾಯಕರಿರಲಿ, ಅತ್ಯುನ್ನತ ದರ್ಜೆಯ ಅಧಿಕಾರಿಗಳಿರಲಿ ಅವರ ಬಗ್ಗೆ ನಿಷ್ಠುರವಾಗಿ ಮಾತನಾಡಿ ತಮ್ಮ ಕೋಪ, ಅಸಹನೆಯನ್ನು ಹೊರಹಾಕುತ್ತಿದ್ದರು. ಅಧಿಕಾರಿಗಳು ಕರ್ತವ್ಯಲೋಪವೆಸಗಿದಾಗ, ಅಸಡ್ಡೆ ತೋರಿದಾಗ ಅವರ ಮೇಲೆ ಹರಿಹಾಯ್ದು ಅವರಿಂದಾಗಬೇಕಾದ ಕೆಲಸವನ್ನು ಮಾಡಿಸಿಕೊಳ್ಳುವ ಗಟ್ಟಿತನ ತೋರುತ್ತಿದ್ದರು.

ಸರ್ಕಾರಿ ಭೂಮಿಯನ್ನು ಬಡವರು ಪಡೆದುಕೊಳ್ಳುವ ಚಳವಳಿ ಶಿವಮೊಗ್ಗದಲ್ಲಿ ತೀವ್ರವಾಗಿ ನಡೆಯುತ್ತಿರುವ ಸಂದರ್ಭದಲ್ಲಿ ಇದೊಂದು ಘಟನೆ ನಡೆಯುತ್ತದೆ. ಈ ಚಳವಳಿಯನ್ನು ಆಗಿನ ಜಿಲ್ಲಾಧಿಕಾರಿಗಳು 'ಬೂಟಾಟಿಕೆಯ ಚಳವಳಿ' ಎಂದು ಕರೆದದ್ದು ಪತ್ರಿಕೆಗಳಲ್ಲಿ ಬರುತ್ತದೆ. ಇದನ್ನು ಕಂಡ ಗೌಡರು ಕೆಂಡಮಂಡಲರಾಗಿ ಸೀದ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗುತ್ತಾರೆ. ಹೋಗಿ... ಏನಯ್ಯಾ ಆದಿ ರಾಜಯ್ಯ ಭೂಗ್ರಹಣ ಚಳವಳಿಯನ್ನು ಬೂಟಾಟಿಕೆ ಚಳವಳಿ ಎಂದು ಪತ್ರಿಕೆ ಹೇಳಿಕೆ ಕೊಟ್ಟಿದ್ದೀಯೆ! ಬೆಂಗಳೂರು ಡೈರಿಯಲ್ಲಿದ್ದು ನೀನು ಎಷ್ಟು ಕೆ.ಜಿ. ಬೆಣ್ಣೆ ತಿಂದು ಬಂದಿದ್ದೀಯ ಎನ್ನುವುದು ನನಗೆ ಗೊತ್ತು. ನಮ್ಮ ಪಕ್ಷದ ಕಾರ್ಯಕ್ರಮದ ಬಗ್ಗೆ ಪತ್ರಿಕಾ ಹೇಳಿಕೆ ಕೊಡಲು ನಿನಗೆಷ್ಟು ಸೊಕ್ಕು? ನಿನ್ನನ್ನು ಜಿಲ್ಲಾಧಿಕಾರಿ ಕುರ್ಚಿಯಿಂದ ನಾನೇ ಇಳಿಸುತ್ತೇನೆ'' ಎಂದು ಗುಡುಗಿ ತಮ್ಮ ಕೈಲಿದ್ದ ವಾಕಿಂಗ್ ಸ್ಟಿಕ್‌ನಿಂದ ಅವರ ಕುತ್ತಿಗೆಗೆ ಹಾಕಿ ಎಳೆಯುತಲ್ತಾರೆ. ಇದನ್ನು ಕಂಡ ಗೌಡರ ಸ್ನೇಹಿತರು ಜಿಲ್ಲಾಧಿಕಾರಿಯನ್ನು ಈ ಸಂಕಟದಿಂದ ಬಿಡಿಸುತ್ತಾರೆ.

ಅದೇ ರೀತಿ ಶಿವಮೊಗ್ಗ ಜಿಲ್ಲೆಯ ಕಾರ್ಗಲ್‌ನಲ್ಲಿ ನಡೆದ ವಿದ್ಯುಚ್ಛಕ್ತಿ ಮಂಡಳಿಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಕಾರ್ಮಿಕರ ಸ್ಥಿತಿಗತಿಯನ್ನು ಕಂಡು ಅದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತಾರೆ. ಶಿವಮೊಗ್ಗ ಸಮೀಪದ ಜಯಂತಿ ಗ್ರಾಮದಲ್ಲಿ ಹರಿಜನರು ಬಗರ್‌ಹುಕಂ ಸಾಗುವಳಿ ಮಾಡಿದ ಸುಮಾರು ೬೦ ಎಕರೆ ಭೂಮಿಯ ಮೇಲೆ ಸವರ್ಣೀಯರು ನೂರಾರು ದನಗಳನ್ನು ಒಂದೇ ರಾತ್ರಿ ಬಿಟ್ಟು ಮೇಯಿಸಿದ ಪ್ರಸಂಗದ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತಾರೆ. ಆಗ ಸರಿಯಾಗಿ ಸ್ಪಂದಿಸದ ಜಿಲ್ಲಾಧಿಕಾರಿಯನ್ನೇ ಬೆದರಿಸಿ ದಲಿತರ ರಕ್ಷಣೆಗೆ ಧಾವಿಸುತ್ತಾರೆ.

೧೯೬೮ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಘಟನೆಗೆ ಪ್ರತಿಕ್ರಿಯಿಸಿದ ಕ್ರಮ ಮಾನವೀಯವಾದದ್ದು. ಅಂದು ಕೋಮುಗಲಭೆ ನಡೆದು ಸಾವು ನೋವುಗಳಾಗುತ್ತವೆ. ಇದನ್ನು ತಿಳಿದ ಗೌಡರು ಸ್ನೇಹಿತರೊಡಗೂಡಿ ಅಲ್ಲಿಗೆ ಧಾವಿಸಿ, ನಡೆದಿರುವ ಘಟನೆಯ ಕುರಿತು ನಿಷ್ಪಕ್ಷಪಾತವಾದ

ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸುತ್ತಾರೆ. ಕೋಮುವಾದಿ ಶಕ್ತಿಗಳನ್ನು ತೀವ್ರವಾಗಿ ಖಂಡಿಸುತ್ತಾರೆ. ಇದರಿಂದಾಗಿ ಅವರಿಗೆ ನೂರಾರು ಬೆದರಿಕೆಯ ಪತ್ರಗಳು ಬರುತ್ತವೆ. ಆದರೆ ಅದ್ಯಾವುದಕ್ಕೂ ಜಗ್ಗದ ಗೌಡರು ತನಗೆ ಸರಿ ಎನಿಸಿದ್ದನ್ನು ನಿರ್ಭೆಡೆಯಿಂದ ಪ್ರತಿಪಾದಿಸುವುದು ಕಾಣುತ್ತದೆ. ಹೀಗೆ ಯಾವುದೇ ಸಮಸ್ಯೆಗಳು ಕಂಡಲ್ಲಿ ತಕ್ಷಣದಲ್ಲಿಯೇ ಪ್ರತಿಕ್ರಿಯಿಸುವ ಗುಣದ ಅಪರೂಪದ ರಾಜಕಾರಣಿಯನ್ನು ಗೌಡರಲ್ಲಿ ಕಾಣಬಹುದಾಗಿದೆ.

ಟಿಪ್ಪಣಿಗಳು

೧. ಚಂದ್ರಶೇಖರ ಎಸ್., ೨೦೦೧, **ಆಧುನಿಕ ಕರ್ನಾಟಕದ ಆಂದೋಲನಗಳು**, ಪು. ೧೩೨.

೨. ಕೋಣಂದೂರು ವೆಂಕಪ್ಪಗೌಡ (ಸಂ), ೧೯೮೧, **ಜೀವಂತ ಜ್ವಾಲೆ–ಶಾಂತವೇರಿ ಗೋಪಾಲಗೌಡ ಸ್ಮಾರಕಗ್ರಂಥ**, ಪು. ೧೮.

೩. ಅದೇ ಪು. ೧೨೪.

೪. ಕಾಳೇಗೌಡ ನಾಗವಾರ ಜಿ.ವಿ., ಆನಂದಮೂರ್ತಿ, ೨೦೧೦, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೩೯೭.

೫. ರಾಜಾರಾಮ ತೋಳ್ಪಾಡಿ (ಲೇ), ೨೦೦೨, **ಲೋಹಿಯಾ ಮತ್ತು ಕರ್ನಾಟಕದ ಸಮಾಜವಾದಿ ರಾಜಕಾರಣ**, ಬೋರಲಿಂಗಯ್ಯ ಹಿ.ಚಿ., ಹುಚ್ಚಪ್ಪ ಮಾಸ್ತರ್ (ಸಂ), **ಕಾಗೋಡು ಚಳವಳಿ** (ಸುವರ್ಣ ಸಂಪುಟ), ಪು. ೬೩೨.

೬. ಗಣಪತಿಯಪ್ಪ ಎಚ್. (ಲೇ), ೨೦೦೨, **ಕಾಗೋಡು ಸತ್ಯಾಗ್ರಹ ಮತ್ತು ಗೋಪಾಲಗೌಡರು**, ಬೋರಲಿಂಗಯ್ಯ ಹಿ.ಚಿ., ಹುಚ್ಚಪ್ಪ ಮಾಸ್ತರ್ (ಸಂ), **ಕಾಗೋಡು ಚಳವಳಿ** (ಸುವರ್ಣ ಸಂಪುಟ), ಪು. ೪೨.

೭. ಉಮೇಶ ಬಿ.ಎನ್. ೨೦೦೯, **ಶಾಂತವೇರಿ ಗೋಪಾಲಗೌಡರ ನೆನಪು**, ಪು. ೫೧.

೮. ರಾಜಶೇಖರ ಜಿ. (ಲೇ), ೨೦೦೨, **ಕಾಗೋಡು ಸತ್ಯಾಗ್ರಹ : ಆಯ್ದ ಭಾಗಗಳು**, ಬೋರಲಿಂಗಯ್ಯ ಹಿ.ಚಿ, ಹುಚ್ಚಪ್ಪಮಾಸ್ತರ್ ಎನ್ (ಸಂ), **ಕಾಗೋಡು ಚಳವಳಿ: ಸುವರ್ಣ ಸಂಪುಟ**, ಪು. ೧೦೧.

೯. ಎಚ್.ಸಿ. ವಿಷ್ಣುಮೂರ್ತಿ (ಲೇ), ೨೦೦೨, **ಕಾಗೋಡು ಚಳವಳಿಗೆ ಗೋಪಾಲಗೌಡರ ಪ್ರವೇಶ**, ಬೋರಲಿಂಗಯ್ಯ ಹಿ.ಚಿ, ಹುಚ್ಚಪ್ಪ ಮಾಸ್ತರ್ ಎನ್ (ಸಂ), **ಕಾಗೋಡು ಚಳವಳಿ ಸುವರ್ಣ ಸಂಪುಟ**, ಪು. ೫೬.

೧೦. ಉಮೇಶ್ ಬಿ.ಎನ್., ೨೦೦೯, **ಶಾಂತವೇರಿ ಗೋಪಾಲಗೌಡರ ನೆನಪು**, ಪು. ೩೦.

೧೧. ಅದೇ ಪು. ೩೧.

೧೨. ಅದೇ ಪು. ೩೪–೩೬

ಅಧ್ಯಾಯ : ಮೂರು

ಸಮಾಜವಾದ ಹಾಗೂ ಸೈದ್ಧಾಂತಿಕ ನೆಲೆಗಳು

೩.೧. ಸಮಾಜವಾದ : ಅರ್ಥ, ವ್ಯಾಖ್ಯೆ ಹಾಗೂ ತಾತ್ವಿಕ ನೆಲೆಗಳು

೩.೨. ಸಮಾಜವಾದ : ಭಾರತ ಹಾಗೂ ಕರ್ನಾಟಕದ ಆಯಾಮ

೩.೩. ಲೋಹಿಯಾ ಹಾಗೂ ಶಾಂತವೇರಿ ಗೋಪಾಲಗೌಡ ಅವರ ಆಶಯಗಳು

೩.೪. ಸಮಾಜವಾದ ಮತ್ತು ಗಾಂಧೀಜಿ

೩.೫. ಸಮಾಜವಾದ ಮತ್ತು ಅಂಬೇಡ್ಕರ್

ಅಧ್ಯಾಯ : ಮೂರು

ಸಮಾಜವಾದ ಹಾಗೂ ಸೈದ್ಧಾಂತಿಕ ನೆಲೆಗಳು

ಜಗತ್ತಿನ ಪ್ರತಿಯೊಂದು ರಾಷ್ಟ್ರಗಳು ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿವೆ. ರಾಜಪ್ರಭುತ್ವ, ಪ್ರಜಾಪ್ರಭುತ್ವ, ಕಮ್ಯೂನಿಷ್ಟ್, ಸೋಸಿಯಲಿಸ್ಟ್ ಮುಂತಾದ ಆಡಳಿತ ಪದ್ಧತಿಗಳು ಅನೇಕ ಶತಮಾನಗಳಿಂದಲೂ ಅಸ್ತಿತ್ವದಲ್ಲಿವೆ. ಆ ಎಲ್ಲಾ ಆಡಳಿತ ಪದ್ಧತಿಗಳು ತಮ್ಮದೇ ಆದ ಒಂದು ಸೂತ್ರ, ಸಿದ್ಧಾಂತ, ನೀತಿ ನಿಯಮಗಳಿಗೆ ಬದ್ಧವಾಗಿರುತ್ತವೆ. ಇಂತಹ ಆಡಳಿತ ವ್ಯವಸ್ಥೆಗಳು ಪರಸ್ಪರ ಭಿನ್ನವಾಗಿರುವುದಂತೂ ವಾಸ್ತವ. ಇದು ಒಂದು ಬದಿಯಾದರೆ ಇಂಥ ಆಡಳಿತ ವ್ಯವಸ್ಥೆಗಳ ಫಲಾನುಭವಿಗಳು ಆಯಾ ದೇಶದ ಪ್ರಜೆಗಳಾಗಿರುತ್ತಾರೆ. ಪ್ರಜಾಪ್ರಭುತ್ವವನ್ನು ಹೊರತುಪಡಿಸಿದರೆ ಬಹುತೇಕ ಆಡಳಿತ ವ್ಯವಸ್ಥೆಗಳಲ್ಲಿ ತಮಗಿಷ್ಟ ಬಂದ ನಾಯಕನನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲವೆಂದು ತೋರುತ್ತದೆ. ಕೆಲವೊಮ್ಮೆ ದೇಶದ ಜನತೆ ಅಸ್ತಿತ್ವದಲ್ಲಿರುವ ಆಡಳಿತ ವ್ಯವಸ್ಥೆಯನ್ನು ಪ್ರತಿಭಟನೆ, ದಂಗೆ ಇವುಗಳ ಮೂಲಕ ಬದಲಿಸಿರುವ ಉದಾಹರಣೆಗಳಿವೆ. ಈ ನಿಟ್ಟಿನಲ್ಲಿ ಪ್ರಾಚೀನದಿಂದಲೂ ರಾಜಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಭಾರತದಲ್ಲಿ ಪಾಶ್ಚಾತ್ಯ ಚಿಂತನೆಗಳ ಫಲವಾಗಿ ಕ್ರಿ.ಶ. ೧೯ನೆಯ ಶತಮಾನದಲ್ಲಿ ಸಮಾಜವಾದವು ಕಾಲಿಟ್ಟಿತು. ಸಮಾನತೆಯ ಮೇಲೆ ಸಮಾಜವನ್ನು ಕಟ್ಟುವುದು ಸಮಾಜವಾದದ ಮೂಲ ಆಶಯವಾಗಿದೆ. ಹಿಂಸಾತ್ಮಕ ಪ್ರತಿಭಟನೆಯನ್ನು ತ್ಯಜಿಸಿ ಶಾಂತಿಯುತವಾಗಿ ತಮ್ಮ ಸತ್ಯಾಗ್ರಹ ಹಾಗೂ ಹೋರಾಟಗಳನ್ನು ರೂಪಿಸಿಕೊಂಡಿರುವುದು ಸಮಾಜವಾದದಲ್ಲಿ ಕಂಡುಬರುವ ಒಂದು ಸಕಾರಾತ್ಮಕ ಅಂಶವಾಗಿದೆ. ಭಾರತದಲ್ಲಿ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣ್ ಅವರು ಸಮಾಜವಾದವನ್ನು ಮುನ್ನಡೆಸಿದವರು. ಅವರ ಪ್ರಭಾವ ದೇಶದ ಇತರರ ಮೇಲೂ ಗಾಢವಾದ ಪ್ರಭಾವವನ್ನು ಬೀರಿತು. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಸಮಾಜವಾದವೆಂದರೇನು, ಅದರ ಅರ್ಥ, ವ್ಯಾಖ್ಯೆ, ತಾತ್ವಿಕ ನೆಲೆಗಳು, ಭಾರತದಲ್ಲಿ ಸಮಾಜವಾದ, ಕರ್ನಾಟಕದಲ್ಲಿ ಸಮಾಜವಾದ ಎಂಬ ವಿಷಯಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಸಮಾಜವಾದವನ್ನು ಕುರಿತು ಗಾಂಧೀಜಿ, ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಮುಖ್ಯವಾಗಿ ಸಮಾಜವಾದದ ನೇತಾರರಾದ ಲೋಹಿಯಾ ಮತ್ತು ಶಾಂತವೇರಿ ಗೋಪಾಲಗೌಡ ಅವರ ಆಶಯಗಳನ್ನು ಈ ಅಧ್ಯಾಯದಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

೩.೧. ಸಮಾಜವಾದ : ಅರ್ಥ, ವ್ಯಾಖ್ಯೆ ಹಾಗೂ ತಾತ್ವಿಕ ನೆಲೆಗಳು

ಆಧುನಿಕ ಕಾಲದಲ್ಲಿ ಸಮಾಜವಾದದ ಪರಿಕಲ್ಪನೆ ಮೂಡಿ ಬಂದಿತು. ನಂತರದಲ್ಲಿ ಸಮಾಜವಾದದ ಸ್ಫೂರ್ತಿಯನ್ನು ಮೈಗೂಡಿಸಿಕೊಂಡು ತೀವ್ರ ಸ್ವರೂಪದ ಬದಲಾವಣೆಗಳತ್ತ ರೂಪಿತವಾದ ಸಿದ್ಧಾಂತವನ್ನು ವೈಜ್ಞಾನಿಕ ಸಮಾಜವಾದ ಎಂದು ಪರಿಗಣಿಸಲಾಯಿತು. ಸಮತಾವಾದಿಗಳು ಪ್ರಾರಂಭದ ಸಮಾಜವಾದಿಗಳನ್ನು ಕೇವಲ ಯುಟೋಪಿಯನ್ (ಕನಸುಗಾರ)ಗಳೆಂದು ಪರಿಗಣಿಸಿದರು. ಅದು ಏನೇ ಇದ್ದರು ಸಮಾಜವಾದ ಮತ್ತು ಸಮತಾವಾದಗಳು ಒಂದೇ ಅಲ್ಲ. ಆದರೆ ಅವುಗಳಲ್ಲಿ ಕೆಲವು ಸಾಮ್ಯತೆಗಳು ಇವೆ. ಸಮಾಜವಾದ ಸಮಗ್ರ ಸಮಾಜದ ಕಲ್ಯಾಣವನ್ನು ತನ್ನ ಗುರಿಯಾಗಿಸಿಕೊಂಡಿದೆ. ಸಮತಾವಾದವು ಇದೇ ಧ್ಯೇಯವನ್ನು ಹೊಂದಿದೆಯಾದರು ಗುರಿ ಸಾಧನೆಯ ಮಾರ್ಗಗಳು ಬೇರೆ ಬೇರೆ. ಸಮಾಜದಲ್ಲಿರುವ ಅಸಮಾನತೆಯ ನಿವಾರಣೆಯ ಸಾಧನೆಯಲ್ಲಿ ಸಮಾಜವಾದದ ಸಂಪತ್ತಿನ ಸಮಾನ ಹಂಚಿಕೆಯಲ್ಲಿ ಮತ್ತು ಸಾಮಾಜಿಕವಾಗಿ ಎಲ್ಲಾ ಹಕ್ಕುಗಳನ್ನು ಎಲ್ಲರಿಗೂ ಸಮಾನವಾಗಿ ನೀಡುವುದರಲ್ಲಿ ನಂಬಿಕೆಯನ್ನು ಇಟ್ಟು ಇದನ್ನು ಸಾಧಿಸಲು ಹಿಂಸಾಮಾರ್ಗವನ್ನೇನು ಪ್ರತಿಪಾದಿಸುವುದಿಲ್ಲ. ಆದರೆ ಸಮತಾವಾದ ಆರ್ಥಿಕ ಸಮಾನತೆಯ ಸಾಧನೆಗಾಗಿ ಕಾರ್ಮಿಕರು, ಶ್ರಮಿಕರು, ಸಾಮಾನ್ಯ ಜನರು ಮತ್ತು ಬಂಡವಾಳಗಾರರು, ಶ್ರೀಮಂತರು, ಭೂರ್ಜ್ವಾಗಳ ನಡುವೆ ಹಿಂಸಾತ್ಮಕ ವರ್ಗಸಂಘರ್ಷವನ್ನು ಪ್ರತಿಪಾದಿಸುತ್ತದೆ.

ಸಮಾಜವಾದ ಎಲ್ಲಾ ಪ್ರಜೆಗಳಲ್ಲಿಯೂ ಸಮಾನವಾದ ಸಂಪತ್ತಿನ ಹಂಚಿಕೆಯನ್ನು ಪ್ರತಿಪಾದಿಸುತ್ತದೆಯಾದರೂ ಉತ್ಪಾದನಾಂಗಗಳು ರಾಜ್ಯದ ಅಧೀನದಲ್ಲಿರಬೇಕು ಎಂದೇನು ಹೇಳುವುದಿಲ್ಲ. ಆದರೆ ಸಮತಾವಾದ ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ ಇವುಗಳು ರಾಜ್ಯದ ಅಧೀನದಲ್ಲಿರಬೇಕು ಎಂದು ಹೇಳುತ್ತದೆ. ಇಲ್ಲಿ ವ್ಯಷ್ಟಿ ಹಿತಕ್ಕಿಂತ ಸಮಷ್ಟಿ ಹಿತವೇ ಮುಖ್ಯ ಆದ್ದರಿಂದ ಇದು ಬಂಡವಾಳಶಾಹಿ ವ್ಯವಸ್ಥೆಗೆ ವಿರುದ್ಧವಾದದ್ದು. ಸಮಾಜವಾದಿಗಳು ರಿಲೀಜನ್(Religion) (ಮತ)ನ್ನು ಶೋಷಣೆಯ ಮಾಧ್ಯಮವಾಗಿ ಪರಿಗಣಿಸುವುದಿಲ್ಲ. ಆದರೆ ಸಮತಾವಾದಿಗಳು (ಕಮ್ಯುನಿಸ್ಟರು) ಮತವನ್ನು ಶೋಷಣೆಯ ಅಸ್ತ್ರವೆಂದು ಪರಿಗಣಿಸುತ್ತಾರೆ. ಮತ್ತು ಅದನ್ನು ದೂರಿಕರಿಸಲು ಪ್ರಯತ್ನಿಸುತ್ತಾರೆ. ಜೊತೆಗೆ ಬಹುಸಂಖ್ಯಾತ ಸಮತಾವಾದಿಗಳು ನಾಸ್ತಿಕರು. ಪ್ರಪಂಚದಲ್ಲಿ ಅನೇಕ ರಾಜಕೀಯ ಸಿದ್ಧಾಂತಗಳು ಪ್ರಚಲಿತವಾಗಿವೆ. ಅವುಗಳಲ್ಲಿ ಸಮಾಜವಾದ ಮತ್ತು ಸಮತಾವಾದಗಳೂ ಸೇರಿವೆ. ಅಂತರಾಷ್ಟ್ರೀಯ ಸಮಸ್ಯೆಗಳ ಪರಿಶೀಲನೆಯಲ್ಲಿ ಈ ಎರಡು ಗುಂಪುಗಳ ಪ್ರಭಾವ ಸ್ಪಷ್ಟವಾಗಿ ಕಂಡುಬರುತ್ತದೆ.

ಸಮಾಜವಾದ ಎಂದರೇನು ಎನ್ನುವ ಕುರಿತು ಸಾಕಷ್ಟು ಭಿನ್ನಾಭಿಪ್ರಾಯಗಳು ಇವೆ. ಕಮ್ಯುನಿಸ್ಟರು ಹಾಗೂ ಅರಾಜಕತಾವಾದಿಗಳು ಸಹ ತಮ್ಮನ್ನು ಸಮಾಜವಾದಿಗಳೆಂದು ಹೇಳಿಕೊಳ್ಳುವುದರಿಂದ ಹೆಚ್ಚಿನ ಗೊಂದಲ ಸೃಷ್ಟಿಯಾಗಿದೆ. ಬಂಡವಾಳವಾದಿ ವ್ಯವಸ್ಥೆಯಿಂದ ಸಮಾಜ ಕಮ್ಯುನಿಸ್ಟ್ ವ್ಯವಸ್ಥೆಯ ಕಡೆಗೆ ಸಾಗುವಾಗಿನ ಸಂಕ್ರಮಣಾವಸ್ಥೆಯನ್ನೇ ಕಮ್ಯುನಿಸ್ಟರು 'ಸಮಾಜವಾದ' ಎನ್ನುತ್ತಾರೆ. ಅಲ್ಲದೆ

ಇಂದು 'ವೈಜ್ಞಾನಿಕ ಸಮಾಜವಾದ' ಎಂದೂ ಹೇಳುತ್ತಾರೆ. ಅದೇ ರೀತಿ ಅರಾಜಕತಾವಾದಿಗಳು ತಮ್ಮನ್ನು 'ಸ್ವಾತಂತ್ರ್ಯ ಪ್ರಿಯ ಸಮಾಜವಾದಿಗಳು' ಎಂದು ಕರೆದುಕೊಳ್ಳುವರು. ಜೊತೆಗೆ ಇನ್ನು ಹಲವರು ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ಅನುಸರಿಸುವ ಮಾರ್ಗಗಳನ್ನೇ ಸಮಾಜವಾದ ಎನ್ನುತ್ತಾರೆ.

ಸಮಾಜವಾದ ಹಾಗೂ ಸಮಾಜವಾದಿ ಎಂಬ ಶಬ್ದಗಳು ೧೮೦೩ ರಲ್ಲಿ ಪ್ರಪ್ರಥಮಬಾರಿಗೆ ಇಟಾಲಿಯನ್ ಭಾಷೆಯಲ್ಲಿ ಅಚ್ಚಾಗಿದ್ದು ಕಂಡುಬರುತ್ತದೆ. ನಂತರ ಇಂಗ್ಲೆಂಡಿನಲ್ಲಿ ರಾಬರ್ಟ್ ಓವೆನ್‌ವಾದಿಗಳನ್ನು ನಿರ್ದೇಶಿಸಲು ಓವೆನ್‌ನ ಅನುಯಾಯಿಗಳು ಪ್ರಕಟಿಸುತ್ತಿದ್ದ 'ಸಹಕಾರಿ ಪತ್ರಿಕೆ'ಯಲ್ಲಿ 'ಸಮಾಜವಾದಿ' ಎಂಬ ಶಬ್ದವನ್ನು ಅಚ್ಚಿನಲ್ಲಿ ಬಳಸಿರುವುದು ಕಾಣಬರುತ್ತದೆ.[೧] ಈ ಸಮಾಜವಾದ ಎಂಬ ಪದವು ಆಂಗ್ಲ ಭಾಷೆಯ ಸೋಸಿಯಲಿಸಂ ಎಂಬುದರ ಅನುವಾದ. ಈ ಸೋಸಿಯಲಿಸಂ ಎಂಬ ಪದವು 'ಸೋಷಿಯಸ್' ಎಂಬುದರ ಮೂಲವಾಗಿದೆ. ಸೋಷಿಯಸ್ ಎಂದರೆ ಸಮಾಜ ಎಂದು ಅರ್ಥ. ಇದರಿಂದ ಸಮಾಜವಾದ ಎಂದರೆ ಸಮಾಜಕ್ಕೆ ಸಂಬಂಧಿಸಿದಂತಹವುದು ಎಂದಾಗುತ್ತದೆ.

ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಗ್ರಾಕ್ಕುಸ್ ಬಬಫ್ ಪ್ರಕಟಿಸಿದ 'ಸಮಾನರ ಪ್ರಣಾಳಿಕೆ'ಯನ್ನೇ ಮೊದಲ ಸಮಾಜವಾದಿ ಘೋಷಣೆ ಎಂದು ಪರಿಗಣಿಸಲಾಗುತ್ತದೆ. ಇಂದಿಗೂ ಸಮಾಜವಾದದ ಮೂಲತತ್ವಗಳೆಂದು ಒಪ್ಪಿಕೊಳ್ಳಲಾಗುವ 'ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರಭಾವ'ಗಳನ್ನು ನೀಡಿದವನೇ ಈ ಬಬಫ್.[೨] ಒಟ್ಟಿನಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನತೆ ಲಭಿಸಿದ ಬಳಿಕ ಸಾಧಿಸಬೇಕಾದದ್ದು ಸೋದರತೆ, ಈ ಮೂರರ ಮೊತ್ತವೇ ಸಮಾಜವಾದ. ಇನ್ನೂ ಸರಳವಾಗಿ ಹೇಳುವುದಾದರೆ ಸಮಾಜದ ಸಮಸ್ತರ ಹಿತವನ್ನು ಕಾಪಾಡುವ ಸಿದ್ಧಾಂತವೇ ಸಮಾಜವಾದ.

ಸಮಾಜವಾದಿ ಇತಿಹಾಸಕಾರ ಜಾರ್ಜ್ ಲೈಥ್ಯಾಮ್ 'ಸಮಾಜವಾದ ಎಂದರೆ, ಮೊದಲನೆಯದಾಗಿ ಆಸ್ತಿಯ ಸಿದ್ಧಾಂತವಲ್ಲ, ರಾಜ್ಯ ವ್ಯವಸ್ಥೆಯ ಬಗೆಗಿನ ಸಿದ್ಧಾಂತವೂ ಅಲ್ಲ. ಸಮಾಜವಾದ ಸಮಾನತೆಯ ಬಗೆಗಿನ ಸಿದ್ಧಾಂತ. ಸಮಾನತೆಯ ಬಗೆಗಿನ ಒತ್ತಾಸೆ ಎಲ್ಲಾ ಸಮಾಜವಾದಿಗಳನ್ನು ಒಟ್ಟಿಗೆ ತರುತ್ತದೆ, ಮಿಕ್ಕುಳಿದ ಎಲ್ಲಾ ವಿಷಯಗಳ ಬಗ್ಗೆ ಅವರಲ್ಲಿ ಭಿನ್ನಾಭಿಪ್ರಾಯವಿದೆ' ಎಂದು ಹೇಳುತ್ತಾರೆ.[೩]

ರಾಜ್ಯಶಾಸ್ತ್ರದ ಪ್ರಸಿದ್ಧ ಪಂಡಿತರಾದ ಸಿ.ಇ.ಎಂ. ಜೋಡ್‌ರವರ ಅಭಿಪ್ರಾಯದಲ್ಲಿ ಸಮಾಜವಾದ ಒಂದು ವಿಶಿಷ್ಟ ಸಿದ್ಧಾಂತವಷ್ಟೇ ಅಲ್ಲ, ಅದು ಒಂದು ಚಳವಳಿ, ಅದು ರಾಜಕೀಯ ಸಿದ್ಧಾಂತವಷ್ಟೇ ಅಲ್ಲ, ಆರ್ಥಿಕ ಹಾಗೂ ಸಾಮಾಜಿಕ ಸೂತ್ರಗಳನ್ನು ಒಳಗೊಂಡ ಒಂದು ಮಹೋನ್ನತ ಜೀವನ ಧರ್ಮಕೋಶ. ಈ ಹೇಳಿಕೆಯನ್ನು ವಿಮರ್ಶಿಸಿ ನೋಡುವುದಾದರೆ ಸಮಾಜವಾದ ಕೇವಲ ರಾಜಕೀಯ ಸಿದ್ಧಾಂತವಷ್ಟೇ ಆಗಿರದೆ ವಿಶಾಲಾರ್ಥದಲ್ಲಿ ಅದು ಒಂದು ಚಳವಳಿಯಾಗಿದೆ. ಈ ಚಳವಳಿ ಎಂಬ ಪದ ಹಲವಾರು ಅಂಶಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಹೀಗೆ ಚಳವಳಿ ಎಂಬುದು ಹಲವು ಹತ್ತು ಕ್ಷೇತ್ರಗಳಿಗೆ

ಸಂಬಂಧಿಸಿದಂತೆ ಸುಧಾರಣೆಗೋಸ್ಕರ ನಡೆಯುವ ಹೋರಾಟವಾಗಿದೆ. ಅಂದ ಮೇಲೆ ಜೋಡ್‌ರ ಅಭಿಪ್ರಾಯದಲ್ಲಿ ಸಮಾಜವಾದ ಸುಧಾರಣೆಗೋಸ್ಕರ ಜನಸಾಮಾನ್ಯರು ನಡೆಸುವ ಹೋರಾಟವೇ ಆಗಿದೆ. 'ಇಂದು ಬೆಳೆದು ನಿಂತಿರುವಂತೆ ಸಮಾಜವಾದ, ಫ್ರೆಂಚ್ ಕ್ರಾಂತಿ ಹಾಗೂ ಔದ್ಯೋಗಿಕ ಕ್ರಾಂತಿಗಳು ಪ್ರಾರಂಭಿಸಿದ ವಿಶಾಲ ಬೆಳವಣಿಗೆಗಳ ಪರಿಣಾಮ ಸ್ವರೂಪವಾಗಿ ಹುಟ್ಟಿದ್ದು' ಎಂಬುದು ಭಾರತದ ಪ್ರಮುಖ ಸಮಾಜವಾದಿ ನಾಯಕರಲ್ಲೊಬ್ಬರಾದ ಅಶೋಕ್ ಮೆಹತಾರವರ ಅಭಿಪ್ರಾಯ.[೪]

ಬರ್ಟ್ರಂಡ್ ರಸಲ್‌ರವರ ಪ್ರಕಾರ "ಆಸ್ತಿ ಮತ್ತು ಬಂಡವಾಳವು ಸಮಾಜದ ಹಿಡಿತಕ್ಕೊಳಪಟ್ಟಿರುವುದೇ ಸಮಾಜವಾದ"ವಾಗಿದೆ.

ಮಹಾತ್ಮಗಾಂಧೀಜಿಯವರು 'ಸಮಾಜದ ಜನರೆಲ್ಲರೂ ಸಮಾನವಾಗಿರುವುದು' ಸಮಾಜವಾದ ಎಂದು ಪ್ರತಿಪಾದಿಸುತ್ತಾರೆ.

ಜವಹರಲಾಲ್ ನೆಹರು ಪ್ರಕಾರ 'ಉತ್ಪಾದನೆ ಹಾಗೂ ವಿತರಣಾ ಸಾಧನಗಳು ರಾಜ್ಯದ ನಿಯಂತ್ರಣಕ್ಕೊಳಪಟ್ಟಿರುವುದೇ' ಸಮಾಜವಾದವಾದರೆ, ಎ.ಸಿ. ಪಿಗುರವರ ಪ್ರಕಾರ 'ಉತ್ಪಾದನಾಂಶಗಳ ಮೇಲೆ ಸಮಾಜದ ಹತೋಟಿ ಇರುವುದೇ' ಸಮಾಜವಾದವಾಗಿದೆ.

ಜಯಪ್ರಕಾಶ್ ನಾರಾಯಣರವರು 'ವ್ಯಕ್ತಿಯು ಸ್ವಯಂ ಹಿತವನ್ನು ಅಥವಾ ಇಚ್ಛೆಯನ್ನು ಸಮಾಜದ ಹಿತಕ್ಕಾಗಿ ಒಪ್ಪಿಸುವುದು' ಸಮಾಜವಾದವಾಗಿದೆ ಎಂದರೆ, ನರೇಂದ್ರದೇವರವರು 'ವರ್ಗರಹಿತ ಸಮಾಜದ ಉದ್ದೇಶ'ವೇ ಸಮಾಜವಾದ ಎಂದಿದ್ದಾರೆ.

ಎಮಿಲಿ ಪ್ರಕಾರ ಸಮಾಜವಾದವೆಂದರೆ 'ಬಂಡವಾಳಶಾಹಿ ಸಂಪತ್ತನ್ನು ಸಾಮಾಜಿಕ ಸಂಪತ್ತಾಗಿಸಿ ಕಾರ್ಮಿಕ ಸಂಘಟನೆಯು ರಾಜಕೀಯ ಅಧಿಕಾರವನ್ನು ಅಧೀನಗೊಳಿಸಿಕೊಳ್ಳುವುದು' ಆಗಿದೆ.

ಸಮಾಜವಾದವನ್ನು ವ್ಯಾಖ್ಯಾನಿಸುವಲ್ಲಿ ಇಷ್ಟೊಂದು ವೈಪರೀತ್ಯಗಳು ಇದ್ದಾಗ್ಯೂ ಸಹ ಸಮಾಜವಾದವು ಬಂಡವಾಳಶಾಹಿಯ ಶತ್ರು ಎಂದು ಪರಿಗಣಿಸಬಹುದಾಗಿದೆ. ಬಂಡವಾಳಶಾಹಿಯನ್ನು ಅಂತ್ಯಗೊಳಿಸುವುದೇ ಅದರ ಮೂಲ ಉದ್ದೇಶವಾಗಿದೆ. ಉತ್ಪಾದನೆಯ ಅಂಗಗಳ ಮೇಲೆ ಸಮಾಜವಾದವು ಸಾಮಾಜಿಕ ನಿಯಂತ್ರಣವನ್ನು ಹೇರಬಯಸುತ್ತದೆ. ಖಾಸಗೀ ಆಸ್ತಿಯನ್ನು ಹಾಗೂ ಖಾಸಗಿ ಹೂಡಿಕೆಯನ್ನು ವಿರೋಧಿಸುತ್ತದೆ. ಪ್ರತಿಯೊಬ್ಬರ ಪ್ರಗತಿಗಾಗಿ ಸಮಾನ ಅವಕಾಶಗಳನ್ನು ಕಲ್ಪಿಸುತ್ತದೆ.

ಸಮಾಜವಾದಿ ವಿಚಾರಧಾರೆಯ ಉಗಮ ಫ್ರಾನ್ಸ್‌ನ ರಾಜ್ಯಕ್ರಾಂತಿಯ ಮೂರು ಸಿದ್ಧಾಂತಗಳಾದ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಭಾವನೆಯ ಫಲಸ್ವರೂಪವಾಗಿ ಆಯಿತು. ಸ್ವಾತಂತ್ರ್ಯದ ಸಿದ್ಧಾಂತ ವಿಶ್ವದ ಮಾನವ ಸಮುದಾಯಕ್ಕೆ ರಾಷ್ಟ್ರೀಯತೆಯ ವಿಚಾರ ನೀಡಿದರೆ ಸಮಾನತೆ ಹಾಗೂ ಭ್ರಾತೃತ್ವದ ಪರಿಣಾಮವಾಗಿ ಪ್ರಜಾಪ್ರಭುತ್ವ ಹಾಗೂ ಸಮಾಜವಾದಿ ವಿಚಾರಧಾರೆಯ ವಿಕಾಸವಾಯಿತು. ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಸಿದ್ಧಾಂತಗಳ ಫಲಸ್ವರೂಪವಾಗಿ

ಜಗತ್ತಿನಲ್ಲಿ ದಾಸ್ಯದಿಂದ ಜರ್ಜರಿತಗೊಂಡ ಮನುಷ್ಯನಿಗೆ ವಿಮೋಚನೆಯ ಮಾರ್ಗ ಸಿಕ್ಕಿತು. ಇದೇ ಸ್ವಾತಂತ್ರ್ಯದ ಭಾವನೆಯ ಪರಿಣಾಮವಾಗಿ ಜಗತ್ತಿನಲ್ಲಿ ಪ್ರಜಾಪ್ರಭುತ್ವ ಹಾಗೂ ಸರ್ವಾಧಿಕಾರಿ ವ್ಯವಸ್ಥೆಗಳ ಪರಾಭವವಾಯಿತು ಹಾಗೂ ಜಗತ್ತಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ನೆಲೆಗೊಂಡಿತು. ಸಮಾನತೆಯ ಸಿದ್ಧಾಂತ ಮಾನವ ಸಮುದಾಯ ಹಾಗೂ ರಾಷ್ಟ್ರಗಳ ಮೂಲಕವೇ ಪರಸ್ಪರ ಸಮಾನತೆಯ ಭಾವನೆ ಜಾಗೃತಗೊಂಡಿತು. ಅದರಿಂದ ಪ್ರಭಾವಿತಗೊಂಡ ಜಗತ್ತಿನ ಹೆಚ್ಚಿನ ರಾಷ್ಟ್ರಗಳು ಸಾಂವಿಧಾನಿಕವಾಗಿ ಎಲ್ಲಾ ನಾಗರಿಕರಿಗೆ ಸಮಾನ ಮೌಲಿಕ ಹಕ್ಕುಗಳನ್ನು ನೀಡಿದವು.[೫]

ಸಮಾಜವಾದದಲ್ಲಿ ರೂಢಿಗತವಾಗಿ ಬಂದಿರುವ ಅರ್ಥ, ಕಲ್ಪನೆ ಮತ್ತು ವ್ಯಾಪ್ತಿಗಳನ್ನು ಮೀರಿದ ವಿಭಿನ್ನ ಒಲವುಗಳೂ ಕಾಲಾಂತರದಲ್ಲಿ ಬೆಳೆದುಬಂದಿವೆ. ಅಂದರೆ ಸಮಾಜವಾದದ ಮೂಲ ಕಲ್ಪನೆಯನ್ನು ಮೀರಿ ಅದರಾಚೆಗಿನ ಆಯಾಮಗಳನ್ನು ಗುರುತಿಸಲಾಗಿದೆ.

ಸಮಾಜವಾದದ ಮೂಲ ಪ್ರೇರಣೆಯಾದ 'ಸಮಾನತೆ'ಯಲ್ಲಿ ಸಮಾಜವಾದ ನೈಜ ಅರ್ಥವನ್ನು ಸಮಾಜವಾದಿಗಳು ಗುರುತಿಸುತ್ತಾರೆ. ಅವರ ಪ್ರಕಾರ 'ಸಮಾನತೆ'ಯೇ ಸಮಾಜದ ಅಳತೆಗೋಲು ಸಮಾನತೆ ಇಲ್ಲದೇ ಸಮಾಜವಾದವಿಲ್ಲ ಎಂದು ರಾಯ್ ಜೆಂಕಿನ್ಸ್ ಘೋಷಿಸುತ್ತಾರೆ.[೬]

ಸಮಾಜವಾದ ಇಡೀ ಜಗತ್ತಿನಲ್ಲಿ ಅತ್ಯಂತ ಜನಪ್ರಿಯ ಶಬ್ದವಾಗಿದೆ. ಜಗತ್ತಿನ ಬಹುಸಂಖ್ಯೆ ರಾಷ್ಟ್ರಗಳು, ಅದರಲ್ಲೂ ಮೂರನೇ ಜಗತ್ತಿನ ಹಿಂದುಳಿದ ಬಡರಾಷ್ಟ್ರಗಳು ಸಮಾಜವಾದವನ್ನೇ ತಮ್ಮ ಗುರಿ ಎಂದು ಘೋಷಿಸಿದ್ದವು. ಒಂದೆಡೆ ಬಂಡವಾಳವಾದಿ ರಾಷ್ಟ್ರಗಳು ಕ್ರಮೇಣ ಕಲ್ಯಾಣ ರಾಜ್ಯಗಳಾಗಿ ಪರಿವರ್ತನೆ ಹೊಂದುತ್ತಿದ್ದರೆ ಇನ್ನೊಂದೆಡೆಗೆ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಜನತಂತ್ರ ಹಾಗೂ ಸ್ವಾತಂತ್ರ್ಯಗಳೆಡೆಗೆ ಒಲವು, ಹೆಚ್ಚಿತು.[೭]

ಒಟ್ಟಿನಲ್ಲಿ ಹಳೆಯ ಜಾಡುಗಳನ್ನು ಬಿಟ್ಟು ಸಮಾಜವಾದಿಗಳು ಬದಲಾದ ಪರಿಸ್ಥಿತಿಯಲ್ಲಿ ಸಮಾಜವಾದವನ್ನು ಪುನರ್ ವ್ಯಾಖ್ಯಾನಿಸುವಲ್ಲಿ ಪ್ರಯತ್ನಿಸುತ್ತಿರುವುದನ್ನು ಕಾಣಬಹುದು. ಒಂದು ರಾಷ್ಟ್ರ ಎಷ್ಟರಮಟ್ಟಿಗೆ ಸಮಾಜವಾದಿ ರಾಷ್ಟ್ರ ಎಂದು ನಿರ್ಧಾರ ತೆಗೆದುಕೊಳ್ಳುವಾಗ ಸಮಾನತೆಯನ್ನು ಅಲ್ಲಿ ಅಳತೆಗೋಲಾಗಿ ಪರಿಗಣಿಸಲಾಗುತ್ತಿದೆ. ಈ 'ಸಮಾನತೆ' ಎಂಬ ಆದರ್ಶವನ್ನು ಬರೀ ಒಂದು ರಾಷ್ಟ್ರದ ಗಡಿ ಅಥವಾ ವ್ಯಾಪ್ತಿಯೊಳಗೆ ಸಾಧಿಸುವುದು ಅಸಾಧ್ಯವಾದುದು ಎಂಬುದನ್ನು ಅರಿತು, ರಾಷ್ಟ್ರ-ರಾಷ್ಟ್ರಗಳ ನಡುವೆಯೂ ಸಮಾನತೆಯನ್ನು ಸಾಧಿಸಲು ಪ್ರಯತ್ನಿಸಬೇಕು ಎನ್ನುವ ಮುಖಾಂತರ ಸಮಾಜವಾದದ ನೈಜವಾದ ಅಂತರಾಷ್ಟ್ರೀಯ ಆಯಾಮವನ್ನು ಗುರುತಿಸಲು ಶ್ರಮವಹಿಸುತ್ತಿದ್ದಾರೆ.

೩.೨. ಸಮಾಜವಾದ ಭಾರತ ಹಾಗೂ ಕರ್ನಾಟಕದ ಆಯಾಮ

ಆಂತರಿಕ ಶೋಷಣೆ ಮತ್ತು ಬಾಹ್ಯ ಸಾಮ್ರಾಜ್ಯಶಾಹಿ ಕಪಿಮುಷ್ಟಿಯ ವಿಚಾರಗಳು ಇವತ್ತಿಗೂ ಕೂಡ ಜನಮಾನಸದಲ್ಲಿ ದಂಗೆಕೋರ ಮನೋಭಾವವನ್ನು ಸೃಜಿಸುತ್ತ ಸಮಾಜದ ಪರಿವರ್ತನೆಗಾಗಿ ಹಂಬಲಿಸುವುದನ್ನು ಕಾಣುತ್ತೇವೆ.

ಸಮಾಜವಾದ ಇಂದು ಇಡೀ ಜಗತ್ತಿನಲ್ಲೇ ಅತ್ಯಂತ ಜನಪ್ರಿಯ ಸಿದ್ಧಾಂತವಾಗಿದೆ. ಬಂಡವಾಳಶಾಹಿ ರಾಷ್ಟ್ರಗಳು ಹಾಗೂ ಕಮ್ಯುನಿಸ್ಟ್ ರಾಷ್ಟ್ರಗಳೂ ಸಹ ಕಲ್ಯಾಣ ರಾಷ್ಟ್ರಗಳಾಗಿ ರೂಪಾಂತರಗೊಳ್ಳುವ ಮೂಲಕ ಸಮಾಜವಾದದ ಪ್ರತಿಪಾದನೆಯನ್ನು ಮಾಡುವುದನ್ನು ಕಾಣುತ್ತೇವೆ. ಈ ದೃಷ್ಟಿಯಿಂದ ಪ್ರಪಂಚದ ಒಂದು ಬಹುಮುಖ್ಯ ಹಾಗೂ ಪ್ರಬಲ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದಲ್ಲಿಯೂ ಸಹ ಸಮಾಜವಾದ ತನ್ನದೇ ಆದ ಚಾರಿತ್ರಿಕ ಹಾಗೂ ವರ್ತಮಾನದ ಸ್ಥಾನವನ್ನು ಹೊಂದಿದೆ.

ಭಾರತದಲ್ಲಿ ಕೆಲವು ತರುಣರ ಒಂದು ಗುಂಪು ದಾಸ್ಯ ಸಂಕೋಲೆಗಳಿಂದ ವಿಮುಕ್ತಗೊಳ್ಳುವ ಭಾರತವನ್ನು 'ಸಮಾನತೆ'ಯ ಮೇಲೆ ರೂಪಿಸಬೇಕೆನ್ನುವ ದೊಡ್ಡ ಕನಸನ್ನು ಹೊಂದಿತ್ತು. ಈ ರೀತಿಯ ಸಮಾನ ಮನೋವೃತ್ತಿಯವರ ತಂಡ ಕ್ರಿ.ಶ. ೧೯೩೪ರಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಒಂದು ಸ್ವತಂತ್ರ ಗುಂಪಾಗಿ ಅಸ್ತಿತ್ವಕ್ಕೆ ಬಂತು. ಪ್ರಜ್ಞಾಪೂರ್ವಕವಾದ ಪಾಶ್ಚಿಮಾತ್ಯ ಚಿಂತನೆಗಳಿಂದಾಗಿ ಪ್ರಥಮ ಹಂತದಲ್ಲಿ ಕಾಂಗ್ರೆಸ್ ಸಮಾಜವಾದಿಗಳು ಮಾರ್ಕ್ಸ್‌ವಾದಿ ಆಲೋಚನಾ ಕ್ರಮಗಳಲ್ಲಿ ಭಾರತೀಯ ಸಮಾಜವಾದಿ ಚಳವಳಿಯನ್ನು ರೂಪಿಸಲು ಪ್ರಯತ್ನಿಸಿದರು. ಆದ್ದರಿಂದ ೧೯೩೪ರಿಂದ ೧೯೪೭ರವರೆಗೆ ಸಮಾಜವಾದಿ ಮತ್ತು ಭಾರತೀಯ ಕಮ್ಯುನಿಸ್ಟ್ ಚಳವಳಿಗೆ ಸೈದ್ಧಾಂತಿಕವಾಗಿ ಯಾವುದೇ ತರದ ವೈವಿಧ್ಯತೆ ಇರಲಿಲ್ಲ ಎಂಬುದನ್ನು ನಾವು ಗಮನಿಸಬೇಕು.[೮]

೧೯೩೪ಕ್ಕಿಂತ ಮೊದಲು ಮಾರ್ಕ್ಸ್‌ವಾದ, ಸಮಾಜವಾದಗಳಲ್ಲಿ ನಂಬಿಕೆಯಿರುವವರು ಇದ್ದಿರಬಹುದಾದರೂ ಸಮಾಜವಾದಿ ಚಳವಳಿ ಪ್ರಾರಂಭವಾಗಿದ್ದು ೧೯೩೪ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಯಿಂದಲೇ. ಈ ಸಮಾಜವಾದಿ ಚಳವಳಿಯ ಪ್ರಾರಂಭಕ್ಕೆ ಪ್ರಮುಖವಾಗಿ ಮೂರು ಕಾರಣಗಳು ಕಂಡುಬರುತ್ತವೆ. ಮೊದಲನೆಯದು, ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಹಲವಾರು ಮುಖಂಡರು ಮಾರ್ಕ್ಸ್‌ವಾದ, ಸಮಾಜವಾದಗಳ ಪ್ರಭಾವಕ್ಕೆ ಒಳಗಾಗಿದ್ದು, ಎರಡನೆಯದು, ೧೯೩೨ರ ನಂತರ ಪ್ರಾರಂಭವಾಗಿದ್ದ ಕಾನೂನುಭಂಗ ಚಳವಳಿ ತಣ್ಣಗಾಗಿ ದೇಶದಲ್ಲಿ ಹಾಗೂ ಕಾಂಗ್ರೆಸ್ಸಿನಲ್ಲಿ ಬಲಪಂಥೀಯರ ಪ್ರಭಾವ ಹೆಚ್ಚಾಗಲು ಪ್ರಾರಂಭವಾಗಿದ್ದು. ಮೂರನೆಯದು, ಕಾನೂನುಭಂಗ ಚಳವಳಿಯಲ್ಲಿ ಬಂಧಿತರಾದ ಹಲವಾರು ಪ್ರಮುಖ ಸಮಾಜವಾದಿ ಮುಖಂಡರನ್ನು ಬ್ರಿಟೀಷರು ಅದೃಷ್ಟವಶಾತ್ ನಾಸಿಕ್ ಜೈಲಿನಲ್ಲಿ ಒಂದಡೆ ಇಟ್ಟಿದ್ದು.[೯]

ಭಾರತದ ಸಮಾಜವಾದಿ ಚಳವಳಿಯನ್ನು ಹೊಸ ಆಯಾಮಗಳೊಂದಿಗೆ ಅರ್ಥೈಸಲು ಪ್ರಯತ್ನಿಸಿದವರಲ್ಲಿ ಲೋಹಿಯಾರೊಬ್ಬರೆ. ಆದ್ದರಿಂದ ಲೋಹಿಯಾ ನೇತೃತ್ವದ ಚಳವಳಿಯನ್ನು ಅರ್ಥೈಸುವುದೆಂದರೆ, ಭಾರತೀಯ ಸಮಾಜವಾದಿ ಚಳವಳಿಯನ್ನು ಎಲ್ಲಾ ದಿಕ್ಕುಗಳಿಂದ ಅರ್ಥೈಸಿದ ಹಾಗೆ. ಈ ಹಿನ್ನೆಲೆಯಿಂದ ಸ್ಥೂಲವಾಗಿ ಭಾರತೀಯ ಸಮಾಜವಾದಿ ಚಳವಳಿಯನ್ನು ದೃಷ್ಟಿಸಿದಾಗ, ಅಶೋಕ ಮೆಹತ, ಜವಹರಲಾಲ್‌ನೆಹರೂರವರ ಚಮತ್ಕಾರಯುಕ್ತವಾದ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಕಾಂಗ್ರೆಸ್ ಸೇರಿದ್ದು, ಜಯಪ್ರಕಾಶ್ ನಾರಾಯಣ ಪಕ್ಷರಹಿತ ಪ್ರಜಾಪ್ರಭುತ್ವವೆನ್ನುತ್ತ ಸರ್ವೋದಯ

ಚಳವಳಿಗೆ ಧುಮಿಕಿದ್ದು, ಲೋಹಿಯಾ ಮೂಲಭೂತ ಬದಲಾವಣೆಗಾಗಿ ಹೊಸ ಸಮಾಜವಾದಿ ಪಕ್ಷ ರೂಪಿಸಿದ್ದು, ಭಾರತೀಯ ಸಮಾಜವಾದಿ ಚಳವಳಿಯ ಬೆಳವಣಿಗೆಯ ಹಂತದಲ್ಲಿ ವ್ಯಕ್ತಗೊಂಡ ಸಾಂಕೇತಿಕ ಪ್ರತಿಕ್ರಿಯೆ ಅಷ್ಟೆ. ಇಲ್ಲಿ ನಾವು ಅರಿತುಕೊಳ್ಳಬೇಕಾಗಿರುವುದೇನೆಂದರೆ ಲೋಹಿಯಾ ನೇತೃತ್ವದ ಚಳವಳಿ ತಾತ್ವಿಕವಾಗಿ ಸ್ಥೂಲ ಕಲ್ಪನೆಯನ್ನು ಕೊಟ್ಟಂತಹದು.[೧೦]

ಕ್ರಿ.ಶ. ೧೯೪೨ರಲ್ಲಿ ಪ್ರಾರಂಭವಾದ 'ಭಾರತ ಬಿಟ್ಟು ತೊಲಗಿ' ಆಂದೋಲನದಲ್ಲಿ ಭಾಗವಹಿಸಿದ್ದಾಗ ಸಮಾಜವಾದಿ ಮುಖಂಡರು ಬಂಧನಕ್ಕೊಳಗಾದರು. ಈ ವೇಳೆಯಲ್ಲಿಯೇ ಮಾರ್ಕ್ಸ್‌ವಾದದ ಪುನರ್ವಿಮರ್ಶೆ ಪ್ರಾರಂಭವಾಯಿತು. ಅಂದು ಪ್ರಮುಖ ಸಮಾಜವಾದಿಗಳು ನಡೆಸಿದ್ದ, ಸೈದ್ಧಾಂತಿಕ ಚರ್ಚೆಗೆ ಮಿನೂಮಸಾನಿ ಹಾಗೂ ರಾಮಮನೋಹರ ಲೋಹಿಯಾ ಧ್ವನಿ ನೀಡಿದರು. ಮಿನೂಮಸಾನಿ ತಮ್ಮ 'ಸಮಾಜವಾದದ ಪುನರ್ವಿಮರ್ಶೆ'ಯಲ್ಲಿ ಮಾರ್ಕ್ಸ್‌ವಾದವನ್ನು ರಾಜಕೀಯ ಒರೆಗಲ್ಲಿಗೆ ಹಚ್ಚಿ ತಿಕ್ಕಿ ತಿರಸ್ಕರಿಸಿದರೆ, ರಾಮಮನೋಹರ ಲೋಹಿಯಾ ತಮ್ಮ 'ಮಾರ್ಕ್ಸ್‌ನ ಅನಂತರದ ಅರ್ಥಶಾಸ್ತ್ರದಲ್ಲಿ' ಮಾರ್ಕ್ಸ್‌ವಾದವನ್ನು ಅರ್ಥಶಾಸ್ತ್ರದ ಒರೆಗಲ್ಲಿಗೆ ಹಚ್ಚಿ ತಿಕ್ಕಿ ತಿರಸ್ಕರಿಸಿದರು.[೧೧]

ಭಾರತದ ಸಮಾಜವಾದಿಗಳು ಒಂದೆಡೆ ಕಾರ್ಲ್‌ಮಾರ್ಕ್ಸ್‌ನ ಚಿಂತನೆಗಳಿಂದ ಭ್ರಮನಿರಸಗೊಳ್ಳುತ್ತಿದ್ದ ವೇಳೆಯಲ್ಲಿಯೇ ಮತ್ತೊಂದೆಡೆ ಗಾಂಧೀಜಿಯ ವಿಚಾರಗಳಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗುತ್ತಿದ್ದರು. ಕಾರ್ಲ್‌ಮಾರ್ಕ್ಸ್‌ನ ವಾದವನ್ನು ಪರಿಷ್ಕರಿಸಿ ಜನತಾಂತ್ರಿಕ ಸಮಾಜವಾದದೊಂದಿಗೆ ಗಾಂಧೀವಾದವನ್ನು ಬೆಸೆಯುವ ಪ್ರಯತ್ನಗಳಲ್ಲಿಯೇ ಭಾರತದ ಸಮಾಜವಾದಿಗಳು ತಮ್ಮ ನವೀನ ಸೈದ್ಧಾಂತಿಕ ನೆಲೆಗಟ್ಟನ್ನು ಕಂಡುಕೊಂಡರು. ಭಾರತದ ಸಂದರ್ಭದಲ್ಲಿ ಬಂಡವಾಳವಾದ ಹಾಗೂ ಕಮ್ಯುನಿಸಂಗಳೆರಡೂ ಸಮಾನವಾಗಿ ಅಸಂಬದ್ಧವಾದ ಸಿದ್ಧಾಂತಗಳು ಎಂಬುದನ್ನು ಲೋಹಿಯ ತೋರಿಸಿಕೊಟ್ಟರು.

ರೈತವರ್ಗವನ್ನು ಕಾರ್ಲ್‌ಮಾರ್ಕ್ಸ್ ಪ್ರತಿಗಾಮಿ ವರ್ಗವೆಂದು ಕರೆದಿದ್ದರೂ ಭಾರತದ ಸಂದರ್ಭದಲ್ಲಿ ಅದರ ಕ್ರಾಂತಿಕಾರಿ ಶಕ್ತಿಯನ್ನು ಅರಿತ ಆಚಾರ್ಯ ನರೇಂದ್ರ ದೇವ 'ಕಿಸಾನ್ ಸಭೆ'ಯನ್ನು ಸಂಘಟಿಸಿದರು. ಸಾಮಂತಶಾಹಿ ಸಮಾಜ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಲು ಈ ಕ್ರಾಂತಿಕಾರಿ ಶಕ್ತಿಯನ್ನು ಉಪಯೋಗಿಸಿಕೊಳ್ಳುವ ಸದುದ್ದೇಶದಿಂದ ಸಮಾಜವಾದಿಗಳು 'ಉಳುವವನಿಗೆ ಭೂಮಿ' ಎಂಬ ಧ್ಯೇಯ ವಾಕ್ಯವನ್ನು ಕೊಟ್ಟರು.

ಮಾರ್ಕ್ಸ್‌ವಾದಿ ಜನತಾಂತ್ರಿಕ ಕೇಂದ್ರೀಕರಣವನ್ನು ತಿರಸ್ಕರಿಸಿದ ಭಾರತದ ಸಮಾಜವಾದಿಗಳು ಯುರೋಪಿನ ಜನತಾಂತ್ರಿಕ ಸಮಾಜವಾದಿಗಳ ವಿಕೇಂದ್ರಿಕರಣವಾದವನ್ನು ಮೈಗೂಡಿಸಿಕೊಂಡರು. ರಾಜಕೀಯ ವಿಕೇಂದ್ರೀಕರಣಕ್ಕೆ ಪೂರಕವಾಗುವಂತೆ, ಮಹಾತ್ಮಾಗಾಂಧಿಯ ಚರಕದ ಕಲ್ಪನೆಯನ್ನೇ ಆಧುನಿಕ ಉತ್ಪಾದನಾ ವಿಧಾನಗಳಿಗೆ ಹೆಚ್ಚು ಸಂಬಂಧಗೊಳಿಸಿ ಲೋಹಿಯಾ ಸಣ್ಣ ಯಂತ್ರಗಳ ಹೊಸ ಆರ್ಥಿಕ ವ್ಯವಸ್ಥೆಯನ್ನು ಪರಿಕಲ್ಪಿಸಿದರು.[೧೨]

ಸಮಾಜದ ಪರಿವರ್ತನೆಗೆ ಕಮ್ಯುನಿಸ್ಟರು ಹೇಳುತ್ತಿದ್ದ ಹಿಂಸಾದಾರಿಯನ್ನು ಕೈಬಿಟ್ಟ ಭಾರತದ ಸಮಾಜವಾದಿಗಳು ಅಹಿಂಸಾತ್ಮಕ ಸತ್ಯಾಗ್ರಹ ಹಾಗೂ ಹೋರಾಟಗಳ ತಂತ್ರವನ್ನು ಅಳವಡಿಸಿಕೊಂಡರು.

ಭಾರತದ ಸಂದರ್ಭ, ಇಲ್ಲಿನ ಸಾಮಾಜಿಕ ವ್ಯವಸ್ಥೆ, ಸಂಸ್ಕೃತಿ, ವ್ಯವಸಾಯ ಪ್ರಧಾನ ಆರ್ಥಿಕ ವ್ಯವಸ್ಥೆ ಮೊದಲಾದವುಗಳನ್ನು ಗಮನದಲ್ಲಿಟ್ಟುಕೊಂಡ ಲೋಹಿಯಾ, ಜಯಪ್ರಕಾಶ್‌ನಾರಾಯಣ್ ರೀತಿಯ ಸಮಾಜವಾದಿ ನಾಯಕರು ಭಾರತದ ಪರಿಸ್ಥಿತಿಗೆ ತಕ್ಕಂತೆ ಸಮಾಜವಾದಿ ಸಿದ್ಧಾಂತವನ್ನು ಪರಿಷ್ಕೃತಗೊಳಿಸಿ ಅದಕ್ಕೆ ದೇಶೀಯತೆ ಕವಚ ತೊಡಿಸಿದ್ದನ್ನು ನಾವು ಕಾಣಬಹುದು. ೧೯೪೨ರ 'ಚಲೇಜಾವ್' ಚಳವಳಿಯಲ್ಲಿ ಸಮಾಜವಾದಿಗಳು ಪ್ರಮುಖ ಪಾತ್ರವಹಿಸಿದ್ದರು. ಕಾಂಗ್ರೆಸ್ ಪಕ್ಷದ ಹಲವು ನಾಯಕರು ಬಂಧನಕ್ಕೊಳಗಾದಾಗ ಸಮಾಜವಾದಿಗಳು ಈ ಚಳವಳಿಯನ್ನು ಯಶಸ್ವಿಗೊಳಿಸಿದ್ದರು. ಇದೇ ಸಂದರ್ಭದಲ್ಲಿ ಬ್ರಿಟೀಷ್ ಸರ್ಕಾರ ಸಮಾಜವಾದಿ ಪಕ್ಷವನ್ನು ಬಹಿಷ್ಕರಿಸಿತ್ತು. ೧೯೪೬ರಲ್ಲಿ ಬ್ರಿಟೀಷ್ ಸರ್ಕಾರ ಸಮಾಜವಾದಿ ಪಕ್ಷದ ಮೇಲೆ ವಿಧಿಸಿದ್ದ ಬಹಿಷ್ಕಾರವನ್ನು ತೆರವುಗೊಳಿಸಿತು. ಈ ಸಂದರ್ಭದಲ್ಲಿ ಏಳಿಗೆಗೆ ಬಂದಿದ್ದ ಸಮಾಜವಾದಿಗಳು ಕಾಂಗ್ರೆಸ್ ಪಕ್ಷದೊಂದಿಗೆ ಕೈಜೋಡಿಸಬೇಕೋ ಬೇಡವೋ ಎಂಬ ನಿರ್ಧಾರಕ್ಕೆ ಬಂದಿದ್ದರು. ೧೯೪೭ ಫೆಬ್ರವರಿ ೨೮ರಂದು ಕಾನ್ಪುರದಲ್ಲಿ ಜರುಗಿದ ದ್ವಿತೀಯ ಮಹಾಯುದ್ಧದ ನಂತರದ ಮೊದಲ ಸಮ್ಮೇಳನದಲ್ಲಿ ಸಮಾಜವಾದಿಗಳು ತಾತ್ವಿಕ ನಿಲುವನ್ನು ಪುನರುಚ್ಚರಿಸಿ, ತಮ್ಮ ಸಂಘಟನೆಯ ಹೆಸರಿನೊಂದಿಗಿದ್ದ ಕಾಂಗ್ರೆಸ್ ಶಬ್ದವನ್ನು ತೆಗೆದುಹಾಕಿದರು.

ಭಾರತವು ೧೯೪೭ರಲ್ಲಿ ಸ್ವತಂತ್ರವಾದ ನಂತರದಲ್ಲಿ ಭಾರತದ ರಾಜಕೀಯದಲ್ಲಿ ಹಲವು ಸ್ಥಿತ್ಯಂತರಗಳಾದವು. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸನ್ನು ಒಂದು ಸಾಮಾಜಿಕ ಸಂಘಟನೆಯಾಗಿ ರೂಪಿಸಬೇಕೆಂಬ ಮನಸ್ಸಿದ್ದ ಗಾಂಧೀಜಿಯವರ ಕನಸು ಕನಸಾಗಿಯೇ ಉಳಿದು ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಯಿತು. ೧೯೪೮ರಲ್ಲಿ ಕಾಂಗ್ರೆಸ್ ಪಕ್ಷ ತನ್ನ ಸಂವಿಧಾನದಲ್ಲಿ ಮಾರ್ಪಾಡು ಮಾಡಿಕೊಂಡು ಪ್ರತ್ಯೇಕ ಸದಸ್ಯತ್ವ, ಸಂವಿಧಾನ ಹಾಗೂ ಕಾರ್ಯಕ್ರಮಗಳಿರುವ ಬೇರೆ ಯಾವುದೇ ರಾಜಕೀಯ ಪಕ್ಷದಲ್ಲಿ ಸದಸ್ಯರಾಗಿಲ್ಲದವರಿಗೆ ಮಾತ್ರ ಕಾಂಗ್ರೆಸ್ ಸದಸ್ಯತ್ವ ನೀಡುವ ನಿರ್ಣಯ ಕೈಗೊಂಡಿತು. ಇದನ್ನು ಮೊದಲೇ ಅರಿತಿದ್ದ ಸಮಾಜವಾದಿಗಳು ಕಾಂಗ್ರೆಸ್ ಪಕ್ಷದಿಂದ ಹೊರಬರಲು ತೀರ್ಮಾನಿಸಿದರು. ಅಲ್ಲದೆ ಬೇರೊಂದು ಪಕ್ಷದಲ್ಲಿದ್ದು ತಮ್ಮ ಸೈದ್ಧಾಂತಿಕತೆಯನ್ನು ಉಳಿಸಿಕೊಂಡು ಹೋಗುವುದು ಕಠಿಣವೆಂದು ಅರಿತ ಸಮಾಜವಾದಿಗಳಿಗೆ ಸ್ವತಂತ್ರ ಪಕ್ಷ ಕಟ್ಟಿಕೊಳ್ಳುವುದು ಅನಿವಾರ್ಯ ಆಗಿತ್ತು.

೧೯೪೮ರಲ್ಲಿ ನಾಸಿಕ್‌ನಲ್ಲಿ ಸಭೆ ಸೇರಿದ ಸಮಾಜವಾದಿಗಳು ಸ್ವತಂತ್ರ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು. ೧೯೪೯ರಲ್ಲಿ ಪಾಟ್ನಾದಲ್ಲಿ ಜರುಗಿದ್ದ ಸಮ್ಮೇಳನದಲ್ಲಿ ಸಮಾಜವಾದಿ ಪಕ್ಷ ಹೊಸ ಸಂವಿಧಾನವನ್ನು ಅಂಗೀಕರಿಸಿತು. ಈ ರೀತಿ ಸ್ವತಂತ್ರವಾಗಿ ಅಸ್ತಿತ್ವ ಕಂಡುಕೊಂಡ ಸಮಾಜವಾದಿಗಳು ೧೯೫೨ರಲ್ಲಿ ಪ್ರಪ್ರಥಮಬಾರಿಗೆ ಸಾರ್ವತ್ರಿಕ ಚುನಾವಣೆಯನ್ನು ಎದುರಿಸಿದ್ದಾಗ್ಯೂ ತಾವು ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ. ಆನಂತರ ಪಕ್ಷವನ್ನು ಇನ್ನಷ್ಟು ಪ್ರಬಲಗೊಳಿಸಲು ಕಿಸಾನ್ ಮಜ್ದೂರ್ ಪ್ರಜಾಪಾರ್ಟಿಯನ್ನು ಸೇರಿಸಿಕೊಂಡು ಹೊಸ ಪಕ್ಷಕ್ಕೆ ಪ್ರಜಾ ಸೋಷಲಿಸ್ಟ್ ಪಕ್ಷ ಎಂದು ಹೆಸರಿಸಲಾಯಿತು.

೧೯೫೫ರಲ್ಲಿ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಪ್ರಜಾ ಸೋಷಲಿಸ್ಟ್ ಮತ್ತು ಸೋಷಲಿಸ್ಟ್ ಪಕ್ಷಗಳಾದವು. ಪುನಃ ೧೯೬೪ರಲ್ಲಿ ಒಂದಾಗಿ ಸಂಯುಕ್ತ ಸೋಷಲಿಸ್ಟ್ ಪಕ್ಷವಾಯಿತು. ಇದನ್ನು ಸೇರಲು ಇಚ್ಛೆ ಪಡದ ಒಂದು ಗುಂಪು ಪ್ರಜಾ ಸೋಷಲಿಸ್ಟ್ ಪಕ್ಷ ಎಂಬ ಹೆಸರಿನಲ್ಲೇ ಮುಂದುವರೆಯಿತು. ಈ ತೆರನಾಗಿ ಭಿನ್ನಾಭಿಪ್ರಾಯಗಳು ಆಂತರಿಕವಾಗಿ, ನಿರಂತರವಾಗಿ ಇದ್ದವು. ೧೯೭೫ರಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ಸಮಾಜವಾದಿಗಳು ಅದನ್ನು ಸಮರ್ಥವಾಗಿ ವಿರೋಧಿಸಿದರಾದರೂ ಒಂದು ಶಕ್ತಿಯಾಗಿ ಬೆಳೆಯಲಾಗಲಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಲೋಹಿಯಾ ಈ ವೇಳೆಗಾಗಲೆ ಮರಣ ಹೊಂದಿದ್ದರು. ಜಯಪ್ರಕಾಶ್ ನಾರಾಯಣರವರು ಸರ್ವೋದಯ ಚಳವಳಿಯತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಇನ್ನುಳಿದ ನಾಯಕರು ನಿರಂತರವಾದ ಆಂತರಿಕ ಕಚ್ಚಾಟಗಳಿಂದ ಹುಮ್ಮಸ್ಸು ಕಳೆದುಕೊಂಡಿದ್ದರು. ಕೊನೆಗೆ ಕಾಂಗ್ರೆಸ್ಸೇತರ ಶಕ್ತಿಯನ್ನು ಬಲಪಡಿಸುವ ಉದ್ದೇಶದಿಂದ ೧೯೭೭ರಲ್ಲಿ ಜನತಾ ಪಕ್ಷದಲ್ಲಿ ವಿಲೀನವಾಗುವುದರ ಮೂಲಕ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡರು. ಇದನ್ನು ಮನ್ನಿಸದೆ ಸಮಾಜವಾದಿ ಆಂದೋಲನದಲ್ಲೇ ಧೃಡವಿಶ್ವಾಸ ಹೊಂದಿದ್ದ ಕೆಲವು ನಾಯಕರು ತಮ್ಮ ಸ್ವಭಾವದ ಪರಿಣಾಮವಾಗಿ ಹಲವು ಹನ್ನೆರಡು ಗುಂಪುಗಳಲ್ಲಿ ಹರಿದು ಹಂಚಿಹೋದರು.

ಹೀಗೆ ಒಂದೆಡೆ ಕಾಂಗ್ರೆಸ್ಸ್ ಹೆಚ್ಚು ಹೆಚ್ಚು ಸಮಾಜವಾದಿ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಾ ಹೋದ ಹಾಗೆ, ಇನ್ನೊಂದೆಡೆಗೆ ಕಮ್ಯುನಿಸ್ಟರು ಹೆಚ್ಚು ಹೆಚ್ಚು ಜನತಾಂತ್ರಿಕ ವಿಧಾನಗಳನ್ನು ಬಳಸಿ ಅಧಿಕಾರವನ್ನು ಪಡೆಯಲು ಪ್ರಯತ್ನಿಸುತ್ತ ಹೋದ ಹಾಗೆ, ಈ ಪ್ರಕ್ರಿಯೆಗಳ ಪರಿಣಾಮವಾಗಿ ಜನತಾಂತ್ರಿಕ ಸಮಾಜವಾದಿಗಳು ಭಾರತದ ರಾಜಕೀಯದಲ್ಲಿ ತಮ್ಮ 'ವಿಶಿಷ್ಟ' ಸ್ಥಾನವನ್ನು ಕಳೆದುಕೊಳ್ಳುತ್ತಾ ಹೋದರು ಎಂದು ಚರಿತ್ರೆಕಾರ ಸಾಲ್‌ರೋಜ್ ಅಭಿಪ್ರಾಯ ಪಡುತ್ತಾರೆ. ಆದರೆ ಸಂಘಟನಾತ್ಮಕವಾಗಿ ಸಮಾಜವಾದ ಬಲಗುಂದಿದರೂ, ಸೈದ್ಧಾಂತಿಕವಾಗಿ ಬೆಳೆಯುತ್ತಲೇ ಹೋಯಿತು.[೧೩]

ಬಂಡವಾಳಶಾಹಿ ಪ್ರಭುತ್ವಗಳಿಗೆ ವಿರುದ್ಧವಾಗಿ ರೂಪುಗೊಂಡ ಮಾರ್ಕ್ಸ್‌ವಾದ ಜಾಗತಿಕವಾಗಿ ಭಿನ್ನಭಿನ್ನ ಪರಿಣಾಮಗಳನ್ನು ಉಂಟುಮಾಡಿತು. ಆಯಾ ರಾಷ್ಟ್ರ, ಪ್ರದೇಶಗಳ ಸ್ಥಳೀಯತೆಯನ್ನು ಒಳಗೊಂಡು ಮಾರ್ಕ್ಸ್‌ವಾದ ಪರಿಷ್ಕಾರಕ್ಕೆ ಒಳಗಾಯಿತು. ಭಾರತದ ಸಂದರ್ಭದಲ್ಲಿಯೂ ಇದು ಅನೇಕ ಸ್ಥಿತ್ಯಂತರಕ್ಕೆ ಒಳಗಾಗಿದ್ದನ್ನು ಗಮನಿಸಬಹುದು. ಕಾಂಗ್ರೆಸ್ ಪಕ್ಷದ ಒಟ್ಟೊಟ್ಟಿಗೆ ಹಲವು ರಾಜಕೀಯ ಸಿದ್ಧಾಂತಗಳು ರೂಪುಗೊಂಡಂತೆ ಸಮಾಜವಾದವೂ ರಚನಾತ್ಮಕವಾಗಿ ಜನ್ಮ ತಾಳಿತು. ಎಡಪಂಥ ಮತ್ತು ಬಲಪಂಥ ಎಂಬ ಪ್ರಧಾನ ವಿಚಾರಧಾರೆಗಳೂ ಇಲ್ಲಿ ಜನ್ಮ ತಾಳಿದವು. ಬ್ರಿಟೀಷರಿಂದ ದೇಶದ ಬಿಡುಗಡೆ ಸಾಧಿಸುವುದರ ಜೊತೆಜೊತೆಗೆ ದೇಶ ಕಟ್ಟುವ ಸವಾಲುಗಳೂ ಎದುರಿದ್ದವು. ಸ್ವಾತಂತ್ರ್ಯ ನಂತರದಲ್ಲಂತೂ ದೇಶದ ಅಭಿವೃದ್ಧಿಯ ಸವಾಲುಗಳು ಈ ಎಲ್ಲರ ಎದುರಿಗಿದ್ದವು. ಪ್ರತಿಯೊಂದು ಪಕ್ಷ, ಸಿದ್ಧಾಂತಗಳು ತಮ್ಮದೇ ಮಾದರಿಗಳೊಂದಿಗೆ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡವು. ಸಮಾಜವಾದಿ ಸಿದ್ಧಾಂತ, ಚಿಂತನೆಗಳು ಭಾರತದಲ್ಲಿ

ರೂಪುಗೊಂಡದ್ದು ಇಂಥ ಸಂಕೀರ್ಣ ಸಂದರ್ಭದಲ್ಲಿಯಾಗಿದೆ. ಹಾಗಾಗಿಯೇ ಸಮಾಜವಾದಿ ಸಿದ್ಧಾಂತ, ಚಳವಳಿಯಲ್ಲಿ ಅನೇಕ ಸ್ಥಿತ್ಯಂತರಗಳನ್ನು ಗಮನಿಸಬಹುದಾಗಿದೆ. ಆದರೆ ಇದಕ್ಕೊಂದು ಸ್ಪಷ್ಟ ರೂಪಕೊಟ್ಟವರು ರಾಮಮನೋಹರ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣರಂಥವರಾಗಿದ್ದಾರೆ. ರಾಷ್ಟ್ರೀಯ ಮಟ್ಟದ ಸಮಾಜವಾದಿ ಹೋರಾಟ, ಚಿಂತನೆಗಳು ಸ್ಥಳೀಯ ಮಟ್ಟದಲ್ಲಿ ರೂಪುಗೊಳ್ಳುವಾಗ ಅನೇಕ ರೂಪಾಂತರಗಳನ್ನು ಅಲ್ಲಿಯೂ ಗಮನಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿಯೇ ಕರ್ನಾಟಕದ ಸಮಾಜವಾದಿ ಚಳವಳಿ ಮತ್ತು ಗೋಪಾಲಗೌಡರ ಚಿಂತನೆಗಳನ್ನು ಗ್ರಹಿಸಬೇಕಿದೆ. ಉತ್ತರ ಭಾರತದ ಹಲವು ರಾಜ್ಯಗಳ ಸಮಾಜವಾದಿ ಪಕ್ಷಗಳಿಗೂ ಕರ್ನಾಟಕ ಸಮಾಜವಾದಿ ಪಕ್ಷದ ಕಾರ್ಯಚಟುವಟಿಕೆಗೂ ಇರುವ ಅಂತರಗಳನ್ನು ಈ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕಿದೆ.

ಸಮಾಜವಾದಿಗಳು ರಾಷ್ಟ್ರಮಟ್ಟದಲ್ಲಿ ಅಧಿಕಾರದ ಗದ್ದುಗೆ ಏರದಿದ್ದರೂ ಆಡಳಿತರೂಢ ಪಕ್ಷಗಳ ಮೇಲೆ ಪ್ರಭಾವ ಬೀರುವುದರ ಮುಖಾಂತರ ಪರೋಕ್ಷವಾಗಿ ಆಡಳಿತವನ್ನು ನಿಯಂತ್ರಿಸುವಲ್ಲಿ ಮತ್ತು ಪ್ರಭಾವಗೊಳಿಸುವಲ್ಲಿ ಜಯಶೀಲರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸಮಾಜವಾದಿ ಪಕ್ಷ ಒಂದು ಹೋರಾಟಯುತ ಸಂಘಟನೆಯಾಗಿ ಹಲವಾರು ಹೋರಾಟಗಳನ್ನು ನಡೆಸಿ ಯಶಸ್ವಿಯಾಗಿದೆ. ಉದಾಹರಣೆಗೆ, ಜಯಪ್ರಕಾಶ್ ನಾರಾಯಣರವರ ನಾಯಕತ್ವದಲ್ಲಿ ಜರುಗಿದ ಅಂಚೆ ಮತ್ತು ತಂತಿ ಇಲಾಖೆಯ ನೌಕರರ ಹೋರಾಟ, ಜಾರ್ಜ್‌ಫರ್ನಾಂಡಿಸ್‌ರ ನಾಯಕತ್ವದಲ್ಲಿ ಜರುಗಿದ ರೈಲ್ವೆ ಕಾರ್ಮಿಕರ ಹೋರಾಟ, ಕರ್ನಾಟಕದಲ್ಲಿ ಜರುಗಿದ ಕಾಗೋಡು ಸತ್ಯಾಗ್ರಹ ಮತ್ತು ಸಂಡೂರು ಸತ್ಯಾಗ್ರಹ ಇನ್ನು ಮುಂತಾದವು.

೧೯೯೧ರ ನಂತರ ಭಾರತ ಸರ್ಕಾರವು ಜಾಗತೀಕರಣಕ್ಕೆ ಒತ್ತುಕೊಟ್ಟಿದ್ದರಿಂದ ಸಮಾಜವಾದಿ ಚಿಂತನೆಗೆ ಬದಲಾಗಿ ಬಂಡವಾಳಶಾಹಿ ವ್ಯವಸ್ಥೆಗೆ ಹೆಚ್ಚಿನ ಅವಕಾಶ ದೊರೆಯಿತು. ೧೯೯೦-೧೯೯೫ರ ಅವಧಿಯಲ್ಲಿ ಕಂಡುಬಂದ ಒಂದು ಬಹುಮುಖ್ಯ ಬೆಳವಣಿಗೆಯೆಂದರೆ ಜಾಗತೀಕರಣದಿಂದಾಗಿ ಭಾರತದಲ್ಲಿನ ಕೃಷಿಕ್ಷೇತ್ರವು ಮಾರುಕಟ್ಟೆಯಲ್ಲಿನ ಏರಿಳಿತದಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರಿಂದಾಗಿ ಗ್ರಾಮೀಣ ಭಾಗದಲ್ಲಿ ಕೃಷಿಯನ್ನೇ ನಂಬಿಕೊಂಡಿದ್ದ ಬಹಳಷ್ಟು ಕುಟುಂಬಗಳು ಅತಂತ್ರ ಸ್ಥಿತಿಯನ್ನು ತಲುಪುವಂತಾಯಿತು. ಅಲ್ಲದೆ ಪ್ರಸ್ತುತ ಬಹುರಾಷ್ಟ್ರೀಯ ಕಂಪನಿಗಳ ಪ್ರಾಬಲ್ಯ ಹೆಚ್ಚಾಗುತ್ತಿರುವುದರಿಂದ ದಿನಕಳೆದಂತೆ ಭಾರತದಲ್ಲಿ ಸಮಾಜವಾದಿ ಚಿಂತನೆಗಳು ಹಾಗೂ ಸಮಾಜವಾದಿ ಚಳವಳಿಗಳು ಕ್ಷೀಣಿಸುತ್ತಿರುವುದು ಕಂಡುಬರುತ್ತಿದೆ. ಆದಾಗ್ಯೂ 'ಸಮಾಜವಾದ' ಎಂಬ ಶಬ್ದವನ್ನು ಇಟ್ಟುಕೊಂಡು ಯುವಕರನ್ನು ಒಗ್ಗೂಡಿಸಲು ಸಾಧ್ಯವಿಲ್ಲ ಎಂಬ ಕೆಲವು ತರುಣ ಮಿತ್ರರ ವಾದದಲ್ಲಿ ಹುರುಳಿಲ್ಲ.

ಸಮಾಜವಾದಕ್ಕೆ ಆದರ್ಶಮಾದರಿಗಳು ಹಲವು ಇವೆ. ಜಯಪ್ರಕಾಶ್ ನಾರಾಯಣ, ಎನ್.ಜಿ. ಗೋರೆ, ಎಸ್.ಎಂ. ಜೋಶಿ ಅಪೂರ್ವ ಮಾದರಿಗಳು. ಪ್ರೊ. ಮಧುದಂಡವತೆ, ರಬಿರೇ, ಸುರೇಂದ್ರ ಮೋಹನ್ ಮೊದಲಾದವರು ಸಮಾಜವಾದದ ಉತ್ತಮ ಉದಾಹರಣೆಗಳು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಕ್ರಿ.ಶ. ೧೯೪೮ರಲ್ಲಿ ಸಮಾಜವಾದಿಗಳು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಿಂದ ಹೊರಬಂದು ರಾಷ್ಟ್ರಮಟ್ಟದಲ್ಲಿ ಸಮಾಜವಾದಿ ಪಕ್ಷವನ್ನು ಕಟ್ಟಿದರು. ಕಾಂಗ್ರೆಸ್ ಸಮಾಜವಾದಿಗಳು ಸ್ವಾತಂತ್ರ್ಯ ಪೂರ್ವದಲ್ಲೂ ಕರ್ನಾಟಕದಲ್ಲಿ ಸಕ್ರಿಯರಾಗಿದ್ದರು. ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಸ್ಥಾಪನೆಯಾದ ನಂತರ ಸಮಾಜವಾದಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸಿದ ಮುಖಂಡರೆಂದರೆ ಕಮಲಾದೇವಿ ಚಟ್ಟೋಪಾಧ್ಯಾಯ, ಶಂಕರ ಕುರ್ತಕೋಟಿ, ಕೆ.ಆರ್. ಕಾರಂತ, ಸದಾಶಿವರಾವ್ ಇನ್ನು ಮುಂತಾದವರು.

ಕರ್ನಾಟಕದಲ್ಲಿ ಪ್ರಾರಂಭದಲ್ಲಿ ಸಮಾಜವಾದಿ ಚಿಂತನೆಗಳ ಪ್ರಭಾವಕ್ಕೊಳಗಾಗಿದ್ದುದು ಬ್ರಿಟಿಷರ ನೇರ ಆಳ್ವಿಕೆಯಲ್ಲಿದ್ದ ಮುಂಬೈ ಕರ್ನಾಟಕ. ಈ ನೆಲದಲ್ಲಿ ೩೦ರ ದಶಕದಲ್ಲಿ ಸಮಾಜವಾದಿ ಚಟುವಟಿಕೆಗಳು ಪ್ರಾರಂಭಗೊಂಡವು. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭದಲ್ಲಿ ದಿನಕರ ದೇಸಾಯಿಯವರು ಸಮಾಜವಾದಿ ಬೀಜವನ್ನು ಬಿತ್ತಿದ್ದರು. ಇವರು ಬಡ ಗೇಣಿ ರೈತರ ಜೊತೆ ಸೇರಿಕೊಂಡು ಪ್ರಬಲ ರೈತ ಸಂಘಟನೆ ಕಟ್ಟಿದರು. ಇದನ್ನು ಸಹಿಸದ ಬ್ರಿಟಿಷ್ ಸರ್ಕಾರ ಇವರನ್ನು ಗಡಿಪಾರು ಮಾಡಿತು. ಉತ್ತರ ಕನ್ನಡ ಜಿಲ್ಲೆಯ ನೆರೆಯ ಜಿಲ್ಲೆಯಾದ ಶಿವಮೊಗ್ಗದಲ್ಲಿ ಸಮಾಜವಾದಿ ಚಿಂತನೆಗಳು ಇದೇ ವೇಳೆಗೆ ಕಾಣಿಸಿಕೊಳ್ಳಲಾರಂಭಿಸಿದವು. ಶಿವಮೊಗ್ಗ ಜಿಲ್ಲೆ ಮೈಸೂರು ಸಂಸ್ಥಾನ ಭಾಗವಾಗಿದ್ದರೂ ಮುಂಬೈ ಕರ್ನಾಟಕ ಪ್ರದೇಶಕ್ಕೆ ಹೊಂದಿಕೊಂಡಿದ್ದರಿಂದ ಸಹಜವಾಗಿಯೇ ಸಮಾಜವಾದದ ಪ್ರಭಾವ ಜಿಲ್ಲೆಯ ಮೇಲೆ ಆಗಿತ್ತು. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿ 'ಬಿದನೂರು ದಂಗೆ' ಅಥವಾ 'ನಗರ ದಂಗೆ' (೧೮೩೧) ಎಂದು ಖ್ಯಾತಿ ಹೊಂದಿರುವ ಒಂದು ಬೃಹತ್ ರೈತ ಚಳವಳಿ ಜರುಗಿತು. ಇದರ ಮೂಲ ಉದ್ದೇಶ ರೈತರಿಗೆ ಭೂ ತೆರಿಗೆ ಮಿತಿಯನ್ನು ಕಡಿಮೆ ಮಾಡಬೇಕೆಂಬುದಾಗಿತ್ತು.

ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ವಿಚಾರಗಳಿಂದ ಪ್ರಭಾವಿತರಾಗಿದ್ದವರೆಲ್ಲ ಸಾಮಾನ್ಯವಾಗಿ ಯುವಕರು. ಇವರುಗಳೆಲ್ಲ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸಹ ಸಂಘಟನೆಯಾಗಿದ್ದ ವಿದ್ಯಾರ್ಥಿ ಕಾಂಗ್ರೆಸ್‌ನ ಸದಸ್ಯರಾಗಿದ್ದವರು. ವಿದ್ಯಾರ್ಥಿ ಕಾಂಗ್ರೆಸ್‌ನ ಬಹುಪಾಲು ಸದಸ್ಯರು ಕಾಂಗ್ರೆಸ್ ಸಮಾಜವಾದಿಗಳ ಅನುಯಾಯಿಗಳಾಗಿದ್ದರು. ವಿದ್ಯಾರ್ಥಿ ಕಾಂಗ್ರೆಸ್‌ನ ಪ್ರಮುಖ ಮುಂದಾಳುಗಳೆಂದರೆ ಶಾಂತವೇರಿ ಗೋಪಾಲಗೌಡ, ವೈ.ಆರ್. ಪರಮೇಶ್ವರಪ್ಪ, ಖಾದ್ರಿ ಶಾಮಣ್ಣ, ಬಾ.ಸು. ಕೃಷ್ಣಮೂರ್ತಿ, ಜಿ. ಸದಾಶಿವರಾವ್, ಬಿ.ಎಸ್. ಚಂದ್ರಶೇಖರ್ ಇನ್ನು ಮುಂತಾದವರು.

ವಿದ್ಯಾರ್ಥಿ ಕಾಂಗ್ರೆಸ್‌ನ ರಾಜ್ಯಮಟ್ಟದ ಸಮಾವೇಶ ಕ್ರಿ.ಶ. ೧೯೪೬ರಲ್ಲಿ ನಂಜನಗೂಡಿನಲ್ಲಿ ಜರುಗಿತು. ಅಂದು ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಿದ್ದವರು ರಾಷ್ಟ್ರಮಟ್ಟದ ಸಮಾಜವಾದಿ ನಾಯಕರಾದ ಅಶೋಕ ಮೆಹತಾ. ಅಂದಿನಿಂದ ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಅಧಿಕೃತ ಭಾಗವಾಯಿತು. ಇದೇ ವರ್ಷ ಶಿವಮೊಗ್ಗದಲ್ಲಿ ವಿದ್ಯಾರ್ಥಿ ಕಾಂಗ್ರೆಸ್‌ನ ಸಮಾವೇಶ ಎಂ.ಪಿ. ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಇದರಲ್ಲಿ ಜಯಪ್ರಕಾಶನಾರಾಯಣ ಮತ್ತು

ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪ್ರವಾಸ ಮತ್ತು ಭಾಷಣಗಳನ್ನು ಜಿಲ್ಲೆಯಾದ್ಯಂತ ಏರ್ಪಡಿಸಲಾಗಿತ್ತು. ಇದರಿಂದ ಶಿವಮೊಗ್ಗ ಜಿಲ್ಲೆಯ ಹೆಚ್ಚಿನ ಯುವ ಸಮುದಾಯ ಸಮಾಜವಾದದ ಕಡೆ ಆಕರ್ಷಿತರಾದರು. ಈ ಸಂದರ್ಭದಲ್ಲಿ ಜಿಲ್ಲೆಯ ಅಗ್ರಗಣ್ಯರು ಆಕರ್ಷಿತರಾದರು. ಈ ಸಂದರ್ಭದಲ್ಲಿ ಜಿಲ್ಲೆಯ ಅಗ್ರಗಣ್ಯ ಸಮಾಜವಾದಿ ನಾಯಕರಾದ ಶಾಂತವೇರಿ ಗೋಪಾಲಗೌಡ ಅವರು ತಮ್ಮನ್ನು ಸಮಾಜವಾದಿಯೆಂದು ಗುರುತಿಸಿಕೊಂಡು, ಸಮಾಜವಾದಿ ಸಂಘಟನೆಯ ಸಕ್ರಿಯ ಕಾರ್ಯಕರ್ತರಾದರು. ಈ ರೀತಿ ಜಯಪ್ರಕಾಶ್ ನಾರಾಯಣ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯರವರ ಪ್ರವಾಸ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿಗಳಿಗೆ ಒಂದು ಭದ್ರನೆಲೆಗಟ್ಟನ್ನು ಒದಗಿಸಿಕೊಡುವಲ್ಲಿ ಪ್ರಾಮುಖ್ಯತೆ ಪಡೆದಿತ್ತು.

ಭಾರತ ಸ್ವಾತಂತ್ರ್ಯಗೊಂಡ ನಂತರದಲ್ಲಿ ರಾಷ್ಟ್ರ ರಾಜಕೀಯದಲ್ಲಿ ಆದ ಹಲವು ಬದಲಾವಣೆಗಳಿಂದ ಸ್ವಾಭಾವಿಕವಾಗಿಯೇ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ನೀತಿ ನಿಯಮಾವಳಿಯಲ್ಲಿಯೇ ಹಲವಾರು ಬದಲಾವಣೆಗಳನ್ನು ತರಬೇಕಾಯಿತು. ಇದರಿಂದ ಕಾಂಗ್ರೆಸ್ ಪಕ್ಷದ ಜೊತೆಯಲ್ಲಿದ್ದ ಸಮಾಜವಾದಿ ಧುರೀಣರಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ ಇನ್ನು ಮುಂತಾದವರು ಸ್ವತಂತ್ರವಾಗಿ ಒಂದು ಸಮಾಜವಾದಿ ಪಕ್ಷವನ್ನು ಕಟ್ಟುವ ಸದುದ್ದೇಶದಿಂದ ಸೋಷಿಯಲಿಸ್ಟ್ ಪಾರ್ಟಿಯನ್ನು ಕ್ರಿ.ಶ. ೧೯೪೮ರಲ್ಲಿ ಸ್ಥಾಪಿಸಿದರು. ಇದರಿಂದ ಆಕರ್ಷಿತರಾದ ಕರ್ನಾಟಕದಲ್ಲಿನ ಸಮಾಜವಾದಿ ನಾಯಕರುಗಳು ೧೯೪೮ರಲ್ಲಿಯೇ ಕರ್ನಾಟಕ ಸಮಾಜವಾದಿ ಪಕ್ಷವನ್ನು ಸಂಘಟಿಸಿದ್ದಲ್ಲದೆ ಅದರ ಪ್ರಥಮ ಸಮ್ಮೇಳನವನ್ನು ಶಿವಮೊಗ್ಗದಲ್ಲಿಯೇ ನೆರವೇರಿಸಿದರು. ಇದರಲ್ಲಿ ಕರ್ನಾಟಕ ರಾಜ್ಯದ ಪ್ರಮುಖ ಸಮಾಜವಾದಿ ನಾಯಕರುಗಳಾದ ಶಾಂತವೇರಿ ಗೋಪಾಲಗೌಡ, ಜಿ. ಸದಾಶಿವರಾವ್, ವೈ.ಆರ್. ಪರಮೇಶ್ವರಪ್ಪ, ಎನ್.ಕೆ. ಸೀತಾರಾಮ ಅಯ್ಯಂಗಾರ್ ಇನ್ನು ಮುಂತಾದವರು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಪ್ರಮುಖವಾಗಿ ಕೃಷಿಕರು, ಕಾರ್ಮಿಕರು ಹಾಗೂ ಶೋಷಣೆಗೆ ತುತ್ತಾದವರ ರಕ್ಷಣೆಗೆ ಸಂಬಂಧಿಸಿದಂತೆ ಹೋರಾಟವನ್ನು ಮಾಡಲು ದೃಢ ನಿರ್ಧಾರವನ್ನು ಕೈಗೊಳ್ಳಲಾಯಿತು.

ರಾಷ್ಟ್ರಮಟ್ಟದಲ್ಲಿ ಸಮಾಜವಾದಿ ರಾಜಕಾರಣಕ್ಕೆ ಅಧಿಕಾರ ಮುಖ್ಯವಾದರೆ, ಕರ್ನಾಟಕದಲ್ಲಿ 'ಭೂಮಿ' ಮುಖ್ಯವಾಗಿತ್ತು. ಕರ್ನಾಟಕದ ಸಮಾಜವಾದಿ ಹೋರಾಟದ ಕಾರ್ಯಸೂಚಿಯಾದ ಸಾಮಾಜಿಕ ಸಮಾನತೆ, ರೈತರಿಗೆ ಭೂಮಿ, ದುರ್ಬಲರ ಪ್ರಗತಿ, ಬಡವ-ಬಲ್ಲಿದನ ಉದ್ಧಾರ ಹಾಗೂ ಮೇಲು ಕೋಮಿನವರಾದ ಬ್ರಾಹ್ಮಣರು, ಲಿಂಗಾಯಿತರು ಹಾಗೂ ಒಕ್ಕಲಿಗರು ಪ್ರೋತ್ಸಾಹ ನೀಡಿ ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡಿದ್ದು ನೆನಪಿನಲ್ಲಿಡಬೇಕಾದ ಅಂಶವಾಗಿದೆ.

ಕರ್ನಾಟಕದ ಹಲವು ನಾಯಕರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರಾಮಮನೋಹರ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣ್‌ರವರ ವಿಚಾರಗಳಿಂದ ಪ್ರಭಾವಿತರಾದರು. ಭಾರತದ ಇತರ ಪ್ರದೇಶಗಳಂತೆಯೇ ಕರ್ನಾಟಕದಲ್ಲಿಯೂ ಸಮಾಜವಾದಿಗಳ ನಾಯಕತ್ವದಲ್ಲಿ

ಭರವಸೆ ನೀಡುವ ಅನೇಕ ಹೋರಾಟಗಳು ನಡೆದಿವೆ. ಅಂತಹ ಅನೇಕ ಹೋರಾಟಗಳಲ್ಲಿ ಕಾಗೋಡು ಸತ್ಯಾಗ್ರಹ ಹೆಬ್ಬಳ್ಳಿ ಭೂ ಹೋರಾಟ, ಭೂ ಗ್ರಹಣ ಚಳವಳಿ, ಉತ್ತರ ಕನ್ನಡದ ಸಮಾಜವಾದಿ ರೈತ ಆಂದೋಲನ, ಸಂಡೂರು ಭೂ ಹೋರಾಟ ಹಾಗೂ ಸಮಾಜವಾದಿ ರೈತ ಮೋರ್ಚಾ ಚಳವಳಿಗಳಂಥ ಪ್ರಮುಖವಾದ ಹೋರಾಟಗಳು ಸಮಾಜವಾದದ ನೆಲೆಗಟ್ಟಿನಲ್ಲಿ ನಡೆದಿರುವುದು ಮಾತ್ರವಲ್ಲದೆ ಕರ್ನಾಟಕದಲ್ಲಿ ಹೋರಾಟದ ಸ್ವರೂಪವನ್ನು ಬದಲಿಸಿತು. ಭಾರತದ ಇತರ ಅನೇಕ ಪ್ರದೇಶಗಳಂತೆಯೇ ಕರ್ನಾಟಕದಲ್ಲೂ ಸಮಾಜವಾದಿ ರಾಜಕಾರಣ ಭರವಸೆ ಮೂಡಿಸುವ ವಿದ್ಯಮಾನವಾಗಿ ಮೇಲೆದ್ದು ಬಂದರೂ ಆ ಭರವಸೆಗಳನ್ನು ಮೈಗೂಡಿಸಿಕೊಂಡು ಸಶಕ್ತವಾಗಿ ರೂಪುಗೊಳ್ಳಲಿಲ್ಲ. ಆದರೂ ಕರ್ನಾಟಕದ ಸಮಾಜವಾದಿ ಹೋರಾಟ ಸಮಾಜದಲ್ಲಿ ವಿವಿಧ ಚಿಂತನೆಗಳನ್ನು, ಆಯಾಮಗಳನ್ನು, ಜನರಲ್ಲಿ ನೈತಿಕ, ತಾತ್ವಿಕ ಸ್ಥೈರ್ಯವನ್ನು ಹಾಗೂ ರಾಜಕೀಯ ಆಲೋಚನೆಯನ್ನು ಮೂಡಿಸಿದ್ದಂತು ನಿಜ.[೧೪]

೩.೩. ಲೋಹಿಯಾ ಹಾಗೂ ಶಾಂತವೇರಿ ಗೋಪಾಲಗೌಡ ಅವರ ಆಶಯಗಳು

ಭಾರತೀಯ ಸಮಾಜವನ್ನು ಮಾನವೀಯ ನೆಲೆಯಲ್ಲಿ ಪ್ರಭಾವಿಸಿದ ಶಕ್ತಿಗಳಲ್ಲಿ ರಾಮಮನೋಹರ ಲೋಹಿಯಾರವರನ್ನು ಮತ್ತು ಅವರ ಸಮಾಜವಾದಿ ಪರಿಕಲ್ಪನೆಯನ್ನು ಮರೆಯುವಂತಿಲ್ಲ. ಸ್ವತಂತ್ರ ಪೂರ್ವ ಮತ್ತು ಸ್ವತಂತ್ರ ನಂತರದ ಕಾಲಘಟ್ಟವನ್ನು ಬಹುದೊಡ್ಡ ಪ್ರಮಾಣದಲ್ಲಿ ಪ್ರಭಾವಿಸಿದ ಸಮಾಜವಾದಿ ಚಿಂತನೆಗಳು ಅಂದಿನಿಂದ ಇಂದಿನವರೆಗೂ ಸಮಾಜದ ವಿವಿಧ ಕ್ಷೇತ್ರಗಳನ್ನು ಪ್ರಭಾವಿಸಿಕೊಂಡು ಬಂದಿವೆ ಮತ್ತು ಬರುತ್ತಿವೆ. ಕಾರ್ಲ್‌ಮಾರ್ಕ್ಸ್‌ನ ಸಮತಾವಾದದ ಆರ್ಥಿಕ ಸಮಾನತೆ, ಬಂಡವಾಳಶಾಹಿ–ಕಾರ್ಮಿಕ ಹಾಗೂ ವರ್ಗಸಂಘರ್ಷಕ್ಕಿಂತ ಭಿನ್ನವಾದ ಜಾತಿವಿನಾಶ ಸ್ತ್ರೀ ಸಮಾನತೆ, ಪ್ರಾದೇಶಿಕತೆ, ದೇಶೀಭಾಷೆ ಕುರಿತ ಚಳವಳಿಗಳನ್ನು ಹುಟ್ಟುಹಾಕುವ ಮೂಲಕ ಸಮಾಜವಾದಿ ಪ್ರಜ್ಞೆಯನ್ನು ರೂಪಿಸಿರುವುದೇ ಈ ಲೋಹಿಯಾವಾದ.

ಲೋಹಿಯಾರವರಿಗೆ ಸಮಾಜವಾದವೆನ್ನುವುದು ನೆಮ್ಮದಿಯ ನಿಟ್ಟುಸಿರು ಬಿಡಬಹುದಾದ ವಿಶ್ರಾಂತಿಧಾಮವಾಗಿರದೆ ನಿರಂತರ ಅನ್ವೇಷಣೆಯ ಮತ್ತು ಅವಿರತ ವಿಶ್ಲೇಷಣೆಯ ಸಮಸ್ಯಾ ಭೂಮಿಕೆಯಾಗಿತ್ತು. ಅಂತೆಯೇ, ಲೋಹಿಯಾರ ತಾತ್ವಿಕ ಚಿಂತನೆಯಲ್ಲಿ ಸಮಾಜವಾದ ಏಕಾಂಗಿಯಾಗಿ ವಿಹರಿಸುವ ಒಂದು ವಿದ್ಯಮಾನವಾಗಿರದೆ ಅದು ಇತರ ಅನೇಕ ಸೈದ್ಧಾಂತಿಕ ನಿಲುವುಗಳೊಂದಿಗೆ ಸಂವಾದಿಸುತ್ತಾ ಹಾಗೂ ಪಳಗುತ್ತಾ ರೂಪುಗೊಂಡ ದೃಷ್ಟಿಕೋನವಾಗಿತ್ತು. ಬಹುಶಃ ಲೋಹಿಯಾರ ತಾತ್ವಿಕ ಚಿಂತನೆಯ ಪ್ರಪಂಚದಲ್ಲಿ ಮೂರು ಪ್ರಮುಖ, ಸಮನಾಗಿ ಮಹತ್ವ ಪಡೆಯುವ, ಚಿಂತನೆಯ ಎಳೆಗಳನ್ನು ಗುರುತಿಸಬಹುದು. ಅವುಗಳನ್ನು ವಸಾಹತುಶಾಹಿ ವಿರೋಧಿ ನೆಲೆಯ ರಾಷ್ಟ್ರೀಯ ದೃಷ್ಟಿ, ನಾಗರಿಕ ಸ್ವಾತಂತ್ರ್ಯದ ನೆಲೆಯ ಪ್ರಜಾತಾಂತ್ರಿಕತೆ ಮತ್ತು ಚಾರಿತ್ರಿಕ ಎಚ್ಚರದಿಂದ ರೂಪುಗೊಂಡ ಆಳವಾದ ಸಂಸ್ಕೃತಿ ನಿಷ್ಟತೆ ಎಂದು ಸ್ಥೂಲವಾಗಿ ಮುಂದಿಡಬಹುದು. ಲೋಹಿಯಾ ತತ್ವ ಚಿಂತನೆಯಲ್ಲಿ ಈ ಮೂರು ನೆಲೆಗಳು ಒಂದುಗೂಡಿ ಅವರ ಸಮಾಜವಾದಿ ದೃಷ್ಟಿಯನ್ನು ನಿರ್ವಚಿಸುತ್ತವೆ ಹಾಗೂ ನಿರೂಪಿಸುತ್ತವೆ.[೧೫]

ಲೋಹಿಯಾ ಸಮಾಜವಾದಿ ಪಕ್ಷಕ್ಕೆ ತಾತ್ವಿಕ ನೆಲೆಗಟ್ಟನ್ನು ಒದಗಿಸಿಕೊಡುವುದರಲ್ಲಿ ಅವಿಶ್ರಾಂತವಾಗಿ ದುಡಿದರು ಹಾಗೂ ಅದರ ಆಧಾರಸ್ತಂಭವಾಗಿದ್ದರು. ರಾಷ್ಟ್ರೀಯ ಕಾಂಗ್ರೆಸ್ಸಿನ ವಿದೇಶಿ ವಿಭಾಗದ ಕಾರ್ಯದರ್ಶಿಯಾಗಿ ಏಷಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾಗಳಲ್ಲಿ ನಡೆದ ಸ್ವಾತಂತ್ರ್ಯ ಹಾಗೂ ಪ್ರಗತಿಪರ ಆಂದೋಲನಗಳ ನಿಕಟಸಂಪರ್ಕವನ್ನು ಹೊಂದಿದ್ದರು ಹಾಗೂ ವಿದೇಶಗಳಲ್ಲಿರುವ ಭಾರತೀಯರ ದಾರುಣಸ್ಥಿತಿಯನ್ನು ಅಧ್ಯಯನ ಮಾಡಿ, ಅವರ ಪರಿಸ್ಥಿತಿಯನ್ನು ಭಾರತದ ಜನತೆಗೆ ಮನವರಿಕೆ ಮಾಡಿಕೊಡುವುದರ ಮುಖಾಂತರ ರಾಷ್ಟ್ರೀಯ ಆಂದೋಲನಕ್ಕೆ ಒಂದು ನವೀನವಾದ ಆಯಾಮವನ್ನು ನೀಡಿದರು.

ಭಾರತದಲ್ಲಿ ಸಮಾಜವಾದವನ್ನು ಅನುಷ್ಠಾನಕ್ಕೆ ತರಲು ಜನತಾಂತ್ರಿಕ ವಿಧಾನಗಳ ಮುಖಾಂತರ ಅಧಿಕಾರವನ್ನು ಪಡೆಯಬೇಕೆಂದೂ ಈ ಅಧಿಕಾರವು ಪ್ರಜೆಗಳ ಇಚ್ಛೆಯಂತೆ ಇರಬೇಕೆಂದೂ ಲೋಹಿಯಾ ಹೇಳಿದರು. ಸಾಮಾಜಿಕ ಕ್ರಾಂತಿಗಾಗಿ ಜೈಲು, ಸಲಿಕೆ ಮತ್ತು ಮತಪೆಟ್ಟಿಗೆ ಎಂಬ ಪರಿಕಲ್ಪನೆಗಳ ಮೂಲಕ ಭಾರತದಲ್ಲಿ ಸಮಾಜವಾದಿ ವಿಚಾರಗಳಿಗೆ ವೈಚಾರಿಕವಾಗಿ ಭದ್ರಬುನಾದಿ ಹಾಕಿಕೊಟ್ಟರು. ವಿಕೇಂದ್ರೀಕರಣ ಸಣ್ಣ ಯಂತ್ರಗಳ ಬಳಕೆ, ಹೆಣ್ಣಿಗೆ ಸ್ಥಾನ, ಜಾತಿ ವಿನಾಶ, ರಾಜ್ಯ ಭಾಷೆಗಳಿಗೆ ಪ್ರಥಮ ಪ್ರಾಶಸ್ತ್ಯ, ಭೂಸೇನೆ, ವಿಶೇಷ ಅವಕಾಶಗಳು, ನಿಶಸ್ತ್ರೀಕರಣ, ವಿಶ್ವ ಸರಕಾರದ ಕನಸು ಇನ್ನು ಮೊದಲಾದ ಸಮಾಜವಾದಿ ಪರಿಕಲ್ಪನೆಗಳಿಗೆ ಹೆಚ್ಚು ಮೂರ್ತರೂಪನ್ನು ಕೊಟ್ಟರು.[೧೬]

ಬರ್ಲಿನ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದ ಲೋಹಿಯಾರವರು, ಅಮೇರಿಕಾದ ಸಮಾಜವಾದಿ ಚಿಂತಕರ ಬಗ್ಗೆಯೂ ಆಳವಾದ ಅಧ್ಯಯನ ನಡೆಸಿದ್ದರು. ಭಾರತದ ಪರಿಸರದಲ್ಲಿ ಕಾರ್ಲ್‌ಮಾರ್ಕ್ಸ್‌ನ ಕಮ್ಯುನಿಸಂ ಮತ್ತು ಬಂಡವಾಳಶಾಹಿಗಳೆರಡೂ ಅಪ್ರಸ್ತುತವೆಂದು ಧೃಡವಾಗಿ ಸ್ಪಷ್ಟಪಡಿಸಿದ್ದರು.

೧೯೪೫ರ ನಂತರ ಸಮಾಜವಾದಿ ಚಿಂತನೆಯುಳ್ಳ ತರುಣರೆಲ್ಲ ಅಂತಿಮ ಸ್ವಾತಂತ್ರ್ಯ ಸಮರಕ್ಕೆ ಸಿದ್ಧಗೊಳ್ಳುತ್ತಿದ್ದ ಕಾಲ. ಈ ಸಂದರ್ಭದಲ್ಲಿ ರಾಮಮನೋಹರ ಲೋಹಿಯಾ ಜಯಪ್ರಕಾಶ್ ನಾರಾಯಣರು ಜೈಲಿನಲ್ಲೇ ಇದ್ದರು. ಅದಾದ ಒಂದು ವರ್ಷದ ನಂತರ ಕಾನ್ಪುರದಲ್ಲಿ ಕಾಂಗ್ರೆಸ್ ಸಮಾಜವಾದೀ ಪಕ್ಷದ ಅಧಿವೇಶನ ಜರುಗಿತು. ಆ ಹೊತ್ತಿಗೆ ಬಹಳ ಮಂದಿ ಸಮಾಜವಾದಿ ನಾಯಕರುಗಳು ಜೈಲಿನಿಂದ ಬಿಡುಗಡೆ ಪಡೆದಿದ್ದರು. ರಾಷ್ಟ್ರಾದ್ಯಂತ ಸಮಾಜವಾದಿ ಆಂದೋಲನ ಪ್ರಬಲವಾದ ಸಂಘಟನೆಗೆ ನಾಂದಿಯಾಯಿತು. ಕರ್ನಾಟಕದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರ ಮುಂದಾಳತ್ವದಲ್ಲಿ ಹಲವು ಯುವಕರು ಒಂದೆಡೆ ಸೇರಿದರು. ಸೆರೆಮನೆಯಿಂದ ಬಿಡುಗಡೆಗೊಂಡಿದ್ದ ಜಯಪ್ರಕಾಶನಾರಾಯಣ ಇವರು ಕರ್ನಾಟಕದ ಪ್ರವಾಸ ಕೈಗೊಂಡರು. ಈ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರು ಶಿವಮೊಗ್ಗದಲ್ಲಿ ವಿದ್ಯಾರ್ಥಿ ಕಾಂಗ್ರೆಸ್‌ನ ಮುಂದಾಳುಗಳಲ್ಲಿ ಒಬ್ಬರಾಗಿದ್ದರು. ನಂತರ ಸಮಾಜವಾದಿ ಆಂದೋಲನದ ಕಡೆಗೆ ಆಕರ್ಷಿತರಾದರು.

ಲೋಹಿಯಾರವರೊಂದಿಗೆ ನೇರ ಸಂಪರ್ಕವಿರಿಸಿಕೊಂಡಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ, ಶಾಂತವೇರಿ ಗೋಪಾಲಗೌಡ, ಕೆ.ಪೊನ್ನಮ್ಮಾಳ್, ಜೆ.ಹೆಚ್.ಪಟೇಲ್, ಸದಾಶಿವರಾಯರು ಮುಂತಾದ ಮೊದಲ ಹಂತದ ಕರ್ನಾಟಕದ ಸಮಾಜವಾದಿಗಳು ಮಹಾತ್ಮಾಗಾಂಧೀಜಿ ಮತ್ತು ಲೋಹಿಯಾರವರ ರಾಜಕೀಯ ಆದರ್ಶಗಳ ಪ್ರಭಾವಕ್ಕೆ ಒಳಗಾಗಿದ್ದವರು. ಅವರು ಪಕ್ಷ ರಾಜಕಾರಣದಲ್ಲಿಯೇ ಇರಲಿ, ಜನಪರ ಚಳವಳಿಗಳಲ್ಲಿಯೇ ಇರಲಿ ಲೋಹಿಯಾ ಸಿದ್ಧಾಂತವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಈ ಮೂಲಕ ಸಮಾಜವಾದಿ ಹೋರಾಟವನ್ನು ಸಂಘಟಿಸಿದರು.

ಕರ್ನಾಟಕದ ಸಮಾಜವಾದಿಗಳ ಪರಂಪರೆಯಲ್ಲಿ ಶಾಂತವೇರಿ ಗೋಪಾಲಗೌಡರದು ದೊಡ್ಡ ಹೆಸರು. ಅವರ ಸಮಾಜವಾದಿ ಚುನಾವಣಾ ಹೋರಾಟದ ಶೈಲಿ ಹೇಗಿತ್ತೆಂದರೆ ಗೌಡರು ಸ್ಪರ್ಧಿಸಿದ್ದ ಎಲ್ಲಾ ಚುನಾವಣೆಗಳನ್ನು ತಮ್ಮ ಮತದಾರರ ಖರ್ಚಿನಲ್ಲಿಯೇ ನಡೆಸಿದ್ದರು.

ಶಾಂತವೇರಿ ಗೋಪಾಲಗೌಡರು ಲೋಹಿಯಾ, ಗಾಂಧೀಜಿ, ಅಂಬೇಡ್ಕರ್‌ರವರ ಸಮಾಜವಾದಿ ಚಿಂತನೆಗಳಿಂದ ಪ್ರಭಾವಿತರಾಗಿದ್ದಲ್ಲದೆ, ಕುವೆಂಪುರವರ ದೇಶೀ ದಾರ್ಶನಿಕತೆಗಳಿಂದ ಅಗಾಧವಾಗಿ ಪ್ರಭಾವಿತರಾದವರು. ಹಿಂದುಳಿದವರ, ಬಡವರ, ದಲಿತ ಏಳಿಗೆಗಾಗಿ ಅವಿರತ ದುಡಿಯುತ್ತಾ ತಮ್ಮನ್ನು ತಾವು ಸಮಾಜದ ಕೆಲಸ ಕಾರ್ಯಗಳಿಗೆ ಮುಡುಪಾಗಿರಿಸಿಕೊಂಡುದ್ದುದು ಜನತೆ ಮೆಚ್ಚುವಂತಹದು. ಗೋಪಾಲಗೌಡರು ತಮ್ಮ ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನಗಳೆರಡರಲ್ಲೂ, ನಡೆ-ನುಡಿಗಳಲ್ಲಿ ಒಂದಾಗಿ ಬಾಳಿದರು. ಅವರಲ್ಲಿದ್ದ ಸರಳತೆ, ಸಜ್ಜನಿಕೆ, ಇನ್ನಿಲ್ಲದಂತಹ ನೈತಿಕ ಧರ್ಮ, ಅಸಾಧಾರಣ ನಿರ್ದಾಕ್ಷಣ್ಯ ಪ್ರವೃತ್ತಿ, ಅಪಾರವಾದ ಜೀವನ ಪ್ರೀತಿ, ಅಪರೂಪದ ಸದಭಿರುಚಿ, ಸೌಂದರ್ಯ ಪ್ರಜ್ಞೆಯನ್ನು ಅವರ ವಿರೋಧಿಗಳೂ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಗೌಡರನ್ನು ಅವರ ವಿರೋಧಿಗಳು ಕೂಡ ತುಂಬ ಗೌರವದಿಂದ ನೋಡಿಕೊಳ್ಳುತ್ತಿದ್ದರೆಂಬುದಕ್ಕೆ ಇವೆಲ್ಲವೂ ಸಾಕ್ಷಿಯಾಗಿವೆ.

ನಮ್ಮ ನಡುವಿನ ಬಡವರ, ದಲಿತರ ಹಾಗೂ ಶೋಷಿತರ ಜಾತಿಗಳ ಕುರಿತು ಅತ್ಯಂತ ಕಾಳಜಿ ಹೊಂದಿದವರಾಗಿದ್ದರು. ದುರ್ಬಲ ಜಾತಿಗೆ ರಾಜಕೀಯ ಪ್ರಾತಿನಿಧ್ಯ ದೊರೆಯದೇ ಇದ್ದಾಗ ಅವರಿಗೆ ಸಮಾಜವಾದಿ ಪಕ್ಷದಲ್ಲಿ ಅವಕಾಶ ನೀಡಿದರು. ಕಲೆ, ಸಾಹಿತ್ಯ, ಚರಿತ್ರೆ, ಸಂಗೀತ ಮುಂತಾದವುಗಳ ಬಗ್ಗೆ ಅಪಾರ ಮತ್ತು ಆಳವಾದ ತಿಳುವಳಿಕೆಯನ್ನು ಹೊಂದಿದ್ದ ಗೌಡರು ರಾಜಕೀಯದ ಉದ್ದಕ್ಕೂ ಲೇಖಕರ ಮತ್ತು ಕಲಾವಿದರ ಸಂಪರ್ಕದಲ್ಲಿಯೂ ಇದ್ದರು. ಸಾಮ್ರಾಜ್ಯಶಾಹಿ ಭಾಷೆಯಾದ ಇಂಗ್ಲೀಶ್ ಬಳಕೆ ವಿರುದ್ಧ ತೀವ್ರವಾದ ನೈತಿಕ ಸಿಟ್ಟನ್ನು ತೋರುತ್ತಿದ್ದರು. ಕರ್ನಾಟಕದಲ್ಲಿ ಕನ್ನಡ ಶಿಕ್ಷಣ ಮಾಧ್ಯಮ ಭಾಷೆಯಾಗಬೇಕು ಎಂಬುದು ಅವರ ಆಶಯವಾಗಿತ್ತು. ಮಾತೃಭಾಷೆಯಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣ ಕೊಡಬೇಕಾದದ್ದು ಆಡಳಿತಕ್ಕೆ ಬರುವ ಸರ್ಕಾರಗಳ ಹೊಣೆ ಎಂದು ಒತ್ತಾಯಿಸುತ್ತಿದ್ದರು. ನಮ್ಮ ಗಡಿ ಭಾಗಗಳಲ್ಲಿನ ಮರಾಠಿ, ತೆಲುಗು, ತಮಿಳು, ಮಲೆಯಾಳಂ ಭಾಷೆಗಳಿಗೆ ಸಲ್ಲಬೇಕಾಗಿರುವ ನ್ಯಾಯದ ಬಗ್ಗೆಯೂ ಅವರು ಎಚ್ಚರ ವಹಿಸುತ್ತಿದ್ದರು.

ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ಧತಿ, ಇನಾಂ ರದ್ಧತಿ, ಭೂ ಸುಧಾರಣೆ ಕಾನೂನು, ಉಚಿತ ಶಿಕ್ಷಣ, ಸ್ತ್ರೀಯರ ಪ್ರಾತಿನಿಧ್ಯತೆ, ಶಿಕ್ಷಕರ-ಕಾರ್ಮಿಕರ ಜೀವನಮಟ್ಟ ಸುಧಾರಣೆ, ಗಡಿ ಸಮಸ್ಯೆ, ಕನ್ನಡ ಭಾಷೆ, ಏಕೀಕರಣ, ಮಲೆನಾಡ ಪ್ರಗತಿ, ರೈತರ ನೀರಾವರಿ, ಜೈಲಿನ ಸುಧಾರಣೆ, ವಿಧಾನಪರಿಷತ್ತು ರದ್ಧತಿ, ಪ್ರಾಥಮಿಕ, ವಿಶ್ವವಿದ್ಯಾಲಯದವರೆಗಿನ ಶಿಕ್ಷಣ ವ್ಯವಸ್ಥೆ, ಚುನಾವಣೆ, ಅಧಿಕಾರ ವಿಕೇಂದ್ರೀಕರಣ, ಆಹಾರ ಪರಿಸ್ಥಿತಿ, ಲೆವಿ ವ್ಯವಸ್ಥೆ, ತೆರಿಗೆ ಕುರಿತು, ಭೂದಾನ ಚಳವಳಿ, ಧಾರ್ಮಿಕ ಸಂಸ್ಥೆಗಳು, ಬೆಲೆಗಳ ಸ್ಥಿರೀಕರಣ, ಪಾನ ನಿರೋಧ, ಬರಗಾಲ ಸಮಸ್ಯೆ, ಅರಣ್ಯ ಭೂಮಿ, ಪೊಲೀಸ್ ದೌರ್ಜನ್ಯ ಇನ್ನು ಮುಂತಾದ ಪ್ರಮುಖ ವಿಷಯಗಳ ಬಗ್ಗೆ ಅಗಾಧವಾದ ಪಾಂಡಿತ್ಯವನ್ನು ಹೊಂದಿದ್ದು, ಗೋಪಾಲಗೌಡರು ಸದನದ ಒಳಗೆ ಮತ್ತು ಹೊರಗೆ ಇವುಗಳ ಕುರಿತು ಹೋರಾಟ ನಡೆಸಿದ್ದು ಅವರ ಸಮಾಜವಾದಿ ಚಿಂತನೆಗಳ ಆಶಯ ಯಾವ ರೀತಿ ಇತ್ತೆಂಬುದಕ್ಕೆ ಸಾಕ್ಷಿಯಾಗಿವೆ.

೩.೪. ಸಮಾಜವಾದ ಹಾಗೂ ಗಾಂಧಿ

'ಸಮಾಜವಾದ' ಆಧುನಿಕ ಯುಗದ ಅತ್ಯಂತ ಆಕರ್ಷಕವಾದ ಪದಗಳಲ್ಲಿ ಒಂದು. ಸಮಾಜವಾದಿ ವಿಚಾರಗಳ ಆಧಾರದ ಮೇಲೆ ಯುರೋಪಿನ ಬಹುಸಂಖ್ಯಾತ ರಾಷ್ಟ್ರಗಳಲ್ಲಿ ಸ್ಥಾಪಿತವಾಗಿದ್ದ 'ಸೋಷಿಯಲ್ ಡೆಮೋಕ್ರೆಟಿಕ್' ಪಕ್ಷವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಒಂದುಗೂಡಿಸಿ ೧೮೬೪ರಲ್ಲಿ ಕಟ್ಟಲಾದ ಮೊಟ್ಟ ಮೊದಲ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯಲ್ಲಿ ಮೂರು ಮುಖ್ಯ ವಿಚಾರಧಾರೆಗಳು ನಿಖರ ರೂಪ ಪಡೆದಿದ್ದವು. ರಾಜ್ಯ ವ್ಯವಸ್ಥೆಯನ್ನೇ ನಿರಾಕರಿಸುವ ಅನಧಿಪತ್ಯವಾದ, ಪ್ರಸ್ತುತ ರಾಜ್ಯ ವ್ಯವಸ್ಥೆಯನ್ನು ಹಿಂಸಾತ್ಮಕ ಕ್ರಾಂತಿಯ ಮೂಲಕ ಕಿತ್ತೊಗೆಯಬಯಸುವ ಮಾರ್ಕ್ಸ್‌ವಾದ ಹಾಗೂ ರಾಜ್ಯ ವ್ಯವಸ್ಥೆಯನ್ನು ಜನತಾಂತ್ರಿಕ ರಾಜ್ಯವ್ಯವಸ್ಥೆಯನ್ನಾಗಿ ಮಾರ್ಪಡಿಸಿ ಅದರ ಮೂಲಕ ಸಮಾಜವಾದವನ್ನು ಸಾಧಿಸಬಯಸುವ ಜನತಾಂತ್ರಿಕ ಸಮಾಜವಾದ 'ಪ್ರಜಾಪ್ರಭುತ್ವವನ್ನು ವಿಸ್ತರಿಸುವುದರ ಜೊತೆಗೆ ರಾಜ್ಯ ವ್ಯವಸ್ಥೆಯನ್ನು ಜನಪರ ವ್ಯವಸ್ಥೆಯನ್ನಾಗಿ ಪರಿವರ್ತಿಸುವುದು ಸಾಧ್ಯ ಎಂಬುದು ಸಮಾಜವಾದಿಗಳ ಮತ್ತು ಸುಧಾರಣಾವಾದಿಗಳ ಚಿಂತನೆ. ಇವರುಗಳಲ್ಲಿ ಇಂಗ್ಲೆಂಡಿನ ಫೇಬಿಯನ್ ಸಮಾಜವಾದಿಗಳು, ಸ್ಕಾಂಡಿನೇವಿಯಾದ ಸಮಾಜವಾದಿಗಳು ಹಾಗೂ ಜರ್ಮನಿಯ ಎಡ್ವರ್ಡ್ ಬರ್ನ್‌ಸ್ಟೈನ್ ಪ್ರಮುಖರು.[೧೨]

'ಸಮಾಜವಾದ' ಪ್ರಸ್ತುತ ಇಡೀ ಪ್ರಪಂಚದಲ್ಲಿಯೇ ಅತ್ಯಂತ ಆಕರ್ಷಕ ಶಬ್ದವಾಗಿರುವುದಲ್ಲದೇ ಅತ್ಯಂತ ಜನಪ್ರಿಯ ಸಿದ್ಧಾಂತವೂ ಆಗಿದೆ. ಪ್ರಪಂಚದ ಅನೇಕ ಬಡ ದೇಶಗಳ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಸಮಾಜವಾದದ ತತ್ವಗಳು ಪರಿಹಾರವೇನೋ ಎಂಬಂತೆ ಭಾವಿಸಲಾಗಿದೆ. ಇಡೀ ಪ್ರಪಂಚವೇ ಬಂಡವಾಳಶಾಹಿ ವ್ಯವಸ್ಥೆ ಮತ್ತು ಸಮಾಜವಾದಗಳ ನಡುವೆ ಹಂಚಿ ಹೋದಂತೆ ಭಾಸವಾಗುತ್ತದೆ.

ಪ್ರಪಂಚವು ಈಗ ಎರಡು ರಾಜಕೀಯ ಪದ್ಧತಿಗಳ ಹಿಡಿತದಲ್ಲಿದೆ. ಮೂರನೆಯದೊಂದು ನಿರ್ಮಾಣವಾಗುತ್ತಿದೆ. ಬಂಡವಾಳಶಾಹಿ ಹಾಗೂ ಕಮ್ಯುನಿಸಂ ಈ ಎರಡೂ ಕೂಡ ಸಂಪೂರ್ಣವಾದ ಸಮಗ್ರವಾದ ರಾಜಕೀಯ ಸಂಪ್ರದಾಯಗಳು, ಇಡೀ ಜಗತ್ತೇ ಈ ಎರಡರ ಕೈಯಲ್ಲಿದೆ. ಇದರ ಪರಿಣಾಮ ಬಡತನ, ಯುದ್ಧ ಹಾಗೂ ಭಯ, ಅದು ಇನ್ನು ಅಸಮಗ್ರವೂ, ಅಸಂಪೂರ್ಣವೂ ಆದರೆ ತೆರೆದುದೂ ಆಗಿದೆ. ಸತ್ಯ ಮತ್ತು ಪ್ರಗತಿಗಳಿಗೆ ತೆರೆದ ಪದ್ಧತಿಯಲ್ಲಿ ಇನ್ನೂ ಸಾಧ್ಯತೆ ಇರುತ್ತದೆ. ಆದರೆ ಮುಚ್ಚಿದ ಅಥವಾ ನಿಷ್ಠುರವಾದ ಸಂಪ್ರದಾಯಗಳು ವಾಸ್ತವಾಂಶವನ್ನು ಮಲೀನಗೊಳಿಸಿ, ಅವುಗಳನ್ನು ನಿರರ್ಥಕ ಮಾಡಲು ಅಪಾರ ಹಿಂಸೆಗೆ ಇಳಿಯುತ್ತವೆ. ತೆರೆದ ಪದ್ಧತಿಗಳು, ನವೀನ ಘಟನೆಗಳು ವಾಸ್ತವಾಂಶಗಳ ಆಧಾರದ ಮೇಲೆ ಬದುಕುತ್ತವೆ ಹಾಗೂ ಪುನಶ್ಚೇತನಗೊಳ್ಳುತ್ತವೆ. ಇದೇ ಸಮಾಜವಾದದ ಕಲ್ಪನೆ.[೧೮]

ಸಮಾಜವಾದದಿಂದ ಮುಖ್ಯವಾಗಿ ಸಾಧಿಸಬೇಕಾಗಿರುವುದೇನೆಂದರೆ ಮೊಟ್ಟ ಮೊದಲನೆಯದಾಗಿ ಶೋಷಣೆಯನ್ನು ತಡೆಗಟ್ಟುವುದು. ಉತ್ಪಾದನೆಯ ಮೂಲಗಳನ್ನು ಸರ್ವರ ಹಿತಕ್ಕಾಗಿ ನಿಯಂತ್ರಿಸುವುದರ ಮೂಲಕ ಇದನ್ನು ತಡೆಗಟ್ಟಿ ಬಡತನವನ್ನು ನಿರ್ಮೂಲನಗೊಳಿಸಬೇಕು. ಎಲ್ಲರಿಗೂ ಸಮಾನ ಅವಕಾಶಗಳು ಲಭಿಸುವಂತಾಗಬೇಕು. ದುಡಿಮೆ ಮತ್ತು ಅದರ ಪ್ರತಿಫಲದ ವಿತರಣೆಯಲ್ಲಿಯೂ ಸಮಾನತೆ ಇರಬೇಕು. ಆರ್ಥಿಕ ವಿತರಣೆಯ ಜೊತೆಗೆ ವಿದ್ಯೆ, ಜ್ಞಾನ, ಅಂತಸ್ತು, ಅಧಿಕಾರ, ಸಾಮಾಜಿಕ ನ್ಯಾಯ ಎಲ್ಲರಿಗೂ ಎಲ್ಲವೂ ಸಮಾನವಾಗಿ ದೊರೆಯುವಂತಾಗಬೇಕು. ಭಾರತೀಯ ಸಮಾಜವಾದ ಅಹಿಂಸೆಯಿಂದ ಇವೆಲ್ಲವನ್ನು ಸಾಧಿಸಬೇಕೆಂಬುದರತ್ತ ಒಲವನ್ನು ತಳೆಯಿತು. ಇದಕ್ಕೆ ಬಹುಮುಖ್ಯ ಕಾರಣ ಗಾಂಧೀಜಿಯ ಪ್ರಭಾವ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಹಿಂಸೆಯೆಂಬ ಪ್ರಬಲ ಆಯುಧವನ್ನು ಬಳಸಿ ಇಡೀ ಪ್ರಪಂಚದ ಗಮನವನ್ನು ಗಾಂಧೀಜಿ ಆಕರ್ಷಿಸಿದ್ದರು. 'ಗುರಿ' ಎಷ್ಟು ಮುಖ್ಯವೋ, ಅದನ್ನು ತಲುಪುವ 'ಮಾರ್ಗ'ವೂ ಅಷ್ಟೇ ಹೆಚ್ಚು ಮುಖ್ಯ ಎಂಬುದನ್ನು ಜನರ ಮನಸ್ಸಿನಲ್ಲಿ ಸ್ಥಾಪಿಸಿದ ಗಾಂಧಿ ಸತ್ಯ, ಅಹಿಂಸೆ, ಸತ್ಯಾಗ್ರಹ ಮತ್ತು ಅಸಹಕಾರ ಇವುಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದರು.

ಗಾಂಧೀಜಿಯ ಸಮಾಜವಾದ ಚುನಾವಣೆಗಳಿಗೆ, ಅಧಿಕಾರದ ಗ್ರಹಣಕ್ಕೆ ರಾಜ್ಯಶಕ್ತಿಯ ಸೂತ್ರವನ್ನು ಹಿಡಿಯುವುದಕ್ಕೆ ಹೆಚ್ಚು ಮಹತ್ವ ಕೊಡಲಿಲ್ಲ. ರಚನಾತ್ಮಕ ಕಾರ್ಯದ ಮುಖಾಂತರ ಜನತೆಯನ್ನು ಜಾಗೃತಗೊಳಿಸುವುದು ಅವರ ಗುರಿಯಾಗಿತ್ತು. ಆ ಮುಖಾಂತರವೇ ನವಸಮಾಜದ ನಿರ್ಮಾಣ ಸಾಧ್ಯವೆಂದು ಅವರು ನಂಬಿದ್ದರು. ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಮಹತ್ವವನ್ನು ಅವರು ರಚನಾತ್ಮಕ ಕಾರ್ಯಗಳಿಗೆ ಕೊಡುತ್ತಿದ್ದರು. ಸಮಾಜ ಜಾಗ್ರತಗೊಂಡು ಎದ್ದು ನಿಂತರೆ ಸ್ವಾತಂತ್ರ್ಯ ತಾನಾಗಿಯೇ ಬರುತ್ತದೆ. ಅದು ತನಗೆ ತಾನೇ ಮೌಲ್ಯವಲ್ಲ. ರಾಷ್ಟ್ರ ಜೀವನದ ಪೂರ್ಣ ವಿಕಾಸಕ್ಕೆ ಅದು ಅನಿವಾರ್ಯ ಸಾಧನ. ಸ್ವಾತಂತ್ರ್ಯ ಬಂದ ಕೂಡಲೇ ಗಾಂಧಿಜೀ ಹೇಳಿದುದು ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಿ ಅದರ ನೇತಾರರು ಅಧಿಕಾರಕ್ಕಾಗಿ ಕಚ್ಚಾಡದೇ ಸಮಾಜ ಪರಿವರ್ತನೆಯ ರಚನಾತ್ಮಕ

ಕಾರ್ಯಗಳನ್ನು ಕೈಗೊಳ್ಳಬೇಕೆಂದು. ಆದರೆ ಗಾಂಧೀಜಿಯ ಎಲ್ಲ ಆಶಯಗಳನ್ನು ಗಾಳಿಗೆ ತೂರಿ ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ನಮ್ಮ ಆಡಳಿತ ಯಾತ್ರೆ ಹೊರಟಿತು. ಅದರ ಮುಂದೆ ಗಾಂಧೀಜಿಯನ್ನು ನಿರ್ಜೀವ ಉತ್ಸವ ಮೂರ್ತಿಯನ್ನಾಗಿ ಇಟ್ಟುಕೊಂಡಿತು.[೧೯]

ಜೀವನವನ್ನು ಸಮಗ್ರ ದೃಷ್ಟಿಯಿಂದ ಕಂಡವರು ಗಾಂಧಿ. ಮಾನವ ಕೇವಲ ಆರ್ಥಿಕ ಜೀವಿಯಲ್ಲ, ಅನ್ನ ಬಟ್ಟೆಗಳನ್ನು ನೀಡಿದರೆ, ಸಂಪತ್ತನ್ನು ಸರ್ವರಿಗೂ ಹಂಚಿದರೆ ಜೀವನ ಪರಿಪೂರ್ಣವಾಗುವುದಿಲ್ಲ. ಅದು ಸಮಾಜವಾದದ ಆದರ್ಶವಲ್ಲ. ನಿಜವಾದ ಸಮಾಜವಾದ ವ್ಯಕ್ತಿಯನ್ನು ಆರ್ಥಿಕವಾಗಿ ಉತ್ತಮ ಪಡಿಸುವುದರ ಜೊತೆಗೆ ಆತನ ಅಂತರಂಗದ ಶಕ್ತಿಗಳ ಮುಕ್ತ ವಿಕಾಸಕ್ಕೂ ಕಾರಣವಾಗುವಂತಿರಬೇಕು. ಅದಕ್ಕೆ ತಡೆಯುಂಟು ಮಾಡುವ ಆರ್ಥಿಕ, ಸಾಮಾಜಿಕ, ಧಾರ್ಮಿಕ ಧೋರಣೆಯ ಮಾಧ್ಯಮಗಳನ್ನು ಯಾವುದೇ ಮುಲಾಜಿಲ್ಲದೆ ಬುಡಸಮೇತ ಕಿತ್ತೊಗೆಯಬೇಕು. ಸಾಮಾಜಿಕ ಸಂಬಂಧಗಳು, ಸಂಪ್ರದಾಯ ಆಚರಣೆಗಳು, ನಡೆ–ನುಡಿಗಳು, ರಾಜಕೀಯ ವ್ಯವಸ್ಥೆಗಳು, ಶಿಕ್ಷಣ, ಸಾಮಾಜಿಕ ಸಂಘ ಸಂಸ್ಥೆಗಳು, ಜಾತೀಯತೆ, ಧಾರ್ಮಿಕ ಸಂಪ್ರದಾಯಗಳು, ಮದುವೆ ಇತ್ಯಾದಿ ಸಮಾರಂಭಗಳು, ಹಬ್ಬ ಹರಿದಿನಗಳಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕು. ಇದು ನಮ್ಮ ಸಮಾಜದ ಸಂಪ್ರದಾಯದ ಹೆಬ್ಬಂಡೆ ಇದ್ದಂತೆ. ಸಮಾಜದ ಜನರಲ್ಲಿ ಜಾಗೃತಿ ಮೂಡಿಸುವ ಮುಖಾಂತರ ಅವರ ಆಲೋಚನೆಗಳನ್ನು ಬದಲಾಯಿಸಬೇಕು. ಇದು ಹಿಂಸೆಯಿಂದಾಗಲೀ ಅಥವಾ ಯಾವುದೇ ಕಾನೂನಿನಿಂದಾಗಲಿ ಆಗಲಾರದು. ಬಹುಮಟ್ಟಿಗೆ ಮಾನಸಿಕ ಪರಿವರ್ತನೆಯಿಂದ ಆಗುವಂತಹದ್ದು. ಇದನ್ನು ಸಾಧಿಸಲು ರಚನಾತ್ಮಕ ಕಾರ್ಯಕರ್ತರ ಒಂದು ದೊಡ್ಡ ದಂಡೇ ನಿರ್ಮಾಣವಾಗಬೇಕು ಎಂದು ಗಾಂಧೀಜಿ ಮತ್ತು ರಾಮಮನೋಹರ ಲೋಹಿಯಾ ಬಹಳ ಹಿಂದೆಯೇ ಹೇಳಿದ್ದರು.

ಮೇಲ್ವರ್ಗದ ಜನಾಂಗದವರು ಕೆಳವರ್ಗದ ಜನರ ಮೇಲೆ ನಡೆಸುವ ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಹೋರಾಟದ ಮುಖಾಂತರ ಸಾಮಾಜಿಕ ಏಕತೆಯನ್ನುಂಟುಮಾಡುವುದು ಮತ್ತು ಭಾರತೀಯ ಸಮಾಜಕ್ಕೆ ಅಂಟಿಕೊಂಡಿರುವ ಅನಿಷ್ಟ ಪದ್ಧತಿಯನ್ನು ಸತ್ಯಾಗ್ರಹ ರೂಪದ, ಅಹಿಂಸಾತ್ಮಕ ರೂಪದ ಹೋರಾಟದಿಂದ ನವ ಸಮಾಜವನ್ನು ನಿರ್ಮಿಸುವ ಪರಿಕಲ್ಪನೆ ಗಾಂಧೀಜಿಯವರ ಕನಸಾಗಿತ್ತು. ಸತ್ಯ ಶೋಧನೆಯೇ ಜೀವನದ ಗುರಿಯಾಗಬೇಕೆಂಬುದು ಗಾಂಧೀಜಿಯವರ ನಿಲುವಾಗಿತ್ತು. ಅದರ ಹಿನ್ನೆಲೆಯಲ್ಲಿಯೇ ಅವರ ಹೆಚ್ಚಿನ ಕಾರ್ಯಗಳು ಸಾಗಿದ್ದವು.

ಗಾಂಧೀಜಿಯನ್ನು ಕುರಿತು ಲೋಹಿಯಾರ ಮಾತುಗಳನ್ನು ಇಲ್ಲಿ ಗಮನಿಸಬೇಕು. ನನಗೆ ಅನಿಸುವ ಹಾಗೆ ಒಬ್ಬ ವ್ಯಕ್ತಿ ಯಾವುದೇ ಆಸರೆಯಿಲ್ಲದೆ ದಬ್ಬಾಳಿಕೆಯನ್ನು ಎದುರಿಸಲು ಸಾಧ್ಯವಾಗುವಂತೆ ಮಾಡುವ ಈ ಗುಣ ಮಹಾತ್ಮಾಗಾಂಧೀಜಿಯವರ ಬದುಕು ಮತ್ತು ಕಾರ್ಯಸಾಧನೆಯಲ್ಲಿ ಅತ್ಯಂತ ಮಹಾನ್ ಗುಣವೆನಿಸಿತ್ತು.[೨೦] ಗಾಂಧಿಯವರಿಗೆ ತಮ್ಮದೇ ಆದ ಸಮಾಜವಾದದ ಬಗೆಗಿನ ಪರಿಕಲ್ಪನೆ ಇತ್ತು. ಅದು ಜಯಪ್ರಕಾಶ್ ನಾರಾಯಣ ಅಥವಾ ಅಶೋಕ ಮೆಹತಾ ಅವರ

ಪರಿಕಲ್ಪನೆಗಳಿಗಿಂತ, ಚಿತ್ರಣಗಳಿಗಿಂತ ಭಿನ್ನವಾಗಿತ್ತು. ಗಾಂಧಿಯವರ ಸಮಾಜವಾದ ಅವರ ಬದುಕನ್ನೇ ಬದಲಾಯಿಸಿದ ಜಾನ್ ರಸ್ಕಿನ್ ಅವರು ಬರೆದ ಪುಸ್ತಕ 'ಅನ್ ಟು ದ ಲಾಸ್ಟ್' ನಲ್ಲಿ ಮೊಳಕೆಯೊಡೆಯಿತು ಎಂದು ತೋರುತ್ತದೆ. ನನ್ನ ಸಮಾಜವಾದವೆಂದರೆ 'ಅನ್ ಟು ದ ಲಾಸ್ಟ್' ಎಂದು ಅವರೇ ಹೇಳಿದ್ದಾರೆ. ಅವರು ತಮ್ಮ ಸಮಾಜವಾದವನ್ನು 'ಚರಕದ ಸಮಾಜವಾದ' ಎಂದೂ ಕರೆದಿದ್ದಾರೆ. ಲೂಯಿಪಾಶ್ಚರ್ ಅವರು ಗಾಂಧಿಯವರ ಸಮಾಜವಾದವನ್ನು 'ನೈತಿಕ ಸಮಾಜವಾದ' ಒಂದು ಅಹಿಂಸಾತ್ಮಕ ಕ್ರಾಂತಿಕಾರಿಯಲ್ಲದ, ದೇವಾನಾಂಪ್ರಿಯ ಸಮಾನತೆಯಾಧಾರಿತ ಸಮಾಜವಾದ' ಎಂದು ಕರೆದಿದ್ದಾರೆ.[೨೦]

ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಹೋರಾಡಿ ಯಶಸ್ವಿಯಾದ ಪ್ರಪಂಚದ ಮೊಟ್ಟಮೊದಲ ವ್ಯಕ್ತಿ ಎಂದರೆ ಗಾಂಧಿ. ಇದೇ ಸಂದರ್ಭದಲ್ಲಿ ಗಾಂಧೀಜಿ ಸಾಮಾಜಿಕ ಬದಲಾವಣೆ ತರುವ ತನ್ನ ಚಿಂತನೆಗಳಿಗೆ ಬದ್ಧವಾಗಿ ಬದುಕುವುದರಲ್ಲಿ ನಂಬಿಕೆ ಹೊಂದಿದ್ದ ತತ್ವಜ್ಞಾನಿ ಸಹ. ಅವರ ಸತ್ಯವನ್ನು ಅಸತ್ಯದ ಅಥವಾ ಅನ್ಯಾಯದ ಮಾರ್ಗದಿಂದ ಕಾಣಲು ಸಾಧ್ಯವಿಲ್ಲ. ಗಾಂಧೀಜಿಯವರು ಅಹಿಂಸೆಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಕೇವಲ ಪ್ರತಿ ಹಿಂಸೆಯನ್ನು ಬಳಕೆ ಮಾಡಬಾರದು ಎನ್ನುವುದಕ್ಕಿಂತ ಹೆಚ್ಚಾಗಿ ಯಾವ ರೀತಿಯ ಸಮಾಜವನ್ನು ನಾವು ನಿರ್ಮಿಸಬೇಕು ಎನ್ನುವುದರ ಕುರಿತು ಅವರ ಒಲವಿತ್ತು. ಅವರ ಸಮಾಜವಾದದ ಮೊದಲ ವಾಕ್ಯವೇ 'ಇಡೀ ಮಾನವ ಚರಿತ್ರೆಯೇ ವರ್ಗ ಸಂಘರ್ಷದ ಜೀವನ' ಎಂದು ಹೇಳುವುದು ಅದರರ್ಥ. ಈ ಮಾನವ ಇತಿಹಾಸದಲ್ಲಿ ನಡೆದಿರುವ ಎಲ್ಲಾ ಯುದ್ಧಗಳು ಅಥವಾ ಘರ್ಷಣೆಗಳು ಅತಿಯಾದ ಸವಲತ್ತುಗಳನ್ನು ಹೊಂದಿರುವ ಕೆಲವರು ಮತ್ತು ಸವಲತ್ತೇ ಇಲ್ಲದ ಹೆಚ್ಚಿನ ಜನರ ನಡುವೆ ಎಂಬುದು. ಗಾಂಧೀಜಿಯವರು ಬಯಸಿದ್ದು ಸರ್ವರ ಹಿತ, ಸರ್ವರ ಏಳಿಗೆಯೇ ಪ್ರತಿಯೊಬ್ಬ ವ್ಯಕ್ತಿಯ ಬಾಳಿನ ಆದರ್ಶವಾಗಬೇಕೆಂಬುದು. ಎಲ್ಲಾ ವ್ಯಕ್ತಿಗಳಿಗೂ ಸಮಾನವಾದ ಮಹತ್ವವಿರಬೇಕು. ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ಸ್ಥಾನಮಾನಗಳು ಸಿಗಬೇಕೆಂಬ ಸಮಾಜವಾದಿ ಚಿಂತನೆ ಅವರದ್ದಾಗಿತ್ತು.

ಜನತಂತ್ರದ ಅರ್ಥ ಎಲ್ಲರಿಗೂ ರಾಜಕೀಯ ಸಮಾನತೆ ಎನ್ನುವುದನ್ನು ಗಾಂಧಿ ಅರ್ಥಮಾಡಿಕೊಂಡಿದ್ದರು. ಇಡೀ ಜಗತ್ತಿನ ತುಂಬ ಆವರಿಸಿದ್ದು ಜನತಂತ್ರದ ಅಂತಃಸತ್ವ ಯಾರೊಬ್ಬರೂ ಇನ್ನೊಬ್ಬರಿಗಿಂತ ಮೇಲೆ ಎಂದು ಪರಿಗಣಿಸಬಾರದು ಎಂದು ಒತ್ತಾಯಿಸುತ್ತದೆ ಎಂದು ಅವರು ನಂಬಿದ್ದರು. 'ಸಮಾಜವಾದಿ ಯಾರು' ಎಂಬ ಲೇಖನದಲ್ಲಿ ಅವರು ಸಮಾಜವಾದ ಎನ್ನುವುದು ಒಂದು ಅತ್ಯಂತ ಸುಂದರವಾದ ಶಬ್ದ ಹಾಗೂ ನನಗೆ ಗೊತ್ತಿರುವ ಮಟ್ಟಿಗೆ, ಸಮಾಜವಾದದಲ್ಲಿ ಸಮಾಜದ ಎಲ್ಲಾ ಸದಸ್ಯರು ಸಮಾನರಾಗಿರುತ್ತಾರೆ. ಯಾರೂ ಕೆಳಗಲ್ಲ, ಯಾರೂ ಮೇಲಲ್ಲ. ಅಲ್ಲಿ ರಾಜರು-ರೈತರು, ಶ್ರೀಮಂತರು-ಬಡವರು, ಮಾಲೀಕರು-ಕೂಲಿಕಾರರು ಎಲ್ಲರೂ ಒಂದೇ ಮಟ್ಟದಲ್ಲಿ ಇರುತ್ತಾರೆ ಎಂದು ಹೇಳಿದ್ದರು. ಆದರೆ ಇಲ್ಲಿ ಗಾಂಧಿ ಆರ್ಥಿಕ ಸಮಾನತೆಯ ಬಗ್ಗೆ ಅಲ್ಲ,

ರಾಜಕೀಯ ಸಮಾನತೆಯ ಬಗ್ಗೆ ಮಾತನಾಡುತ್ತಿದ್ದರು ಎನ್ನುವುದು ಸ್ಪಷ್ಟ. ಏಕೆಂದರೆ ಆರ್ಥಿಕ ಸಮಾನತೆ ಇದ್ದರೆ ಅಲ್ಲಿ ರಾಜರು-ರೈತರು, ಶ್ರೀಮಂತರು-ಬಡವರು ಇರುವ ಪ್ರಶ್ನೆಯೇ ಇರುವುದಿಲ್ಲ. ಹಾಗೆ ಹೇಳುವುದು ಶಬ್ದಶಃ ಪರಸ್ಪರ ವೈರುದ್ಯವಾಗುತ್ತದೆ.[೨೨]

ಬಾಪೂ ಹೆದ್ದೂರಶೆಟ್ಟಿಯವರು ಮೇಲಿನ ಹೇಳಿಕೆಯನ್ನು ನೀಡಿದ್ದರೂ ಸಮಾಜದಲ್ಲಿ ದುರ್ಬಲರ ಆರ್ಥಿಕ ಸಬಲೀಕರಣಕ್ಕಾಗಿ ಗಾಂಧೀಜಿಯವರು ಪ್ರತಿಪಾದಿಸಿದ್ದ ಸ್ವದೇಶಿ ಚಳವಳಿ ಮತ್ತು ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಗಮನಿಸಿದಾಗ ಸಮಾಜದಲ್ಲಿ ಆರ್ಥಿಕ ಸಮಾನತೆಗಾಗಿ ಗಾಂಧಿ ತತ್ವ ಪ್ರತಿಪಾದನೆ ಮಾತ್ರವಲ್ಲದೆ ಆಚರಣೆಯನ್ನೂ ಅಳವಡಿಸಿಕೊಂಡಿದ್ದರೆಂದು ಗೊತ್ತಾಗುತ್ತದೆ.

ಸಮಾಜವಾದದ ಬಗ್ಗೆ ಗಾಂಧೀಜಿಯವರಿಗೆ ಐದು ಪ್ರಮುಖ ತಕರಾರುಗಳಿದ್ದವು. ಭಾರತದ ಸಮಾಜವಾದಿಗಳು ಪ್ರತಿಪಾದಿಸುತ್ತಿದ್ದ ಸಮಾಜವಾದ ವಿದೇಶದಲ್ಲಿ ಹುಟ್ಟಿದ್ದು ಹಾಗೂ ಆ ಕಾರಣದಿಂದ ಅದು ಭಾರತದ ಸಂಸ್ಕೃತಿಗೆ ಪರಕೀಯವಾಗಿವೆ ಎನ್ನುವುದು ಅವರ ಮೊದಲ ತಕರಾರಾಗಿತ್ತು. ಸಮಾಜವಾದ ನಮ್ಮ ಪರಿಕಲ್ಪನೆಗಳಿಗಿಂತ ಮೂಲಭೂತವಾಗಿ ಭಿನ್ನವಾದ ಪರಿಕಲ್ಪನೆಗಳ ಮೇಲೆ ಆಧಾರಿತವಾಗಿದೆ ಎನ್ನುವುದು ಅವರ ಎರಡನೆಯ ತಕರಾರಾಗಿತ್ತು. ಸಮಾಜವಾದವನ್ನು ಜಾರಿಗೆ ತರಲು ಬಳಸಲಾಗುವ ವಿಧಾನದ ಬಗ್ಗೆ ಅವರ ಮೂರನೆಯ ತಕರಾರಿತ್ತು. ಸಮಾಜವಾದ ವೈಯಕ್ತಿಕ ಸ್ತರದಲ್ಲಿ ಆಚರಣೆಗೆ ತರುವುದನ್ನು ಒಪ್ಪುತ್ತಿರಲಿಲ್ಲ ಎನ್ನುವುದು ಅವರ ನಾಲ್ಕನೆಯ ತಕರಾರಾಗಿತ್ತು. ಸಮಾಜವಾದ ಪರಿಕಲ್ಪಿಸಿದ ಔದ್ಯೋಗೀಕರಣದ ಮಾದರಿಯ ಬಗ್ಗೆ ಅವರ ಐದನೆಯ ತಕರಾರಿತ್ತು.[೨೩]

ಈ ಹಿನ್ನೆಲೆಯಲ್ಲಿ ಗಾಂಧೀಜಿಯವರು ಭಾರತೀಯ ಪ್ರಣೀತವಾದ ಜೀವನಕ್ರಮದಿಂದ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಆಶಿಸಿದರು. 'ಗಾಂಧಿ ಹೇಳುತ್ತಿದ್ದರು- ಬೇರೆಯವರಲ್ಲಿ ಕಾಣಬಯಸುವ ಬದಲಾವಣೆಗಳನ್ನು ಮೊದಲು ನೀನು ಅಳವಡಿಸಿಕೋ' ಆದ್ದರಿಂದ ಗಾಂಧಿವಾದವೇ ಒಂದು ವಿಶೇಷ ಆರ್ಥಿಕ ಸಿದ್ಧಾಂತವಾಗಿತ್ತು ಎಂದು ಹೇಳಬಹುದೇ ಹೊರತು ಗಾಂಧಿವಾದದಲ್ಲಿ ಸಮಾಜವಾದಿ ವಿಚಾರಗಳನ್ನು ಹುಡುಕುವುದು ಅಪ್ರಸ್ತುತವೆನಿಸುತ್ತದೆ.

ಕೆಲವೇ ದಿನಗಳಲ್ಲಿ ಅಶೋಕ ಮೆಹ್ತಾ, ಅರಣ್‌ಅಸಿಫ್ ಆಲಿ ಅವರನ್ನೊಳಗೊಂಡ ಸಮಾಜವಾದಿ ಪಕ್ಷದ ನಿಯೋಗವೊಂದು ಗಾಂಧೀಜಿಯನ್ನು ಭೇಟಿ ಮಾಡಿತು. ದೇಶ ವಿಭಜನೆಯ ವಿಚಿದ್ರಕಾರಿ ರಾಜಕಾರಣದ ಹಿನ್ನೆಲೆಯಲ್ಲಿ ಸಮಾಜವಾದಿಗಳ ನಾಯಕತ್ವವನ್ನು ವಹಿಸಿಕೊಳ್ಳುವಂತೆ ಕೇಳಿಕೊಂಡಿತು. ತನ್ನನ್ನು ಜಾತಿರಹಿತ, ವರ್ಗರಹಿತ, ಸಮಾಜ ನಿರ್ಮಾಣಕ್ಕೆ ಬದ್ಧವಾದ ಹುಟ್ಟು ಸಮಾಜವಾದಿ ಎಂದು ಕರೆದುಕೊಂಡ ಗಾಂಧೀಜಿ ಸಮಾಜವಾದಿಗಳು ಮುಷ್ಕರ-ಪ್ರತಿಭಟನೆಯನ್ನು ಕೈಬಿಟ್ಟು ಅಹಿಂಸೆಯನ್ನು ಒಪ್ಪಿಕೊಂಡು, ದೇವರಲ್ಲಿ ನಂಬಿಕೆಯಿಟ್ಟು, ಗ್ರಾಮಗಳಲ್ಲಿ ವಾಸಿಸುತ್ತಾ ದೀನದಲಿತರ ಹಾಗೂ ಮಹಿಳೆಯರ ಉನ್ನತಿಗಾಗಿ ಶ್ರಮಿಸುವುದಾದರೆ ಅವರ ಪಕ್ಷದ ಅಧ್ಯಕ್ಷರಾಗಲೂ ಸಿದ್ಧವೆಂದು ಹೇಳಿ ನಿಯೋಗವನ್ನು ನಿರಾಸೆಗೊಳಿಸಿದರು. ಜೊತೆಗೆ ೧೯೪೨ರಲ್ಲಿ ಭೂಗತ ಚಟುವಟಿಕೆಗಳ

ಮೂಲಕ ಸಮಾಜವಾದಿಗಳು ಹಿಂಸೆಗೆ ಮಾನ್ಯತೆ ನೀಡಿದ್ದೇ ಇಂದಿನ ಕೋಮು ಹಿಂಸೆಗೂ ಕಾರಣವಾಗಿದೆ ಎಂದು ವಿಶ್ಲೇಷಿಸಿ ನಿಯೋಗವನ್ನು ದಂಗುಬಡಿಸಿದರು.[೨೪]

ಮೇಲಿನ ಹೇಳಿಕೆಯನ್ನು ಗಮನಿಸಿದಾಗ ಸಮಾಜವಾದಿಗಳ ತತ್ವ ಮತ್ತು ಕಾರ್ಯ ವಿಧಾನದ ಬಗ್ಗೆ ಗಾಂಧೀಜಿಗೆ ಭಿನ್ನಾಭಿಪ್ರಾಯ ಇದ್ದುದು ತಿಳಿಯುವುದಲ್ಲದೇ ಸಾಕಷ್ಟು ಅಸಮಧಾನವೂ ಇದ್ದಿತೆಂದು ಗೊತ್ತಾಗುತ್ತದೆ.

ಗಾಂಧಿಯವರಿಗೆ ಸಮಾಜವಾದಿಗಳೊಂದಿಗಿನ ಭಿನ್ನಾಭಿಪ್ರಾಯದ ಬಗೆಗಷ್ಟೇ ಅಲ್ಲ, ಸಮಾಜವಾದಿಗಳು ತಮ್ಮನ್ನು ಮೂದಲಿಸುತ್ತಾರೆ ಎನ್ನುವ ಬಗ್ಗೆಯೂ ಅರಿವಿತ್ತು. ಬಹಳಷ್ಟು ಸಮಾಜವಾದಿಗಳು, ಅದರಲ್ಲೂ ಮಾರ್ಕ್ಸ್‌ವಾದಿ ಚಿಂತನೆಯುಳ್ಳ ಸಮಾಜವಾದಿಗಳು ಗಾಂಧಿಯನ್ನು ಟೀಕೆ ಮಾಡುತ್ತಿದ್ದರು. ಸಮಾಜವಾದ ಹಾಗೂ ಸಮಾನತೆಯನ್ನು ಧರ್ಮ ಹಾಗೂ ಪಾರಮಾರ್ಥಿಕ ದೃಷ್ಟಿಯಿಂದ ಗಾಂಧಿ ಕಂಡಿದ್ದರಿಂದ ಸಮಕಾಲೀನ ಸಮಾಜವಾದಿಗಳು ಗಾಂಧಿಯವರನ್ನು ಹಾಗೂ ಅವರ ವಿಚಾರಗಳನ್ನು ಕುಚೋದ್ಯ ಮಾಡಿರುವುದನ್ನು ಚರಿತ್ರೆಯಲ್ಲಿ ಕಾಣಬಹುದು. ಅದೇನೆ ಇದ್ದರೂ ಕಾಲ ಮಾತ್ರ ಯಾವುದೇ ಸಿದ್ಧಾಂತದ ಗಟ್ಟಿತನವನ್ನು ಅಥವಾ ಜೊಳ್ಳುತನವನ್ನು ಸಾಬೀತು ಮಾಡಬಲ್ಲದು.

೩.೫ ಸಮಾಜವಾದ ಮತ್ತು ಅಂಬೇಡ್ಕರ್

ಅಂಬೇಡ್ಕರ್ ಪ್ರಕಾರ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರ ಭಾವಗಳನ್ನು ಆಧರಿಸಿದ ಸಮಾಜವೇ ಆದರ್ಶ ಸಮಾಜ. ಸಮಾಜವಾದದ ಈ ಮೂಲ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರಭಾವಗಳೇ ಅಂಬೇಡ್ಕರ್ ಅವರ ಜೀವನದುದ್ದಕ್ಕೂ ಅವರ ಒತ್ತಾಸೆಗಳಾಗಿ ಉಳಿದುಕೊಂಡವು.

ಅಂಬೇಡ್ಕರ್ ಹಾಗೂ ಸಮಾಜವಾದಿಗಳ ಆದರ್ಶಗಳು ಏಕರೂಪಿಯಾಗಿದ್ದರೂ ಅವರು ಅವುಗಳ ಮೇಲೆ ಕೊಡುತ್ತಿದ್ದ ವ್ಯಾಖ್ಯಾನಗಳಲ್ಲಿ ಭಿನ್ನತೆ ಇರುತ್ತಿತ್ತು. ಮಾರ್ಕ್ಸ್‌ನಿಗೆ ವರ್ಗಗಳ ನಡುವೆ ಅಸಮಾನತೆಯನ್ನು ಅಂತ್ಯಗೊಳಿಸಬೇಕಾಗಿತ್ತು. ಅಂಬೇಡ್ಕರ್‌ರವರಿಗೆ ಸಾಮಾಜಿಕ ಅಸಮಾನತೆಗಳನ್ನು ಅಂದರೆ ಹಿಂದೂ ಸಮುದಾಯದಲ್ಲಿ ಸಾಮಾಜಿಕ ಅಸಮಾನತೆಯನ್ನು ಪೋಷಿಸಿ, ಬೆಳೆಸುತ್ತಿದ್ದ ಜಾತಿ ಪದ್ಧತಿಯನ್ನು ಅಂತ್ಯಗೊಳಿಸುವ ಉದ್ದೇಶವಿತ್ತು. ಭಾರತದ ಸಮಾಜವಾದಿಗಳಿಗೆ ಜಾತಿ ಆಧಾರಿತ ಅಸಮಾನತೆಯನ್ನು ಅಂತ್ಯಗೊಳಿಸುವುದು ಆದ್ಯತೆಗಳಲ್ಲಿ ಒಂದಾಗಿದ್ದರೆ ಅಂಬೇಡ್ಕರ್ ಅವರಿಗೆ ಅದೇ ಬಹುಮುಖ್ಯ ಆದ್ಯತೆಯಾಗಿತ್ತು. ಆದುದರಿಂದ ಬೇರೆ ಸಮಾಜವಾದಿಗಳಿಗಿಂತ ಭಿನ್ನ ರೀತಿಯಲ್ಲಿ ಅಂಬೇಡ್ಕರ್ ಅವರು ಸಮಾಜವಾದದ ಆದರ್ಶಗಳ ಕ್ರಮಗಳನ್ನು ಬದಲಾಯಿಸಿದರು. ಅಂಬೇಡ್ಕರ್ ಅವರು ಉನ್ನತ ಜಾತಿಗಳು ಹಾಗೂ ಅಸ್ಪೃಶ್ಯರ ಮಧ್ಯೆ 'ಸಹೋದರಭಾವ'ಕ್ಕಾಗಿ ಹೋರಾಡಿದರು. ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರ ಭಾವಗಳ ಪರಿಕಲ್ಪನೆಗಳ ಬಗ್ಗೆ ಅಂಬೇಡ್ಕರ್ ಅವರು ಪರಿಭಾವಿಸಿದ ಸೂಕ್ಷ್ಮ ಭಿನ್ನತೆಗಳು ಜಾತಿ ಪದ್ಧತಿಯನ್ನು

ನಿರ್ಮೂಲನಗೊಳಿಸುವುದರ ಮೂಲಕ ಸಾಧಿಸುವ ಸಾಮಾಜಿಕ 'ಸಹೋದರಭಾವ'ದ ಬಗೆಗಿನ ಅವರ ಆದ್ಯತೆಯನ್ನು ಹಾಗೂ ಕಾಳಜಿಯನ್ನು ಪ್ರತಿನಿಧಿಸುತ್ತದೆ. ಅಂಬೇಡ್ಕರ್ ಅವರಿಗೆ ಸಹೋದರಭಾವ ಎನ್ನುವುದು ಮಾನವ ಸಮಾಜದ ಒಂದು ಆಂತರಿಕ ಅರಳುವಿಕೆಯಾಗಿತ್ತು. ಈ ಅರ್ಥದಲ್ಲಿ ಅವರು ಅದನ್ನು ಜನತಂತ್ರದೊಂದಿಗೆ ಸಮೀಕರಿಸಿದರು.[೨೫]

ಭಾರತೀಯ ಸಮಾಜವಾದ ಮತ್ತು ಗಾಂಧೀಜಿಯವರ ನಡುವೆ ಹೇಗೆ ಅಂತರ್‌ಸಂಬಂಧ ಏರ್ಪಟ್ಟಿತ್ತೋ ಅಂತೆಯೇ ಅಂಬೇಡ್ಕರ್ ಮತ್ತು ಸಮಾಜವಾದದ ನಡುವೆ ಅಂತರ್‌ಸಂಬಂಧ ಏರ್ಪಟ್ಟಿದ್ದನ್ನು ಗಮನಿಸಬಹುದು. ಅಂಬೇಡ್ಕರ್ ಅವರ ವಿಶಿಷ್ಟ ಆಲೋಚನಾ ಕ್ರಮ ಮತ್ತು ಸಮಾಜದ ಕುರಿತ ಗ್ರಹಿಕೆಯನ್ನು ಸಮಾಜವಾದವೂ, ಸಮಾಜವಾದದ ವಿಶಿಷ್ಟ ತಿಳುವಳಿಕೆಯನ್ನು ಅಂಬೇಡ್ಕರ್ ಅವರು ಅಂತರ್ಗತ ಮಾಡಿಕೊಂಡದ್ದು ಕಾಣಿಸುತ್ತದೆ. ಹಲವಾರು ವಿಚಾರ ಮತ್ತು ರಾಜಕೀಯ ನಿಲುವುಗಳಲ್ಲಿ ಅಂಬೇಡ್ಕರ್ ಮತ್ತು ಸಮಾಜವಾದಿಗಳ ನಡುವೆ ಸಾಮ್ಯತೆ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. ಜಾತಿ ನಿರ್ಮೂಲನೆ ವಿಚಾರ ಕುರಿತು ಇದನ್ನು ಸ್ಪಷ್ಟಪಡಿಸಿ ಕೊಳ್ಳಬಹುದಾಗಿದೆ. ಇಬ್ಬರ ರಾಜಕೀಯ ದಾರಿಗಳು ಭಿನ್ನಭಿನ್ನವಾಗಿದ್ದರೂ ಗುರಿಯಲ್ಲಿ ಸಾಮ್ಯತೆ ಗೋಚರಿಸುತ್ತದೆ. ಹಾಗಾಗಿಯೇ ಭಾರತೀಯ ಸಮಾಜವಾದ ರೂಪುಗೊಳ್ಳುವಲ್ಲಿ ಗಾಂಧಿ ಹೇಗೆ ವಿಶಿಷ್ಟ ಪಾತ್ರ ವಹಿಸಿದರೋ ಅಂಬೇಡ್ಕರ್ ಕೂಡ ಮಹತ್ವದ ಕೊಡುಗೆ ನೀಡಿದ್ದಾರೆ.

'ಜಾತಿ' ಕುರಿತು ಅಂಬೇಡ್ಕರ್ ಅವರು ಗಾಂಧಿ, ಕಾಂಗ್ರೆಸ್, ಸಮಾಜವಾದ, ಮಾರ್ಕ್ಸ್‌ವಾದ, ಜನಸಂಘಗಳಿಗಿಂತಲೂ ಭಿನ್ನವಾದ ಮತ್ತು ವಿಶಿಷ್ಟವಾದ ತಿಳವಳಿಕೆ ಮತ್ತು ಕಾರ್ಯಯೋಜನೆ ಹೊಂದಿದ್ದರು. ಅನಿಷ್ಟವಾದ ಜಾತಿ ವ್ಯವಸ್ಥೆ ಬದಲಾಗದ ಹೊರತು, ಜಾತಿ ವೈರುಧ್ಯಗಳು ಪರಿವರ್ತನೆಯಾಗದ ಹೊರತು ಬಲಿಷ್ಠ ಭಾರತದ ನಿರ್ಮಾಣ ಸಾಧ್ಯವಿಲ್ಲ ಎಂದು ನಂಬಿದ್ದರು. ಮನುಷ್ಯ ಭಾರತದ ನಿರ್ಮಾಣ ಸಾಧ್ಯವಿಲ್ಲ ಎಂದು ನಂಬಿದ್ದರು. ಮನುಷ್ಯ ಮನುಷ್ಯರ ನಡುವಿನ ಕನಿಷ್ಠ ಸಮಾನತೆಗಾಗಿ ಅಂಬೇಡ್ಕರ್ ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿಯೇ 'ಮೀಸಲಾತಿ' ಎನ್ನುವ ಬಹುದೊಡ್ಡ ಅಸ್ತ್ರವನ್ನು ಬಳಸಿ ಸಾಂವಿಧಾನಿಕ ಮಾನ್ಯತೆ ನೀಡಿದರು. ಸಮಾಜವಾದಿಗಳು ಚಳವಳಿ, ಹೋರಾಟದ ಮೂಲಕ ಸಾಧಿಸಲು ಯತ್ನಿಸಿದ್ದನ್ನು ಅಂಬೇಡ್ಕರ್ ಅವರು ಸಂವಿಧಾನ ರಚನೆ ಮತ್ತು ರಾಜ್ಯಾಂಗದ ಅಧಿಕಾರದ ಮೂಲಕ ಮಾಡಲು ಯತ್ನಿಸಿದರು.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಿಳಿತಗೊಂಡಿದ್ದ ಸಾಮಾಜಿಕ ಅಸಮಾನತೆಗೆ ಅಂಬೇಡ್ಕರರು ಸಮಾಜವಾದಿಗಳ ಗಮನವನ್ನು ಮೇಲಿಂದ ಮೇಲೆ ಆಕರ್ಷಿಸಿದ್ದರು. ಆ ಕುರಿತು ಚರ್ಚೆಗೆ ಆಹ್ವಾನಿಸಿದ್ದರು. ಸಮಾಜ ವ್ಯವಸ್ಥೆಯು ಕೇವಲ ಆರ್ಥಿಕ ಸ್ವರೂಪವನ್ನು ಮಾತ್ರ ಆಧರಿಸಿರಲಿಲ್ಲ. ಅಲ್ಲಿ ಸಾಮಾಜಿಕ ಸ್ವರೂಪ ಸಹ ಮುಖ್ಯವಾಗುತ್ತದೆ. ಆರ್ಥಿಕ ಅಸಮಾನತೆ ಜೀವನದ ಭೌತಿಕ ಸ್ವರೂಪವನ್ನು ಭಗ್ನಗೊಳಿಸಿದರೆ, ಸಾಮಾಜಿಕ ಅಸಮಾನತೆ ಜೀವನದ ಮಾನಸಿಕ ಹಾಗೂ ಆಧ್ಯಾತ್ಮಿಕ ಸ್ವರೂಪವನ್ನು ಭಗ್ನಗೊಳಿಸಿದೆ ಎಂದರು ಅಂಬೇಡ್ಕರ್.

ಅಂಬೇಡ್ಕರ್ ಅವರು ಒಬ್ಬ ಶ್ರೇಷ್ಠ ಸಾಮಾಜಿಕ ಚಿಂತಕರಾಗಿ, ರಾಜಕೀಯ ಮುತ್ಸದ್ಧಿಯಾಗಿ, ನ್ಯಾಯಶಾಸ್ತ್ರಜ್ಞರಾಗಿ, ಹೋರಾಟಗಾರರಾಗಿ ಭಾರತೀಯ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಬೇರುಬಿಟ್ಟಿರುವ ಅಸ್ಪೃಶ್ಯತೆಯ ನಿವಾರಣೆಗಾಗಿ ತೀವ್ರವಾದ ಹೋರಾಟ ಮಾಡಿದರು. ಸಾಮಾಜಿಕ ಅಸಮಾನತೆ ಹಾಗೂ ಅಸ್ಪೃಶ್ಯತೆಯನ್ನು ನೀಗಿಸುವಲ್ಲಿ ಅಂಬೇಡ್ಕರರು ಚಳವಳಿಯ ಮುಖಾಂತರ ಜೀವಪರ ಕಾಳಜಿಯನ್ನು ಎತ್ತಿ ಹಿಡಿದರು.

ಅಂಬೇಡ್ಕರ್ ಚಿಂತನೆ ಪ್ರಕಾರ ಎಲ್ಲಿಯವರೆಗೆ ಸಾಮಾಜಿಕ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಸಮಾನತೆಗಳಿರುವುದಿಲ್ಲವೋ ಅಲ್ಲಿಯತನಕ ರಾಜಕೀಯ ಸ್ಥಿರತೆ ಇರುವುದಿಲ್ಲ. ಸಾಮಾಜಿಕ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಸಮಾನತೆ ಉಂಟಾಗದೇ ಹೋದರೆ ವಿಪ್ಲವವಾಗುವುದು ಖಚಿತ ಎಂದಿರುವ ಅಂಬೇಡ್ಕರ್‌ರ ಮಾತು ಭಾರತಕ್ಕೆ ಇಂದಿಗೂ ಅನ್ವಯವಾಗುತ್ತದೆ.[೨೬]

ಟಿಪ್ಪಣಿಗಳು

೧. ಬಾಪು ಹೆದ್ದೂರಶೆಟ್ಟಿ (ಲೇ), ೨೦೧೪, 'ಸಮಾಜವಾದ ಒಂದು ಪಕ್ಷಿನೋಟ', ಬಂದಗದ್ದೆ ರಾಧಾಕೃಷ್ಣ, ಹಾಗೂ ಇತರರು (ಸಂ), **ಹೊಸಲೋಕ** (ತ್ರೈಮಾಸಿಕ ಪತ್ರಿಕೆ), ಪು. ೬

೨. ಅದೇ, ಪು. ೭

೩. ಜಾರ್ಜ್ ಲೈಧ್ಯಾಮ್, **ಎ ಶಾರ್ಟ್ ಹಿಸ್ಟೋರಿ ಆಫ್ ಸೋಷಿಯಾಲಿಸಂ**, ಪು. ೩೦೬

೪. ಬಾಪು ಹೆದ್ದೂರಶೆಟ್ಟಿ, ೧೯೮೨, **ಸಮಾಜವಾದ : ಅಂದಿನಿಂದ ಇಂದಿನವರೆಗೆ**, ಪು. ೧

೫. ನರೇಂದ್ರ ಪಾಠಕ್ (ಹಿಂದಿ ಮೂಲ), ಹಸನ್ ನಯೀಂ ಸುರಕೋಡ (ಅನು), ೨೦೦೯, **ಕರ್ಪೂರಿ ಠಾಕೂರ್ ಹಾಗೂ ಸಮಾಜವಾದ**

೬. ಬಾಪು ಹೆದ್ದೂರಶೆಟ್ಟಿ, ೧೯೮೯, **ಸಮಾಜವಾದ-ಜನತಂತ್ರ ಮತ್ತು ಕಮ್ಯುನಿಸಂ**, ಪು. ೯೫

೭. ಬಾಪು ಹೆದ್ದೂರಶೆಟ್ಟಿ, ೧೯೯೯, **ಹೊಸ ಸಮಾಜವಾದದ ಇಣುಕು ನೋಟಗಳು**, ಪು. ೪೩-೪೪

೮. ಸೋಮಶೇಖರ್ ಹ. (ಲೇ), ೧೯೮೧, 'ಭಾರತದಲ್ಲಿ ಸಮಾಜವಾದಿ ಚಳವಳಿ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು.ಸಂ. ೪೬

೯. ಬಾಪು ಹೆದ್ದೂರಶೆಟ್ಟಿ, ೧೯೮೯, **ಸಮಾಜವಾದ ಜನತಂತ್ರ ಮತ್ತು ಕಮ್ಯುನಿಸಂ**, ಪು. ೧೦೩

೧೦. ಸೋಮಶೇಖರ್ ಹ. (ಲೇ), ೧೯೮೧, 'ಭಾರತದಲ್ಲಿ ಸಮಾಜವಾದಿ ಚಳವಳಿ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೪೭

೧೧. ಬಾಪು ಹೆದ್ದೂರಶೆಟ್ಟಿ, ೧೯೮೯, **ಸಮಾಜವಾದ ಜನತಂತ್ರ ಮತ್ತು ಕಮ್ಯುನಿಸಂ**, ಪು. ೧೧೦-೧೧೧

೧೨. ಅದೇ, ಪು. ೧೧೨

೧೩. ಬಾಪು ಹೆದ್ದೂರಶೆಟ್ಟಿ (ಲೇ), ೨೦೧೪, 'ಸಮಾಜವಾದ ನೀರು, ಸಮಾಜವಾದ: ಒಂದು ಪಕ್ಷಿನೋಟ', ಬಂದಗದ್ದೆ ರಾಧಾಕೃಷ್ಣ ಹಾಗೂ ಇತರರು (ಸಂ), **ಹೊಸಲೋಕ**

೧೪. ರಾಜರಾಮ್ ತೋಳ್ಪಾಡಿ (ಲೇ), ೨೦೦೨, 'ಲೋಹಿಯಾ ಮತ್ತು ಕರ್ನಾಟಕದ ರಾಜಕಾರಣ', ಬೋರಲಿಂಗಯ್ಯ ಹಿ.ಚಿ., ಹುಚ್ಚಪ್ಪ ಮಾಸ್ತರ್ (ಸಂ), **ಕಾಗೋಡು ಚಳವಳಿ**, ಪು. ೬೩೨

೧೫. ರಾಜಾರಾಮ ತೋಳ್ಪಾಡಿ, ೨೦೧೧, **ಮತ್ತೆ ಮತ್ತೆ ಲೋಹಿಯಾ**, ಪು. ೫೭

೧೬. ಹನುಮಂತ (ಲೇ), ೧೯೮೧, 'ಭಾರತದ ಪ್ರಮುಖ ಸಮಾಜವಾದಿಗಳು' ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೮೧-೮೨

೧೭. ಬಾಪು ಹೆದ್ದೂರಶೆಟ್ಟಿ (ಲೇ), ೨೦೧೪, 'ಸಮಾಜವಾದ: ಒಂದು ಪಕ್ಷಿನೋಟ', ಬಂದಗದ್ದೆ ರಾಧಾಕೃಷ್ಣ ಹಾಗೂ ಇತರರು (ಸಂ), **ಹೊಸಲೋಕ**, ಪು. ೯

೧೮. ರಾಮಮನೋಹರ ಲೋಹಿಯಾ (ಲೇ), ೨೦೦೨, 'ಗಾಂಧಿವಾದ ಮತ್ತು ಸಮಾಜವಾದ', ಬೋರಲಿಂಗಯ್ಯ ಹಿ.ಚಿ., ಹುಚ್ಚಪ್ಪ ಮಾಸ್ತರ (ಸಂ), **ಕಾಗೋಡು ಚಳವಳಿ**, ಪು. ೫೭೩

೧೯. ತಿಪ್ಪೇರುದ್ರಸ್ವಾಮಿ ಹೆಚ್. (ಲೇ), ೧೯೮೧, 'ಸಮಾಜವಾದ-ಗಾಂಧಿವಾದ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೩೫

೨೦. ರಾಮಮನೋಹರ ಲೋಹಿಯಾ (ಲೇ), ೨೦೦೨, 'ಗಾಂಧಿವಾದ ಮತ್ತು ಸಮಾಜವಾದ', ಬೋರಲಿಂಗಯ್ಯ ಹಿ.ಚಿ., ಹುಚ್ಚಪ್ಪ ಮಾಸ್ತರ (ಸಂ), **ಕಾಗೋಡು ಚಳವಳಿ**, ಪು. ೫೭೫

೨೧. ಬಾಪು ಹೆದ್ದೂರಶೆಟ್ಟಿ, ೨೦೧೩, **ಗಾಂಧಿ-ಅಂಬೇಡ್ಕರ್ ಮತ್ತು ಸಮಾಜವಾದ**, ಪು. ೧೯

೨೨. ಅದೇ, ಪು. ೨೭

೨೩. ಅದೇ, ಪು. ೩೧

೨೪. ನಾಗಭೂಷಣ ಡಿ.ಎಸ್., ೨೦೦೮, **ಲೋಹಿಯಾ ಸಮಾಜವಾದ ದರ್ಶನ**, ಪು. ೪೨-೪೩

೨೫. ಬಾಪು ಹೆದ್ದೂರಶೆಟ್ಟಿ, ೨೦೧೩, **ಗಾಂಧಿ-ಅಂಬೇಡ್ಕರ್ ಮತ್ತು ಸಮಾಜವಾದ**, ಪು. ೧೦೮

೨೬. ಚಿನ್ನಸ್ವಾಮಿ ಸೋಸಲೆ (ಲೇ), ೧೯೮೫, 'ಸಮಾಜವಾದ', ಶ್ರೀಕಂಠಯ್ಯ ಎಲ್. (ಸಂ), **ಭಾರತೀಯ ಸಮಾಜ ಮತ್ತು ಅಂಬೇಡ್ಕರ್**, ಪು. ೧೧೯

ಅಧ್ಯಾಯ: ನಾಲ್ಕು

ಶಾಂತವೇರಿ ಗೋಪಾಲಗೌಡ ಹಾಗೂ ಸಮಾಜವಾದಿ ಚಳವಳಿಗಳು

ಅಧ್ಯಾಯ: ನಾಲ್ಕು

ಶಾಂತವೇರಿ ಗೋಪಾಲಗೌಡ ಹಾಗೂ ಸಮಾಜವಾದಿ ಚಳವಳಿಗಳು

ಜಗತ್ತಿನ ಯಾವುದೇ ದೇಶದ ಪ್ರಭುತ್ವವು ಪರಿಪೂರ್ಣವಾಗಿ ಹಾಗೂ ಸಮರ್ಪಕವಾಗಿ ನಡೆಯಲು ಸಾಧ್ಯವಿಲ್ಲ. ಸಮಾನ ಮನಸ್ಸಿನ ಪ್ರಜೆಗಳು ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಇಲ್ಲದಿರುವುದು ಇದಕ್ಕೆ ಕಾರಣವೆಂದು ಹೇಳಬಹುದಾಗಿದೆ. ಪ್ರತಿಯೊಂದು ಪ್ರಭುತ್ವದಲ್ಲಿಯೂ ಹಲವು ಲೋಪದೋಷಗಳಿರುತ್ತವೆ. ಅದು ಅತ್ಯಂತ ಸಹಜವೂ ಕೂಡ. ಬಹುಶಃ ಆಡಳಿತ ಯಂತ್ರಗಳ ಸಿದ್ಧಾಂತಗಳ ನೆಲೆಗಟ್ಟುಗಳು ಪ್ರಜೆಗಳಿಗೆ ಹೊಂದಿಕೆಯಾಗದಿರುವುದು ಅಲ್ಲಿನ ಲೋಪಗಳಿಗೆ ಕಾರಣವೆಂಬ ಅಭಿಪ್ರಾಯಕ್ಕೆ ಬಂದು ನಿಲ್ಲಬಹುದು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಪ್ರಭುತ್ವಗಳು ಜನಪರವಾಗಿಯೇ ಇರುತ್ತವೆಂಬುದೊಂದು ಊಹಾತ್ಮಕ ಪರಿಕಲ್ಪನೆ. ಆದರೆ ಒಮ್ಮೊಮ್ಮೆ ಆಡಳಿತ ಯಂತ್ರಗಳು ತಮ್ಮ ಅಧಿಕಾರ ಉಳಿಸಿಕೊಳ್ಳಲು ಜನವಿರೋಧಿ ನೀತಿಗಳನ್ನು, ವಾಮಮಾರ್ಗಗಳನ್ನು ಅನುಸರಿಸುವುದುಂಟು. ಅಂಥ ಸಂದರ್ಭದಲ್ಲಿ ಪ್ರಭುತ್ವ ಮತ್ತು ಪ್ರಜೆಗಳ ನಡುವೆ ಘರ್ಷಣೆಗಳು ಉಂಟಾಗುತ್ತವೆ. ರಷ್ಯಾದಲ್ಲಿ ಕಮ್ಯೂನಿಷ್ಟ್ ಆಡಳಿತ, ಅಮೇರಿಕಾದಲ್ಲಿ ಅಧ್ಯಕ್ಷೀಯ ಆಡಳಿತ, ಭಾರತದಲ್ಲಿ ಪ್ರಜಾಪ್ರಭುತ್ವ ಮುಂತಾದ ಆಡಳಿತ ವ್ಯವಸ್ಥೆಗಳು ಈ ಹೊತ್ತಿನಲ್ಲಿಯೂ ದಂಗೆ, ಚಳವಳಿಗಳ ಭಯಗಳನ್ನು ತಮ್ಮೊಡಲಲ್ಲಿ ಇಟ್ಟುಕೊಂಡೇ ಆಡಳಿತ ನಡೆಸುತ್ತಿವೆ. ವಿದ್ಯಾವಂತ, ವಿಚಾರವಂತ ಪ್ರಜೆಗಳು, ಜಗತ್ತಿನ ಆಡಳಿತ ವ್ಯವಸ್ಥೆಯನ್ನು ಬಲ್ಲಂತಹ ಪ್ರಜೆಗಳು ಪ್ರಜಾಪರವಾದ ನಿಲುವುಗಳನ್ನೊಳಗೊಂಡ ಸರ್ಕಾರಗಳ ಕಡೆಗೆ ತಮ್ಮ ಒಲವನ್ನು ತೋರುತ್ತಿರುವುದು ಸಹಜವೇ ಆಗಿದೆ. ಇಂತಹ ಒಲವುಗಳನ್ನು ಗಳಿಸಿಕೊಂಡ ಸಿದ್ಧಾಂತಗಳಲ್ಲಿ ಸಮಾಜವಾದಿ ಸಿದ್ಧಾಂತವೂ ಒಂದಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಸಮಾಜವಾದದ ಪ್ರಭಾವದಿಂದ ಸಮಾಜದ ಬದಲಾವಣೆಯಾಗಬೇಕೆಂದು ಬಯಸಿದ ನೇತಾರರು ಕರ್ನಾಟಕದ ಮಲೆನಾಡಿನ ಪರಿಸರದಲ್ಲಿ ಸಮಾಜವಾದಿ ಚಳವಳಿಗಳನ್ನು ರೂಪಿಸಿದ ಸಂಗತಿಗಳನ್ನು ನಿರೂಪಿಸಿ ವಿಶ್ಲೇಷಿಸಲಾಗಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ೧೯೫೦ರ ದಶಕದಲ್ಲಿ ಸಮಾಜವಾದಿ ಚಳವಳಿಯೊಂದು ಕರ್ನಾಟಕದ ಗಮನ ಸೆಳೆಯಿತು. ಆ ಚಳವಳಿಯಲ್ಲಿ ಗೋಪಾಲಗೌಡರು ವಹಿಸಿದ ನಿರ್ಣಾಯಕ ಪಾತ್ರವನ್ನು ಕುರಿತು ಈ ಅಧ್ಯಾಯದಲ್ಲಿ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ.

೪.೧. ಗೇಣಿ ಪದ್ಧತಿ ಹಾಗೂ ಕಾಗೋಡು ಚಳವಳಿ

ಶಾಂತವೇರಿ ಗೋಪಾಲಗೌಡ ಅವರು 'ಸಮಾಜವಾದಿ ಸಮಾಜ'ವನ್ನು ನಿರ್ಮಾಣ ಮಾಡಬೇಕೆಂದು ಹೆಗ್ಗುರಿ ಇರಿಸಿಕೊಂಡು ಹೋರಾಡಿದರು. ಸಮಾಜವಾದಿ ಭೂಮಿಕೆಯಲ್ಲಿಯೇ ಕಾಗೋಡು ಸತ್ಯಾಗ್ರಹದಲ್ಲಿ (೧೯೫೧) ಭಾಗವಹಿಸಿ ಹೋರಾಟ ನಡೆಸಿದರು. ಈ ಚಳವಳಿಯ ನಂತರ ಕರ್ನಾಟಕದ ರಾಜಕೀಯದಲ್ಲಿ ಹೊಸ ಬೆಳವಣಿಗೆ ಪ್ರಾರಂಭವಾಯಿತು.

ಕಾಗೋಡು ನಮ್ಮ ರಾಜ್ಯದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯಲ್ಲಿರುವ ಒಂದು ಪುಟ್ಟ ಹಳ್ಳಿ. ಈ ಊರು ಇಂದು ಸಾಕಷ್ಟು ಬದಲಾವಣೆ ಕಂಡಿದೆ. ಕಾಗೋಡು ಚಳವಳಿಯ ಕಾಲಕ್ಕೆ ಐವತ್ತು ಕುಟುಂಬಗಳಿಗಿಂತ ಹೆಚ್ಚಿರದಿದ್ದ ಊರಲ್ಲಿ ಇಂದು ೨೫೭ಕ್ಕೂ ಹೆಚ್ಚು ಕುಟುಂಬಗಳಿವೆ. ಇಲ್ಲಿ ವಾಸಿಸುವವರಲ್ಲಿ ಎಲ್ಲರೂ ಕೃಷಿಕರೇ ಆಗಿದ್ದು ಬಹುಸಂಖ್ಯಾತರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ.

ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯ ಕಾಗೋಡು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇದ್ದ ಸಾವಿರಾರು ಎಕರೆ ಭೂಮಿಗೆ ಜಮೀನ್ದಾರರಾಗಿದ್ದವರು ಶಿವಮೊಗ್ಗ ಜಿಲ್ಲೆಯನ್ನು ಎರಡು ಬಾರಿ ಪ್ರತಿನಿಧಿಸಿ ಸಂಸದರಾಗಿದ್ದ ಕೆ.ಜಿ. ಒಡೆಯರ್ ಕುಟುಂಬದವರು. ಇವರ ಹಿಡಿತದಲ್ಲಿದ್ದ ಸಾವಿರಾರು ಎಕರೆ ಭೂಮಿಯನ್ನು ನೂರಾರು ಕುಟುಂಬಗಳು ಸಾಗುವಳಿ ಮಾಡುತ್ತಿದ್ದರು. ೧೯೫೦ರ ಹೊತ್ತಿಗೆ ಹಳ್ಳಿಯವರು ಹೇಳುವ ಪ್ರಕಾರ ಕಾಗೋಡಿನಲ್ಲಿ ೧೪ ಹರಿಜನ ಕುಟುಂಬಗಳು, ೩ ಮಡಿವಾಳ ಕುಟುಂಬಗಳು, ೧ ಅಕ್ಕಸಾಲಿಗ ಕುಟುಂಬಗಳಿದ್ದರೆ, ೭೦ ದೀವರ ಕುಟುಂಬಗಳಿದ್ದವು. ಹರಿಜನರನ್ನು ಬಿಟ್ಟು ಉಳಿದ ಎಲ್ಲರೂ ಕಾಗೋಡಿನ ಲಿಂಗಾಯಿತ ಮತಾವಲಂಬಿಗಳಾದ ಒಡೆಯರ್ ಕುಟುಂಬದ ಒಕ್ಕಲುಗಳಾಗಿದ್ದರು. ಕಾಗೋಡಿನಲ್ಲಿದ್ದ ಅಡಿಕೆ ತೋಟ ಮತ್ತು ಹೆಚ್ಚಿನ ಭತ್ತ ಬೆಳೆಯುವ ಭೂಮಿ ಗೌಡರ (ಒಡೆಯರ್) ಖಾತೆಯಲ್ಲಿತ್ತು. ಕಾಗೋಡಿನ ನೆರೆಯ ಹಳ್ಳಿಗಳಾದ ಮಣಗದ್ದೆ, ಸಣ್ಣಮನೆ, ಹಿರೆನಲ್ಲೂರು, ಸೂರಗುಪ್ಪೆ, ಎಲೆಕುಂಧ್ಲಿ, ಕುಂಠಿಕೊಪ್ಪ ಮತ್ತು ತಟ್ಟೆಗುಂಡಿಗಳಲ್ಲೂ ಒಡೆಯರ್ ಮನೆತನದ ಭೂಮಿಯಿದ್ದು, ಈ ಮನೆತನ 'ಏಳು ಹಳ್ಳಿ ಗೌಡರು' ಎಂದೇ ಹೆಸರಾಗಿತ್ತು.[೧] ತರಿ ಭೂಮಿಯಲ್ಲದೆ ಕಾಗೋಡಿನ ಸುಮಾರು ೬೦ ಎಕರೆ ಖುಷ್ಕಿ ಮತ್ತು ಸುಮಾರು ೩೬೦ ಎಕರೆ ದಟ್ಟವಾದ, ಒಳ್ಳೆ ಜಾತಿಯ ಮರಗಳಿದ್ದ ಅರಣ್ಯ ಸಹ ಅವರ ಹಿಡಿತದಲ್ಲಿತ್ತು. ಮಲೆನಾಡಿನ ದೊಡ್ಡ ಭೂಮಾಲೀಕರ ಪಟ್ಟಿಯಲ್ಲಿ ಕಾಗೋಡಿನ ಒಡೆಯರ ಮನೆತನದವರೂ ಸೇರಿದ್ದರು. ಇಲ್ಲಿನ ಅಡಿಕೆ ತೋಟ ಮತ್ತು ಸುಮಾರು ೧೨ ಎಕರೆ ತರಿ ಭೂಮಿಯನ್ನು ಮಾತ್ರ ಒಡೆಯರ ಮನೆತನದವರು ಕೆಲಸದವರನ್ನು ಇಟ್ಟುಕೊಂಡು 'ಸ್ವಂತ ಸಾಗುವಳಿ' ಮಾಡುತ್ತಿದ್ದರು, ಉಳಿದ ಎಲ್ಲಾ ಭೂಮಿಯನ್ನು ಒಕ್ಕಲುಗಳಿಗೆ ಗೇಣಿ ಕೊಟ್ಟಿದ್ದರು. ಸುಮಾರು ೨೦೦ಕ್ಕೂ ಹೆಚ್ಚು ಕುಟುಂಬಗಳು ಒಡೆಯರರನ್ನು ಅವಲಂಬಿಸಿದ್ದವು.

ಕಾಗೋಡಿನ ಒಡೆಯರ್ (ಗೌಡರು) ತಮ್ಮ ಅಧೀನದಲ್ಲಿದ್ದ ಯಾವುದೇ ಒಕ್ಕಲಿಗೂ ೫-೬ ಎಕರೆಗಿಂತ ಹೆಚ್ಚು ಗೇಣಿಗೆ ಭೂಮಿ (ಜಮೀನು) ಕೊಟ್ಟಿರಲಿಲ್ಲ. ಗೌಡರಿಗೆ ಗೇಣಿ ಕೊಟ್ಟು ಉಳಿದುದ್ದರಲ್ಲಿಯೇ ರೈತರು ತಮ್ಮ ಮನೆ ಹಾಗೂ ಸಾಕುಪ್ರಾಣಿಗಳ ಎಲ್ಲಾ ಖರ್ಚುವೆಚ್ಚಗಳನ್ನು ಸರಿದೂಗಿಸಿಕೊಂಡು ಹೋಗಬೇಕಾಗಿತ್ತು. ಇಲ್ಲಿನ ಎಲ್ಲಾ ಒಕ್ಕಲುಗಳು ಬಡತನದಲ್ಲಿದ್ದರು. ಸರಿಯಾಗಿ ಊಟಕ್ಕೆ ಮತ್ತು ತೊಡುವ ಬಟ್ಟೆಗಾಗಲೀ ಅನುಕೂಲವಿರಲಿಲ್ಲ, ಅಕ್ಷರ ಜ್ಞಾನವಂತೂ ಇರಲೇ ಇಲ್ಲ. ದೀವ ಒಕ್ಕಲುಗಳು ತುಂಡು ಪಂಚೆ ಉಟ್ಟು, ಅರೆ ಹೊಟ್ಟೆ ಉಂಡು, ಉತ್ತುಬಿತ್ತಿ ಬೆಳೆದು ಸುಮ್ಮನೆ ಕುಳಿತುಕೊಂಡು ತಿನ್ನುವ, ದರ್ಬಾರು ಮಾಡುವ ಒಡೆಯರಗೆ ಗೇಣಿ ಕೊಡಬೇಕಾಗಿತ್ತು. ಮೇಲುವರ್ಗದ ದಣಿಗಳ ಎದುರುಗಡೆ ಈ ದೀವರು ಕಾಲು ಪೂರ್ತಿ ಕಾಣದಂತೆ ಪಂಚೆ ಉಡುವಂತಿರಲಿಲ್ಲ. ದಣಿಗಳ ಮನೆ ಎದುರುಗಡೆ ಚಪ್ಪಲಿ ಹಾಕಿಕೊಂಡು ಹೋಗುವಂತಿರಲಿಲ್ಲ, ದಣಿಗಳು ಮನೆಯ ಎದುರುಗಡೆ ಆಸೀನರಾಗಿದ್ದಾಗ ಇವರು ಅದೇ ಮಾರ್ಗದಲ್ಲಿ ಹಾದುಹೋಗುವಾಗ ಕಾಲಿನ ಚಪ್ಪಲಿ ಕಳಚಿ ಕೈಯಲ್ಲಿ ಹಿಡಿದುಕೊಂಡು ಸೊಂಟ ಬಗ್ಗಿಸಿ ಸಾಗಬೇಕಾಗಿತ್ತು.

ದಣಿಗಳ ಮನೆಯ ಯಾರನ್ನೇ ಆಗಲಿ, ಯಾವ ವಯಸ್ಸಿನವರೇ ಆಗಲಿ ಅವರನ್ನು ಏಕವಚನದಲ್ಲಿ ಮಾತನಾಡಿಸುವಂತಿರಲಿಲ್ಲ. ಆದರೆ ದಣಿಗಳ ಮನೆಯ ಪುಟ್ಟ ಮಕ್ಕಳೂ ಸಹ ದೀವರ ಮುದುಕರನ್ನು ನೀನು ತಾನು ಎಂದು ಸಂಬೋಧಿಸಬಹುದಿತ್ತು. ಎತ್ತಿನ ಬಂಡಿ ಹೊಡೆಯುವಾಗ ದಣಿಗಳು (ಒಡೆಯರು) ಎದುರಾದರೆ ಕಾಲು ಜೋತಾಡಿಸಿಕೊಂಡು ಕೂರುವಂತಿರಲಿಲ್ಲ. ಊರಿನ ದೇವಸ್ಥಾನಗಳಲ್ಲೂ ದೀವರಿಗೆ ಎಲ್ಲಾ ಕಡೆ ಸಂಚರಿಸಲು ಅವಕಾಶವಿರಲಿಲ್ಲ. ದೀವರಿಗಿಂತ ಕೆಳಗಿನವರಾದ ಹರಿಜನರಿಗೆ ಕೃಷಿ ಜಮೀನನ್ನು ಗೇಣಿಗೂ ಸಹ ಕೊಡುತ್ತಿರಲಿಲ್ಲ.

ಹಳ್ಳಿಗಳಲ್ಲಿ ಯಕ್ಷಗಾನ, ನಾಟಕ ಮುಂತಾದ ಮನರಂಜನಾ ಕಾರ್ಯಕ್ರಮಗಳಾದರೆ ಮೇಲು ಜಾತಿಯವರಿಗೆ ಮಾತ್ರ ಎದುರಿಗೆ ಕುರ್ಚಿಯಲ್ಲಿ ಕುಳಿತುಕೊಳ್ಳುವ ಅವಕಾಶವಿತ್ತು. ಗೇಣಿ ಒಕ್ಕಲುಗಳು ಶ್ರಮಪಟ್ಟು ದುಡಿದು ದಣಿಗಳಿಗೆ ಗೇಣಿಯನ್ನು ಸಲ್ಲಿಸಬೇಕಾಗಿತ್ತು. ಅಲ್ಲದೆ ದಣಿಗಳು ಹೇಳಿದ ಪುಕ್ಕಟೆ ಬಿಟ್ಟಿ ಕೆಲಸವನ್ನು ಮಾಡಬೇಕಿತ್ತು. ಒಂದು ಒಕ್ಕಲು ಒಂದು ವರ್ಷಕ್ಕೆ ಕನಿಷ್ಠ ೧೫ ರಿಂದ ೨೦ ದಿನ ಧಣಿಗಳ ಮನೆಯಲ್ಲಿ ಪುಕ್ಕಟೆಯಾಗಿ (ಬಿಟ್ಟಿಯಾಗಿ) ಕೆಲಸ ನಿರ್ವಹಿಸಬೇಕಾಗಿತ್ತು. ಒಕ್ಕಲು ಧಣಿಗಳಿಗೆ ಗೇಣಿ ಭತ್ತ ನೀಡುವಾಗ ಪ್ರತಿ ಒಂದು ಸೇರಿಗೂ, ಲೆಕ್ಕ ಇಡುವುದಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಒಂದೊಂದು ಗುಪ್ಪೆ ಬತ್ತವನ್ನು ಸಾಲಾಗಿ ಇಡುತ್ತಿದ್ದರು. ಗೇಣಿ ಅಳೆದ ಬತ್ತದ ಜೊತೆಗೆ 'ಸಲಿಗೆ ಬತ್ತ' ಎಂದು ಕರೆಯುವ ಈ ಬತ್ತವೂ ಧಣಿಗಳಿಗೇ ಸೇರುತ್ತಿತ್ತು. ಇದಲ್ಲದೆ ಗೇಣಿಯ ಪ್ರತಿ ಒಂದು ಚೀಲ ಬತ್ತದ ಮೇಲೂ ಒಂದು ಗಿದ್ನ (ಮೂರರಿಂದ ಮೂರುವರೆ ಸೇರಿನ ಒಂದು ಅಳತೆ) ಬತ್ತವನ್ನು ದಣಿಗೆ ಕೊಡಬೇಕಾಗಿತ್ತು; ಇದನ್ನು 'ಪೆಚ್ಚುಬತ್ತ' (ಹೆಚ್ಚು ಬತ್ತ) ಎಂದು ಕರೆಯುತ್ತಿದ್ದರು.[೨]

ಒಕ್ಕಲುಗಳ ಅತಿಯಾದ ವಿಧೇಯ ವರ್ತನೆಯಾಗಲೀ; ಈ ಪುಕ್ಕಟೆ ಕೆಲಸ, 'ಸಲಿಗೆ ಬತ್ತ', 'ಪೆಚ್ಚುಬತ್ತ' ನೀಡುವ ಪದ್ಧತಿಯಾಗಲೀ ಯಾವ ಒಡೆಯ (ಧಣಿಗಳು)ನೂ ತನ್ನ ಒಕ್ಕಲುಗಳ ಮೇಲೆ ಏಕಾಏಕಿ ಹೇರಿದ್ದಲ್ಲ. ಅದು ಹಿಂದಿನಿಂದಲೂ ಬಂದದ್ದು; ಒಕ್ಕಲುಗಳೂ ಸಹ ಇದೇ ರೀತಿ ನಡೆದುಕೊಳ್ಳುವುದೇ ನ್ಯಾಯಸಮ್ಮತವಾದುದು ಎಂದು ಅರಿತಿದ್ದರು. ದಣಿಗಳಿಗೆ ಗೇಣಿ ಕೊಡದಿರುವುದು, ಅವರ ಮನೆಯಲ್ಲಿ ಪುಕ್ಕಟೆ ಕೆಲಸ ನಿರ್ವಹಿಸದೇ ಇರುವುದು, ಅವರನ್ನು ಲೆಕ್ಕಿಸದೆ ಜೀವಿಸುವುದು, ದೇವರು ಮೆಚ್ಚುವ ಕಾಯಕವಲ್ಲ ಎಂಬ ಕುರುಡು ನಂಬಿಕೆ ಇತ್ತು.

ಹಳ್ಳಿಯ ಯಾವುದೇ ಜಗಳ, ತಂಟೆ ತಕರಾರುಗಳಿಗೂ ಭೂಮಾಲೀಕರ ಗೌಡಿಕೆಯ ವಿಚಾರಣೆ, ತೀರ್ಪು ನಡೆಯುತ್ತಿತ್ತು. ಹಳ್ಳಿಯ ಯಾವುದೇ ವಿಚಾರಗಳೂ ಅವರ ಕಿವಿಗೆ ಬೀಳದೇ ಇರುತ್ತಿರಲಿಲ್ಲ. ಹಳ್ಳಿಯ ಪಟೇಲ, ಶ್ಯಾನುಭೋಗರಿಂದ ಹಿಡಿದು, ಶಿರಸ್ತೇದಾರ, ತಹಶೀಲ್ದಾರ, ಕಲೆಕ್ಟರಗಳವರೆಗೆ ಹೋಬಳಿ, ತಾಲ್ಲೂಕು, ಜಿಲ್ಲಾಮಟ್ಟದ ಅಧಿಕಾರಿಗಳಲ್ಲಿ ಯಾರೊಂದಿಗೂ ಹಳ್ಳಿಗಳ ಒಕ್ಕಲುಗಳಿಗೆ ನೇರ ಸಂಪರ್ಕವಿರುತ್ತಿರಲಿಲ್ಲ. ಒಕ್ಕಲುಗಳಿಗೆ ಭೂಮಾಲೀಕರು 'ಅನ್ನ ಕೊಡುವ' ದಣಿಗಳಾಗಿರುವುದರ ಜೊತೆ, 'ನ್ಯಾಯ' ಕೊಡುವ 'ಸರಕಾರ'ವೂ ಆಗಿದ್ದರು. ಒಕ್ಕಲುಗಳು ಅರಣ್ಯದಲ್ಲಿ ಮರ ಕಡಿದು ಕದ್ದರೆ, ಕಳ್ಳಭಟ್ಟಿ (ಒಂದು ರೀತಿಯ ಮದ್ಯ) ಕೇಸುಗಳಲ್ಲಿ ಸಿಲುಕಿಕೊಂಡರೆ ಅವರನ್ನು ಅರಣ್ಯಾಧಿಕಾರಿಗಳಿಂದ, ಅಬಕಾರಿ ಅಧಿಕಾರಿಗಳ ಕೈಯಿಂದ ಬಚಾವು ಮಾಡುತ್ತಿದ್ದವರೂ ಒಡೆಯರುಗಳೇ ಆಗಿದ್ದರು.

ಮಳೆ ಬೆಳೆ ಸಮಯಕ್ಕೆ ಸರಿಯಾಗಿ ಆಗದೇ ಇದ್ದರೆ ಗೇಣಿಯಲ್ಲಿ ರಿಯಾಯಿತಿ ತೋರಿಸುವುದು, ಮದುವೆ, ಸಾವು, ನಾಮಕರಣ ಇನ್ನು ಮುಂತಾದ ಸಂದರ್ಭಗಳಲ್ಲಿ ಬತ್ತ, ನಗದು ಹಣದ ನೆರವು ನೀಡುವುದು ಈ ರೀತಿಯ ಉದಾರ ಮನೋಭಾವವನ್ನು ಕೆಲವು ಭೂ ಒಡೆಯರು ತೋರಿಸುತ್ತಿದ್ದರು. ಆದರೆ ಒಕ್ಕಲುಗಳಿಂದ ದಣಿಗಳು ಪಡೆದದ್ದು 'ಆತನ ಹಕ್ಕು', ಒಕ್ಕಲುಗಳಿಗೆ ಆತ ಕೊಟ್ಟದ್ದು ಔದಾರ್ಯ ಎಂಬ ಮೌಲ್ಯ ವ್ಯವಸ್ಥೆಯೇ ಅನ್ಯಾಯದ ವ್ಯವಸ್ಥೆ. ಇದು ಒಕ್ಕಲು ಮತ್ತು ದಣಿಯ ಮೂಲಭೂತವಾಗಿ ಆರ್ಥಿಕ ವೈಷಮ್ಯದ ಸಂಬಂಧವನ್ನು, ಆಶ್ರಯದಾತ ಮತ್ತು ಆಶ್ರಿತನ ನಡುವಿನ ತೋರಿಕೆಯ ಸಹಾನುಭೂತಿಯ ಸಂಬಂಧವನ್ನಾಗಿ ಪರಿವರ್ತಿಸಿತ್ತು.[೩]

ಕ್ರೂರಿಗಳಾದ ದಣಿಗಳೂ ಇದ್ದರಂತೆ, ಸಾಗರದ ಆನಂದಪುರ ಹೋಬಳಿಯಲ್ಲಿ ರಾಮಕೃಷ್ಣ ಅಯ್ಯಂಗಾರ್ ಅವರು ದರ್ಪದ ದಬ್ಬಾಳಿಕೆಯನ್ನು ನಡೆಸುತ್ತಿದ್ದರಂತೆ, ಅವರಿಗೆ ಆಗದವರನ್ನು ಮಟ್ಟ ಹಾಕಲು ಒಂದು ಗೂಂಡಾಪಡೆಯನ್ನೇ ಇಟ್ಟುಕೊಂಡಿದ್ದರಂತೆ. ಯಾರಾದರು ಆಗಲಿ ಅವರಿಗೆ ಗೇಣಿ ಸರಿಯಾಗಿ ಕೊಡದೇ ಇದ್ದರೆ, ಪುಕ್ಕಟೆ ಕೆಲಸ ನಿರ್ವಹಿಸಲು ಬರದೇ ಇದ್ದರೆ, ಅವಿಧೇಯತೆಯಿಂದ ನಡೆದುಕೊಂಡಿದ್ದೇ ಆದಲ್ಲಿ ಅವರ ಮನೆಗೆ ರಾಮಕೃಷ್ಣ ಅಯ್ಯಂಗಾರ್ ಆಳಿನ ಕೈಯಲ್ಲಿ ಒಂದು ಬೆತ್ತವನ್ನು (ಛಡಿ ಏಟು ನೀಡುವ ಸಾಧನ) ಕೊಟ್ಟು ಕಳುಹಿಸುತ್ತಿದ್ದರು. ಒಕ್ಕಲು ಆ ಬೆತ್ತವನ್ನು ಹಿಂದೆ ತಂದು ಅಯ್ಯಂಗಾರರಿಗೆ ನೀಡಬೇಕಿತ್ತು. ಅಯ್ಯಂಗಾರರು ಆ ವೇಳೆಗೆ ಎಷ್ಟು

ತೋಚಿತೋ ಅಷ್ಟು ಛಡಿ ಏಟುಗಳನ್ನು ಅವನಿಗೆ ಬಾರಿಸುತ್ತಿದ್ದರು. ಬೆತ್ತ ಮನೆಗೆ ಬಂದದ್ದು ಕೇಳಿಯೇ ಒಕ್ಕಲುಗಳು ಅನಾರೋಗ್ಯಕ್ಕೆ ತುತ್ತಾಗಿ ಪ್ರಾಣ ಬಿಟ್ಟಿದ್ದು ಉಂಟಂತೆ. ಗೇಣಿ ವಸೂಲಿಗೆ ಅಯ್ಯಂಗಾರರು ಮುಸ್ಲಿಂರನ್ನೇ ಕಳುಹಿಸುತ್ತಿದ್ದರಂತೆ. ತಮ್ಮ ಮೇಲಿನ ಒಕ್ಕಲುಗಳ ಸಿಟ್ಟು, ಮತೀಯ ದ್ವೇಷವಾಗುವಂತೆ ಮಾಡುವ ಕೆಟ್ಟ ಮನಸ್ಸು ಅಯ್ಯಂಗಾರರ ಕ್ರೌರ್ಯದ ಒಂದು ಭಾಗವಾಗಿತ್ತು. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಜಮೀನ್ದಾರರು ಹೊನ್ನಾಳಿಯಿಂದ ಮುಸ್ಲಿಂರನ್ನು ಕರೆಸಿ 'ಹೊನ್ನಾಳಿ ಹೊಡೆತ'ವನ್ನು ತಮಗೆ ಆಗದವರಿಗೆ ಹೊಡೆಸುವ ಪದ್ಧತಿಯನ್ನು ಇಲ್ಲಿ ನೆನೆಯಬಹುದು.

ಈ ಮೇಲಿನಂತೆ ಇದ್ದ ಅನ್ಯಾಯ ವ್ಯವಸ್ಥೆಯ ವಿರುದ್ಧ ೧೯೫೧ ಏಪ್ರಿಲ್ ೧೮ ರಂದು ರೈತ ಸತ್ಯಾಗ್ರಹ ಆರಂಭವಾಯಿತು. ಮುಖ್ಯವಾಗಿ ಕಾಂಗ್ರೆಸ್ ನಾಯಕರು, ಭೂಮಾಲಿಕರು ಆಗಿದ್ದ ಕೆ.ಜಿ. ಒಡೆಯರ್ ಅವರ ವಿರುದ್ಧವೇ ಈ ಚಳವಳಿಯನ್ನು ಮಾಡಲಾಯಿತು. ಗೇಣಿ ರೈತರು ಹಲವು ವರ್ಷಗಳಿಂದ ಏನು ಮಾಲೀಕರ ಕಿರುಕುಳವನ್ನು ಸಹಿಸಿಕೊಂಡು ಬಂದಿದ್ದರು, ಅದರ ವಿರುದ್ಧ ಧ್ವನಿ ಎತ್ತಿದರು. ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿಗಳು ನಡೆಸಿದ ಪ್ರಥಮ ಹೋರಾಟ ಕಾಗೋಡು ಸತ್ಯಾಗ್ರಹ, ವಾಸ್ತವದಲ್ಲಿ ಕಾಗೋಡು ಚಳವಳಿಯನ್ನು ಆರಂಭಿಸಿದ್ದು ಸಮಾಜವಾದಿಗಳಲ್ಲವಾದರೂ ಆ ಹೋರಾಟಕ್ಕೆ ಮುಖ್ಯ ಚಾಲನೆ ನೀಡಿದವರು ಇವರೇ. ಈ ಹೋರಾಟಕ್ಕೆ ಸಂಬಂಧಿಸಿದಂತೆ ಅಂದು ಜಿಲ್ಲೆಯಲ್ಲಿದ್ದ ಎರಡು ಸಂಘಟನೆಗಳನ್ನು ಅವುಗಳ ಹಿನ್ನೆಲೆಯನ್ನು ಅಧ್ಯಯನ ಮಾಡಬೇಕಾಗಿದೆ. ಅವುಗಳೆಂದರೆ

ಎ. ಮಲೆನಾಡು ಗೇಣಿದಾರರ ಸಂಘ

ಬಿ. ಸಾಗರ ತಾಲ್ಲೂಕು ರೈತ ಸಂಘ

ಮಲೆನಾಡು ಗೇಣಿದಾರರ ಸಂಘ: ೧೯೪೬ರಲ್ಲಿ ಈ ಸಂಘವು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಆರಂಭವಾಯಿತು. ಈ ಸಂಘದ ಸ್ಥಾಪನೆಗೆ ಮೂಲ ಕಾರಣಕರ್ತರು ಕಡಿದಾಳು ಮಂಜಪ್ಪನವರು. ಮೂಲತಃ ಕಾಂಗ್ರೆಸ್ ಪಕ್ಷದವರಾದಾಗ್ಯೂ ಗೇಣಿದಾರ ಕುಟುಂಬದಿಂದ ಬಂದವರಾಗಿದ್ದರು. ತತ್ಪರಿಣಾಮವಾಗಿ ಗೇಣಿ ರೈತರ ಸಮಸ್ಯೆಯ ಸಂಪೂರ್ಣ ಅರಿವು ಅವರಿಗಿತ್ತು. ಈ ಸಂಘದ ಸ್ಥಾಪನೆಯ ಪ್ರಮುಖ ಉದ್ದೇಶ ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿದ್ದ ಗೇಣಿದಾರರ ಸಮಸ್ಯೆಯನ್ನು ಅರಿತು, ಚರ್ಚಿಸಿ, ಅವುಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯುವುದಾಗಿತ್ತು. ಈ ಸಂಘದ ಪ್ರಪ್ರಥಮ ಸಭೆ ಅದು ಸ್ಥಾಪನೆಗೊಂಡ ತೀರ್ಥಹಳ್ಳಿಯಲ್ಲಿಯೇ ನಡೆಯಿತು. ಇದರ ಪ್ರಥಮ ಅಧಿವೇಶನದಲ್ಲಿ ಸಮಾಜವಾದಿ ಮುಖಂಡರುಗಳಾದ ರಮಾನಂದ ಮಿಶ್ರ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರು ಭಾಗವಹಿಸಿದ್ದರು. ಇದನ್ನು ಸೂಕ್ಷ್ಮವಾಗಿ ಗಮನಿಸುವುದಾದಲ್ಲಿ ಮಲೆನಾಡು ಗೇಣಿದಾರ ಸಂಘ ಪ್ರಾರಂಭದಿಂದಲೂ ಸಮಾಜವಾದಿಗಳ ನಿಕಟ ಸಂಪರ್ಕ ಹೊಂದಿತ್ತೆಂದು ನಿಖರವಾಗಿ ಹೇಳಬಹುದು. ಅಲ್ಲದೆ ಕಾಂಗ್ರೆಸ್ಸಿನ ನಾಯಕರುಗಳೂ ಸಹ ಸಂಘದ ಸಭೆ ಸಮಾರಂಭಗಳಲ್ಲಿ ಭಾಗವಹಿಸಿದ್ದರು.

ಸಾಗರ ತಾಲ್ಲೂಕು ರೈತ ಸಂಘ

ಮಲೆನಾಡು ಗೇಣಿದಾರರ ಸಂಘದ ರೀತಿಯಲ್ಲಿಯೇ ಇದೇ ಹೊತ್ತಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಹುಟ್ಟಿಕೊಂಡ ಇನ್ನೊಂದು ಸಂಘ ಎಂದರೆ, ಸಾಗರ ತಾಲ್ಲೂಕು ರೈತ ಸಂಘ. ಇದು ೧೯೪೮ರಲ್ಲಿ ಸ್ಥಾಪನೆಗೊಂಡಿತು. ಇದರ ಸ್ಥಾಪಕರು ಗಣಪತಿಯಪ್ಪನವರು. ಈ ಸಂಘವು ದೀವರ ಜಾತಿಯವರಿಗೆ ಸಂಬಂಧಿಸಿದ್ದಿತಾದರೂ ವಾಸ್ತವವಾಗಿ ಸಂಘ ಗೇಣಿದಾರರ ಸಂಘವಾಗಿತ್ತು. ಅಂದರೆ ಆ ಪ್ರದೇಶದ ಗೇಣಿದಾರರಲ್ಲಿ ಮತ್ತು ಗೇಣಿ ಜಮೀನನ್ನೇ ಅವಲಂಬಿಸಿಕೊಂಡು ಜೀವಿಸುವವರಲ್ಲಿ ೯೦%ಕ್ಕೂ ಅಧಿಕ ಜನ ದೀವರ ಜಾತಿಯವರಾಗಿದ್ದರು. ಈ ಸಂಘಕ್ಕೆ ಪ್ರಾರಂಭದಲ್ಲಿ ದೀವರ ಸಂಘವೆಂದು ನಾಮಕರಣ ಮಾಡಲು ಕೆಲವರು ಪ್ರಯತ್ನಿಸಿದ್ದಾದರೂ, ಗಣಪತಿಯಪ್ಪನವರ ಸಲಹೆಯಂತೆ 'ಸಾಗರ ತಾಲ್ಲೂಕು ರೈತ ಸಂಘ' ಎಂದು ಹೆಸರಿಡಲಾಯಿತು.

ಈ ಸಂಘ ಮತ್ತು ಮಲೆನಾಡು ಗೇಣಿದಾರರ ಸಂಘದ ಬೇಡಿಕೆಗಳು ಒಂದೇ ರೀತಿಯಾಗಿದ್ದವು. ಅಂದರೆ ಗೇಣಿರೈತರ ಸಮಸ್ಯೆಯನ್ನು ಕುರಿತಂತೆ ಆಗಿದ್ದವು. 'ಸಾಗರ ತಾಲ್ಲೂಕು ರೈತ ಸಂಘ'ವು 'ಮಲೆನಾಡು ಗೇಣಿದಾರರ ಸಂಘ'ದ ರೀತಿಯಲ್ಲಿಯೇ ಪ್ರಾರಂಭದಿಂದಲೂ ಸಮಾಜವಾದಿಗಳ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದಿತು. ಗಣಪತಿಯಪ್ಪನವರು ಹೇಳುವಂತೆ ಸಮಾಜವಾದಿಗಳು 'ಸಾಗರ ತಾಲ್ಲೂಕು ರೈತಸಂಘ'ದ ಸಭೆಗಳಲ್ಲಿ ಭಾಗವಹಿಸಿ ರೈತರನ್ನು ಹುರಿದುಂಬಿಸುತ್ತಿದ್ದರು.

ಈ ಮೇಲಿನಂತೆ ಸಮಾನ ಹಿತಾಸಕ್ತಿಯನ್ನಿಟ್ಟುಕೊಂಡಿದ್ದ ಎರಡೂ ಸಂಘಗಳು ೧೯೫೧ರಲ್ಲಿ ಒಂದುಗೂಡಿದವು. ಅಲ್ಲದೆ ಶಿವಮೊಗ್ಗ ಜಿಲ್ಲೆಯಲ್ಲಿ ಗೇಣಿರೈತರ ಮತ್ತು ಹಿಂದುಳಿದ ರೈತರ ಜಾಗೃತಿಯನ್ನುಂಟು ಮಾಡುತ್ತಿದ್ದರು. ಈ ಜಾಗೃತಿ ಕಾಗೋಡು ಸತ್ಯಾಗ್ರಹದಂತಹ ಹೋರಾಟ ಅಥವಾ ಚಳವಳಿಗೆ ನಾಂದಿಯಾಯಿತೆನ್ನಬಹುದು.

ಚಳವಳಿ ಆರಂಭಗೊಂಡಿದ್ದು ಗೇಣಿ ಭತ್ತ ಅಳೆಯುತ್ತಿದ್ದ ಕೊಳಗದ ಗಾತ್ರಕ್ಕೆ ಸಂಬಂಧಿಸಿದಂತೆ ಗೇಣಿ ನಿಗದಿಯಾಗಬೇಕು; ಗೇಣಿ ಪ್ರಮಾಣ ಕಡಿಮೆ ಆಗಬೇಕು; ಗೇಣಿ ಫಸಲಿನ ಒಂದನೆ ಮೂರು (೧/೩) ಭಾಗಕ್ಕಿಂತ ಜಾಸ್ತಿ ಇರಕೂಡದು ಎಂಬುದು ಸಾಗರ ತಾಲ್ಲೂಕು ರೈತ ಸಂಘ ಮತ್ತು ಮಲೆನಾಡು ಗೇಣಿದಾರ ಸಂಘಗಳ ಬೇಡಿಕೆಯಾಗಿತ್ತು. ಸಾಗರ ತಾಲ್ಲೂಕು ರೈತ ಸಂಘ ಈ ಬೇಡಿಕೆಯನ್ನು ವಿಶಿಷ್ಟವಾದ ರೀತಿಯಲ್ಲಿ ತಾಲ್ಲೂಕಿನ ಜಮೀನ್ದಾರರ ಮುಂದಿಟ್ಟಿತು; ಈ ಬಗ್ಗೆ ಸಾಕಷ್ಟು ಪ್ರಚಾರವನ್ನು ಮಾಡಿತು.[೪]

ಸಾಗರ ತಾಲ್ಲೂಕಿನಲ್ಲಿ ಆಹಾರ ಧಾನ್ಯಗಳ ಅಳತೆಯ ಮಾಪನ ಆಗ ಖಂಡುಗವಾಗಿತ್ತು, ಒಂದು ಖಂಡುಗಕ್ಕೆ ೨೦ ಕೊಳಗ. ಸಂಘದ ಹಲವು ಬೇಡಿಕೆಗಳಲ್ಲಿ ಗೇಣಿ ಭತ್ತವನ್ನು ಮೂರು ಸೇರಿನ ಕೊಳಗದಲ್ಲೇ ಅಳೆಯಬೇಕೆಂಬುದೂ ಒಂದು ಬೇಡಿಕೆಯಾಗಿತ್ತು. ಸಾಮಾನ್ಯವಾಗಿ ಒಂದು ಕೊಳಗ ಎಂದರೆ ಮೂರು ಸೇರಿನದಾಗಿತ್ತು. ಸರ್ಕಾರದ ಮಾನ್ಯತೆ ಪಡೆದ ಕೊಳಗ ಸಹ ಮೂರು ಸೇರಿನದಾಗಿರುತ್ತಿತ್ತು. ಆದರೆ ವಿಶೇಷವಾಗಿ ತಾಳಗುಪ್ಪ ಹೋಬಳಿಯಲ್ಲಿ ದಣಿಗಳು ಒಕ್ಕಲುಗಳಿಂದ

ಗೇಣಿ ಅಳೆಸಿಕೊಳ್ಳಲು ಉಪಯೋಗಿಸುತ್ತಿದ್ದ ಮರದ ಕೊಳಗ ಮೂರು ಕಾಲು, ಮೂರುವರೆ, ಮೂರುಮುಕ್ಕಾಲು ಸೇರಿನದ್ದಾಗಿರುತ್ತಿತ್ತು. ಈ ರೀತಿ ಗೇಣಿ ಅಳೆಯಿಸಿಕೊಳ್ಳುತ್ತಿದ್ದ ಜಮೀನ್ದಾರರಲ್ಲಿ ಕಾಗೋಡಿನ ಗೌಡರ ಮನೆತನವೂ ಒಂದು. ತಾಲ್ಲೂಕಿನ ಹಲವು ಜಮೀನ್ದಾರರು ಕೊಳಗದ ಪ್ರಮಾಣ ೩ ಸೇರಿನದ್ದೇ ಇರಬೇಕು ಎಂಬ ರೈತ ಸಂಘದ ಬೇಡಿಕೆಯನ್ನು ಒಪ್ಪಿದರು. ಆದರೆ ಕಾಗೋಡು ಗೌಡರು ಮಾತ್ರ ಇದನ್ನು ಒಪ್ಪಲಿಲ್ಲ. ಗೇಣಿದಾರರೂ ತಮ್ಮ ಬೇಡಿಕೆಯನ್ನು ವಾಪಸ್ಸು ತೆಗೆದುಕೊಳ್ಳಲಿಲ್ಲ. ಈ ರೀತಿ ಆದ ವಿವಾದ ಮಹತ್ವದ ಬೇಡಿಕೆಯಾಗಿ ಪ್ರಾರಂಭವಾಗಿ ಇನ್ನು ಮುಂದೆ ಜಮೀನ್ದಾರರು ಗೇಣಿಗೆ ಗದ್ದೆ ಅಥವಾ ಜಮೀನನ್ನೇ ಕೊಡುವುದಿಲ್ಲವೆಂದು ಹಠ ಹಿಡಿದಾಗ ವಿವಾದ ಹೊಸ ತಿರುವನ್ನು ಪಡೆದುಕೊಂಡಿತು.

ಕಾಗೋಡು ಸತ್ಯಾಗ್ರಹದ ಈ ಸಂದರ್ಭದಲ್ಲಿ ಸಮಾಜವಾದಿ ಪಕ್ಷ ಪ್ರತ್ಯೇಕವಾಗಿ ಭಾಗವಹಿಸದಿದ್ದರೂ ಸತ್ಯಾಗ್ರಹದ ಬಗ್ಗೆ ಕಾಳಜಿ ಹೊಂದಿತ್ತು. ಚಳವಳಿ ನಡೆಯುತ್ತಿದ್ದ ವೇಳೆಯಲ್ಲಿ ಶಿವಮೊಗ್ಗ ಜಿಲ್ಲೆಯ ಪ್ರಮುಖ ಸಮಾಜವಾದಿಗಳು ಮತ್ತು ಸಮಾಜವಾದಿ ಪಕ್ಷದ ಕಾರ್ಯದರ್ಶಿಯೂ ಆಗಿದ್ದ ಸದಾಶಿವರಾಯರು ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದ ಶಾಂತವೇರಿ ಗೋಪಾಲಗೌಡರು ಹಾಗೂ ವೈ.ಆರ್. ಪರಮೇಶ್ವರಪ್ಪನವರು ಗಣಪತಿಯಪ್ಪರೊಡನೆ ಕಾಗೋಡಿನ ಕುರಿತು ಆಗಾಗ್ಗೆ ಚರ್ಚಿಸುತ್ತಿದ್ದುದು ರೈತಸಂಘದ ಡೈರಿಯಿಂದ ತಿಳಿದುಬರುತ್ತದೆ.[೫]

೧೯೫೧ರ ಜನವರಿ ತಿಂಗಳಿನಲ್ಲಿ ಕಡಿದಾಳ ಮಂಜಪ್ಪ, ಗಣಪತಿಯಪ್ಪ ಮತ್ತು ಗುರುವಯ್ಯಗೌಡರು ಕೊಳಗದ ವಿಷಯದ ಇತ್ಯರ್ಥದ ಕುರಿತು ಚರ್ಚಿಸಿದ್ದಾಗ್ಯೂ ಅದು ಯಶಸ್ವಿಯಾಗಲಿಲ್ಲ. ಗುರುವಯ್ಯಗೌಡರು ಯಾವುದೇ ಚೌಕಾಶಿಗೂ (ಕೊಳಗದ ವಿಷಯದಲ್ಲಿ) ಸಹ ಸಿದ್ಧರಿರಲಿಲ್ಲ. ಕಾಗೋಡಿನ ದೀವರು ತಮ್ಮ ಭೂಮಿ ಬಿಟ್ಟುಬಿಡಬೇಕೆಂಬ ಹಠವನ್ನು ನಿಲ್ಲಿಸಲಿಲ್ಲ. ಈ ಸಂದರ್ಭದಲ್ಲಿ ಮೈಸೂರು ರಾಜ್ಯದ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದ ಸಿ.ಜಿ.ಕೆ. ರೆಡ್ಡಿಯವರು 'The Genesis of Kegodu' ಎಂಬ ಕಿರು ಪುಸ್ತಕವನ್ನು ತಂದು ೧೯೫೧ರ ಜುಲೈ ತಿಂಗಳಲ್ಲಿ ಜರುಗಿದ ಎ.ಐ.ಸಿ.ಸಿ. ಅಧಿವೇಶದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಪ್ರಮುಖರಿಗೆ ಹಂಚಿದರು.[೬]

ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ್ದಲ್ಲಿ ಸಮಾಜವಾದಿ ಪಕ್ಷ (ಸೋಷಿಯಲಿಸ್ಟ್ ಪಕ್ಷ) ಪ್ರಾರಂಭದಿಂದಲೂ ಕಾಗೋಡಿನ ವಿದ್ಯಮಾನಗಳ ಬಗ್ಗೆ ಗಮನಹರಿಸುತ್ತಿತ್ತು ಮತ್ತು ಕಾಗೋಡು ಸತ್ಯಾಗ್ರಹದ ಬಗ್ಗೆ ಆಸಕ್ತಿ ಹೊಂದಿತ್ತೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಸದಾಶಿವರಾಯರು ಮತ್ತು ಶಾಂತವೇರಿ ಗೋಪಾಲಗೌಡರು ಕಾಗೋಡಿನ ವಿವಾದ ಚಳವಳಿಯ ರೂಪ ತಳೆಯುವ ಮೊದಲೇ ಕಾಗೋಡಿಗೆ ಹೋಗಿ ಅಲ್ಲಿ ಪರಿಸ್ಥಿತಿ ನೋಡಿಕೊಂಡು ಬಂದಿದ್ದರು. ೧೯೫೧ರ ಏಪ್ರಿಲ್ ತಿಂಗಳಿನಲ್ಲಿಯೇ ಕಾಗೋಡಿನ ಕುರಿತು ಸೋಷಿಯಲಿಸ್ಟ್ ಪಕ್ಷ ಮುಂದೆ ಕೈಗೊಳ್ಳಬೇಕಾಗಿರುವ ಕ್ರಮದ ಕುರಿತು ಒಂದು ವರದಿಯನ್ನು ಸಿದ್ಧಪಡಿಸಲು ಸಮಿತಿಯನ್ನು ಸಹ ರಚಿಸಲಾಗಿತ್ತು.

ಕಾಗೋಡು ಸತ್ಯಾಗ್ರಹ ಅಥವಾ ಚಳವಳಿಯು ರೈತಸಂಘದ ಕಡಿದಾಳ ಮಂಜಪ್ಪನವರ ನಾಯಕತ್ವದಲ್ಲಿ ಜರುಗುತ್ತಿದ್ದರೂ ಸೋಷಿಯಲಿಸ್ಟ್ ಪಕ್ಷ ಅದರಲ್ಲಿ ವಿಶೇಷವಾದ ಆಸಕ್ತಿ ತಳೆದಿತ್ತು. ಸಾಗರ ರೈತ ಸಂಘ, ಮಲೆನಾಡು ರೈತಸಂಘದ ಹಿಡಿತದಲ್ಲಿ ಸತ್ಯಾಗ್ರಹ ನಡೆಯುತ್ತಿದ್ದಾಗಲೇ ಸೋಷಿಯಲಿಸ್ಟರು ಕಾಗೋಡಿಗೆ ಆಗಮಿಸಿ ಭಾಷಣ ಮಾಡಿ ರೈತರ ಪರ ಒಲವು ತೋರಿದ್ದರು. ಜಮೀನ್ದಾರರ ವಿರುದ್ಧ ಸಮಾಜವಾದಿ ಪಕ್ಷವು ಕಾಗೋಡು ಚಳವಳಿಯ ಕಡೆ ಸರ್ಕಾರದ ಗಮನ ಸೆಳೆಯುವ ಸಲುವಾಗಿ ಕರಪತ್ರವನ್ನು ಮಾಡಿ ಹಂಚಿತು. ಅದೇನೆಂದರೆ

೧. ಕಾಗೋಡಿನ ರೈತರು ನೂರಾರು ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿರುವ ಜಮೀನುಗಳಲ್ಲಿ ಭೂಮಾಲೀಕರು (ಒಡೆಯರು) ಪ್ರವೇಶ ಮಾಡಿದೊಡನೆ ತಕ್ಷಣ ಅವರನ್ನು ದಸ್ತಗಿರಿ ಮಾಡಲಾಗುತ್ತದೆ.

೨. ಇದುವರೆಗೂ ಯಾವುದೇ ರೈತನು ಜಮೀನನ್ನು ಬಿಟ್ಟುಕೊಟ್ಟಿರುವಾದಾಗಿ ಹಿಡುವಳಿದಾರನಿಗೆ ಬರೆದುಕೊಟ್ಟಿರುವುದಿಲ್ಲ, ಇಲ್ಲವೆ ಬಿಡುತ್ತೇವೆಂದೂ ಹೇಳಿಕೆ ಕೊಟ್ಟಿರುವುದಿಲ್ಲ.

೩. ಹಿಡುವಳಿದಾರರು ರೈತರಿಗೆ ಯಾವುದೇ ವಿಧವಾದ ಲೇಖೀ ನೋಟೀಸುಗಳನ್ನು ಕೊಟ್ಟು ಜಮೀನು ಬಿಡುವುದಕ್ಕೆ ತಿಳಿಸಿರುವುದಿಲ್ಲ.

೪. ೧೯೪೨ ರಿಂದ ಈವರೆಗೆ ೩೦% ರಷ್ಟು ಗೇಣಿ ಹೆಚ್ಚಿಸಲಾಗಿದೆ. ಆದರೆ ಆ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿರುವುದಿಲ್ಲ.

೫. ಪ್ರತಿಯೊಂದು ರೈತ ಕುಟುಂಬದಿಂದ ವರ್ಷಕ್ಕೆ ೫೦ ಆಳುಗಳವರೆಗೆ ಬಿಟ್ಟೀ ಕೆಲಸ ಮಾಡಿಸಿಕೊಂಡು ಪ್ರಯೋಜನ ಪಡೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ರೈತರ ಆತ್ಮಗೌರವ ಮತ್ತು ಸಾಮಾಜಿಕ ಗೌರವಕ್ಕೆ ಕುಂದು ತರುವ ರೀತಿಯಲ್ಲಿ ಕೆಲಸಗಳನ್ನು ಮಾಡಿಸುತ್ತಿದ್ದರು. ಒಂದು ವೇಳೆ ಅವರು ಹೇಳಿದ ಅಗೌರವ ತರುವಂತಹ ಕೆಲಸಗಳನ್ನು ಮಾಡದಿದ್ದಲ್ಲಿ ಬೈಯ್ಯುವುದು, ಹೊಡೆಯುವುದು ಮತ್ತು ಕುಡಿಯುವ ನೀರಿನ ಬಾವಿಗೆ ಮುಳ್ಳು ಬೇಲಿ ಹಾಕಿ ನೀರು ಸಿಗದಂತೆ ಮಾಡುತ್ತಿದ್ದರು.

೬. ಅಳತೆಗೆ ಸಂಬಂಧಿಸಿದಂತೆ ವಿವಾದ ತಲೆದೋರಿದ ೧೯೪೯-೫೦ ಮತ್ತು ೧೯೫೦-೫೧ನೇ ಸಾಲಿನಲ್ಲಿ ಹಿಡುವಳಿದಾರರಿಗೆ ಕೊಡಬೇಕಾದ ಗೇಣಿಯ ಧಾನ್ಯವನ್ನು ಹಿಡುವಳಿದಾರರು ತೆಗೆದುಕೊಂಡು ಕ್ರಮವಾದ ರಶೀದಿ ಕೊಡಲು ಒಪ್ಪದಿರುವುದರಿಂದ ಸರಕಾರಿ ಡಿಪೋಕ್ಕೆ ಹಿಡುವಳಿದಾರರ ಹೆಸರಿನಲ್ಲಿ ಪಾವತಿ ಮಾಡಿ ರಶೀದಿ ಪಡೆಯಲಾಗಿದೆ. ಡಿಪೋದಲ್ಲಿ ಇದಕ್ಕೆ ಸಂಬಂಧಿಸಿದಂತೆ ಹಣವನ್ನೆಲ್ಲಾ ಹಿಡುವಳಿದಾರರು ಪಡೆದಿರುತ್ತಾರೆ.[೭]

ಈ ಮೇಲಿನಂತೆ ಕರಪತ್ರದ ಮುಖಾಂತರ ಸೋಷಿಯಲಿಸ್ಟ್ ಪಕ್ಷ ಕಾಗೋಡಿನ ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಯಶಸ್ವಿಯೂ ಸಹ ಆಯಿತು. ಇದೇ ವೇಳೆಯಲ್ಲಿ ಸೋಷಿಯಲಿಸ್ಟ್ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಸಿ.ಜಿ.ಕೆ. ರೆಡ್ಡಿಯವರು ಅಂದಿನ ಗೃಹ ಸಚಿವ ಡಿ.

ಮರಿಯಪ್ಪನವರಿಗೆ ಕಾಗೋಡಿನ ಬಗ್ಗೆ ದೀರ್ಘವಾದ ಪತ್ರ ಬರೆದು ಈ ಕೆಳಗಿನ ಷರತ್ತುಗಳನ್ನು ಮುಂದಿಟ್ಟರು.

೧. ಕಾಗೋಡು ಸತ್ಯಾಗ್ರಹದಲ್ಲಿ ಬಂಧಿತರಾಗಿರುವವರನ್ನೆಲ್ಲಾ ತಕ್ಷಣ ಯಾವುದೇ ಷರತ್ತುಗಳಿಲ್ಲದೆ ಬಿಡುಗಡೆ ಮಾಡಬೇಕು ಮತ್ತು ಅವರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ತಕ್ಷಣವೇ ವಾಪಸ್ಸು ಪಡೆಯಬೇಕು.

೨. ಧಾನ್ಯ ವಸೂಲಿಯ ವೇಳೆ ನಡೆದ ಅತ್ಯಾಚಾರಗಳ ಕುರಿತು ತನಿಖೆ ಆಗಬೇಕು.

೩. ಜಮೀನ್ದಾರರ ಪರವಾಗಿ ರೆವಿನ್ಯೂ ಅಧಿಕಾರಿಗಳು ಗೇಣಿದಾರರಿಂದ ವಸೂಲು ಮಾಡಿರುವ ಭತ್ತವನ್ನು ಆಯಾ ರೈತರಿಗೇ ಕೊಡಬೇಕು. ಅಂಥ ರೆವಿನ್ಯೂ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು.

೪. ಕಾಗೋಡು ಗ್ರಾಮದಲ್ಲಿ ಇಟ್ಟಿರುವ ಪೊಲೀಸ್ ಪಡೆಯನ್ನು ಕೂಡಲೇ ಹಿಂತೆಗೆಯಬೇಕು.

೫. ರೈತರಿಂದ ಪೊಲೀಸರು ಹಾಗೂ ಜಮೀನುದಾರರು ಕಿತ್ತಿಟ್ಟುಕೊಂಡಿರುವ ವ್ಯವಸಾಯದ ಸಲಕರಣೆಗಳನ್ನು ತಕ್ಷಣ ವಾಪಸ್ಸು ಮಾಡಬೇಕು.

೬. ಸರಕಾರ ಗೇಣಿದಾರರನ್ನು ಒಕ್ಕಲೆಬ್ಬಿಸದಂತೆ ತುರ್ತು ಶಾಸನ ಮಾಡಬೇಕು.

ಈ ಮೇಲಿನ ಷರತ್ತುಗಳನ್ನು ಮೇ ೧೫ರ ಒಳಗೆ ಪೂರೈಸಿಕೊಡದೇ ಇದ್ದಲ್ಲಿ ಕಾಗೋಡಿನಲ್ಲಿ ಜರುಗುತ್ತಿರುವ ಅತ್ಯಾಚಾರವನ್ನು ತಡೆಗಟ್ಟಲು ಮತ್ತು ರೈತರ ಸ್ವಾತಂತ್ರ್ಯ ಹಾಗೂ ಹಕ್ಕು ಬಾಧ್ಯತೆಗಳನ್ನು ರಕ್ಷಿಸಲು ಸತ್ಯಾಗ್ರಹ ಹೂಡದೆ ಸೋಷಲಿಸ್ಟ್ ಪಾರ್ಟಿಗೆ ಬೇರೆ ದಾರಿಯೇ ಇಲ್ಲ ಎಂದೂ ಆ ಹೇಳಿಕೆಯಲ್ಲಿ ಸಿ.ಜಿ.ಕೆ. ರೆಡ್ಡಿಯವರು ಎಚ್ಚರಿಗೆ ಕೊಟ್ಟರು.[೮]

ಈ ರೀತಿ ಕಾಗೋಡು ಚಳವಳಿ ಜರುಗುತ್ತಿರುವಾಗಲೆ ಸರ್ಕಾರದ ಗಮನ ಈ ಕಡೆ ಹರಿಯಿತು. ೧೯೫೧ ಮೇ ೧೮ರಂದು ಈ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ ಶಿವಮೊಗ್ಗದಲ್ಲಿ ಒಂದು ಸಂಧಾನ ಸಭೆಯನ್ನು ಸರ್ಕಾರ ಏರ್ಪಾಡು ಮಾಡಿತು. ಆದರೆ ಜಮೀನ್ದಾರರು ಯಾವುದೇ ರಾಜಿ ಸಂಧಾನಕ್ಕೆ ಸಿದ್ಧರಿರಲಿಲ್ಲ. ಗೇಣಿ ಕಡಿಮೆ ಮಾಡಲಿಕ್ಕೂ ಮನ್ನಿಸದೆ ರೈತರಿಗೆ ಜಮೀನನ್ನು ನೀಡುವುದಿಲ್ಲವೆಂದು ಪಟ್ಟು ಹಿಡಿದರು. ಈ ವೇಳೆಯಲ್ಲಿ ಸರ್ಕಾರ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ ಬೇರೆಯದೇ ಆದ ಪರಿಹಾರವನ್ನು ರೈತರ ಮುಂದಿಟ್ಟಿತು. ಅದೆಂದರೆ ಕಾಗೋಡಿನ ರೈತರು ಜಮೀನುದಾರರಿಗೆ ಭೂಮಿಯನ್ನು ಮರಳಿ ಒಪ್ಪಿಸಿದ್ದೇ ಆದಲ್ಲಿ ಕಾಗೋಡಿನ ಹತ್ತಿರದ ಗ್ರಾಮವಾದ ಕೆಂಜಿಗಾಪುರದಲ್ಲಿ ಉಚಿತ ಭೂಮಿಯನ್ನು ಗೇಣಿದಾರರಿಗೆ ನೀಡುವುದಾಗಿ ಭರವಸೆ ಕೊಟ್ಟಿತು. ಆದರೆ ಈ ಶರಣಾಗತಿ ಸೂತ್ರದ ಸಂಧಾನಕ್ಕನುಗುಣವಾಗಿ ಕಾಗೋಡು ಒಕ್ಕಲುಗಳು ಅಲ್ಲಿಂದ ವಾಸ್ತವ್ಯ ನೆಲೆ ಬಿಟ್ಟು ಹೋಗದಂತೆ ಶಾಂತವೇರಿ ಗೋಪಾಲಗೌಡರು ಮುಖ್ಯವಾಗಿ ತಡೆದು ಮುಂದೆ ನಿಂತರು.[೯] ದೊಡ್ಡ ಒಡೆಯರಾಗಿದ್ದ ಗೌಡರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದರು ಮತ್ತು

ಆಗ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿತ್ತು. ಆದಕಾರಣ ಒಡೆಯ ಮತ್ತು ಒಕ್ಕಲುಗಳ ನಡುವೆ ಸಂಘರ್ಷವನ್ನು ತಪ್ಪಿಸುವ ನೆಪದಲ್ಲಿ ಕಾಂಗ್ರೆಸ್ಸಿಗರಾಗಿದ್ದ ಒಡೆಯರ ಹಿತವನ್ನು ಕಾಯುವ ಉದ್ದೇಶವನ್ನು ಸರ್ಕಾರ ಹೊಂದಿರಬೇಕು ಎನ್ನುವ ಅನುಮಾನ ಈ ರಾಜಿಸೂತ್ರದಲ್ಲಿ ಕಾಣಿಸುತ್ತದೆ. ಪ್ರಾಯಶಃ ಈ ಅಂಶವೇ ಶಾಂತವೇರಿ ಗೋಪಾಲಗೌಡರ ವಿರೋಧಕ್ಕೆ ಕಾರಣವಾಗಿದ್ದು, ಒಕ್ಕಲುಗಳ ಪರವಾಗಿ ಹಕ್ಕೊತ್ತಾಯವನ್ನು ಮಂಡಿಸಿದರು.

ಶಿವಮೊಗ್ಗ ಸಂಧಾನ ವಿಫಲವಾಗಿತ್ತು. ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ೨೧.೫.೧೯೫೧ ರಲ್ಲಿ ನಡೆದ ತಾಲ್ಲೂಕು ರೈತ ಸಂಘದ ಸಭೆಯಲ್ಲಿ ಶಾಂತವೇರಿ ಗೋಪಾಲಗೌಡರು ಹಾಗೂ ಗಣಪತಿಯಪ್ಪನವರು ಮಾತನಾಡಿ ಹೋರಾಟ ಅನಿವಾರ್ಯ; ರೈತರ ಆಜನ್ಮಸಿದ್ಧ ಹಕ್ಕಾದ ಉಳುಮೆ ಹಕ್ಕಿನ ರಕ್ಷಣೆಗಾಗಿ ಹೋರಾಡುವುದು ನಮ್ಮ ಆದ್ಯ ಕರ್ತವ್ಯ ಬೇಡಿಕೆಗಳು ನ್ಯಾಯಬದ್ಧವಾಗಿವೆ. ಶಾಂತಿ ಭಂಗಕ್ಕೆ ಸತ್ಯಾಗ್ರಹಿಗಳು ಯಾರೂ ಆಸ್ಪದ ಕೊಡಬಾರದು[೧೦] ಎಂದು ತಿಳಿಸಿದರು.

ಕಾಗೋಡು ಚಳವಳಿಯಲ್ಲಿ ಸೋಷಿಯಲಿಸ್ಟ್ ಪಕ್ಷದವರು ನೇರವಾಗಿ ಭಾಗವಹಿಸಿದ ನಂತರ ಸಾಗರ ತಾಲ್ಲೂಕಿಗೆ ಮಾತ್ರ ಸೀಮಿತವಾಗಿದ್ದ ಈ ಚಳವಳಿ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಚಳವಳಿಯಾಗಿ ಮಾರ್ಪಟ್ಟಿತು. ಈ ಚಳವಳಿಗೆ ಬೆಂಗಳೂರು, ಕೋಲಾರ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ತೀರ್ಥಹಳ್ಳಿ, ದಕ್ಷಿಣ ಕನ್ನಡ ಮುಂತಾದ ಕಡೆಯ ಸಮಾಜವಾದಿ ಕಾರ್ಯಕರ್ತರು ಆಗಮಿಸಿ ಸತ್ಯಾಗ್ರಹ ಮಾಡಿದರು. ಶಾಂತವೇರಿ ಗೋಪಾಲಗೌಡರ ಮೇಲೆ ವಾರೆಂಟ್ ಇದ್ದರೂ ಸಾಗರ ತಾಲ್ಲೂಕಿನ ಮೂಲೆ ಮೂಲೆಗೆ ಹೋಗಿ ಜನತೆಯನ್ನು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಕಾಗೋಡು ಸತ್ಯಾಗ್ರಹಿಗಳು ಎಲ್ಲಿಯೂ ಹಿಂಸೆಗಿಳಿಯಲಿಲ್ಲ. ಘೋಷಣೆ, ಗದ್ದೆಗೆ ಮೆರವಣಿಗೆ ಹೋಗುವುದು, ಹಾಕಿದ್ದ ಬೇಲಿ ಮುರಿಯುವುದು, ಜಮೀನಿನಲ್ಲಿ ನೆಟ್ಟಿದ್ದ ಹಂಗಾಮಿ ಗಿಡಗಳನ್ನು ಕೀಳುವುದು ಇದಿಷ್ಟೇ ಅವರ ಕಾರ್ಯಕ್ರಮಗಳಾಗಿದ್ದವು. ಆದರೆ ಅವರು ಮಾತ್ರ ಲಾಠಿ ಏಟು, ಹೊಡೆತ ತಿಂದು ಜೈಲುವಾಸ ಅನುಭವಿಸಿದರು. ಪತ್ರಿಕೆಗಳಲ್ಲೇನೋ ಸತ್ಯಾಗ್ರಹಿಗಳು ಹಿಂಸಾಚಾರಿಗಳು ಎಂದು ಪ್ರಕಟವಾಗಿತ್ತು.[೧೧] ಕಾಗೋಡು ಸತ್ಯಾಗ್ರಹವನ್ನು ಹತ್ತಿಕ್ಕಲು ಸರ್ಕಾರವೇ ಹಿಂಸಾಚಾರಕ್ಕೆ ಇಳಿದಿದ್ದನ್ನು ಮರೆಮಾಚಲು ಪತ್ರಿಕೆಗಳಲ್ಲಿ ಬಂದ ವರದಿ 'ಸತ್ಯಾಗ್ರಹಿಗಳು ಹಿಂಸಾಚಾರಿಗಳು' ಎಂಬುದನ್ನು ಗಮನಿಸಿದಾಗ ಪ್ರಭುತ್ವ ಭೂಮಾಲೀಕರ ಪರವಾಗಿ ಇರುವುದನ್ನು ಇದು ಪರೋಕ್ಷವಾಗಿ ಸೂಚಿಸುತ್ತದೆ.

ಕಾಗೋಡು ಚಳವಳಿಯನ್ನು ಸಾಕಷ್ಟು ತೀವ್ರಗೊಳಿಸುವ ಸಲುವಾಗಿ ಶಾಂತವೇರಿ ಗೋಪಾಲಗೌಡ, ವೈ.ಆರ್. ಪರಮೇಶ್ವರಪ್ಪ, ಹೆಚ್. ಗಣಪತಿಯಪ್ಪ ಇನ್ನೂ ಮುಂತಾದ ಸಮಾಜವಾದಿ ಮುಖಂಡರುಗಳು ಪ್ರಮುಖವಾಗಿ ಮಲೆನಾಡು ಪ್ರದೇಶದಲ್ಲಿ ಸಂಚರಿಸಿ ರೈತರನ್ನು ಸಂಘಟಿಸುವ, ಜಾಗೃತಿಗೊಳಿಸುವ ಕಾರ್ಯವನ್ನು ಮಾಡಿದರು. ಸರ್ಕಾರ ಮತ್ತು ಚಳವಳಿಗಾರರ ನಡುವೆ ಜರುಗಿದ ಸಂಧಾನ ವಿಫಲಗೊಂಡ ನಂತರ ಇನ್‌ಕ್ವಿಲಾಬ್ ಜಿಂದಾಬಾದ್, ಉಳುವವನೆ ನೆಲದೊಡೆಯ, ಜಮೀನ್ದಾರಿ

ರದ್ದಾಗಲಿ ಎಂಬ ಘೋಷಣೆಗಳೊಂದಿಗೆ ಚಳವಳಿ ದಿನದಿಂದ ದಿನಕ್ಕೆ ಪ್ರಬಲವಾಗುತ್ತಾ ಸಾಗಿತು. ಆದರೆ ಸಮಾಜವಾದಿಗಳು ಕ್ರಾಂತಿಕಾರಕ ಬದಲಾವಣೆಗೆ ಕೈಹಾಕುವಷ್ಟು ಪ್ರಬಲರಾಗಿರಲಿಲ್ಲ. ಆರ್ಥಿಕ ಹಾಗೂ ಪ್ರಜಾಬೆಂಬಲದ ಈ ಎರಡೂ ದೃಷ್ಟಿಕೋನದಿಂದ ಕಾಗೋಡು ಸತ್ಯಾಗ್ರಹದ ವೇಳೆಯಲ್ಲಿ ಸೋಷಲಿಸ್ಟ್ ಪಕ್ಷದ ಸ್ಥಿತಿಗತಿಯ ಬಗ್ಗೆ ಜಿ. ರಾಜಶೇಖರರವರು ತಮ್ಮ 'ಕಾಗೋಡು ಸತ್ಯಾಗ್ರಹ' ಎಂಬ ಗ್ರಂಥದಲ್ಲಿ ಹೇಳಿರುವ ಕೆಲವು ಮಾತುಗಳನ್ನು ಉಲ್ಲೇಖಿಸಿ ಮೇಲಿನ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬಹುದು. ರಾಜಕೀಯ ಪಕ್ಷವೊಂದಕ್ಕೆ ಮೂಲಭೂತ ಬದಲಾವಣೆಯ ಹಂಬಲವೊಂದೇ ಇದ್ದರೆ ಸಾಲದು. ಸಂಘಟನೆಯ ಮುಖಾಂತರ ಅದಕ್ಕೋಸ್ಕರ ಯತ್ನಿಸುವುದಕ್ಕೆ ಜನಬೆಂಬಲವೂ ಬೇಕು. ಪ್ರಾಂತ್ಯದಲ್ಲಿ ಆಗ ಸೋಷಲಿಸ್ಟ್ ಪಕ್ಷಕ್ಕೆ ಇಂತಹ ಹಂಬಲ ಮಾತ್ರ ಇದ್ದಿತು; ಜನ ಬೆಂಬಲ ಏನೇನೂ ಇರಲಿಲ್ಲ[೧೨] ಈ ಮಾತನ್ನು ಗಮನಿಸಿದಾಗ ಸಮಾಜವಾದ ಒಂದು ಶೈಕ್ಷಣಿಕ ಸಿದ್ಧಾಂತವಾಗಿ ಪರಿಚಯವಾಗಿತ್ತೇ ವಿನಃ ಪರಿಸ್ಥಿತಿಗಳನ್ನು ಆಗ ಅವಲಂಬಿಸಿ ಜನರನ್ನು ಸಂಘಟಿಸಿ ಆಂದೋಲನಗಳಿಗೆ ಪ್ರೇರೇಪಿಸುವ ಮಟ್ಟಿಗೆ ಸಶಕ್ತವಾಗಿರಲಿಲ್ಲ ಎಂದು ತಿಳಿಯುತ್ತದೆ.

ಮಲೆನಾಡಿನ ಹಳ್ಳಿಗಳಲ್ಲಿ ಅರ್ಥವ್ಯವಸ್ಥೆಯ ಕುರಿತು ಸಮಾಜವಾದಿಗಳಿಗೆ ಆಳವಾದ ತಿಳುವಳಿಕೆಯೂ ಇರಲಿಲ್ಲ. ಮಹಾತ್ಮಾ ಗಾಂಧೀಜಿ, ಕಾರ್ಲ್‌ಮಾರ್ಕ್ಸ್, ರಸೆಲ್, ರಾಮಮನೋಹರ ಲೋಹಿಯಾ, ವಿನೋಬಾ ಬಾವೆ ಮುಂತಾದವರ ವಿಚಾರಗಳ ಅರೆಬರೆ ಜ್ಞಾನದ ವಿಚಿತ್ರ ಪಾಕವಾಗಿದ್ದ ಇವರು ಜಿಲ್ಲೆಯ ಹಳ್ಳಿಗಳ ಆರ್ಥಿಕ ವ್ಯವಸ್ಥೆಯ ವಿವರಗಳನ್ನು ಗ್ರಹಿಸಿರಲಿಲ್ಲ ಮಾತ್ರವಲ್ಲ, ಹಾಗೆ ಅಭ್ಯಾಸ ಮಾಡುವ ಮನೋಧರ್ಮವೂ ಅವರಿಗಿರಲಿಲ್ಲ. ಜಿಲ್ಲೆಯ ಒಂದು ಹಳ್ಳಿಯಲ್ಲಿಯೂ ಸಮಾಜವಾದಿ ಪಕ್ಷಕ್ಕೆ ಗೇಣಿದಾರ ಒಕ್ಕಲುಗಳ ಸಂಘಟನೆಯಾಗಲೀ, ಕೃಷಿಕೂಲಿಗಳ ಸಂಘಟನೆಯಾಗಲೀ ಇರಲಿಲ್ಲ. ಪಕ್ಷದಲ್ಲಿದ್ದ ಮಹನೀಯರಿಗೆ ಈ ಬಗ್ಗೆ ಕಳಕಳಿ, ಪ್ರೀತಿ ತುಂಬಿದ ಆಸಕ್ತಿ ಇದ್ದಿದ್ದರೆ ಅದು ಸಂಘಟನೆಯಲ್ಲಿ ವ್ಯಕ್ತವಾಗಲೇಬೇಕಿತ್ತು. ವೈಯಕ್ತಿಕವಾಗಿ ಇವರು ಪ್ರಾಮಾಣಿಕ ಸಮಾಜವಾದಿಗಳಾಗಿದ್ದರೋ ಇಲ್ಲವೋ ಎಂಬುದು ಪ್ರಶ್ನೆಯೂ ಅಲ್ಲ. ಸಂಘಟನೆಯ ಕಾರ್ಯದಕ್ಷತೆಯಲ್ಲಿ ವ್ಯಕ್ತವಾಗದ ಯಾವ ರಾಜಕೀಯ ಕಳಕಳಿಗೂ, ಯಾವ ಸೈದ್ಧಾಂತಿಕತೆ ನಿಷ್ಠೆಗೂ ಕಾಸಿನ ಬೆಲೆಯೂ ಇಲ್ಲ. ಈ ದೃಷ್ಟಿಯಿಂದ ಶಿವಮೊಗ್ಗ ಜಿಲ್ಲೆಯ ಸಮಾಜವಾದಿಗಳಲ್ಲಿ ಗೋಪಾಲಗೌಡರನ್ನು ಬಿಟ್ಟರೆ ಉಳಿದವರೆಲ್ಲ ಶುದ್ಧ ನಿರುಪಯೋಗಿಗಳು, ಸೋಮಾರಿಗಳು, ಅದಕ್ಷರು.[೧೩]

ಆದರೂ ಸೋಷಲಿಸ್ಟ್ ಪಕ್ಷ ಕಾಗೋಡು ಸತ್ಯಾಗ್ರಹದಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡಿದ್ದಲ್ಲದೆ, ತನ್ನ ಪ್ರತಿಷ್ಠೆಯನ್ನೆಲ್ಲ ಅಲ್ಲಿ ಪಣವಾಗಿಟ್ಟಿತು. ಇದು ಪಕ್ಷದ ಬಲಾಬಲ ಅಳೆದು ತೆಗೆದುಕೊಂಡ ತೀರ್ಮಾನವಾಗಿರಲಿಲ್ಲ, ಶಾಂತವೇರಿ ಗೋಪಾಲಗೌಡ ಮತ್ತು ಸಿ.ಜಿ.ಕೆ. ರೆಡ್ಡಿಯವರ ವೈಯಕ್ತಿಕ ನಿರ್ಧಾರವಾಗಿತ್ತು.

ಸತ್ಯಾಗ್ರಹದ ಪ್ರಾರಂಭದ ದಿನಗಳಲ್ಲಿ ಈ ಇಡೀ ತಕರಾರಿನ ಕುರಿತು, ಸಾಗರದ ಬೇರೆ ಹಳ್ಳಿಗಳಲ್ಲಿಯೂ ಭೂಮಾಲೀಕರು ಮತ್ತು ಒಕ್ಕಲುಗಳ ಮಧ್ಯೆ ಬೆಳೆಯುತ್ತಿದ್ದ ವೈಮನಸ್ಸಿನ ಬಗ್ಗೆ,

ರೈತಸಂಘದ ಬೇಡಿಕೆಗಳ ಬಗ್ಗೆ ಯಾವುದೇ ಆಸಕ್ತಿ ತೋರಿಸದ ಸರಕಾರ, ಚಳವಳಿ ತೀವ್ರಗೊಂಡಂತೆ ಸ್ಪಷ್ಟವಾಗಿ ಭೂಮಾಲೀಕರ ಪರವಾದ ನಿಲುವನ್ನು ತಳೆಯಿತು. ಸತ್ಯಾಗ್ರಹದ ಬಗ್ಗೆ ತನ್ನ ಅಧಿಕೃತ ಪ್ರಕಟಣೆಗಳಲ್ಲಿ ಸರಕಾರ, ಸತ್ಯಾಗ್ರಹವನ್ನು ಕೇವಲ ಜಾತಿಯ ವೈಷಮ್ಯ ಎಂದು ಬಣ್ಣಿಸಿತು. ಕೆ.ಜಿ. ಒಡೆಯರ್‌ರವರು ಕಾಂಗ್ರೆಸ್ ಮುಖಂಡರಾಗಿರುವುದರಿಂದ ಅವರ ಕುಟುಂಬಕ್ಕೆ ಅಗೌರವ ತರಲು ಕಾಂಗ್ರೆಸ್ ವಿರೋಧಿಗಳು ಈ ಚಳವಳಿ ನಡೆಸುತ್ತಿದ್ದಾರೆ, ಇದು ಒಂದು ಕ್ಷುಲ್ಲಕ ಪಕ್ಷ ರಾಜಕೀಯ ಎಂದು ಬಣ್ಣಿಸಲಾಯಿತು. ಕಾಗೋಡು ಗೌಡರನ್ನು ಉತ್ತರ ಭಾರತದ ಹಳೆಯ ಜಮೀನ್ದಾರರಿಗೆ ಹೋಲಿಕೆ ಮಾಡಿ ಗೌಡರು ಭಾರೀ ಜಮೀನುದಾರರಲ್ಲವೆಂದೂ, ಕೇವಲ ಒಬ್ಬ ಸಣ್ಣ ಹಿಡುವಳಿದಾರನೆಂದೂ, ಕಾಗೋಡಿನಲ್ಲಿದ್ದ ಕೊಳಗದ ಅಳತೆಯ ಪ್ರಮಾಣ ಶಿವಪ್ಪನಾಯಕನ ಕಾಲದಿಂದಲೂ ನಡೆದುಬಂದ ಶಿಸ್ತಾಗಿದ್ದು ಸಾಗರ ತಾಲ್ಲೂಕಿನ ಹಲವೆಡೆ, ಪಕ್ಕದ ಬೊಂಬಾಯಿ ಪ್ರಾಂತ್ಯದ ಸಿದ್ದಾಪುರ ತಾಲ್ಲೂಕಿನಲ್ಲಿಯೂ ಇದೇ ಕೊಳಗವೇ ಚಾಲ್ತಿಯಲ್ಲಿದೆಯೆಂದೂ, ಏಕಾಏಕಿ ಅದನ್ನ ಕಡಿಮೆ ಮಾಡಬೇಕೆಂದು ಕೇಳುವುದು ತರವಲ್ಲವೆಂದೂ ವಾದಿಸಿತು. (ಸಿದ್ಧಾಪುರ ಉತ್ತರ ಕನ್ನಡ ಜಿಲ್ಲೆಯಲ್ಲಿ ಇದ್ದು ಆಗ ಉತ್ತರ ಕನ್ನಡ ಜಿಲ್ಲೆ ಬಾಂಬೆ ಪ್ರೆಸಿಡೆನ್ಸಿಗೆ ಸೇರಿತ್ತು. ೧೯೫೬ ನವೆಂಬರ್ ೧ ರಂದು ವಿಶಾಲ ಮೈಸೂರು ರಾಜ್ಯದ ರಚನೆ ಆದ ನಂತರ ಮೈಸೂರಿನ ಆಡಳಿತಕ್ಕೆ ಒಳಪಟ್ಟಿತು.) ಸರಕಾರವೇ ಜಾರಿಗೆ ತರಲು ಉದ್ದೇಶಿಸಿರುವ ಒಂದು ಭೂ ಸುಧಾರಣಾ ಕಾನೂನು ಸೆಲೆಕ್ಟ್ ಕಮಿಟಿಯ ಮುಂದೆ ಇರುವಾಗ ಈ ಚಳವಳಿ ಹೂಡುವ ಅಗತ್ಯವೇನು? ಸ್ವಾತಂತ್ರ್ಯ ಬಂದ ಜನರಿಗೆ ಶಾಂತಿ ಮಾರ್ಗದಲ್ಲಿ ತಮ್ಮ ಬೇಡಿಕೆಗಳನ್ನು ಸರಕಾರದ ಮುಂದೆ ಇಡಲು ಅವಕಾಶವಿರುವಾಗ ಈ ಸತ್ಯಾಗ್ರಹ ಏತಕ್ಕೆ? ಎಂದೂ ಸರಕಾರದ ಪ್ರಕಟಣೆಗಳು ಪ್ರಶ್ನಿಸಿದವು.[೧೪]

ಸತ್ಯಾಗ್ರಹದ ಸಂದರ್ಭದಲ್ಲಿ ನಡೆದ ಹಿಂಸೆ ಪೊಲೀಸರಿಂದ ಮತ್ತು ಜಮೀನುದಾರರ ಕಡೆಯವರಿಂದ ನಡೆದಿದ್ದರೂ ಸರಕಾರ ಚಳವಳಿಗಾರರನ್ನು ಹೊಣೆಗಾರರನ್ನಾಗಿ ಮಾಡಿತು ಮತ್ತು ಈ ಸಂಬಂಧ ಸುಳ್ಳು ಪ್ರಚಾರ ಮಾಡಿತು. ಅಂದಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಕೆಂಗಲ್ ಹನುಮಂತಯ್ಯ, ಇನ್ನೊಬ್ಬ ಪ್ರಮುಖ ಕಾಂಗ್ರೆಸ್ಸಿಗರಾದ ಹೆಚ್.ಎಂ. ಚನ್ನಬಸಪ್ಪನವರೂ ಸಹ ಜಮೀನ್ದಾರರ ಪರವಾಗಿದ್ದುದು ತಿಳಿದುಬರುತ್ತದೆ. ಮೈಸೂರು ರಾಜ್ಯದ ಪ್ರಥಮ ವಿಧಾನಸಭೆಯಲ್ಲಿ ಸಾಗರದ ಪ್ರತಿನಿಧಿಯಾಗಿ ಚುನಾಯಿತರಾಗಿದ್ದ ಶಾಂತವೇರಿ ಗೋಪಾಲಗೌಡರು ಕಾಗೋಡಿನ ಚಳವಳಿ ಬಗ್ಗೆ ಕೇಳಿದ ಪ್ರಶ್ನೆಗೆ ಅಂದಿನ ಗೃಹ ಸಚಿವರಾಗಿದ್ದ ಸಿದ್ದವೀರಪ್ಪ, "ಕಾಗೋಡಿನಲ್ಲಿ ಸತ್ಯಾಗ್ರಹ ಸಂದರ್ಭದಲ್ಲಿ ಜಮೀನುದಾರರಿಗೆ ಸರಕಾರ ಯಾವ ಸಹಾಯವನ್ನು ಒದಗಿಸಲಿಲ್ಲ"ವೆಂಬ ಅಪ್ಪಟ ಸುಳ್ಳು ಹೇಳಿದ್ದರು.[೧೫]

೧೯೫೧ರ ಮೈಸೂರು ಪ್ರದೇಶ ಕಾಂಗ್ರೆಸ್ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳಾದ ಕೆ.ಸಿ. ರೆಡ್ಡಿಯವರು ಕಾಗೋಡು ಚಳವಳಿಯಲ್ಲಿ ಭಾಗವಹಿಸಿದ್ದವರನ್ನು ಟೀಕಿಸಿದ್ದರು. ಸಮಾಜವಾದಿಗಳು ಮಧ್ಯೆ ಪ್ರವೇಶಿಸದೆ ಇದ್ದರೆ, ರಾಮಮನೋಹರ ಲೋಹಿಯಾರವರು ಚಳವಳಿಯಲ್ಲಿ ಭಾಗವಹಿಸಿ

ಮಾತನಾಡದೇ ಇದ್ದಲ್ಲಿ ಸತ್ಯಾಗ್ರಹ ಒಂದು ತಿಂಗಳಿಗಿಂತ ಮೊದಲೇ ಬಗೆಹರಿಯುತ್ತಿತ್ತೆಂದು ಹೇಳಿದ್ದರು.

೧೯೫೧ ಜುಲೈ ೩ರಂದು ಶಾಂತವೇರಿ ಗೋಪಾಲಗೌಡರನ್ನು ಬಂಧಿಸಿದ ನಂತರ ಕಾಗೋಡು ಚಳವಳಿಯ ಚಲನಾಶಕ್ತಿ ನಿಂತಂತಾಯಿತು. ಹೋರಾಟ ಮುಂದುವರಿಯಿತಾದರೂ ಅದು ಪ್ರಾರಂಭದ ಪ್ರಖರತೆಯನ್ನು ಕಳೆದುಕೊಂಡಿತ್ತು. ಚಳವಳಿಯ ಹಿನ್ನೆಡೆಗೆ ಇನ್ನೊಂದು ಮುಖ್ಯ ಕಾರಣವೆಂದರೆ ಚಳವಳಿ ಜೂನ್ ತಿಂಗಳಿಗೆ ಕಾಲಿಟ್ಟ ನಂತರ ಅಕ್ಕಪಕ್ಕದ ಹಳ್ಳಿಯ ರೈತರು ಚಳವಳಿಯಲ್ಲಿ ಭಾಗವಹಿಸುವುದು ಕಡಿಮೆಯಾಯಿತು. ಇದಕ್ಕೆ ಪ್ರಮುಖ ಕಾರಣ ಮಳೆಗಾಲ ಆರಂಭಗೊಂಡಿದ್ದು, ರೈತರುಗಳು ತಮ್ಮ ಅಲ್ಪಸ್ವಲ್ಪ ಭೂಮಿಯಲ್ಲಿ ಬಿತ್ತನೆ ಕಾರ್ಯದಲ್ಲಿ ಮಗ್ನರಾದರು. ಆದಾಗ್ಯೂ ಸಮಾಜವಾದಿ ಪಕ್ಷದವರು ಅರ್ಥಾತ್ ಸಮಾಜವಾದಿಗಳು ಹೋರಾಟವನ್ನು ನಿಲ್ಲಿಸಲಿಲ್ಲ. ಹೋರಾಟವನ್ನು ಜೀವಂತಗೊಳಿಸುವ ಸಲುವಾಗಿ ೧೯೫೧ ಜೂನ್ ೧೩ರಂದು ಪ್ರಮುಖ ಸಮಾಜವಾದಿ ನಾಯಕರುಗಳಾದ ರಾಮಮನೋಹರ ಲೋಹಿಯಾರವರನ್ನು ಕಾಗೋಡಿಗೆ ಕರೆತರಲಾಯಿತು. ಲೋಹಿಯಾರವರು ಸತ್ಯಾಗ್ರಹದಲ್ಲಿ ಭಾಗವಹಿಸಿ ಚಳವಳಿಯ ಉದ್ದೇಶ ಮತ್ತು ಮಹತ್ವದ ಬಗ್ಗೆ ಮಾತನಾಡಿದರು. ರಾಮಮನೋಹರ ಲೋಹಿಯಾರವರು ಸತ್ಯಾಗ್ರಹದಲ್ಲಿ ಪಾಲ್ಗೊಂಡಾಗ ಸುಮಾರು ೨ ಸಾವಿರ ಜನರಿದ್ದರು. ಲೋಹಿಯಾರವರೊಡನೆ ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಶಿವಾನಂದಸ್ವಾಮಿ, ಎಂ.ಪಿ. ಈಶ್ವರಪ್ಪ, ಲೋಕಪಾಲ್ ಇನ್ನೂ ಮುಂತಾದವರು ಆಗಮಿಸಿದ್ದರು. ಎನ್.ಕೆ.ಸೀತಾರಾಮಯ್ಯಂಗಾರ್‌ರವರು ಕಾಗೋಡು ಚಳವಳಿ ಪ್ರಾರಂಭವಾದಾಗಿನಿಂದಲೂ ಪ್ರತಿನಿತ್ಯ ನಡೆಯುತ್ತಿರುವ ಭೂಮಾಲೀಕರ ಮತ್ತು ಪೋಲೀಸರ ದಬ್ಬಾಳಿಕೆ, ತಂಡತಂಡವಾಗಿ ಚಳವಳಿಗಾರರು ಬಂಧನಕ್ಕೊಳಗಾಗಿರುವುದನ್ನು ವಿವರವಾಗಿ ಲೋಹಿಯಾರವರ ಗಮನಕ್ಕೆ ಈ ಮೊದಲೇ ತಂದಿದ್ದರು. ಸಾಗರದ ಗಾಂಧೀ ಮೈದಾನದಲ್ಲಿ ಭಾರಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ದಿನವೇ (ಈಗಾಗಲೇ ಹೇಳಿರುವಂತೆ) ಸಾಗರದ ಜೈಲಿಗೆ ಭೇಟಿ ಕೊಟ್ಟು ಸತ್ಯಾಗ್ರಹಿಗಳನ್ನೆಲ್ಲಾ ಕಂಡು ಧೈರ್ಯ ಹೇಳಿದರು. ಅಲ್ಲದೆ ರೈತ ಸಮೂಹದೊಡನೆ ಕಾಗೋಡಿಗೆ ಹೊರಟರು. ಅಷ್ಟರಲ್ಲಾಗಲೇ ಕಾಗೋಡು ಭೂಮಿಯ ಸುತ್ತ ಸಾವಿರಾರು ರೈತರು ನೆರೆದಿದ್ದರು.

ರಾಮಮನೋಹರ ಲೋಹಿಯಾರವರು ಕಾಗೋಡು ಗ್ರಾಮದ ಅಶ್ವತ್ಥ ಮರದ ಕಟ್ಟೆಯ ಮೇಲೆ ನಿಂತು ರೈತರನ್ನುದ್ದೇಶಿಸಿ, ಗುರಿಮುಟ್ಟುವತನಕ ಹೋರಾಟ ನಡೆಯಲಿ, ನಿಮ್ಮ ಬೆಂಬಲಿಗನಾಗಿ ನಾನು ಸಮರಕ್ಕೆ ಇಳಿಯುತ್ತಿದ್ದೇನೆ ಎಂದು ರೈತರ ಉಳುಮೆಯ ಹಕ್ಕಿನ ಭೂಮಿಯ ಕಡೆ ನಡೆದರು. ರೈತಸಮುದಾಯ ಲೋಹಿಯಾರನ್ನು ಹಿಂಬಾಲಿಸಿತು. ಲೋಹಿಯಾ ಜಿಂದಾಬಾದ್ ಕ್ರಾಂತಿ ಚಿರಾಯುವಾಗಲಿ ಎಂದು ಸಹಸ್ರ ಕಂಠದಿಂದ ಘೋಷಣೆ ಮೊಳಗಿತು.[೧೬]

ರಾಮಮನೋಹರ ಲೋಹಿಯಾರವರು ಕಾಗೋಡಿನಲ್ಲಿ ಪೊಲೀಸರನ್ನು ಲೆಕ್ಕಿಸದೆ ಭೂಮಿಯ ಸುತ್ತ ಹಾಕಿದ್ದ ಬೇಲಿಯನ್ನು ಕಿತ್ತೆಸೆದು, ರೈತರ ಹಕ್ಕಿನ ಭೂಮಿಯಲ್ಲಿ ಪಾದಾರ್ಪಣೆ ಮಾಡಿದರು.

ಎತ್ತುಕಟ್ಟಿ ಸಿದ್ಧವಾಗಿದ್ದ ನೇಗಿಲನ್ನು ಭೂಮಿಗೆ ಹೂಡಿದರು. ಇವರ ಜೊತೆಯಲ್ಲಿ ಸಮಾಜವಾದಿ ನಾಯಕರುಗಳು ಮತ್ತು ರೈತರುಗಳೂ ಭಾಗಿಯಾದರು. ಭೂಮಾಲೀಕರ ರಕ್ಷಣೆಯಾಗಿದ್ದ ಪೊಲೀಸರು ಏನೂ ಮಾಡಲಾಗದೆ ಮೂಕಪ್ರೇಕ್ಷಕರಂತೆ ನಿಂತಿದ್ದರು. ಕಾಗೋಡಿನ ಭೂಮಿಯಲ್ಲಿ ರಾಮಮನೋಹರ ಲೋಹಿಯಾ ಮತ್ತು ಅವರ ತಂಡದವರನ್ನು ಬಂಧಿಸಲು ಪೊಲೀಸರಿಗೆ ಧೈರ್ಯವಿರಲಿಲ್ಲ. ಅದೇ ದಿನ ರಾತ್ರಿ ರೈಲ್ವೆ ನಿಲ್ದಾಣದಲ್ಲಿ ಉಳಿದುಕೊಂಡಿದ್ದ ರಾಮಮನೋಹರ ಲೋಹಿಯಾ, ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಎಂ.ಪಿ. ಈಶ್ವರಪ್ಪ, ಬಿ. ಶ್ರೀಕಂಠಪ್ಪ ಮುಂತಾದ ಸಮಾಜವಾದಿ ಮುಖಂಡರುಗಳನ್ನು ಬಂಧಿಸಿ, ಸಾಗರ ತಾಲ್ಲೂಕು ಕಛೇರಿ ಪಕ್ಕದ ಲಾಕಪ್ಪಿನಲ್ಲಿಡಲಾಯಿತು. ಲೋಹಿಯಾ ಬಂಧನದ ಬಗ್ಗೆ ಮೈಸೂರು ಸರಕಾರ ಕೊಟ್ಟ ಹೇಳಿಕೆ ಪ್ರಕಾರ ಲೋಹಿಯಾರವರು ತಮ್ಮ ಹಿಂದಿನ ಘೋಷಣೆಗೆ ಅನುಸಾರವಾಗಿ ತಮ್ಮ ೯ ಮಂದಿ ಸಂಗಡಿಗರುಗಳೊಂದಿಗೆ ಮತ್ತು ನೂರು ಮಂದಿ ಇತರರೊಂದಿಗೆ ಶ್ರೀ ಗುರುವೇಗೌಡರ ಜಮೀನಿನ ಅತಿಕ್ರಮ ಪ್ರವೇಶ ಮಾಡಿ, ಬೇಲಿಯನ್ನು ಕಿತ್ತರೆಂದೂ, ಕಾನೂನು ವಿರುದ್ಧ ಸಭೆ ನಡೆಸಿದರೆಂದೂ ಪೊಲೀಸು ವರದಿಯಿಂದ ತಿಳಿದುಬರುತ್ತದೆ. ಇದರಿಂದ ಕಾನೂನು ಪಾಲಕರ ಕಣ್ಣಿಗೆ ಬಿದ್ದು ಅವರನ್ನು ಅವರ ಕೆಲವು ಮಿತ್ರರನ್ನು ಗಣನೀಯ ಅಪರಾಧಕ್ಕಾಗಿ ಬಂಧಿಸಲಾಯಿತು.[೧೭]

೧೯೫೧ ಜೂನ್ ೨೨ರಂದು ಸರಕಾರ ಲೋಹಿಯಾರ ಮೇಲೆ ಇದ್ದ ಎಲ್ಲಾ ಕೇಸುಗಳನ್ನು ಹಿಂದೆ ತೆಗೆದುಕೊಂಡು ಜೈಲಿನಿಂದ ಬಿಡುಗಡೆ ಮಾಡಿತು. ಲೋಹಿಯಾರವರು ಬೆಂಗಳೂರಿನಿಂದ ರಾಂಚಿಗೆ ತೆರಳುವ ಮೊದಲು ಸತ್ಯಾಗ್ರಹದಲ್ಲಿ ತಾವು ಭಾಗವಹಿಸಿದ್ದರ ಬಗ್ಗೆ ಹೀಗೆ ಹೇಳಿದರು. ಸಣ್ಣದಾಗಲಿ, ದೊಡ್ಡದಾಗಲಿ, ಎಲ್ಲಾ ರೀತಿಯ ಅನ್ಯಾಯ ಕೃತ್ಯಗಳನ್ನು ವಿರೋಧಿಸಬೇಕೆಂದು ನಾನು ಜೂನ್ ೩ನೆಯ ತಾರೀಖು ರಾಜಘಾಟಿನಲ್ಲಿ ಜನರುಗಳಿಗೆ ಬೋಧಿಸಿದ ನಂತರ, ಅಂತಹ ಕಾರ್ಯವನ್ನು ನಾನೇ ನಿರ್ವಹಿಸಬೇಕಾದ ಪ್ರಸಂಗ ಬಂದಿತೆಂದು ಸ್ವಲ್ಪವೂ ಯೋಚಿಸಿರಲಿಲ್ಲ. ಶತಮಾನಗಳಿಂದ ಜಡಾವಸ್ಥೆಗೆ ತಳ್ಳಲ್ಪಟ್ಟಿರುವ ಆಸ್ತಿ ಮತ್ತು ಭೂಮಿ ಕಾಣಿಗಳಿಗೆ ನೇರವಾಗಿ ಸಂಬಂಧಿಸಿದ ಚಳವಳಿಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಈ ಸುಂದರ ಮೈಸೂರು ನಾಡಿಗೆ ನಾನು ಕೃತಜ್ಞ. ಕಾಗೋಡಿನ ಮಾಸ್ತಿಗಳು ಮತ್ತು ಕೆಂಚಪ್ಪಗಳು ಮಾತ್ರವಲ್ಲ ಭಾರತದ ಎಲ್ಲರೂ ತಮ್ಮ ಹಕ್ಕು ತಮಗೆ ದೊರೆಯಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ರಾಷ್ಟ್ರ ಬೆಳೆಯಬೇಕಾದರೆ ಇಂತಹವರ ಆತ್ಮಕ್ಕೆ ಸ್ವಾತಂತ್ರ್ಯ ದೊರೆಯಬೇಕು. ಆದರೆ ಕಾಲ ಮಿಂಚಿನ ವೇಗದಿಂದ ಸಾಗುತ್ತಿದೆ. ಅಭಾವ ಹಸಿವುಗಳ ಪ್ರಸ್ತುತ ವರ್ಷದಲ್ಲಿ ಕಾಗೋಡಿನ ೩೦೦ ಎಕರೆ ಜಮೀನು ಸಾಗುವಳಿಯಾಗದೆ ಉಳಿಯಕೂಡದು. ಇನ್ನೊಂದೆರಡು ದಿನಗಳಲ್ಲಿ ಈ ಜಮೀನುಗಳನ್ನು ಸಾಗು ಮಾಡಲು ರೈತರಿಗೆ ಅವಕಾಶ ಮಾಡಿಕೊಡಬೇಕು. ನೆರೆಯ ಗ್ರಾಮದವರು ಸಸಿಗಳನ್ನು ಉಚಿತವಾಗಿ ಕೊಡಬೇಕು. ನನ್ನ ಮೇಲಿನ ಮೊಕದ್ದಮೆಗಳನ್ನು ವಾಪಸ್ಸು ಪಡೆದು ನನ್ನನ್ನು ಮಾತ್ರ ಬಿಟ್ಟು ನನ್ನಂತಹದ್ದೆ ಆಪಾದನೆಗಳಿಗೆ ಗುರಿಯಾಗಿರುವ ಇತರರನ್ನು ಸೆರೆಮನೆಯಲ್ಲಿ ಉಳಿಸುವುದು ಪ್ರಜಾಸತ್ತೆಗೆ ಅಥವಾ ಕಾನೂನಿನ ಮುಂದೆ ಎಲ್ಲರೂ ಸಮನೆಂಬ ತತ್ವಕ್ಕೆ ಸಲ್ಲದು[೧೮] ಎಂದು ಪ್ರತಿಪಾದಿಸಿದರು.

ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ರಾಮಮನೋಹರ ಲೋಹಿಯಾರವರ ಬಂಧನ ಮತ್ತು ಬಿಡುಗಡೆ ಹೋರಾಟಕ್ಕೆ ಒಂದು ನೈತಿಕ ಸ್ಥೈರ್ಯವನ್ನು ಕೊಟ್ಟಿತು. ಈ ವಿಷಯ ಅರಿತ ಲೋಕನಾಯಕ ಜಯಪ್ರಕಾಶ ನಾರಾಯಣರು ಕಾಗೋಡಿಗೆ ಧಾವಿಸುವಂತಾಯಿತು. ಹೋರಾಟಕ್ಕೆ ರಾಷ್ಟ್ರಮಟ್ಟದ ಪ್ರಚಾರ ಸಿಕ್ಕಿದ್ದು ಒಂದು ಕಡೆಯಾದರೆ, ರೈತ ಸಮುದಾಯದಲ್ಲಿ ಹೊಸ ಚೈತನ್ಯ ಮೂಡಿದಂತಾಯಿತು. ಅಲ್ಲದೆ ರಾಜ್ಯ ಸರ್ಕಾರ ರೈತರ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸುವ ಸಲುವಾಗಿ ತನ್ನ ಗಮನವನ್ನು ಕಾಗೋಡಿನ ಕಡೆ ಹರಿಸಿತು.

೧೯೫೧ರ ಆಗಸ್ಟ್ ತಿಂಗಳ ವೇಳೆಗೆ ಕಾಗೋಡು ಶಾಂತವಾಗಿ ಜೈಲಿನಲ್ಲಿದ್ದ ಸತ್ಯಾಗ್ರಹಿಗಳೂ ಅಕ್ಟೋಬರ್ ವೇಳೆಗೆ ಜಾಮೀನಿನ ಮೇಲೆ ಹೊರಬರುತ್ತಿದ್ದರು. ೧೯೫೨ರ ಪ್ರಥಮ ಚುನಾವಣೆ ಘೋಷಿತವಾಗಿದ್ದು, ಸತ್ಯಾಗ್ರಹಿಗಳು ಮುಚ್ಚಳಿಕೆ ನೀಡಿ ಹೊರಬರುವ ತೀರ್ಮಾನ ಮಾಡಿ ಹೊರಬರುತ್ತಿದ್ದರು. ೧೯೫೨ರ ಪ್ರಾರಂಭದಲ್ಲಿಯೇ ಸರಕಾರ ಸತ್ಯಾಗ್ರಹಿಗಳ ಮೇಲಿನ ದಾವೆಗಳನ್ನು ಹಿಂದೆಗೆದುಕೊಂಡು, ಜೈಲಿನಲ್ಲಿ ಉಳಿದಿದ್ದವರನ್ನು ಬಿಡುಗಡೆ ಮಾಡಿತು. ಇದಕ್ಕೆ ಮೂಲ ಕಾರಣ ಸಮಾಜವಾದಿ ಪಕ್ಷದ ಮುಖಂಡರಾದ ಸಿ.ಜಿ.ಕೆ. ರೆಡ್ಡಿ ಹಾಗೂ ಹಿಂದ್‌ಕಿಸಾನ್ ಪಂಚಾಯತ್‌ನ ರಮಾನಂದ ಮಿಶ್ರ. ಒಟ್ಟುಗೂಡಿ ಸತ್ಯಾಗ್ರಹ ಮಾಡಿದರೂ ಗೆಲುವು ಕಾಣದ ದೀವರು ಗುಟ್ಟಾಗಿ ಕಾಗೋಡು ಗೌಡರಲ್ಲಿ ಗದ್ದೆ ಬೇಡಿದರು. ಗೌಡರಿಗೂ ಒಕ್ಕಲುಗಳ ಅಗತ್ಯವಿತ್ತು. ದೀವರ ಪೈಕಿಯ ಸತ್ಯಾಗ್ರಹಿಗಳಲ್ಲಿ ಹೆಚ್ಚು ಕಾಲ ಜೈಲಿನಲ್ಲಿದ್ದ ಎಲೆಕನ್ನ, ಕಣಸೆಸೆಟ್ಟಿ, ಮುಟಿಗುಪ್ಪೆ ಕರಿಯಪ್ಪ, ಜೊಂಟಕೆಂಚ ಮತ್ತು ಸವಾಜಿ ಮನೆಯವರು ಮಾತ್ರ ಗೌಡರಲ್ಲಿ ಮತ್ತೆ ಗೇಣಿಗೆ ಹೋಗಲಿಲ್ಲ. ಸತ್ಯಾಗ್ರಹದ ತಕ್ಷಣ ದೀವರಿಗಾದ ಲಾಭವೆಂದರೆ ಬಿಟ್ಟಿಬೇಗಾರು ಪದ್ಧತಿ ಪೂರ್ಣವಾಗಿ ಅಳಿಸಿ ಹೋದದ್ದು ಆಗಿದೆ. ನಾಡಿಗೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಇಂಥ ಚಳವಳಿ ನಡೆದದ್ದೂ ಅದೃಷ್ಟಕ್ಕೆ ಒಂದು ಸಾಧನೆ ಆಗಿತೆನ್ನಬೇಕು. ಕಾಗೋಡಿನ ರೈತರದು ಕೇವಲ ಆರ್ಥಿಕ ಬೇಡಿಕೆಯ ಚಳವಳಿಯಾದರೂ ತಮ್ಮ ಜೀವನದ ಮುಖ್ಯ ಆಸರೆಯಾಗಿದ್ದ ಗೇಣಿ ಜಮೀನನ್ನೇ ಪಣವಾಗಿಟ್ಟು ಹೋರಾಡಿದ ಅವರ ಆತ್ಮಶಕ್ತಿಯ ಪ್ರದರ್ಶನವಾಗಿತ್ತು. ಒಟ್ಟಾಗಿ ನಿಂತ ಈ ರೈತ ಸಮೂಹ ಮೇಲು ಜಾತಿಯ ಜಮೀನುದಾರರ ಎದುರುಗಡೆ ದಿಟ್ಟ ಸ್ವಾಭಿಮಾನ ತೋರಿದಂತಾಗಿತ್ತು. ನೆರೆಯ ಹಳ್ಳಿಗಳ ದೀವರೂ ಕಾಗೋಡು ಚಳವಳಿಗೆ ಬಂದದ್ದೂ ಕಾಗೋಡು ರೈತರ ಆರ್ಥಿಕ ಬೇಡಿಕೆಯ ಹೋರಾಟಕ್ಕೆ ಒಂದು ಸಾಮಾಜಿಕ ಆಯಾಮ ಕೊಟ್ಟಿತ್ತು. ಆದರೆ ದಣಿ–ಒಕ್ಕಲಿಗನ ಸಂಬಂಧದಲ್ಲಿ ತೇಪೆ ಹಚ್ಚುವ ಸುಧಾರಣೆಯನ್ನು ಸತ್ಯಾಗ್ರಹ ಗಮನಕ್ಕಿರಿಸಿಕೊಂಡಿತೇ ವಿನಾ ಆ ಪಾಳೇಗಾರಿಕೆ ಅವಶೇಷವೇ ಉಳಿಯದಂತೆ ಮಾಡಲು ಆ ಕಾಲಕ್ಕೆ ಅದಕ್ಕೆ ಸಾಧ್ಯವಾಗಲಿಲ್ಲ.[೧೯]

ಕಾಗೋಡು ಸತ್ಯಾಗ್ರಹ ನಡೆಯುತ್ತಿದ್ದ ಸಂದರ್ಭದಲ್ಲಿ ಬಂಧನದಲ್ಲಿದ್ದ ಕೆಲವು ಹೋರಾಟಗಾರರು ಮುಚ್ಚಳಿಕೆಯನ್ನು ಬರೆದುಕೊಟ್ಟು ಒಕ್ಕಲುಗಳಾಗಿದ್ದ ಕೆಲವು ದೀವರುಗಳು ಗುಟ್ಟಾಗಿ ಒಡೆಯರಲ್ಲಿ ಭೂಮಿಯನ್ನು ಬೇಡಿದ್ದನ್ನು ಗಮನಿಸಿದಾಗ ಸತ್ಯಾಗ್ರಹದ ತಮ್ಮ ನಿಲುವನ್ನು ಬಿಟ್ಟುಕೊಟ್ಟರೆ ಎಂಬ

ಅನುಮಾನ ಬರುತ್ತದೆ. ಜೊತೆಗೆ ಸಂಬಂಧಪಟ್ಟವರು (Stakeholders) ಸತ್ಯಾಗ್ರಹದ ಸ್ಫೂರ್ತಿಯನ್ನೇ ಪರಾಭವಗೊಳಿಸಿದರು ಎಂದು ಅನಿಸಿದರೂ ಇದು ಶಾಂತಿಯುತ ಹೋರಾಟ ಮಾರ್ಗದ ಮಿತಿಯೆಂದು ಅನಿಸಿದರೆ ಆಶ್ಚರ್ಯವಿಲ್ಲ.

ಕಾಗೋಡು ಚಳವಳಿಯ ತಕ್ಷಣದ ಪ್ರತಿಫಲ ಯಾವುದು ಎಂದು ಸೂಕ್ಷ್ಮವಾಗಿ ಗಮನಹರಿಸಿದರೆ ಕಾಗೋಡಿನ ರೈತರಿಗೆ ಹೇಳಿಕೊಳ್ಳುವಂತಹ ಯಾವುದೇ ಲಾಭವಾಗಲಿಲ್ಲ. ಅಂದರೆ ಕಾಗೋಡು ಚಳವಳಿಯ ಅನಂತರವೂ ಕೆ.ಜಿ. ಒಡೆಯರ್ ಹತ್ತಿರ ಗೇಣಿಗಿದ್ದ ಕೃಷಿಕರ ಆರ್ಥಿಕ ಪರಿಸ್ಥಿತಿ ಸರಿಯಾಗಿರಲಿಲ್ಲ. ಆದಾಗ್ಯೂ ಕಾಗೋಡಿನ ರೈತರ ಚಳವಳಿಯಿಂದಾಗಿ ಹಿಂದುಳಿದವರ ಬದುಕಿನಲ್ಲಿ ಬದಲಾವಣೆ ಕಂಡು ಬಂದಿತು. ರೈತರಲ್ಲಿ ಶೋಷಣೆಯ ಕುರಿತು ಜಾತಿಯತೆಯ ಕುರಿತು ಜಾಗೃತಿ ಮೂಡಿಸಿತು. ಗೇಣಿದಾರರ ಹೋರಾಟ ಕೇವಲ ನೆನಪಾಗಿ ಉಳಿದಿಲ್ಲ, ಪ್ರಪಂಚಕ್ಕೆ ಮಾದರಿ ಮಾರ್ಗ ತೋರಿದ ಕೀರ್ತಿ ಪಡೆದುಕೊಂಡಿದೆ. ಆರ್ಥಿಕವಾಗಿ ಸಬಲರೂ ಮತ್ತು ಮೇಲ್ವರ್ಗದವರಿಗೇ ಮೀಸಲಾಗಿದ್ದ ವ್ಯಕ್ತಿನಾಮಗಳು ದೀವರಲ್ಲೂ ಬಳಕೆಗೆ ಬಂದವು. ಸಾಮಾಜಿಕ ಪರಿವರ್ತನೆಗೆ ಈ ಹೋರಾಟ ಒಂದು ಸಾಕ್ಷಿ ಆಗಿದೆ, ಮಾದರಿ ತೋರಿದೆ, ಆಧುನೀಕರಣದ ಪ್ರಕ್ರಿಯೆಗಳಿಗೂ ಇಲ್ಲಿ ಅವಕಾಶವಾಯಿತು ಎಂಬೆಲ್ಲ ಅಭಿಪ್ರಾಯಗಳು ಮಂಡಿತವಾದವು. ಕಾಗೋಡು ಚಳವಳಿಯ ಕಿಡಿ ಹಾರಿಸಿದವರು ಗಣಪತಿಯಪ್ಪ ಅದಕ್ಕೆ ಕಾವು ಕೊಟ್ಟವರು ಸದಾಶಿವರಾಯರು. ತೀವ್ರತೆ ನೀಡಿದವರು ಲೋಹಿಯಾ ಅವರು. ಅದರ ನಾಯಕರಾಗಿ ಬೆಳೆದವರು ಶಾಂತವೇರಿ ಗೋಪಾಲಗೌಡರು. ಈ ಹೋರಾಟದ ಫಲವೇ ಮುಂದಿನ ದಶಕಗಳಲ್ಲಿ ಬಂದ ಭೂ ಸುಧಾರಣಾ ಶಾಸನ. ಉಳುವವನೆ ಹೊಲದೊಡೆಯ ಎಂಬ ಘೋಷಣೆಯಿಂದ ಗೇಣಿ ಪದ್ಧತಿ ವಿರುದ್ಧ ಮಹಾ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಕಿದ್ದು ಕಾಗೋಡು ಸತ್ಯಾಗ್ರಹ. ಈ ಹೋರಾಟದ ನಂತರ ಭೂ ಸುಧಾರಣಾ ಕಾಯ್ದೆ ಜಾರಿಗೆ ಬಂದಿತು. ಈ ಕಾಯ್ದೆಯಿಂದ ೧೯೭೪ರ ಸುಮಾರಿಗೆ ಭೂಮಿಯ ಮೇಲೆ ಹಕ್ಕು ಪಡೆದುಕೊಂಡಾಗ ಗ್ರಾಮದ ಎಲ್ಲಾ ಕುಟುಂಬಗಳು ೪ ರಿಂದ ೬ ಎಕರೆ ಜಮೀನಿನ ಒಡೆಯರಾದರು.[೨೦] ಮಲೆನಾಡಿನಲ್ಲಿದ್ದ ಗೇಣಿ ಪದ್ಧತಿಯಲ್ಲಿ ಒಕ್ಕಲುಗಳಿಗೆ ಆಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಿ ಸರಿಪಡಿಸಲು ತೀರ್ಥಹಳ್ಳಿಯ ಗೇಣಿದಾರರ ಸಂಘ ಮತ್ತು ಸಾಗರದ ರೈತ ಸಂಘ ಹುಟ್ಟಿಕೊಂಡಿದ್ದು, ಚರಿತ್ರಾರ್ಹವಾದದ್ದು. ಅವರ ಧ್ಯೇಯೋದ್ದೇಶಗಳಿಗೆ ಪೂರಕವಾದ ಸಿದ್ಧಾಂತವನ್ನು ಸಮಾಜವಾದಿಗಳು ಹೊಂದಿದ್ದರು. ಕಾಗೋಡಿನಲ್ಲಿ ಸತ್ಯಾಗ್ರಹ ಕಿಡಿ ಕಾಣಿಸಿಕೊಂಡಾಗ, ಸಮಾಜವಾದಿಗಳು ಆ ಆಂದೋಲನಕ್ಕೆ ಧುಮುಕಿದರು. ಆದ್ದರಿಂದ ಕಾಗೋಡು ಸತ್ಯಾಗ್ರಹವನ್ನು ಪ್ರಾರಂಭಿಸಿದವರು ಸಮಾಜವಾದಿಗಳೆಂದು ಹೇಳಲು ಸಾಧ್ಯವಿಲ್ಲ. ಆದರೆ ಅವರು ಹೆಚ್ಚಿನ ನೈತಿಕ ಬೆಂಬಲವನ್ನು ಮತ್ತು ಸೈದ್ಧಾಂತಿಕ ಸ್ವರೂಪವನ್ನು ಕಾಗೋಡು ಸತ್ಯಾಗ್ರಹಕ್ಕೆ ಒದಗಿಸಿದರು.

೪.೨. ಭೂ ಸುಧಾರಣಾ ಚಿಂತನೆ ಮತ್ತು ಚಳವಳಿಯ ಸ್ವರೂಪ

ಶಾಂತವೇರಿ ಗೋಪಾಲಗೌಡರು ತಮ್ಮ ಜೀವನವನ್ನು ರೈತರು, ಕೂಲಿಕಾರ್ಮಿಕರು ಮತ್ತು ಸಮಾಜದ ಅಸಹಾಯಕ ವರ್ಗದವರ ಏಳಿಗೆಗೆಂದೇ ಮುಡಿಪಾಗಿಟ್ಟವರು. ಅವರು ಜನಪರ

ಹೋರಾಟವನ್ನು ನಡೆಸಲು ಸಮಾಜವಾದಿ ಚಳವಳಿಯ ಸಿದ್ಧಾಂತಗಳನ್ನೇ ತಮ್ಮ ಶಕ್ತ್ಯಾಯುಧವನ್ನಾಗಿ ಬಳಸಿಕೊಂಡವರು. ಅವರ ಭೂ ಹೋರಾಟದ ಕಥನದಲ್ಲಿ ಕರ್ನಾಟಕದ ಭೂ ಸುಧಾರಣಾ ಚಳವಳಿಯು ಒಂದು ಮಹತ್ವದ ಅಧ್ಯಾಯವಾಗಿದೆ. ಈ ನಿಟ್ಟಿನಲ್ಲಿ ಭೂ ಸುಧಾರಣೆ ಎಂದರೇನು, ಅದರ ಹಿನ್ನೆಲೆ, ಬೆಳವಣಿಗೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಅವಲೋಕಿಸಲಾಗಿದೆ.

ಭೂಮಿಯ ಒಡೆತನ, ಹತೋಟಿ ಹಾಗೂ ಉಪಯೋಗದ ವಿಚಾರವಾಗಿ ಬಳಕೆಯಲ್ಲಿರುವ ಪದ್ಧತಿಯಲ್ಲಿ, ಒಡೆತನದ ಪುನರ್ ಹಂಚಿಕೆ ಮತ್ತು ಭೂ ಮಾನವ ಸಂಬಂಧಗಳಲ್ಲಿ ಮಾರ್ಪಾಡು ತರುವುದು ಈ ಎರಡು ಉದ್ದೇಶಗಳಿಗಾಗಿ ಸರ್ಕಾರವು ತಲೆಹಾಕುವಿಕೆ ಎಂಬ ಅರ್ಥದಲ್ಲಿ ಆ ಪದ ಬಳಕೆಯಾಗಿದೆ[೨೧] ಎಂದು ಭೂ ಸುಧಾರಣೆಯ ಬಗೆಗೆ ಎಸ್. ಚಂದ್ರಶೇಖರ್ ಅವರು ವ್ಯಾಖ್ಯಾನಿಸುತ್ತಾರೆ. ಭೂಮಿಯ ಒಡೆತನ ಮತ್ತು ಹಂಚಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿ ನಡೆದ ಚಿಂತನೆಗಳ ಒಟ್ಟು ಮೊತ್ತವನ್ನೆ ಭೂ ಸುಧಾರಣೆ ಎಂದು ಸರಳವಾಗಿ ಗ್ರಹಿಸಬಹುದಾಗಿದೆ. ಭೂ ರಹಿತ ಕೃಷಿ ಕಾರ್ಮಿಕರಿಗೆ ಜೀವನ ನಡೆಸಲು ಭೂಮಿಯನ್ನು ನ್ಯಾಯಯುತವಾಗಿ ನೀಡುವ ಪ್ರಕ್ರಿಯೆ ಎಂಬ ರೀತಿಯಲ್ಲಿಯೂ 'ಭೂ ಸುಧಾರಣೆ'ಯನ್ನು ಅರ್ಥೈಸಿಕೊಳ್ಳಬಹುದಾಗಿದೆ.

ಭೂ ಸುಧಾರಣೆಯ ಕಲ್ಪನೆಯು ಭಾರತದಲ್ಲಿ ಬಹು ಹಿಂದಿನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಒಂದು ವಿಷಯ ಮತ್ತು ಸಮಸ್ಯೆಯಾಗಿದೆ. ಭೂಮಿಯ ಒಡೆಯರು ಯಾರು, ಭೂಮಿಯನ್ನು ಉಳುವವರು ಯಾರು, ಭೂಮಿಯ ಉತ್ಪನ್ನಗಳ ಮೇಲಿನ ವಾರಸುದಾರಿಕೆ ಮೂಲತಃ ಯಾರದ್ದು? ಭೂಮಿಯ ಒಡೆಯನದೋ ಅಥವಾ ಭೂಮಿಯಲ್ಲಿ ಕೃಷಿ ಮಾಡಿ ಬೆಳೆ ತೆಗೆಯುವ ಕಾರ್ಮಿಕನದ್ದೋ ಎಂಬ ಪ್ರಶ್ನೆಗಳು ಅಂದಿನಿಂದಲೂ ಕಾಡುತ್ತಲೇ ಬಂದಿವೆ. ಭಾರತದ ಮಧ್ಯಕಾಲೀನ ಸಂದರ್ಭದಲ್ಲಿ ಭೂಸಂಬಂಧಿ ಕೃಷಿನೀತಿಗಳನ್ನು ಮೊಘಲರು ಪ್ರತಿಪಾದಿಸಿದರು. ಅವರಿಗಿಂತ ಪೂರ್ವದಲ್ಲಿ ಈ ಬಗೆಯ ಚರ್ಚೆಗಳು ಇಲ್ಲವೆಂದಲ್ಲ. ಮೊಘಲ್ ಸಾಮ್ರಾಜ್ಯದ ಬಾಬರ್, ಷೇರ್‌ಷಾ, ತೋದರಮಲ್ಲ ಇವರ ಭೂ ಸುಧಾರಣಾ ನೀತಿಗಳು ಭಾರತದ ಸಂದರ್ಭದಲ್ಲಿ ಆರಂಭಿಕ ವೇದಿಕೆಯನ್ನು ಒದಗಿಸಿರುವುದು ಕಂಡುಬರುತ್ತದೆ. ರೈತರಿಗೆ ಭೂ ಒಡೆತನವನ್ನು ನೀಡುವ ಉದ್ದೇಶ ಹೊಂದಿದ್ದ ಷೇರ್‌ಷಾನು ಭೂಕಂದಾಯ ಪದ್ಧತಿಯ ವ್ಯವಸ್ಥೆಯನ್ನು ರೂಪಿಸಿದನು. ಇದೇ ಅರಸರ ಕಾಲದ ತೋದರಮಲ್ಲನು ರೂಪಿಸಿದ ನಿಯಮಗಳನ್ನು 'ತೋದರಮಲ್ಲನ ಬಂದೋಬಸ್ತ್' ಎಂದೇ ಕರೆಯಲಾಗಿದೆ. ಭೂಮಿಯ ಮರುಮಾಪನ, ಭೂ ದಾಖಲೆಗಳ ಪುನರ್‌ರಚನೆ, ಪಟ್ಟಾಪತ್ರಗಳ ವಿತರಣೆ, ನಗದುರೂಪದ ಭೂ ಕಂದಾಯ ಮುಂತಾದವ ನಿಯಮಗಳು ತೋದರಮಲ್ಲನ ಭೂ ನೀತಿಯ ಮುಖ್ಯ ಅಂಶಗಳಾಗಿವೆ. ಔರಂಗಜೇಬನು ಭೂ ಸುಧಾರಣಾ ನೀತಿಯನ್ನು ಕ್ರಮಬದ್ಧಗೊಳಿಸಿದ್ದುದಾಗಿ ತಿಳಿದುಬರುತ್ತದೆ.

ಕ್ರಿ.ಶ. ೧೭೫೭ರ ನಂತರದಲ್ಲಿ ಭಾರತವು ಪೂರ್ಣವಾಗಿ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿತು. ಅಂದಿನ ಭಾರತವನ್ನು ಬ್ರಿಟಿಷ್ ವಸಾಹತು ಎಂದು ಗುರುತಿಸಿಕೊಳ್ಳಲಾಯಿತು. ಬ್ರಿಟಿಷರು ಭಾರತವನ್ನು ತಮ್ಮ ವಶಕ್ಕೆ ತೆಗೆದುಕೊಂಡ ಈ ಸಂದರ್ಭದಲ್ಲಿ ಭಾರತದಲ್ಲಿ ಅಂದು ಜಮೀನ್ದಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿಗಳು ಚಾಲ್ತಿಯಲ್ಲಿದ್ದವು. ಜಮೀನ್ದಾರಿ ಪದ್ಧತಿಯಲ್ಲಿ ಭೂ ಮಾಲೀಕರು ಮತ್ತು ಪಾಳೆಯಗಾರರು ತಮ್ಮ ತಮ್ಮ ವ್ಯಾಪ್ತಿಗೆ ಸೇರಿದ ಭೂಮಿಯ ಮೇಲಿನ ಪೂರ್ಣ ಒಡೆತನವನ್ನು ಹೊಂದಿದ್ದರು. ರೈತವಾರಿ ಪದ್ಧತಿಯಲ್ಲಿ ರೈತರಿಗೆ ಭೂ ಒಡೆತನವನ್ನು ಕೊಡಲಾಗುತ್ತಿತ್ತು. ಇವರು ಸರ್ಕಾರಕ್ಕೆ ನೇರವಾಗಿ ಕಂದಾಯವನ್ನು ಕಟ್ಟುತ್ತಿದ್ದರು. ಈ ಪದ್ಧತಿಯು ಮುಂದುವರೆದು ೧೭೭೩ರಲ್ಲಿ ಲಾರ್ಡ್ ವಾರನ್ ಹೇಸ್ಟಿಂಗ್ಸ್‌ನು ರೆಗ್ಯುಲೇಟಿಂಗ್ ಕಾಯ್ದೆ ಮತ್ತು ಭೂ ಕಂದಾಯಸುಧಾರಣಾ ಕಾಯಿದೆಯ ನೀತಿಗಳು ಅಂದಿನ ಭಾರತದ ಸಂದರ್ಭದಲ್ಲಿ ಗಮನಾರ್ಹವಾಗಿದ್ದವು. ಕಂದಾಯದ ಬಗೆಗೆ ಅನುಭವ, ದೂರದೃಷ್ಟಿಯ ಕೊರತೆಗಳಿಂದ ಆತನ ನೀತಿಗಳು ಕೃಷಿಕರಿಗೆ ಮಾರಕವಾಗಿ ಪರಿಣಮಿಸಿದವು. ಬ್ರಿಟಿಷರು ಹಳ್ಳಿಯ ಸಮುದಾಯಗಳಿಂದ ಆರಂಭದಲ್ಲಿ ಅತ್ಯಧಿಕ ಎಂದರೆ ವಾರ್ಷಿಕ, ನಂತರದಲ್ಲಿ ದ್ವೈವಾರ್ಷಿಕ ಹಾಗೂ ತ್ರೈವಾರ್ಷಿಕ ಗೇಣಿ ಸಂಗ್ರಹಿಸುವ ಮೂಲಕ ಭಾರತದಲ್ಲಿ ಕೃಷಿಕ್ಷೇತ್ರವನ್ನು ಹಿಂಡಿ ಹಿಪ್ಪೆ ಮಾಡತೊಡಗಿದರು. ಇದರ ಪರಿಣಾಮವಾಗಿ ಹಳ್ಳಿಗಾಡಿನಲ್ಲಿ ಬರ ಉಂಟಾಯಿತು. ಈ ಸಂದರ್ಭದಲ್ಲಿ ರೈತರ ಜೀವನೋಪಾಯಕ್ಕೂ ಗತಿಯಿಲ್ಲದಂತೆ ದೋಚುವುದನ್ನು ತಡೆಗಟ್ಟಲು ೧೭೯೩ರಲ್ಲಿ 'ಖಾಯಂ ಭೂ ಕಂದಾಯ ಕಾಯಿದೆ'ಯನ್ನು ಜಾರಿಗೆ ತರಲಾಯಿತು. ಆ ಮೂಲಕ ಭಾರತದಲ್ಲಿ ಬ್ರಿಟಿಷರು ತಮ್ಮ ಊಳಿಗಮಾನ್ಯ ಪದ್ಧತಿಯನ್ನು ಹೇರಿದರು. ಈ ಕಾಯ್ದೆ ಜಮೀನ್ದಾರಿ, ಇನಾಂದಾರಿ, ಮಹಲ್ವಾರಿ ಪದ್ಧತಿಯನ್ನು ಜಾರಿಗೊಳಿಸಿತು.[೨೨] ಈ ತೆರನ ಪದ್ಧತಿಗಳು ಆಸ್ತಿಯ ಒಡೆತನ, ಆಸ್ತಿ ಮಾರಾಟದ ಮತ್ತು ಆಸ್ತಿ ಖರೀದಿ ಮಾಡುವ ಹಕ್ಕುಗಳನ್ನು ಮಧ್ಯವರ್ತಿಗಳು ಪಡೆಯಲು ಅನುವು ಮಾಡಿಕೊಟ್ಟವು. ರೈತರು ಕೃಷಿ ಮಾಡಲು ಸುಗಮವಾದ ವಾತಾವರಣವನ್ನು ಕಲ್ಪಿಸಿಕೊಡಲಿಲ್ಲ. ಒಟ್ಟಿನಲ್ಲಿ ಸ್ಥಾನಿಕ ಅರಸರು, ಭೂ ಮಾಲೀಕರು, ಮತ್ತು ಪಾಳೆಯಗಾರರಿಗೆ ಬ್ರಿಟಿಷರ ಕಾನೂನುಗಳು ಅತ್ಯಂತ ಸಹಕಾರಿಯಾಗಿ ಪರಿಣಮಿಸಿದವು. ಅಲ್ಲದೆ ಅರಣ್ಯ ಕಾಯಿದೆಯನ್ನು ತರುವ ಮೂಲಕ ಬ್ರಿಟಿಷರು ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ಗುರಿಮಾಡಿದರು.

ಈವರೆಗೆ ನೋಡಲಾದ ಸಂಗತಿಗಳ ಪರಿಣಾಮವಾಗಿ ಭಾರತದ ರೈತರು ಬ್ರಿಟಿಷರ ನೀತಿಗಳ ವಿರುದ್ಧ ಪ್ರತಿಭಟಿಸತೊಡಗಿದರು. ಕ್ರಿ.ಶ. ೧೮೫೫ರಲ್ಲಿ ಬ್ರಿಟಿಷರ ವಿರುದ್ಧ ನಡೆದ ಸಂತಾಲರ ಚಳವಳಿ, ಗಾಂಧಿ ನೇತೃತ್ವದಲ್ಲಿ ೧೯೨೮ರ ಗುಜಾರಾತ್‌ನ ಬಾರ್ಡೋಲಿ ಸತ್ಯಾಗ್ರಹ ಮತ್ತು ಚಂಪಾರಣ್ಯ ಸತ್ಯಾಗ್ರಹಗಳ ಮೂಲಕ ರೈತರು ಅತ್ಯಧಿಕ ಸಂಖ್ಯೆಯಲ್ಲಿ ಪಾಲ್ಗೊಂಡ ಪರಿಣಾಮದಿಂದ ಬ್ರಿಟಿಷ್ ಆಡಳಿತವು ಸಂದರ್ಭಕ್ಕೆ ಅನುಸಾರವಾಗಿ ನಡೆದುಕೊಳ್ಳತೊಡಗಿತು. ಗೇಣಿಕಾಯ್ದೆಗೆ ಸುಧಾರಣೆ ತರಲು ರಾಯಲ್ ಕಮೀಷನ್ ಮತ್ತು ಫ್ಲೌಟ್ ಕಮೀಷನ್‌ಗಳು ಭೂ ಸುಧಾರಣೆ ಕುರಿತು ವರದಿಯನ್ನು ನೀಡತೊಡಗಿದವು.[೨೩] ಹೀಗೆ ಸ್ವಾತಂತ್ರ್ಯಪೂರ್ವದ ಕಾಲಘಟ್ಟದಲ್ಲಿ ಭೂ ಸುಧಾರಣೆಯನ್ನು

ಕುರಿತ ನೀತಿಗಳು ಬಡವರ, ಕೂಲಿಕಾರ್ಮಿಕರ, ಭೂರಹಿತ ಕೃಷಿಕಾರ್ಮಿಕರ ಪರವಾಗಿ ಇರಲಿಲ್ಲವೆಂಬ ಅಂಶವು ಸ್ಪಷ್ಟವಾಗುತ್ತದೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಭೂ ಸುಧಾರಣೆಯ ಯತ್ನಗಳು ಮತ್ತೊಮ್ಮೆ ಮುನ್ನೆಲೆಗೆ ಬರಲಾರಂಭಿಸಿದವು. ಭೂ ಮಾಲೀಕರ ಶೋಷಣೆ, ಅತಿಯಾದ ಕಂದಾಯ ವಸೂಲಿ ಮುಂತಾದ ಅಂಶಗಳು ಭಾರತದ ಗೇಣಿದಾರರು ಮತ್ತು ಸಣ್ಣ ರೈತರ ಆಕ್ರೋಶಕ್ಕೆ ಕಾರಣವಾಗಿದ್ದವು. ಭಾರತ ಸರ್ಕಾರವು ಈ ನಿಟ್ಟಿನಲ್ಲಿ ಸಣ್ಣರೈತರ, ಬಡ ಕೂಲಿಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವ ಕಡೆ ಗಮನಹರಿಸಿತು. ಅದರ ಪರಿಣಾಮವಾಗಿ ರೂಪಿಸಿದ ಪಂಚವಾರ್ಷಿಕ ಯೋಜನೆಗಳೂ ರೈತರಿಗೆ ನಿಜವಾದ ಅರ್ಥದಲ್ಲಿ ಪರಿಣಾಮಕಾರಿಗಳಾಗಿರಲಿಲ್ಲ. ಇಂತಹ ಕಾರಣಗಳಿಂದ ಭಾರತದಲ್ಲಿ ಕ್ರಿ.ಶ. ೧೯೪೬-೧೯೫೧ರವರೆಗೆ ನಡೆದ ಆಂಧ್ರದ ತೆಲಂಗಾಣ ರೈತ ಹೋರಾಟ, ಮಹಾರಾಷ್ಟ್ರದ ಗಿರಿಜನರು ನಡೆಸಿದ ವಾರಲಿ ಆದಿವಾಸಿಗಳ ಹೋರಾಟ, ಪಂಜಾಬ್‌ನಲ್ಲಿ ಕಂದಾಯದ ವಿರುದ್ಧ ನಡೆದ ಹೋರಾಟ, ಬಿಹಾರದಲ್ಲಿ ಆಹಾರಧಾನ್ಯಗಳ ಬೆಲೆಯೇರಿಕೆಯ ವಿರುದ್ಧದ ಹೋರಾಟಗಳು ಪ್ರಾರಂಭಗೊಂಡು ಚುರುಕಾದವು. ಅಲ್ಲದೆ ಅದೇ ಕಾಲಘಟ್ಟದಲ್ಲಿ ಮಹಾರಾಷ್ಟ್ರದಲ್ಲಿ ಕೃಷಿಕಾರ್ಮಿಕರ ಹೋರಾಟ, ಕೇರಳದಲ್ಲಿ ಭೂ ಸುಧಾರಣೆ ಜಾರಿಗೆ ತರುವಂತೆ ಒತ್ತಾಯಿಸಿದ ಹೋರಾಟಗಳು ಇಲ್ಲಿ ಗಮನಾರ್ಹವಾಗಿವೆ. ಈ ಎಲ್ಲ ಹೋರಾಟಗಳ ಸ್ವರೂಪ ಮತ್ತು ಮೂಲ ಉದ್ದೇಶಗಳನ್ನು ಗ್ರಹಿಸಿದ ಭಾರತ ಸರ್ಕಾರವು ೧೯೪೮ರಲ್ಲಿ ಕಾಂಗ್ರೆಸ್ ಸಮ್ಮೇಳನದಲ್ಲಿ ಕೆಲವು ಮುಖ್ಯ ತೀರ್ಮಾನಗಳನ್ನು ತೆಗೆದುಕೊಂಡಿತು. ಆ ತೀರ್ಮಾನಗಳಲ್ಲಿ ಮಧ್ಯಸ್ಥಗಾರರನ್ನು ತೊಡೆದು ಹಾಕುವುದು, ಉಳುವವರಿಗೆ ಭೂಮಿಯ ಒಡೆತನ ದಕ್ಕಬೇಕು ಎನ್ನುವುದು, ಸಣ್ಣ ಹಿಡುವಳಿದಾರರಿಗೆ ಕೃಷಿ ಸಹಕಾರಿ ಸಂಘಗಳನ್ನು ರಚಿಸಲು ಪ್ರೋತ್ಸಾಹಿಸುವುದು, ಹಳ್ಳಿಗಳ ಭೂಮಿಯನ್ನು ಸಾಮೂಹಿಕ ಒಡೆತನವನ್ನು ಹೊಂದುವುದು, ಸಾಮೂಹಿಕ ಸಾಗುವಳಿ ಮಾಡುವುದು ಈ ಅಂಶಗಳು ಮುಖ್ಯವಾಗಿದ್ದವು.

ಕರ್ನಾಟಕ ಮತ್ತು ಭೂ ಸುಧಾರಣೆ ಚಳವಳಿಗಳು

ಪ್ರಸ್ತುತ ಅಧ್ಯಾಯದಲ್ಲಿ ಭಾರತದ ಭೂ ಸುಧಾರಣೆಯನ್ನು ಕುರಿತ ಅಂಶಗಳನ್ನು, ಭೂ ಸುಧಾರಣೆಯ ಕ್ರಮಗಳು ಕರ್ನಾಟಕದ ಸಮಾಜವಾದಿ ಚಿಂತಕರ ಮೇಲೆ ಮತ್ತು ಕರ್ನಾಟಕದ ರೈತರು, ಸಣ್ಣ ಹಿಡುವಳಿದಾರರು, ಗೇಣಿದಾರರ ಮೇಲೆ ಬೀರಿದ ಪರಿಣಾಮಗಳನ್ನು ಕುರಿತು ಈ ಮುಂದಿನಂತೆ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಶಾತವಾಹನರು, ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಚಿತ್ರದುರ್ಗ, ಕೆಳದಿ, ಮೈಸೂರು ಮುಂತಾದ ಸಂಸ್ಥಾನಿಕರು ಆಳ್ವಿಕೆ ನಡೆಸಿದ್ದಾರೆ. ಭೂ ಸುಧಾರಣೆಯನ್ನು ಕುರಿತ ಈ ಎಲ್ಲ ಅರಸರ, ಸಂಸ್ಥಾನಿಕರ, ಪಾಳೆಯಗಾರರು ತಮ್ಮದೇ ಆದ ನಿಲುವನ್ನು ಹೊಂದಿದ್ದರು. ಈ ಎಲ್ಲ ಅರಸರಲ್ಲಿ ವಿಜಯನಗರದ ಅರಸರು ತಮ್ಮ ಕಂದಾಯ ಮತ್ತು ಭೂ ಸುಧಾರಣಾ ನೀತಿಗಳಿಂದ ನಮ್ಮ ಗಮನವನ್ನು ಸೆಳೆಯುತ್ತಾರೆ. ವಿಜಯನಗರದ

ಅರಸರು ತಮ್ಮ ಅಧೀನದಲ್ಲಿದ್ದ ಪಾಳೆಯಗಾರರಿಗೆ ಕಂದಾಯ ಮತ್ತು ರೈತರ ಮೇಲೆ ನಿಗಾ ವಹಿಸುವ ಜವಾಬ್ದಾರಿಯನ್ನು ವಹಿಸಿದ್ದರು. ರೈತರು ನೇರವಾಗಿ ರಾಜ್ಯದ ಬೊಕ್ಕಸಕ್ಕೆ ತೆರಿಗೆಯನ್ನು ಕಟ್ಟುವ ಪದ್ಧತಿಯಿತ್ತು. ಖುಷ್ಕಿ, ತರಿ, ಬಾಗಾಯ್ತು ಭೂಮಿಗಳೆಂದು ಮೂರು ವಿಧವಾಗಿ ವಿಂಗಡಿಸಿಕೊಳ್ಳಲಾಗಿತ್ತು. ಸುವರ್ಣಗಳು ಮತ್ತು ಧವಸಧಾನ್ಯಗಳ ಮೂಲಕ ಭೂ ಕಂದಾಯವನ್ನು ಸಲ್ಲಿಸಬೇಕಾಗಿತ್ತು. ವಿಜಯನಗರದ ಅರಸರ ಕಾಲದ ಕಂದಾಯ ಪದ್ಧತಿಯನ್ನು ಕುರಿತು ಡಾ. ಮಲ್ಲಿಕಾರ್ಜುನ ಕೂಡ್ಲಿಗೆರೆ ಅವರು ಹೀಗೆ ವಿವರಿಸಿದ್ದಾರೆ. "ಭೂ ಕಂದಾಯ ಸಂಗ್ರಹಿಸುವಲ್ಲಿ ರೈತರಿಂದ ನೇರ ಪಾವತಿ, ಮಧ್ಯವರ್ತಿಗಳಿಂದ ಪೌತಿ, ಇಡೀ ಹಳ್ಳಿಯಿಂದ ಪಾವತಿ ಎಂಬ ಮೂರು ವಿಧಾನಗಳ ಮೂಲಕ ಸಂಗ್ರಹಿಸಲಾಗುತ್ತಿತ್ತು. ಇಲ್ಲಿನ ರಾಜರು ಆಡಳಿತದ ಅನುಕೂಲಕ್ಕಾಗಿ ರಾಜ್ಯದ ಸರಹದ್ದು ಗುರುತಿಸುವ ಸಲುವಾಗಿ ರಾಯರೇಖೆಯನ್ನು ಮಾಡಿಕೊಂಡಿದ್ದರು. ಬ್ರಿಟಿಷರ ಕಂದಾಯ ನೀತಿಗಳು ಜಾರಿಯಾಗುವ ಮುನ್ನ ಈ ನೀತಿಯೇ ಜಾರಿಯಲ್ಲಿತ್ತು. ರಾಜರಿಗೆ ಗೌರವಾರ್ಥವಾಗಿ ನೀಡಿದ ಭೂಮಿಯನ್ನು ಮಾನ್ಯ ಎಂದು ಕರೆಯಲಾಗುತ್ತಿತ್ತು. ಇವರಿಗೆ ಸುಲಭ ತೆರಿಗೆ ಪಾವತಿ ಮಾಡುವ ಒಂದು ವಿಧಾನವಾಗಿತ್ತು. ಇದೊಂದು ರೀತಿಯಲ್ಲಿ ರೈತವಾರಿ ಪದ್ಧತಿಯನ್ನು ಹೋಲುವಂತಿದೆ."[೨೪]

ವಿಜಯನಗರದ ನಂತರ ಕ್ರಿ.ಶ. ೧೫ ರಿಂದ ೧೭ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ ಕೆಳದಿಯ ಅರಸರು ಕರ್ನಾಟಕದ ಇತಿಹಾಸದಲ್ಲಿ ತಮ್ಮ ಕಂದಾಯ ನೀತಿಗೆ ಹೆಸರುವಾಸಿಯಾಗಿದ್ದಾರೆ. ಅವರ ಕಂದಾಯ ವ್ಯವಸ್ಥೆಯನ್ನು 'ಶಿವಪ್ಪನಾಯಕನ ಶಿಸ್ತು' ಎಂದೇ ಕರೆಯಲಾಗುತ್ತಿದೆ. ಅವರ ಈ ಹೊಸ ಕಂದಾಯ ಪದ್ಧತಿಯು ಕರ್ನಾಟಕದಲ್ಲಿ ಮಹತ್ವದ ದಾಖಲೆಯಾಗಿದೆ. ಉತ್ತಮ ಭೂಮಿ, ಮಧ್ಯಮ ಭೂಮಿ, ಕನಿಷ್ಟ ಭೂಮಿ, ಅಧಮ ಭೂಮಿ, ಅಧಮಾಧಮ ಭೂಮಿ ಎಂದು ಶಿವಪ್ಪನಾಯಕ ಭೂಮಿಯನ್ನು ವರ್ಗೀಕರಿಸಿದ. ಮರುಮಾಪನ, ಪಟ್ಟಾಪತ್ರಗಳ ವಿತರಣೆ, ಐದು ವರ್ಷಗಳಲ್ಲಿ, ಹತ್ತು ವರ್ಷಗಳಲ್ಲಿ ಮತ್ತು ಹನ್ನೆರಡು ವರ್ಷಗಳಲ್ಲಿ ಸರಾಸರಿ ಉತ್ಪನ್ನ, ಆ ಉತ್ಪನ್ನಕ್ಕೆ ನಗದು ರೂಪದ ಕಂದಾಯ ನೀಡುವುದು, ಒಂದೇ ದರ ಇವೇ ಮುಂತಾದ ಹಲವಾರು ಕ್ರಮಗಳು ಶಿವಪ್ಪನಾಯಕನ ಶಿಸ್ತಿನ ಕಂದಾಯದ ಅವತರಣಿಕೆಗಳಾಗಿವೆ.

ಕ್ರಿ.ಶ. ೧೯ನೆಯ ಶತಮಾನದಲ್ಲಿ ನಿಜಾಮರ ಆಡಳಿತ ಪದ್ಧತಿಯಲ್ಲಿ ನಿಜಾಮ ನಾಸಿರ್ ಉದ್‌ದೌಲ್‌ನ ಆಡಳಿತ ನೀತಿಗಳು ಮುಂದೆ ಸಾಲಾರ್‌ಜಂಗನ ಸುಧಾರಣೆಗಳೆಂದು ಹೆಸರು ಪಡೆದವು. ಸಾಲಾರ್ ಜಂಗನು ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಿ, ರೈತರನ್ನು ಗುತ್ತಿಗೆದಾರರು ಮತ್ತು ಜಮೀನುದಾರರ ಹಿಡಿತದಿಂದ ಮುಕ್ತಿಗೊಳಿಸಿದನು. ರೈತರು ಮಧ್ಯವರ್ತಿಗಳ ಕಾಟದಿಂದ ಬಿಡುಗಡೆ ಹೊಂದಿ ತಾವೇ ಸರ್ಕಾರದೊಡನೆ ನೇರ ಸಂಪರ್ಕ ಹೊಂದುವ ವ್ಯವಸ್ಥೆ ಮಾಡಿದನು. ಈತನ ಭೂ ಸುಧಾರಣಾ ವ್ಯವಸ್ಥೆಯಲ್ಲಿ ಕಪ್ಪುಭೂಮಿ, ಕಪ್ಪು ಮತ್ತು ಕೆಂಪುಮಿಶ್ರಿತ ಭೂಮಿ, ಕೆಂಪುಭೂಮಿ, ಚೌಳುಭೂಮಿ, ನೀರಾವರಿ ಭೂಮಿ ಎಂಬ ಭೂಮಿಯ ಮಣ್ಣಿನ ಫಲವತ್ತತೆಗೆ ಸಂಬಂಧಿಸಿದಂತೆ ವಿಭಜಿಸಿ ಕಂದಾಯ ನಿಗದಿಪಡಿಸಲಾಗಿತ್ತು.

ಕರ್ನಾಟಕದ ಪ್ರಸಿದ್ಧ ಮೈಸೂರು ರಾಜರ ಆಳ್ವಿಕೆಯ ಕಾಲದಲ್ಲಿ ಭೂ ಸುಧಾರಣಾ ಚಿಂತನೆಗಳು ನಡೆದವು. ಮೈಸೂರಿನ ಚಿಕ್ಕದೇವರಾಜ ಒಡೆಯರು ಚಿಂತನಶೀಲ ಅರಸರೆಂಬ ಖ್ಯಾತಿಗೆ ಪಾತ್ರರಾಗಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಭೂ ಒಡೆತನದ ಹಕ್ಕನ್ನು ರಾಜ್ಯದ ಸುಪರ್ದಿಗೆ ತೆಗೆದುಕೊಂಡರು. ಇಲ್ಲಿನ ಎಲ್ಲ ಭೂಮಿಯು ರಾಜ್ಯದ ಒಡೆತನಕ್ಕೆ ಸೇರಿದ್ದರಿಂದ ಭೂಮಿ ಉಳುವ ರೈತರೆಲ್ಲರೂ ಗೇಣಿದಾರರೆನಿಸಿಕೊಂಡಿದ್ದರು. ಹೀಗೆ ತಮ್ಮ ಭೂಮಿಯ ಹಕ್ಕನ್ನು ಕಳೆದುಕೊಂಡ ನಂಜನಗೂಡಿನ ಜಂಗಮ ರೈತರು ಚಿಕ್ಕದೇವರಾಜನ ವಿರುದ್ಧ ದಂಗೆ ಎದ್ದರು. ಈತನ ಆಳ್ವಿಕೆ ನಂತರ ಪಾಳೆಗಾರಿಕೆ ಆಡಳಿತ ಮತ್ತೆ ತಲೆ ಎತ್ತಿತು[೨೫] ಎಂಬ ಸಂಗತಿಯನ್ನು ಎಸ್. ಚಂದ್ರಶೇಖರ್ ಅವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

ಟಿಪ್ಪುವಿನ ಕಾಲಘಟ್ಟದಲ್ಲಿಯೂ ಕೂಡ ಅನೇಕ ಭೂ ಸುಧಾರಣಾ ಯೋಜನೆಗಳು ಗಮನ ಸೆಳೆದಿದ್ದವು. ಆತನ ಆಡಳಿತಾವಧಿಯಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಭೂಮಾಲೀಕತ್ವವನ್ನು ನಿರಾಕರಿಸಿದ್ದನು. ಒಬ್ಬ ರೈತನಿಗೆ ಒಂದು ಮೋಜಣಿಗಿಂತ ಹೆಚ್ಚಿನ ಭೂಮಿ ಕೊಡುತ್ತಿರಲಿಲ್ಲ. ರೈತರು ಹಿಂದಿನ ಭೂಕಂದಾಯ ಬಾಕಿಯನ್ನು ಕೊಟ್ಟಮೇಲೆ ಮುಚ್ಚಳಿಕೆ ಬರೆಸಿಕೊಂಡು ಭೂಮಿಯನ್ನು ಕೊಡಲಾಗುತ್ತಿತ್ತು. ಭೂಮಿಯನ್ನು ಹಾಳುಗೆಡವಿದ್ದರೆ ರೈತರು ದಂಡ ತೆರಬೇಕಾಗುತ್ತಿತ್ತು. ಕ್ರಿ.ಶ. ೧೭೯೯ರ ನಂತರ ಬ್ರಿಟಿಷ್ ಅಧಿಕಾರಿಗಳು ಟಿಪ್ಪುವಿನಿಂದ ಮೈಸೂರು ಪ್ರಾಂತ್ಯವನ್ನು ಸಂಪೂರ್ಣ ವಶಪಡಿಸಿಕೊಂಡ ನಂತರ ತಮ್ಮ ಕಂದಾಯ ನೀತಿಯನ್ನು ಅನುಸರಿಸಿದರು. ಕಮಿಷನರ್ ಬೌರಿಂಗನು ೧೮೬೧ರಲ್ಲಿ ಮೈಸೂರು ರಾಜ್ಯದ ಆಡಳಿತವನ್ನು ವಹಿಸಿಕೊಂಡನಂತರ ಆ ಭಾಗದಲ್ಲಿ ಭೂ ಸುಧಾರಣೆ ಸ್ವಲ್ಪ ಆಶಾದಾಯಕವಾಗಿ ಕಂಡುಬರತೊಡಗಿತು. ೧೮೬೪ರಲ್ಲಿ ಇನಾಂತಿ ಆಯೋಗವನ್ನು ರಚಿಸುವುದರ ಮೂಲಕ ಭೂಮಿಯನ್ನು, ಸರ್ವಮಾನ್ಯ ಇನಾಂತಿ, ಅರ್ಧಮಾನ್ಯ ಇನಾಂತಿ, ಜೋಡಿಗ್ರಾಮ ಇನಾಂತಿ, ಜೋಡಿ ಅಗ್ರಹಾರ ಇನಾಂತಿ ಇವೇ ಮುಂತಾದ ೧೩ ರೀತಿಯ ಇನಾಂತಿ ಭೂಮಿಯ ಬಗೆಗಳನ್ನು ವರ್ಗೀಕರಿಸಲಾಗಿತ್ತು.

ಸ್ವತಂತ್ರಪೂರ್ವದ ಕರ್ನಾಟಕದಲ್ಲಿ ನಡೆದ ಭೂ ಸುಧಾರಣಾ ಚಳವಳಿಗಳು

೧. ೧೯೩೦ರಲ್ಲಿ ನಡೆದ ಅಂಕೋಲಾ ರೈತರ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಹುಲ್ಲಬನ್ನಿ ಕರ ನಿರಾಕರಣೆಯ ಹೋರಾಟಗಳು.

೨. ಕಾರವಾರ ಜಿಲ್ಲೆಯ ಅಂಕೋಲಾ, ಸಿರ್ಸಿ ಮತ್ತು ಸಿದ್ಧಾಪುರ ತಾಲ್ಲೂಕುಗಳಲ್ಲಿ ನಡೆದ ರೈತರ ಹೋರಾಟಗಳು.

೩. ೧೯೩೧ರಲ್ಲಿ ಸಿರ್ಸಿ, ಸಿದ್ಧಾಪುರಗಳಲ್ಲಿ ಅಡಿಕೆ ಬೆಳೆ ನಷ್ಟದಿಂದ ರೈತರು ಜಿಲ್ಲಾಧಿಕಾರಿಗೆ ಮನವಿ ನೀಡುವುದರ ಮೂಲಕ ಗಮನ ಸೆಳೆದ ಘಟನೆ.

೪. ೧೯೩೮-೩೯ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮದಲ್ಲಿ ರೈತರು ಚಳವಳಿ ನಡೆಸಿದರು. ಚಳವಳಿಯ ಪರಿಣಾಮವಾಗಿ ಅಧಿಕಾರಿಗಳು ಕೊಲೆಗೀಡಾದರು. ಸರ್ಕಾರವು ರೈತರ ಮೇಲೆ ದಬ್ಬಾಳಿಕೆ ನಡೆಸಿ ಆರು ಮಂದಿ ರೈತರನ್ನು ಗಲ್ಲಿಗೇರಿಸಿತು.

೫. ೧೯೪೨ರಲ್ಲಿ ರೈತ ಮುಖಂಡರು ರೈತ ಸಂಘವನ್ನು ಸ್ಥಾಪಿಸಿದರು. ಜೋಡಿ ಇನಾಂ ಪದ್ಧತಿ ವಿರುದ್ಧ, ಬೆಳೆದ ಕಬ್ಬಿಗೆ ನ್ಯಾಯ ಬೆಲೆಯ ನೀಡುವಂತೆ ಒತ್ತಾಯಿಸಿ ಎಚ್.ಕೆ. ವೀರಣ್ಣಗೌಡರು ಮಂಡ್ಯದಲ್ಲಿ ಹೋರಾಟ ನಡೆಸಿದರು.

ಮೇಲೆ ಸೂಚಿಸಿದ ಘಟನಾವಳಿಗಳನ್ನು ನೋಡಿದಾಗ ಈಸೂರು ಗ್ರಾಮದ ರೈತಚಳವಳಿಯನ್ನು ಹೊರತುಪಡಿಸಿದರೆ ಉಳಿದ ಚಳವಳಿಗಳು ಪ್ರಾಥಮಿಕ ಹಂತದಲ್ಲಿದ್ದವೆಂದು ಹೇಳಬಹುದಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ರೈತಚಳವಳಿಗಳು ತೀವ್ರಸ್ವರೂಪವನ್ನು ಪಡೆದುಕೊಂಡು ಇತಿಹಾಸ ದಾಖಲಿಸಿರುವುದನ್ನು ಕಾಣುತ್ತೇವೆ. ಅವುಗಳ ಸ್ಥೂಲ ನೋಟವನ್ನು ಈ ಮುಂದಿನಂತೆ ನೀಡಲಾಗಿದೆ.

ವಸಾಹತೋತ್ತರ ಕರ್ನಾಟಕದ ಭೂ ಸುಧಾರಣಾ ಚಳವಳಿಗಳು

ಸ್ವಾತಂತ್ರ್ಯ ನಂತರದಲ್ಲಿ ಕರ್ನಾಟಕದ ಸಂದರ್ಭದಲ್ಲಿ ಭೂಮಿಯ ಒಡೆತನ ಮತ್ತು ಆಳ್ವಿಕೆಗಳು ಮೇಲುಜಾತಿಯವರ ಹಿಡಿತದಲ್ಲಿದ್ದವು. ಜಮೀನ್ದಾರರು ಮತ್ತು ಭೂಮಾಲೀಕರು ಭೂ ಒಡೆತನದ ಬಗೆಗೆ ತಮ್ಮ ಬಲವಾದ ಹಿಡಿತವನ್ನು ಸಾಧಿಸಿದ್ದರು. ಆ ಸಂದರ್ಭದಲ್ಲಿ ಭೂಮಿಯ ಅಸಮರ್ಪಕ ಹಂಚಿಕೆಯು ರೈತರಿಗೆ ಅಸಮಧಾನವನ್ನು ತಂದಿತು. ಇವೆಲ್ಲವುಗಳ ಪರಿಣಾಮವಾಗಿ ಕರ್ನಾಟಕದಲ್ಲಿ ರೈತರು ತಮ್ಮ ಅಸಮಧಾನವನ್ನು ಚಳವಳಿಗಳ ರೂಪದಲ್ಲಿ ಮತ್ತು ದಂಗೆಯೇಳುವುದರ ರೂಪದಲ್ಲಿ ಪ್ರಕಟಪಡಿಸತೊಡಗಿದರು. ಪ್ರಸ್ತುತದಲ್ಲಿ ಆ ಚಳವಳಿಗಳ ಮಾದರಿಗಳನ್ನು ಈ ಮುಂದಿನಂತೆ ನೋಡಬಹುದಾಗಿದೆ.

೧. ೧೯೪೮ ರಲ್ಲಿ ಸಿದ್ಧಾಪುರ, ಅಂಕೋಲಾ, ಹೊನ್ನಾವರ, ಭಟ್ಕಳ ಹಾಗೂ ಗೋಕರ್ಣಗಳಲ್ಲಿ ಗೇಣಿ ರೈತರು ಹೋರಾಟವನ್ನು ತೀವ್ರಗೊಳಿಸಿದ್ದರು. ತಮ್ಮ ಹಕ್ಕುಗಳ ಮರುಸ್ಥಾಪನೆಗಾಗಿ ನಡೆದ ಈ ಹೋರಾಟವು ಉಳಿದ ಪ್ರಾಂತ್ಯಗಳಿಗೆ ವಿಸ್ತರಿಸಿತು.

೨. ೧೯೫೦ ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಕರ ದೇಸಾಯಿ, ಗಿರಿಪಿಕಳೆ ಇವರೀರ್ವರ ನಾಯಕತ್ವದಲ್ಲಿ ಗೇಣಿರೈತರ ಸಮಸ್ಯೆಗಳನ್ನು ನಿವಾರಿಸಬೇಕೆಂದು ಒತ್ತಾಯಿಸಿ ಅನ್ಯಾಯದ ವಿರುದ್ಧ ಹೋರಾಟವನ್ನು ರೂಪಿಸಿದುದು ಒಂದು ಪ್ರಮುಖವಾದ ಹಂತವಾಗಿದೆ.

೩. ೧೯೫೦ ರಲ್ಲಿ ಮುಲ್ಕಿಯಲ್ಲಿ ಭೂ ಮಾಲೀಕರು ಮತ್ತು ಬಂಡವಾಳಗಾರರು ಗೇಣಿದಾರರನ್ನು ಭೂಮಿಯಿಂದ ಒಕ್ಕಲೆಬ್ಬಿಸುವ ಕಾರ್ಯವನ್ನು ಕೈಗೊಂಡರು. ತಮ್ಮ ಹಕ್ಕುಗಳಿಗಾಗಿ ಗೇಣಿದಾರರು ಹೋರಾಟ ನಡೆಸಿ ಭೂ ಮಾಲೀಕರ ಮನೆಗಳನ್ನು ಧ್ವಂಸಮಾಡಿ ತಾವು ಸಾಗುವಳಿ ಮಾಡಿದ

ಜಮೀನುಗಳನ್ನು ವಶಪಡಿಸಿಕೊಳ್ಳುತ್ತಿದ್ದರು. ಕಮ್ಯೂನಿಷ್ಟ್ ಸಿದ್ಧಾಂತದ ನೆಲೆಗಳು ಈ ರೈತರಿಗೆ ಸ್ಫೂರ್ತಿಯನ್ನು ನೀಡಿದ್ದವು.

೪. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದಲ್ಲಿ ೧೯೫೦-೫೧ರಲ್ಲಿ ನಡೆದ ರೈತರ ಹೋರಾಟವು ಕರ್ನಾಟಕದಲ್ಲಿ ಒಂದು ಮೈಲುಗಲ್ಲಾಗಿ ಪರಿಣಮಿಸಿದೆ. ತನ್ಮೂಲಕ ರಾಷ್ಟ್ರದ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಪ್ರಸ್ತುತ ಚಳವಳಿ ಅಥವಾ ಹೋರಾಟದ ಮೂಲವು 'ಭೂಮಿಯ ಅಳತೆ'ಗೆ ಸಂಬಂಧಿಸಿದ್ದಾಗಿತ್ತು. ಕಾಗೋಡು ಭೂ ಮಾಲೀಕರ ವಿರುದ್ಧ ನಡೆದ ಈ ಸತ್ಯಾಗ್ರಹದಲ್ಲಿ ಮುಖಂಡತ್ವವನ್ನು ರೈತಮುಖಂಡ ಹೆಚ್. ಗಣಪತಿಯಪ್ಪ ವಹಿಸಿಕೊಂಡಿದ್ದರು.

೫. ೧೯೫೩ರಲ್ಲಿ ಮುಂಬೈ ಪ್ರಾಂತದ ಧಾರವಾಡ ನಗರದ ಶಾಸಕ ನೀಲಗಂಗಯ್ಯ ಪೂಜಾರ ಅವರು ಜಹಗೀರುದಾರರ ಜಮೀನನ್ನು ರೈತರಿಗೆ ಹಂಚಲು ಕಾನೂನು ಸಮರ ಸಾರಿದುದು ಒಂದು ಪ್ರಮುಖ ಘಟನೆಯಾಗಿದೆ. ಈ ಪ್ರಕರಣದಲ್ಲಿ ಜಹಗೀರುದಾರರ ಸುಪರ್ದಿಯಲ್ಲಿದ್ದ ೧೨ ಸಾವಿರ ಎಕರೆ ಭೂ ಪ್ರದೇಶವನ್ನು ಸಾಮಾನ್ಯ ರೈತರಿಗೆ ಹಂಚಲು ತೀರ್ಮಾನಿಸಲಾಯಿತು. ಈ ನಿಟ್ಟಿನಲ್ಲಿ ಇದೊಂದು ಫಲಪ್ರದ ಭೂ ಸುಧಾರಣಾ ಹೋರಾಟವೆಂದು ಗುರುತಿಸಿಕೊಂಡಿದೆ.

೬. ಸಮಾಜವಾದಿ ಸಂಘಟನೆಯು ಕಾಗೋಡು ಸತ್ಯಾಗ್ರಹದ ತರುವಾಯ ಕರ್ನಾಟಕದ ವಿವಿಧ ಭಾಗಗಳಲ್ಲಿ ಭೂ ಹೋರಾಟಗಳನ್ನು ನಡೆಸಲು ಪ್ರಾರಂಭಿಸಿತು. ಇದರ ಪರಿಣಾಮವಾಗಿ ೧೯೬೯ ರಿಂದ ಅರಣ್ಯಪ್ರದೇಶದ ಬಗರ್‌ಹುಕುಂ ಜಮೀನನ್ನು ಭೂಹೀನರಿಗೆ ಹಂಚಲು ಸಮಾಜವಾದಿ ಮುಖಂಡರು ಹೋರಾಟ ನಡೆಸಿದರು. ಅರಣ್ಯ ಇಲಾಖೆಯ ಕಾನೂನಿನ ಒಪ್ಪಿಗೆ ಇರದಿದ್ದರೂ ಅಲ್ಲಿಯ ಮುಖಂಡರು ಶಿಕಾರಿಪುರ, ಸೊರಬ, ಸಾಗರ, ಶಿವಮೊಗ್ಗ ತಾಲ್ಲೂಕುಗಳ ವ್ಯಾಪ್ತಿಯಲ್ಲಿದ್ದ ಬಗರ್‌ಹುಕುಂ ಭೂಮಿಯನ್ನು ಸಾವಿರಾರು ಎಕರೆ ಭೂಮಿಯನ್ನು ಆಕ್ರಮಿಸಿಕೊಂಡು ಭೂಹೀನರಿಗೆ ಹಂಚುವ ವ್ಯವಸ್ಥೆ ಮಾಡಿದರು.

೭. ೧೯೭೩ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ಗ್ರಾಮದ ಬಹುಪಾಲು ಭೂಮಿಯು ಸಂಡೂರು ಅರಸರ ಒಡೆತನದಲ್ಲಿತ್ತು. ಪ್ರಜಾಪ್ರಭುತ್ವ ಸರ್ಕಾರ ಅಸ್ತಿತ್ವದಲ್ಲಿದ್ದುದರಿಂದ ಆ ಭೂಮಿಯನ್ನು ಚಳುವಳಿಯ ಮೂಲಕ ಭೂಹೀನ ಕೃಷಿಕರಿಗೆ ಕೊಡಿಸುವಲ್ಲಿ ಸಮಾಜವಾದಿ ನಾಯಕರು ಯಶಸ್ವಿಯಾದರು.

೮. ದಲಿತಸಂಘರ್ಷ ಸಮಿತಿಯವರು ೧೯೭೯ರಲ್ಲಿ ಚಂದಗೋಡಿನಲ್ಲಿ ನಡೆಸಿದ ಹೋರಾಟವು ಗಮನ ಸೆಳೆಯುತ್ತದೆ. ಈ ಹೋರಾಟದ ಮೂಲಕ ಅರಣ್ಯ ಇಲಾಖೆಗೆ ಸೇರಿದ್ದ ೬೦೦ ಎಕರೆ ಬಗರ್ ಹುಕುಂ ಭೂಮಿಯನ್ನು ಭೂರಹಿತ ದಲಿತರಿಗೆ ಹಂಚಿಸುವ ವ್ಯವಸ್ಥೆ ಮಾಡಲಾಯಿತು.

೯. ೧೯೮೨ರಲ್ಲಿ ಬೆಂಗಳೂರು ಜಿಲ್ಲೆಯ ಹೊಸಕೋಟೆಯ ನಾಯಗನಾಯಕನ ಕೋಟೆಯಲ್ಲಿ ರೈತರು ಮತ್ತು ಕೃಷಿ ಕೂಲಿಕಾರ್ಮಿಕರು ಭೂಮಿಗಾಗಿ ನಡೆಸಿದ ಹೋರಾಟವನ್ನು ಇಲ್ಲಿ ಮರೆಯಲಾಗದು.

೧೦. ಬಳ್ಳಾರಿ ಮತ್ತು ಗಂಗಾವತಿಗಳಲ್ಲಿ ದಲಿತ ಸಂಘರ್ಷ ಸಮಿತಿಯು ಹೋರಾಟ ಮಾಡುವುದರ ಮೂಲಕ ಭೂಹೀನ ರೈತರು ಮತ್ತು ಕೂಲಿಕಾರ್ಮಿಕರಿಗೆ ಭೂಮಿಯನ್ನು ಕೊಡಿಸಿತು.

೧೧. ೧೯೮೦ರಲ್ಲ ನಡೆದ ನರಗುಂದ-ನವಲಗುಂದದ ರೈತ ಹೋರಾಟವು ರಾಷ್ಟ್ರಮಟ್ಟದ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಈ ಹೋರಾಟವು ೧೯೮೦ರಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ಅಸ್ತಿತ್ವಕ್ಕೆ ಬರಲು ಪ್ರೇರಣೆ ನೀಡಿತು.

ಭೂಮಿಯ ಮೇಲಿನ ವ್ಯಾಮೋಹ, ಭೂಮಿಯ ಮೇಲಿನ ಒಡೆತನಗಳು ಮಾನವನಿಗೆ ಅಗತ್ಯವಾದವುಗಳಾಗಿವೆ ನಿಜ. ತಮ್ಮ ಅಗತ್ಯಗಳಿಗಿಂತ ಮಿಗಿಲಾದ ವಿಸ್ತೀರ್ಣದ ಭೂಮಿಯು ಇರಬೇಕೆಂದು ಬಯಸುವುದು ಮಾತ್ರ ದುರಾಸೆಗೆ ಪ್ರತೀಕವಾಗುತ್ತದೆ. ಭಾರತವನ್ನು ಆಳ್ವಿಕೆ ಮಾಡಿದ ರಾಜಪ್ರಭುತ್ವದ ಅರಸರು, ರಾಣಿಯರು, ಸಂಸ್ಥಾನಿಕರು, ಪಾಳೆಯಗಾರರು, ಭೂಮಾಲೀಕರು, ಜಮೀನ್ದಾರರು ಅಂದಿನಿಂದಲೂ ಭೂಮಿಯ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸುತ್ತಲೇ ಬಂದಿದ್ದಾರೆ. ದುಡಿಯುವ ರೈತರಿಗೆ, ಬಡವರಿಗೆ, ಕೂಲಿಕಾರ್ಮಿಕರಿಗೆ, ಕೃಷಿಕಾರ್ಮಿಕರಿಗೆ ಎಂದಿಗೂ ಭೂಮಿಯ ಒಡೆತನವನ್ನು ಕೊಡುವುದಿರಲಿ ಆ ಬಗ್ಗೆ ಯೋಚನೆಯನ್ನೂ ಮಾಡಿಲ್ಲವೆಂಬುದು ವಾಸ್ತವದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಪ್ರಜಾಪ್ರಭುತ್ವದ ಆಳ್ವಿಕೆ ಇರುವ ನಮ್ಮ ಸಂದರ್ಭದಲ್ಲಿ ಅನೇಕ ಮುಖಂಡರು ಬಡ ಕೂಲಿಕಾರ್ಮಿಕರ, ಭೂರಹಿತ ಕೃಷಿಕಾರ್ಮಿಕರ ದುಃಖದುಮ್ಮಾನಗಳನ್ನು ಅರಿತು ಅವರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಮುಂದಾದರು. ವಿಶೇಷವಾಗಿ ಸಮಾಜವಾದಿ ನಾಯಕರು ಈ ತೆರನ ಹೋರಾಟದಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಅಂಥ ನಾಯಕರಲ್ಲಿ ಶಾಂತವೇರಿ ಗೋಪಾಲಗೌಡರು ಶಿವಮೊಗ್ಗ ಜಿಲ್ಲೆಯ ಕಾಗೋಡು, ಸಾಗರ ಮುಂತಾದ ಸುತ್ತಮುತ್ತಲಿನ ಪ್ರದೇಶದ ಭೂ ರಹಿತ ಕೃಷಿಕಾರ್ಮಿಕರಿಗೆ ಭೂಮಿಯನ್ನು ಹಂಚಿಕೆ ಮಾಡಿಸುವಲ್ಲಿ ಸರ್ಕಾರದ ಭಾಗವಾಗಿ ಕೆಲಸ ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅಂದಿನ ಅವರ ಸಮಾಜವಾದಿ ಚಳುವಳಿಯ ಪ್ರಭಾವವು ಕರ್ನಾಟಕದ ಇತರ ಭಾಗಗಳಲ್ಲಿಯೂ ಪ್ರೇರಣೆ ನೀಡಿತು. ಪರಿಣಾಮವಾಗಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಭೂ ರಹಿತ ಕೃಷಿಕಾರ್ಮಿಕರು ಭೂಮಿಯ ಒಡೆಯರಾಗುವ ಸದವಕಾಶ ಲಭ್ಯವಾಯಿತು.

ಭೂ ಸುಧಾರಣಾ ಕಾಯಿದೆ

೧೯೬೧ರಲ್ಲಿ ಮೈಸೂರು ಸರಕಾರವು ಭೂ ಸುಧಾರಣಾ ಸಮಿತಿಯನ್ನು ನೇಮಕ ಮಾಡಿತು. ಇದರ ಅಧ್ಯಕ್ಷರಾಗಿ ಬಿ.ಡಿ. ಜತ್ತಿಯವರು ನೇಮಕಗೊಂಡರು. ಇದರ ಪರಿಣಾಮವಾಗಿ ೧೯೬೧ರಲ್ಲಿ ಭೂಸುಧಾರಣಾ ಮಸೂದೆಯಾಗಿ ಶಾಸನಸಭೆಯಲ್ಲಿ ಅಂಗೀಕಾರಗೊಂಡಿತು. ಮುಂದೆ ಈ ಮಸೂದೆ ೧೯೬೫ರಲ್ಲಿ ಅಧಿಕೃತವಾಗಿ ಜಾರಿಗೆ ಬಂದಿತು. ಪ್ರಸ್ತುತ ಕಾಯಿದೆಯು ಕೃಷಿಕರಲ್ಲದವರು ಅಥವಾ ಕೃಷಿಕಾರ್ಮಿಕರಲ್ಲದವರು ಕೃಷಿಭೂಮಿಯನ್ನು ಹೊಂದುವುದನ್ನು ಪ್ರತಿಬಂಧಿಸಿತು. ಒಂದು ಕುಟುಂಬವು ಹೊಂದಿರಬಹುದಾದ ಗರಿಷ್ಠಭೂಮಿಯ ಮೇಲೆ ೧೯೬೧ರ ಕಾಯಿದೆ ಮಿತಿಯನ್ನು ಹೇರಿತು.

ಹೀಗೆ ಇನ್ನೂ ಮುಂತಾದ ಅಂಶಗಳನ್ನು ಒಳಗೊಂಡ ಈ ಕಾಯಿದೆಯು ಭೂ ಮಾಲೀಕರ ಪರವಾಗಿಯೇ ಇತ್ತೆಂಬ ವಾದಗಳಿವೆ.

೧೯೭೪ರಲ್ಲಿ ಮುಖ್ಯಮಂತ್ರಿ ದೇವರಾಜ ಅರಸು ಅವರು ಭೂ ಸುಧಾರಣಾ ಕಾಯಿದೆಯನ್ನು ಜಾರಿಗೊಳಿಸಿದರು. ಈ ಕಾಯಿದೆಯು ಬಡವರ, ಸಣ್ಣರೈತರ, ಗೇಣಿರೈತರಿಗೆ ವರದಾನವಾಯಿತು. ಈ ಕಾಯಿದೆ ಪ್ರಮುಖ ಅಂಶವನ್ನು ಈ ಮುಂದಿನಂತೆ ಸಂಗ್ರಹಿಸಿ ನೀಡಲಾಗಿದೆ. ಭೂ ಸುಧಾರಣೆಯ ಅಂತಿಮ ಗುರಿ ಉಳುವವರನ್ನೇ ಹೊಲದೊಡೆಯರನ್ನಾಗಿ ಮಾಡುವುದಾಗಿದೆ. ೧೯೭೪ರ ಭೂ ಸುಧಾರಣಾ ಕಾಯಿದೆಯು ಒಳಗೊಂಡಿರುವ ಪ್ರಮುಖಾಂಶಗಳನ್ನು ಎಂ.ಚಂದ್ರಪೂಜಾರಿ ಅವರ 'ಯಾಕೀಗ ಭೂಮಿ ಪ್ರಶ್ನೆ' ಕೃತಿಯಿಂದ ಸಂಗ್ರಹಿಸಿ ಈ ಮುಂದಿನಂತೆ ನೀಡಲಾಗಿದೆ.[೨೬]

೧. ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸುವುದು.

೨. ಕಾನೂನಿಗೆ ವಿರುದ್ಧವಾಗಿ ಭೂ ಮಾಲೀಕರು ಗುತ್ತಿಗೆ ನೀಡಿದರೆ ಅಂಥವರ ಭೂಮಿಯನ್ನು ಸರ್‌ಪ್ಲಸ್ ಭೂಮಿಯೆಂದು ಪರಿಗಣಿಸಿ ಮುಟ್ಟುಗೋಲು ಹಾಕಿಕೊಂಡು ಭೂರಹಿತರಿಗೆ ನೀಡುವುದು.

೩. ಈ ಕಾಯಿದೆಯ ಪ್ರಕಾರ ಗುತ್ತಿಗೆ ನೀಡಿರುವ ಎಲ್ಲ ಭೂಮಿಯು ಸರಕಾರದ ಸ್ವಾಧೀನವಾಗುತ್ತದೆ. ಗೇಣಿದಾರರು ಡಿಕ್ಲರೇಶನ್ ಫಾರ್ಮ್ ತುಂಬಿ ಸರಕಾರದಿಂದ ಭೂಮಿಯನ್ನು ಪಡೆಯಬೇಕು.

೪. ಪ್ರತಿ ತಾಲ್ಲೂಕಿನಲ್ಲಿ ಭೂ ನ್ಯಾಯ ಮಂಡಲಿಯನ್ನು ಸ್ಥಾಪಿಸುವುದು.

೫. ಹಿಡುವಳಿಯ ಗರಿಷ್ಠ ಮಿತಿಯನ್ನು ನಿಗದಿಗೊಳಿಸುವುದು. ಐದು ಜನರಿರುವ ಕುಟುಂಬವೊಂದು ಹತ್ತು ಎಕರೆ ಭೂಮಿಯನ್ನು ಹೊಂದಬಹುದು.

೬. ಭೂಮಿಯು ಗರಿಷ್ಠಮಿತಿಯನ್ನು ನಿರ್ಧರಿಸುವಾಗ ಸರಕಾರಿ ನೀರಾವರಿಯಿಂದ ಕೃಷಿ ಮಾಡುವ ಭೂಮಿ, ಮಳೆನೀರಿನಿಂದ ಕೃಷಿ ಮಾಡುವ ಭೂಮಿ ಮತ್ತು ಒಣಭೂಮಿಗಳನ್ನು ಪರಿಗಣಿಸುವುದು.

೭. ಸರಕಾರ ಸ್ವಾಧೀನ ಪಡಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಹಂಚಲು ಮೀಸಲಾಗಿಟ್ಟ ಭೂಮಿಯ ಶೇಕಡಾ ೫೦ರಷ್ಟನ್ನು ದಲಿತರು, ಬುಡಕಟ್ಟು ಜನರಿಗೆ ಹಂಚಲಾಗುವುದು.

೮. ಶೈಕ್ಷಣಿಕ, ಧಾರ್ಮಿಕ ಮತ್ತು ಚಾರಿಟೆಬಲ್ ಸಂಸ್ಥೆಗಳು ಗರಿಷ್ಠ ೨೦ ಎಕರೆ ಭೂಮಿಯನ್ನು ಹೊಂದಬಹುದು.

ಹೀಗೆ ಇನ್ನೂ ಹಲವಾರು ವಿಷಯಗಳನ್ನೊಳಗೊಂಡ ೧೯೭೪ರ ಭೂ ಸುಧಾರಣಾ ಕಾಯಿದೆಯು ಬಹುತೇಕ ಭೂ ರಹಿತ ಕೃಷಿಕಾರ್ಮಿಕರ ಪರವಾಗಿಯೇ ಇರುವುದನ್ನು ನೋಡಬಹುದಾಗಿದೆ.

ಈವರೆಗಿನ ಭೂ ಸುಧಾರಣಾ ಚಳವಳಿಯ ಚಿಂತನೆ ಮತ್ತು ಚಳವಳಿಗಳ ಸ್ವರೂಪವನ್ನು ಗಮನಿಸಿದಾಗ, ಕರ್ನಾಟಕದ ಬಡ ಮತ್ತು ಭೂ ರಹಿತ ಕೃಷಿಕಾರ್ಮಿಕರಿಗೆ ಒಂದು ವರದಾನ ದೊರಕಿದೆ ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ. ಹಿಂದಿನ ಮೈಸೂರು ಸರ್ಕಾರದ ಮತ್ತು

ನಮ್ಮ ಕರ್ನಾಟಕ ಸರ್ಕಾರದ ಆಡಳಿದ ಸಂದರ್ಭದಲ್ಲಿ ಕಠಿಣವಾದ ಭೂ ಸುಧಾರಣಾ ಕಾನೂನುಗಳು ಜಾರಿಗೊಂಡರೂ ಕೆಲವು ಭೂ ಹಿಡುವಳಿದಾರರು ತಮ್ಮ ವಾಮಮಾರ್ಗಗಳಿಂದ ತಮ್ಮ ಭೂಮಿಯನ್ನು ರೈತರ ಹೆಸರಿಗೆ ಬಂದಂತೆ ತೋರಿಸಿ ವಾಸ್ತವದಲ್ಲಿ ತಾವೇ ಆ ಭೂಮಿಯ ಮಾಲೀಕರಾಗಿರುವ ಎಷ್ಟೋ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಆದರೂ ಕೂಡ ಭೂ ಸುಧಾರಣಾ ಕಾಯಿದೆಯು ಉಳುವವರಿಗೆ ಭೂಮಿಯನ್ನು ನೀಡುವುದರ ಮೂಲಕ ಬಡವರಿಗೆ ಜೀವನಾಧಾರವನ್ನ ಕಲ್ಪಿಸಿರುವುದು ವಾಸ್ತವದ ಸಂಗತಿಯಾಗಿದೆ.

೪.೩. ಸಿದ್ಧಾಂತ ಕೇಂದ್ರಿತ ಚಳವಳಿಯ ಆಯಾಮಗಳು

ಯಾವುದೇ ಒಂದು ಚಳವಳಿ, ಪ್ರತಿಭಟನೆಗಳು ಹಠಾತ್ತನೆ ರೂಪುಗೊಂಡವುಗಳಾಗಿರುವುದಿಲ್ಲ. ಅವು ಕಾರ್ಯರೂಪಕ್ಕೆ ಬರುವ ಮೊದಲೆ ಆ ನೇತಾರರ ಮನಸ್ಸಿನಲ್ಲಿ ಒಂದು ನೀಲನಕ್ಷೆಯನ್ನು ಹೊಂದಿದವುಗಳಾಗಿರುತ್ತವೆ. ಅದರಂತೆ ಚಳವಳಿ ಮತ್ತು ಪ್ರತಿಭಟನೆ –ಇವುಗಳ ಮೂಲಗರ್ಭದಲ್ಲಿ ತಾತ್ವಿಕ ನೆಲೆಗಟ್ಟು, ಬದಲಾವಣೆಯ ಬಯಕೆಗಳು, ಹೊಸ ಆಲೋಚನೆಗಳು ಬೀಜದ (ಭ್ರೂಣ) ಸ್ವರೂಪದಲ್ಲಿ ಅಡಗಿಕೊಂಡಿರುತ್ತವೆ. ಬರಿಯ ಬೀಜವು ಮೊಳಕೆಯೊಡೆದು ಹೆಮ್ಮರವಾಗಲಾರದು. ಅದಕ್ಕೆ ಆಧಾರವಾಗಿ ಈ ಭೂಮಿಯ ಮಣ್ಣು, ನೀರು, ಗಾಳಿ ಇವುಗಳ ಅವಶ್ಯಕತೆಯಿರುತ್ತದೆ. ಅಗಾಧ ಶಕ್ತಿಯುಳ್ಳ ಬೀಜವೊಂದಕ್ಕೆ ಭೂಮಿ, ನೀರು, ಗಾಳಿ ಇವುಗಳ ಸಂಪರ್ಕ ಸಿಕ್ಕನಂತರ ಅದು ಇನ್ನಿಲ್ಲದಂತೆ ಮುಷ್ಟಿಗೊಂಡು ಬೆಳೆಯುತ್ತದೆ. ಚಳವಳಿಗಳು ಕೂಡಾ ಒಂದು ರೀತಿಯ ಬೀಜಗಳಿದ್ದಂತೆ. ಇವುಗಳಿಗೆ ನೊಂದವರ, ಶೋಷಿತರ ಬಲ, ಶಕ್ತಿ, ಒಗ್ಗಟ್ಟುಗಳು ದೊರೆತರೆ ಕ್ರಾಂತಿಕಾರಕ ಸ್ಫೋಟಕಗಳಾಗಿ ನಿಲ್ಲುತ್ತವೆ. ಈ ನಿಟ್ಟಿನಲ್ಲಿ ಸಮಾಜವಾದಿ ಚಳವಳಿಯು ರೈತರ, ಶೋಷಿತರ, ಭೂ ರಹಿತ ಕೃಷಿಕಾರ್ಮಿಕರ, ದೀನದಲಿತರ ಬೆನ್ನಿಗೆ ನಿಂತುಕೊಂಡಿತು. ಹೋರಾಟಗಾರರಿಗೆ ಅಕ್ಷರ ವಿದ್ಯೆಯ ಕೊರತೆಯಿರಬಹುದು, ಆದರೆ ಅವರ ನೇತಾರನು ಅಕ್ಷರ ವಿದ್ಯೆಯ ಸರದಾರನೇ ಆಗಿರುತ್ತಾನೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಶಾಂತವೇರಿ ಗೋಪಾಲಗೌಡರು ರೈತರ ಪರವಾಗಿ ನಡೆಸಿದ ಚಳವಳಿಯ ಹಿಂದೆ ಸಮಾಜವಾದಿ ಸಿದ್ಧಾಂತದ ನೆಲೆಗಟ್ಟಿನ ಹಿನ್ನೆಲೆಯನ್ನು ಈ ಅಧ್ಯಾಯದಲ್ಲಿ ಗ್ರಹಿಸಲು ಯತ್ನಿಸಲಾಗಿದೆ.

ಸಮಾಜವಾದಿ ಚಳವಳಿಯು ಕೇವಲ ಒಂದು ವಿಷಯವನ್ನು ಆಧಾರವನ್ನಾಗಿಟ್ಟುಕೊಂಡು ಜನ್ಮತಾಳಿರುವಂಥದ್ದಲ್ಲ. ಸಮಾಜವಾದಿ ಚಳವಳಿಗೆ ಅನೇಕ ಆಯಾಮಗಳಿವೆ. ಭೂ ಹೋರಾಟ ಚಳವಳಿ ಎಂದರೆ ಸಾಮಾನ್ಯವಾಗಿ ಆ ಚಳುವಳಿಗೆ ಭೂಮಿಯನ್ನು ಕುರಿತು ಹೋರಾಟ ಮಾಡುವುದು ಮುಖ್ಯ ಗುರಿಯಾಗಿರುತ್ತದೆ. ಈ ಹಿಂದೆ ನಡೆದ ಹೋಂ ರೂಲ್ ಚಳವಳಿ, ಭಾರತ ಸ್ವಾತಂತ್ರ್ಯ ಸಂಗ್ರಾಮದ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ ಮುಂತಾದವುಗಳು ರಾಜಕೀಯ ಸ್ವಾತಂತ್ರ್ಯದ ಮೂಲೋದ್ದೇಶವನ್ನು ಹೊಂದಿದವುಗಳಾಗಿದ್ದವು. ಅದರಂತೆ ಆರ್ಥಿಕತೆಗೆ, ಸಾಮಾಜಿಕತೆಗೆ ಸಂಬಂಧಿಸಿದ ಚಳುವಳಿಗಳು ಬಹುಶಃ ಆರ್ಥಿಕ ವ್ಯವಸ್ಥೆಗೆ ಮತ್ತು ಸಮಾಜದ ಆಗುಹೋಗುಗಳಿಗೆ ಮಾತ್ರ

ಸೀಮಿತವಾಗಿರುವುದನ್ನು ಕಾಣುತ್ತೇವೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ನಡೆದ ವಚನ ಚಳವಳಿಯು ಸಾಹಿತ್ಯಕ್ಕೆ ಮೀಸಲಾದದ್ದಾಗಿದೆ. ಅದೇ ಸಂದರ್ಭದಲ್ಲಿ ಬಿಜ್ಜಳನ ವಿರುದ್ಧ ಬಸವಣ್ಣನವರು ನಡೆಸಿದ ಚಳವಳಿಗಳು ಧಾರ್ಮಿಕತೆಗೆ, ಆರ್ಥಿಕತೆಗೆ ಸಂಬಂಧಿಸಿದವುಗಳಾಗಿವೆ. ಈ ಮಾತುಗಳ ಒಟ್ಟು ಅರ್ಥ, ಚಳವಳಿಗಳು ಒಂದು ನಿರ್ದಿಷ್ಟ ವಿಷಯಕ್ಕೆ, ನಿರ್ದಿಷ್ಟ ಗುರಿಸಾಧನೆಯ ಮೂಲೋದ್ದೇಶಗಳನ್ನು ತಮ್ಮೊಡಲೊಳಗೆ ಹುದುಗಿಸಿಕೊಂಡಿರುತ್ತವೆ. ಪ್ರಸ್ತುತ ನನ್ನ ಅಧ್ಯಯನದಲ್ಲಿ ಸಮಾಜವಾದಿ ಚಳುವಳಿಯು ಈವರೆಗೆ ತಿಳಿಸಲಾದ ಚಳವಳಿಗಿಂತ ಭಿನ್ನವಾಗಿರುವುದನ್ನು ಕಾಣಲಾಗಿದೆ. ಸಮಾಜವಾದಿ ಚಳವಳಿಯಲ್ಲಿ ರಾಜಕೀಯ ವಿಷಯಗಳಿವೆ, ಸಾಮಾಜಿಕ ವಿಷಯಗಳಿವೆ, ಆರ್ಥಿಕ ವಿಷಯಗಳಿವೆ. ಹೀಗೆ ಸಮಾಜವಾದಿ ಚಳವಳಿಯು ಏಕಕಾಲಕ್ಕೆ ತನ್ನ ತತ್ವ, ಸಿದ್ಧಾಂತದಲ್ಲಿ ಹಲವಾರು ವಿಷಯ–ವಸ್ತುಗಳನ್ನು ತನ್ನೊಳಗೆ ಇರಿಸಿಕೊಂಡಿರುವುದರಿಂದ ಅಧ್ಯಯನ ಯೋಗ್ಯವಾಗಿದೆ. ಪ್ರಸ್ತುತ ಸಮಾಜವಾದಿ ಚಳವಳಿಯ ತಾತ್ವಿಕ ನೆಲೆಗಟ್ಟು, ಧ್ಯೇಯೋದ್ದೇಶಗಳನ್ನು ಈ ಮುಂದಿನಂತೆ ಚರ್ಚಿಸಿಕೊಳ್ಳಲಾಗಿದೆ.

'ಸಮಾಜವಾದವು ಪ್ರಜಾಸತ್ತಾತ್ಮಕ ಅಧಿಕಾರ ಪ್ರಕ್ರಿಯೆಯ ಮೂಲಕ ಸಂಪತ್ತಿನ ಸಮರ್ಪಕ ಉತ್ಪಾದನೆ ಹಾಗೂ ಸಮರ್ಪಕ ವಿತರಣೆಯ ಧೋರಣೆಯೆಂದು ಪರಿಗಣಿಸಲಾಗುತ್ತದೆ' ಎಂದು ಬ್ರಿಟಾನಿಕಾ ಶಬ್ದಕೋಶದಲ್ಲಿ ಉಲ್ಲೇಖಗೊಂಡಿದೆ. ರಾಜಕಾರಣ ಶಬ್ದಕೋಶದಲ್ಲಿ 'ಸಮಾಜವಾದವು ರಾಜಕೀಯ ಹಾಗೂ ಆರ್ಥಿಕ ಸಿದ್ಧಾಂತವಾಗಿರುತ್ತದೆ. ಉತ್ಪಾದನೆ, ವಿತರಣೆ ಹಾಗೂ ವಿನಿಮಯ ಘಟಕಗಳನ್ನ ಸಂಪೂರ್ಣವಾಗಿ ಜನರೇ ನಿರ್ವಹಿಸಬೇಕು'[೨೭] ಎಂಬ ವ್ಯಾಖ್ಯಾನವನ್ನು ನೀಡಲಾಗಿದೆ.

ಪ್ಲೇಟೋನ 'ರಿಪಬ್ಲಿಕ್' ಎಂಬ ಕೃತಿಯಲ್ಲಿ ಸಮಾಜವಾದ ಎಂಬ ಪದದ ಉಲ್ಲೇಖ ದೊರೆಯುತ್ತದೆ. ಯುರೋಪಿನ ಮಧ್ಯಯುಗೀನ ಇತಿಹಾಸದ ಸಂದರ್ಭದಲ್ಲಿ ಸಮಾಜವಾದಿ ಚಳವಳಿಯು ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ ಎಂದು ಹೇಳಬಹುದಾಗಿದೆ. ಸಮಾಜವಾದಿ ಸಿದ್ಧಾಂತವು ಸುಲಭವಾದ ವ್ಯಾಖ್ಯಾನಕ್ಕೆ ಒಳಗಾಗುವಂತಹದ್ದಲ್ಲ. ಏಕೆಂದರೆ ಇದರಲ್ಲಿರುವ ವಿಷಯಗಳು ಸಂಕೀರ್ಣವಾಗಿವೆ. ವಾಸ್ತವವಾಗಿ ವಿದ್ವಾಂಸರಲ್ಲಿಯೇ ಸಮಾಜವಾದದ ಬಗೆಗಿನ ವ್ಯಾಖ್ಯಾನಗಳು ಭಿನ್ನಾಭಿಪ್ರಾಯಗಳಿಂದ ಕೂಡಿವೆ. ಈ ಸಿದ್ಧಾಂತದ ವ್ಯಾಖ್ಯೆ ಕ್ಲಿಷ್ಟಕರವಾಗಿರುವುದಕ್ಕೆ ಸಿ.ಇ.ಎಂ. ಜೋಡ್ ಅವರು ಮೂರು ಕಾರಣಗಳನ್ನು ನೀಡಿದ್ದಾರೆ.

೧. ತಾತ್ವಿಕ ಸಿದ್ಧಾಂತ ಹಾಗೂ ರಾಜಕೀಯ ಹೋರಾಟ

೨. ಪ್ರಸ್ತುತ ಸಿದ್ಧಾಂತದಲ್ಲಿ ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಗಳೆಂಬ ಎರಡು ಆಯಾಮಗಳು ಕಂಡುಬರುತ್ತವೆ.

೩. ಸಮಾಜವಾದಿಗಳು ವಿಭಿನ್ನ ಪ್ರಕಾರಗಳಲ್ಲಿ ಕಂಡುಬರುತ್ತಿರುವುದು.

ಸಿ.ಇ.ಎಂ. ಜೋಡ್ ಅವರು ನೀಡಿರುವ ಮೂರು ಕಾರಣಗಳನ್ನು ಆರ್.ಆರ್. ಕುಲಕರ್ಣಿಯವರು ತಮ್ಮ ಲೇಖನವೊಂದರಲ್ಲಿ ಪ್ರಕಟಪಡಿಸಿದ್ದಾರೆ.[೨೮]

ಸಮಾಜವಾದ ಸಿದ್ಧಾಂತವೆಂಬ ಕಟ್ಟಡವನ್ನು ಅವಲೋಕಿಸಿದಾಗ ಅದರಲ್ಲಿ ಸಮಾನತೆ, ನೈಜವಾದ ಪ್ರಭಾಪ್ರಭುತ್ವ, ಮಾನವತೆಯ ಕಾಳಜಿ, ನ್ಯಾಯ, ಪರೋಪಕಾರ, ಸಹನಶೀಲತೆ, ವ್ಯಕ್ತಿಸ್ವಾತಂತ್ರ್ಯ ಉನ್ನತ ಮೌಲ್ಯಗಳು, ಶಾಂತಿ, ಸಹಬಾಳ್ವೆ ಇವು ಸಮಾಜವಾದಿ ತತ್ವದ ಮೂಲಭೂತ ಅಡಿಗಲ್ಲುಗಳಾಗಿರುವುದು ಕಂಡುಬರುತ್ತದೆ. ಸಮಾಜವಾದದಲ್ಲಿ ದಬ್ಬಾಳಿಕೆ, ಶೋಷಣೆ, ಅಸಮಾನತೆಗಳಿಗೆ ಜಾಗವಿರುವುದಿಲ್ಲ. ನೀತಿಮತ್ತೆಯ ಆಧಾರದ ಮೇಲೆ ಶಾಂತಿ ಮತ್ತು ಸುವ್ಯವಸ್ಥೆಗಳು ಇಲ್ಲಿ ಸ್ಥಾಪಿತಗೊಂಡಿರುತ್ತವೆ. ಸಮಾನತೆ, ಸಮಾಜದ ಸಂಪತ್ತಿನ ಸಮಾನ ವಿತರಣೆ, ಅಸಮಾನತೆಯ ನಿರ್ಮೂಲನೆ, ಹಿಂಸೆ, ವಿನಾಶ ಈ ಮೊದಲಾದ ಅಂಶಗಳಿಗೂ ಸಮಾಜವಾದದಲ್ಲಿ ಅವಕಾಶ ಇರುವುದಿಲ್ಲ. ಈ ಸಿದ್ಧಾಂತದ ಪ್ರತಿಪಾದಕರು ಬಂಡವಾಳಶಾಹಿಯ ವಿರೋಧಿಯಾಗಿರಬೇಕಾದುದು ಅಗತ್ಯವಾದುದಾಗಿದೆ. ಒಂದು ಆಯಾಮದಿಂದ ನೋಡಿದರೆ ಸಮಾಜವಾದಿ ಚಳವಳಿಯು ಈ ಕೆಳಗಿನ ಸೈದ್ಧಾಂತಿಕ ಆಯಾಮಗಳಿಂದ ಕೂಡಿರುವುದನ್ನು ಗಮನಿಸಬಹುದಾಗಿದೆ.

೧. ಸಮಾಜವಾದವು ಒಂದು ಆಂದೋಲನದಂತೆ ಕಂಡುಬರುತ್ತದೆ.

೨. ಒಂದು ಆರ್ಥಿಕ ಶಿಸ್ತಿನ ವ್ಯವಸ್ಥೆಯಾಗಿದೆ.

೩. ತತ್ವಜ್ಞಾನದ ಭೂಮಿಕೆಯನ್ನು ಹೊಂದಿದೆ.

೪. ಬಂಡವಾಳಶಾಹಿ, ಅಧಿಕಾರಶಾಹಿಯ ಶತ್ರುವಾಗಿದೆ.

೫. ಆರ್ಥಿಕ ಸಮಾನತೆಯನ್ನು ಪ್ರತಿಪಾದಿಸುತ್ತದೆ.

೬. ಸಾಮಾಜಿಕ ನಿಯಂತ್ರಣವನ್ನು ಹೊಂದಬಯಸುತ್ತದೆ.

೭. ಉತ್ಪಾದನೆಯ ಅಂಗಗಳು ವ್ಯಕ್ತಿಯ ನಿಯಂತ್ರಣದಲ್ಲಿರದೆ ರಾಷ್ಟ್ರದ ನಿಯಂತ್ರಣದಲ್ಲಿರುತ್ತವೆ.

೮. ಸಾಮಾಜಿಕ ಸೇವೆಯೇ ಇಲ್ಲಿ ಪ್ರಮುಖವಾಗಿರುತ್ತದೆ.

೯. ವ್ಯಕ್ತಿಗತವಾದ ಲಾಭಕ್ಕೆ ಇಲ್ಲಿ ಅವಕಾಶವಿರುವುದಿಲ್ಲ.

೧೦. ಬಹಿರಂಗ ಸ್ಪರ್ಧೆ ಇರುತ್ತದೆ.

೧೧. ಪೈಪೋಟಿಗೆ ಬದಲು ಸಹಕಾರವು ಎಲ್ಲ ಅಂಶಗಳಲ್ಲಿಯೂ ಪ್ರಮುಖವಾದುದಾಗಿರುತ್ತದೆ.

೧೨. ಮಿತಿಮೀರಿದ ಖಾಸಗಿ ಆಸ್ತಿಯನ್ನು ಹೊಂದುವುದನ್ನು ವಿರೋಧಿಸುತ್ತದೆ.

೧೩. ಖಾಸಗಿ ಹೂಡಿಕೆಯನ್ನು ವಿರೋಧಿಸುತ್ತದೆ.

೧೪. ಸಮಾನತ್ವ ತತ್ವವೇ ಇಲ್ಲಿ ಪ್ರಧಾನವಾದ ಅಂಶವಾಗಿರುತ್ತದೆ.

೧೫. ಸಮಾಜ ವಿರೋಧಿ ಕೃತ್ಯಗಳಿಗೆ ಇಲ್ಲಿ ಅವಕಾಶವಿರುವುದಿಲ್ಲ.

೧೬. ವರ್ಗ ತಾರತಮ್ಯಗಳನ್ನು ವಿರೋಧಿಸುತ್ತದೆ.

೧೭. ಜಾತಿ ಮತ್ತು ವರ್ಣತಾರತಮ್ಯಗಳನ್ನು ವಿರೋಧಿಸುತ್ತದೆ.

೧೮. ಭಾಷಾ ತಾರತಮ್ಯಗಳನ್ನು ವಿರೋಧಿಸುತ್ತದೆ.

ವಸಾಹತೋತ್ತರ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ನಡೆದ ವಿವಿಧ ರೀತಿಯ ಚಳವಳಿಗಳು ನಡೆದಿವೆ. ಭೂ ರಹಿತ ಕೃಷಿಕಾರ್ಮಿಕರು, ಶೋಷಿತರು, ದುರ್ಬಲರು, ಜಾತಿತಾರತಮ್ಯದಿಂದ ನೊಂದವರು, ಭಾಷಿಕವಾಗಿ ಶೋಷಿತರಾದವರು, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಶೋಷಿತರಾದವರಿಗೆ ಚಳವಳಿಗಳು ನ್ಯಾಯ ಒದಗಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿವೆ. ಈಗಾಗಲೇ ನೋಡಿದಂತೆ ಚಳವಳಿಗಳು ತನ್ನದೇ ಆದ ಸಿದ್ಧಾಂತದ ನೆಲೆಗಟ್ಟುಗಳನ್ನು ಹೊಂದಿರುತ್ತವೆ. ಪ್ರಸ್ತುತ ಅಧ್ಯಯನದ ಹಿನ್ನೆಲೆಯಲ್ಲಿ ಗೋಪಾಲಗೌಡರು ಕರ್ನಾಟಕದಲ್ಲಿ ನಡೆಸಿದ ಚಳವಳಿಗಳಲ್ಲಿ ಸಮಾಜವಾದದ ಚಳವಳಿಯು ಈ ಮೇಲೆ ವಿವರಿಸಿದ ಸೈದ್ಧಾಂತಿಕ ಅಡಿಪಾಯಗಳನ್ನು ಹೊಂದಿರುವುದಾಗಿದೆ. ಶಾಂತವೇರಿ ಗೋಪಾಲಗೌಡರ ಜನಪರವಾದ, ಜನಹಿತವಾದ, ಪ್ರಗತಿಪರವಾದ ಎಲ್ಲ ಆಶಯಗಳಿಗೆ ಸಮಾಜವಾದಿ ಸಿದ್ಧಾಂತದ ವಿಚಾರಗಳು ಮುಖ್ಯಭೂಮಿಕೆಗಳಾಗಿ ಪರಿಣಮಿಸಿರುವುದನ್ನು ಕಾಣಬಹುದಾಗಿದೆ.

೪.೪. ಕರ್ನಾಟಕದ ಪ್ರಗತಿಪರ ಚಳವಳಿಗಳ ಮೇಲೆ ಗೋಪಾಲಗೌಡರ ಪ್ರಭಾವ

ಕರ್ನಾಟಕವು ಪ್ರಗತಿಪರ ಚಳವಳಿಗೆ ಹೆಸರಾದ ನಾಡು. ಅನ್ಯಾಯ, ಅಸಮಾನತೆ ಮತ್ತು ಶೋಷಣೆಗಳನ್ನು ಈ ನಾಡು ತನ್ನ ಚರಿತ್ರೆ ಹಾಗೂ ಪರಂಪರೆಯಿಂದಲೂ ಗುರುತಿಸುತ್ತಾ ಮತ್ತು ವಿರೋಧಿಸುತ್ತಾ ಬಂದಿದೆ. ೧೨ನೇ ಶತಮಾನದ ವಚನಕಾರರ ಚಳವಳಿಯು ಇದಕ್ಕೆ ಬಹಳ ದೊಡ್ಡ ಬುನಾದಿಯನ್ನು ಹಾಕಿದೆ. ಬಸವಣ್ಣನ ನೇತೃತ್ವದಲ್ಲಿ ಆ ಕಾಲದ ಎಲ್ಲಾ ಬಗೆಯ ಅನ್ಯಾಯ, ಅಸಮಾನತೆ ಮತ್ತು ಶೋಷಣೆಗಳನ್ನು ವಚನಕಾರರು ತಮ್ಮ ವಚನಗಳ ಮೂಲಕ ವಿರೋಧಿಸಿದರು. ಈ ಮೂಲಕ ನಾಡಿನಲ್ಲಿ ಪ್ರಗತಿಪರ ಚಳವಳಿಗೆ ನಾಂದಿ ಹಾಡಿದರು. ಜೊತೆಗೆ ಬಸವಣ್ಣನ ನೇತೃತ್ವದಲ್ಲಿ ಮೇಲುಜಾತಿಯ ಹೆಣ್ಣು ಮತ್ತು ಕೆಳಜಾತಿಯ ಗಂಡಿನ ನಡುವೆ ಮದುವೆ ಮಾಡಿಸಿದರು. ಕರ್ನಾಟಕದಲ್ಲಿ ಬಸವಣ್ಣನ ಕಾಲದಲ್ಲಿ ಇದ್ದಂತಹ ಅನ್ಯಾಯ, ಅಸಮಾನತೆ ಮತ್ತು ಶೋಷಣೆಗಳು ಬೇರೆ ಬೇರೆ ರೂಪದಲ್ಲಿ ಇಂದೂ ಕೂಡ ಮುಂದುವರಿದಿವೆ. ಭೂಮಿ, ಆಸ್ತಿ, ಸಂಪತ್ತು, ಸಾಮಾಜಿಕ-ರಾಜಕೀಯ ಅವಕಾಶಗಳು ಮತ್ತು ಸೌಲಭ್ಯಗಳು ಅಸಮಾನವಾಗಿ ಹಂಚಿಕೆಯಾಗಿವೆ. ಈ ಮೂಲ ಕಾರಣದಿಂದ ಮತ್ತೆ ಹಲವು ಸಮಸ್ಯೆಗಳು ಸಮಾಜದಲ್ಲಿ ನಿರ್ಮಾಣವಾಗಿವೆ. ಈ ಸಮಸ್ಯೆಗಳ ಬದಲಾವಣೆಗೆ ಮತ್ತು ಶೋಷಿತರ, ಅಪಮಾನಿತರ ಸ್ವಾಭಿಮಾನದ ಬದುಕಿಗೆ ಹಾಗೂ ಅವರ ಏಳಿಗೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಹಲವು ಪ್ರಗತಿಪರ ಹೋರಾಟಗಳು ನಡೆದಿವೆ.

ಯಾವುದೇ ಪ್ರಗತಿಪರ ಚಳವಳಿಗೆ ಆಲೋಚನೆ-ಚಿಂತನೆಗಳ ತಾತ್ವಿಕ ತಳಹದಿ ಬೇಕಾಗುತ್ತದೆ. ಯಾವುದೇ ಪ್ರಗತಿಪರ ಚಳವಳಿಗಳು ತತ್ವಜ್ಞಾನಿಗಳ, ದೊಡ್ಡ ಮೇಧಾವಿಗಳ, ಸಾಮಾಜಿಕ-ರಾಜಕೀಯ

ಚಿಂತಕರ ಮತ್ತು ಹೋರಾಟಗಾರರ ಆಲೋಚನೆ ಹಾಗೂ ಚಿಂತನೆಗಳಿಂದ ಪ್ರಭಾವ ಪಡೆದಿರುತ್ತವೆ. ಕರ್ನಾಟಕದಲ್ಲಿ ನಡೆದಿರುವ ಪ್ರಗತಿಪರ ಚಳವಳಿಗಳು ಹೀಗೆ ಕೆಲವು ವ್ಯಕ್ತಿಗಳ ಆಲೋಚನೆ ಹಾಗೂ ಚಿಂತನೆಗಳಿಂದ ಪ್ರಭಾವ ಹಾಗೂ ಪ್ರೇರಣೆ ಪಡೆದಿವೆ. 'ಕರ್ನಾಟಕ ದಲಿತ ಸಂಘರ್ಷ ಸಮಿತಿ'ಯು ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳಿಂದ ಪ್ರಭಾವ ಪಡೆದಿದೆ. ಕರ್ನಾಟಕದ 'ಸಮುದಾಯ' ಸಂಘಟನೆ ಮತ್ತು 'ಇಪ್ಟಾ' ಸಾಂಸ್ಕೃತಿಕ ಸಂಘಟನೆಗಳು ಮಾರ್ಕ್ಸ್‌ವಾದದಿಂದ ಪ್ರಭಾವ ಪಡೆದಿವೆ. ಕರ್ನಾಟಕದ ರೈತ ಚಳವಳಿ ಒಂದಷ್ಟು ಗಾಂಧೀಜಿ ಚಿಂತನೆಗಳಿಂದ, ಮತ್ತೊಂದಿಷ್ಟು ರಾಮಮನೋಹರ ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವ ಪಡೆದಿದೆ. ಇಂತಹ ಚಳವಳಿಗಳು ಸಂದರ್ಭಗಳಿಗೆ ತಕ್ಕಂತೆ ಬಸವಣ್ಣನಿಂದಲೂ ಪ್ರಭಾವ ಪಡೆದಿವೆ. ಹಾಗೆಯೇ ಗಾಂಧಿ ಹಾಗೂ ಮಾರ್ಕ್ಸ್‌ನ ಚಿಂತನೆಗಳಿಂದಲೂ ಪ್ರಭಾವ ಪ್ರೇರಣೆ ಪಡೆದಿವೆ.

ಚಳವಳಿಯೊಂದರ ಮೇಲೆ ತತ್ವಜ್ಞಾನಿಗಳ, ಸಾಮಾಜಿಕ-ರಾಜಕೀಯ ಚಿಂತಕರ ಮತ್ತು ಹೋರಾಟಗಾರರ ಆಲೋಚನೆ ಹಾಗೂ ಚಿಂತನೆಗಳ ಪ್ರಭಾವ ಹೇಗೆ ಆಗುತ್ತದೆ ಎಂಬುದು ಆಸಕ್ತಿಯ ವಿಷಯ. ಚಳವಳಿಗಳು ತತ್ವಜ್ಞಾನಿಗಳ, ಸಾಮಾಜಿಕ-ರಾಜಕೀಯ ಚಿಂತಕರ ಮತ್ತು ಹೋರಾಟಗಾರರ ಆಲೋಚನೆ ಹಾಗೂ ಚಿಂತನೆಗಳಿಂದ ಪ್ರಭಾವ ಪಡೆಯುವ ವಿಧಾನ ಯಾವುದು ಎಂಬುದು ಅಧ್ಯಯನ ಯೋಗ್ಯ ವಿಷಯ. ಈ ಹಿನ್ನೆಲೆಯಲ್ಲಿ ಶಾಂತವೇರಿ ಗೋಪಾಲಗೌಡರ ಪ್ರಭಾವ ಕರ್ನಾಟಕದ ಪ್ರಗತಿಪರ ಚಳವಳಿಯ ಮೇಲೆ ಆಗಿರುವುದನ್ನು ಈ ಉಪ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಕರ್ನಾಟಕದ ಯಾವುದೇ ಪ್ರಗತಿಪರ ಚಳವಳಿಯು ಬಸವಣ್ಣ, ಗಾಂಧಿ, ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ ಮತ್ತು ಗೋಪಾಲಗೌಡರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಕಾಣುತ್ತದೆ. ಯಾಕೆಂದರೆ ಇವರು ದೊಡ್ಡ ಚಿಂತಕರು, ಸಾಮಾಜಿಕ, ರಾಜಕೀಯ ವಿಚಾರಧಾರೆಯುಳ್ಳವರು. ಅದಕ್ಕಿಂತ ಹೆಚ್ಚಾಗಿ ಪ್ರಗತಿಪರ ಹೋರಾಟಗಾರರು. ಅಂದರೆ ಯಾವುದೇ ಪ್ರಗತಿಪರ ಹೋರಾಟವು ಇಂತಹ ಚಿಂತಕರ, ಹೋರಾಟಗಾರರ ಆಲೋಚನೆ, ಚಿಂತನೆಗಳ ಪ್ರಭಾವ ಪಡೆದಿರುತ್ತದೆ. ಈ ಪ್ರಭಾವದ ಮಾದರಿಯು ಸರಳವಾಗಿ, ಮೂರ್ತರೂಪದಲ್ಲಿ ಇರುವುದಿಲ್ಲ. ಇಂತಹವರ ಆಲೋಚನೆ ಹಾಗೂ ಚಿಂತನೆಗಳನ್ನು ವಿಶಾಲವಾಗಿ ಆಶಯದ ರೂಪದಲ್ಲಿ ಪಡೆಯಬಹುದು. ಸಮಾಜದ ಅಂಚಿನವರನ್ನು, ಶೋಷಿತರನ್ನು ಮತ್ತು ಅಪಮಾನಿತರನ್ನು ಅಭಿವೃದ್ಧಿ ಮಾಡುವ ದಾರಿಗೆ ಸಂಬಂಧಿಸಿದಂತೆ ಕೆಲವು ಮಾರ್ಗಸೂಚಿಗಳನ್ನು ಪಡೆಯಬಹುದು. ಇಂತಹವರ ಆಲೋಚನೆಗಳು, ಚಿಂತನೆಗಳು ಸಮಕಾಲೀನ ಸಮಾಜದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ತಾತ್ವಿಕವಾಗಿ ವೈಚಾರಿಕವಾಗಿ ನೆರವು ನೀಡಬಹುದು. ಅಂಬೇಡ್ಕರ್ ಅವರ ಆಲೋಚನೆಗಳ ಮೂಲಕ ಇವತ್ತಿನ ಅಸ್ಪೃಶ್ಯತೆಯ ಸಮಸ್ಯೆಯನ್ನು ಮತ್ತು ಜಾತಿ ಸಮಸ್ಯೆಯ ಆಳ ಹಾಗೂ ಅದರ ಸೂಕ್ಷ್ಮ ಸ್ವರೂಪವನ್ನು ಅರ್ಥಮಾಡಿಕೊಳ್ಳುತ್ತೇವೆ. ಅದೇ ರೀತಿಯಲ್ಲಿ ಕಾರ್ಲ್‌ಮಾರ್ಕ್ಸ್‌ನ ಚಿಂತನೆಗಳಿಂದ

ಇಂದಿನ ಆರ್ಥಿಕ ಶೋಷಣೆಯ ಸೂಕ್ಷ್ಮ ನೆಲೆಗಳನ್ನು ಹಾಗೂ ಕಾರ್ಪೊರೇಟ್ ವಲಯದ ಆರ್ಥಿಕ ಶೋಷಣೆಯ ವಿನ್ಯಾಸಗಳನ್ನು ಅರಿಯಬಹುದಾಗಿದೆ. ಲೋಹಿಯಾ ಅವರ ಚಿಂತನೆಗಳ ಮೂಲಕ ಭಾರತದ ಸಾಂಸ್ಕೃತಿಕ ರಾಜಕಾರಣದ ಕರಾಳ ಮುಖಗಳ ಒಳ ಹೊರಗನ್ನು ಅರಿಯಬಹುದಾಗಿದೆ. ಜೊತೆಗೆ ಇವುಗಳ ನಿವಾರಣೆಯ ಸಾಧ್ಯತೆಗಳನ್ನು ಕುರಿತು ಆಲೋಚನೆ ಮಾಡಬಹುದಾಗಿದೆ.

ಅಂದರೆ ಸಾಂಸ್ಕೃತಿಕ-ರಾಜಕೀಯ ಚಿಂತಕರ ಚಿಂತನೆಗಳು-ಆಲೋಚನೆಗಳು ಕೇವಲ ಅವರು ಬದುಕಿದ್ದ ಕಾಲದ ಬದುಕನ್ನು ಮಾತ್ರ ಪ್ರಭಾವಿಸುವುದಿಲ್ಲ. ಅದನ್ನೂ ದಾಟಿಕೊಂಡು ಸಮಕಾಲೀನ ಸಮಾಜದ ಆಗುಹೋಗುಗಳನ್ನು ಪ್ರಭಾವಿಸುತ್ತವೆ. ಯಾಕೆಂದರೆ ಸಮಾಜದ ಮೂಲಭೂತ ಸಮಸ್ಯೆಗಳನ್ನು ಕುರಿತ ಆಲೋಚನೆ-ಚಿಂತನೆಗಳು ಈ ಬಗೆಯ ಪ್ರಭಾವವನ್ನು ಬೀರುತ್ತವೆ. ಅಥವಾ ಸಮಾಜದ ಸಮಸ್ಯೆಗಳ ಮೂಲ ನೆಲೆಗಳನ್ನು ಕುರಿತ ಆಲೋಚನೆ-ಚಿಂತನೆಗಳು ಈ ಬಗೆಯ ಪ್ರಭಾವವನ್ನು ಬೀರುತ್ತವೆ. ಶಾಂತವೇರಿ ಗೋಪಾಲಗೌಡರ ಆಲೋಚನೆ-ಚಿಂತನೆಗಳಿಗೆ ಆ ಬಗೆಯ ಸಾಮರ್ಥ್ಯ ಇತ್ತು ಎಂಬುದನ್ನು ಇದು ತೋರಿಸುತ್ತದೆ.

ಕರ್ನಾಟಕದ ಪ್ರಗತಿಪರ ಚಳವಳಿಗಳಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಕರ್ನಾಟಕ ರೈತ ಸಂಘ ಇವುಗಳ ಮೇಲೆ ಗೋಪಾಲಗೌಡರ ಆಲೋಚನೆಗಳ ಪ್ರಭಾವದ ಬಗೆಗೆ ಕೆಲವು ಮುಖ್ಯವಾದ ಅಂಶಗಳನ್ನು ಚರ್ಚಿಸಲಾಗುವುದು. ಈ ಚರ್ಚೆಗೆ ತಾತ್ವಿಕ ತಳಹದಿಯ ಹಿನ್ನೆಲೆಯಾಗಿ ಇನ್ನೊಂದು ಮುಖ್ಯವಾದಂತಹ ಅಂಶವನ್ನು ಚರ್ಚೆ ಮಾಡುವುದಿದೆ. ಅದು ಯಾವುದು ಎಂದರೆ, ಶಾಂತವೇರಿ ಗೋಪಾಲಗೌಡರ ಮೇಲೆ ಯಾರ ಪ್ರಭಾವ ಆಗಿತ್ತು ಮತ್ತು ಯಾವ ಆಲೋಚನೆಗಳ ಪ್ರಭಾವ ಆಗಿತ್ತು ಎಂಬುದರ ಕುರಿತ ಚರ್ಚೆಯ ಅಗತ್ಯವಿದೆ. ಗೋಪಾಲಗೌಡರು ಅಸಮಾನತೆಯ ವಿರುದ್ಧ ಧ್ವನಿ ಎತ್ತಿದವರು, ಅನ್ಯಾಯದ ವಿರುದ್ಧ ಹೋರಾಡಿದವರು. ಈ ವ್ಯಕ್ತಿತ್ವ ಅವರ ಬುದ್ಧಿಯ ಭಾಗವಾಗಿತ್ತು; ಜೊತೆಗೆ ಅವರ ಹೃದಯಾಂತರಾಳದ ಪರಿಪಕ್ವ ಸಹಜ ತುಡಿತವಾಗಿತ್ತು. ಇವೆರಡೂ ಒಂದರೊಡನೆ ಒಂದು ಬೆರೆತು ಸಹಜವಾಗಿ ಸ್ಪಂದಿಸುತ್ತಿದ್ದವು. ಈ ಬಗೆಯ ಹೋರಾಟದ ಕೆಚ್ಚು ಮತ್ತು ಪ್ರತಿರೋಧದ ಗುಣ ಅವರಲ್ಲಿರಬೇಕಾದರೆ, ಅವರು ಇದೇ ಮಾದರಿಯ ಅಥವಾ ಇದೇ ಸ್ವರೂಪದ ಹೋರಾಟದ ವ್ಯಕ್ತಿತ್ವಗಳಿಂದ ಪ್ರಭಾವಿತರಾಗಿರಬೇಕು. ಈ ದೃಷ್ಟಿಯಿಂದ ನೋಡಿದಾಗ, ಗೋಪಾಲಗೌಡರ ಮನೋಧರ್ಮ ಮತ್ತು ಹೋರಾಟದ ವ್ಯಕ್ತಿತ್ವದ ಮೇಲೆ ಕಾರ್ಲ್‌ಮಾರ್ಕ್ಸ್, ಟಾಲ್‌ಸ್ಟಾಯ್ ಹಾಗೂ ರಾಮಮನೋಹರ ಲೋಹಿಯಾ ಅವರ ಆಲೋಚನೆಗಳು ಪ್ರಭಾವಿಸಿವೆ. ಕಾರ್ಲ್‌ಮಾರ್ಕ್ಸ್ ಅವರ ಪ್ರಭಾವ ಆಗಿದ್ದರಿಂದ ಗೋಪಾಲಗೌಡ ಅವರು ಆರ್ಥಿಕ ಅಸಮಾನತೆಯನ್ನು ಕುರಿತು ಆಲೋಚನೆ ಮಾಡಲು ಸಾಧ್ಯವಾಯಿತು. ಅದರ ಹಾಗೆ ಟಾಲ್‌ಸ್ಟಾಯ್ ಹಾಗೂ ರಾಮಮನೋಹರ ಲೋಹಿಯಾ ಅವರ ಆಲೋಚನೆಗಳ ಪ್ರಭಾವದಿಂದ ಸಾಂಸ್ಕೃತಿಕ ಸಮಸ್ಯೆಗಳನ್ನು ಕುರಿತು ಆಲೋಚನೆ ಮಾಡಲು ಸಾಧ್ಯವಾಯಿತು. ಇದರ

ಮುಂದುವರಿಕೆಯಾಗಿ ವ್ಯಕ್ತಿಗಳ, ಸಮುದಾಯಗಳ ಮತ್ತು ಒಟ್ಟಾರೆ ಸಮಾಜದ ಅಂತರಂಗದ ಸೂಕ್ಷ್ಮಗಳನ್ನು ಕುರಿತು ಗೋಪಾಲಗೌಡ ಅವರು ಚಿಂತನೆ ಮಾಡಲು ಸಾಧ್ಯವಾಯಿತು. ಇದು ಒಂದು ಜಗೆಯ ಪ್ರಭಾವ. ಇದರ ಜೊತೆಗೆ ಮಹಾತ್ಮಾ ಗಾಂಧೀಜಿ ಮತ್ತು ಜಯಪ್ರಕಾಶ ನಾರಾಯಣ, ಆಚಾರ್ಯ ನರೇಂದ್ರದೇವ ಅವರ ಆಲೋಚನೆ ಮತ್ತು ಅವರ ಹೋರಾಟದ ಮಾದರಿಯ ಪ್ರಭಾವ ಗೋಪಾಲಗೌಡರ ಮೇಲೆ ಆಗಿದೆ. ಈ ಇಬ್ಬರ ಪ್ರಭಾವ ಇವರ ಮೇಲೆ ಆಗಿರುವುದರಿಂದ ಗೋಪಾಲಗೌಡರು ಅಹಿಂಸಾತ್ಮಕ ವಿಧಾನದಲ್ಲಿ ಆಲೋಚನೆ ಮಾಡುವಂತೆ ಮತ್ತು ಅಹಿಂಸಾತ್ಮಕ ಸ್ವರೂಪದಲ್ಲಿ ಹೋರಾಟ ಮಾಡುವಂತೆ ಆಯಿತು. ಇದಲ್ಲದೆ ಇವರ ಸಮಕಾಲೀನರಾಗಿದ್ದ ಜಿ. ಸದಾಶಿವರಾಯ, ರಾಘವೇಂದ್ರರಾವ್, ಎಚ್. ಗಣಪತಿಯಪ್ಪ ಇವರ ಪ್ರಭಾವ ಕೂಡಾ ಗೋಪಾಲಗೌಡರ ಮೇಲೆ ಆಗಿದೆ. ೧೫.೧೨.೧೯೭೩ ರಂದು ಯುವ ಸಮಾಜವಾದಿಗಳೆಲ್ಲ ಸೇರಿ ಮಲೆನಾಡಿನಲ್ಲಿ 'ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟ'ವನ್ನು ಸ್ಥಾಪಿಸಿದರು. ಎಂ.ಜಿ.ನಂಜುಂಡಸ್ವಾಮಿ ಅವರು ಒಕ್ಕೂಟದ ಅಧ್ಯಕ್ಷರಾದರೆ, ತೇಜಸ್ವಿ ಅವರು ಸಂಚಾಲಕರಾದರು. ಕಡಿದಾಳು ಶಾಮಣ್ಣ ಅವರು ಶಿವಮೊಗ್ಗ ಘಟಕದ ಉಸ್ತುವಾರಿ ಹೊತ್ತಿದ್ದರು. ಈ ಒಕ್ಕೂಟವು ರೈತರ ಮನೆ ಜಪ್ತಿ, ಲೆವಿ ನೀತಿಗಳ ವಿರುದ್ಧ ಹೋರಾಟ ಹಾಗೂ ಬತ್ತದ ಅಂತರ ಜಿಲ್ಲಾ ಸಾಗಾಣಿಕಾ ನಿರ್ಬಂಧವನ್ನು ತೆಗೆದುಹಾಕಲು ಒತ್ತಾಯಪಡಿಸಿತು. ಆದರೆ ಒಕ್ಕೂಟವು ಕಾಫಿ, ಏಲಕ್ಕಿ ಹಾಗೂ ಇನ್ನಿತರೆ ಸಣ್ಣ ಬೆಳೆಗಳ ಸಮಸ್ಯೆಗಳಿಗೆ ಮಾತ್ರ ಸೀಮಿತವಾಯಿತು. ಇತರೆ ಬೆಳೆಗಳ ಕಡೆಗೆ ಗಮನ ಹರಿಸದೆ ಇದ್ದರೂ ಇನ್ನೂ ಹಲವಾರು ಸಮಸ್ಯೆಗಳ ಕಡೆಗೆ ಗಮನಹರಿಸದೆ ಇರಲಿಲ್ಲ.[೨೯]

ಇವರೆಲ್ಲರ ಪ್ರಭಾವ ಗೋಪಾಲಗೌಡರ ಮೇಲೆ ಆಗಿರುವುದರಿಂದ ಗೋಪಾಲಗೌಡರು ಶೋಷಿತರ ಪರವಾಗಿ, ದೀನ ದಲಿತ ಪರವಾಗಿ ಆಲೋಚನೆ ಮಾಡುವಂತೆ ಮತ್ತು ಅವರ ಪರವಾಗಿ ಹೋರಾಡುವಂತೆ ಆಯಿತು. ಕರ್ನಾಟಕ ರೈತ ಚಳವಳಿಯು ರೈತರ ಸಮಸ್ಯೆಯನ್ನು ಗ್ರಹಿಸಿರುವ ವಿಧಾನ ಮತ್ತು ಅದರ ಹೋರಾಟದ ವಿಧಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಈ ಹೋರಾಟದ ಮೇಲೆ ಶಾಂತವೇರಿ ಗೋಪಾಲಗೌಡರ ಪ್ರಭಾವ ಆಗಿರುವುದು ಬಹಳ ಸ್ಪಷ್ಟವಾಗಿ ಗೋಚರಿಸುತ್ತದೆ. ಸಣ್ಣ ಹಿಡುವಳಿದಾರರ, ಭೂಹೀನರ, ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಕರ್ನಾಟಕ ರೈತ ಸಂಘ ತನ್ನ ಆರಂಭದಿಂದಲೂ ಕೈಗೆತ್ತಿಕೊಂಡಿದೆ. ರೈತ ಸಂಘದ ಪ್ರಮುಖ ನಾಯಕರುಗಳಾದ ಎನ್.ಡಿ. ಸುಂದರೇಶ್, ಕಡಿದಾಳ್ ಶಾಮಣ್ಣ, ಕೆ.ಟಿ. ಗಂಗಾಧರ್ ಇವರು ತೀರ್ಥಹಳ್ಳಿ ಮತ್ತು ಶಿವಮೊಗ್ಗ ಭಾಗದವರು. ಇವರಿಗೆ ಗೋಪಾಲಗೌಡರ ನೇರ ಪ್ರಭಾವವೇ ಆಗಿದೆ. ಗೌಡರ ಸರಳತನ, ಅನ್ಯಾಯ ಹಾಗೂ ಸುಲಿಗೆಯನ್ನು ಗುರುತಿಸುವ ಹಾಗೂ ವಿರೋಧಿಸುವ ಛಾತಿ ಇವೆಲ್ಲವನ್ನೂ ಈ ನಾಯಕರು ಗೋಪಾಲಗೌಡರಿಂದಲೆ ಕಲಿತಿದ್ದಾರೆ. ಇದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ. ಗೋಪಾಲಗೌಡರ ಪ್ರಭಾವ ಕೇವಲ ಈ ನಾಯಕರ ಮೇಲೆ ಮಾತ್ರವಲ್ಲ; ಎಂ.ಡಿ. ನಂಜುಂಡಸ್ವಾಮಿ, ಕೋಡಿಹಳ್ಳಿ ಚಂದ್ರಶೇಖರ್ ಮುಂತಾದವರ ಮೇಲೂ ಆಗಿದೆ.

ಗೋಪಾಲಗೌಡರ ಪ್ರಭಾವ ಕರ್ನಾಟಕ ರೈತಸಂಘದ ನಾಯಕರ ಮೇಲೆ ಮಾತ್ರ ಆಗಿದೆ ಎಂದು ಹೇಳಿದರೆ, ಅದು ಬಹುಶಃ ಸರಳೀಕರಿಸಿದಂತೆ ಆಗಬಹುದು. ಗೋಪಾಲಗೌಡರ ಪ್ರಭಾವ ಇಡಿಯಾಗಿ ರೈತ ಸಂಘದ ಮೇಲೆ ಆಗಿದೆ ಎಂದು ಹೇಳಿದರೆ ಹೆಚ್ಚು ಸರಿಯೆನಿಸಬಹುದೆಂದು ಕಾಣುತ್ತದೆ. ರೈತ ಸಂಘದಲ್ಲಿ ಸಮಾಜವಾದಿ ಚಿಂತನೆಗಳು ಬಹಳವಾಗಿ ಕೆಲಸ ಮಾಡುತ್ತಿವೆ. ಸಮಾಜವಾದಿ ಚಿಂತನೆಗಳು ರೈತ ಸಂಘಕ್ಕೆ ಇಲ್ಲದೇ ಹೋಗದ್ದಿದ್ದರೆ ರೈತ ಸಂಘವು ಎಂದೋ ತನ್ನ ಮೂಲ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿತ್ತು. ರೈತ ಸಂಘದಲ್ಲಿ ಬೇರೆ ಬೇರೆ ಜಾತಿಯ ರೈತರು ಇದ್ದಾರೆ. ಬೇರೆ ಬೇರೆ ಪ್ರದೇಶದ ರೈತರು ಇದ್ದಾರೆ. ಆದರೆ ಅವರೆಲ್ಲರ ಸಮಸ್ಯೆಗಳು ಮುಖ್ಯವಾಗಿ ಒಂದೇ ಆಗಿವೆ. ಅಂದರೆ ಹಲವರ ಸಮಸ್ಯೆಗಳು ಒಂದೇ ರೀತಿ ಇರುವುದು ಮತ್ತು ಒಂದೇ ರೀತಿಯ ಸಮಸ್ಯೆಗಳು ಹಲವರ ಸಮಸ್ಯೆಗಳಾಗಿರುವುದು ಇದರ ಮುಖ್ಯ ಸ್ವರೂಪವಾಗಿದೆ. ರೈತ ಸಂಘವು ಎದುರಿಸುತ್ತಿರುವ ಮತ್ತು ತಾನು ಹೋರಾಟಕ್ಕೆ ಕೈಗೆತ್ತಿಕೊಂಡಿರುವ ಸಮಸ್ಯೆಗಳು ಮೂಲತಃ ಸಮಾಜವಾದಿ ನೆಲೆಯಾಗಿವೆ. ಜೊತೆಗೆ ರೈತ ಸಂಘದ ಹೋರಾಟದ ಮಾದರಿಯೂ ಕೂಡಾ ಸಮಾಜವಾದಿ ಮಾದರಿಯದ್ದೇ ಆಗಿದೆ. ೧೨.೪.೧೯೮೭ರಲ್ಲಿ ಭದ್ರಾವತಿ ತಾಲ್ಲೂಕಿನಲ್ಲಿ ಕಂದಾಯ ಅಧಿಕಾರಿಗಳ ವಿರುದ್ಧ ನಡೆದ ಚಳವಳಿಯನ್ನು ಇಲ್ಲಿ ಗಮನಿಸಬಹುದು. ನ್ಯಾಯಾಲಯದ ತಡೆಯಾಜ್ಞೆಯನ್ನು ಉಲ್ಲಂಘಿಸಿ ರೈತರ ಮನೆಗಳಿಗೆ ಅಧಿಕಾರಿಗಳು ಅಕ್ರಮ ಪ್ರವೇಶ ಮಾಡಿ ಚರಾಸ್ತಿಗಳನ್ನು ಜಪ್ತಿ ಮಾಡುತ್ತಿದ್ದರು. ಜಪ್ತಿಯ ಸಂದರ್ಭದಲ್ಲಿ ರೈತರಿಗಿಂತ ರೈತ ಮಹಿಳೆಯರಿಗೆ ಹೆಚ್ಚಿನ ಶೋಷಣೆಯಾಗುತ್ತಿತ್ತು. ಜಪ್ತಿಯ ಸುದ್ದಿ ತಿಳಿಯುತ್ತಿದ್ದಂತೆ ಬಹುತೇಕ ರೈತರು ಹೆದರಿ ಮನೆಗಳನ್ನು ತೊರೆಯುತ್ತಿದ್ದರು. ಆ ವೇಳೆಯಲ್ಲಿ ಮನೆಯಲ್ಲಿದ್ದ ಮಹಿಳೆಯರು ಅಧಿಕಾರಿಗಳ ದೌರ್ಜನ್ಯಕ್ಕೆ ತುತ್ತಾಗಬೇಕಾಗಿತ್ತು. ಇದನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ 'ಪಿಕೆಟಿಂಗ್ ಚಳವಳಿ'ಯು ಆರಂಭವಾಯಿತು. ಕರ್ನಾಟಕ ರಾಜ್ಯ ರೈತಸಂಘವು ಭದ್ರಾವತಿಯಲ್ಲಿ ಇದನ್ನು ಮೊದಲಿಗೆ ಆರಂಭಿಸಿದ್ದು, ತಹಸೀಲ್ದಾರ್ ಕಛೇರಿಯನ್ನು ಮುತ್ತಿಗೆ ಹಾಕಿ ಕೆಲಸಗಳು ನಡೆಯದಂತೆ ನೋಡಿಕೊಂಡದ್ದು ಮಹತ್ವದ ಸಂಗತಿ.[೩೦] ಪ್ರಸ್ತುತ ಚಳವಳಿಯ ಪರಿಣಾಮವಾಗಿ ಎಂ.ಡಿ. ನಂಜುಂಡಸ್ವಾಮಿ ಮತ್ತು ಸುಂದರೇಶ್ ಮುಂತಾದವರನ್ನು ಬಂಧಿಸಿ ಶಿವಮೊಗ್ಗದ ಜೈಲಿನಲ್ಲಿಡಲಾಗಿತ್ತು. ಈ ಚಳವಳಿಯು ಮುಂದೆ ತೀರ್ಥಹಳ್ಳಿ, ಹೊಸನಗರ, ಶಿವಮೊಗ್ಗ, ಹೊನ್ನಾಳಿ ಮತ್ತು ಶಿಕಾರಿಪುರಗಳಲ್ಲಿ ವಿಸ್ತರಿಸಿಕೊಂಡಿತು. ಈ ಚಳವಳಿಯು ಶಿವಮೊಗ್ಗ ಜಿಲ್ಲೆಗೆ ಮಾತ್ರ ಸೀಮಿತವಾಗಿದ್ದುದನ್ನು ಇಲ್ಲಿ ನೆನೆಯಬಹುದು.

ಈ ದೃಷ್ಟಿಯಿಂದ ಶಾಂತವೇರಿ ಗೋಪಾಲಗೌಡರು ಸದನದಲ್ಲಿ ಮಂಡಿಸಿದ ವಿಚಾರಗಳನ್ನು ಇಲ್ಲಿಯ ಚರ್ಚೆಗೆ ಪೂರಕವಾಗಿ ಉಲ್ಲೇಖ ಮಾಡಬಹುದು. ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ಧತಿ, ಇನಾಂ ರದ್ಧತಿ, ಭೂ ಸುಧಾರಣೆ ಕಾನೂನು, ಉಚಿತ ಶಿಕ್ಷಣ, ಸ್ತ್ರೀಯರ ಪ್ರಾತಿನಿಧ್ಯತೆ, ಶಿಕ್ಷಕರ-ಕಾರ್ಮಿಕರ ಜೀವನಮಟ್ಟ ಸುಧಾರಣೆ, ಗಡಿಸಮಸ್ಯೆ, ಕನ್ನಡ ಭಾಷೆ ಕುರಿತು, ಏಕೀಕರಣ ಕುರಿತು, ಮಲೆನಾಡ ಪ್ರಗತಿ, ರೈತರ ನೀರಾವರಿ ಕುರಿತು, ಜೈಲಿನ ಸುಧಾರಣೆ, ವಿಧಾನಪರಿಷತ್ತು ರದ್ಧತಿ, ಪ್ರಾಥಮಿಕ, ವಿಶ್ವವಿದ್ಯಾಲಯದವರೆಗಿನ ಶಿಕ್ಷಣ ವ್ಯವಸ್ಥೆ, ಚುನಾವಣೆ, ಅಧಿಕಾರ ವಿಕೇಂದ್ರೀಕರಣ,

ಆಹಾರ ಪರಿಸ್ಥಿತಿ, ಲಿಪಿವ್ಯವಸ್ಥೆ, ತೆರಿಗೆ ಕುರಿತು, ಭೂದಾನ ಚಳವಳಿ, ಧಾರ್ಮಿಕ ಸಂಸ್ಥೆಗಳು, ಬೆಲೆಗಳ ಸ್ಥಿರೀಕರಣ, ಪಾನನಿರೋಧ, ಬರಗಾಲ ಸಮಸ್ಯೆ, ಅರಣ್ಯ ಭೂಮಿ, ಪೋಲೀಸ್ ದೌರ್ಜನ್ಯ ಇನ್ನು ಮುಂತಾದ ಪ್ರಮುಖ ವಿಷಯಗಳ ಬಗ್ಗೆ ಅಗಾಧವಾದ ಪಾಂಡಿತ್ಯವನ್ನು ಹೊಂದಿದ್ದು, ಗೋಪಾಲಗೌಡರು ಸದನದ ಒಳಗೆ ಮತ್ತು ಹೊರಗೆ ಇವುಗಳ ಕುರಿತು ಹೋರಾಟ ನಡೆಸಿದ್ದು ಅವರ ಸಮಾಜವಾದಿ ಚಿಂತನೆಗಳ ಆಶಯ ಯಾವ ರೀತಿ ಇತ್ತೆಂಬುದಕ್ಕೆ ಸಾಕ್ಷಿಯಾಗಿವೆ.

ಸಮಾಜವಾದದಿಂದ ಮುಖ್ಯವಾಗಿ ಸಾಧಿಸಬೇಕಾಗಿರುವುದೇನೆಂದರೆ ಮೊಟ್ಟ ಮೊದಲನೆಯದಾಗಿ ಶೋಷಣೆಯನ್ನು ತಡೆಗಟ್ಟುವುದು. ಉತ್ಪಾದನೆಯ ಮೂಲಗಳನ್ನು ಸರ್ವರ ಹಿತಕ್ಕಾಗಿ ನಿಯಂತ್ರಿಸುವುದರ ಮೂಲಕ ಇದನ್ನು ತಡೆಗಟ್ಟಿ ಬಡತನವನ್ನು ನಿರ್ಮೂಲನಗೊಳಿಸಬೇಕು, ಎಲ್ಲರಿಗೂ ಸಮಾನ ಅವಕಾಶಗಳು ಲಭಿಸುವಂತಾಗಬೇಕು. ದುಡಿಮೆ ಮತ್ತು ಅದರ ಪ್ರತಿಫಲದ ವಿತರಣೆಯಲ್ಲಿಯೂ ಸಮಾನತೆ ಇರಬೇಕು. ಆರ್ಥಿಕ ವಿತರಣೆಯ ಜೊತೆಗೆ ವಿದ್ಯೆ, ಜ್ಞಾನ, ಅಂತಸ್ತು, ಅಧಿಕಾರ, ಸಾಮಾಜಿಕ ನ್ಯಾಯ ಎಲ್ಲರಿಗೂ ಸಮಾನವಾಗಿ ದೊರೆಯುವಂತಾಗಬೇಕು. ಭಾರತೀಯ ಸಮಾಜವಾದ ಅಹಿಂಸೆಯಿಂದ ಇವೆಲ್ಲವನ್ನು ಸಾಧಿಸಬೇಕೆಂಬುದರತ್ತ ಒಲವನ್ನು ತಳೆಯಿತು. ಇದಕ್ಕೆ ಬಹುಮುಖ್ಯ ಕಾರಣ ಗೋಪಾಲಗೌಡರ ಪ್ರಭಾವ.

ಮಾನವ ಕೇವಲ ಆರ್ಥಿಕ ಜೀವಿಯಲ್ಲ, ಅನ್ನ ಬಟ್ಟೆಗಳನ್ನು ನೀಡಿದರೆ, ಸಂಪತ್ತನ್ನು ಸರ್ವರಿಗೂ ಹಂಚಿದರೆ ಜೀವನ ಪರಿಪೂರ್ಣವಾಗುವುದಿಲ್ಲ. ಅದು ಸಮಾಜವಾದದ ಆದರ್ಶವಲ್ಲ. ನಿಜವಾದ ಸಮಾಜವಾದ ವ್ಯಕ್ತಿಯನ್ನು ಆರ್ಥಿಕವಾಗಿ ಉತ್ತಮಪಡಿಸುವುದರ ಜೊತೆಗೆ ಆತನ ಅಂತರಂಗದ ಶಕ್ತಿಗಳ ಮುಕ್ತ ವಿಕಾಸಕ್ಕೂ ಕಾರಣವಾಗುವಂತಿರಬೇಕು. ಅದಕ್ಕೆ ತಡೆಯುಂಟು ಮಾಡುವ ಆರ್ಥಿಕ, ಸಾಮಾಜಿಕ, ಧಾರ್ಮಿಕ ಧೋರಣೆಯ ಮಾಧ್ಯಮಗಳನ್ನು ಯಾವುದೇ ಮುಲಾಜಿಲ್ಲದೆ ಬುಡಸಮೇತ ಕಿತ್ತೊಗೆಯಬೇಕು. ಸಾಮಾಜಿಕ ಸಂಬಂಧಗಳು, ಸಂಪ್ರದಾಯ ಆಚರಣೆಗಳು, ನಡೆ-ನುಡಿಗಳು, ರಾಜಕೀಯ ವ್ಯವಸ್ಥೆಗಳು, ಶಿಕ್ಷಣ, ಸಾಮಾಜಿಕ ಸಂಘ ಸಂಸ್ಥೆಗಳು, ಜಾತಿಯತೆ, ಧಾರ್ಮಿಕ ಸಂಪ್ರದಾಯಗಳು, ಮದುವೆ ಇತ್ಯಾದಿ ಸಮಾರಂಭಗಳು, ಹಬ್ಬ ಹರಿದಿನಗಳಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕು ಇದು ನಮ್ಮ ಸಮಾಜದ ಸಂಪ್ರದಾಯದ ಹೆಬ್ಬಂಡೆ ಇದ್ದಂತೆ. ಸಮಾಜದ ಜನರಲ್ಲಿ ಜಾಗೃತಿ ಮೂಡಿಸುವ ಮುಖಾಂತರ ಅವರ ಆಲೋಚನೆಗಳನ್ನು ಬದಲಾಯಿಸಬೇಕು. ಇದು ಹಿಂಸೆಯಿಂದಾಗಲೀ ಅಥವಾ ಯಾವುದೇ ಕಾನೂನಿನಿಂದಾಗಲಿ ಆಗಲಾರದು. ಬಹುಮಟ್ಟಿಗೆ ಮಾನಸಿಕ ಪರಿವರ್ತನೆಯಿಂದ ಆಗುವಂತಹದ್ದು. ಇದನ್ನು ಸಾಧಿಸಲು ರಚನಾತ್ಮಕ ಕಾರ್ಯಕರ್ತರ ಒಂದು ದೊಡ್ಡ ದಂಡೇ ನಿರ್ಮಾಣವಾಗಬೇಕು ಎಂದು ಗೋಪಾಲಗೌಡರು ಹೇಳಿದ್ದರು.

ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು ಎಂಬ ಮಾತಿದೆ. ಅಂದರೆ ಇಂದಿನ ಮಕ್ಕಳನ್ನು ನಾಳಿನ ದೇಶದ ಪ್ರಜೆಗಳನ್ನಾಗಿ ರೂಪಿಸುವುದು ಶಿಕ್ಷಣ ವ್ಯವಸ್ಥೆ. ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಕಡೆ

ಶಿಕ್ಷಕರು, ಮತ್ತೊಂದು ಕಡೆ ಕಲಿಯುವ ಮಕ್ಕಳು ಮಗದೊಂದು ಕಡೆ ಕಲಿಕೆಯ ಪಠ್ಯ ಸಾಮಗ್ರಿ ಇವು ಮೂರು ಮುಖ್ಯ ಅಂಗಗಳು. ಈ ಮೂರರಲ್ಲಿ ಯಾವುದಾದರೊಂದು ಊನವಾದರೆ ಇಡೀ ಶಿಕ್ಷಣ ವ್ಯವಸ್ಥೆಯ ಉದ್ದೇಶ ಮತ್ತು ಗುರಿ ಈಡೇರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದನದಲ್ಲಿ ಗೋಪಾಲಗೌಡರು ಪಠ್ಯಪುಸ್ತಕಗಳನ್ನು ಕುರಿತು ಈ ಮುಂದಿನಂತೆ ಮಾತನಾಡಿದ್ದಾರೆ. ಪಠ್ಯ ಪುಸ್ತಕಗಳ ವಿಷಯದಲ್ಲಿ ಬಹುಶಃ ದೇಶದ ಎಲ್ಲಾ ಜವಾಬ್ದಾರಿ ಜನರೂ ಕೆಲವು ವೇಳೆ ಆ ವಿವೇಚನೆಗೆ ತುತ್ತಾಗಿದ್ದಾರೆಂದು ಅನಿಸುತ್ತದೆ. ಪಠ್ಯಪುಸ್ತಕಗಳ ರಚನೆಯಲ್ಲಿ ಅಕ್ರಮವು ನಡೆಯುತ್ತಿದೆ ಎಂದು ವ್ಯಸನದಿಂದ ಹೇಳಬೇಕಾಗಿದೆ. ಇದನ್ನು ಕಡಿಮೆ ಮಾಡಬೇಕು, ಪಠ್ಯಪುಸ್ತಕಗಳ ರಾಷ್ಟ್ರೀಕರಣ ಮಾಡುವುದಾಗಿ ಹೇಳುತ್ತೀರಿ. ಜನಜೀವನ ಉತ್ತಮಗೊಳಿಸುವುದಕ್ಕೆ ದೋಷರಹಿತ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಜಗತ್ತಿಗೆ, ಸಮಾಜಕ್ಕೆ ದೊಡ್ಡ ಅಪಾಯ. ತಮಗೆ ಬೇಕಾದ ಕೆಲವರಿಂದ ಪುಸ್ತಕಗಳನ್ನು ಬರೆಸಿ, ಅವರಿಗೆ ಉಪಕಾರ ಮಾಡಿ ಹತ್ತಾರು ಸಾವಿರ ಮಕ್ಕಳಿಗೆ ಹಂಚಿ ಓದಬೇಕೆಂದು ಹೇಳಿದರೆ, ಅವು ಸರಿಯಾಗಿಲ್ಲದಿದ್ದರೆ ಚಳವಳಿಯನ್ನು ಅದರ ವಿರುದ್ಧ ಮಾಡಬೇಕಾಗುತ್ತದೆ. ಆದುದರಿಂದ ವಿದ್ಯಾ ಸಚಿವರು ಇದನ್ನು ಚೆನ್ನಾಗಿ ಗಮನಿಸಬೇಕು. ನುರಿತ ಪಂಡಿತರು, ಜ್ಞಾನಿಗಳು ಅನೇಕರಿದ್ದಾರೆ. ಸಮಾಜ ಜೀವನದಲ್ಲಿ ಆಸಕ್ತಿಯಿರುವವರಿದ್ದಾರೆ, ಮಕ್ಕಳ ವಿಚಾರದಲ್ಲಿ ಮಮತೆಯುಳ್ಳವರಿದ್ದಾರೆ. ಅವರಿಗೆ ಸಂಬಳ, ಭತ್ಯೆ ಕೊಡಬೇಕಾಗಿಲ್ಲ. ಅವರನ್ನು ಕೇಳಿ ಮರ್ಯಾದೆಯಿಂದ ಅವರೊಂದಿಗೆ ಮಾತನಾಡಿ ವ್ಯವಸ್ಥೆ ಮಾಡಿದರೆ ಎಷ್ಟೋ ಒಳ್ಳೆಯದು.

ಪಠ್ಯಪುಸ್ತಕಗಳ ಪರಿಷ್ಕರಣ ಮಾಡುವಾಗ ಒಂದು ಗೊತ್ತಾದ ಕಾರ್ಯಕ್ರಮವನ್ನು ಅನುಸರಿಸಿಕೊಂಡು ಬರಬೇಕು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಇವತ್ತು ಇರತಕ್ಕಂತಹ ಲೋಪದೋಷಗಳನ್ನು, ಕುಂದುಕೊರತೆಗಳನ್ನು ತಾವು ಹೋಗಲಾಡಿಸಿ, ತಮ್ಮ ಆಡಳಿತವನ್ನು ಸರಿಪಡಿಸಿಕೊಳ್ಳಿ ಎಂದು ಹೇಳಿ, ಉಪಾಧ್ಯಾಯರ ಸಂಬಳ ಸಾರಿಗೆಗೆ ವಿಷಯದಲ್ಲಿ ಅವರ ಸೌಲಭ್ಯಗಳನ್ನು ಹೆಚ್ಚಿಸುವ ವಿಷಯದಲ್ಲಿ ಸರ್ಕಾರ ತೀವ್ರ ಗಮನಕೊಡಬೇಕು. ಅವರ ಕೊರತೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು[೩೧] ಎಂದು ಜವಾಬ್ದಾರಿಯುತ ಪ್ರಜೆಗಳನ್ನು ರೂಪಿಸಬೇಕಾದ ಸರ್ಕಾರದ ಮುಖ ಕರ್ತವ್ಯದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿದ್ದಾರೆ.

ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಮೇಲೆ ಕೂಡಾ ಶಾಂತವೇರಿ ಗೋಪಾಲಗೌಡರ ಪ್ರಭಾವ ಪರೋಕ್ಷ ವಿಧಾನದಲ್ಲಿ ಆಗಿದೆ ಎಂಬುದನ್ನು ವಿವರಿಸಬಹುದು. ಅದು ಹೇಗೆ ಎಂದರೆ, ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಮುಖ್ಯವಾಗಿ ಭೂ ಹೋರಾಟಗಳನ್ನು ನಡೆಸಿದೆ. ಭೂ ಮಾಲೀಕರು ದಲಿತರ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡುವುದರ ಮೂಲಕ ದಲಿತರ ಜಮೀನುಗಳನ್ನು ಕಬಳಿಸಿಕೊಂಡಿದ್ದರು. ಇಂತಹ ಜಮೀನನ್ನು ತಿರುಗಿ ದಲಿತರಿಗೆ ಕೊಡಿಸಲು ಕರ್ನಾಟಕ ದಲಿತ ಸಂಘರ್ಷ ಸಮಿತಿಯು ರಾಜ್ಯದಾದ್ಯಂತ ಹಲವಾರು ಹೋರಾಟಗಳನ್ನು ನಡೆಸಿದೆ. ವಿಶೇಷವೆಂದರೆ ಇಂತಹ ಹೋರಾಟಗಳಿಗೆ ಅನೇಕ ಕಡೆಗಳಲ್ಲಿ ರೈತ ಸಂಘವು ಬೆಂಬಲಿಸಿತ್ತು.

ರೈತ ಸಂಘದ ಬಗ್ಗೆ ಸಹಾನುಭೂತಿಯುಳ್ಳ ಬುದ್ಧಿಜೀವಿಗಳು ದಲಿತ ಸಂಘರ್ಷ ಸಮಿತಿಯ ಇಂತಹ ಹೋರಾಟಗಳನ್ನು ಬೆಂಬಲಿಸಿದ್ದಾರೆ. ಜೊತೆಗೆ ಕಾನೂನಾತ್ಮಕ ಹೋರಾಟಗಳ ಸಂದರ್ಭದಲ್ಲಿ ರೈತ ಸಂಘದ ಸಹಾನುಭೂತಿಯುಳ್ಳ ವಕೀಲರುಗಳು ಇದಕ್ಕೆ ವಕಾಲತ್ತು ವಹಿಸಿದ್ದರು. ಈ ಬಗೆಯ ದಲಿತೇತರ ವಲಯದ ಬೆಂಬಲವು ಕರ್ನಾಟಕ ದಲಿತ ಸಂಘರ್ಷ ಸಮಿತಿಗೆ ದೊಡ್ಡ ಶಕ್ತಿಯನ್ನು ತಂದುಕೊಟ್ಟಿತ್ತು. ರೈತ ಸಂಘವು ದಲಿತ ಸಂಘರ್ಷ ಸಮಿತಿಗೆ ನೆರವು ನೀಡುವುದು ಎಂದರೆ ಅದು ಪರೋಕ್ಷವಾಗಿ ಶಾಂತವೇರಿ ಗೋಪಾಲಗೌಡರ ಪ್ರಭಾವದ ಒಂದು ಮುಖ್ಯ ನೆಲೆ ಎಂದೇ ಭಾವಿಸಬಹುದಾಗಿತ್ತು. ಕೆ.ಟಿ. ಶಿವಪ್ರಸಾದ್, ಪೂರ್ಣಚಂದ್ರ ತೇಜಸ್ವಿ, ಕಾಳೇಗೌಡ ನಾಗವಾರ, ದೇವನೂರ ಮಹಾದೇವ ಮುಂತಾದವರು ಒಂದು ಕಡೆ ರೈತ ಸಂಘದ ಬೆಂಬಲಿಗರೂ ಮತ್ತೊಂದು ಕಡೆ ದಲಿತ ಸಂಘರ್ಷ ಸಮಿತಿಯ ಬೆಂಬಲಿಗರೂ ಆಗಿದ್ದಾರೆ. ಆ ಮೂಲಕ ರೈತ ಸಂಘದ ಬೆಂಬಲವು ದಲಿತ ಸಂಘಕ್ಕೂ ಮತ್ತು ದಲಿತ ಸಂಘದ ಬೆಂಬಲವು ರೈತ ಸಂಘಕ್ಕೂ ಆಗಿದೆ. ಇದು ಇಂದಿಗೂ ಒಂದು ಮಟ್ಟಿಗಾದರೂ ಮುಂದುವರೆಯುತ್ತಿರುವುದನ್ನು ಗಮನಿಸಬಹುದು. ಇದರ ಅರ್ಥ ಇವು ಒಂದರಿಂದ ಒಂದು ಪ್ರಭಾವವನ್ನೂ ಸಹ ಪಡೆದಿವೆ ಎನ್ನಬಹುದು.

ಗೋಪಾಲಗೌಡರು ಕರ್ನಾಟಕದ ಸಾಮಾಜಿಕ ಚರಿತ್ರೆಯ ಹೋರಾಟಗಾರರು. ಅವರು ಕರ್ನಾಟಕದ ರಾಜಕೀಯ ಚರಿತ್ರೆಯ ಹೋರಾಟಗಾರರಾಗಿದ್ದರಲ್ಲದೆ ಜೊತೆಗೆ ಅವರು ಭಾಷೆ, ಶಿಕ್ಷಣ, ಸಾಹಿತ್ಯ ಮುಂತಾದುವುಗಳ ಬಗೆಗೆ ಆಲೋಚನೆ ಮಾಡಿರುವುದರಿಂದ ಅವರು ನಾಡಿನ ಸಾಂಸ್ಕೃತಿಕ ಚರಿತ್ರೆಯ ಪ್ರಭಾವದ ವ್ಯಕ್ತಿತ್ವವುಳ್ಳವರಾಗಿದ್ದರು. ಇಂತಹ ಬಹುಮುಖೀ ವ್ಯಕ್ತಿತ್ವವುಳ್ಳ ಗೋಪಾಲಗೌಡರ ಪ್ರಭಾವವು ಕರ್ನಾಟಕದ ಪ್ರಗತಿಪರ ಚಳವಳಿಗಳ ಮೇಲೆ ಸಹಜವಾಗಿ ಆಗಿದೆ.

೪.೫. ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ

ಆಧುನಿಕ ಕನ್ನಡ ಸಾಹಿತ್ಯವು ಅನೇಕ ರೀತಿಯ ಪ್ರೇರಣೆ-ಪ್ರಭಾವಗಳನ್ನು ಪಡೆದು ಬೆಳೆದಿದೆ. ಪಾಶ್ಚಾತ್ಯ ರೊಮ್ಯಾಂಟಿಕ್ ಸಾಹಿತ್ಯ, ರಷ್ಯಾದ ಸಮಾಜವಾದಿ ಸಾಹಿತ್ಯ, ಮಾರ್ಕ್ಸ್ ವಿಚಾರಧಾರೆ, ಎಲಿಯೆಟ್, ಯೂಂಗ್, ಫ್ರಾಯ್ಡ್, ಪೆರಿಯಾರ್ ಚಿಂತನೆಗಳು, ಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರಭಾವ, ರಾಮಮನೋಹರ ಲೋಹಿಯಾ ಪ್ರಭಾವ, ಮಹಾತ್ಮಾ ಗಾಂಧಿ ಅವರ ಪ್ರಭಾವ ಹೀಗೆ ಆಧುನಿಕ ಕನ್ನಡ ಸಾಹಿತ್ಯವು ಒಂದಿಲ್ಲೊಂದು ಪ್ರಭಾವವನ್ನು ಪಡೆದು ಬೆಳೆದು ಬಂದಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕನ್ನಡ ಸಾಹಿತ್ಯದ ಮೇಲೆ ಕರ್ನಾಟಕದ ಸಮಾಜವಾದಿ ಚಳವಳಿಯ ಪ್ರಭಾವ ಆಗಿರುವುದನ್ನು ಅವಲೋಕನ ಮಾಡಬಹುದು.

ಸಾಹಿತ್ಯದ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ ಆಗಿರುವುದನ್ನು ಮುಖ್ಯವಾಗಿ ನಾಲ್ಕು ರೀತಿಯಲ್ಲಿ ಗುರುತಿಸಬಹುದು. **ಒಂದು: ಲೇಖಕರ ಮೇಲೆ, ಎರಡು: ಸಾಹಿತ್ಯದ ವಸ್ತುವಿನ ಮೇಲೆ, ಮೂರು: ಸಾಹಿತ್ಯದ ಆಶಯದ ಮೇಲೆ, ನಾಲ್ಕು: ಸಾಹಿತ್ಯ ವಿಮರ್ಶೆಯ ಮೇಲೆ.**

ಲೇಖಕರ ಮೇಲೆ

ಲೇಖಕರ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ ಆಗಿರುವುದಕ್ಕೆ ಜಾಗತಿಕ ಸಾಹಿತ್ಯದಲ್ಲಿ ಮತ್ತು ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಸಾಹಿತ್ಯ ಕೃತಿಯು ನಿರ್ವಾತದಲ್ಲಿ ಸೃಷ್ಟಿ ಆಗುವುದಿಲ್ಲ. ಅದು ಚರಿತ್ರೆಯ ಒಂದು ಸಂದರ್ಭದಲ್ಲಿ ಸೃಷ್ಟಿಯಾಗುತ್ತದೆ. ಅದನ್ನು ಬರೆಯುವ ಲೇಖಕನು ತನ್ನ ಕಾಲದ ಸಂಘರ್ಷಗಳ ಮತ್ತು ವೈರುಧ್ಯಗಳ ಕೂಸು ಆಗಿರುತ್ತಾನೆ. ಅಥವಾ ಹಲವು ಬಗೆಯ ಸಂಘರ್ಷಗಳು, ಹಲವು ಬಗೆಯ ವೈರುಧ್ಯಗಳು ಬರಹಗಾರನ ಮನೋಧರ್ಮವನ್ನು ಪ್ರಭಾವಿಸುತ್ತವೆ. ಚರಿತ್ರೆಯಲ್ಲಿ ಒಂದಿಲ್ಲೊಂದು ಬಗೆಯ ತಾಕಲಾಟಗಳು, ಸಂಘರ್ಷಗಳು, ವೈರುಧ್ಯಗಳು ನಡೆದೇ ಇರುತ್ತವೆ. ಇವು ಲೇಖಕರ ಆಯ್ಕೆಯನ್ನೂ ಮೀರಿ ಅವರ ಆಲೋಚನೆಗಳನ್ನು, ಧೋರಣೆಗಳನ್ನು ಪ್ರಭಾವಿಸುತ್ತವೆ. ಇಂತಹ ಪ್ರಭಾವಗಳಿಂದ ಯಾವ ಲೇಖಕರೂ ತಪ್ಪಿಸಿಕೊಳ್ಳಲು ಆಗುವುದಿಲ್ಲ.

ಭಾರತದ ಮತ್ತು ಕರ್ನಾಟಕದ ಸಮಾಜವಾದಿ ಚಳವಳಿಗಳು ಕನ್ನಡದ ಬರಹಗಾರರ ವೈಚಾರಿಕತೆಯ ಮೇಲೆ ತಮ್ಮದೇ ಆದ ಪ್ರಭಾವಗಳನ್ನು ಬೀರಿವೆ. ಬಹಳ ಮುಖ್ಯವಾಗಿ ಕನ್ನಡದ ಪ್ರಗತಿಶೀಲ ಸಾಹಿತ್ಯದ ಬರಹಗಾರರ ಮೇಲೆ ಮತ್ತು ದಲಿತ-ಬಂಡಾಯದ ಲೇಖಕರ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ ಆಗಿರುವುದನ್ನು ಗಮನಿಸಬಹುದು. ಕನ್ನಡದ ಪ್ರಗತಿಶೀಲ ಸಾಹಿತಿಗಳು ಮತ್ತು ದಲಿತ-ಬಂಡಾಯದ ಬರಹಗಾರರು, "ಸಾಹಿತ್ಯಕ್ಕಾಗಿ ಸಾಹಿತ್ಯ ಅಲ್ಲ, ಬದುಕಿಗಾಗಿ ಸಾಹಿತ್ಯ, ಸಾಮಾಜಿಕ ಬದಲಾವಣೆಗಾಗಿ ಸಾಹಿತ್ಯ" ಎಂದೂ; "ಕಲೆಗಾಗಿ ಕಲೆ ಅಲ್ಲ, ಬದುಕಿಗಾಗಿ ಕಲೆ, ಸಾಮಾಜಿಕ ಬದಲಾವಣೆಗಾಗಿ ಕಲೆ" ಎಂದೂ ಘೋಷಿಸಿಕೊಂಡರು. ಅದಕ್ಕೆ ಅನುಗುಣವಾದ ಸಾಹಿತ್ಯ ವಸ್ತುವನ್ನು ಅವರು ನಿರ್ಮಾಣ ಮಾಡಿದರು. ಈ ಘೋಷಣೆಯ ಮೂಲಕ ಸಾಹಿತಿಗಳಿಗೆ ಸಾಮಾಜಿಕ ಬದ್ಧತೆ ಇರಬೇಕು ಎಂದೂ, ಸಾಮಾಜಿಕ ಅನ್ಯಾಯ, ಅಸಮಾನತೆ ಹಾಗೂ ಶೋಷಣೆಗಳನ್ನು ಸಾಹಿತ್ಯ ಕೃತಿಗಳಲ್ಲಿ ಸಮರ್ಥನೆ ಮಾಡಿ ಬರೆಯಬಾರದು ಎಂದೂ, ಇವೆಲ್ಲವನ್ನೂ ಸಾಹಿತ್ಯ ಕೃತಿಗಳಲ್ಲಿ ಖಚಿತವಾಗಿ ಮತ್ತು ಸ್ಪಷ್ಟವಾಗಿ ವಿರೋಧಿಸಬೇಕು ಎಂದೂ ತೀರ್ಮಾನ ಮಾಡಿದರು. ಇದರ ಮುಂದುವರಿಕೆಯಾಗಿ ರಚನೆ ಮಾಡುವ ಸಾಹಿತ್ಯ ಕೃತಿಗಳಲ್ಲಿ ಶೋಷಿತರ, ಅಪಮಾನಿತರ, ಅಂಚಿನ ಸಮುದಾಯದವರ, ಅಸಹಾಯಕರ, ನೊಂದವರ, ಮಹಿಳೆಯರ ಸಕಲ ಸಂಕಟಗಳು, ಸಮಸ್ಯೆಗಳು ಹಾಗೂ ಇವುಗಳ ಪರಿಹಾರದ ಸಾಧ್ಯತೆಗಳನ್ನು ಸಾಹಿತ್ಯ ಕೃತಿಗಳು ಒಳಗೊಂಡಿರಬೇಕು ಎಂಬ ಧೋರಣೆ ಈ ಸಾಹಿತಿಗಳದು. ಹಾಗಾಗಿ ಈ ಬಗೆಯ ಸಾಹಿತಿಗಳು ಸಮಾಜವಾದಿ ಚಿಂತನೆಗಳನ್ನು, ಆಲೋಚನೆಗಳನ್ನು ಮತ್ತು ಮನೋಧರ್ಮವನ್ನು ಸರಿಯಾಗಿ ಅಧ್ಯಯನ ಮಾಡಿರಬೇಕೆಂದೂ, ಈ ಬಗೆಯ ಅಧ್ಯಯನ ಇಲ್ಲದಿದ್ದರೆ ಸಮಾಜವನ್ನು, ಅದರ ಅನ್ಯಾಯ, ಅಸಮಾನತೆ ಹಾಗೂ ಶೋಷಣೆಯ ನೆಲೆಗಳನ್ನು ಸರಿಯಾಗಿ ಗ್ರಹಿಸುವುದರ ಬದಲು ತಪ್ಪಾಗಿ ಗ್ರಹಿಸುವಂತಹ ತಾತ್ವಿಕ ಮಿತಿ ಬರುತ್ತದೆ ಎಂದೂ ಇವರು ಒಪ್ಪಿಕೊಂಡರು. ಅಂದರೆ ಲೇಖಕರ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ ಎಂದರೆ ಸಮಾಜವಾದಿ ಆಶಯಗಳನ್ನು,

ಸಿದ್ಧಾಂತಗಳನ್ನು ಸಾಹಿತ್ಯವನ್ನು ರಚನೆ ಮಾಡುವ ಲೇಖಕರು ಸರಿಯಾಗಿ ಅಧ್ಯಯನ ಮಾಡಿ ತಿಳಿದುಕೊಂಡಿರಬೇಕು ಎಂಬುದು ಇಲ್ಲಿಯ ಮುಖ್ಯವಾದ ಧೋರಣೆ. ಲೋಹಿಯಾ ಅವರಿಂದ ಕನ್ನಡದ ಅನೇಕ ಸಾಹಿತಿಗಳು ಪ್ರಭಾವಗೊಂಡರು. ಆಧುನಿಕ ಕರ್ನಾಟಕವನ್ನು ಸರ್ವಾಂಗೀಣ ನೆಲೆಗಳಲ್ಲಿ ಪ್ರಭಾವಿಸಿದ ಚಿಂತಕರಲ್ಲಿ ಲೋಹಿಯಾ ಪ್ರಮುಖರು. ಸಹಜವಾಗಿ ಇವರ ಸಮಾಜವಾದಿ ಚಿಂತನೆಗಳು ಕನ್ನಡ ಸಾಹಿತ್ಯದಲ್ಲೂ ಸದ್ದು ಮಾಡಿರುವುದು ಸಹಜ. ಇವರ ಚಿಂತನೆಗಳಿಂದ ಪ್ರಭಾವಿತರಾದ ಸಮಾಜವಾದಿ ಸಾಹಿತಿಗಳು ಲೋಹಿಯಾ ಸಮಾಜವಾದವನ್ನು ತಮ್ಮ ಕ್ಷೇತ್ರದಲ್ಲಿ ಸೃಜನಶೀಲವಾಗಿ ಅನ್ವಯ ಮಾಡಿಕೊಂಡಿದ್ದಾರೆ. ಅವರಲ್ಲಿ ಪ್ರಮುಖರಾದವರು ಪೂರ್ಣಚಂದ್ರ ತೇಜಸ್ವಿ, ದೇವನೂರು ಮಹಾದೇವ, ಕೆ.ವಿ. ಸುಬ್ಬಣ್ಣ, ನಾ.ಡಿಸೋಜ, ಆಲನಹಳ್ಳಿ ಕೃಷ್ಣ, ಯು.ಆರ್. ಅನಂತಮೂರ್ತಿ, ಚಂದ್ರಶೇಖರ ಪಾಟೀಲ್, ಕಾಳೇಗೌಡ ನಾಗವಾರ, ಡಿ.ಎಸ್. ನಾಗಭೂಷಣ, ಪಿ.ಲಂಕೇಶ್, ಬರಗೂರು ರಾಮಚಂದ್ರಪ್ಪ ಮುಂತಾದವರು.[೨] ಹೀಗೆ ಕನ್ನಡದ ಪ್ರಸಿದ್ಧ ಸಾಹಿತಿಗಳು ಸಮಾಜವಾದದ ಪ್ರಭಾವಕ್ಕೆ ಒಳಗಾಗಿರುವುದನ್ನು ಕಾಣುತ್ತೇವೆ.

ಸಾಹಿತ್ಯದ ವಸ್ತುವಿನ ಮೇಲೆ

ಸಾಹಿತ್ಯದ ವಸ್ತುವಿನ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ ಆಗುವುದು ಎಂದರೆ ಸಾಹಿತ್ಯವು ತನ್ನ ವಸ್ತುವನ್ನು ಸಮಾಜವಾದಿ ಆಶಯಕ್ಕೆ ಅನುಗುಣವಾಗಿ ಆಯ್ಕೆಮಾಡಿಕೊಳ್ಳುವುದು ಇರಬಹುದು. ಕರ್ನಾಟಕದಲ್ಲಿ ಸಮಾಜವಾದಿ ಚಳವಳಿ ನಡೆದ ಭಾಗದಲ್ಲಿ ಆ ಚಳವಳಿಯು ಉಂಟುಮಾಡಿರುವ ಪರಿಣಾಮಗಳನ್ನು ಕುರಿತ ವಸ್ತು ಇರಬಹುದು. ಸಮಾಜವಾದಿ ಚಳವಳಿಯಲ್ಲಿ ಭಾಗವಹಿಸಿದ ನಾಯಕರ ಜೀವನ, ಬದುಕು ಇತ್ಯಾದಿ ವಿವರಗಳನ್ನು ಕುರಿತ ವಸ್ತು ಇರಬಹುದು. ಸಮಾಜವಾದಿ ಚಳವಳಿಯೊಂದರ ಅಗತ್ಯವನ್ನು ಒತ್ತಿ ಹೇಳುವಂತಹ ವಸ್ತುವಿನ ಆಯ್ಕೆ ಇರಬಹುದು. ಕನ್ನಡದಲ್ಲಿ ಪ್ರಗತಿಶೀಲ ಚಳವಳಿಯ ಸಾಹಿತ್ಯ ಕೃತಿಗಳು ಪ್ರಧಾನವಾಗಿ ತಮ್ಮ ವಸ್ತುವಿನ ಆಯ್ಕೆಯಲ್ಲೆ ಸಮಾಜವಾದಿ ಚಳವಳಿಯ ಕೇಂದ್ರವನ್ನು ಹೊಂದಿದ್ದವು. ಇದರ ಮುಂದುವರಿಕೆಯಾಗಿ ದಲಿತ-ಬಂಡಾಯದ ಹಲವು ಸಾಹಿತ್ಯ ಕೃತಿಗಳು ಘೋಷಿತ ರೂಪದಲ್ಲಿ ಸಮಾಜವಾದಿ ಚಳವಳಿಯ ಪ್ರಭಾವದಿಂದಲೇ ತಮ್ಮ ಸಾಹಿತ್ಯಕ ವಸ್ತುವನ್ನು ನಿರ್ಮಾಣ ಮಾಡಿಕೊಂಡಿವೆ. ಮಾದರಿಗಾಗಿ ಮೂಡ್ನಾಕೂಡು ಚಿನ್ನಸ್ವಾಮಿಯವರ ಕವನದ ವಿಷಯವಸ್ತುವನ್ನು ಈ ಮುಂದಿನಂತೆ ಕಾಣುತ್ತೇವೆ. ಸಮಕಾಲೀನ ಸಮಾಜದಲ್ಲಿ ದಲಿತರ ಬಗೆಗೆ ಪ್ರಚಲಿತವಿರುವ ತಾರತಮ್ಯವನ್ನು ಕಂಡು ನೋವಿನಿಂದ ಕವಿ ಮೂಡ್ನಾಕೂಡು ಚಿನ್ನಸ್ವಾಮಿ 'ನಾನೊಂದು ಮರವಾಗಿದ್ದರೆ' ಎಂಬ ಕವನದ ಮೂಲಕ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ದಲಿತರು ಉಂಡ ನೋವನ್ನು ಸರಳವಾಗಿಸದೆ ಸಂಕೀರ್ಣವಾಗಿ ಪ್ರತಿಕ್ರಿಯಿಸುವ ಬಗೆಯೇ ಈ ಕವನದ ವೈಶಿಷ್ಟ್ಯ. ಮನುಕುಲದ ವ್ಯತ್ಯಾಸದಿಂದ ರೋಸಿದ ಕವಿಯು ಮನುಷ್ಯನಾಗಿ ಹುಟ್ಟುವುದಕ್ಕಿಂತ ಮರವಾಗಿ ಹುಟ್ಟುವುದು ಲೇಸು ಎಂದುಕೊಳ್ಳುತ್ತಾರೆ. ಕವಿಯ ಪ್ರಕಾರ ಮರಗಳು ಮನುಷ್ಯರಿಗಿಂತ ಹೆಚ್ಚು ಪ್ರಯೋಜನಕಾರಿ. ನಿಸ್ವಾರ್ಥದಿಂದ ಮರಗಳು ಮನುಷ್ಯನಿಗಿಂತ

ಹೆಚ್ಚು ಮಾನವೀಯ ಮೌಲ್ಯಗಳುಳ್ಳವು.[33] ಈ ಹಿನ್ನೆಲೆಯಲ್ಲಿ ಕವಿಯು ಎಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು ಎಂಬ ಆಶಾವಾದವನ್ನು ಹೊಂದಿದ್ದಾರೆ.

ಕನ್ನಡದಲ್ಲಿ ಸಾಕಷ್ಟು ಸಂಚಲನವನ್ನು ಉಂಟು ಮಾಡಿದ ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿ ಲೋಹಿಯಾವಾದದ ಪಡಿಯಚ್ಚಿನಲ್ಲಿ ಮೂಡಿರುವುದಕ್ಕೆ ಸಾಕ್ಷಿಯಾಗಿದೆ. ಜಾತಿಯ ಸಮಸ್ಯೆಯನ್ನು ಗಂಭೀರವಾಗಿ ಚರ್ಚಿಸುವ ಕಾದಂಬರಿ ಮಡಿವಂತಿಕೆಯ ಮನಸ್ಸುಗಳಿಗೆ ಆಘಾತವನ್ನು ಉಂಟುಮಾಡಿದೆ. ಇದು ಮುಂದೆ ಚಲನಚಿತ್ರವಾಗಿಯೂ ಯಶಸ್ಸು ಕಂಡಿತು. ಇನ್ನೊಂದು ಉದಾಹರಣೆಯನ್ನು ನೋಡುವುದಾದರೆ ದೇವನೂರು ಮಹಾದೇವ ಅವರ 'ಒಡಲಾಳ' ಕೃತಿಯಾಗಿದೆ. ಸಾಕವ್ವ ಬಡತನದಲ್ಲಿ ಬದುಕನ್ನು ಸಾಗಿಸುತ್ತಿರುವಂಥವಳು. ಒಮ್ಮೆ ಕೋಳಿ ಕಳೆದು ಹೋಗಿ ಪರದಾಡುತ್ತಾಳೆ. ಬಡವರ ಸ್ವಾಭಿಮಾನ ಉಳ್ಳವರ ಕಾಲಡಿ ನಲುಗುವುದನ್ನು ಲೇಖಕರು 'ಕೋಳಿ ಕಳುವಿನ' ಸಂಕೇತದಲ್ಲಿ ತೋರಿಸುತ್ತಾರೆ. ಆದಾಗ್ಯೂ ಶ್ರೀಮಂತರು ಮತ್ತು ಅವರ ಪರವಾದ ವ್ಯವಸ್ಥೆಗೆ ಬಲಿಯಾದವಳಂತೆ ಕಂಡರೂ ಬತ್ತದ ಜೀವನೋತ್ಸಾಹದಲ್ಲಿ ಸಾಕವ್ವ ಮಿಂಚುತ್ತಾಳೆ. ಇನ್ನು ಶಿವರಾಮ ಕಾರಂತರ 'ಚೋಮನ ದುಡಿ'ಯ ವಸ್ತು ಭೂಮಿಯ ಪ್ರಶ್ನೆಯದ್ದಾಗಿದೆ. ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟ ಮಾದರಿಯ ಕೃತಿ ಎನ್ನುವಂತೆ 'ಚೋಮನ ದುಡಿ' ರಚನೆಯಾಗಿದೆ. ಭೂಮಾಲೀಕ ಮತ್ತು ಜೀತಗಾರ ಚೋಮನ ನಡುವಿನ ಶೀತಲ ಸಂಘರ್ಷವನ್ನು ಕೃತಿ ಕಟ್ಟಿಕೊಡುತ್ತದೆ. ತೇಜಸ್ವಿಯರ 'ಕಿರಗೂರಿನ ಗಯ್ಯಾಳಿಗಳು' ಒಂದು ವಿಶಿಷ್ಟವಾದ ಕೃತಿಯಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಎಂದಿಗೂ ಎರಡನೇ ದರ್ಜೆಯ ಪ್ರಜೆಯನ್ನಾಗಿಯೇ ಪರಿಗಣಿಸಲಾಗಿದೆ. ಬೇರೆ ಬೇರೆ ಜಾತಿಗಳಿಗೆ ಸೇರಿದ ಹೆಣ್ಣು ಮಕ್ಕಳ 'ಶಕ್ತಿವಂತಿಕೆ'ಯ ಪ್ರದರ್ಶನ ಈ ಕಥೆಯಲ್ಲಿದೆ. ಇದಕ್ಕೆ ಎದುರಲ್ಲಿರುವ 'ಗಂಡಸು', ಪಾತ್ರಗಳು ನರಪೇತಲಗಳಾಗಿ ಕಾಣುತ್ತವೆ. ಹೆಣ್ಣಿನೊಳಗಿನ ಅದಮ್ಯ ಶಕ್ತಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಪರಂಪರಾಗತ ನಂಬಿಕೆಯನ್ನು ಹೊಡೆದು ಹಾಕಲಾಗಿದೆ.

ಸಾಹಿತ್ಯದ ವಸ್ತುವಿನ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವದ ಮತ್ತೊಂದು ಆಯಾಮವೆಂದರೆ, ಸಾಹಿತ್ಯ ಕೃತಿಯೊಂದರ ವಸ್ತು ಇಡಿಯಾಗಿ ಸಮಾಜವಾದಿ ಚಳವಳಿಯದ್ದೇ ಆಗಿರಬೇಕಿಲ್ಲ. ಸಾಹಿತ್ಯ ಕೃತಿಯೊಂದರ ಮುಖ್ಯ ಸನ್ನಿವೇಶವೊ, ಮುಖ್ಯ ಪಾತ್ರವೊಂದರ ಪರಿಣಾಮಕಾರಿ ಚಿತ್ರಣವೊ ಆಗಿರಬಹುದು. ಸಾಹಿತ್ಯವು ಸಮಾಜವಾದಿ ಚಳವಳಿಯಿಂದ ಈ ಬಗೆಯಲ್ಲೂ ಪ್ರಭಾವವನ್ನು ಪಡೆಯಬಲ್ಲದು.

ಸಾಹಿತ್ಯದ ಆಶಯದ ಮೇಲೆ

ಸಾಹಿತ್ಯದ ಆಶಯದ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ ಆಗುವುದು ಮತ್ತೊಂದು ಬಗೆಯದು. ಈ ರೀತಿಯ ಪ್ರಭಾವದಲ್ಲಿ ಸಾಹಿತ್ಯ ಕೃತಿಯ ವಸ್ತುವು ಸಮಾಜವಾದಿ ಚಳವಳಿಯಿಂದ ಪ್ರಭಾವ ಹೊಂದಿರಬೇಕು ಎಂದೇನಿಲ್ಲ. ಆದರೆ ಸಾಹಿತ್ಯದ ಆಶಯದಲ್ಲಿ ಸಮಾಜವಾದಿ ಚಳವಳಿಯ ಪ್ರಭಾವದ ಸ್ವರೂಪವು ಬೇರೆ ಬಗೆಯದು. ಸಾಹಿತ್ಯ ಕೃತಿಯಲ್ಲಿ ಮುಖ್ಯವಾದ ಒಂದು ಆಶಯ

ಇರಬಹುದು, ಅಥವಾ ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಆಶಯಗಳೂ ಇರಬಹುದು. ಇಂತಹ ಕಡೆಗಳಲ್ಲಿ ಸಾಹಿತ್ಯ ಕೃತಿಗಳು ನಿರ್ಮಾಣ ಮಾಡುವ ಆಶಯಗಳಲ್ಲಿ ಸಮಾಜವಾದಿ ಆಶಯಗಳು ಇರಬಹುದು. ಕುವೆಂಪು ಮತ್ತು ಕಾರಂತರ ಕೆಲವು ಮುಖ್ಯವಾದ ಕೃತಿಗಳು ಈ ರೀತಿಯವು. ಅವು ಸಮಾಜವಾದಿ ವಸ್ತುಗಳನ್ನು ಹೊಂದಿರುವುದಿಲ್ಲ, ಆದರೆ ಕೃತಿಗಳು ತಮ್ಮ ಹಲವು ಆಶಯಗಳಲ್ಲಿ ಸಮಾಜವಾದಿ ಆಶಯಗಳನ್ನು ಹೊಂದಿರುತ್ತವೆ. ನಾ ಡಿಸೋಜಾ ಅವರ 'ಕೊಳಗ' ಕಾದಂಬರಿಯ ವಸ್ತುವಿನ ಆಶಯವು ಸಮಾಜವಾದಿ ಚಿಂತನೆಗಳಿಂದ ಪ್ರಭಾವಿತಗೊಂಡು ರಚಿತಗೊಂಡಿದೆ. ಕೊಳಗ, ನೊಗ, ನೇಗಿಲುಗಳೇ ಮೂಲ ಕಾರಣವಾಗಿ ಕಾಗೋಡು ಹೋರಾಟ ಆರಂಭಗೊಂಡಿತು. ಇವುಗಳ ಹಿನ್ನೆಲೆಯಲ್ಲಿ ಭೂಮಾಲೀಕ, ಗೇಣಿದಾರರ ಹಲವು ಸಂಬಂಧಗಳು ತಳುಕು ಹಾಕಿಕೊಂಡಿವೆ. ವಾಸ್ತವವಾಗಿ ಈ ಕಾದಂಬರಿಯು ಕಾಗೋಡು ಹೋರಾಟಕ್ಕೆ ಕಾರಣವಾಗಿರಬಹುದಾದ ಅಂಶಗಳ ಕಡೆಗೆ ಗಮನಹರಿಸಿದೆ. ಈ ಕಾದಂಬರಿಯಲ್ಲಿ ಬರುವ ಗಣಪತಿಯೆಂಬ ವ್ಯಕ್ತಿಯು ಭೂಮಾಲೀಕರ ಶೋಷಣೆಯನ್ನು ಪ್ರತಿಭಟಿಸುವ ಧೋರಣೆಯಲ್ಲಿ ಶೋಷಿತರ ಪರವಾಗಿ ಮಾತನಾಡುತ್ತಾನೆ. ಗಣಪತಿ ಹೀಗೆಂದು ತಾಳ್ಮೆಯಿಂದಲೇ ಅವರೊಡನೆ ಮಾತಿಗೆ ತೊಡಗಿದ. ಇದು ನಿಮಗೆ, ಗೇಣಿದಾರರಿಗೆ ಸಂಬಂಧಪಟ್ಟ ವಿಷಯ ಹೌದು ಗೌಡರೆ. ಆದರೆ ನ್ಯಾಯ ನೀತಿ ಅಂತ ಇರುತ್ತೆ ನೋಡಿ. ಯಾರಿಗೋ ಅನ್ಯಾಯ ಆತು ಅಂದ್ರೆ ನೋಡಿಕೊಂಡು ಸುಮ್ನೆ ಇರೋದು ಸರಿಯಲ್ಲ ಅಲ್ವ? ಈಗ ಹಲವಾರು ವರ್ಷಗಳಿಂದ ನಿಮ್ ಜಮೀನು ಮಾಡಿಕೊಂಡು ಇದ್ದ ಬೀರನ್ನ ಏಕಾಏಕೀ ಹೊರಹಾಕಿದ್ರಲ್ಲ. ಅವನು ಆತನ ಕುಟುಂಬ ಎಲ್ಲಿಗೆ ಹೋಗಬೇಕು? ಏನ್ ಮಾಡಬೇಕು? ಯೋಚನೆ ಮಾಡಿದೀರ ನೀವು?[೩೪] ಎಂದು ಹೇಳುವ ಮಾತುಗಳು ಸಮಾಜವಾದದ ಹಿನ್ನೆಲೆಯ ಪ್ರಭಾವವನ್ನು ನೆನಪಿಸುವಂತಿವೆ.

ಸಾಹಿತ್ಯದ ಆಶಯಗಳು ಸಾಹಿತ್ಯದ ವಸ್ತುವಿನ ಅಭಿವ್ಯಕ್ತಿಯ ನೆಲೆಯಿಂದ, ಭಾಷಿಕ ನೆಲೆಯಿಂದ, ಸನ್ನಿವೇಶ ನಿರ್ಮಾಣದ ನೆಲೆಯಿಂದ, ಸಂಸ್ಕೃತಿಯನ್ನು ಸಾಹಿತ್ಯ ಕೃತಿಯಲ್ಲಿ ಸೃಷ್ಟಿಸುವುದರ ನೆಲೆಯಿಂದ, ಪಾತ್ರ ನಿರ್ಮಾಣದ ಮೇಲೆ ಇವು ನಿರ್ಮಾಣವಾಗಬಹುದು.

ಸಾಹಿತ್ಯ ವಿಮರ್ಶೆಯ ಮೇಲೆ

ಸಮಾಜವಾದಿ ಚಳವಳಿಯ ಪ್ರಭಾವವು ಸಾಹಿತ್ಯವನ್ನು ಬರೆಯುವ ಸಾಹಿತಿಗಳ ಮೇಲೆ ಆಗಬಹುದು, ಸಾಹಿತ್ಯ ರಚನೆಯ ವಸ್ತುವಿನ ಮೇಲೆ ಆಗಬಹುದು, ಸಾಹಿತ್ಯದ ಆಶಯದ ಮೇಲೆ ಆಗಬಹುದು. ಜೊತೆಗೆ ಸಾಹಿತ್ಯವನ್ನು ಓದುವ, ಅಧ್ಯಯನ ಮಾಡುವ, ವಿಮರ್ಶೆ ಮಾಡುವ ಮತ್ತು ಸಂಶೋಧನೆ ಮಾಡುವ ಧೋರಣೆಯ ಮೇಲೂ ಕೂಡಾ ಆಗಬಹುದು. ಸಾಹಿತ್ಯವನ್ನು ವಿಮರ್ಶೆ ಮಾಡುವವರು ಸಾಹಿತ್ಯ ಕೃತಿಗಳನ್ನು ಅಗತ್ಯವಾಗಿ ಓದಿರುತ್ತಾರೆ; ಅಧ್ಯಯನ ಮಾಡಿರುತ್ತಾರೆ. ಇದು ಸಾಹಿತ್ಯ ವಿಮರ್ಶೆ ಎಂಬ ಬೌದ್ಧಿಕ ಕೆಲಸದ ಅತ್ಯಂತ ಪ್ರಾಥಮಿಕ ಅಗತ್ಯ. ಇದರ ಜೊತೆಗೆ ಇಷ್ಟೇ ಮುಖ್ಯವಾದ ಮತ್ತೊಂದು ಅಗತ್ಯವಾದ ಸಿದ್ಧತೆಯನ್ನು ಕೂಡ ಸಾಹಿತ್ಯ ವಿಮರ್ಶೆಯು

ಬಯಸುತ್ತದೆ. ಅದು ಯಾವುದು ಎಂದರೆ, ಸಾಹಿತ್ಯ ವಿಮರ್ಶೆಯ ತತ್ವಗಳನ್ನು, ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳನ್ನು ವಿಮರ್ಶಕರು ಅಧ್ಯಯನ ಮಾಡುವುದು.

ಸಾಹಿತ್ಯ ವಿಮರ್ಶೆ ಬರೆಯುವವರಲ್ಲಿ ಸಾಮಾನ್ಯವಾಗಿ ಎರಡು ಬಗೆ ಇರುತ್ತದೆ. ಒಂದು ಬಗೆಯವರು ಸಾಹಿತ್ಯ ವಿಮರ್ಶೆಯನ್ನು ಒಂದು ರೀತಿಯಲ್ಲಿ ಶ್ರದ್ಧೆಯಿಂದ ತೆಗೆದುಕೊಂಡವರು. ಸಾಹಿತ್ಯ ವಿಮರ್ಶೆ ಎಂಬುದು ಇವರಿಗೆ ಒಂದು ಬಗೆಯಲ್ಲಿ ಬೌದ್ಧಿಕ ವೃತ್ತಿಯೇ ಆಗಿರುತ್ತದೆ. ಹಾಗಾಗಿ ಇವರು ಸಾಹಿತ್ಯ ವಿಮರ್ಶೆಯ ಶಿಸ್ತುಗಳನ್ನು ಅಧ್ಯಯನ ಮಾಡಿರುತ್ತಾರೆ. ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳನ್ನು ಅಧ್ಯಯನ ಮಾಡಿರುತ್ತಾರೆ. ತಮ್ಮ ಸಿದ್ಧಾಂತಗಳ ಮೂಲಕ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡುತ್ತಾರೆ.

ಸಾಹಿತ್ಯ ವಿಮರ್ಶೆಯಲ್ಲಿ ಹಲವು ಬಗೆಯ ಸಿದ್ಧಾಂತಗಳಿವೆ. ಸಾಹಿತ್ಯವನ್ನು ಕಲಾತ್ಮಕ ಮತ್ತು ಸೌಂದರ್ಯಾತ್ಮಕ ನೆಲೆಯಿಂದ ಗ್ರಹಿಸುವ ವಿಧಾನ, ಸಾಹಿತ್ಯದ ರಚನೆಯ ಸ್ವರೂಪವನ್ನು ಗ್ರಹಿಸುವ ವಿಧಾನ, ಸಾಹಿತ್ಯದ ಭಾಷಿಕ ನೆಲೆಯನ್ನು ಗ್ರಹಿಸುವ ವಿಧಾನ, ಸಾಹಿತ್ಯದ ಸೈದ್ಧಾಂತಿಕತೆಯನ್ನು ಗ್ರಹಿಸುವ ವಿಧಾನ. ಇವು ಪ್ರಧಾನವಾದ ಕೆಲವು ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳು. ಇನ್ನು ಸಾಹಿತ್ಯ ವಿಮರ್ಶೆಯನ್ನು ಒಂದು ಶಿಸ್ತಾಗಿ ಓದದವರು, ಅಧ್ಯಯನ ಮಾಡದವರು ಸಾಹಿತ್ಯ ವಿಮರ್ಶೆ ಬರೆಯುತ್ತಾರೆ. ಇವರಿಗೆ ಮೇಲಿನ ನೆಲೆಗಳಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ ಎಂದು ಸ್ಪಷ್ಟವಾಗಿ ಹೇಳುವುದಕ್ಕೆ ಆಗುವುದಿಲ್ಲ. ಆದರೂ ಈ ಬಗೆಯ ವಿಮರ್ಶಕರು ಕನ್ನಡದಲ್ಲಿ ಸಾಕಷ್ಟು ವಿಮರ್ಶೆಯನ್ನು ಬರೆದಿದ್ದಾರೆ.

ಸಾಹಿತ್ಯ ವಿಮರ್ಶೆಯ ಮೇಲೆ ಸಮಾಜವಾದಿ ಚಳವಳಿಯ ಪ್ರಭಾವ ಯಾವ ರೂಪದಲ್ಲಿ ಆಗಬಹುದು ಆಗಿರಬಹುದು, ಆಗುತ್ತದೆ ಎಂಬುದು ನಮ್ಮ ಮುಂದಿನ ಚರ್ಚೆಯ ಅಂಶ. ಬಹುಶಃ ಇದು ಎರಡು ರೀತಿಯಲ್ಲಿ ಇರಬಹುದು ಎಂದು ಕಾಣುತ್ತದೆ. ಒಂದು : ವಿಮರ್ಶಕರ ಧೋರಣೆಯು ಪ್ರಾಥಮಿಕವಾಗಿ ಸಮಾಜವಾದಿ ಆಶಯಗಳನ್ನು, ವೈಚಾರಿಕತೆಯನ್ನು ಹೊಂದಿರುವುದು. ಕನ್ನಡದಲ್ಲಿ ಇಂತಹ ವಿಮರ್ಶಕರ ದೊಡ್ಡ ಪಡೆಯೇ ಇದೆ. ಬಿ.ಎ. ವಿವೇಕ ರೈ, ಆರ್ಕೆ ಮಣಿಪಾಲ, ಎಸ್. ಶಿವಾನಂದ, ಕೇಶವಶರ್ಮ, ಸಿದ್ದಲಿಂಗಯ್ಯ, ಎಲ್. ಹನುಮಂತಯ್ಯ, ಬಿ. ಕೃಷ್ಣಮೂರ್ತಿ, ಕೆ.ವಿ. ನಾರಾಯಣ, ಬಸವರಾಜ ಕಲ್ಗುಡಿ, ಡಿ.ಆರ್. ನಾಗರಾಜ್, ಬಸವರಾಜ ಸಬರದ, ಲಿಂಗದೇವರು ಹಳೆಮನಿ, ಮೀನಾಕ್ಷಿ ಬಾಳಿ, ಎಂ. ವಸು, ರಹಮತ್ ತರೀಕೆರೆ, ಬಿ.ಎಂ. ಪುಟ್ಟಯ್ಯ, ರಾಜೇಂದ್ರ ಚೆನ್ನಿ, ರಾಜರಾಂ ತೋಳ್ಪಾಡಿ ಮುಂತಾದವರು.

ಇನ್ನು ಸಾಹಿತ್ಯ ವಿಮರ್ಶೆಯನ್ನು ಒಂದು ಶಿಸ್ತಾಗಿ ಓದಿದವರು, ಅಧ್ಯಯನ ಮಾಡಿದವರು ಸಾಹಿತ್ಯ ವಿಮರ್ಶೆಯನ್ನು ಬರೆದಿದ್ದಾರೆ. ಇವರು ಸಮಾಜವಾದಿ ಸಾಹಿತ್ಯ ವಿಮರ್ಶೆಯ ನಿಲುವುಗಳನ್ನು ಹಾಗೂ ವಿಧಾನಗಳನ್ನು ಅಧ್ಯಯನ ಮಾಡಿದ್ದರೆ ಅಥವಾ ಈ ಬಗೆಯ ಸಾಹಿತ್ಯ ವಿಮರ್ಶೆಯು

ಇವರ ಮೇಲೆ ಪ್ರಭಾವ ಮಾಡಿದ್ದರೆ ಆಗ ಇವರ ಸಾಹಿತ್ಯ ವಿಮರ್ಶೆಯು ಸಮಾಜವಾದಿ ನೆಲೆಯ ಸ್ವರೂಪವನ್ನು ಪಡೆಯುತ್ತದೆ. ಇಂತಹ ಸಾಹಿತ್ಯ ವಿಮರ್ಶೆಯು ಒಂದು ಬೌದ್ಧಿಕ ಕಸರತ್ತಾಗಿ ಮೂಡಿಬಂದಿರುತ್ತದೆ. ಆದರೆ ಇದು ಒಂದು ಸಾಮಾಜಿಕ ಬದ್ಧತೆಯಾಗಿ, ಒಂದು ಸಾಮಾಜಿಕ ಜವಾಬ್ದಾರಿಯಾಗಿ ಬಂದಿರುವುದಿಲ್ಲ. ಅಂತೂ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಈ ಎರಡೂ ಬಗೆಯ ಸ್ವರೂಪದ ಸಾಹಿತ್ಯ ವಿಮರ್ಶೆ ಇದೆ ಎಂದು ಹೇಳಬಹುದು.

ಟಿಪ್ಪಣಿಗಳು

೧. ರಾಜಶೇಖರ ಜಿ. ೧೯೮೦, **ಕಾಗೋಡು ಸತ್ಯಾಗ್ರಹ,** ಪು. ೧೮

೨. ಅದೇ, ಪು. ೨೮

೩. ಅದೇ, ಪು. ೨೯

೪. ಅದೇ, ಪು. ೬೪

೫. ಅದೇ, ಪು. ೬೯

೬. ಅದೇ, ಪು. ೬೭–೬೮

೭. ಕೋಣಂದೂರು ವೆಂಕಪ್ಪಗೌಡ, ೨೦೦೧, **ಕಾಗೋಡು ಹೋರಾಟದ ರೂವಾರಿ ಗಣಪತಿಯಪ್ಪನವರ ಜೀವನ ಚರಿತ್ರೆ,** ಪು. ೭೭–೭೮

೮. ಅದೇ, ಪು. ೭೮–೭೯

೯. ನಾಗರಾಜ ಎಂ.ಜಿ, ೨೦೦೬, **ಕರ್ನಾಟಕ ರೈತ ಚಳವಳಿ–ಸತ್ಯಾಗ್ರಹಗಳು,** ಪು. ೧೨೯

೧೦. ರಾಜಶೇಖರ ಜಿ., ೧೯೮೦, **ಕಾಗೋಡು ಸತ್ಯಾಗ್ರಹ,** ಪು. ೮೭

೧೧. ನಾಗರಾಜ ಎಂ.ಜಿ, ೨೦೦೬, **ಕರ್ನಾಟಕ ರೈತ ಚಳವಳಿ–ಸತ್ಯಾಗ್ರಹಗಳು,** ಪು. ೧೨೯

೧೨. ರಾಜಶೇಖರ ಜಿ., ೧೯೮೦, **ಕಾಗೋಡು ಸತ್ಯಾಗ್ರಹ,** ಪು. ೯೭

೧೩. ಅದೇ, ಪು. ೯೭–೯೮

೧೪. ಅದೇ, ಪು. ೧೦೦

೧೫. ಅದೇ, ಪು. ೧೦೧

೧೬. ಬೋರಲಿಂಗಯ್ಯ ಹಿ.ಚಿ, ಹುಚ್ಚಪ್ಪ ಮಾಸ್ತರ್ ಎನ್ (ಸಂ), ೨೦೦೨, **ಕಾಗೋಡು ಚಳವಳಿ,** ಪು. ೫೯

೧೭. ರಾಜಶೇಖರ್ ಜಿ. ೧೯೮೦, **ಕಾಗೋಡು ಸತ್ಯಾಗ್ರಹ,** ಪು. ೧೦೬

೧೮. ಅದೇ, ಪು. ೧೦೭-೧೦೮

೧೯. ಅದೇ, ಪು. ೧೨೦

೨೦. ನಾಗರಾಜ್ ಎಂ.ಜಿ, ೨೦೦೬, **ಕರ್ನಾಟಕ ರೈತ ಚಳವಳಿ-ಸತ್ಯಾಗ್ರಹಗಳು**, ಪು. ೧೩೧

೨೧. ಚಂದ್ರಶೇಖರ್ ಎಸ್., ೨೦೦೦, **ದಕ್ಷಿಣಭಾರತ : ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ**, ಪು. ೧೪

೨೨. ಸುಬೋಧ ಮಿತ್ರ (ಮೂಲ), ಶ್ರೀಧರ ಪಿಸ್ಸೆ (ಅನು), ೨೦೦೬, **ಭಾರತದಲ್ಲಿ ಭೂಸುಧಾರಣೆಯ ಎರಡು ಮಾರ್ಗಗಳು**, ಪು. ೩

೨೩. ಮಲ್ಲಿಕಾರ್ಜುನ ಕೂಡ್ಲಿಗೆರೆ, ೨೦೦೯, **ಭೂ ಹೋರಾಟದ ಕಥನ**, ಪು. ೭೧.

೨೪. ಅದೇ, ಪು. ೭೮

೨೫. ಚಂದ್ರಶೇಖರ್ ಎಸ್., ೨೦೦೦, **ದಕ್ಷಿಣಭಾರತ : ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ**, ಪು. ೧೪

೨೬. ಚಂದ್ರಪೂಜಾರಿ, ೨೦೧೦, **ಯಾಕೀಗ ಭೂಮಿ ಪ್ರಶ್ನೆ**, ಪು. ೩೯-೪೩

೨೭. ಕುಲಕರ್ಣಿ ಆರ್.ಆರ್. (ಲೇ), ೨೦೧೫, 'ಸಮಾಜವಾದದ ಸೈದ್ಧಾಂತಿಕ ನೆಲೆಗಳು', ಮಂಜುನಾಥ ಕೆ.ಎನ್, (ಸಂ), **ಸಮಾಜವಾದದ ಪ್ರಸ್ತುತತೆ : ಕೆಲವು ಚಿಂತನೆಗಳು**, ಪು. ೨೪

೨೮. ಅದೇ, ಪು. ೨೧

೨೯. ಸವಿತ ಬಿ.ಸಿ., ೨೦೧೭, **ಹಸಿರುಶಾಲು ಬಾರುಕೋಲು**, ಪು. ೯೫.

೩೦. ಅದೇ, ಪು. ೧೧೨-೧೧೩

೩೧. ಕೋಣಂದೂರು ಲಿಂಗಪ್ಪ (ಸಂ), ೧೯೭೧, **ಶಾಸನಸಭೆಯಲ್ಲಿ ಶಾಂತವೇರಿ**, ಪು. ೨೦

೩೨. ಮಂಜುನಾಥರೆಡ್ಡಿ ಕೆ.ಪಿ.(ಲೇ), ೨೦೧೫, 'ಸಾಹಿತ್ಯದಲ್ಲಿ ಸಮಾಜವಾದ', ಮಂಜುನಾಥ ಕೆ.ಎನ್. (ಸಂ), **ಸಮಾಜವಾದದ ಪ್ರಸ್ತುತತೆ : ಕೆಲವು ಚಿಂತನೆಗಳು**, ಪು. ೮೧.

೩೩. ಅದೇ, ಪು. ೮೩.

೩೪. ನಾ. ಡಿಸೋಜ, ೨೦೦೨, **ಕೊಳಗ**, ಪು. ೨೦೫

ಅಧ್ಯಾಯ: ಐದು

ಕರ್ನಾಟಕದ ರಾಜಕಾರಣ ಹಾಗೂ ಶಾಂತವೇರಿ ಗೋಪಾಲಗೌಡ

ಅಧ್ಯಾಯ: ಐದು

ಕರ್ನಾಟಕದ ರಾಜಕಾರಣ ಹಾಗೂ ಶಾಂತವೇರಿ ಗೋಪಾಲಗೌಡ

ಈ ಅಧ್ಯಾಯದಲ್ಲಿ ಶಾಂತವೇರಿ ಗೋಪಾಲಗೌಡರು ಸದನದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡಿದ ವಿಷಯಗಳನ್ನು ಉಲ್ಲೇಖಿಸಿ ಅವುಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗುವುದು. ಇಲ್ಲಿ ಚರ್ಚೆಗೆ ಎತ್ತಿಕೊಂಡಿರುವ ವಿಷಯಗಳು ಈ ಮುಂದಿನಂತಿವೆ. ೧. ಚುನಾವಣೆ ಮತ್ತು ಶಾಂತವೇರಿ ಗೋಪಾಲಗೌಡ ೨. ಅಧಿಕಾರ ವಿಕೇಂದ್ರಿಕರಣ ಕುರಿತು ೩. ನೇರ ಚುನಾವಣೆ ಕುರಿತು ೪. ವಿಧಾನಸೌಧವನ್ನು ಕುರಿತು ೫. ವಿಧಾನಪರಿಷತ್ತು ಕುರಿತು ೬. ರಾಜಭವನ ಕುರಿತು ೭. ಪೊಲೀಸ್ ವ್ಯವಸ್ಥೆ ಕುರಿತು ೮. ಜೈಲು ವ್ಯವಸ್ಥೆಯನ್ನು ಕುರಿತು ೯. ಗೋಲಿಬಾರ್ ಕುರಿತು ೧೦. ಗೇಣಿದಾರರ ಸಂಕಷ್ಟ ೧೧. ಭೂದಾನ ಚಳವಳಿ ೧೨. ಕ್ರಾಂತಿಯನ್ನು ಕುರಿತು ೧೩. ಭೂಸುಧಾರಣೆ–ಇನಾಂ ರದ್ದಿಯಾತಿ ಕಾಯಿದೆ ೧೪. ಗ್ರಾಮ ನೌಕರರು ೧೫. ರಾಷ್ಟ್ರೀಯ ರಜಾ ದಿನಗಳು ೧೬. ಪಠ್ಯಪುಸ್ತಕಗಳನ್ನು ಕುರಿತು ೧೭. ಮಲೆನಾಡು ಪ್ರದೇಶ ಕುರಿತು, ೧೮. ಕರ್ನಾಟಕದ ಗಡಿ ಭಾಗಗಳು ೧೯. ಸಮಾಜದಲ್ಲಿ ಧಾರ್ಮಿಕ ಸಂಸ್ಥೆಗಳು.

೫.೧. ಚುನಾವಣೆ ಮತ್ತು ಶಾಂತವೇರಿ ಗೋಪಾಲಗೌಡ

ಶಾಂತವೇರಿ ಗೋಪಾಲಗೌಡ ಅವರು ತೀರ್ಥಹಳ್ಳಿಯಲ್ಲಿ ಹೈಸ್ಕೂಲು ಶಿಕ್ಷಣವನ್ನು ಮುಗಿಸಿದರು. ೧೯೪೪ರಲ್ಲಿ ಶಿವಮೊಗ್ಗದಲ್ಲಿದ್ದ ಇಂಟರ್ ಮೀಡಿಯಟ್ ಕಾಲೇಜಿಗೆ (ಇಂದಿನ ಸಹ್ಯಾದ್ರಿ ಕಾಲೇಜು) ಸೇರಿದರು. ಇನ್ನೂ ಓದಬೇಕೆಂಬ ಆಸೆ ಮತ್ತು ಹಂಬಲ ಇದ್ದವು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಮಸ್ಯೆ ಎದುರಾಯಿತು. ಈ ವೇಳೆಗಾಗಲೆ ಸರ್ಕಾರದ ವಿರುದ್ಧ ಹೋರಾಟ ಮಾಡಿ ಜೈಲುಶಿಕ್ಷೆಯನ್ನು ಅನುಭವಿಸಿ, ನ್ಯಾಯಾಲಯದ ಮೂಲಕ ಬಿಡುಗಡೆಗೊಂಡಿದ್ದರು. ಕಾಲೇಜಿಗೆ ಸೇರಿಕೊಳ್ಳುವ ಮೊದಲೇ ಇವರ ಹೆಸರು 'ಕ್ರಾಂತಿ ವೀರ'ನೆಂದು ಪ್ರಸಿದ್ಧಿ ಪಡೆದು ಜನರ ನಾಲಿಗೆಯಲ್ಲಿ ನಲಿದಾಡುತ್ತಿತ್ತು.[೧] ಕಾಲೇಜು ಸೇರಿಕೊಂಡ ಪ್ರಾರಂಭದ ದಿನಗಳಲ್ಲಿಯೇ ಇವರಿಗೆ ಊಟದ ಸಮಸ್ಯೆ ಎದುರಾಯಿತು. ಅವರಿವರ ಮನೆಯಲ್ಲಿ ವಾರದ ಊಟ (ವಾರದಲ್ಲಿ ಪ್ರತಿಯೊಂದು ದಿನವೂ ಒಬ್ಬೊಬ್ಬರ ಮನೆಯಲ್ಲಿ ಉಚಿತವಾಗಿ ಊಟ ಮಾಡುವುದು. ಹಿಂದೆ ಇದ್ದ ಈ ಪದ್ಧತಿ, ದಾನಿಗಳ ಸಹೃದತೆಯ ಪ್ರತೀಕ ಮತ್ತು ಬಡವರಿಗೆ ಆಸರೆಯಾಗಿತ್ತು.) ಮಾಡಿಕೊಂಡು ಅಧ್ಯಯನ

ಆರಂಭಿಸಿದರು. ಶಾಂತವೇರಿ ಗೋಪಾಲಗೌಡರು ವಿದ್ಯಾರ್ಥಿ ಜೀವನದಲ್ಲಿಯೇ ರಾಜಕೀಯ ಪ್ರಜ್ಞೆ ಬೆಳೆಸಿಕೊಂಡರು. ಇದಕ್ಕೆ ಮೂಲ ಕಾರಣ ಎಂದರೆ ಆ ಹೊತ್ತಿಗೆ ಶಿವಮೊಗ್ಗದ ಸುತ್ತಮುತ್ತ ಸಮಾಜವಾದಿ ಚಳವಳಿಯ ಪ್ರಭಾವ ಮತ್ತು ವಾತಾವರಣ ಪ್ರಬಲವಾಗಿತ್ತು. ತಮ್ಮ ಪ್ರಕಾರ ಮಾತುಗಳ ಮೂಲಕ ಜನತೆಯನ್ನು ಆಕರ್ಷಿಸಿದ್ದರು. ಈ ಸಂದರ್ಭದಲ್ಲಿಯೇ ಯಾವುದೇ ಕಷ್ಟಗಳಿಗೆ ಅಳುಕದೆ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡರು. ಒಂದು ಯುವಪಡೆಯ ತಂಡವನ್ನೇ ಕಟ್ಟಿಕೊಂಡರು. ತಮ್ಮ ಮುಂದಿನ ಜೀವನವನ್ನು ಹೋರಾಟದಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿದರು. ಆದರೆ ಗೋಪಾಲಗೌಡರಿಗೆ ಆರ್ಥಿಕ ಸಮಸ್ಯೆ ಎದುರಾಗಿದ್ದರಿಂದ ಶಿಕ್ಷಣವನ್ನು ಮುಂದುವರಿಸಲು ಆಗಲಿಲ್ಲ. ಈ ಕಾರಣದಿಂದ ಅವರು ಊರಿಗೆ ಹಿಂದಿರುಗಬೇಕಾಯಿತು. ಆರಗದ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾಗಿಯೂ, ಜೊತೆ ಜೊತೆಗೆ ವೈದ್ಯಕೀಯ ವೃತ್ತಿಯನ್ನು ಆರಂಭಿಸಿದ್ದ ಟಿ. ವಿಶ್ವನಾಥರಾವ್ ಎಂಬ ವೈದ್ಯರು ಸುತ್ತಮುತ್ತಲಿನ ಊರುಗಳಲ್ಲಿ ಜನಪ್ರಿಯರಾಗಿದ್ದರು. ಅಲ್ಲದೆ ಕಾರ್ಲ್‌ಮಾರ್ಕ್ಸ್, ಲಿಯೋಟಾಲ್‌ಸ್ಟಾಯ್, ಜಯಪ್ರಕಾಶ್ ನಾರಾಯಣ ಮುಂತಾದವರ ಗ್ರಂಥಗಳನ್ನು ಈ ವೈದ್ಯರು ಆಳವಾಗಿ ಅಧ್ಯಯನ ಮಾಡಿದ್ದರು. ಈ ರೀತಿಯ ಜ್ಞಾನವುಳ್ಳ ವೈದ್ಯರಿಗೆ ಗೋಪಾಲಗೌಡರಂತಹ ಕ್ರಾಂತಿಕಾರಿ ಯುವಕ ಆಕರ್ಷಿತನಾದನು. ಆ ಹೊತ್ತಿಗಾಗಲೆ ಶಾಂತವೇರಿ ಗೋಪಾಲಗೌಡರು ಜೀವನಕ್ಕಾಗಿ ಬೀಡಿ ಕಟ್ಟುತ್ತಾ, ಹೊಲಿಗೆ ಕೆಲಸವನ್ನು ಕಲಿಯುತ್ತಿದ್ದರು. ಬಡತನದಿಂದಾಗಿ ಶಿಕ್ಷಣವನ್ನು ಮುಂದುವರಿಸಲಾಗದೆ ಅರ್ಧದಲ್ಲೇ ಓದನ್ನು ನಿಲ್ಲಿಸಿದ್ದರು.ಜೊತೆಗೆ ನಿರುದ್ಯೋಗಿಯಾಗಿದ್ದರು. ಇವರನ್ನು ವೈದ್ಯರಾದ ಟಿ. ವಿಶ್ವನಾಥರಾವ್ ಅವರು ಓದಿದ್ದ ಶಾಲೆಯಲ್ಲಿಯೇ ಕೆಲಸಕ್ಕೆ ಸೇರಿಸಿದರು.

ಶಾಂತವೇರಿ ಗೋಪಾಲಗೌಡರು ಶಿಕ್ಷಕರಾಗಿ ಇತಿಹಾಸ ಮತ್ತು ಆಂಗ್ಲಭಾಷೆಯನ್ನು ಪಾಠ ಮಾಡುತ್ತಿದ್ದರು. ವೈದ್ಯ ವಿಶ್ವನಾಥರಾವ್‌ರವರ ಪರಿಚಯ ಮತ್ತು ನೆರವಿನಿಂದ ಗೋಪಾಲಗೌಡರ ಸಾಹಿತ್ಯ, ರಾಜಕೀಯ ಪ್ರಜ್ಞೆಯ ಪರಿಧಿ ವಿಸ್ತರಿಸಿತು. ಗೌಡರು ಶಿಕ್ಷಕ ವೃತ್ತಿಯ ಜೊತೆಯಲ್ಲಿಯೇ ವಯಸ್ಕರ ಶಿಕ್ಷಣ ಶಾಲೆ ನಡೆಸುವುದು, ಖಾದಿ ನೂಲು ತೆಗೆಯುವುದು, ಸ್ವಾತಂತ್ರ್ಯ ಹೋರಾಟದ ಬಗ್ಗೆ ಚಿಂತಿಸುವುದು ಸೇರಿದಂತೆ ಹಳ್ಳಿಗರ ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸುತ್ತಿದ್ದರು. ಮಹಾಭಾರತ, ರಾಮಾಯಣ ಮುಂತಾದ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡುವುದು, ಆಧುನಿಕ ಸಾಹಿತ್ಯ ಕೃತಿಗಳನ್ನು ಓದುವುದು ಮಾತ್ರವಲ್ಲದೆ ಜೊತೆಗೆ ಅವುಗಳನ್ನು ಜನರ ಮುಂದೆ ಓದಿ ಹೇಳುತ್ತಿದ್ದರು.

ಆ ಹೊತ್ತಿನಲ್ಲಿ ಭಾರತದಲ್ಲಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಇದು ಕರ್ನಾಟಕದಲ್ಲಿಯೂ ನಡೆಯುತ್ತಿತ್ತು. ಇದರ ಪ್ರಭಾವ ಕರ್ನಾಟಕದ ಮಲೆನಾಡಿನ ಭಾಗದಲ್ಲಿ ಆಗಿತ್ತು. '೧೯೪೨ರ ಬ್ರಿಟೀಷರೆ ಭಾರತ ಬಿಟ್ಟು ತೊಲಗಿ' ಚಳವಳಿಯ ಪ್ರಭಾವ ಮಲೆನಾಡಿನಲ್ಲೂ ಇತ್ತು. ಬ್ರಿಟಿಷರ ವಿರುದ್ಧ ವಿದ್ಯಾರ್ಥಿಗಳ ಸಿಟ್ಟು ಜಾಸ್ತಿಯಾಗಿತ್ತು. ಈ ವೇಳೆಯಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಭಾವ ಶಾಂತವೇರಿ ಗೋಪಾಲಗೌಡರ ಮೇಲಾಯಿತು. ಪರಿಣಾಮವಾಗಿ ಗೌಡರು

ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಬ್ರಿಟೀಷರ ವಿರುದ್ಧ ಅನೇಕ ಹೋರಾಟಗಳಲ್ಲಿ ಭಾಗವಹಿಸಿದರು. ಅನೇಕ ಸಂದರ್ಭಗಳಲ್ಲಿ ಪೊಲೀಸರ ಕೈಗೆ ಸಿಗದೆ ತಲೆಮರೆಸಿಕೊಂಡಿರಬೇಕಾದ ಸಂದರ್ಭಗಳು ಬಂದವು.

ಒಂದು ಕಡೆ ಆರ್ಥಿಕ ಪರಿಸ್ಥಿತಿ ಮತ್ತೊಂದು ಕಡೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗುವ ರಾಜಕೀಯ ಆಸಕ್ತಿ ಇವುಗಳಿಂದಾಗಿ ಗೌಡರು ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದ್ದರು. ಹೀಗೆ ವಿದ್ಯಾಭ್ಯಾಸವನ್ನು ನಡುವೆಯೇ ನಿಲ್ಲಿಸಿದ್ದ ಗೋಪಾಲಗೌಡರಿಗೆ ಓದುವ ಆಸೆ ಚಿಗುರಿತು. ಹಾಗಾಗಿ ಶಿವಮೊಗ್ಗದಲ್ಲಿ ಇಂಟರ್ ಮೀಡಿಯೇಟ್ ತರಗತಿಗೆ ಸೇರಿದರು. ಜೀವನ ನಿರ್ವಹಣೆಗೆ ಒಕ್ಕಲಿಗರ ವಿದ್ಯಾರ್ಥಿ ನಿಲಯದ ವಾರ್ಡನ್ ಆಗಿ ಕೆಲಸಕ್ಕೆ ಸೇರಿಕೊಂಡರು. ಈ ನಡುವೆ ಇವರು ರಾಜಕೀಯದ ಕಡೆ ಆಕರ್ಷಿತರಾದರು. ೧೯೪೬ರಲ್ಲಿ ಮೈಸೂರು ಭಾಗದ ನಂಜನಗೂಡಿನಲ್ಲಿ 'ಕಾಂಗ್ರೆಸ್-ಸೋಷಲಿಸ್ಟ್'ನ ವಿದ್ಯಾರ್ಥಿ ಸಮಾವೇಶ ನಡೆಯಿತು. ಈ ಸಮಾವೇಶದಲ್ಲಿ ಗೋಪಾಲಗೌಡರು ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡರು. ಜೊತೆಗೆ ೧೯೪೭ರ ಸ್ವಾತಂತ್ರ್ಯ ಚಳವಳಿಯಲ್ಲಿಯೂ ಪ್ರಮುಖ ಪಾತ್ರ ನಿರ್ವಹಿಸಿದರು. ಬ್ರಿಟೀಷರ ವಿರುದ್ಧದ ಹೋರಾಟಗಳ ಕುರಿತು ಗೌಡರು ವಿವಿಧ ವೇಷಗಳಲ್ಲಿ ಗೌಪ್ಯವಾಗಿ ಸಭೆಗಳನ್ನು ನಡೆಸಿ ಭಾಷಣ ಮಾಡಿ ಚಳವಳಿ ತೀವ್ರಗೊಳ್ಳುವಂತೆ ಮಾಡುತ್ತಿದ್ದರು. ಈ ಕಾರಣಕ್ಕಾಗಿ ಮಲೆನಾಡು ಭಾಗದಲ್ಲಿ ಗೋಪಾಲಗೌಡರು ಜನಪ್ರಿಯರಾಗಿದ್ದರು. ಪೊಲೀಸರು ಇವರನ್ನು ಬಂಧಿಸಲು ಸತತ ಪ್ರಯತ್ನಪಟ್ಟು, ನಂತರ ಬಂಧಿಸಿ ಬಿಡುಗಡೆಗೊಳಿಸಿದ್ದರು.

ಜನತೆಯ ಅಖಂಡ ಹೋರಾಟದ ಫಲವಾಗಿ ಬ್ರಿಟೀಷರ ಹಿಡಿತದಿಂದ ಬಿಡುಗಡೆ ಹೊಂದಿದ ಭಾರತ ಸ್ವಾತಂತ್ರ್ಯೋತ್ಸವದ ಸಡಗರದಲ್ಲಿರುವಾಗಲೇ ಭವ್ಯ ಭಾರತ ನಿರ್ಮಾಣದ ಭವಿಷ್ಯವನ್ನು ಮನಗಂಡಿದ್ದ ಸಮಾಜವಾದಿ ಮನೋಭಾವವುಳ್ಳ ತರುಣರು ಕಾಂಗ್ರೆಸ್ಸಿನಿಂದ ಹೊರಬರಲು ತವಕ ಪಡುತ್ತಿದ್ದರು. ಗೋಪಾಲಗೌಡರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ರಾಜಿನಾಮೆ ಕೊಟ್ಟರು.ಕಾಂಗ್ರೆಸ್ ಪಕ್ಷ ಸ್ವರಾಜ್ಯ ತರುವುದಕ್ಕೆ ಮಾತ್ರ ಸೀಮಿತ. ಇನ್ನು ಮುಂದೆ ನಾವು ಸ್ವತಂತ್ರ ಭಾರತ ಕಟ್ಟಬೇಕು. ಅದಕ್ಕೆ ಸಮಾಜವಾದವೇ ತಾರಕಮಂತ್ರ[೧] ಎಂದು ಘೋಷಿಸಿದರು.

ಸ್ವಾತಂತ್ರ್ಯೋತ್ತರದಲ್ಲಿ ಗಾಂಧೀಜಿಯವರು ಕಾಂಗ್ರೆಸನ್ನು ವಿಸರ್ಜಿಸಿ ಹೊಸ ರಾಜಕೀಯ ಪಕ್ಷಗಳನ್ನು ಕಟ್ಟಿ ರಾಜಕಾರಣಿಗಳು ಚುನಾವಣೆಗೆ ಹೋಗಬೇಕು ಎಂದು ಹೇಳಿದ್ದನ್ನು ಇಲ್ಲಿ ನೆನೆಯಬಹುದು.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ನಂತರ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದ ಸಮಾಜವಾದಿ ನಾಯಕರು ಆ ಪಕ್ಷದಿಂದ ಹೊರಬಂದರು. ಸಮಾಜವಾದಿ ನಾಯಕರಾದ ಜಯಪ್ರಕಾಶ್ ನಾರಾಯಣ, ಕಮಲಾದೇವಿ ಚಟ್ಟೋಪಾಧ್ಯಾಯರೊಂದಿಗೆ ಯುವಕರು ಕರ್ನಾಟಕದಾದ್ಯಂತ ಸಂಚಾರ ಮಾಡಿ ಸಮಾಜವಾದದ ಆಶಯವನ್ನು ಪ್ರಚುರಪಡಿಸಿದರು. ಕರ್ನಾಟಕದ ಹಲವು ಯುವಕರನ್ನು ಸಮಾಜವಾದಿ ಚಿಂತನೆಯೆಡೆಗೆ ಗಮನ ಹರಿಸುವಂತೆ ಮಾಡಿದರು.

ಇವರಲ್ಲಿ ಶಾಂತವೇರಿ ಗೋಪಾಲಗೌಡರೂ ಒಬ್ಬರು. ಗೋಪಾಲಗೌಡರು ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆಗಳನ್ನು ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ಸಂಘಟಿಸತೊಡಗಿದರು. ಇಂತಹ ಕಾರ್ಯಕ್ರಮಕ್ಕೆ ಜಯಪ್ರಕಾಶ್ ನಾರಾಯಣ ಅವರನ್ನು ಆಹ್ವಾನಿಸಿದ್ದರು. ಈ ರೀತಿ ತಮ್ಮ ಹೈಸ್ಕೂಲ್ ವಿದ್ಯಾಭ್ಯಾಸದಿಂದಲೇ ಸಮಾಜವಾದಿ ಚಿಂತನೆಗಳನ್ನೇ ಆರಿಸಿಕೊಂಡು ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟರು.

೧೯೪೮ರಲ್ಲಿ ಶಿವಮೊಗ್ಗದಲ್ಲಿನ ಕೋರ್ಪಾಲಿ ಛತ್ರದಲ್ಲಿ (ಸ್ವಾತಂತ್ರ್ಯ ಪೂರ್ವದಲ್ಲಿ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಕಾಫಿ ಬೆಳೆಗಾರರಾಗಿದ್ದ ಫ್ರೆಂಚ್ ಕೋರ್ಪರ್ಲೈ ಎಂಬುವವರು ಕಟ್ಟಿಸಿದ ಕಟ್ಟಡ ಇದು. ಕಾಲಾನುಕ್ರಮದಲ್ಲಿ ಕೋರ್ಪರ್ಲೈ ಎನ್ನುವ ಹೆಸರು ಕಾರ್ಪಾಲಯ್ಯ ಎಂದು ಅಪಭ್ರಂಶಗೊಂಡಿದೆ.) ಕರ್ನಾಟಕ ರಾಜ್ಯದ ಮೊಟ್ಟಮೊದಲ ಸಮಾಜವಾದಿ ಪಕ್ಷದ ಸಮ್ಮೇಳನವನ್ನು ಶಾಂತವೇರಿ ಗೋಪಾಲಗೌಡರ ನೇತೃತ್ವದಲ್ಲಿ ನಡೆಸಲಾಯಿತು. ಇವರ ಜೊತೆಯಲ್ಲಿ ಜಿ. ಸದಾಶಿವರಾವ್, ವೈ.ಆರ್. ಪರಮೇಶ್ವರಪ್ಪ, ಎಂ.ಪಿ. ಈಶ್ವರಪ್ಪ, ಎಂ.ಸಿ. ಮಹೇಶ್ವರಪ್ಪ, ಡಿ. ಪರಮೇಶ್ವರಪ್ಪ, ಎನ್.ಕೆ. ಸೀತಾರಾಮ ಅಯ್ಯಂಗಾರ್, ಹೆಚ್.ಎಮ್. ಶಿವರಾಮ್ ಇನ್ನೂ ಮುಂತಾದವರು ಕೈಜೋಡಿಸಿದ್ದರು.

ಸಮಾಜವಾದಿ ಪಕ್ಷದ ಸಿದ್ಧಾಂತಗಳಿಂದ ಪ್ರಭಾವಿತಗೊಂಡ ಗೋಪಾಲಗೌಡರು ಸಹಜವಾಗಿಯೇ ರೈತರ, ಬಡ ಕೂಲಿಕಾರ್ಮಿಕರ ಪರಿಸ್ಥಿತಿಯ ಕಡೆ ಗಮನ ಹರಿಸಿ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಚಿಂತಿಸತೊಡಗಿದರು. ಶಿವಮೊಗ್ಗ ಪ್ರಾಂತ್ಯದ ಯುವಕರನ್ನು ಒಗ್ಗೂಡಿಸಿ 'ಹಿಂದ್ ಪಂಚಾಯಿತಿ'ಯ ಹೆಸರಿನಲ್ಲಿ ತೀರ್ಥಹಳ್ಳಿಯಲ್ಲಿ ೧೯೪೮ರಲ್ಲಿ ದೊಡ್ಡ ಸಮ್ಮೇಳನವನ್ನು ಏರ್ಪಡಿಸಿದ್ದರು. ಈ ಸಮ್ಮೇಳನಕ್ಕೆ ಆಗಮಿಸಿದ್ದ ರಮಾನಂದ ಮಿಶ್ರ, ಕಮಲಾದೇವಿ ಚಟ್ಟೋಪಾಧ್ಯಾಯರ ಮೂಲಕ ಗೋಪಾಲಗೌಡರ ಸಂಘಟನಾ ಸಾಮರ್ಥ್ಯ ಅಖಿಲ ಭಾರತಮಟ್ಟದ ಸಮಾಜವಾದಿ ಮುಖಂಡರುಗಳಿಗೆ ಪರಿಚಯವಾಯಿತು. ಇದೇ ಸಂದರ್ಭದಲ್ಲಿಯೇ ಗೋಪಾಲಗೌಡರು ಬಿಹಾರದಲ್ಲಿ ರೈತರ ಸಂಘಟನೆಯ ಕುರಿತು ಅಧ್ಯಯನ ನಡೆಸಿ ಬಂದರು. ಇದು ಮುಂದಿನ 'ಕಾಗೋಡು ಸತ್ಯಾಗ್ರಹ'ದ ರೈತ ಸಂಘಟನೆಗೆ ದಾರಿ ಮಾಡಿಕೊಟ್ಟಿತು. ಕಾಗೋಡು ಸತ್ಯಾಗ್ರಹದ ಸಂದರ್ಭದಲ್ಲಿ ಗೋಪಾಲಗೌಡರಿಗೆ ರಾಷ್ಟ್ರಮಟ್ಟದ ಸಮಾಜವಾದಿ ಮುಖಂಡರಾದ ರಾಮಮನೋಹರ ಲೋಹಿಯಾ ಅವರ ನಿಕಟ ಸಂಪರ್ಕ ಬೆಳೆಯಿತು. ಇದರಿಂದಾಗಿ ಗೌಡರು ಇನ್ನಷ್ಟು ಗಟ್ಟಿಗೊಂಡರು.

ಕರ್ನಾಟಕದ ಚರಿತ್ರೆಯಲ್ಲಿ ೧೯೫೧ರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡಿನಲ್ಲಿ ನಡೆಸಿದ ಚಳವಳಿ/ಸತ್ಯಾಗ್ರಹ ಮಹತ್ವದ ಘಟನೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಎಂಬಲ್ಲಿ ಜಮೀನ್ದಾರರಿಗೆ ಗೇಣಿ ಕೊಡುವ ಅಳತೆಗೆ ಸಂಬಂಧಿಸಿದಂತೆ ವಿವಾದ ಉಂಟಾಯಿತು. ಇದು ಸುಲಭವಾಗಿ ಬಗೆಹರಿಯದೆ ಸಾಗರ ತಾಲ್ಲೂಕು ರೈತಸಂಘದೊಡನೆ ಸಮಾಜವಾದಿ ಪಕ್ಷದ ನೇತೃತ್ವದಲ್ಲಿ ಚಳವಳಿ ಆರಂಭವಾಯಿತು. 'ಉಳುವವನೆ ಹೊಲದೊಡೆಯ' ಎಂಬ ಘೋಷಣೆಯು ಈ ಚಳವಳಿಯ ಕೇಂದ್ರ ತತ್ವವಾಗಿತ್ತು. ಗೋಪಾಲಗೌಡರು ಈ ಹೋರಾಟ/ ಚಳವಳಿಯ ಮುಂಚೂಣಿಯಲ್ಲಿದ್ದರು. ಇವರ ಪ್ರವೇಶದ ನಂತರ ರೈತರ ಈ ಚಳವಳಿ ಹೊಸ

ರೂಪ ಪಡೆದುಕೊಂಡಿತು. ಇದರಿಂದಾಗಿ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ ಭಾಗದ ಜನತೆ ಗೋಪಾಲಗೌಡರನ್ನು ಒಬ್ಬ ಸಮರ್ಥ ಹೋರಾಟಗಾರ ಎಂದು ಭಾವಿಸಿತು. ಸಮಾಜವಾದಿ ಆಂದೋಲನವಾದ ಕಾಗೋಡು ಸತ್ಯಾಗ್ರಹವು ಗೌಡರನ್ನು ಒಬ್ಬ ಶಕ್ತಿಶಾಲಿ ಹೋರಾಟಗಾರರನ್ನಾಗಿ ರೂಪಿಸಿತು.

ಕಾಗೋಡು ಹೋರಾಟದ ಬೆನ್ನಲ್ಲಿಯೇ ೧೯೫೨ರಲ್ಲಿ ಪ್ರಥಮ ಮಹಾ ಚುನಾವಣೆ ನಡೆಯಿತು. ಇದರಲ್ಲಿ ಗೋಪಾಲಗೌಡರು ಆಗಿನ ಸಾಗರ-ಹೊಸನಗರ ವಿಧಾನಸಭಾ ಕ್ಷೇತ್ರಕ್ಕೆ 'ಸೋಷಲಿಸ್ಟ್ ಪಾರ್ಟಿ'ಯಿಂದ ಸ್ಪರ್ಧಿಸಿದ್ದರು. ಗೌಡರ ಪ್ರತಿಸ್ಪರ್ಧಿಯಾಗಿ ಕಾಂಗ್ರೆಸ್ ಪಕ್ಷದಿಂದ ಆಗರ್ಭ ಶ್ರೀಮಂತರಾದ ಎ.ಆರ್. ಬದರಿನಾರಾಯಣ ಅಯ್ಯಂಗಾರರು ಸ್ಪರ್ಧಿಸಿದರು. ಶಾಂತವೇರಿ ಗೋಪಾಲಗೌಡರು ಸ್ಪರ್ಧಿಸಿದ್ದ ಪ್ರಥಮ ಮಹಾಚುನಾವಣೆಯಲ್ಲಿನ ಎಲ್ಲಾ ಜವಾಬ್ದಾರಿಗಳನ್ನು ಬಿ.ಎಸ್. ಚಂದ್ರಶೇಖರ್ ಅವರು ವಹಿಸಿಕೊಂಡಿದ್ದರು. ಕೊನೆಗಳಿಗೆಯಲ್ಲಿ ಕೆಲವು ಅನಿರೀಕ್ಷಿತ ಬದಲಾವಣೆಗಳು ಉಂಟಾದವು. ಇದರ ಪರಿಣಾಮವಾಗಿ ಜಿ. ಸದಾಶಿವರಾಯರನ್ನು ತೀರ್ಥಹಳ್ಳಿ-ಕೊಪ್ಪ ಕ್ಷೇತ್ರಕ್ಕೆ ಅಭ್ಯರ್ಥಿಯನ್ನಾಗಿ ಮಾಡಲಾಯಿತು. ಸಾಗರ-ಹೊಸನಗರ ಕ್ಷೇತ್ರಕ್ಕೆ ಗೋಪಾಲಗೌಡರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲಾಯಿತು. ಹೆಸರಿಗೆ ತಕ್ಕಂತೆ ಈ ಪ್ರಥಮ ಮಹಾ ಚುನಾವಣೆಯು ಸಮಾಜವಾದಿ ಪಕ್ಷಕ್ಕೆ ಮಹಾ ಚುನಾವಣೆಯೇ ಆಗಿತ್ತು. ಗೋಪಾಲಗೌಡರ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಬದರಿ ನಾರಾಯಣ ಅವರು ಮೂಲತಃ ಆನಂದಪುರ ಹೋಬಳಿಯವರಾಗಿದ್ದರು. ದೊಡ್ಡ ಜಮೀನುದಾರರಾಗಿದ್ದ ಅವರು ಆಗಿನ ಡಿಸ್ಟ್ರಿಕ್ಟ್ ಬೋರ್ಡ್‌ನ ಅಧ್ಯಕ್ಷರಾಗಿದ್ದು ಜಿಲ್ಲೆಯಲ್ಲಿಯೇ ಪರಿಚಯಸ್ಥರಾಗಿದ್ದರು. ಆದರೆ ಅವರ ಸ್ವಂತ ಹೋಬಳಿ ಸಾಗರ-ಹೊಸನಗರ ಕ್ಷೇತ್ರಕ್ಕೆ ಸೇರಿರಲಿಲ್ಲ. ಇದೇ ಗೋಪಾಲಗೌಡರಿಗೆ ದೊಡ್ಡ ವರವಾಗಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲೇ ಪ್ರಬಲವಾಗಿದ್ದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಚುನಾವಣೆಯಲ್ಲಿ ಎದುರಿಸುವುದು ಅಷ್ಟು ಸುಲಭವಾಗಿರಲಿಲ್ಲ. ಗೋಪಾಲಗೌಡರ ಹತ್ತಿರ ಹಾಗೂ ಸಮಾಜವಾದಿ ಪಕ್ಷದವರ ಬಳಿ ಠೇವಣಿ ಕಟ್ಟಲೂ ಹಣವಿರಲಿಲ್ಲ. ಕಾಗೋಡು ರೈತ ಹೋರಾಟದಿಂದಾಗಿ ಬಡವರು, ರೈತರು ಹಾಗೂ ಕೂಲಿಕಾರರಲ್ಲಿ ಸಾಕಷ್ಟು ಪ್ರಭಾವ ಹೊಂದಿದ್ದೇ ಸಮಾಜವಾದಿ ಪಕ್ಷಕ್ಕೆ ದೊಡ್ಡ ಶಕ್ತಿಯಾಗಿತ್ತು. ಕಾಗೋಡು ಚಳವಳಿಯಲ್ಲಿ ರಾಮಮನೋಹರ ಲೋಹಿಯಾ ಅವರು ಭಾಗವಹಿಸಿದ್ದು, ಅಖಿಲ ಭಾರತ ಕಿಸಾನ್ ಸಭಾನಾಯಕ ರಮಾನಂದ ಮಿಶ್ರಾ ಅವರು ಕಾಗೋಡಿಗೆ ಬಂದು ರೈತರ ಹೋರಾಟವನ್ನು ಬೆಂಬಲಿಸಿದರು. ಇದು ಗೋಪಾಲಗೌಡರಿಗೆ ಅನುಕೂಲವಾಯಿತು. ಪ್ರಭಾವತಿದೇವಿ ಮತ್ತು ಜಯಪ್ರಕಾಶ್ ನಾರಾಯಣ ಅವರು ಸಾಗರಕ್ಕೆ ಭೇಟಿ ನೀಡಿದರು. ಸಾಗರದ ಗಾಂಧಿ ಮೈದಾನದಲ್ಲಿ ಬೃಹತ್ ಸಭೆಯನ್ನು ಉದ್ದೇಶಿಸಿ ಸೋಷಿಯಲಿಸ್ಟ್ ಪಕ್ಷದ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ಬೆಂಬಲಿಸುವಂತೆ ಕೋರಿದ್ದರು. ಇದರ ಜೊತೆಗೆ ನೇರ ಸ್ಪರ್ಧೆ ಇದ್ದದ್ದು ಅನುಕೂಲಕರವಾಯಿತು. ಸಮಾಜವಾದಿ ಪಕ್ಷದ ಅಧ್ಯಕ್ಷರಾದ ಸಿ.ಜಿ.ಕೆ. ರೆಡ್ಡಿಯವರ

ಪ್ರೇರಣೆ, ಯಾವುದೇ ಪ್ರತಿಫಲ ನಿರೀಕ್ಷಿಸದೆ ಸ್ವ-ಇಚ್ಛೆಯಿಂದ ಕಾರ್ಯನಿರ್ವಹಿಸುತ್ತಿದ್ದ ನಿಷ್ಠಾವಂತ ಪಕ್ಷದ ಕಾರ್ಯಕರ್ತರು, ಗೇಣಿ ರೈತರು ಹಾಗೂ ಅಭಿಮಾನಿಗಳ ದೊಡ್ಡ ಗುಂಪೇ ಇತ್ತು. ಗೋಪಾಲಗೌಡರ ಬಳಿ ಮತ್ತು ಸಮಾಜವಾದಿ ಪಕ್ಷದವರ ಹತ್ತಿರ ಚುನಾವಣಾ ಪ್ರಚಾರಕ್ಕಾಗಿ ಮೈಕಿಗೆ ಮತ್ತು ಸಂಚಾರ ವಾಹನಕ್ಕೆ ಹಣವಿರಲಿಲ್ಲ. ೧೯೫೨ರ ಸನ್ನಿವೇಶದಲ್ಲಿ ಚುನಾವಣಾ ಠೇವಣಿ ಹಣ ಕೇವಲ ೨೫೦ ರೂಪಾಯಿಗಳು. ಇದನ್ನು ಗೋಪಾಲಗೌಡರ ಎಲ್ಲಾ ಸ್ನೇಹಿತರು ಸೇರಿ ಸಂಗ್ರಹ ಮಾಡಿ ಕಟ್ಟಿದ್ದರು. ಪ್ರಥಮ ಚುನಾವಣೆಯಲ್ಲಿ ಪ್ರಚಾರಕ್ಕೆ ವಾಹನ ವ್ಯವಸ್ಥೆ ಮಾಡುವುದಕ್ಕೆ ಹಣಕಾಸಿನ ಕೊರತೆ ಇದ್ದುದರಿಂದ, ಕಾರ್ಯಕರ್ತರು ಪಾದಯಾತ್ರೆಯಲ್ಲಿ ಮನೆಮನೆಗೆ ಹೋಗಿ ಮತ ಯಾಚಿಸುತ್ತಿದ್ದರು. ಆರ್ಥಿಕವಾಗಿ ಅನುಕೂಲಸ್ಥರಾಗಿರುವವರ ಬಳಿಗೆ ಹೋಗಿ ಚುನಾವಣಾ ಪ್ರಚಾರಕ್ಕೆ ಹಣವನ್ನು ಸಂಗ್ರಹಿಸುತ್ತಿದ್ದರು. ಚುನಾವಣೆ ಮುಗಿಯುವಾಗ ಹೊರಗಡೆ ಸ್ವಲ್ಪ ಸಾಲವಾಗುತ್ತಿತ್ತು ಅದನ್ನು ಆ ನಂತರ ತೀರಿಸುತ್ತಿದ್ದರು.

ಗೋಪಾಲಗೌಡರು ಚುನಾವಣಾ ಪ್ರಚಾರ ಭಾಷಣದಲ್ಲೇ ಆಗಲಿ, ಮತದಾರರ ಹತ್ತಿರ ಮತ ಕೇಳುವಾಗ ಆಗಲಿ ಮತದಾರರಿಗೆ ಮನಮುಟ್ಟುವಂತೆ ಸಮಾಜವಾದಿ ಪಕ್ಷದ ವಿಚಾರಗಳನ್ನು ಹೇಳುತ್ತಿದ್ದರು. ಈ ಕಾರಣದಿಂದ ಅವರ ಭಾಷಣಕ್ಕೆ ಜನರು ಆಕರ್ಷಿತರಾಗುತ್ತಿದ್ದರು. ಅವರೆಂದೂ ಜಾತಿವಾದವನ್ನು ಹೇಳಿ ಮತ ಕೇಳಲಿಲ್ಲ. ಜಾತಿಯನ್ನಾಧರಿಸಿ ನೀವು ಮತ ನೀಡುವುದಾದರೆ ನನಗೆ ನಿಮ್ಮ ಮತ ಬೇಡವೆಂದು ಖಂಡತುಂಡವಾಗಿ ಹೇಳುತ್ತಿದ್ದರು. ಜಾತಿವಾದಿಗಳೆಂದರೆ ಅವರು ಉರಿದು ಬೆಂಕಿಯಾಗುತ್ತಿದ್ದರು. ಗೌಡರು ಒಕ್ಕಲಿಗರಾಗಿದ್ದರೂ ಸಹ ಅವರು ಹೆಚ್ಚಾಗಿ ಬೇರೆ ಜಾತಿಯವರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ತಮ್ಮ ಪ್ರತಿಸ್ಪರ್ಧಿಯಾಗಿದ್ದ ಬದರಿ ನಾರಾಯಣ ಅವರನ್ನು ಕುರಿತು ಎಂದೂ ಗೌಡರು ಲಘುವಾಗಿ ಮಾತನಾಡಲಿಲ್ಲ. ಅವರು ಏನಿದ್ದರೂ ತಾತ್ವಿಕ ನೆಲೆಗಟ್ಟಿನ ಮೇಲೆ ವಿಮರ್ಶೆ ಮಾಡುತ್ತಿದ್ದರು.[೨]

ಚುನಾವಣೆಯ ಖರ್ಚುವೆಚ್ಚಗಳಿಗೆ ಸಂಬಂಧಿಸಿದಂತೆ ಗೋಪಾಲಗೌಡರದ್ದೇ ಆದ ಒಂದು ವಿಶಿಷ್ಟ ಪದ್ಧತಿಯಿತ್ತು. ಚುನಾವಣೆಯ ಸಂದರ್ಭದಲ್ಲಿ ಗೌಪಾಲಗೌಡರು ತಾವೇ ಖುದ್ದಾಗಿ ಹಣವನ್ನು ಪಡೆಯುತ್ತಿರಲಿಲ್ಲ. ಅದಕ್ಕಾಗಿ ಒಂದು ಸಮಿತಿ ಮಾಡುತ್ತಿದ್ದರು. ಆ ಸಮಿತಿಯವರೇ ಹಣ ಸಂಗ್ರಹ, ಖರ್ಚು, ಲೆಕ್ಕಪತ್ರವನ್ನು ಇಡುತ್ತಿದ್ದರು. ಗೋಪಾಲಗೌಡರು ಆರಗದಿಂದ ಚುನಾವಣಾ ಪ್ರಚಾರ ಆರಂಭಿಸಿದರು. ಚುನಾವಣಾ ಪ್ರಚಾರ ಪ್ರಾರಂಭವಾದ ಅನಂತರವೇ ಸಭೆ ನಡೆಸಲು ಅನುಕೂಲವಾಗುವಂತೆ ಬಾಡಿಗೆಗೆ ಒಂದು ಕಾರು, ಮೈಕ್ ಇರುತ್ತಿತ್ತು. ಪ್ರತಿ ಚುನಾವಣೆಯಲ್ಲಿಯೂ ಅವರಿಗೆ ತಿಮ್ಮಣ್ಣ ಎಂಬ ಕಾರು ಡ್ರೈವರ್‌ನೇ ಆಗಬೇಕಾಗಿತ್ತು. ಈತನ ಬಗ್ಗೆ ಗೋಪಾಲಗೌಡರಿಗೆ ನಂಬಿಕೆ ಮತ್ತು ಪ್ರೀತಿ ಇತ್ತು. ತಿಮ್ಮಣ್ಣನು ಕೇವಲ ಬಾಡಿಗೆ ಕಾರಿನ ಮಾಲಿಕನಷ್ಟೇ ಆಗಿರದೆ, ಗೌಡರಿಗೆ ಸಮಯದ ಎಚ್ಚರಿಕೆಯನ್ನು ನೀಡುತ್ತಿದ್ದನಂತೆ. ರಿಪ್ಪನ್‌ಪೇಟೆಯ ಸುಲೇಮಾನ್, ಸುಕುಮಾರ್, ಶಿವಪ್ಪಗೌಡ ಹಾಗೂ ರೈತ ಮುಖಂಡ ಬಂಗಾರಪ್ಪ ಸೇರಿದಂತೆ ಇನ್ನೂ ಮುಂತಾದವರು ಗೌಡರ

ಜೊತೆ ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದರು. ಗರ್ತಿಕೆರೆ ರಾಘವೇಂದ್ರ (ಈಗ ಎಂಭತ್ತರ ವಯಸ್ಸನ್ನು ದಾಟಿರುವ ಗರ್ತಿಕೆರೆ ರಾಘವೇಂದ್ರ ಅವರು 'ಮಲೆನಾಡು ಕೋಗಿಲೆ' ಎಂದೇ ಪ್ರಸಿದ್ಧರಾಗಿದ್ದು, ಗರ್ತಿಕೆರೆ ರಾಘಣ್ಣ ಎಂದೇ ಜನಪ್ರಿಯರಾಗಿದ್ದಾರೆ)ನೆಂಬ ಹುಡುಗ ಗೋಪಾಲಗೌಡರ ಪ್ರೀತಿಯ ಶಿಷ್ಯನಾಗಿದ್ದು, ಲಾವಣಿಗಳನ್ನು ಕಟ್ಟಿ ಗೌಡರ ಪರವಾಗಿ ಚುನಾವಣೆ ಪ್ರಚಾರ ಮಾಡುತ್ತಿದ್ದನಂತೆ. ಗೋಪಾಲಗೌಡರ ಪರವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಿ ಮತ ಕೇಳಿದವರೆಂದರೆ ಆರಗದ ನಾರಾಯಣಮೂರ್ತಿ, ಬಸಪ್ಪ, ಸೂರಪ್ಪ, ಧರ್ಮಯ್ಯ, ಹೈದರ್, ಸೀಗೆಬಳ್ಳಿ ಮಂಜಪ್ಪ, ಹೂವಪ್ಪ, ಕಾಳಪ್ಪ, ವೆಂಕಟರಮಣ, ಕೋಣಂದೂರು ಈಶ್ವರಪ್ಪ, ಭಾವಿಕೈ ತಿಮ್ಮಣ್ಣಗೌಡ, ಕೋಣಂದೂರು ಲಿಂಗಪ್ಪ, ತೀರ್ಥಹಳ್ಳಿಯ ಶ್ಯಾಮೈಥಾಳರು, ಬೆಟ್ಟಮಕ್ಕಿ ಗುರುಮೂರ್ತಿ, ಮೇಗರವಳ್ಳಿ ಶೇಷಪ್ಪ ಹೆಗಡೆ, ಎಂ.ವಿ. ರಾಮಪ್ಪ, ನಾಬಳದ ಹೆಗಡೆಯವರು, ಶಂಕರನಾರಾಯಣಭಟ್ಟ, ವಡ್ಡಿನಬೈಲು ರಾಮಕೃಷ್ಣ, ಯು.ಆರ್. ಅನಂತಮೂರ್ತಿ, ಜೋಗಪ್ಪ ಭಂಡಾರಿ, ಕೊಲ್ಲೂರಯ್ಯ ದಂಪತಿಗಳು, ಸಿ. ರಘುನಾಥರಾಯ, ಜಿ.ಆರ್.ಜಿ. ನಗರ, ಎಸ್.ಎಸ್. ಕುಮಟಾ, ವಾಳದ ಹನುಮಂತ, ಎಚ್. ವೆಂಕಟರಾವ್‌ಯಾನೆ ಬಾಬು, ಎನ್.ಆರ್. ಮಾಸೂರ, ಡಿ. ಸುಬ್ಬರಾವ್, ಎಂ.ಪಿ. ಕಲ್ಕೂರ್, ಡಾ. ಮೋಹನದಾಸ್, ಕಾಗೋಡು ಸದಾಜಿಬೀರನಾಯ್ಕ, ಕಾಗೋಡು ಕಣಸೆ ಜಟ್ಯಪ್ಪ, ಕಾಗೋಡು ತಿಮ್ಮಪ್ಪ, ಮಾಚೂರು ವೀರಭದ್ರಪ್ಪ, ಹೆಗ್ಗೋಡಿನ ಕರಿಯ ಭಂಡಾರಿ, ಮೇದಗಿರಿ ನಾಯಕ, ಹ.ಸಾ. ಹಸನ್ ಮುಂತಾದವರು.ಈ ಎಲ್ಲಾ ಹೆಸರನ್ನು ಮತ್ತು ಅವರ ಹಿನ್ನೆಲೆಗಳನ್ನು ಗಮನಿಸಿದಾಗ ಗೋಪಾಲಗೌಡರ ಚುನಾವಣೆಗಳಲ್ಲಿ ಅವರ ಬೆಂಬಲಿಗರಾಗಿದ್ದ ಇವರೆಲ್ಲರೂ ಜಾತ್ಯತೀತವಾಗಿ ಸಮಾಜವಾದಿ ಪಕ್ಷವನ್ನು ಬೆಂಬಲಿಸಿದ್ದರು.

ಗೋಪಾಲಗೌಡರ ಪರವಾಗಿ ಕ್ಷೇತ್ರದ ಎಲ್ಲಾ ಕಡೆ ಪ್ರಚಾರದ ವ್ಯವಸ್ಥೆಯಾಗಿತ್ತು. ಸೋಶಿಯಲಿಸ್ಟ್ ಪಾರ್ಟಿಯ ಹೆಸರು, ಚುನಾವಣಾ ಗುರುತಾದ 'ಆಲದ ಮರ'ವನ್ನು ಕೆತ್ತಿಸಿ ಊರಿನ ಗೋಡೆಗಳ ಮೇಲೆಲ್ಲ ಹುರಿಮಂಜಿನಿಂದ ಅಚ್ಚು ಹಾಕಿಸಲಾಗುತ್ತಿತ್ತು. ಇದೆಲ್ಲದರ ನಡುವೆ ಬದರಿ ನಾರಾಯಣ ಅವರು ಹಾಗೂ ಇನ್ನಿತರರು ಗೋಪಾಲಗೌಡರ ಪರವಾಗಿ ಪ್ರಚಾರ ಮಾಡುತ್ತಿದ್ದ ಬಿ.ಎಸ್. ಚಂದ್ರಶೇಖರ್ ಅವರಿಗೆ ಚುನಾವಣಾ ಪ್ರಚಾರಕಾರ್ಯದಿಂದ ಹಿಂದೆ ಸರಿಯುವಂತೆ ಹಲವು ರೀತಿಯಲ್ಲಿ ಒತ್ತಡ ಹೇರುತ್ತಿದ್ದರು. ಆದಾಗ್ಯೂ ಗೋಪಾಲಗೌಡರ ಪರವಾಗಿ ಪ್ರಚಾರ ಮಾಡುತ್ತಿದ್ದವರೆಲ್ಲರೂ ಪಕ್ಷಾಂತರ ಮಾಡದೆ ಶ್ರಮಿಸಿದರು. ಚುನಾವಣೆಯ ನಂತರದ ಫಲಿತಾಂಶದಲ್ಲಿ ಗೋಪಾಲಗೌಡರು ಜಯಶಾಲಿಗಳಾಗಿದ್ದರು. ಈ ಚುನಾವಣೆಯ ಮೂಲಕ ಜನತೆ ಒಬ್ಬ ಶ್ರೇಷ್ಠ ಸಂಸದೀಯ ಪಟುವನ್ನು ಈ ನಾಡಿಗೆ ಕೊಟ್ಟಿತು. ಗೋಪಾಲಗೌಡರು ಶಾಸನ ಸಭೆಯಲ್ಲಿ ಸೋಷಲಿಸ್ಟ್ ಪಕ್ಷದ ಏಕೈಕ ಸದಸ್ಯರಾಗಿ ಆಯ್ಕೆಯಾದರು.

೧೯೫೭ರಲ್ಲಿ ಸಾಗರ ವಿಧಾನಸಭಾ ಕ್ಷೇತ್ರ ಒಡೆದು, ತೀರ್ಥಹಳ್ಳಿಯ ಮೂರು ಹೋಬಳಿ, ಹೊಸನಗರ ತಾಲ್ಲೂಕು ಮತ್ತು ಸಾಗರದ ಆನಂದಪುರ ಹೋಬಳಿ ಸೇರಿ ಒಂದು ವಿಧಾನಸಭಾ

ಕ್ಷೇತ್ರವಾಯಿತು. ಈ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದಿಂದ ಗೋಪಾಲಗೌಡರು ಮತ್ತು ಕಾಂಗ್ರೆಸ್ಸಿನಿಂದ ಬದರಿ ನಾರಾಯಣರವರು ಸ್ಪರ್ಧಿಸಿದ್ದರು. ಚುನಾವಣಾ ಪೂರ್ವದಲ್ಲಿ ಈ ಕ್ಷೇತ್ರದಲ್ಲಿ ಡಾ. ರಾಮಮನೋಹರ ಲೋಹಿಯಾ ಅವರು ಸಂಚಾರ ಮಾಡಿ ಪಕ್ಷದ ಪರ ಪ್ರಚಾರ ಮಾಡಿದರು. ಈ ಸಾರಿ ಎಲ್ಲಾ ಶ್ರೀಮಂತರು, ಜಮೀನ್ದಾರರು ಒಟ್ಟು ಸೇರಿ ಪ್ರಬಲವಾಗಿ ಸೆಣಸಿದರು. ಮಾಡಬಾರದ ವಿದ್ಯೆಗಳನ್ನೆಲ್ಲಾ ಪ್ರಯೋಗಿಸಿದರು. ಬದರಿಯವರ ಗೆಲುವಿಗಾಗಿ, ಜಾತಿಯ ಬೀಜ ಬಿತ್ತಿದರು.ಇದಕ್ಕೆ ವಿರುದ್ಧವಾಗಿ ಗೋಪಾಲಗೌಡರು ಸಮಾಜವಾದಿ ಚಿಂತನೆಗಳನ್ನು ಚುನಾವಣಾ ಪ್ರಚಾರದಲ್ಲಿ ಬಿತ್ತಿದರು. ಮಾಮೂಲಿಯಂತೆ ಡ್ರೈವರ್ ತಿಮ್ಮಣ್ಣನನ್ನೇ ಸಾರಥಿಯನ್ನಾಗಿ ಮಾಡಿಕೊಂಡು ಹಳ್ಳಿ ಹಳ್ಳಿಗಳಲ್ಲಿ ಸಭೆ ಭಾಷಣವನ್ನು ಮಾಡುತ್ತಿದ್ದರು. ಗೋಪಾಲಗೌಡರ ಚುನಾವಣಾ ಪ್ರಚಾರದ ಸಭೆಯ ಕಾರ್ಯಕ್ರಮ ೧೦ ಗಂಟೆಗೆ ಅಂದರೆ, ೧೨ ಗಂಟೆಗೆ ಆರಂಭವಾಗುತ್ತಿತ್ತು. ತಡವಾಗಿ ಬಂದರೂ ಸಹ ಜನ ಅವರ ಭಾಷಣಕ್ಕಾಗಿ ಕಾಯುತ್ತಿದ್ದರು ಮತ್ತು ಆಸಕ್ತಿಯಿಂದ ಭಾಷಣವನ್ನು ಆಲಿಸುತ್ತಿದ್ದರು. ಗೋಪಾಲಗೌಡರನ್ನು ಜನತೆ ಪ್ರೀತಿಸಿ, ಗೌರವಿಸಿ ಸ್ವಾಗತಿಸುತ್ತಿದ್ದರು. ಆದರೆ ಸಮಾಜವಾದಿ ಪಕ್ಷದ ದುರಾದೃಷ್ಟ ೧೯೫೭ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಗೋಪಾಲಗೌಡರು ಸೋಲು ಅನುಭವಿಸಿದರು.

೧೯೬೨ರಲ್ಲಿ ಮೂರನೇ ವಿಧಾನಸಭಾ ಚುನಾವಣೆ ಬಂದಿತು. ಪುನಃ ಕ್ಷೇತ್ರ ಬದಲಾವಣೆ ಆಯಿತು. ಈ ಸಾರಿ ತೀರ್ಥಹಳ್ಳಿ ಪೂರ್ಣ ತಾಲ್ಲೂಕು ಹಾಗೂ ಹೊಸನಗರ ತಾಲ್ಲೂಕಿನ ನಗರ ಹೋಬಳಿ ಸೇರಿ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರವಾಯಿತು. ಸಮಾಜವಾದಿ ಪಕ್ಷದಿಂದ ಗೋಪಾಲಗೌಡರು ಪುನಃ ಸ್ಪರ್ಧಿಸಿದರು. ಇವರ ವಿರುದ್ಧ ಕಾಂಗ್ರೆಸ್ಸಿನಿಂದ ಕೆ.ಟಿ. ದಾನಮ್ಮ, ಜನಸಂಘದಿಂದ ಎಚ್. ರಾಮಕೃಷ್ಣ ಪ್ರಭು, ಸೋನಲೇ ಸ್ವಾಮಿರಾವ್, ಗುಡ್ಡೇಕೇರಿ ವೆಂಕಪ್ಪ ಹೆಗ್ಡೆ ಸ್ಪರ್ಧಿಸಿದರು. ಈ ಚುನಾವಣೆಯಲ್ಲಿ ಗೋಪಾಲಗೌಡರು ಅತಿ ಹೆಚ್ಚು ಮತಗಳನ್ನು ಪಡೆದು ವಿಧಾನಸಭೆಯನ್ನು ಪ್ರವೇಶಿಸಿದರು. ಆದರೆ ಚುನಾವಣಾ ನಂತರ ಗೌಡರು ಅನಾರೋಗ್ಯಕ್ಕೆ ತುತ್ತಾದರು, ಸುಧಾರಿಸಿಕೊಳ್ಳಲು ಎರಡು ತಿಂಗಳುಗಳೇ ಬೇಕಾಯಿತು.

೧೯೬೭ರಲ್ಲಿ ಮತ್ತೆ ಮಹಾಚುನಾವಣೆ ಬಂದಿತು. ಈ ಸಾರಿಯೂ ಸೋಷಲಿಸ್ಟ್ ಪಕ್ಷದಿಂದ ಗೋಪಾಲಗೌಡರೇ ಸ್ಪರ್ಧಿಸಿದರು. ಕಾಂಗ್ರೆಸ್ ಪಕ್ಷದಿಂದ ಬಿ.ಎಸ್. ವಿಶ್ವನಾಥ ಅವರನ್ನು ಪ್ರತಿಸ್ಪರ್ಧಿಯನ್ನಾಗಿ ನಿಲ್ಲಿಸಲಾಯಿತು. ವಿಶ್ವನಾಥ ಅವರು ರಾಜಕೀಯದಲ್ಲಿ ಗೋಪಾಲಗೌಡರ ಶಿಷ್ಯರು. ಈ ಗುರುಶಿಷ್ಯರ ನಡುವಿನ ಸ್ಪರ್ಧೆ ಪ್ರಬಲವಾಗಿತ್ತು. ಕಾಂಗ್ರೆಸ್ ಪಕ್ಷ ಹಾಗೂ ಹಲವು ಜನ ಮಂತ್ರಿಗಳೆಲ್ಲ ಸೇರಿ ಗೋಪಾಲಗೌಡರನ್ನು ರಾಜಕೀಯ ಕ್ಷೇತ್ರದಿಂದಲೇ ನಿರ್ಗಮಿಸುವಂತೆ ಮಾಡಬೇಕೆಂದು ಪಣತೊಟ್ಟು ಪ್ರಚಾರ ಮಾಡಿದ್ದರು. ರಾಜ್ಯದ ಮುಖ್ಯಮಂತ್ರಿಗಳೇ ಖುದ್ದಾಗಿ ಸಹಾಯ ಮಾಡಲು (ಕಾಂಗ್ರೆಸ್ ಪರವಾಗಿ) ತೀರ್ಥಹಳ್ಳಿಗೆ ಬಂದಿದ್ದರು. ಈಗಾಗಲೇ ಗೋಪಾಲಗೌಡರು ತತ್ವನಿಷ್ಠೆ, ಪ್ರಾಮಾಣಿಕತೆ, ನಿರ್ಭಯತೆ, ಸಂಸದೀಯ ನಡವಳಿಕೆಯಿಂದ ಆದರ್ಶ ರಾಜಕಾರಣಿಯಾಗಿ

ಜನಪ್ರಿಯರಾಗಿದ್ದರು. ಕಾಂಗ್ರೆಸ್ ಪಕ್ಷದ ಕರ್ಮಕಾಂಡದ ದುರಂತ ಕಥೆಗಳನ್ನೆಲ್ಲಾ ನಾಡಿನ ಜನತೆಯ ನಾಲಿಗೆಗೆ ಆಹಾರವನ್ನಾಗಿಸಿದ್ದರು. ಗೋಪಾಲಗೌಡರು ತಮ್ಮ ಸಾರಥಿ ಡ್ರೈವರ್ ತಿಮ್ಮಣ್ಣನೊಂದಿಗೆ ಚುನಾವಣಾ ಕಣಕ್ಕಿಳಿದರು. ಈ ಸಾರಿಯ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷವು ಗೋಪಾಲಗೌಡರಿಗೆ ಸಂಪೂರ್ಣ ಬೆಂಬಲ ನೀಡಿತು. ಅದರಲ್ಲೂ ಕಮ್ಯುನಿಸ್ಟ್ ನಾಯಕ ಅಪ್ಪಣ್ಣ ಹೆಗ್ಡೆಯವರ ಪಾತ್ರ ಚಿರಸ್ಮರಣೀಯವಾಗಿತ್ತು. ಗೋಪಾಲಗೌಡರು ಪುನಃ ಪ್ರಚಂಡ ಬಹುಮತದಿಂದ ಗೆದ್ದರು. ಈ ಚುನಾವಣೆಯೇ ಗೋಪಾಲಗೌಡರ ಕಡೆಯ ಚುನಾವಣೆ.

ಭಾರತದಲ್ಲಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದಾಗ ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಹುಟ್ಟಿತ್ತು. ತದನಂತರದ ದಿನಗಳಲ್ಲಿ ಸೋಷಲಿಸ್ಟ್ ಪಕ್ಷ ಹುಟ್ಟಿತು. ಸೋಷಲಿಸ್ಟ್ ಪಕ್ಷದ ಬೇರು ಉತ್ತರ ಭಾರತವಾಗಿದ್ದರೂ ದಕ್ಷಿಣ ಭಾರತದಲ್ಲೂ ಅದಕ್ಕೆ ಸಾಮಾಜಿಕ ಬುನಾದಿಯನ್ನು ನಿರ್ಮಾಣ ಮಾಡಲಾಯಿತು. ಕರ್ನಾಟಕದಲ್ಲಿ ಶಿವಮೊಗ್ಗ ಭಾಗದಲ್ಲಿ ಸಮಾಜವಾದಿ ಪಕ್ಷದ ಪ್ರಭಾವ ಆಯಿತು. ಆ ಪ್ರಭಾವದಲ್ಲಿ ಗೋಪಾಲಗೌಡರು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡರು. ಬಹಳ ಮುಖ್ಯವಾಗಿ ದೀನ ದಲಿತರು, ಬಡವರು, ಕಾರ್ಮಿಕರು ಮತ್ತು ಮಹಿಳೆಯರು ಇವರ ಪರವಾಗಿ ಧ್ವನಿ ಎತ್ತುವ ಹಾಗೂ ಇವರ ಹಕ್ಕುಗಳಿಗಾಗಿ ಹೋರಾಡುವ ಒಂದು ಪಕ್ಷವನ್ನು ಗೌಡರು ಸಂಘಟಿಸಿದರು. ಜೊತೆಗೆ ಇದೇ ಪಕ್ಷದಿಂದ ಚುನಾವಣೆಗೆ ಧುಮುಕಿದರು. ಮೂರು ಸಲ ವಿಧಾನಸಭೆಯನ್ನು ಪ್ರವೇಶ ಮಾಡಿದರು. ಆಗ ತಾನೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಆಧುನಿಕ ಪ್ರಜಾಪ್ರಭುತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಇಂತಹ ಸಮಯದಲ್ಲಿ ಭಾರೀ ಭೂಮಾಲೀಕರು ಮತ್ತು ಬಂಡವಾಳಶಾಹಿಗಳ ಪರವಾಗಿ ರಾಜಕಾರಣ ಹಾಗೂ ಸರಕಾರ ಆಸಕ್ತಿ ತಾಳುವಂತಹ ಚಾರಿತ್ರಿಕ ಪರಿಸ್ಥಿತಿ ಇತ್ತು. ಇಂತಹ ಚಾರಿತ್ರಿಕ ಬಿಕ್ಕಟ್ಟಿನಲ್ಲಿ ವಿಧಾನಸಭೆಯನ್ನು ಪ್ರವೇಶ ಮಾಡಿದ ಗೌಡರು ತಮ್ಮ ಸಮಾಜವಾದಿ ಚಿಂತನೆಗಳ ಬದ್ಧತೆಯಿಂದ ದೀನ ದಲಿತರು, ಬಡವರು, ಕಾರ್ಮಿಕರು ಮತ್ತು ಮಹಿಳೆಯರ ಪರವಾಗಿ ಸದನದಲ್ಲಿ ಧ್ವನಿ ಎತ್ತಿದರು. ಅಷ್ಟು ಮಾತ್ರವಲ್ಲ ಆ ಹೊತ್ತಿಗೆ ಇಡೀ ಸಾಮಾಜಿಕ ಬದುಕನ್ನು ಹಾಗೂ ಆಧುನಿಕ ರಾಜಕಾರಣವನ್ನು ಮತ್ತು ಇಡಿಯಾಗಿ ಪ್ರಜಾಪ್ರಭುತ್ವವನ್ನೇ ಆವರಿಸಿದ್ದ ಅನೇಕ ಸಮಸ್ಯೆಗಳನ್ನು ಅವಲೋಕಿಸಿದರೆ ಅವುಗಳು ಎಷ್ಟು ಮಹತ್ವದವು ಎಂಬುದು ತಿಳಿಯುತ್ತದೆ. ಅದಕ್ಕೆ ಈ ಮುಂದಿನ ವಿಷಯಗಳನ್ನು ಉದಾಹರಣೆಯನ್ನಾಗಿ ನೋಡಬಹುದು. ಚುನಾವಣೆ, ಅಧಿಕಾರ ವಿಕೇಂದ್ರೀಕರಣ, ಪೊಲೀಸ್ ವ್ಯವಸ್ಥೆ, ಜೈಲೊಳಗಿನ ಸಮಸ್ಯೆ, ಗೇಣಿದಾರರ ಸಂಕಟ, ಭೂ ಸುಧಾರಣೆ, ಭೂಸುಧಾರಣೆ–ಇನಾಂ ರದ್ದಿಯಾತಿ ಕಾಯಿದೆ, ಗ್ರಾಮಾಂತರ ಪ್ರದೇಶದ ನೌಕರರು, ರಾಷ್ಟ್ರೀಯ ರಜಾ ದಿನಗಳು, ಪಠ್ಯ ಪುಸ್ತಕಗಳು, ಮಲೆನಾಡು ಪ್ರದೇಶ, ಕರ್ನಾಟಕದ ಗಡಿ ಭಾಗಗಳು ಮತ್ತು ಸಮಾಜದಲ್ಲಿ ಧಾರ್ಮಿಕ ಸಂಸ್ಥೆಗಳು ಈ ಎಲ್ಲ ವಿಚಾರಗಳ ಕುರಿತು ಸದನದಲ್ಲಿ ಪರಿಣಾಮಕಾರಿಯಾಗಿ ಚರ್ಚೆಗೆ ಒಳಪಡಿಸುತ್ತಿದ್ದರು. ಶಾಸಕರಾಗಿ ೧೫ ವರ್ಷಗಳ ಕಾಲ ಶಾಸನ ಸಭೆಯಲ್ಲಿ ಅವರು ತೊಡಗಿಸಿಕೊಂಡ ರೀತಿ ಜನಪರವಾಗಿದ್ದು ಅನೇಕ ರಾಜಕಾರಣಿಗಳಿಗೆ ಮಾದರಿಯಾಗಿದೆ.

೫.೨. 'ಅಧಿಕಾರ ವಿಕೇಂದ್ರೀಕರಣ'ವನ್ನು ಕುರಿತ ನಿಲುವು

ಭಾರತವು ಮೂಲಭೂತವಾಗಿ ರಾಜ್ಯಗಳ ಒಕ್ಕೂಟ. ಭಾರತದ ಸಂವಿಧಾನವು ಇದನ್ನು ಒಕ್ಕೂಟ ವ್ಯವಸ್ಥೆ ಎಂದು ಕರೆದಿದೆ. ಈ ದೃಷ್ಟಿಯಿಂದ ಕೇಂದ್ರದ ಅಧಿಕಾರ ಕೇಂದ್ರಕ್ಕೆ ರಾಜ್ಯಗಳ ಅಧಿಕಾರ ರಾಜ್ಯಗಳಿಗೆ. ಅಧಿಕಾರದ ಕೇಂದ್ರೀಕರಣ ಎಂದರೆ ಅದು ಸಂಪತ್ತಿನ ಕೇಂದ್ರೀಕರಣವೂ ಹೌದು. ಇಷ್ಟು ಮಾತ್ರವೇ ಅಲ್ಲ; ಇದರ ಜೊತೆಗೆ ಅವಕಾಶಗಳ ಕೇಂದ್ರೀಕರಣ ಹಾಗೂ ಸೌಲಭ್ಯಗಳ ಕೇಂದ್ರೀಕರಣ. ದೃಷ್ಟಿಯಿಂದ ಪ್ರಪಂಚದ ಎಲ್ಲಾ ಸಮಾಜವಾದಿಗಳೂ ಕೂಡ ಅಧಿಕಾರದ ಕೇಂದ್ರೀಕರಣದ ವಿರುದ್ಧ ಹಾಗೂ ಅಧಿಕಾರದ ವಿಕೇಂದ್ರೀಕರಣದ ಬಗೆಗೆ ತಮ್ಮ ರಾಜಕೀಯ ಚಿಂತನೆಗಳನ್ನು ಮಂಡಿಸಿದ್ದಾರೆ. ಪ್ರಜೆಗಳ ಬಗೆಗೆ, ದುಡಿಯುವ ಜನರ ಬಗೆಗೆ ವಿಶೇಷವಾದ ಹಾಗೂ ಪ್ರಾಮಾಣಿಕವಾದ ಕಾಳಜಿ ಇದ್ದಾಗ ಈ ಬಗೆಯ ರಾಜಕೀಯ ಆಲೋಚನೆಗಳು ಹುಟ್ಟುತ್ತವೆ. ಅಧಿಕಾರದ ಕೇಂದ್ರೀಕರಣ ಎಂದರೆ ಅದು ತಾರತಮ್ಯ, ಅನ್ಯಾಯ, ಸ್ವಜನಪಕ್ಷಪಾತ, ಭ್ರಷ್ಟಾಚಾರ ಹಾಗೂ ಶೋಷಣೆಗಳನ್ನು ಪರೋಕ್ಷವಾಗಿ ಬೆಂಬಲಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ. ಈ ದೃಷ್ಟಿಯಿಂದಲೇ ಭಾರತದ ಹಾಗೂ ಕರ್ನಾಟಕದ ಸಮಾಜವಾದಿಗಳು ಅಧಿಕಾರ ವಿಕೇಂದ್ರೀಕರಣದ ಬಗೆಗೆ ಆಲೋಚಿಸಿದ್ದಾರೆ ಹಾಗೂ ಮಾತಾಡಿದ್ದಾರೆ. ಹಾಗಾಗಿ ಪ್ರಾಂತ್ಯಗಳ ಪುನರ್ ವಿಂಗಡಣೆಯನ್ನು ಮಾಡುವ ದೊಡ್ಡ ಉದ್ದೇಶವೆಂದರೆ ಆಯಾ ಪ್ರದೇಶದ ಜನತೆ ಅವರವರ ಅನುಕೂಲಕ್ಕೆ ತಕ್ಕ ಹಾಗೆ ಆಡಳಿತ ನಡೆಸುವುದಕ್ಕೆ ಮತ್ತು ಅವರ ಆಡಳಿತವನ್ನು ಒಂದು ಆರ್ಥಿಕ ಸುಭದ್ರತೆಯ ಮೇಲೆ ಅವರು ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಿರುವಂತಹ ಒಂದೊಂದು ರಾಜ್ಯವನ್ನು ಏರ್ಪಾಡು ಮಾಡಬೇಕು ಎಂಬುದು ಗೋಪಾಲಗೌಡರ ಅಭಿಪ್ರಾಯವಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಅವರ ಮುಂದಿನ ಮಾತುಗಳನ್ನು ಗಮನಿಸಬಹುದು.

ಈ ಪ್ರಜಾಪ್ರಭುತ್ವ ಸಾರ್ಥಕವಾಗಬೇಕಾದರೆ ಹೆಚ್ಚು ಹೆಚ್ಚಾಗಿ ಅಧಿಕಾರದ, ಹಣದ ಮತ್ತು ರಾಜಕೀಯ ಸತ್ತೆಯ ವಿಕೇಂದ್ರೀಕರಣವಾಗಬೇಕು. ಆದರೆ ಈ ದಿನ ಯೋಜನೆಗಳನ್ನು ರಚನೆ ಮಾಡಿ ಕೈಗೊಳ್ಳುವ ಒಂದು ನೆಪದಲ್ಲಿ ಮತ್ತು ಭಾರತದ ಭದ್ರತೆಯ ನೆಪದಲ್ಲಿ ಹೆಚ್ಚು ಹೆಚ್ಚಾಗಿ ಅಧಿಕಾರಗಳು ಕೇಂದ್ರದ ಕೈ ಸೇರುತ್ತಾ ಇವೆ. ಹಣಕಾಸಿನ ವಿಷಯದಲ್ಲಿ ಮತ್ತು ರಾಜಕೀಯ ಸತ್ತಾತ್ಮಕ ಅಧಿಕಾರದ ವಿಚಾರದಲ್ಲಿ ಕೇಂದ್ರೀಕರಣ ಹೆಚ್ಚು ಹೆಚ್ಚಾಗಿ ಆಗುತ್ತಾ ಇದೆ. ಅದು ದಿನದಿನಕ್ಕೆ ಹೆಚ್ಚುತ್ತಾ ಇದೆ. ಇಂತಹ ಒಂದು ಕಾರ್ಯಕ್ರಮಗಳು ದೇಶದ ಶಕ್ತಿಯನ್ನು ಕುಂದು ಮಾಡುವುದಲ್ಲದೆ ಪ್ರಜಾಪ್ರಭುತ್ವವನ್ನೇ ಅಲ್ಲಗಳೆಯತಕ್ಕ ಕಾರ್ಯಗಳಾಗಿವೆ[೩] ಎಂದು ಕೇಂದ್ರೀಕರಣದತ್ತ ಸಭೆಯ ಗಮನವನ್ನು ಸೆಳೆಯುತ್ತಾರೆ. ನಾವು ಸ್ವರಾಜ್ಯವನ್ನು ಹಾಗೂ ಸರ್ವೋದಯ ರಾಜ್ಯವನ್ನು ಒಂದು ಸಹಕಾರಿ ಕಾಮನ್‌ವೆಲ್ತ್ ಎನ್ನುವ ದೊಡ್ಡ ದೊಡ್ಡ ಉದ್ದೇಶವನ್ನು ಮತ್ತು ಸಮಾಜವಾದದ ಮಾದರಿಯ ಸಮಾಜವನ್ನು ಗುರಿಯಾಗಿಟ್ಟುಕೊಂಡಿದ್ದೇವೆ ಎಂದು ಹೇಳುತ್ತಾ ಸಾಗಿದ್ದೇವೆ. ಅಧಿಕಾರದಲ್ಲಿರುವ ಜನರು ಪ್ರತಿಕ್ಷಣದಲ್ಲಿಯೂ ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಮನುಷ್ಯನಿಗಿರುವ

ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದಾರೆ. ಈ ವಿಷಯವು ಪಂಚಾಯತಿ, ಡಿಸ್ಟ್ರಿಕ್ಟ್ ಬೋರ್ಡ್ ಅಥವಾ ಮತ್ತಾವ ಸಂಸ್ಥೆಯಲ್ಲಿ ನಾಮಕರಣ ವ್ಯವಸ್ಥೆಯನ್ನು ಮಾಡುವಾಗ ಎದ್ದುಕಾಣುತ್ತದೆ. ವಾಸ್ತವವಾಗಿ ಪ್ರಜಾಪ್ರಭುತ್ವದಲ್ಲಿ ಜನತೆ ತಮ್ಮ ಅಧಿಕಾರವನ್ನು ತಾವೇ ನಿರ್ವಹಿಸಿ, ಜವಾಬ್ದಾರಿಯನ್ನೂ ತಾವೇ ನಿಭಾಯಿಸಿಕೊಳ್ಳುತ್ತಾರೆ. ಆ ಮೂಲಕ ಪ್ರಗತಿ ಅಥವಾ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುತ್ತಾರೆ. ಆದರೆ ಪ್ರಾಂತೀಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಅವರ ಜವಾಬ್ದಾರಿ ಮತ್ತು ಹಕ್ಕುಗಳನ್ನು ಕಸಿದುಕೊಳ್ಳಲು ಯತ್ನಿಸುತ್ತಿವೆ. ಇದು ಸರ್ವಥಾ ಸಲ್ಲದು. ಅಲ್ಲದೆ ಇಂತಹ ಮನೋಭಾವ ಸಂಪೂರ್ಣವಾಗಿ ತೊಲಗಬೇಕು ಎಂದು ಶಾಂತವೇರಿ ಗೋಪಾಲಗೌಡರು ತಮ್ಮ ವಾದವನ್ನು ಮಂಡಿಸುತ್ತಾರೆ. ರಾಜ್ಯದ ಜನರನ್ನು ಅವರ ಮನೋಭಾವವನ್ನು ನಂಬದಿರುವ ಸರ್ಕಾರಗಳು ಇಂತಹ ಕೆಲಸವನ್ನು ಮಾಡಲು ಮುಂದಾಗುತ್ತವೆ. ಪರಿಸ್ಥಿತಿ ಹೀಗಿರುವಾಗ ಜನರಿಗೆ ನೀತಿ ಹೇಳುವ ಅರ್ಹತೆ ಸರ್ಕಾರಗಳಿಗೆ ಎಲ್ಲಿಂದ ಬರಬೇಕು ಎಂದು ಮಾತಿನ ಚಾಟಿಯೇಟನ್ನು ಬೀಸಿರುವುದನ್ನು ಕಾಣಬಹುದು. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚಾಗಿ ಗ್ರಾಮ ಪಂಚಾಯಿತಿಗಳು, ಜಿಲ್ಲಾ ಬೋರ್ಡುಗಳು ಮತ್ತು ಪ್ರಾಂತೀಯ ಸರ್ಕಾರಗಳು ದೃಢವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು. ಅಲ್ಲದೆ ಕೇಂದ್ರ ಸರ್ಕಾರ ಅವುಗಳೊಂದಿಗೆ ಸಹಕಾರ ಮನೋಭಾವನೆಯಿಂದ ವರ್ತಿಸಿ ಎಲ್ಲ ಕೆಲಸ ಕಾರ್ಯಗಳು ಸೂತ್ರಬದ್ಧವಾಗಿ ನಡೆಯಬೇಕು ಎಂದು ಹೇಳುವುದರ ಮೂಲಕ ಗೋಪಾಲಗೌಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಹೆಚ್ಚಿನ ಪ್ರಮಾಣದಲ್ಲಿ ಪ್ರಾಂತ್ಯಗಳಿಗೆ ಆರ್ಥಿಕ ವಿಷಯದಲ್ಲಿ ಮತ್ತು ಆಡಳಿತ ವಿಷಯದಲ್ಲಿ ಅಧಿಕಾರವನ್ನು ಕೊಡುತ್ತಾ ಬರಬೇಕು. ಆಗ ಮಾತ್ರ ಈ ಆಡಳಿತ ಪರಿಪೂರ್ಣವಾಗುತ್ತದೆ. ಅಲ್ಲದೆ ಹೆಚ್ಚಿನ ರೀತಿಯಲ್ಲಿ ಪರಿಪೋಷಿತವಾಗಿ ಬೆಳೆಯುವುದಕ್ಕೆ ಸಹಾಯಕವಾಗುತ್ತದೆ ಎಂಬುದು ಗೋಪಾಲಗೌಡರ ಭಾಷಣದ ಆಶಯವಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಶಾಂತವೇರಿ ಗೋಪಾಲಗೌಡರ ಮೇಲಿನ ಮಾತುಗಳಲ್ಲಿ ಮೂಲಭೂತವಾಗಿ ಪ್ರಜೆಗಳ ಹಿತಾಸಕ್ತಿ ಕೇಂದ್ರೀಕೃತವಾಗಿದೆ. ಸಂಪತ್ತು, ಸವಲತ್ತು, ಅವಕಾಶ, ಅಧಿಕಾರ ಹಾಗೂ ಆಡಳಿತ ಇವೆಲ್ಲ ಒಂದಕ್ಕೊಂದು ಪೂರಕ. ಇವು ಕೇಂದ್ರೀಕೃತವಾಗುವುದು ಎಂದರೆ ಸಬಲರಿಂದ ದುರ್ಬಲರಿಗೆ ಇವುಗಳ ವಂಚನೆಯಾಗುತ್ತದೆ. ಇದನ್ನು ತಪ್ಪಿಸಬೇಕು ಎನ್ನುವುದಾದರೆ ಇವನ್ನು ವಿಕೇಂದ್ರೀಕರಣ ಮಾಡಬೇಕು. ಇದು ಗೋಪಾಲಗೌಡರ ದೂರದೃಷ್ಟಿಯ ಆಲೋಚನೆಯೂ ಹೌದು; ಸಮಾಜವಾದಿ ರಾಜಕಾರಣದ ಕೇಂದ್ರ ಕಾಳಜಿಯೂ ಹೌದು.

೫.೩. 'ನೇರ ಚುನಾವಣೆ'ಯ ಅಗತ್ಯತೆ

ಚುನಾವಣೆಯು ಪ್ರತ್ಯಕ್ಷವಾಗಿ ಇರಬೇಕೆ ಅಥವಾ ಪರೋಕ್ಷ ರೂಪದಲ್ಲಿ ಇರಬೇಕೆ ಎಂಬುದು ಬಹಳ ಮುಖ್ಯವಾದ ಜಿಜ್ಞಾಸೆಯ ಪ್ರಶ್ನೆ. ಇವತ್ತಿಗೂ ಕೂಡ ಈ ಚರ್ಚೆ ಮುಂದುವರೆದಿದೆ. ನಮ್ಮಲ್ಲಿ ಅನೇಕ ರೀತಿಯ ಚುನಾವಣೆಗಳಿವೆ. ಕೆಲವು ಸಂದರ್ಭಗಳಲ್ಲಿ ಬಹುಮತ

ಸಾಬೀತುಪಡಿಸುವಂತಹ ಸಂದರ್ಭಗಳಲ್ಲಿ ಕೈ ಎತ್ತುವ ಪದ್ಧತಿ ಇದೆ. ಕೆಲವು ಸಲ ಧ್ವನಿ ಮತ ಪಡೆಯುವ ಪರಿಸ್ಥಿತಿಯೂ ಇದೆ. ಸಂದರ್ಭಗಳು ಏನೇ ಇರಲಿ. ಒಟ್ಟಾರೆ ಚುನಾವಣೆಯ ಸ್ವರೂಪವು ಪ್ರತ್ಯಕ್ಷ ರೂಪದಲ್ಲಿ ಇರಬೇಕೊ ಅಥವಾ ಪರೋಕ್ಷ ರೂಪದಲ್ಲಿ ಇರಬೇಕು ಎಂಬ ಮೂಲಭೂತ ಪ್ರಶ್ನೆಗೆ ಶಾಂತವೇರಿ ಗೋಪಾಲಗೌಡರ ಅಭಿಪ್ರಾಯ ಈ ಮುಂದಿನಂತಿದೆ.

ಅಪ್ರತ್ಯಕ್ಷ ಚುನಾವಣೆ ನಡೆಯಬೇಕೆಂಬ ಅಭಿಪ್ರಾಯಕ್ಕೆ ನನ್ನ ಸಮ್ಮತಿ ಇಲ್ಲ. ಎಂದರೆ ಪ್ರತ್ಯಕ್ಷವಾಗಿ ಚುನಾವಣೆ ನಡೆಯಬೇಕೆಂಬ ನಿಲುವು ಸಮಂಜಸವಾಗಿದೆ. ಮತ್ತು ಅದು ಪ್ರಜಾಪ್ರಭುತ್ವಕ್ಕೆ ಹೆಚ್ಚು ಕಳೆಯನ್ನು ಕೊಡುತ್ತದೆಯೇ ಹೊರತು; ಅಪ್ರತ್ಯಕ್ಷವಾಗಿ ಚುನಾವಣೆ ನಡೆದರೆ ಅದರಿಂದ ಆಗುವ ತೊಂದರೆ ನಮಗೆ ಬಹಳ ಹೆಚ್ಚು[೪] ಎನ್ನುವುದು ಗೋಪಾಲಗೌಡರ ಅಭಿಪ್ರಾಯವಾಗಿದೆ.

ನೇರವಾದ ಚುನಾವಣೆಯನ್ನು ನಡೆಸಬೇಕೇ ಅಥವಾ ಅಪ್ರತ್ಯಕ್ಷವಾದ ಚುನಾವಣೆಯನ್ನು ನಡೆಸಬೇಕೇ ಎನ್ನುವುದರಲ್ಲಿ ಬಹಳವಾಗಿ ಭಿನ್ನಾಭಿಪ್ರಾಯ ಒಂದು ಸಂದರ್ಭದಲ್ಲಿ ಎದುರಾಗುತ್ತದೆ. ಸರ್ವೋದಯ ಸಿದ್ಧಾಂತದ ಹಿನ್ನೆಲೆಯಲ್ಲಿ ಇಂದು ಚುನಾವಣೆಗಳನ್ನು ಕಾರ್ಯರೂಪಕ್ಕೆ ತರುವುದು ವಾಸ್ತವವಾಗಿ ಕಷ್ಟಕರವಾದುದು. ಅಂದರೆ ಆ ದಿಕ್ಕಿನಲ್ಲೇ ಹೋಗಬಾರದು ಎಂಬ ಮನಸ್ಥಿತಿ ಗೋಪಾಲಗೌಡರದಾಗಿರಲಿಲ್ಲ. ಆ ಆದರ್ಶ ಕಾರ್ಯತಃ ಜಾರಿಗೆ ಬರುವಾಗ, ನಿರ್ಮೋಹ ದೃಷ್ಟಿಯಿಂದ ಪಕ್ಷಾತೀತ ದೃಷ್ಟಿಯಿಂದ, ಸೇವಾ ಮನೋಭಾವದಿಂದ ನಮ್ಮ ಜನ ಮತ್ತು ಸರ್ಕಾರವು ಆ ಮಟ್ಟದ ಸ್ಥಿತಿಯನ್ನು ತಲುಪದಿರುವುದು ಇದಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಇಂದು ಇನ್ನೂ ಕೆಲವು ನಿಯಮಗಳನ್ನು ಇಟ್ಟುಕೊಂಡು; ಈ ಚುನಾವಣೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ನಾಗರೀಕ ದೇಶಗಳಲ್ಲಿ ಅನುಸರಿಸಬೇಕಾದ ಕೆಲವು ಪದ್ಧತಿಗಳನ್ನು ಅನುಸರಿಸುವುದು ಒಂದು ಉತ್ತಮವಾದ ಪ್ರಕ್ರಿಯೆಯಾಗಿದೆ. ಬ್ಯಾಲೆಟ್ ಬಾಕ್ಸ್ ಇಟ್ಟುಕೊಳ್ಳುವುದು, ಪ್ರಚಾರ ಮಾಡುವುದು, ಚುನಾವಣಾ ಅಭ್ಯಾರ್ಥಿ ಯಾರು ಎಂದು ನಿಷ್ಕರ್ಷೆ ಮಾಡುವುದು, ಅಭ್ಯರ್ಥಿಯ ಅರ್ಜಿಯನ್ನು ಸೂಕ್ತವಾಗಿ ತೀರ್ಮಾನ ಮಾಡಿ, ಇಂತಹವರು ಚುನಾಯಿತರಾಗಿ ಬಂದರು, ಇಂತಹವರು ಬರಲಿಲ್ಲ ಎಂದು ಹೇಳುವುದು. ಇಂತಹ ಚುನಾವಣಾ ಪ್ರಕ್ರಿಯೆಗಳು ಒಂದು ಕ್ರಮಬದ್ಧ ವ್ಯವಸ್ಥೆಯ ಮೂಲಕ ಆಗಬೇಕಾಗಿದೆ. ಒಂದು ವೇಳೆ ತೀರ ಸೇವೆ ಮಾಡತಕ್ಕ ಬಹಳ ಒಳ್ಳೆಯ ಮನುಷ್ಯ ಸೋತು ಹೋಗಬಹುದು. ಆ ವ್ಯಕ್ತಿ ಸೋತಿದ್ದಾನೆ ಎನ್ನುವ ಕಾರಣಕ್ಕೆ, ಒಳ್ಳೆಯ ಮನುಷ್ಯನನ್ನು ಸೋಲಿಸಿ, ಸೇವೆ ಮಾಡುವುದಕ್ಕೆ ಅನರ್ಹನಾಗಿರುವವನನ್ನು ಆರಿಸಿದ್ದೀರಿ ಎಂದು ಯಾರೂ ಪ್ರಶ್ನೆ ಮಾಡುವಂತಾಗಬಾರದು. ಒಂದು ತತ್ವ ಒಪ್ಪಿಕೊಂಡ ಮೇಲೆ ಕೆಲವು ಅಡ್ಡಿ ಆತಂಕಗಗಳಿದ್ದರೂ ಅವುಗಳನ್ನು ಒಪ್ಪಿಕೊಂಡು ಮುಂದೆ ಸಾಗಬೇಕಾಗುತ್ತದೆ. ಇದು ಪ್ರಜಾಪ್ರಭುತ್ವದ ಒಂದು ಸೈದ್ಧಾಂತಿಕ ನೆಲೆಗಟ್ಟು ಎಂಬ ಮಾತುಗಳ ಮೂಲಕ ಶಾಂತವೇರಿ ಗೋಪಾಲಗೌಡರು ತಮ್ಮ ಅಭಿಪ್ರಾಯವನ್ನು ಸದನದಲ್ಲಿ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

೫.೪. 'ವಿಧಾನಸೌಧ' ಹಾಗೂ ದುಂದುವೆಚ್ಚಕ್ಕೆ ವಿರೋಧ

ವಿಧಾನಸೌಧವು ಕರ್ನಾಟಕದ ಕೇಂದ್ರ ಆಡಳಿತ ಭವನ. ಅದಕ್ಕೆ ಅದರದ್ದೇ ಆದ ಖರ್ಚುವೆಚ್ಚ ಮತ್ತು ನಿರ್ವಹಣೆ ಇತ್ಯಾದಿಗಳು ಇರುತ್ತವೆ. ಹಾಗೆ ನೋಡಿದರೆ ಸರಕಾರದ ಆಡಳಿತಕ್ಕೆ ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲೂ ಕೂಡ ಸರಕಾರಿ ಕಛೇರಿಗಳು ಇರುತ್ತವೆ. ಅವುಗಳಿಗೂ ಕೂಡ ಅವುಗಳದ್ದೇ ಆದ ಖರ್ಚುವೆಚ್ಚ ಮತ್ತು ನಿರ್ವಹಣೆ ಇತ್ಯಾದಿಗಳು ಇರುತ್ತವೆ. ಈ ಹಿನ್ನೆಲೆಯಲ್ಲಿ ತಾಲೂಕು ಮಟ್ಟದಲ್ಲಿ ಇರುವ ತಾಲೂಕು ಕಚೇರಿಗಳಿಗೆ ಮಿನಿ ವಿಧಾನಸೌಧ ಎಂದು ಕರೆಯುವ ಪರಿಪಾಠ ಇತ್ತೀಚೆಗೆ ಬಂದಿದೆ. ಕೆಲವೊಮ್ಮೆ ಈ ಖರ್ಚು ವೆಚ್ಚ ಹಾಗೂ ನಿರ್ವಹಣೆಗಳು ಅದರ ಅಗತ್ಯವನ್ನು ಮೀರಿ ನಡೆಯಲೂಬಹುದು. ಇಂತಹ ಸನ್ನಿವೇಶವನ್ನು ದುಂದುವೆಚ್ಚ ಎಂತಲೂ, ಅನಗತ್ಯ ವೆಚ್ಚ ಎಂತಲೋ ವಿವರಿಸುವುದು ಇದೆ. ನಮ್ಮ ಕಾಲದಲ್ಲಿ ಮಾಧ್ಯಮಗಳು ಇಂತಹ ವರದಿಗಳನ್ನು ಮಾಡುತ್ತಿರುತ್ತವೆ. ಹಾಗಿದ್ದರೆ ಸರಕಾರಿ ಆಡಳಿತ ಕೇಂದ್ರ ಭವನವಾದ ವಿಧಾನಸೌಧದ ಖರ್ಚುವೆಚ್ಚ ಇತ್ಯಾದಿಗಳು ಅದರ ಅಗತ್ಯವನ್ನು ಮೀರಿದಾಗ ಅದನ್ನು ಪ್ರಜಾಪ್ರಭುತ್ವದ ಮಾದರಿಯಲ್ಲಿ ಪ್ರಶ್ನೆ ಮಾಡುವಂತಹವರು ಯಾರು ಎಂಬ ಪ್ರಶ್ನೆ ಬರುತ್ತದೆ.ಇಂತಹ ಪ್ರಶ್ನೆ ರಚನಾತ್ಮಕವಾಗಿ ಇರಬೇಕೇ ಹೊರತು ಆರೋಪ ಹಾಗೂ ಆಪಾದನೆಗಳ ರೂಪದಲ್ಲಿ ಇರಬಾರದು. ಇದು ಅತ್ಯಂತ ಪ್ರಾಥಮಿಕ ಎಚ್ಚರಿಕೆ ಹಾಗೂ ಅಗತ್ಯ. ಗೋಪಾಲಗೌಡರು ಈ ರೀತಿಯ ಯಾವುದೇ ಪ್ರಶ್ನೆಗಳನ್ನು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಹಾಗೂ ರಚನಾತ್ಮಕ ವಿಧಾನದಲ್ಲಿ ವಿಧಾನಸಭೆಯಲ್ಲಿ ಎತ್ತುತ್ತಿದ್ದರು. ಇದು ಇವರ ಪ್ರಜಾಪ್ರಭುತ್ವವಾದಿ ರಾಜಕಾರಣವನ್ನು ಎತ್ತಿತೋರಿಸುತ್ತದೆ. ಏಕೆಂದರೆ ಸರ್ಕಾರವು ಖರ್ಚು ಮಾಡುವ ಹಣ ಸಾರ್ವಜನಿಕರಿಗೆ ಸೇರಿದ್ದು. ಈ ಹಿನ್ನೆಲೆಯಲ್ಲಿ ಶಾಂತವೇರಿ ಗೋಪಾಲಗೌಡರು ವಿಧಾನಸೌಧ ಕಟ್ಟಡದ ಬಗೆಗೆ ಹಾಗೂ ಅದರ ಖರ್ಚುವೆಚ್ಚದ ಬಗೆಗೆ ವಿಧಾನಸಭೆಯಲ್ಲಿ ಮಂಡಿಸಿದ ವಿಚಾರಗಳನ್ನು ಈ ಉಪ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಇವರು ಶಾಸನಸಭೆಗಳಲ್ಲಿ ಮಾತನಾಡಲು ಎದ್ದು ನಿಂತರೆ ಹಿರಿಯ ಮಂತ್ರಿಗಳೂ ಕೂಡ ಕಾದು ಕುಳಿತುಕೊಳ್ಳುತ್ತಿದ್ದರಂತೆ. ಬಹಳ ಚಿಕ್ಕಂದಿನಿಂದಲೂ ನಿಖರವಾದ ಆಧಾರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾತನಾಡುವ ಹವ್ಯಾಸವನ್ನು ಗೌಡರು ಬೆಳೆಸಿಕೊಂಡಿದ್ದರು. ತನ್ನನ್ನು ತಾನೇ ಎಂದೂ ಬಣ್ಣಿಸಿಕೊಂಡವರಲ್ಲ. ಇತರ ರಾಜಕಾರಣಿಗಳ ಬಗ್ಗೆ ಎಂದೂ ಲಘುವಾಗಿ ಮಾತನಾಡಿದವರೂ ಅಲ್ಲ. ಒಂದು ರೀತಿಯಲ್ಲಿ ಕರ್ನಾಟಕದ ಚರಿತ್ರೆಯಲ್ಲಿ ಶಾಂತವೇರಿಯವರು ಸಮಾಜವಾದಿ ಚಳವಳಿಯ ಮಹಾನ್ ಬಂಡಾಯಗಾರ. ಇವರು ಅಧಿಕಾರ, ಹಣಕ್ಕಿಂತ ಶುದ್ಧ ಚಾರಿತ್ರ್ಯ ಮತ್ತು ಸೈದ್ಧಾಂತಿಕ ಚಳವಳಿ ಮಹತ್ತರವಾದದ್ದೆಂದು ಅಪಾರವಾಗಿ ನಂಬಿದ್ದ ರೈತ ಮುಖಂಡ. ಗೋಪಾಲಗೌಡರ ವಿಚಾರ ಮಂಡನೆ, ಪ್ರತಿಪಾದನೆ ಹಾಗೂ ಮಾತಿನ ಗಾರುಡಿಗತನದಲ್ಲಿ ಅವರದೇ ಆದ ವೈಶಿಷ್ಟ್ಯವಿತ್ತು. ಇಂಗ್ಲೆಂಡಿನ ಪಾರ್ಲಿಮೆಂಟಿಗೆ ಎಡ್ಮಂಡ್ ಬರ್ಗ್ ಎಂತೋ ಅಂತೆಯೇ ಕರ್ನಾಟಕದ ಶಾಸನಸಭೆಗೆ ಗೋಪಾಲಗೌಡರು[೫] ಎಂಬ ಹೇಳಿಕೆಯು ಶಾಂತವೇರಿ ಗೋಪಾಲಗೌಡರ ವಿಷಯದಲ್ಲಿ ಅತಿಶಯೋಕ್ತಿಯಾದ ಮಾತಾಗಿರಲಿಲ್ಲ.

ಗೋಪಾಲಗೌಡರು ವಿಧಾನಸೌಧಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ೧೯೫೨ ಮಾರ್ಚ್ ೨೩ರಂದು ಮಾತನಾಡಿದ್ದಾರೆ. ವಿಧಾನಸೌಧದ ದುಂದು ವೆಚ್ಚಕ್ಕೆ ಸಂಬಂಧಿಸಿದಂತೆ ಇಮಾಂ ಅವರ ಮಾತಿಗೆ ಪ್ರತಿಕ್ರಿಯಿಸುತ್ತಾ ಹನುಮಂತಯ್ಯನವರು ಉದ್ದವಾದ ಹೇಳಿಕೆ ಕೊಟ್ಟಿರುವುದನ್ನು ಗಮನಿಸಿದ ಗೋಪಾಲಗೌಡರು ಸಭಾಧ್ಯಕ್ಷರಿಗೆ ಮಾತನಾಡಲು ಅವಕಾಶ ಕೇಳಿದರು. ಅನಂತರ ವಿಧಾನಸೌಧದ ನಿರ್ಮಾಣಕ್ಕೆ ಆದ ಖರ್ಚುವೆಚ್ಚಗಳನ್ನು ಕುರಿತು ದೀರ್ಘವಾಗಿ ಮಾತನಾಡಿದ್ದಾರೆ. ಹಿಂದೆ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ಎಸ್ಟಿಮೇಟುಗಳ ವಿಷಯದಲ್ಲಿ ಮತ್ತು ಎಸ್ಟಿಮೇಟುಗಳನ್ನು ಪುನರ್ವಿಮರ್ಶೆ ಮಾಡುವ ವಿಷಯದಲ್ಲಿ ದೊಡ್ಡ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದನ್ನು ಜವಾಬ್ದಾರಿ ಹೊತ್ತಿರುವವರೆಲ್ಲಾ ಇಂಡಿಯಾ ದೇಶಾದಾದ್ಯಂತ ಪರೀಕ್ಷೆ ಮಾಡಿ ಪರಿಶೀಲಿಸಬೇಕೆಂದು ನಾನು ಆಸೆ ಪಡುತ್ತೇನೆ[೬] ಎಂದು ಹೇಳಿದರು.

ವಿಧಾನಸೌಧ ನಿರ್ಮಾಣದ ಅಂದಾಜು ೫೦ ಲಕ್ಷ ಇದ್ದಿತ್ತು. ಆದರೆ ಮುಂದೆ ೧೮೦ ಲಕ್ಷದವರೆಗೆ ತಲುಪಿದೆ. ಎಲ್ಲಾ ಪಿ.ಡಬ್ಲ್ಯೂಡಿ. ಕೆಲಸಗಳಲ್ಲೂ ತಪ್ಪುಗಳು ಆಗುವುದು ಸಹಜ ಎಂದು ಹನುಮಂತಯ್ಯನವರು ಮಾತನಾಡಿದ್ದರು. ಈ ಸಮರ್ಥನೆಯನ್ನು ಗೋಪಾಲಗೌಡರು ನಿರಾಕರಿಸುತ್ತಾ ತಮ್ಮ ನಿಲುವುಗಳನ್ನು ಈ ಮುಂದಿನಂತೆ ವ್ಯಕ್ತಪಡಿಸಿದ್ದಾರೆ.

ಪ್ರಗತಿಪರವಾಗಿದ್ದ ಸರ್ಕಾರವಾಗಲಿ ಅಥವಾ ಪ್ರತಿಗಾಮಿ ಸರ್ಕಾರವಾಗಲಿ, ಸರ್ಕಾರ ಅಂದ ಮೇಲೆ ಸಾರ್ವಜನಿಕ ಹಣದ ಪ್ರತಿಯೊಂದು ಕಾಸೂ ಕೂಡ ಸರಿಯಾದ ರೀತಿಯಲ್ಲಿ ಖರ್ಚಾಗುವಂತೆ ನೋಡಿಕೊಳ್ಳಬೇಕಾದದ್ದು ಅದರ ಜವಾಬ್ದಾರಿ. ಇದರಲ್ಲಿ ವಿವಾದವಿಲ್ಲ; ಇದು ನಿರ್ವಿವಾದ ಮಾತು.[೭]

ಲೋಕೋಪಯೋಗಿ ಇಲಾಖೆಯ ಕೆಲಸಗಳಲ್ಲೂ ತಪ್ಪಿದೆಯೆಂದು ಹೇಳುವುದು ಸರಿಯಾದುದಲ್ಲ. ಕಳೆದ ವರ್ಷ ಎಸ್ಟಿಮೇಟುಗಳನ್ನು ಸಾಧ್ಯವಾದ ಮಟ್ಟಿಗೆ ಕರಾರುವಕ್ಕಾಗಿ ಮಾಡಿ ಶೇಕಡಾ ೧೦–೨೦ರವರೆಗೆ ಬೇಕಾದರೆ ಮಾರ್ಜಿನ್ ಇಟ್ಟುಕೊಳ್ಳಿ, ಅವಕಾಶವಾದರೆ ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಳ್ಳಿ ಎಂದು ಶ್ರೀಯುತರುಗಳಾದ ಇಮಾಂ, ಶ್ರೀನಿವಾಸ ಅಯ್ಯಂಗಾರ್, ಹುಚ್ಚೇಗೌಡ, ಪಟ್ಟಾಭಿರಾಮನ್ ಮುಂತಾದವರು ಹೇಳಿದ ಮಾತುಗಳನ್ನು ಶಾಂತವೇರಿ ಗೋಪಾಲಗೌಡರು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಾರೆ. ಆದರೆ ಇಂದಿನ ಸ್ಥಿತಿ ಬದಲಾದುದನ್ನೂ ಅವರು ತಿಳಿಸುವ ಮೂಲಕ ತಮ್ಮ ವಾಸ್ತವ ಪ್ರಜ್ಞೆಯನ್ನು ಜಾಗ್ರತಗೊಳಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ. ಅಂದರೆ ಇಂದಿನ ಕಾಲದಲ್ಲಿ ಕಟ್ಟಡ ಕಾಮಗಾರಿಗಳ ಖರ್ಚುವೆಚ್ಚಗಳು ಒಂದಕ್ಕೆ ಐದರಷ್ಟು ಜಾಸ್ತಿಯಾಗಿದೆ. ದೊಡ್ಡ ರಿವಿಜನ್. ಇದಕ್ಕೆ ಎಸ್ಟಿಮೇಟ್ ಮಾಡಿದವರು ಅಂಡರ್ ಎಸ್ಟಿಮೇಟ್ ಮಾಡಿದ್ದರೆ ಅದು ಬೇರೆ ವಿಷಯ. ಎಕ್ಸಿಜೆನ್ಸೀಸ್ ಬಂದು ಮುಂದೆ ಕಾರಣಾಂತರದಿಂದ ಹತೋಟಿ ಮೀರಿ, ಬೆಲೆ ಏರಿ ಅಂದಾಜಿನ ವೆಚ್ಚ ದುಬಾರಿಯಾದರೆ ಅದು ಒಂದು ಹಂತದಲ್ಲಿ ಒಪ್ಪಿಕೊಳ್ಳಬಹುದಾದ ವಿಷಯವಾಗಿರುತ್ತದೆ. ಹಾಗೆ ಆಗದೆ, ಅಂದಾಜು ತಯಾರಿಸುವಾಗ ಸರಿಯಾಗಿ ಮಾಡದಿದ್ದರೆ ಅದೊಂದು ತಪ್ಪು. ಯುದ್ಧದ ದೆಸೆಯಿಂದ ಕಬ್ಬಿಣದ ಬೆಲೆ ಅಕಸ್ಮಾತ್ ಏರಿದಾಗ, ಕಾರಣಾಂತರದಿಂದ

ಲೇಬರ್ ಛಾರ್ಜಸ್ ಒಂದಕ್ಕೆ ಮೂರರಷ್ಟು ಏರಿದಾಗ ಬೆಲೆ ಹೆಚ್ಚು ಮಾಡಬೇಕಾದ ಅನಿವಾರ್ಯತೆ ಒದಗುತ್ತದೆ. ಹಾಗಲ್ಲದೆ ಉದ್ದ, ಅಗಲ ಮುಂತಾದ್ದೆಲ್ಲವನ್ನು ಹೆಚ್ಚು ಮಾಡಿ ಎಲ್ಲಾ ರಿವೈಸ್ ಮಾಡುವುದು ಒಪ್ಪಲು ಸಾಧ್ಯವಾಗದ ಮಾತಾಗಿರುತ್ತದೆ. ಶ್ರೀಯುತ ಹನುಮಂತಯ್ಯನವರು ಮೈಸೂರಿನ ಉದಾಹರಣೆ ಮಾತ್ರ ತೆಗೆದುಕೊಳ್ಳದೆ ಕನ್ನಂಬಾಡಿಯಿಂದ ಆರಂಭ ಮಾಡಿ, ತಮ್ಮ ಸಂಗಡ ಕೇವಲವಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರನ್ನು ಈಗ ಈಚೆಗೆ ಎಳೆಯುತ್ತಿದ್ದಾರೆ. ಅಲ್ಲಿಂದ ನುಗು, ಭದ್ರಾ-ತುಂಗಾ ಮೊದಲಾದ ಪ್ರಾಜೆಕ್ಟ್‌ಗಳ ವಿಚಾರ ವಿವರಿಸಿ, ಇನ್ನೂ ಮೇಲೆ ಹೋಗಿ ಹಿರಾಕುಡ್, ಬಾಕ್ರಾನಂಗಲ್ ಇತ್ಯಾದಿ ಪ್ರಾಜೆಕ್ಟ್‌ಗಳ ವಿಚಾರ ಹೇಳಿ, ಎಲ್ಲದಕ್ಕೂ ಈ ಮಾತು ಸಲ್ಲುತ್ತದೆ.ಆದ್ದರಿಂದ ನನ್ನ ತಪ್ಪೇನು ಇಲ್ಲ ಎಂದು ಸಮರ್ಥನೆ ಮಾಡಿದರು.ಈ ಅಪರಾಧ ಮೈಸೂರಿಗೆ ಮಾತ್ರ ಅನ್ವಯಿಸುವುದಿಲ್ಲ. ಇಂತಹ ಆಪಾದನೆಗಳು ಭಾರತದಲ್ಲಿರುವ ಸಾರ್ವತ್ರಿಕ ರೋಗದಂತೆ ಪರಿಣಮಿಸಿವೆ.ಭಾರತದಲ್ಲೆಲ್ಲಾ ಇಂತಹ ಅಪರಾಧಗಳು ನಡೆಯುತ್ತಿವೆ ಎಂದು ಹೇಳಿದ ಹಾಗಾಗುತ್ತದೆ. ಆದರೆ ಇದು ಸರಿಯಾದ ಸಮರ್ಥನೆಯಗುವುದಿಲ್ಲ. ಆದರೆ ಇದು ಸಂಭವಿಸುವುದು ವಾಸ್ತವವೇ ಆಗಿರುತ್ತದೆ. ಹಾಗಾಗಬಾರದು. ಶಾಂತವೇರಿ ಗೋಪಾಲಗೌಡರ ದೃಷ್ಟಿಯಲ್ಲಿ ಯಾವ ಪ್ರಾಜೆಕ್ಟಿನಲ್ಲೂ ಈ ರೀತಿಯಾಗಿ ಹಣ ಪೋಲಾಗಬಾರದು. ಚೆಕ್ ಇರಬೇಕು. ಬಹಳ ಕಳಕಳಿಯಿಂದ ಈ ರೀತಿ ಯಾವುದೇ ಪ್ರಾಜೆಕ್ಟಿನಲ್ಲೂ ಸಾರ್ವಜನಿಕ ಹಣ ಪೋಲಾಗದಂತೆ ನೋಡಿಕೊಳ್ಳುವುದು ಜವಾಬ್ದಾರಿಯನ್ನು ಹೊತ್ತಿರುವ ಸರ್ಕಾರದ ಕರ್ತವ್ಯವಾಗಿರುತ್ತದೆ ಎಂಬುದು ಗೋಪಾಲಗೌಡರ ವಾದದ ತಿರುಳಾಗಿರುವುದನ್ನು ಇಲ್ಲಿ ಕಾಣುತ್ತೇವೆ.

ವಿಧಾನಸೌಧ ಕಟ್ಟಡವನ್ನು ಕಟ್ಟಲು ಬಳಸಿದ ಹಣ ಸರ್ಕಾರಿ ಖಜಾನೆಯದ್ದು. ಆದರೆ ಸರ್ಕಾರಿ ಖಜಾನೆಯೇ ಆ ಹಣವನ್ನು ಉತ್ಪಾದನೆ ಮಾಡಿಲ್ಲ. ಆ ಹಣವನ್ನು ಉತ್ಪಾದನೆ ಮಾಡಿದವರು ಪ್ರತಿ ದಿನ ಬೆವರು ಸುರಿಸಿ ದುಡಿಯುವ ಕಾರ್ಮಿಕರು, ರೈತರು ಮತ್ತು ಮಹಿಳೆಯರು. ಇವರ ದುಡಿಮೆಯ ಹಣವೇ ಸರ್ಕಾರಿ ಖಜಾನೆಯನ್ನು ಸೇರಿದ ಮೇಲೆ ಅದು ಸಾರ್ವಜನಿಕ ಹಣವಾಗಿ ರೂಪ ಪಡೆಯುತ್ತದೆ. ಇದರ ಹಂಚಿಕೆ ಮತ್ತು ಖರ್ಚು ವೆಚ್ಚವನ್ನು ಸರ್ಕಾರ ನಿರ್ಧರಿಸುತ್ತದೆ ಮತ್ತು ರೂಪಿಸುತ್ತದೆ. ಈ ನಿರ್ವಹಣೆಯಲ್ಲಿ ಲೋಪದೋಷಗಳು, ತಾರತಮ್ಯಗಳು ನಡೆಯಬಹುದು. ಹಾಗೆ ನಡೆಯದಂತೆ ತಡೆಯುವ ಶಕ್ತಿ ಪ್ರಜಾಪ್ರಭುತ್ವದ ಸರ್ಕಾರಕ್ಕೆ, ಆಡಳಿತಕ್ಕೆ ಮತ್ತು ಜನಪ್ರತಿನಿಧಿಗಳಿಗೆ ಇರಬೇಕು. ಇವತ್ತಿನ ರಾಜಕಾರಣಿಗಳು ಇಂತಹ ನಿರ್ವಹಣೆಯ ಲೋಪದೋಷ ಮತ್ತು ಅನಗತ್ಯ ವೆಚ್ಚಗಳನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಸಮಾಜವಾದಿ ರಾಜಕೀಯ ಚಿಂತಕರಾದ ಗೋಪಾಲಗೌಡರು ಈ ವಿಷಯದ ಬಗೆಗೆ ಸದನದಲ್ಲಿ ಮಾತನಾಡಿರುವುದು ಅತ್ಯಂತ ಮೌಲಿಕವಾಗಿದೆ.

ಸರಕಾರಿ ಖರ್ಚುವೆಚ್ಚಕ್ಕೆ ಬಳಕೆಯಾಗುವ ಹಣ ರೈತರು ಕೊಡುವ ಕಂದಾಯದ ಹಣ. ಹಾಗಾಗಿ ಇದು ಸಾರ್ವಜನಿಕ ಹಣವಾಗಿದೆ. ಇದನ್ನು ಬಳಸುವಾಗ ಪ್ರಾಮಾಣಿಕತೆ ಹಾಗೂ

ಪಾರದರ್ಶಕತೆ ಅಗತ್ಯ. ಇವೆರಡೂ ಇಲ್ಲದಿದ್ದರೆ ರೈತರ ದುಡಿಮೆಯಿಂದ ಬರುವಂತಹ ಸರಕಾರಿ ಹಣವು ಅಪ ವ್ಯಯವಾಗುತ್ತದೆ. ಅದು ದುಂದು ವೆಚ್ಚವಾಗುತ್ತದೆ. ಈ ಸಾಮಾನ್ಯ ಕಾಳಜಿ ಹಾಗೂ ಎಚ್ಚರಿಕೆ ನಮ್ಮ ಶಾಸಕರು ಹಾಗೂ ಸಚಿವರಲ್ಲಿ ಇರಬೇಕು. ಇದು ಯಾವುದೇ ಪ್ರಜಾಪ್ರಭುತ್ವ ಸರಕಾರದ ಕನಿಷ್ಠ ಪದ್ಧತಿ. ಗೋಪಾಲಗೌಡ ಅವರ ರಾಜಕಾರಣದ ಮನೋಧರ್ಮ ಈ ರೀತಿಯದ್ದು. ಈ ಮೇಲಿನ ಗೋಪಾಲಗೌಡರ ಮಾತುಗಳು ಅವರು ಭ್ರಷ್ಟಾಚಾರದ ವಿರೋಧಿ ನಿಲುವನ್ನು ಹೊಂದಿದ್ದರು ಎಂಬುದನ್ನು ಸೂಚಿಸುತ್ತಿವೆ. ಗೋಪಾಲಗೌಡರು ಭ್ರಷ್ಟಾಚಾರ ಎಂಬ ಪದವನ್ನು ಪ್ರಯೋಗ ಮಾಡಿಲ್ಲ. ಆದರೆ ಅವರ ರಾಜಕಾರಣದ ಮನೋಧರ್ಮ ಮಾತ್ರ ಅದನ್ನೇ ಒತ್ತಿ ಹೇಳುತ್ತಿದೆ.

ಇದೇ ವಿಷಯವನ್ನು ಕುರಿತು ಶಾಂತವೇರಿ ಗೋಪಾಲಗೌಡರು ತಮ್ಮ ಮಾತುಗಳನ್ನು ಮುಂದುವರಿಸಿದ್ದಾರೆ. ಮುಖ್ಯಮಂತ್ರಿಯವರಾದ ಹನುಮಂತಯ್ಯನವರೇ ರಚನೆ ಮಾಡಿರುವಂತಹ ಸಮಿತಿಯ ಪ್ರಕಾರ ವಿಧಾನಸೌಧಕ್ಕೆ ಹೆಚ್ಚಿನ ಖರ್ಚಾಗಿಲ್ಲ. ಚದರ ಅಡಿಗೆ ೨೪ ರೂಪಾಯಿಯಿಂದ, ೨೫ ರೂಪಾಯಿಗಳವರೆಗೆ ಬೀಳುತ್ತದೆ. ಆರ್ನಮೆಂಟ್ಸ್ ಇಲ್ಲದಿದ್ದರೂ ಅಷ್ಟು ಬೀಳುತ್ತದೆ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ. ಚಂಡಿಗರ್, ಇಂಗ್ಲೆಂಡ್, ಪ್ಯಾರಿಸ್, ಡೆನ್ಮಾರ್ಕ್ ಮತ್ತು ಉತ್ತರ ಪ್ರದೇಶ ಮುಂತಾದ ಕಡೆ ಶಾಸನಸಭಾ ಕಟ್ಟಡಗಳನ್ನು ಅವರು ನೋಡಿರಬಹುದು. ಅದರ ಅನುಭವವನ್ನು ಇಲ್ಲಿ ರೂಪಿಸಿರಬಹುದು. ಅವರ ಉದ್ದೇಶ ತಪ್ಪು ಆಗಿತ್ತೆಂದು ಹೇಳುವುದಿಲ್ಲ, ಸದುದ್ದೇಶವನ್ನು ಇಟ್ಟುಕೊಂಡೇ ಕೆಲಸ ಮಾಡಿರಬಹುದು. ಶ್ರೀ ಹನುಮಂತಯ್ಯನವರು ಪ್ರಪಂಚ ಪರ್ಯಟನ ಮಾಡಿರಬಹುದು, ಅನುಭವವೂ ಇರಬಹುದು. ಅದು ಎಲ್ಲಾ ಸರಿ. ಆದರೆ ತಾವೇ ಶಿಲ್ಪಿ ಆಗಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದು ಮಾತ್ರ ತಪ್ಪು.[೮]

ಹೀಗೆ ಶಾಂತವೇರಿ ಗೋಪಾಲಗೌಡರ ಪ್ರಕಾರ ಹನುಮಂತಯ್ಯನವರು ನಾನೇ ವಿಧಾನಸೌಧದ ಶಿಲ್ಪಿ ಎಂದು ಹೇಳಿಕೊಂಡು ಹೋಗುವುದು ಸರಿಯಲ್ಲ. ಜನತೆ ವಿಧಾನಸೌಧವನ್ನು ಬಂದು ನೋಡಿಕೊಂಡು ಹೋಗಿ, ಪ್ರಶಂಸೆ ಮಾಡಿ ಬರೆದ ೮೦೦ ಕಾಗದ ಪತ್ರಗಳು ಇವರಿಗೆ ಬಂದಿದ್ದರೂ, ಅದನ್ನು ವಿಮರ್ಶೆ ಮಾಡುವ ಕೆಲಸವನ್ನು ನಿಲ್ಲಿಸಲಿಲ್ಲ.

ವಿಧಾನಸೌಧ ಕಟ್ಟಡದ ಬಗೆಗೆ ಗೋಪಾಲಗೌಡರಿಗೆ ವಿಶೇಷವಾದ ಕಾಳಜಿ ಇತ್ತು. ಅದರ ಖರ್ಚುವೆಚ್ಚ ಮಾತ್ರವೇ ಅಲ್ಲ; ಅದರ ರಚನೆ, ಅದರ ವಿನ್ಯಾಸ ಹಾಗೂ ಅದರ ಆರ್ಕಿಟೆಕ್ಚರ್ ಬಗ್ಗೆ ಕೂಡಾ ಗೌಡರು ತಲೆಕೆಡಿಸಿಕೊಂಡಿದ್ದರು. ಅವರ ಮುಂದಿನ ಮಾತುಗಳು ಇದನ್ನು ತೋರಿಸುತ್ತವೆ.

ಜನರ ಆಕರ್ಷಣೆಯ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಹುದು ಎಂದು ಹೇಳುವ ಮೂಲಕ ಗೋಪಾಲಗೌಡರು ಕೆಲವು ಸಾದೃಶ್ಯಗಳನ್ನು ಈ ಮುಂದಿನಂತೆ ನೀಡುತ್ತಾರೆ. ವಿಧಾನಸೌಧ ಕಟ್ಟಡದ ಬಗೆಗೆ ಬಂದಿದ್ದ ೮೦೦ ಕಾಗದ ಪತ್ರಗಳ ಪ್ರಶಂಸೆಯ ಬಗೆಗೆ ಚರ್ಚೆ ಮಾಡಿ, ಅದನ್ನು ಏಕಮುಖಿಯಾಗಿ ಸ್ವೀಕರಿಸದೆ, ಅದನ್ನು ವಿಮರ್ಶೆ ಮಾಡಲು ಗೋಪಾಲಗೌಡರು ಕೊಟ್ಟಿರುವ

ಉದಾಹರಣೆಗಳು ಶಕ್ತಿಶಾಲಿಯಾಗಿವೆ. ಸಾಕ್ರಟೀಸ್, ಏಸುಕ್ರಿಸ್ತ ಮುಂತಾದವರನ್ನು ಉದಾಹರಣೆ ಕೊಡಬೇಕಾದರೆ ಅವರ ಬಗೆಗೆ ವಿಶೇಷವಾದ ಮಾಹಿತಿಗಳು ಇರಬೇಕಾಗುತ್ತದೆ, ವಿಶೇಷವಾದ ತಿಳುವಳಿಕೆ ಇರಬೇಕಾಗುತ್ತದೆ. ನಮ್ಮ ಪ್ರಶ್ನೆ ಇರುವುದು ಇವತ್ತಿನ ನಮ್ಮ ರಾಜಕಾರಿಣಿಗಳಿಗೆ ಇಂತಹ ವಿಶೇಷವಾದ ಜ್ಞಾನ ಇದೆಯೇ ಎಂಬುದಾಗಿದೆ. ಈ ಕುರಿತು ಉದಾಹರಣೆಯೊಂದನ್ನು ಹೀಗೆ ನೀಡುತ್ತಾರೆ: ಸಾಕ್ರೆಟಿಸ್‌ಗೆ ವಿಷ ಕೊಟ್ಟಾಗಲೂ ಜನರು ಬಂದು ಬೆಂಬಲ ಕೊಟ್ಟರು. ಕ್ರಿಸ್ತನನ್ನು ಶಿಲುಬೆಗೇರಿಸಿದಾಗಲೂ ಅವರ ಹಿಂದೆ ಜನರು ಇದ್ದರು. ಹಿಟ್ಲರನ ಹಿಂದೆಯೂ ಜನರಿದ್ದರು. ಬೇಲೂರು ಶ್ರೀನಿವಾಸ ಅಯ್ಯಂಗಾರರ ಕೊಲೆಯಾದಾಗ ಅವರ ಮನೆಗೆ ಹೋಗಿ ಎಷ್ಟು ಜನ ಬಗ್ಗಿ ಬಗ್ಗಿ ನೋಡಿದರು. ಯಾವುದು ಅಸಾಮಾನ್ಯವೋ, ದೊಡ್ಡದೋ, ಬೇರೆಯದಕ್ಕಿಂದ ಭಿನ್ನವಾಗಿ ಕಾಣುವುದೋ ಅದಕ್ಕೆಲ್ಲಾ ಮಂಕುತಿಮ್ಮನು ತಲೆಬಾಗಿ ನಮಸ್ಕಾರ ಮಾಡುತ್ತಾನೆ. ತನಗೆ ಮಾಡಲು ಸಾಧ್ಯವಿಲ್ಲದೆ ಇರುವಂತಹದು ಯಾವುದು ವಿಭಿನ್ನವಾಗಿದೆಯೋ ಅದಕ್ಕೆ ನಮಸ್ಕಾರ ಮಾಡುತ್ತಾನೆ. ತನ್ನ ಕುತೂಹಲವನ್ನು ತೋರಿಸುತ್ತಾನೆ. ಹಾಗೆಂದ ಮಾತ್ರಕ್ಕೆ ಅವರೆಲ್ಲ ಶಿಲ್ಪಿಗಳು, ಅವರೆಲ್ಲರೂ ಪ್ರಶಂಸಿಸಿದರು ಎಂದು ಹೇಳುವುದು ಸರಿಯಲ್ಲ. ವಿಧಾನಸೌಧದಲ್ಲಿಯ ಆರ್ಕಿಟೆಕ್ಚರ್ ಮೊಗಲರ ಕಾಲದ್ದೇ? ಚೋಳರ ಕಾಲದ್ದೆ? ಪಾಂಡ್ಯರ ಕಾಲದ್ದೆ? ಮೌರ್ಯರ ಕಾಲದ್ದೆ? ಗುಪ್ತರ ಕಾಲದ್ದೆ? ಇದು ಯಾವ ಆರ್ಕಿಟೆಕ್ಚರು? ಎಲ್ಲ ಕಾಲದ ಆರ್ಕಿಟೆಕ್ಚರಿನ ಮಿಶ್ರಣ ಒಳ್ಳೆಯದಲ್ಲ್ ಎಂಬ ಅವರ ನಿಲುವು ತರ್ಕಬದ್ಧವಾಗಿ ವಾದ ಮಾಡುವ ನ್ಯಾಯವಾದಿಯಂತಿರುವುದನ್ನು ಈ ಮಾತುಗಳ ಮೂಲಕ ಗಮನಿಸಬಹುದಾಗಿದೆ.

ಗೋಪಾಲಗೌಡರ ಪ್ರಕಾರ ಜನರು ಒಳ್ಳೆಯದನ್ನು ನೋಡುತ್ತಾರೆ. ಕೆಟ್ಟದ್ದನ್ನೂ ನೋಡುತ್ತಾರೆ. ಹನುಮಂತಯ್ಯನವರು ಕಟ್ಟಿಸಿದ ವಿಧಾನಸೌಧ ಅವರ ಸ್ವಪ್ರತಿಷ್ಠೆಯ ಪ್ರತೀಕ. ಇನ್ನು ವಿಧಾನಸೌಧದ ಪ್ರವೇಶ ದ್ವಾರದ ಮೇಲೆ 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಘೋಷವಾಕ್ಯವನ್ನು ಬರೆಯಲಾಗಿದೆ. ಇದನ್ನೂ ಕೂಡ ಗೋಪಾಲಗೌಡರು ವಿಮರ್ಶೆ ಮಾಡಿದ್ದಾರೆ. ವಿಧಾನಸೌಧದ ಒಳಗೆ ಕೆಲಸ ಮಾಡುವವರು ಸಂಬಳ ಪಡೆದೇ ಕೆಲಸ ಮಾಡುತ್ತಾರೆ. ಸಂಬಳ ಪಡೆಯುವುದಕ್ಕಾಗಿ ಕೆಲಸ ಮಾಡುತ್ತಾರೆ. ಹಾಗಿರುವಾಗ ಅದು ದೇವರ ಕೆಲಸ ಹೇಗಾಗುತ್ತದೆ ಎಂಬುದು ಗೋಪಾಲಗೌಡರ ಪ್ರಾಥಮಿಕ ಪ್ರಶ್ನೆ. ನಿಜವಾಗಿಯೂ ಗೋಪಾಲಗೌಡರ ಈ ಪ್ರಶ್ನೆಯಲ್ಲಿ ಒಂದು ಪ್ರಾಮಾಣಿಕತೆಯಿದೆ ಹಾಗೂ ರಾಜಕೀಯ ಆತ್ಮ ವಿಮರ್ಶೆ ಇದೆ. ಇಂತಹ ಪ್ರಾಮಾಣಿಕತೆ ಮತ್ತು ಆತ್ಮವಿಮರ್ಶೆ ಇಲ್ಲದಿದ್ದರೆ ಪ್ರಜಾಪ್ರಭುತ್ವವನ್ನು ಮುನ್ನಡೆಸುವುದಾದರೂ ಹೇಗೆ? ಇದು ಮುಖ್ಯ ಪ್ರಶ್ನೆ.

ವಿಧಾನಸೌಧದ ಮೇಲೆ ಕಳಸ ಹಾಕಿರುವುದು ದೇವಸ್ಥಾನದ ಮೇಲೆ ಕಳಸ ಕಟ್ಟಿದ ರೀತಿ ಇದೆ ಎಂಬುದು ಗೋಪಾಲಗೌಡರ ಟೀಕೆ. ನಮ್ಮ ದೇಶದಲ್ಲಿ ಹಲವರಿಗೆ ವಾಸಕ್ಕೂ ಮನೆಗಳಿಲ್ಲ. ಅದರ ಅಗತ್ಯತೆ ಇದೆ ಎಂಬುದು ಗೋಪಾಲಗೌಡರ ಅಭಿಪ್ರಾಯ. ಗೋಪಾಲಗೌಡರ ಸೂಕ್ಷ್ಮದೃಷ್ಟಿ ಹಾಗೂ ಸಮಾಜವಾದಿ ರಾಜಕಾರಣದ ವೈಖರಿಗೆ ಮೇಲಿನ ಮಾತುಗಳು ಸಾಕ್ಷಿಯಾಗಿವೆ.

೫.೫. 'ವಿಧಾನ ಪರಿಷತ್ತು' ರದ್ದುಗೊಳಿಸುವುದರ ಚಿಂತನೆ

ಶಾಸಕರಾಗಿ ಶಾಂತವೇರಿ ಗೋಪಾಲಗೌಡರ ಇನ್ನೊಂದು ಪ್ರಮುಖ ಹೋರಾಟ ಮತ್ತು ಪ್ರಯತ್ನವೆಂದರೆ ವಿಧಾನ ಪರಿಷತ್ತನ್ನು ರದ್ದು ಮಾಡುವ ಕುರಿತು ವಿಧಾನ ಪರಿಷತ್ತಿಗೆ ಸ್ವತಂತ್ರವಾಗಿ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವಿರುವುದಿಲ್ಲ ಹಾಗೂ ಹಣಕಾಸಿನ ವಿಚಾರದಲ್ಲಿಯೂ ತೀರ್ಮಾನ ಕೈಗೊಳ್ಳುವ ಅಧಿಕಾರವಿರುವುದಿಲ್ಲ. ಹೀಗಿರುವಾಗ ವಿಧಾನ ಪರಿಷತ್ತನ್ನು ಸುಮ್ಮನೆ ಕಾಪಾಡಿಕೊಂಡು ಬರುವುದು ಬಿಳಿ ಆನೆ ಸಾಕಿದಂತೆ. ಸರ್ಕಾರಕ್ಕೆ ಅಧಿಕ ಆರ್ಥಿಕ ಹೊರೆ ಬೀಳುತ್ತದೆ. ಹಾಗಾಗಿ ವಿಧಾನ ಪರಿಷತ್ತನ್ನು ರದ್ದುಗೊಳಿಸುವುದು ರಾಜ್ಯದ ಹಿತದೃಷ್ಟಿಯಿಂದ ಒಳಿತು ಎಂದು ಶಾಸನ ಸಭೆಯಲ್ಲಿ ಹೋರಾಟ ನಡೆಸಿದ್ದರು. ದುರಾದೃಷ್ಟವಶಾತ್ ಇವರ ಜೊತೆ ಹೆಚ್ಚಿನ ಸದಸ್ಯರು ಕೈಜೋಡಿಸಲಿಲ್ಲ. ಏನೇ ಇರಲಿ ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ತಮ್ಮ ಸ್ವತಂತ್ರ ಚಿಂತನೆಗಳ ಮೂಲಕ ಸರ್ಕಾರಕ್ಕೆ ಸಲಹೆ ಮಾರ್ಗದರ್ಶನ ನೀಡುವಂತಹ ಮೇಧಾವಿತನ ಬೆಳೆಸಿಕೊಂಡಿದ್ದು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಿರಬೇಕು. ಕೇಂದ್ರದಲ್ಲಿ ಜನರನ್ನು ಪ್ರತಿನಿಧಿಸುವ ಲೋಕಸಭೆ, ಪ್ರಾಂತ್ಯಗಳನ್ನು ಪ್ರತಿನಿಧಿಸುವ ರಾಜ್ಯಸಭೆಗಳಿವೆ. ಆದರೆ ಪ್ರಾಂತ್ಯಗಳಲ್ಲಿ ಜನತೆಯನ್ನು ಸಮರ್ಥವಾಗಿ ಪ್ರತಿನಿಧಿಸುವ ಪ್ರಜಾಪ್ರತಿನಿಧಿ ಸದನ ಇರುವಾಗ ಇನ್ನೊಂದು ಸದನವಾದ ವಿಧಾನ ಪರಿಷತ್ತಿನ ಅವಶ್ಯಕತೆ ಇರುವುದಿಲ್ಲ. ಇದು ಕೇವಲ ವೆಚ್ಚದ ವ್ಯವಸ್ಥೆ ಎಂಬುದು ಇವರ ವಾದ. ಇದಕ್ಕೆ ಸಂಬಂಧಿಸಿದಂತೆ ಅವರ ಮಾತುಗಳನ್ನು ಇಲ್ಲಿ ಗಮನಿಸಬಹುದು.

ನಮ್ಮ ರಾಜ್ಯಾಂಗ ವಿಧಿಗನುಸಾರವಾಗಿ ನಡೆಯುವುದಾಗಿದ್ದರೆ ಮೇಲ್ಮನೆಯ ಅವಶ್ಯಕತೆಯಿಲ್ಲ ಎಂಬುದು ಶಾಂತವೇರಿ ಗೋಪಾಲಗೌಡರ ಒಂದು ಸ್ಪಷ್ಟ ಅಭಿಪ್ರಾಯವಾಗಿದೆ. ಅವರ ವೈಯಕ್ತಿಕ ಅಭಿಪ್ರಾಯದಲ್ಲಿ ಈಗ ಪ್ರಜಾಧಿಕಾರವನ್ನು ಪ್ರತಿಬಿಂಬಿಸುತ್ತಿರುವ ಈ ಕೆಳಮನೆಯೇ ಎಲ್ಲಾ ಅನುಕೂಲವನ್ನು ಒದಗಿಸಿಕೊಡುತ್ತಿರುವಾಗ, ಈ ಮೇಲ್ಮನೆ ಇರುವುದು ವೃಥಾ ಖರ್ಚಿನ ವ್ಯವಸ್ಥೆಯೆಂದು ಅವರು ಪರಿಭಾವಿಸುತ್ತಾರೆ. ಇದಕ್ಕಿಂತ ಹೆಚ್ಚಾಗಿ ಈ ವಿಚಾರವಾಗಿ ಏನನ್ನೂ ಸೂಚಿಸುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಈಗ ಅನಿವಾರ್ಯವಾಗಿ ಈ ವ್ಯವಸ್ಥೆಯನ್ನು ರೂಡಿಸಿಕೊಂಡು ಹೋಗಬೇಕಾಗಿದೆ ಎಂಬ ಅನಿವಾರ್ಯ ಪರಿಸ್ಥಿತಿಯ ಬಗ್ಗೆಯೂ ವಿಷಾದ ವ್ಯಕ್ತಪಡಿಸುತ್ತಾರೆ. ಮೇಲುಮನೆ ಎಂಬುದು ಹಣಕಾಸಿನ ಮೇಲೆ ಯಾವ ಒಂದು ಅಧಿಕಾರವನ್ನು ಹೊಂದಿಲ್ಲ ಮತ್ತು ಸ್ವತಂತ್ರವಾಗಿಲ್ಲ; ಆದುದರಿಂದ ನಮ್ಮ ಸಂಸ್ಥಾನದಲ್ಲಿಯೂ ಸಹ ಈಗಿರತಕ್ಕ ವಿಧಾನ ಪರಿಷತ್ತನ್ನು ರದ್ದುಗೊಳಿಸುವುದರಿಂದ ರಾಜ್ಯಾಂಗ ರೀತಿಯಲ್ಲಾಗಲಿ ಅಥವಾ ಪ್ರಜೆಗಳಿಗೆ ಪ್ರಾತಿನಿಧ್ಯ ಒದಗಿಸಿಕೊಡುವ ರೀತಿಯಲ್ಲಾಗಲಿ ಹಾನಿಯಿಲ್ಲ; ಮೇಲಾಗಿ, ಇದನ್ನು ರದ್ದುಗೊಳಿಸುವುದರಿಂದ ಹಣಕಾಸಿನ ದೃಷ್ಟಿಯಿಂದಲೂ, ಕಾರ್ಯದಕ್ಷತೆಯ ದೃಷ್ಟಿಯಿಂದಲೂ ಮತ್ತು ಹೆಚ್ಚು ತ್ವರಿತವಾಗಿ ಕೆಲಸ ಕಾರ್ಯ ನಡೆಯುವ ದೃಷ್ಟಿಯಿಂದಲೂ ಕ್ಷೇಮಕರವೆಂದು ಹೇಳಿ ನಾನು ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ[೧೦]

ಎಂದು ಹೇಳುತ್ತಾ, ಮುಂಬಯಿ ಪ್ರಾಂತ್ಯದಲ್ಲಿ ಈಗಾಗಲೇ ಅಲ್ಲಿನ ವಿಧಾನಸಭೆಯಲ್ಲಿ ವಿಧಾನ ಪರಿಷತ್ತು ರದ್ದಾಗಬೇಕೆಂದು ಒಂದು ನಿರ್ಣಯ ಅಂಗೀಕಾರವಾಗಿದೆ ಎಂಬ ಅಂಶವನ್ನು ಸದನಕ್ಕೆ ತಿಳಿಸುತ್ತಾರೆ. ಅಲ್ಲದೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೂ ಸಹ ಈ ವಿಷಯವನ್ನು ತೀರ್ಮಾನ ಮಾಡುವುದಕ್ಕೆ ಆಯಾ ಪ್ರಾಂತ್ಯಗಳಿಗೆ ಬಿಟ್ಟಿರುವ ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. ಪ್ರಜಾ ಸೋಷಲಿಸ್ಟ್ ಪಾರ್ಟಿಯೂ ಸಹ ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲಿ ಎರಡು ಮನೆಗಳ ಅವಶ್ಯಕತೆ ಇಲ್ಲ ಎಂದು ಹೇಳುತ್ತಾ ತಮ್ಮ ವಾದಕ್ಕೆ ಸಮರ್ಥನೆಯನ್ನು ಈ ಮೂಲಕ ನೀಡುತ್ತಿರುವುದನ್ನು ಕಾಣುತ್ತೇವೆ.

ಇತ್ತೀಚೆಗೆ ಕರ್ನಾಟಕದ ಆಡಳಿತ ರಾಜಕಾರಣದಲ್ಲಿ ವಿಧಾನ ಪರಿಷತ್ತಿನ ಅಗತ್ಯ ಇದೆಯೇ ಎಂಬ ಬಗ್ಗೆ ಸದನದ ಒಳಗೂ ಹಾಗೂ ಹೊರಗೂ ಚರ್ಚೆಗಳು ನಡೆದವು. ಇದಕ್ಕೆ ಸಂಬಂಧಿಸಿದಂತೆ ಸಾಂಪ್ರದಾಯಿಕವಾಗಿ ಕೆಲವು ಪರ ಹಾಗೂ ಕೆಲವು ವಿರೋಧಿ ಅಭಿಪ್ರಾಯಗಳು ಬಂದವು. ಇವುಗಳಲ್ಲಿ ಬಹುಪಾಲು ಅಭಿಪ್ರಾಯಗಳು ಮೇಲ್ಮನೆಯ ಅಗತ್ಯ ಇಲ್ಲ ಎಂಬುದರ ಕಡೆಗೇ ಇದ್ದವು. ಈ ಆಲೋಚನೆಯನ್ನು ಗೋಪಾಲಗೌಡರು ೫೦ರ ದಶಕದಲ್ಲೇ ಮಾಡಿದ್ದರು ಎಂಬುದು ಬಹಳ ಮುಖ್ಯವಾದ ಸಂಗತಿ.

೫.೬. ರಾಜಭವನ-ರಾಜ್ಯಪಾಲರ ಬಗೆಗಿನ ಪ್ರತಿರೋಧ

ಸಾರ್ವಜನಿಕ ಹಣಕಾಸನ್ನು ಅನಗತ್ಯವಾಗಿ ಖರ್ಚು ಮಾಡುವುದವನ್ನು ಶಾಂತವೇರಿ ಗೋಪಾಲಗೌಡರು ತಮ್ಮ ರಾಜಕಾರಣದ ಉದ್ದಕ್ಕೂ ಸಂಪೂರ್ಣವಾಗಿ ವಿರೋಧಿಸುತ್ತಲೇ ಬಂದಿದ್ದಾರೆ. ಅದು ಯಾವುದೇ ರೂಪದ್ದೂ ಇರಬಹುದು. ವಿಧಾನಸೌದಕ್ಕೆ ಸಂಬಂಧಿಸಿದ ಅನಗತ್ಯ ಖರ್ಚು ಇರಬಹುದು, ಯಾವುದೇ ಬಗೆಯ ಖರ್ಚು ಇರಬಹುದು. ಪ್ರಜಾಪ್ರಭುತ್ವದಲ್ಲಿ ರಾಜಭವನಗಳು ಆಧುನಿಕ ಮಹಾರಾಜರನ್ನು ಮತ್ತು ಅರಮನೆಗಳನ್ನು ಸೃಷ್ಟಿಸುತ್ತವೆ ಎಂದು ೧೯೫೨ರಲ್ಲೇ ಅದರ ಪೀಠೋಪಕರಣ ಮತ್ತು ವಾರ್ಷಿಕ ಇತರೆ ಸೌಲಭ್ಯದ ಖರ್ಚು ಸುಮಾರು ಮೂರು ಲಕ್ಷ ಬರುತ್ತಿದ್ದುದನ್ನು ವಿರೋಧಿಸಿ ಖರ್ಚನ್ನು ಕಡಿತಗೊಳಿಸಲು ವಿಧಾನಸಭೆಯಲ್ಲಿ ಹೋರಾಟ ನಡೆಸಿದರು. ಒಂದು ಕೆರೆ ಕಟ್ಟುವುದಕ್ಕಾಗಿ ೧೦ ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಯೋಗ್ಯತೆ ಇಲ್ಲ. ಪ್ರಾಥಮಿಕ ಶಾಲೆ ಕಟ್ಟುವುದಕ್ಕಾಗಿ ದುಡ್ಡು ಇಲ್ಲ. ರಸ್ತೆಗಳನ್ನು ಮಾಡಿಸುವುದಕ್ಕೆ ದುಡ್ಡು ಇಲ್ಲ. ಈ ರೀತಿ ಗೌರ್ನರ್‌ಗಾಗಿ ೨ ಲಕ್ಷ, ೫ ಲಕ್ಷ, ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದು ಎಂದರೇನು? ಯಾವ ಮಹಾದೇವೇಂದ್ರ ಲೋಕದವರು ನೀವೆಲ್ಲಾ ! ಯಾವ ಸುಪ್ಪತ್ತಿಗೆ ಮೇಲೆ ಇದ್ದೀರಿ ನೀವು? ಸರ್ಕಾರದ ಬೊಕ್ಕಸಕ್ಕೆ ವಂಚನೆ ಮಾಡುತ್ತಾ ಇರುವುದನ್ನು ನೋಡಿದರೆ ಜನರಿಗೆ ಹಾಕಿಕೊಳ್ಳುವುದಕ್ಕೆ ಬಟ್ಟೆ ಇಲ್ಲ, ಬೆತ್ತಲೆ ತಿರುಗುತ್ತಿದ್ದಾರೆ. ಇದನ್ನು ಸಾರ್ವಜನಿಕರೂ, ಶಾಸಕರೂ ವಿಚಾರ ಮಾಡಬೇಕು[೧೧] ಎಂಬ ಕಟುವಾದ ಮಾತುಗಳ ಮೂಲಕ ಸದನದ ಗಮನ ಸೆಳೆಯಲು ಪ್ರಯತ್ನಿಸಿರುವುದು ಇಲ್ಲಿ ಕಂಡುಬರುತ್ತದೆ.ಕರ್ನಾಟಕದ ರಾಜಕೀಯ ರಾಜಧಾನಿ ಬೆಂಗಳೂರಿನಲ್ಲಿರುವ

ವಿಧಾನಸೌಧದಲ್ಲಿದೆ. ವಿಧಾನಸೌಧದ ನೀತಿ ನಿರೂಪಣೆಗಳು ಜಾರಿಗೊಳ್ಳುವ ಮೊದಲು ಅವು ರಾಜಭವನದ ಅಧಿಕಾರದ ಸಿಂಧುತ್ವವನ್ನು ಪಡೆದು ಬರಬೇಕು. ಇದು ಸಾಮಾನ್ಯ ಪದ್ಧತಿ. ಈ ಒಟ್ಟು ಪ್ರಕ್ರಿಯೆಯಲ್ಲಿ ವಿಧಾನಸೌಧವನ್ನಾಗಲಿ ಮತ್ತು ರಾಜಭವನವನ್ನಾಗಲಿ ಜನಪ್ರತಿನಿಧಿಗಳು ಪ್ರಶ್ನಿಸಿ ಅದರ ಬಗೆಗೆ ಚರ್ಚೆ ಮಾಡಿರುವುದು ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಕಡಿಮೆ. ಆದರೆ ಈ ಹೇಳಿಕೆಯ ಅಪವಾದ ಎಂದರೆ ಗೋಪಾಲಗೌಡರು ರಾಜಭವನವನ್ನು ಕುರಿತು ಸದನದಲ್ಲಿ ಆಡಿರುವ ಮೇಲಿನ ಮಾತುಗಳು. ಜನರ ಬದುಕಿನ ಸಂಕಟಗಳ ಬಗೆಗೆ ಯಾವ ರಾಜಕಾರಣಿಗೆ ಪ್ರಾಮಾಣಿಕವಾದ ಕಾಳಜಿ ಇರುತ್ತದೊ ಅವರೆಲ್ಲರೂ ಶಾಂತವೇರಿ ಗೋಪಾಲಗೌಡರ ರೀತಿಯಲ್ಲೇ ಆಲೋಚನೆ ಮಾಡಲು ಸಾಧ್ಯ ಎಂಬುದು ಅವರ ಮೇಲಿನ ಮಾತುಗಳ ಮೂಲಕ ಗೊತ್ತಾಗುತ್ತದೆ.

೫.೭. ಪೊಲೀಸ್ ವ್ಯವಸ್ಥೆ ಹಾಗೂ ದಕ್ಷತೆಯ ಪ್ರಶ್ನೆಗಳು

ಸಮಾಜವಾದಿ ಚಿಂತನೆಯ ಜನರ ಪರವಾಗಿ ಆಲೋಚನೆ ಮಾಡುವ ರಾಜಕಾರಿಣಿಯು ಯಾವುದನ್ನೂ ಯಥಾರ್ಥ ರೂಪದಲ್ಲಿ ಗ್ರಹಿಸುವುದಿಲ್ಲ; ಅದಕ್ಕೆ ಯಾಂತ್ರಿಕವಾಗಿ ಪ್ರತಿಕ್ರಿಯೆ ಮಾಡುವುದಿಲ್ಲ. ಎಲ್ಲವನ್ನೂ ಅತ್ಯಂತ ಆಳವಾಗಿ ಆಲೋಚಿಸಿ, ಪ್ರತಿಯೊಬ್ಬರ ಕಷ್ಟ ಸಂಕಟಗಳನ್ನು ಪರಿಶೀಲನೆ ಮಾಡಿಯೇ ಪ್ರತಿಕ್ರಿಯೆ ಮಾಡುತ್ತಾರೆ. ಶಾಂತವೇರಿ ಗೋಪಾಲಗೌಡರಿಗೆ ಆ ಬಗೆಯ ಅತ್ಯಂತ ಸೂಕ್ಷ್ಮ ದೃಷ್ಟಿ ಇತ್ತು. ಪೊಲೀಸರನ್ನು ಕುರಿತು ಅವರು ಆಡಿರುವ ಮುಂದಿನ ಮಾತುಗಳು ಮಾನವಪರ ಕಾಳಜಿಯನ್ನು ವ್ಯಕ್ತಪಡಿಸುತ್ತಿವೆ. ಅವುಗಳ ಒಟ್ಟು ಸಾರವನ್ನು ಇಲ್ಲಿ ಈ ಮುಂದಿನಂತೆ ಗ್ರಹಿಸಲಾಗಿದೆ.

ಪೊಲೀಸ್ ಇಲಾಖೆಯಲ್ಲಿ ದಕ್ಷತೆ ಇದೆ, ಪ್ರಾಮಾಣಿಕತೆ ಇದೆ. ಅವರು ತಮ್ಮ ಕೆಲಸವನ್ನು ಮನಃಪೂರ್ವಕವಾಗಿ ಒಳ್ಳೆಯ ರೀತಿಯಲ್ಲಿ ನಡೆಸುತ್ತಿದ್ದಾರೆ. ಆದರೆ, ತಮ್ಮ ಕೆಲಸವನ್ನು ನಿರ್ವಹಿಸುವುದರಲ್ಲಿ ಯಾರು ಯಾರಿಗೆ ಅದಕ್ಷತೆ ಇದೆ. ಅದೆಲ್ಲ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅವರ ಮಧ್ಯ ಪ್ರವೇಶದಿಂದ ಆಯಿತು ಎಂಬ ಆರೋಪವನ್ನು ಕಾಂಗ್ರೆಸ್ಸಿನ ನಾಯಕರ ಮೇಲೆ ಮಾಡುತ್ತಾರೆ. ಸದನದ ಹಿಂದಿನ ದಿನ ನಡೆದ ಕೆಲವು ಚರ್ಚೆಯ ವಿವರಗಳನ್ನು ಮತ್ತೆ ಇಲ್ಲಿ ಜ್ಞಾಪಿಸಿಕೊಳ್ಳುತ್ತಾರೆ. ಟ್ರಾನ್ಸ್‌ಫರ್ ವಿಷಯದಲ್ಲಿ, ಪ್ರಮೋಷನ್ ವಿಷಯದಲ್ಲಿ ಭ್ರಷ್ಟಾಚಾರಕ್ಕೆ ಒಳಗಾಗಿರುವ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕ ವಿಷಯದಲ್ಲಿ ಮಧ್ಯೆ ಪ್ರವೇಶ ಮಾಡುವುದು ಕಾಂಗ್ರೆಸ್ ಸರ್ಕಾರದಲ್ಲಿ ಜನಜನಿತವಾಗಿದೆ ಎಂಬುದು ಗೋಪಾಲಗೌಡರ ನೇರ ಆರೋಪವಾಗಿದೆ. ಅದು ಎಲ್ಲಿಯತನಕ ಇರುತ್ತದೆಯೋ ಅಲ್ಲಿಯವರೆಗೂ ಪ್ರಾಮಾಣಿಕತೆಯಿಂದ ಧೈರ್ಯವಾಗಿ ವರ್ತಿಸುವುದಕ್ಕೆ ಅವರಿಂದ ಸಾಧ್ಯವಿಲ್ಲ. ಈ ವಿಷಯದಲ್ಲಿ ಸರ್ಕಾರದವರು ಕೇವಲ ಪಕ್ಷದ ಹಿತದೃಷ್ಟಿಯಿಂದ ಮಾತ್ರ ಈ ಇಲಾಖೆಯನ್ನು ನೋಡಬಾರದು. ಸಾರ್ವಜನಿಕರ ಹಿತದೃಷ್ಟಿಯಿಂದ, ಸಾರ್ವಜನಿಕ ಕಾನೂನು ಪರಿಪಾಲನೆಯ ದೃಷ್ಟಿಯಿಂದ ನೋಡಬೇಕು ಎಂಬ ಕಿವಿಮಾತನ್ನು ಹೇಳುತ್ತಾರೆ. ಆದರೆ

ಕಾಂಗ್ರೆಸ್ ಪಕ್ಷದವರು ಇವರ ಮಾತುಗಳನ್ನು ಈವರೆಗೆ ಗಣನೆಗೆ ತೆಗೆದುಕೊಂಡಿಲ್ಲವೆಂಬುದು ಒಂದು ವಿಷಾದದ ಸಂಗತಿಯಾಗಿದೆ ಎಂದು ಸದನಕ್ಕೆ ತಿಳಿಸಿರುವುದನ್ನು ಈ ಸಂದರ್ಭದಲ್ಲಿ ಕಾಣಬಹುದಾಗಿದೆ. ಪೋಲೀಸರ ವಿಷಯವನ್ನು ಮತ್ತಷ್ಟು ಮುಂದುವರೆಸುತ್ತಾ, ಈ ಕಾನ್‌ಸ್ಟೇಬಲ್‌ಗಳ ಕೆಲಸ ತಮಗೆ ಗೊತ್ತಿದೆ.ಬೆಳಿಗ್ಗೆ ೮ ಗಂಟೆಗೆ ಕಾಲುಪಟ್ಟಿ ಕಟ್ಟಿಕೊಂಡು ಹೊರಟರೆ ರಾತ್ರಿ ೮ ಗಂಟೆಯವರೆಗೂ ಮನೆಯನ್ನು ಸೇರುವುದಕ್ಕಾಗುವುದಿಲ್ಲ. ಅವನು ಪ್ರಾಮಾಣಿಕನಾಗಿರಬೇಕಾದರೆ ಅವನಿಗೆ ಪ್ರತಿನಿತ್ಯ ಆಗುವ ಅಗತ್ಯ ಖರ್ಚನ್ನಾದರೂ ಸರ್ಕಾರ ಕೊಡಬೇಕು[೧] ಎಂದು ಒತ್ತಾಯಿಸುತ್ತಾರೆ. ಯಾರಾದರೂ ಪ್ರಮುಖ ವ್ಯಕ್ತಿಗಳು ಬಂದರೆ ನಿಮ್ಮ ಪೊಲೀಸಿನವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ಪ್ರಶಂಸೆ ಮಾಡಿ ಹೋಗುತ್ತಾರೆ. ಆದರೆ, ಅವರು ಬೆಳಿಗ್ಗೆ ೮ ಗಂಟೆಗೆ ಬರುತ್ತಾರೆಂದು ಪ್ರೋಗ್ರಾಂ ಇದ್ದರೆ ರಾತ್ರಿ ೮ ಗಂಟೆಗೆ ಬರುತ್ತಾರೆ. ಅಲ್ಲಿಯವರೆಗೂ ಕಾನ್‌ಸ್ಟೇಬಲ್ ಆದವನು ಮರದ ಅಡಿಯಲ್ಲಿಯೋ ಅಥವಾ ಬಿಸಿಲಿನಲ್ಲಿಯೋ ನಿಂತು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ತೆರನಾದ ದೃಶ್ಯವು ಮನಸ್ಸಿಗೆ ಹಿಂಸೆಯನ್ನುಂಟು ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಅವರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ನೋಡಿ, ಅವರಿಗೂ ಹೆಂಡಿರು ಮಕ್ಕಳು ಇದ್ದಾರೆ. ಅವರಿಗೂ ಕಷ್ಟಕಾರ್ಪಣ್ಯಗಳಿವೆ. ಅವರಿಗೂ ಅನುಕೂಲಗಳನ್ನು ಕಲ್ಪಿಸಬೇಕು ಎನ್ನುವ ವಿಷಯದ ಬಗೆಗೆ ಗಮನಸೆಳೆದಿರುವುದು ಈ ಮಾತುಗಳ ಮೂಲಕ ಸ್ಪಷ್ಟವಾಗುತ್ತದೆ. ಅವರ ದಿನನಿತ್ಯದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಯೋಗ್ಯ ಮತ್ತು ಸೂಕ್ತ ಕ್ರಮಗಳನ್ನು ತೆಗೆದುಕೊಂಡರೆ ಪೋಲೀಸ್ ಕಾನ್‌ಸ್ಟೇಬಲ್‌ನ ವರ್ತನೆಯಲ್ಲಿ ಪರಿವರ್ತನೆಯಾಗಬಹುದು; ಜನತಂತ್ರದಲ್ಲಿ ಯಾವ ವರ್ತನೆ ಇರಬೇಕು ಎಂದು ಹೇಳುತ್ತೇವೆಯೋ ಅದನ್ನು ನಿರೀಕ್ಷಿಸಬಹುದು. ಅದಕ್ಕೆ ಸರ್ಕಾರದವರು ಗಮನ ಕೊಡಬೇಕು ಎಂದು ಗೋಪಾಲಗೌಡರು ತಮ್ಮ ಭಾಷಣವನ್ನು ಕೊನೆಗೊಳಿಸುತ್ತಾರೆ. ಈ ಎಲ್ಲ ಮಾತುಗಳ ಹಿನ್ನೆಲೆ ಮತ್ತು ಚರ್ಚೆಯ ವಾದಗಳನ್ನು ಗಮನಿಸಿದಾಗ, ಪೊಲೀಸರ ಕೆಲಸದ ಅವಧಿ, ಅವರ ಇಕ್ಕಟ್ಟು ಮತ್ತು ಬಿಕ್ಕಟ್ಟು ಇವುಗಳನ್ನು ಶಾಂತವೇರಿ ಗೋಪಾಲಗೌಡರು ಬಹಳ ಕಾಳಜಿಯಿಂದ ಆಲೋಚನೆ ಮಾಡಿದ್ದರು ಎಂಬುದನ್ನು ಇದು ತೋರಿಸುತ್ತದೆ. ರಕ್ಷಣೆಯ ಜವಾಬ್ದಾರಿ ಪೊಲೀಸರದ್ದೇ ಆಗಿದ್ದರೂ ಪೊಲೀಸರು ಕೂಡ ನಮ್ಮಂತೆ ಮನುಷ್ಯರು. ಅವರಿಗೂ ಭಾವನೆಗಳಿವೆ ಎಂಬುದನ್ನು ಅರಿತು ನಡೆದುಕೊಳ್ಳಬೇಕು ಎಂದು ಗೌಡರು ಹೇಳುವಾಗ ಅವರಿಗಿರುವ ಮಾನವೀಯ ಅಂತಃಕರಣ ತಿಳಿದುಬರುತ್ತದೆ.

೫.೮. ಜೈಲು ವ್ಯವಸ್ಥೆಯಲ್ಲಿ ಮಾನವೀಯತೆ

ಸಮಾಜವಾದಿ ರಾಜಕಾರಣಕ್ಕೆ ಸಮಾಜವಾದಿ ಮಾನವೀಯತೆಯೂ ಇರಬೇಕಾಗುತ್ತದೆ. ಜೊತೆಗೆ ಈ ಸಮಾಜವಾದಿ ಮಾನವೀಯತೆಯನ್ನು ಸಮಾಜದ ಎಲ್ಲಾ ಕಡೆಗಳಲ್ಲೂ ನಿರ್ಮಾಣ ಮಾಡಬೇಕಾಗುತ್ತದೆ. ಈ ದಿಕ್ಕಿನಲ್ಲಿ ಶಾಂತವೇರಿ ಗೋಪಾಲಗೌಡರು ತಮ್ಮದೇ ಆದ ನಿಲುವನ್ನು ಹೊಂದಿದ್ದರು. ಇದನ್ನು ಅವರ ಮಾತುಗಳಲ್ಲೇ ಗಮನಿಸಬಹುದು.

ನನ್ನ ಅನುಭವದಲ್ಲಿ ಕಂಡುಬಂದ ಹಾಗೆ ನಮ್ಮ ಜೈಲುಗಳಲ್ಲಿ ಕೈದಿಗಳಿಗೆ ಕೊಡುವ ರಾಗಿ ಮುದ್ದೆ ಮತ್ತು ಇತರ ಆಹಾರವನ್ನು ಸಾಮಾನ್ಯವಾಗಿ ನಾಯಿಗಳೂ ತಿನ್ನುವುದಿಲ್ಲ. ಅವರು ತಮ್ಮ ಅಪರಾಧಕ್ಕೆ ಶಿಕ್ಷೆಯನ್ನು ಅನುಭವಿಸುವುದಕ್ಕೆ ಅಲ್ಲಿ ಸೇರಿರುತ್ತಾರೆ ನಿಜ. ಆದರೂ ಕೂಡ ಮಾನವೀಯತೆಯ ದೃಷ್ಟಿಯಿಂದ ಯಾವುದೇ ಸರಕಾರ ಆಗಲಿ ಅವರನ್ನು ಆ ರೀತಿ ಕುನ್ನಿಗಳಿಗಿಂತ ಕಡೆಯಾಗಿ ನೋಡಿಕೊಳ್ಳುತ್ತಿರುವುದು ತೀರ ನಿರ್ದಯ, ನಿರ್ಲಕ್ಷ್ಯ ಮತ್ತು ಅಮಾನುಷತೆಯನ್ನು ತೋರಿಸುತ್ತದೆ. ಆದ್ದರಿಂದ ಅವರಿಗೆ ಕಾನೂನು ರೀತ್ಯಾ ಏನು ಕೊಡಬೇಕು ಎಂದಿದೆಯೋ ಅಷ್ಟನ್ನು ಪೂರ್ತಿ ಜೈಲಿನ ಅಧಿಕಾರಿಗಳು ಕೊಡುವಂತೆ ನೋಡಿಕೊಳ್ಳಬೇಕು. ಈ ರೀತಿ ಈಗ ನಡೆಯುತ್ತಾ ಇಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಈ ಆಹಾರವನ್ನು ಕೊಡುವುದರಲ್ಲಿ ಕಂಟ್ರಾಕ್ಟರುಗಳಾಗಲಿ ಅಥವಾ ಕಂಟ್ರಾಕ್ಟರುಗಳು ಮತ್ತು ಜೈಲು ಅಧಿಕಾರಿಗಳು ಸೇರಿಯೇ ಆಗಲಿ ಅವರ ಊಟವನ್ನು ಯಾರೂ ಕಸಿದು ತೆಗೆದುಕೊಳ್ಳಬಾರದು. ಅದು ಒಂದು ದೊಡ್ಡ ಅಪರಾಧವಾಗುವುದಲ್ಲದೆ ಪಾಪ ಎಂತಲೂ ಹೇಳಬಹುದು. ಅಂತೂ ಅವರಿಗಾಗಿ ಸರ್ಕಾರ ಏನು ಮಾಡಿಕೊಟ್ಟಿದೆಯೋ ಅದರಲ್ಲಿ ಏನೂ ತೆಗೆದುಕೊಳ್ಳಬಾರದು. ಆ ರೀತಿ ಆಗತಕ್ಕದ್ದನ್ನು ಸರ್ಕಾರದವರು ಪರಿಶೀಲನೆ ಮಾಡಿ ತಡೆಗಟ್ಟಬೇಕೆಂದು ಕೇಳುತ್ತೇನೆ.[೧೩]

ಅಪರಾಧಿಗಳನ್ನೂ ಮಾನವೀಯತೆಯ ದೃಷ್ಟಿಯಲ್ಲಿ ಕಾಣಬೇಕು ಎಂಬುದು ಬಹಳ ಮುಖ್ಯವಾದ ಕಾಳಜಿ. ಯಾಕೆಂದರೆ ಜೈಲಿನಲ್ಲಿ ಅಪರಾಧಿಗಳಾಗಿ ಶಿಕ್ಷೆ ಅನುಭವಿಸುವವರು ಬಹುತೇಕ ಬಡವರಾಗಿರುತ್ತಾರೆ. ಈ ಅಂಶವೂ ಕೂಡ ಇಲ್ಲಿ ಶಾಂತವೇರಿ ಗೋಪಾಲಗೌಡರ ಹಿತಾಸಕ್ತಿಯ ಹಿಂದೆ ಅಡಗಿದೆ ಎಂಬುದನ್ನು ಅಲ್ಲಗಳೆಯಲು ಬರುವುದಿಲ್ಲ.

೫.೯. ಗೋಲಿಬಾರ್ ಧೋರಣೆ ಕುರಿತು

ಜನರು ಪ್ರತಿಭಟನೆ, ಹೋರಾಟ ಇತ್ಯಾದಿಗಳನ್ನು ನಡೆಸುವಾಗ ಪೊಲೀಸರಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯವಾಗದೇ ಹೋದಾಗ ಲಾಠಿಚಾರ್ಜ್ ಮಾಡಲಾಗುತ್ತದೆ. ಇದಕ್ಕೆ ವಿರುದ್ಧವಾಗಿ ಜನರೇ ಒಂದು ವೇಳೆ ದಾಳಿಗೆ ಇಳಿದರೆ ಆಗ ಅವರ ಮೇಲೆ ಗೋಲಿಬಾರ್ ಮಾಡಲಾಗುತ್ತದೆ. ಇದು ಅನೇಕ ಆಡಳಿತಾತ್ಮಕ ಪರಿಶೀಲನೆ, ಅನುಮತಿ ಹಾಗೂ ಆದೇಶಗಳನ್ನು ಪಡೆದು ಮಾಡುವ ಕೆಲಸವಾಗಿದೆ. ಎಷ್ಟೋ ಸಲ ಪೊಲೀಸರು ಅಗತ್ಯವನ್ನು ಮೀರಿಯೂ ಕೂಡಾ ಗೋಲಿಬಾರ್ ಮಾಡುವುದಿದೆ. ಇದರ ಬಗೆಗೆ ಶಾಂತವೇರಿ ಗೋಪಾಲಗೌಡರಿಗೆ ಯಾವಾಗಲೂ ಭಿನ್ನಮತ ಹಾಗೂ ಕ್ರಿಯಾತ್ಮಕವಾದ ವಿಮರ್ಶೆ ಇರುತ್ತಿತ್ತು.ಅದನ್ನು ಅವರ ಈ ಮುಂದಿನ ಮಾತುಗಳು ಸಾಬೀತು ಪಡಿಸುತ್ತವೆ.

ಬೆಂಗಳೂರಿನಲ್ಲಿ ೪.೧.೧೯೬೪ರಲ್ಲಿ ಒಂದು ಗೋಲೀಬಾರ್ ಘಟನೆ ನಡೆಯಿತು. ಈ ಸಂದರ್ಭದಲ್ಲಿ ನಮಗೆ ಗೊತ್ತಿರುವ ಹಾಗೆ ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಡ್ರೈವರ್‌ಅನ್ನು ಒಬ್ಬ ಸಬ್‌ಇನ್‌ಸ್ಪೆಕ್ಟರು ಅನುಚಿತವಾದ ರೀತಿಯಲ್ಲಿ ವರ್ತಿಸಿದ ಮತ್ತು ಅವನನ್ನು ಪೊಲೀಸ್

ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡದ ಎಂದು ವರದಿಗಳು ಬಂದಿವೆ. ಇಂತಹ ಒಂದು ಸಂದರ್ಭದಲ್ಲಿ ಇಡೀ ಬೆಂಗಳೂರಿನ ಎಲ್ಲಾ ಮೋಟಾರುಗಳು ನಿಂತವು. ನಂತರದಲ್ಲಿ ಮಾರ್ಕೆಟ್ಟಿನ ಹತ್ತಿರ ದೊಡ್ಡ ಗುಂಪು ಸೇರಿತು. ಗಲಾಟೆ ಆಯಿತು. ಆಗ ತಮ್ಮ ರಕ್ಷಣೆಗಾಗಿ ಕಾನೂನು ಪರಿಪಾಲನೆಗಾಗಿ ಗೋಲಿಬಾರು ಮಾಡಿದರು. ಅದರಿಂದ ಇಬ್ಬರು ನಿರಪರಾಧಿಗಳು ಆ ಸಂದರ್ಭದಲ್ಲಿ ಸತ್ತುಹೋದರು. ಈ ವಿಷಯದಲ್ಲಿ ಸರ್ಕಾರದವರು ಯಾವುದೇ ಒಂದು ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಒಪ್ಪಿಲ್ಲ. ಕೊನೆಗೆ ಏನು ಕಾರಣ ಇದೆ ಎಂದರೆ ಮೂಲತಃ ಪೊಲೀಸಿನವರ ವರ್ತನೆಯೇ ಇದಕ್ಕೆ ಕಾರಣ. ಆದರೆ ಪೊಲೀಸರು ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡಲಿಲ್ಲ. ಸಾಮಾನ್ಯವಾಗಿ ಆ ರೀತಿ ಗೋಲಿಬಾರ್ ಮಾಡದಿದ್ದರೆ ಬಹಳ ಅಪಾಯವಾಗುತ್ತಿತ್ತು. ಲಕ್ಷಾಂತರ ರೂಪಾಯಿಗಳು ಸಾರ್ವಜನಿಕರು ಹಾಗೂ ಸರ್ಕಾರದ ಆಸ್ತಿಗಳಿಗೆ ನಷ್ಟವಾಗುವ ಸಂಭವ ಇತ್ತು; ಮತ್ತು ಪ್ರಾಣಹಾನಿಯೂ ಆಗುತ್ತಿತ್ತು ಎಂದು ಸರ್ಕಾರದವರು ಸಮಜಾಯಿಷಿ ಹೇಳಬಹುದು. ಏಕಾಏಕಿ ಅಂತಹ ಒಂದು ಘಟನೆ ನಡೆಯುವುದಕ್ಕೆ ಅವಕಾಶವನ್ನು ಕೊಟ್ಟು ಗೋಲೀಬಾರ್ ಮಾಡಿ ಇಬ್ಬರನ್ನು ಕೊಂದಿರತಕ್ಕದ್ದು ಖಂಡನೀಯ. ಅದು ಪೊಲೀಸ್ ಇಲಾಖೆಯ ದಕ್ಷತೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಪೊಲೀಸ್ ಇಲಾಖೆಯ ಒಂದು ಸ್ವೇಚ್ಛಾವರ್ತನೆ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಾನು ಒಂದು ವಿಷಯದಲ್ಲಿ ಪೊಲೀಸಿನವರ ನಡತೆಯನ್ನು ಪ್ರಶಂಸೆ ಮಾಡಬೇಕಾಗಿದೆ.ಈಗ್ಗೆ ಕೆಲವು ತಿಂಗಳ ಹಿಂದೆ ವಿದ್ಯಾರ್ಥಿಗಳು ಈ ರಾಜ್ಯದಲ್ಲಿ ಒಂದು ತಿಂಗಳ ಕಾಲ ಮುಷ್ಕರವನ್ನು ಆರಂಭ ಮಾಡಿ ನಡೆಸಿದರೂ ಆ ಸಂದರ್ಭದಲ್ಲಿ ಪೊಲೀಸಿನವರು ವಿಶೇಷವಾದ ಎಚ್ಚರಿಕೆಯಿಂದ ವರ್ತಿಸಿದರು. ಮತ್ತು ಯಾವುದೇ ಒಂದು ಹಿಂಸಾಚಾರಕ್ಕಾಗಲೀ, ಪ್ರಚೋದನೆಗಾಗಲೀ ಅವಕಾಶ ಕೊಡದಂತೆ ನಡೆದುಕೊಂಡರು ಎಂದು ನಾನು ಮೆಚ್ಚಿಗೆಯನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ.[೧೪] ರಾಜ್ಯದಲ್ಲಿ ನಡೆದ ಈ ಮೇಲಿನ ಎರಡು ಸನ್ನಿವೇಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಸದನದಲ್ಲಿ ಆಡಳಿತ ವ್ಯವಸ್ಥೆಯ ಅಜಾಗರೂಕತೆ ಹಾಗೂ ಜಾಗರೂಕತೆಯ ಕುರಿತು ಪೊಲೀಸ್ ವ್ಯವಸ್ಥೆಯ ಎರಡೂ ಸಂದರ್ಭಗಳನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಮೇಲಿನ ಎರಡು ಘಟನೆಗಳಿಗೆ ಗೌಡರು ಪಕ್ಷ ರಾಜಕಾರಣದ ಪಕ್ಷಪಾತಿಯಾಗದೆ ವಸ್ತುನಿಷ್ಠವಾಗಿ ಪ್ರತಿಕ್ರಿಯಿಸಿದ್ದಾರೆ. ಪೊಲೀಸರನ್ನು ಕಟಕಟೆಯ ಮೇಲೆ ನಿಲ್ಲಿಸಿ ಏಕಮುಖವಾಗಿ ಟೀಕೆ ಮಾಡಿಲ್ಲ. ಅದರ ಹಾಗೆಯೇ ಪೊಲೀಸರು ಮಾಡಿದ್ದೆಲ್ಲವೂ ಸರಿ ಎಂದೂ ಹೇಳಿಲ್ಲ. ಅವರಿಗೆ ಪೊಲೀಸರ ಕ್ರಿಯಾತ್ಮಕ ವರ್ತನೆಗಿಂತ ಪರಿಸ್ಥಿತಿಯ ಒತ್ತಡವೇ ಆಲೋಚನೆಗೆ ಮತ್ತು ಅವರ ಮಾತುಗಳಿಗೆ ಪಕ್ವ ಬುನಾದಿಯಾಗಿದೆ. ಇಂದಿನ ನಮ್ಮ ಜನಪ್ರತಿನಿಧಿಗಳು ಇಂತಹ ಘಟನೆಗಳನ್ನು ಕುರಿತು ಮಾತನಾಡುವಾಗ ಪಕ್ಷ ರಾಜಕಾರಣದ ಪೂರ್ವಾಗ್ರಹ ಪೀಡಿತರಾಗಿ ಮಾತನಾಡುತ್ತಾರೆ. ಆದರೆ ಗೋಪಾಲಗೌಡರಿಗೆ ಇಂತಹ ಪೂರ್ವಾಗ್ರಹ ಇರಲಿಲ್ಲ ಎಂಬುದು ಮೇಲಿನ ಅವರ ಮಾತುಗಳ ಮೂಲಕ ವ್ಯಕ್ತವಾಗಿದೆ.

೫.೧೦. ಗೇಣಿದಾರರ ಸಂಕಷ್ಟ

ಕಂದಾಯ ಇಲಾಖೆಯು ಬ್ರಿಟಿಷರ ಸಾಗುವಳಿ ಭೂಮಿಗೆ ಯಾರು ಮಾಲಿಕರಾಗಬೇಕು ಮತ್ತು ಯಾರು ಮಾಲಿಕರಾಗಬಹುದು ಎಂಬುದು ಕಾನೂನಿನ ಚೌಕಟ್ಟುಗಳ ಒಳಗೂ ಹಾಗೂ ಕಾನೂನಿನ ಚೌಕಟ್ಟಿನ ಹೊರಗೂ ಕೆಲಸ ಮಾಡುತ್ತಿದೆ. ನಮ್ಮ ಕಾಲದಲ್ಲಿ ಈಗ ಸಾಗುವಳಿ ಭೂಮಿಗೆ ಸಂಬಂಧಿಸಿದಂತೆ ಎರಡು ಸಂಗತಿಗಳು ಅತ್ಯಂತ ಗಂಭೀರವಾದ ತಾರಕ ಸ್ಥಿತಿಯನ್ನು ಮುಟ್ಟಿವೆ. ೧. ಒತ್ತುವರಿ, ೨. ಬಗರ್ ಹುಕುಂ ಎಂಬುದಾಗಿದೆ. ಒತ್ತುವರಿ ಎಂಬುದು ಸಾಗುವಳಿ ಯೋಗ್ಯ ಭೂಮಿ ಹೊಂದಿರುವವರೇ ಆ ಸಾಗುವಳಿ ಭೂಮಿಗೆ ಹೊಂದಿಕೊಂಡಿರುವ ಸರ್ಕಾರಿ ಭೂಮಿಯನ್ನು ಕಾನೂನಿನ ಆಚೆಗೆ ಪರಭಾರೆ ಮಾಡುವುದು. ಬಗರ್ ಹುಕುಂ ಎಂಬುದು ಸಂಪೂರ್ಣ ಭೂ ರಹಿತರು ಸರ್ಕಾರಿ ಭೂಮಿಯನ್ನು ತಮ್ಮ ಜೀವನ ನಿರ್ವಹಣೆಯ ಅಗತ್ಯಕ್ಕಾಗಿ ಸಾಗುವಳಿ ಮಾಡುವುದು. ಇವೆರಡೂ ಕರ್ನಾಟಕದಲ್ಲಿ ಕಳೆದ ಕನಿಷ್ಟ ಮೂರುವರೆ ದಶಕದಿಂದ ಸಾಗುವಳಿ ಮಾಡುವವರಿಗೆ ಬಹಳ ದೊಡ್ಡ ಸಮಸ್ಯೆಯನ್ನಾಗಿ ಸರ್ಕಾರವೇ ನಿರ್ಮಾಣ ಮಾಡಿದೆ. ಇತ್ತೀಚೆಗೆ ಇಂತಹ ಭೂಮಿಗೆ ಸಾಗುವಳಿ ಚೀಟಿ ಕೊಡುವ ಪ್ರಕ್ರಿಯೆ ನಡೆದಿದೆ. ಆದರೆ ನಮ್ಮ ಜನಪ್ರತಿನಿಧಿಗಳಿಗೆ ಈ ಸಮಸ್ಯೆ ಇಂದಿಗೂ ಕರ್ನಾಟಕದ ಮುಖ್ಯ ಸಮಸ್ಯೆಯಾಗಿ ಕಂಡೇ ಇಲ್ಲ. ನಮ್ಮ ಕಾಲದಲ್ಲಿ ಗೇಣಿಯ ಸಮಸ್ಯೆ ಇವತ್ತು ಕೋರ್ಟ್ ಕಚೇರಿಯ ಮೆಟ್ಟಿಲು ಏರುವ ಸ್ಥಿತಿಯಲ್ಲಿ ಇಲ್ಲ. ಆದರೆ ಗೋಪಾಲಗೌಡರು ಜನಪ್ರತಿನಿಧಿಯಾಗಿದ್ದಾಗ ಈ ಸಮಸ್ಯೆ ಅತ್ಯಂತ ಗಂಭೀರವಾಗಿತ್ತು. ಇಂತಹ ಗಂಭೀರವಾದ ಸಮಸ್ಯೆಯ ಬಗೆಗೆ ಗೋಪಾಲಗೌಡರು ತಮ್ಮದೇ ಆದ ಹಿತಾಸಕ್ತಿ ಹಾಗೂ ದೃಷ್ಟಿಕೋನವನ್ನು ಹೊಂದಿದ್ದರು. ಅದನ್ನು ಅವರ ಈ ಮುಂದಿನ ಮಾತುಗಳು ಸಾಬೀತುಪಡಿಸುತ್ತವೆ.

ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ, ಹೊಸನಗರ, ಷಿಕಾರಿಪುರ, ಸೊರಬ, ಶ್ರೀರಂಗಪಟ್ಟಣ ಇತ್ಯಾದಿ ಮಲೆನಾಡಿನ ಹಾಗೂ ಇನ್ನಿತರ ತಾಲ್ಲೂಕುಗಳಲ್ಲಿ ಗೇಣಿಗೆ ಸಂಬಂಧಪಟ್ಟ ಅಪೀಲುಗಳು ನೂರಾರು ಏತಕ್ಕೆ, ಸಾವಿರಾರು ಗೇಣಿ ವಿವಾದಗಳು ಇತ್ಯರ್ಥವಾಗದೇ ತಹಶೀಲುದಾರರುಗಳ ಕೋರ್ಟಿನಲ್ಲಿ ಬಿದ್ದು ಸುಮಾರು ಆರೇಳು ವರ್ಷಗಳಿಂದಲೂ ಗೇಣಿದಾರರು ಹಾಗೂ ಜಮೀನುದಾರರು ಒಂದೇ ಸಮನೆ ಕೋರ್ಟಿಗೆ ಹೋಗಿ ಲಾಯರುಗಳಿಗೆ ಫೀ ಕೊಟ್ಟು ಹತವಾಗಿದ್ದಾರೆ. ಅದರಲ್ಲೂ ಎಷ್ಟೋ ಕಡೆಗಳಲ್ಲಿ ಲಾಯರುಗಳಿಗೆ ದುಡ್ಡು ತೆತ್ತು ಭಿಕಾರಿಗಳಾಗಿಯೂ ಆಗಿ ಮನೆ ಮಠಗಳನ್ನೂ ಇದಕ್ಕಾಗಿ ಕಳೆದುಕೊಂಡಿದ್ದಾರೆ. ಮೊದಲಿಗೆ ಈ ಕೇಸುಗಳನ್ನು ಇತ್ಯರ್ಥ ಮಾಡುವ ಡೆಪ್ಯುಟಿ ತಹಶೀಲುದಾರರುಗಳು ಎಂದಿದ್ದರು. ಈಗ ಅವರುಗಳು ಇಲ್ಲ. ಹೋಗುವುದಿಲ್ಲ. ನಾನು ಹೇಳುವುದು ಕಾಂಗ್ರೆಸ್ಸಿನವರು ಒಪ್ಪಿದಂತಹ ತತ್ವ ಎಂದರೆ ಉಳುವವನಿಗೆ ನೆಲ ಕೊಡುವುದು ಎಂದು 'ಲ್ಯಾಂಡ್ ಟು ದಿ ಟಿಲ್ಲರ್' ಎನ್ನುವ ಒಂದು ನಿರ್ಣಯದಂತೆ ಒಂದು ದೃಢವಾದ ತೀರ್ಮಾನವನ್ನೂ ಮಾಡಿದ್ದೇವೆ ಎಂದು ಮೇಲಿಂದ ಮೇಲೆ ಹೇಳುತ್ತಲೇ ಬರುತ್ತಿದ್ದಾರೆ. ಆದರೆ ಯಾವ ರೈತರಿಗೂ ಇದರ ಪ್ರಯೋಜನವಾಗುವಂತೆ ಮಾಡಲಿಲ್ಲ. ಸರಕಾರದವರೇನೋ ಭೂ ಸುಧಾರಣೆ ಜಾರಿಗೆ

ತರುತ್ತೇವೆ, ಇದರಿಂದ ಒಡಕ್ಕೈತರಿಗೆ ಉಪಕಾರವಾಗುತ್ತದೆ ಎಂದು ಬಾಯಲ್ಲಿ ಹೇಳುತ್ತಾರೆಯೇ ವಿನಃ ಕಾರ್ಯತಃ ಏನೂ ಮಾಡುತ್ತಿಲ್ಲ. ಇದರ ಬಗ್ಗೆ ಬೇಕಾದಷ್ಟು ಚರ್ಚೆ ಕೇಂದ್ರ ಸರಕಾರದಲ್ಲಿ ಹಾಗೂ ರಾಜ್ಯ ಸರಕಾರಗಳಲ್ಲಿ ನಡೆದವು. ಮತ್ತು ಎಲ್ಲ ಜವಾಬ್ದಾರಿಗಳನ್ನು ಪಾರ್ಲಿಮೆಂಟಿನವರೇ ಹಿಡಿದುಕೊಳ್ಳದೇ ಆಯಾ ರಾಜ್ಯ ಸರಕಾರಗಳಿಗೆ ಇದರ ಜವಾಬ್ದಾರಿಗಳನ್ನು ಬಿಟ್ಟಿದೆ ಎಂದೂ ಹೇಳಿದರು. ಇದರಿಂದಾಗಿ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಾಗಿ ಸೀಲಿಂಗ್ ಇರಬೇಕು ಎಂದು ನಿಗದಿ ಮಾಡಿದ್ದಾರೆ. ಇದಕ್ಕಾಗಿ ಬೇರೆ ಬೇರೆಯಾದ ಕಾನೂನುಗಳನ್ನು ಮಾಡಿದರು. ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಬಹಳವಾಗಿ ಮಾಡುತ್ತೇವೆ ಎಂದು ಹೇಳುತ್ತಾರೆಯೇ ಹೊರತು ಏನನ್ನೂ ಮಾಡಲಿಲ್ಲ ಎನ್ನುವುದನ್ನು ನೋಡಿದರೆ ಈ ಭೂಸುಧಾರಣೆಯ ಬಗ್ಗೆ ಅವರು ಉಪೇಕ್ಷೆ ತೋರಿಸಿ ಕೆಲಸವಾಗದಂತೆ ಮಾಡುತ್ತಿರುವ ಈ ಭ್ರಷ್ಟ ಸರಕಾರ ಎಂದರೆ ಈ ಮೈಸೂರು ಸರಕಾರ[೧೫] ಎಂದು ಗೋಪಾಲಗೌಡರು ತಮ್ಮ ನೇರ ಮಾತುಗಳ ಮೂಲಕ ಆಡಳಿತ ಸರ್ಕಾರವನ್ನು ಭ್ರಷ್ಟ ಸರ್ಕಾರ ಎಂದು ಧೈರ್ಯವಾಗಿ ಮಾತನಾಡಿದ್ದಾರೆ. ಭೂಸುಧಾರಣೆಯ ವಿಚಾರ ಕೇವಲ ಚುನಾವಣಾ ಘೋಷಣೆಯಾಗಿದ್ದನ್ನು ತರಾಟೆಗೆ ತೆಗೆದುಕೊಳ್ಳುವ ಗೌಡರು ಆಡಳಿತ ಮಾಡುವವರನ್ನು ವಚನಭ್ರಷ್ಟ ಸರ್ಕಾರ ಎಂದು ಟೀಕಿಸಿದ್ದಾರೆ.

೫.೧೧. ಭೂದಾನ ಚಳವಳಿ

ವಿನೋಬಾ ಭಾವೆ ಅವರು ನಡೆಸಿದ ಭೂದಾನ ಚಳವಳಿ ಭಾರತದ ಲಿಖಿತ ಚರಿತ್ರೆಯಲ್ಲಿ ಚಿರಪರಿಚಿತವಾಗಿದೆ ಮತ್ತು ಪ್ರಸಿದ್ಧವಾಗಿದೆ. ಆದರೆ ವಿನೋಬಾ ಭಾವೆ ಅವರು ಈ ಚಳವಳಿಯನ್ನು ಯಾವ ಮೂಲಭೂತ ಕಾರಣಕ್ಕಾಗಿ ಪ್ರಾರಂಭಿಸಿದರು ಎಂಬ ಅಂಶವನ್ನು ಲಿಖಿತ ರಾಜಕೀಯ ಚರಿತ್ರೆಯಲ್ಲಿ ಅತ್ಯಂತ ಜಾಣ್ಮೆಯಿಂದ ಮುಚ್ಚಿಡಲಾಗಿದೆ. ವಿಶೇಷವೆಂದರೆ ಗೋಪಾಲಗೌಡರು ಈ ಅತಿ ಮಹತ್ವದ ಕಾರಣವನ್ನು ಕುರಿತು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಅವರ ಮಾತುಗಳಲ್ಲೆ ಈ ರೀತಿಯಲ್ಲಿ ಉಲ್ಲೇಖ ಮಾಡಬಹುದು. ಮಾನ್ಯ ಕಂದಾಯ ಸಚಿವರು ಮಂಡಿಸಿರುವ ಈ ಭೂದಾನ ಯಜ್ಞವಿಧೇಯಕವನ್ನು ನಾನು ವಿನೋಬಾಜಿಯವರ ಕ್ಷಮೆ ಬೇಡಿ ವಿರೋಧಿಸುತ್ತೇನೆ. ಈ ಮಸೂದೆ ಅತ್ಯಂತ ವಿವಾದಾಸ್ಪದವಾದ ಮಸೂದೆ. ಯಾರು ಶಾಸನರಹಿತ ಸಮಾಜವನ್ನು ರಚಿಸಬೇಕು ಎಂದು ಆಶಿಸಿದ್ದರೋ ಅಂತಹ ಮಹಾತ್ಮನ ಹೆಸರಿನಲ್ಲಿ ನಾವು ಒಂದು ಶಾಸನವನ್ನು ರಚಿಸುತ್ತೇವೆ. ಪೂಜ್ಯ ವಿನೋಬಾರವರು ಹೇಳುತ್ತಾರೆ. ಕಾನೂನು ಎನ್ನತಕ್ಕದ್ದು ಹೇಗೆ ಒಂದು ಪುಸ್ತಕವನ್ನು ಬರೆದಾದ ಮೇಲೆ ಕೊನೆಯಲ್ಲಿ ಇತಿಶ್ರೀ-ದಿ ಎಂಡ್ ಎಂದು ಬರೆಯುತ್ತಾರೆಯೋ ಹಾಗೆ ವ್ಯವಸ್ಥೆಯಲ್ಲಿ ಪೂರ್ಣಪಾಲನೆಯಾದ ಮೇಲೆ ಅದಕ್ಕೆ ಒತ್ತುವ ಒಂದು ಮುದ್ರೆ ಎಂದು.

ಸಮಾಜದಲ್ಲಿ ಬದಲಾವಣೆ ಆಗಬೇಕು; ಅನಂತರ ಶಾಸನಗಳು ಬರಬೇಕೆಂದು ಅವರು ಹೇಳಿದ್ದಾರೆ. ಈ ಭೂದಾನ ಚಳವಳಿ, ಯಾವಾಗ ತೆಲಂಗಾಣದಲ್ಲಿ ಕಮ್ಯೂನಿಸ್ಟರು ಈ ಭೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹಿಂಸಾತ್ಮಕವಾದ ಕಾರ್ಯಕ್ರಮವನ್ನು ಕೈಕೊಂಡರೋ, ಯಾವಾಗ

ಅಲ್ಲಿ ರಕ್ತಪಾತ ನಡೆಯಿತೋ ಆ ಸಂದರ್ಭದಲ್ಲಿ ವಿನೋಬಾ ಅವರು ಆ ಪ್ರದೇಶಕ್ಕೆ ಪ್ರವಾಸ ಹೋಗಿದ್ದಾಗ ಅಲ್ಲಿ ಭೂಹೀನ ಹರಿಜನರು ಭೂಮಿ ಕೊಡಿ ಎಂದಾಗಲೇ ಒಂದು ಗ್ರಾಮದಲ್ಲಿ ಅವರಿಗೆ ಭೂಮಿ ಕೊಟ್ಟರು. ಈ ಭೂಮಿ ಕೊಡತಕ್ಕ ಅಥವಾ ಕೇಳತಕ್ಕ ಕೆಲಸವನ್ನು ಒಂದು ಚಳವಳಿಯಾಗಿ ಮಾಡಬೇಕೆಂದು ಅವರು ಆಶಿಸಿದರು. ಅವರಿಗೆ ಮೊದಲು ಭೂಮಿ ದಾನ ಬಂದದ್ದು ೧೯೫೧ ಏಪ್ರಿಲ್ ೧೮ರಲ್ಲಿ. ಅವರು ಈ ಚಳವಳಿಯನ್ನು ಪ್ರಾರಂಭ ಮಾಡಿದ್ದು ಅದೇ ವರ್ಷ ಏಪ್ರಿಲ್ ೨೮ನೇ ತಾರೀಖು. ಆದರೆ ನಾನು ಮೊದಲೇ ಹೇಳಿದ ಹಾಗೆ ಇದು ಬಹಳ ವಿವಾದಸ್ಪದವಾದ ವಿಷಯ. ಏಕೆಂದರೆ ನಾವೆಲ್ಲಾ ಲೌಕಿಕರು, ಲೌಕಿಕವಾಗಿ ವ್ಯವಹರಿಸುತ್ತೇವೆ; ಲೌಕಿಕವಾಗಿ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಬೇಕಾಗುತ್ತದೆ. ಭಾವೆ ಅವರು ಸೂಚಿಸಿರುವ ಪರಿಹಾರ ಅಲೌಕಿಕವಾದದ್ದು ಮನುಷ್ಯನ ಅಂತಃಕರಣಕ್ಕೆ ಪ್ರಾರ್ಥನೆ ಮಾಡಿಕೊಳ್ಳತಕ್ಕದ್ದು. ಮನುಷ್ಯ ತನ್ನ ಭಾವನೆಯನ್ನು ತಿದ್ದಿಕೊಳ್ಳಬೇಕು; ಅವನು ಅಪರಿಗ್ರಹ ಮಾಡಬೇಕೆಂದು ಅವರು ಹೇಳಿದ್ದಾರೆ. ಸೋಷಿಯಲಿಸ್ಟರು ಅಥವಾ ಕಮ್ಯುನಿಸ್ಟರು ಹೇಳತಕ್ಕ ಸಮಾನತೆಯ ರಾಜ್ಯದಲ್ಲಿ ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳತಕ್ಕ, ಅಪಹರಣ ಮಾಡತಕ್ಕ ವ್ಯವಸ್ಥೆ ಇದು, ಅಭಿಪ್ರಾಯ ಇದು ಎಂದು ಅದನ್ನು ಬಿಟ್ಟು ಯಾರು ಆಸ್ತಿಪಾಸ್ತಿಗಳನ್ನು ಹೊಂದಿರುತ್ತಾರೆಯೋ ಅವರು ಅದನ್ನು ಹೊಂದಿರಬಾರದು, ತ್ಯಜಿಸಬೇಕು. ಅಪರಿಗ್ರಹವನ್ನು ಅವರೇ ಆಶ್ರಯಿಸಬೇಕು. ಆದ್ದರಿಂದ ಇತಿಹಾಸದಲ್ಲಿ ಭೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.

ಆಚಾರ್ಯ ಭಾವೆ ಅವರ ಬಗ್ಗೆ ನನಗೂ ಬಹಳ ಗೌರವವಿದೆ. ಅವರ ಚಳವಳಿಯ ಬಗ್ಗೆ ನಾನು ಗೌರವವನ್ನು ಹೊಂದಿದ್ದೇನೆ. ಆದರೆ ಆ ಮಾರ್ಗದಲ್ಲಿರುವ ಅಲೌಕಿಕವಾದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ದೃಢವಾದ ನಂಬಿಕೆ. ಆದರೆ ಅವರು ಹೋಗುತ್ತಿರುವ ಮಾರ್ಗದಂತೆ ಸಂಪತ್ತನ್ನು ಗಳಿಸಲು ಸಾಧ್ಯವಿಲ್ಲ. ಅವರೇ ಹೇಳುವಂತಹ ಮನುಷ್ಯರನ್ನು ಸೃಷ್ಟಿ ಮಾಡುವುದೂ ಸಾಧ್ಯವಿಲ್ಲ. ಅದನ್ನು ನಾವು ಚರ್ಚಿಸುವುದು ಉಚಿತವಲ್ಲ ಮತ್ತು ಅದು ಅಪ್ರಕೃತ. ಅಹಿಂಸೆಯ ಆಧಾರದ ಮೇಲೆ ನಡೆಯುತ್ತಿರುವ ಈ ಚಳವಳಿಯಲ್ಲಿ ಹಿಂಸೆಯಿಂದ ಒತ್ತಾಯ ತರುವುದನ್ನು ತೊಡೆದುಹಾಕಲು ಸಾಧ್ಯವಿಲ್ಲ. ಶ್ರೀಕೃಷ್ಣನೂ ಕೂಡ ಯುದ್ಧವನ್ನು ತಪ್ಪಿಸಲಿಕ್ಕೆ ಆಗಲಿಲ್ಲ. ಕುರುಕ್ಷೇತ್ರ ನಡೆದೇ ನಡೆಯಿತು.ಇವೊತ್ತು ಉಂಟಾಗಿರತಕ್ಕಂತಹ ಭೂಮಿಯ ಸಮಸ್ಯೆ ಪವಾಡದಂತೆ ನಡೆಯುವುದಿಲ್ಲ ಎನ್ನುವುದು ಎಲ್ಲರೂ ತಿಳಿದು ಹೇಳುವ ಮಾತು. ಇದರ ಬಗ್ಗೆ ಆಚಾರ್ಯ ಭಾವೆಯವರೊಡನೆ ಸರಕಾರದವರು ವೈಯಕ್ತಿಕವಾಗಿ ಮಾತನಾಡಬೇಕು, ನಮ್ಮ ಅಭಿಪ್ರಾಯಗಳನ್ನು ಅವರಿಗೂ ತಿಳಿಸಬೇಕು. ಚಳವಳಿ ವಿಫಲವಾಗಿದೆ ಎಂದು ಅವರು ಹೇಳುವ ಪ್ರಕಾರ ಮುಂದೆ ಇದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇದನ್ನು ತಾವಿಲ್ಲಿ ವಿಚಾರ ಮಾಡಬೇಕು. ಹೊಸದಾಗಿ ಭೂದಾನದ ಗೇಣಿದಾರನೆಂದು ಒಬ್ಬರನ್ನು ಈಗಿರುವ ಇತರ ಗೇಣಿದಾರರೊಂದಿಗೆ ಸೃಷ್ಟಿ ಮಾಡಿದ್ದಾರೆ. ಈ ಹೊಸ ಭೂದಾನದ ಗೇಣಿದಾರ

ಯಾರಾದರೂ ಭೂದಾನಕ್ಕಾಗಿ ಕೊಟ್ಟಿರುವ ಭೂಮಿಯನ್ನು ಉಪಯೋಗಿಸುತ್ತಿರುವಾಗ ಅಂತಹ ಬಡ ರೈತನ ಒಕ್ಕಲನ್ನು ಕಾನೂನು ಪ್ರಕಾರ ರದ್ದು ಮಾಡುವಾಗ ಅವನನ್ನು ಬಿಡಿಸಬಹುದು ಎಂದು ಇದರಲ್ಲಿ ಯಾವ ಒಂದು ಶ್ರೇಯಸ್ಸಿಗೋಸ್ಕರ ಆಚಾರ್ಯ ಭಾವೆಯವರು ಇಡೀ ದೇಶದಲ್ಲಿ ಕಾಲ್ನಡಿಗೆಯಲ್ಲೇ ಓಡಾಡುತ್ತಿದ್ದಾರೋ ಅಂತಹವರ ತತ್ವಕ್ಕೆ ವಿರೋಧವಾಗಿ ನಾವು ಕಾನೂನುಗಳನ್ನು ಮಾಡಿ, ಇದರೊಳಗೆ ಇಂತಹ ವಿಧಿಗಳನ್ನೂ ಪ್ರಕರಣಗಳನ್ನೂ ಹಾಕಿದ್ದೇವೆ. ಖಂಡಿತವಾಗಿಯೂ ಇದು ಪಾಸಾದರೆ ಈ ಶಾಸನದಿಂದ ಸರ್ವೋದಯ ಸಮಾಜವಾಗಬೇಕು ಎನ್ನುವ ಉದ್ದೇಶ ನೆರವೇರುತ್ತದೆಯೇ? 'ಕೃಷ್ಣಾರ್ಪಣಮಸ್ತು' ಎನ್ನುವಂತೆ ಇದೆ ಇದರ ತತ್ವ ದೇಶದಲ್ಲಿ ಎಲ್ಲಿಯೂ ಇಲ್ಲದಂತಹ ಪದ್ಧತಿ ಇಲ್ಲಿ ಕಂಡುಬರುತ್ತಿದೆ ಎಂದು ನಾನು ಹೇಳಬೇಕಾಗಿದೆ.[೧೬]

ಭಾರತದಲ್ಲಿ ಸಾಮಾನ್ಯವಾಗಿ ಸಮಾಜವಾದಿಗಳು ಹಾಗೂ ಕಮ್ಯೂನಿಸ್ಟರು ಒಂದೇ ವಿಷಯದ ಬಗೆಗೆ ಒಂದೇ ರೀತಿಯ ನಿಲುವು ತಾಳುವುದು ಇಲ್ಲವೇ ಇಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಭಾರತದ ಸಮಾಜವಾದಿಗಳಿಗೆ ಸಾಂಸ್ಕೃತಿಕ ಸಂಗತಿಗಳ ಬಗೆಗೆ ಮುಖ್ಯ ಕಾಳಜಿ ಹಾಗೂ ಆಸಕ್ತಿ. ಜೊತೆಗೆ ಆರ್ಥಿಕ ಸಂಗತಿಗಳು ಹಾಗೂ ಭೂಮಿ ಮತ್ತು ಭೂಮಿಯ ವಾರಸುದಾರಿಕೆಗೆ ಸಂಬಂಧಿಸಿದ ಸಂಗತಿಗಳು ಇವರಿಗೆ ಮುಖ್ಯವಾಗುವುದೇ ಇಲ್ಲ. ಇದಕ್ಕೆ ವಿರುದ್ಧವಾಗಿ ಇಲ್ಲಿಯ ಕಮ್ಯುನಿಸ್ಟರಿಗೆ ಆರ್ಥಿಕ ಸಂಗತಿಗಳು ಹಾಗೂ ಭೂಮಿ ಮತ್ತು ಭೂಮಿ ವಾರುಸುದಾರಿಕೆಯ ಸಂಗತಿಗಳು ಬಹಳ ಮುಖ್ಯ. ಜೊತೆಗೆ ಸಾಂಸ್ಕೃತಿಕ ಸಂಗತಿಗಳ ಬಗೆಗೆ ಕಾಳಜಿ ಹಾಗೂ ಆಸಕ್ತಿ ಕಡಿಮೆ. ಆದರೆ ಅತ್ಯಂತ ಅಪರೂಪ ಎನ್ನುವಂತೆ ಸಮಾಜವಾದಿ ಚಿಂತಕ ಹಾಗೂ ಸಮಾಜವಾದಿ ರಾಜಕಾರಣಿ ಆದ ಗೋಪಾಲಗೌಡರು ಭಾರತದ ರಾಜಕೀಯ ಚರಿತ್ರೆಯಲ್ಲಿ ಭೂಹೀನ ರೈತಾಪಿಗಳು ನಡೆಸಿದ ಕ್ರಾಂತಿಕಾರಿ ರಾಜಕೀಯ ಹೋರಾಟವನ್ನು ಕುರಿತು ಸಹಮತದ ವಿಚಾರಗಳನ್ನು ತಮ್ಮ ಮೇಲಿನ ಮಾತುಗಳಲ್ಲಿ ಮಂಡಿಸಿದ್ದಾರೆ. ಅವರ ಮೇಲಿನ ಮಾತುಗಳಿಗೆ ಸಂಬಂಧಿಸಿದ ವಿಶ್ಲೇಷಣೆಯು ಭಾರತದಲ್ಲಿ ಭೂ ರಹಿತ ರೈತಾಪಿಗಳು ನಡೆಸಿದ ವೀರ ತೆಲಂಗಾಣ ರಾಜಕೀಯ ಹೋರಾಟದ ತಿರುಳಿನ ವಿವರಣೆಯನ್ನು ಬೇಡುತ್ತದೆ.

ಹೈದ್ರಾಬಾದ್ ಪ್ರಾಂತ್ಯದಲ್ಲಿ ೧೯೪೬ರಿಂದ ೧೯೫೨ರ ವರೆಗೆ ತೆಲಂಗಾಣ ಹೋರಾಟವನ್ನು ಆ ಭಾಗದ ರೈತಾಪಿಗಳು ನಡೆಸಿದರು. ಇದು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಅವಧಿಯ ಅತಿ ಮುಖ್ಯವಾದ ಹೋರಾಟ. ಹೈದ್ರಾಬಾದ್ ನಿಜಾಮ ತನ್ನ ಇಡೀ ಪ್ರಾಂತ್ಯದಲ್ಲಿ ಆಡಳಿತ, ಶಿಕ್ಷಣ, ಪತ್ರಿಕಾ ಮಾಧ್ಯಮ ಮುಂತಾದವುಗಳ ಮೇಲೆ ಉರ್ದು ಭಾಷೆಯನ್ನು ಜನರ ಆಯ್ಕೆಗೆ ವಿರುದ್ಧವಾಗಿ ಹೇರಿದ್ದ. ಈ ಹೇರಿಕೆಯ ವಿರುದ್ಧ ಮೊದಲ ಬಾರಿಗೆ ಆಂಧ್ರ ಮಹಾ ಸಭಾವನ್ನು ಸಂಘಟಿಸಿದ ಪ್ರಾಥಮಿಕ ಶಾಲಾ ಶಿಕ್ಷಕರು ಉರ್ದು ಭಾಷಾ ಹೇರಿಕೆಯ ವಿರೋಧಿ ಚಳವಳಿಯನ್ನು ಪ್ರಾರಂಭಿಸಿದರು. ತದನಂತರದಲ್ಲಿ ಇದು ಆರ್ಥಿಕ ಹೋರಾಟವಾಗಿ ಮಾರ್ಪಾಟು ಹೊಂದಿತು. ಏಕೆಂದರೆ ಹೈದ್ರಾಬಾದ್ ನಿಜಾಮನ ಸಂಸ್ಥಾನದಲ್ಲಿ ಭೂರಹಿತ ಕೃಷಿ ಕಾರ್ಮಿಕರನ್ನು

ಬಿಟ್ಟಿ ಚಾಕರಿಗೆ ಬಳಸಿಕೊಳ್ಳಲಾಗುತ್ತಿತ್ತು. ಇವರ ಹೆಣ್ಣು ಮಕ್ಕಳನ್ನು ಭೂ ಮಾಲೀಕರು ತಮ್ಮ ಲೈಂಗಿಕ ದಾಹವನ್ನು ತೀರಿಸಿಕೊಳ್ಳಲು ಬಳಸಿ ಬಿಸಾಡುತ್ತಿದ್ದರು. ಈ ಪ್ರಾಂತ್ಯದಲ್ಲಿ ರೈತಾಪಿಗಳಿಗೆ ಮತ್ತು ದುಡಿಯುವ ಜನರಿಗೆ ಉಸಿರಾಡುವುದನ್ನು ಬಿಟ್ಟರೆ ಇನ್ನಾವುದಕ್ಕೂ ಸಾಮಾನ್ಯ ಸ್ವಾತಂತ್ರ್ಯ ಹಾಗೂ ಆಯ್ಕೆ ಇರಲಿಲ್ಲ. ಹೀಗೆ ಹೈದ್ರಾಬಾದ್ ನಿಜಾಮನ ಸುತ್ತುವರೆದ ದಾಳಿ ಮತ್ತು ದಬ್ಬಾಳಿಕೆಯಿಂದ ಸಾಮಾನ್ಯ ಜನ ನಿತ್ಯ ಸತ್ತು ಬದುಕಿದ್ದರು. ಇಂತಹ ಜನರಿಗೆ ಆಂಧ್ರ ಮಹಾಸಭಾವು ಶುರು ಮಾಡಿದ ಉರ್ದು ಹೇರಿಕೆಯ ವಿರೋಧಿ ಹೋರಾಟವು ಒಂದು ಸಾಮಾನ್ಯ ಬೆಳಕಾಗಿ ಕಂಡಿತು. ಅತ್ಯಂತ ಸಹಜವಾಗಿ ಆ ಹೋರಾಟಕ್ಕೆ ಆಕರ್ಷಿತರಾಗಿ ಆ ಹೋರಾಟದ ಭಾಗವಾದರು. ಆರಂಭಿಕ ಹಂತದಲ್ಲಿ ಭಾಷಾ ಹೇರಿಕೆಯ ವಿರೋಧಿ ಹೋರಾಟವಾಗಿದ್ದ ಇದು ಮುಂದೆ ಭೂಹೀನರು ಭೂಮಿ ಪಡೆಯುವ ಭೂ ಹೋರಾಟವಾಗಿ ಮಾರ್ಪಟ್ಟಿತು. ಸಾವಿರಾರು ರೈತಾಪಿಗಳು ಹೋರಾಟದಲ್ಲಿ ತೊಡಗಿದರು. ಹೈದ್ರಾಬಾದ್ ನಿಜಾಮನ ಸೈನ್ಯ ಈ ಹೋರಾಟಗಾರ ರೈತಾಪಿಗಳನ್ನು ಎಲ್ಲೆಂದರಲ್ಲಿ ಗುಂಡಿಟ್ಟು ಕೊಲ್ಲಲು ಶುರುಮಾಡಿದರು. ಆದರೆ ರೈತಾಪಿಗಳು ಎದೆಗುಂದಲಿಲ್ಲ. ಇವರು ಕೂಡ ನಿಜಾಮನ ಸೈನ್ಯದ ವಿರುದ್ಧ ಹೋರಾಟಕ್ಕೆ ಇಳಿದರು. ಈ ಸಮಯದಲ್ಲಿ ರೈತಾಪಿಗಳು ನಡೆಸುತ್ತಿದ್ದ ಈ ಹೋರಾಟವನ್ನು ಆಗಿನ ಅವಿಭಜಿತ ಭಾರತೀಯ ಕಮ್ಯುನಿಸ್ಟ್ ಪಕ್ಷ ತನ್ನ ನಾಯಕತ್ವದಲ್ಲಿ ಮುನ್ನಡೆಸಿತು. ಹೋರಾಟಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ರೈತರೇ ತಯಾರಿಸಿಕೊಂಡರು. ಮುಂದೆ ಇದು ತೆಲಂಗಾಣ ರೈತಾಪಿಗಳ ಸಶಸ್ತ್ರ ಹೋರಾಟವಾಗಿ ಮಾರ್ಪಾಟಾಯಿತು. ರೈತಾಪಿಗಳ ನಡುವೆ ಎಷ್ಟೇ ಸಾವು ನೋವುಗಳು ಸಂಭವಿಸಿದರು ಕೂಡ ರೈತಾಪಿಗಳು ಶಸ್ತ್ರಗಳನ್ನು ತ್ಯಜಿಸಲಿಲ್ಲ. ರಾಜಿ ರಹಿತವಾದ ಹಾಗೂ ವಿರೋಚಿತವಾದ ಹೋರಾಟವನ್ನು ಮುನ್ನಡೆಸಿದರು. ಇದರಿಂದ ಒಂದು ಕಡೆ ಹೈದ್ರಾಬಾದ್ ನಿಜಾಮನ ಆಡಳಿತ ಮತ್ತು ಸೈನ್ಯ ಮತ್ತೊಂದು ಕಡೆ ಆಧುನಿಕ ಭಾರತದ ಆಡಳಿತ ಮತ್ತು ಸೈನ್ಯ ಇವುಗಳಿಗೆ ನುಂಗಲಾರದ ತುತ್ತಾಯಿತು. ಸಶಸ್ತ್ರ ಹೋರಾಟ ನಡೆಸುತ್ತಿದ್ದ ರೈತಾಪಿಗಳನ್ನು ನಿಜಾಮನ ಸೈನ್ಯ ಮತ್ತು ಆಧುನಿಕ ಭಾರತದ ಕೇಂದ್ರ ಸರ್ಕಾರದ ಸೈನ್ಯಗಳು ಹತ್ತಿಕ್ಕಲು ಯತ್ನಿಸಿದವು. ಒಂದು ಹಂತದಲ್ಲಿ ಇದು ಮೇಲುಗೈಯನ್ನೂ ಸಾಧಿಸಿತು. ಆದರೆ ತೆಲಂಗಾಣ ಹೋರಾಟ ಯಾರು ಭೂಮಿಯನ್ನು ಉಳುಮೆ ಮಾಡುತ್ತಿದ್ದಾರೋ ಅವರೇ ಅದರ ವಾರಸುದಾರರು ಎಂಬ ರಾಜಕೀಯ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ರೈತಾಪಿಗಳಲ್ಲಿ ಗಟ್ಟಿಯಾಗಿ ಮೂಡಿಸಿತ್ತು. ಇದನ್ನು ಬದಲಾಯಿಸುವುದು ಸೈನ್ಯದ ಶಸ್ತ್ರಗಳಿಂದ ಸಾಧ್ಯವಾಗಲಿಲ್ಲ. ಇದಕ್ಕೆ ಬೇರೆಯೇ ಆದ ನಯವಾದ ದಾರಿಯೊಂದು ಬೇಕಾಗಿತ್ತು. ಇದರ ಫಲವಾಗಿ ವಿನೋಬಾ ಭಾವೆ ಅವರು ಚಳವಳಿಯೊಂದನ್ನು ಶುರುಮಾಡಿದರು. ಅದರ ಸಾಮಾನ್ಯ ಸ್ವರೂಪವೇನೆಂದರೆ ಶ್ರೀಮಂತ ಭೂ ಮಾಲೀಕರು ತಮ್ಮಲ್ಲಿರುವ ಹೆಚ್ಚುವರಿ ಭೂಮಿಯನ್ನು ಸರ್ಕಾರಕ್ಕೆ ಕೊಡಬೇಕು. ಈ ಭೂಮಿಯನ್ನು ಸರ್ಕಾರವು ಭೂರಹಿತರ ಅಗತ್ಯವನ್ನು ಪರಿಗಣಿಸಿ ಅವರಿಗೆ ಆದ್ಯತಾನುಸಾರ ಹಂಚುತ್ತದೆ. ಹಾಗಾಗಿ ಉಳುವವನೇ ಭೂಮಿಗೆ ಒಡೆಯ ಎಂಬ ರೈತಾಪಿಗಳು ತಮ್ಮ ಶಸ್ತ್ರಸಹಿತವಾದ ಕ್ರಾಂತಿಕಾರಿ ಹೋರಾಟವನ್ನು ಹಿಂದಕ್ಕೆ ಪಡೆಯಬೇಕು. ಇದು

ವಿನೋಬಾ ಭಾವೆ ಅವರು ನಡೆಸಿದ ಹೋರಾಟದ ಸಾಮಾನ್ಯ ಸ್ವರೂಪವಾಗಿತ್ತು. ಈ ಹೋರಾಟದ ಒಳಗೆ ರೈತಾಪಿಗಳು ತಮ್ಮ ಬೆವರು ಮತ್ತು ಕಣ್ಣೀರನ್ನು ಸುರಿಸಿ ಉಳುಮೆ ಮಾಡುವ ಭೂಮಿಗೆ ಅವರೇ ವಾರಸುದಾರರು ಆಗಬಾರದು ಎಂಬ ರಾಜಕೀಯ ಕುತಂತ್ರ ಅಡಗಿತ್ತು. ಇದನ್ನು ಗೋಪಾಲಗೌಡರು ಅತ್ಯಂತ ಸೂಕ್ಷ್ಮವಾಗಿ ಮತ್ತು ಅಷ್ಟೇ ಗಂಭೀರವಾಗಿ ತಮ್ಮ ಮೇಲಿನ ಮಾತುಗಳಲ್ಲಿ ಉಲ್ಲೇಖಿಸಿ ಸದನದಲ್ಲಿ ಮಾತನಾಡಿದ್ದಾರೆ.

ತೆಲಂಗಾಣದ ರೈತಾಪಿಗಳ ಹೋರಾಟದ ಸಂದರ್ಭದಲ್ಲಿ ತೀವ್ರವಾಗಬಹುದಾಗಿದ್ದ ಹಿಂಸಾಚಾರವನ್ನು ತಡೆಗಟ್ಟಲು ಸರ್ಕಾರ ಭೂದಾನ ಯಜ್ಞ ಚಳವಳಿಯ ತಂತ್ರಗಾರಿಕೆಯನ್ನು ಅನುಸರಿಸಿರಬಹುದೇ? ಎಂಬ ಅನುಮಾನ ಬರುತ್ತದೆ. ಕಾರಣ ಈ ಹೋರಾಟ ನಡೆಯುತ್ತಿದ್ದಾಗ ಅಹಿಂಸೆಯ ಪ್ರತಿಪಾದಕರಾಗಿದ್ದ ಗಾಂಧೀಜಿ ಇನ್ನೂ ಬದುಕಿದ್ದರು.

೫.೧೨. ಕ್ರಾಂತಿಯ ಕುರಿತು

ಕನ್ನಡದಲ್ಲಿ ಕ್ರಾಂತಿ ಎಂಬ ಪದವು ಆಕರ್ಷಕವೂ, ಪರಿಣಾಮಕಾರಿಯೂ, ಶಕ್ತಿಶಾಲಿಯಾಗಿಯೂ ಆಗಿ ಪರಿಚಿತವಾಗಿದೆ. ಕ್ರಾಂತಿ ಎಂದ ತಕ್ಷಣ ಅಲ್ಲಿ ಕೊಲೆ, ಸಾವು ನಡೆಯಬೇಕು, ರಕ್ತ ಹರಿಯಬೇಕು ಎಂಬ ಭಾವನೆ ಬರುವಂತಹ ವಾತಾವರಣವನ್ನು ನಿರ್ಮಾಣ ಮಾಡಲಾಗಿದೆ. ಇದು ಕ್ರಾಂತಿಯನ್ನು ಕುರಿತ ತಪ್ಪು ಕಲ್ಪನೆ. ಈ ಬಗೆಗೆ ಶಾಂತವೇರಿ ಗೋಪಾಲಗೌಡರಿಗೆ ಸರಿಯಾದ ಸ್ಪಷ್ಟತೆ ಇತ್ತು. ಅದನ್ನು ಅವರ ಈ ಮುಂದಿನ ಮಾತುಗಳಲ್ಲಿ ಗಮನಿಸಬಹುದು. ಮೊದಲು ಮಾನಸಿಕ ಕ್ರಾಂತಿ ಆಗಿ ಪರಸ್ಪರ ವಿಮರ್ಶೆಯಿಂದ ಬದಲಾವಣೆ ಆಗಬೇಕು. ಆ ರೀತಿಯಾದರೆ ಶಾಂತಿಯುತವಾದ ,ಕ್ರಾಂತಿಯಾಗುತ್ತದೆ. 'ಕ್ರಾಂತಿ' ಎಂಬ ಪದ ಇರತಕ್ಕ ಕಡೆ ರಕ್ತ ಹರಿಬೇಕೆಂದು ಒಂದು ಶಾಶ್ವತ ನಿಯಮವಲ್ಲ. ಕ್ರಾಂತಿಯನ್ನು ನಾವು ದಿನನಿತ್ಯದಲ್ಲಿ ಕಾಣುತ್ತೇವೆ. ಹೀಗೆಯೇ ಪ್ರತಿ ದೇಶವೂ, ಯುಗವೂ, ಪ್ರತಿ ವ್ಯವಸ್ಥೆಯೂ ಕಾಲಕಾಲಕ್ಕೆ ಪರಿವರ್ತನೆಗೆ ಒಳಗಾಗಿದೆ. ಅಂದಮೇಲೆ ಇಂತಹ ಪರಿವರ್ತನೆಯನ್ನು ಇಂತಹ ವಿಕಾಸವನ್ನು ನಾವು ತಡೆಗಟ್ಟುವುದಕ್ಕೆ ಸಮರ್ಥರಾಗುವುದಿಲ್ಲ. ಒಂದು ವೇಳೆ ತಡೆಗಟ್ಟಲು ಹೋದರೆ ಅವರು ಆ ಕಾರ್ಯದಲ್ಲಿ ವಿಫಲರಾಗುತ್ತಾರೆ. ಇಂತಹ ಒಂದು ಯುಗದ ಬದಲಾವಣೆಯನ್ನು ಯಾರೂ ತಡೆಗಟ್ಟಲು ಶಕ್ಯವಿಲ್ಲ. ಹಾಗೆ ತಡೆಯುವುದಕ್ಕೆ ಹೋದರೆ ಘರ್ಷಣೆ ಹೆಚ್ಚಾಗಿ ಉತ್ಕ್ರಾಂತಿ ಆಗಬಹುದು, ರಕ್ತ ಕ್ರಾಂತಿ ಆಗಬಹುದು.[೧೭]

ಕ್ರಾಂತಿ ಎಂಬುದು ಕೇವಲ ಭೌತಿಕ ನೆಲೆಯದ್ದು ಮಾತ್ರವೇ ಅಲ್ಲ; ಅದು ಅಭೌತಿಕ ಎಂದು ಕರೆಯುವ ಮಾನಸಿಕ ಸ್ಥಿತಿಗೂ ಸಂಬಂಧಪಟ್ಟದ್ದು. ಮೊದಲು ಮಾನಸಿಕ ನೆಲೆಯಲ್ಲಿ ನಡೆಯುವ ಪರಿವರ್ತನೆಯು ನಂತರ ಭೌತಿಕ ನೆಲೆಯ ಪರಿವರ್ತನೆಗೆ ಮೂಲ ಕಾರಣವಾಗುತ್ತದೆ. ಇದನ್ನು ಶಾಂತವೇರಿ ಗೋಪಾಲಗೌಡರು ಬಹಳ ಚೆನ್ನಾಗಿ ಅರಿತಿದ್ದರು. ಆದರೆ ನಮ್ಮಲ್ಲಿ ಕ್ರಾಂತಿ ಎಂಬುದನ್ನು ಅದರ ಅಪಾರ್ಥದ ನೆಲೆಯಲ್ಲಿ ಬಳಸಲಾಗುತ್ತಿದೆ.

ಸಮಾಜದ ಸಮಗ್ರ ಆರೋಗ್ಯದ ದೃಷ್ಟಿಯಿಂದ ಸಕಾರಣಗಳಿಗಾಗಿ ಆಗಬೇಕಾದ ಸಾಮಾಜಿಕ ಬದಲಾವಣೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಬೆಂಬಲಿಸಿ ಸ್ವೀಕಾರ ಮಾಡದೇ ಹೋದರೆ ಅದರ ಮುಂದುವರಿದ ಭಾಗವಾಗಿ ಹಿಂಸಾಚಾರಕ್ಕೆ (ರಕ್ತಕ್ರಾಂತಿ) ಎಡೆ ಮಾಡಿಕೊಡಬಹುದು ಎಂಬ ವಿಚಾರವನ್ನು ಆಗ ಕೇವಲ ೩೦ ವರ್ಷದ ಯುವಕರಾಗಿದ್ದ ಗೋಪಾಲಗೌಡರು ತಿಳಿಸುವುದನ್ನು ನೋಡಿದರೆ ಅವರ ಚಿಂತನೆ ಮತ್ತು ಅಧ್ಯಯನಶೀಲತೆ ಎಷ್ಟು ಗಾಢವಾಗಿತ್ತು ಎಂಬುದನ್ನು ತೋರಿಸುತ್ತದೆ.

೫.೧೩. ಭೂ ಸುಧಾರಣೆ: ಇನಾಂ ರದ್ಧತಿ ಕಾಯಿದೆ

ನಮ್ಮ ಸಂಸ್ಥಾನದಲ್ಲಿ ಈ ಭೂಸುಧಾರಣ ಸಮಸ್ಯೆ ಈಗ ಎರಡನೆಯಾವರ್ತಿ ಸಭೆಯ ಮುಂದೆ ಬಂದಿರುತ್ತದೆ. ಆದರೆ ನಾವೀಗ ಆ ಟೆನೆನ್ಸಿ ಆಕ್ಟಿನ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಸಾಕಾಗಿದೆ. ಇತರ ಪ್ರಾಂತ್ಯಗಳಾದ ಮದ್ರಾಸ್, ಬೊಂಬಾಯಿ ಇತ್ಯಾದಿ ಭಾಗಗಳಲ್ಲಿ ಜಾರಿಯಲ್ಲಿತಕ್ಕ ಕಾನೂನನ್ನು ಹೋಲಿಸಿ ಈ ಕಾನೂನನ್ನು ನೋಡಿದರೆ ಇದು ಒಂದು ಕಾನೂನೇ ಅಲ್ಲ. ಇಂತಹ ಒಂದು ಕಾನೂನನ್ನು ಮಾಡುವುದರಿಂದ ರೈತರ ಯಾವ ಹಿತರಕ್ಷಣೆಯನ್ನೂ ಮಾಡುವುದಕ್ಕಾಗುವುದಿಲ್ಲ. ಹೀಗೆ ಇಂಥ ಮಸೂದೆಯನ್ನು ತರುವುದರ ಅರ್ಥವೇನೆಂದರೆ ತಮಗೆ ರೈತರ ಹಿತರಕ್ಷಣೆ ಮಾಡಬೇಕೆಂಬ ಬಗ್ಗೆ ಒಂದು ಅಭಿಲಾಷೆ ಅಷ್ಟಾಗಿ ಇರುವುದಿಲ್ಲವೆಂಬುದು. ಈ ಮಸೂದೆ ಎರಡನೆಯ ವರ್ತಿಗೆ ಈಗ ಸಭೆಯ ಮುಂದೆ ಬಂದಿದೆ.

ಹಿಂದೆಯೇ ಒಮ್ಮೆ ಬಂದಿತ್ತು. ದುರದೃಷ್ಟವಶಾತ್ ಆಗಿದ್ದ ಅಸೆಂಬ್ಲಿಗೆ ತನ್ನ ಕಾಲ ಮೀರಿ ಹೋಗಿ ರದ್ದಾಗಿ ಹೋದುದರಿಂದ ಆ ಬಿಲ್ಲೂ ಕೂಡ ಹಾಗೆಯೇ ರದ್ದಾಗಿ ಹೋಯಿತೆಂದು ಹೇಳಲಾಯಿತು. ನನಗನ್ನಿಸುತ್ತಿದೆ, ನಮ್ಮ ದೇಶದಲ್ಲಿ ಇನ್ನೂ ರೈತರ ರಾಜ್ಯ ಉದಯವಾಗಿಲ್ಲ ಎಂದು. ಒಂದು ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಿಮ್ಮಿಂದ ಅಂತಹ ರೈತರ ರಾಜ್ಯ ನಮ್ಮ ದೇಶದಲ್ಲಿ ಉದಯವಾಗುವ ಸಂಭವ ಕೂಡ ಇಲ್ಲ ಎಂದು. ಇಂತಹ ಒಂದು ಕಾನೂನನ್ನು ಬಹಳ ಹಿಂದೆಯೇ ತರಬೇಕಾಗಿತ್ತು. ಹಳೆಯ ಪದ್ಧತಿಗಳು ನಾಮಾವಶೇಷವಾಗಿ ಹೋದ ಹೊರತು ಅಂತಹ ಒಂದು ಹೊಸ ರಾಜ್ಯ ಆಗುವುದಕ್ಕೆ ಈ ದಿವಸ ಅವಕಾಶವಿರುವುದಿಲ್ಲವೆಂದೂ ನಾನು ತಿಳಿಸಬೇಕಾಗಿದೆ. ಹಿಂದಿನ ಹಳೆಯ ಸಮಾಜಪದ್ಧತಿಗಳು ಅಳಿಯಬೇಕು; ಹೊಸ ಸಮಾಜ ನಿರ್ಮಾಣವಾಗಬೇಕು ಎಂದು ವಾದಿಸತಕ್ಕ ತಾವು ಈ ದಿವಸ ಮಂಡಿಸಿರತಕ್ಕ ಈ ಮಸೂದೆಯಲ್ಲಿ ಹೇಳಿರುವುದನ್ನು ನೋಡಿದರೆ 'ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ' ಎನ್ನುವ ಹಾಗಿದೆ. ಈ ರೀತಿಯ ಮನೋಭಾವ ಇರುವುದರಿಂದ ತಾವು ಯಾವ ಒಂದು ಪ್ರಗತಿದಾಯಕ ಮಾರ್ಗದಲ್ಲೂ ಹೋಗುವುದಕ್ಕೆ ಸಾಧ್ಯವಿಲ್ಲ. ಇಂತಹ ಒಂದು ಮನೋಭಾವವನ್ನಿಟ್ಟುಕೊಂಡು ತಾವು ಒಂದು ಹೊಸ ರಾಜ್ಯವನ್ನಾಗಲಿ ಅಥವಾ ಒಂದು ಹೊಸ

ಸಮಾಜವನ್ನಾಗಲಿ ಕಟ್ಟುವುದಕ್ಕೆ ಖಂಡಿತ ಸಾಧ್ಯವಿಲ್ಲ. ಈ ಕಾಂಗ್ರೆಸ್ ಸರ್ಕಾರದ ಮನೋಭಾವವೆಲ್ಲಾ ಆ ಪಟ್ಟಭದ್ರತೆಯ ಕಡೆಗೆ ಇರುವಷ್ಟು ಇತ್ತ ಕಡೆಗಿಲ್ಲ. ಆ ಪಟ್ಟಭದ್ರತೆಗೆ ಮೂಲಾಧಾರವಾದ ಒಂದು ಪಾರ್ಟಿಯ ಕೈಗೊಂಬೆಗಳಾಗಿ ತಾವು ಇದ್ದೀರಿ. ತಾವು ತಮ್ಮ ಹೆಚ್ಚಿನ ಒಂದು ಗಮನವನ್ನೆಲ್ಲಾ ಆ ಪಟ್ಟಭದ್ರತೆಯ ಪಾರ್ಟಿಗಳ ಹಿತಚಿಂತನೆಗೆ ಇಡಬೇಕಾಗಿರುವುದರಿಂದಲೂ ಮತ್ತು ಆ ಪಟ್ಟಭದ್ರತೆಯ ಪಕ್ಷದಲ್ಲೇ ಅನೇಕರಿಗೆ ಇಂತಹ ಜೋಡಿ ಮತ್ತು ಇನಾಂತಿಗಳು ಹೆಚ್ಚಾಗಿರುವುದರಿಂದಲೂ ಈ ಕಾನೂನಿಗೆ ಅಷ್ಟೊಂದು ಹೆಚ್ಚಿನ ಬೆಂಬಲವಿದೆಯೆಂದು ಹೇಳುವುದಕ್ಕಾಗುವುದಿಲ್ಲ.

ಯಾರು ಈ ಇನಾಂತಿ ರದ್ದಾಗುವುದರಿಂದ ಜೀವನಕ್ಕೆ ಆಸ್ಪದವಿಲ್ಲದೆ ಭಿಕಾರಿಗಳಾಗತಕ್ಕ ಸ್ಥಿತಿಯಲ್ಲಿರುತ್ತಾರೋ ಅವರು ಬೇರೆ ಯಾವುದಾದರೂ ಉದ್ಯೋಗಗಳನ್ನು ಅವಲಂಬಿಸುವ ತನಕ ಕೆಲವು ರಿಯಾಯ್ತಿ ಪರಿಹಾರಗಳನ್ನು ಅವರಿಗೆ ಕೊಡಬಹುದು. ಅಷ್ಟು ಬಿಟ್ಟರೆ, ಬೇರೆ ವಿಧದಲ್ಲಿ ಚೆನ್ನಾಗಿರುವವರಿಗೂ ಪರಿಹಾರ ಕೊಡುವುದು ಸಾರ್ವತ್ರಿಕವಾಗಿ ಪರಿಹಾರ ಕೊಡುವುದು ನ್ಯಾಯವಲ್ಲ. ಇದರಲ್ಲಿ ಸೂಚಿರುವ ಹಾಗೆ ''Maximum rate of Compensation in 20 times the basic income'' ಎಂಬಂತೆ ಕೊಟ್ಟರೆ, ಸುಮಾರು ೧೮೦ ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆಂದು ಹೇಳಬಹುದು. ಈ ರೀತಿಯಾಗಿ ಒಂದು ಪರಿಹಾರವನ್ನು ಕೊಡುವುದಕ್ಕೆ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಇವೊತ್ತು ಉತ್ತಮವಾಗಿಲ್ಲ. ಅಷ್ಟು ಕೊಡಬೇಕು ಅಂದರೆ ಅವರ ವಿಶಿಷ್ಟ ಹಕ್ಕನ್ನೂ ಕಿತ್ತುಕೊಳ್ಳುವ ಹಾಗೆ ಕಾಗದದಲ್ಲೋ ಅಥವಾ ತಾಮ್ರದಲ್ಲೋ ಒಂದು ಶಾಸನವನ್ನು ಬರೆದು ಅವರಿಗೆ ಕೊಡಬಹುದು. ಈ ರೀತಿಯಾಗಿ ದೇಶಕ್ಕೋಸ್ಕರ ತ್ಯಾಗ ಮಾಡಿರವಂಥವರು, ದೇಶದ ಹಿತದೃಷ್ಟಿಯಿಂದ, ತಮ್ಮ ಅಣ್ಣ ತಮ್ಮಂದಿರ ಹಿತದೃಷ್ಟಿಯಿಂದ ಮಾಡಿದ ಈ ತ್ಯಾಗದ ಕುರುಹಾಗಿ ಇಂತಹ ಒಂದು ಸರ್ಟಿಫಿಕೇಟನ್ನು ಅಥವಾ ಟೈಟಲನ್ನು ಕೊಟ್ಟು ಈ ಪದ್ಧತಿಯನ್ನು ಇಲ್ಲಿಗೆ ಮುಕ್ತಾಯ ಮಾಡಬಹುದು.

ಇನ್ನು ಈ ಬಿಲ್ಲಿನಲ್ಲಿ ಮಾಡಿರುವ ಭೂಸುಧಾರಣೆ, ಭೂಸುಧಾರಣೆಯ ಬಗ್ಗೆ ಮೊದಲನೆಯದಾಗಿ ಇವೊತ್ತಿನ ರೈತರು ಯಾರು ಭೂಮಿಯ ಮೇಲೆ ಉಳುತ್ತಿದ್ದಾರೋ ಅವರು ಯಾವ ಪದ್ಧತಿಯ ಅಡಿಯಲ್ಲೇ ಬರಲಿ, ಸರ್ಕಾರದ ಅಡಿಯಲ್ಲೇ ಇರಲಿ, ಜೋಡಿ ಇನಾಂತಿಗಳ ಜೋಡಿದಾರರ ಅಥವಾ ಇನಾಂತಿದಾರರ ಅಡಿಯಲ್ಲೇ ಇರಲಿ ನೇರವಾಗಿ ಜಮೀನು ಹಿಡಿದು ಬೇಸಾಯ ಮಾಡುವ ರೈತರ ಸಂಖ್ಯೆಯೆಷ್ಟು ಮತ್ತು ಅವರು ಎಷ್ಟು ದಿವಸಗಳಿಂದ ರೈತಾಪಿ ಉದ್ಯೋಗ ಮಾಡಿಕೊಂಡು ಬಂದಿದ್ದಾರೆ ಎಂಬ ರೈತಾಪಿ ಸರ್ವೆ ಮಾಡಬೇಕು. ಅವರು ಯಾರು ಯಾರಿಗೆ ಗೇಣಿ, ಗುತ್ತಿಗೆ ಅಥವಾ ಇನ್ನಾವ ಬೇರೆ ಸಾಗುವಳಿ ಮಾಡುತ್ತಾರೆ, ಸರ್ಕಾರಕ್ಕೆ ಕೊಡುತ್ತಾರೆಯೇ, ಖಾಸಗಿ ಜನರಿಗೆ ಕೊಡುತ್ತಾರೆಯೇ ಅಥವಾ ಧರ್ಮಸಂಸ್ಥೆಗಳಿಗೆ ಕೊಡುತ್ತಿದ್ದಾರೆಯೇ, ಅವರ ಜೀವನ ಪರಿಸ್ಥಿತಿ ಹೇಗಿದೆ ಈ ರೀತಿಯಾಗಿ ಎಲ್ಲ ರೈತರ ಒಂದು ಸರ್ವೆ ಮಾಡಿಕೊಂಡರೆ ನಾವು ಮೊದಲನೆಯ ಹೆಜ್ಜೆ ಇಟ್ಟಂತಾಗುತ್ತದೆ. ಆನಂತರ ಅವರ ದೃಷ್ಟಿಯಿಂದಲೇ ಹೆಚ್ಚಾಗಿ ಎಲ್ಲ

ಸಮಸ್ಯೆಗಳನ್ನೂ ನೋಡಬೇಕು. ಆ ಸಂದರ್ಭದಲ್ಲಿ ಇನಾಂದಾರರ ಅಥವಾ ಜೋಡಿದಾರರ ಅಥವಾ ಜಮೀನುದಾರರ ದೃಷ್ಟಿ ಮರೆಯಬೇಕಾಗಿಲ್ಲ. ಆದರೆ ಮೊದಲು ರೈತರನ್ನು ತೆಗೆದುಕೊಂಡು ಪ್ರಾರಂಭ ಮಾಡಬೇಕಾಗುತ್ತದೆ. ಆಗ ಅವರ ಅನಾನುಕೂಲತೆಗಳನ್ನು ಪರಿಹಾರ ಮಾಡಿಕೊಂಡು, ಅನಂತರ ಒಬ್ಬನಿಗೆ ಎಷ್ಟು ಜಮೀನಿರಬೇಕು. ಪರಮಾವಧಿಯೆಂದರೆ ಎಷ್ಟಿರಬೇಕು ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಅದಾದ ಮೇಲೆ ಭೂಮಿಯನ್ನು ಅದರಂತೆ ಪುನಃ ಹಂಚಿಕೆ ಮಾಡಬೇಕು. ಈ ಪ್ರಕಾರ ಒಂದು ನೀತಿಯನ್ನು ಅನುಸರಿಸಬೇಕು. ಅದಿಲ್ಲದೆ ಇವೊತ್ತಿನ ಹಾಗೆ ದರಖಾಸ್ತು ಕೇಳುವುದು, ಅದನ್ನು ವಿಲೇವಾರಿ ಮಾಡುವುದು, ತಕರಾರು ಕೇಳುವುದು, ವಾಪಸು ತೆಗೆದುಕೊಳ್ಳುವುದು, ಕೊನೆಗೆ ಎರಡು ಭಾಗ ಮಾಡಿ ಜಮೀನಿರುವವರಿಗೆ ಮತ್ತೆ ಜಮೀನು ಕೊಡುವುದು. ಈ ರೀತಿಯಾದ ಒಂದು ಕಾನೂನು ಮುಖಾಂತರ ಸಮಸ್ಯೆ ಪರಿಹಾರವಾಗುತ್ತದೆಂದು ತಿಳಿದುಕೊಂಡಿದ್ದೀರಾ? ಹಾಗೆ ಯೋಚನೆ ಮಾಡಿದ್ದರೆ, ಕೊನೆಗೆ ಆ ಸಮಸ್ಯೆಯಲ್ಲಿ ತಿಳಿದುಕೊಂಡಿದ್ದೀರಾ? ಹಾಗೆ ಯೋಚನೆ ಮಾಡಿದ್ದರೆ, ಕೊನೆಗೆ ಆ ಸಮಸ್ಯೆಯಲ್ಲಿ ನಾವೇ ಪರಿಹಾರವಾಗಿ ಹೋಗುತ್ತೇವೆ!

ಈ ರೀತಿಯಾಗಿ ನಾನು ಇದನ್ನು ಭೂಸುಧಾರಣೆಗೆ ಒಂದು ಹೆಜ್ಜೆ ಎಂದು ಕರೆದರು ಕೂಡ ರೈತರ ಹಿತದೃಷ್ಟಿಯಲ್ಲಿ ಒಂದು ಹೆಜ್ಜೆಯಲ್ಲ. ಆದರೂ ಸರ್ಕಾರ ಈ ಒಂದು ಹೆಜ್ಜೆಯಿಡುವುದಕ್ಕೂ ವಿಮುಖವಾಗಿ ಅಧೈರ್ಯ ಪರಿಸ್ಥಿತಿಯಿಂದ ಮನಸ್ಸು ಮಾಡಿಲ್ಲ! ಇಂತಹ ಮಂದಗಾಮಿ ಅಥವಾ ತಿರೋಗಾಮಿ ನೀತಿಯಿಂದ ಯಾವೊತ್ತೂ ರೈತರ ಸಮಸ್ಯೆ ಪರಿಹಾರವಾಗುವುದಿಲ್ಲ. ನಿಜವಾಗಿ ಯಾವುದನ್ನು ಮೊದಲು ತಾವು ಅಪ್ಪಣೆ ಕೊಡಿಸಿದಿರಿ– 'ನಾವು ಮಧ್ಯವರ್ತಿಗಳನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಒಪ್ಪಿಗೆ ಕೊಟ್ಟಿದ್ದೇವೆ' ಎಂದು, ಅದನ್ನು ಕಾರ್ಯತಃ ಮಾಡಬೇಕಾದರೆ, ಒಂದು Comperhensive Bill ತರಬೇಕು. ಆದ್ದರಿಂದ ಭೂಸುಧಾರಣೆಗೆ ಸರಿಯಾದ ಬಿಲ್ಲನ್ನು ತರಬೇಕೆಂದು ಹೇಳಿ ನಾನು ಈ ಇನಾಂ ರದ್ದಿಯಾತಿ ಬಿಲ್ಲನ್ನು ವಿರೋಧಿಸುತ್ತೇನೆ[೧೮] ಎಂದು ಪ್ರತಿಪಾದಿಸಿದ್ದಾರೆ.

ಜರೂರಾಗಿ ಅಗತ್ಯವಿರುವ ಭೂಸುಧಾರಣೆಯನ್ನು 'ಉಳುವವನೆ ಭೂಮಿ ಒಡೆಯ' ಎಂಬುದನ್ನು ಜಾರಿಗೊಳಿಸುವ ಮುನ್ನ ಭೂಸುಧಾರಣೆಯ ಸ್ವರೂಪವನ್ನು ಅರ್ಥಮಾಡಿಕೊಂಡು ಅದನ್ನು ಕಾರ್ಯಗತಗೊಳಿಸುವ ಪೂರ್ವದಲ್ಲಿ ಸರ್ಕಾರ ಅಗತ್ಯವಾಗಿ ಸಂಗ್ರಹಿಸಬೇಕಾಗಿರುವ ಮೂಲಭೂತ ಮಾಹಿತಿಗಳ ಬಗ್ಗೆ ಸದನದಲ್ಲಿ ಗೌಡರ ಮಾತು ಬೆಳಕು ಚೆಲ್ಲುವುದನ್ನು ನೋಡಿದರೆ ಸಮಸ್ಯೆಯ ಆಮೂಲಾಗ್ರ ಪರಿಹಾರದ ಬಗ್ಗೆ ಇರುವ ತಿಳಿವಳಿಕೆ, ಅವರ ಬದ್ಧತೆಯನ್ನು ಮತ್ತು ವೈಜ್ಞಾನಿಕ ಮನೋಭಾವನೆಯನ್ನು ತೋರಿಸುತ್ತದೆ.

೫.೧೪. ಗ್ರಾಮ ನೌಕರರು

ಹಳೆಯ ಮೈಸೂರು ಭಾಗದಲ್ಲಿ ಈಗಿನ ಕಂದಾಯ ಇಲಾಖೆಯ ನಿರ್ವಹಣೆಯ ಒಂದು ಭಾಗವನ್ನು ಪಟೇಲರು, ಶಾನುಭೋಗರು ನಿರ್ವಹಿಸುತ್ತಿದ್ದರು. ಶಾನುಭೋಗರಿಗೆ ಹಳ್ಳಿಗಳಲ್ಲಿ ಕೆಲವು

ಅಧಿಕಾರಗಳನ್ನು ಈ ಸಲುವಾಗಿ ಕೊಡಲಾಗಿತ್ತು. ಇಲ್ಲವೆ ಅವರು ತಮ್ಮ ಅಧಿಕಾರವನ್ನು ತಾವೇ ಚಲಾಯಿಸುತ್ತಿದ್ದರು. ಇದು ವಂಶಪಾರಂಪರ್ಯವಾಗಿ ನಡೆದುಬಂದಿತ್ತು. ಈ ಪದ್ಧತಿಯ ವಿರುದ್ಧ ಹೈಕೋರ್ಟ್‌ನಲ್ಲಿ ಕೇಸನ್ನು ದಾಖಲಿಸಲಾಯಿತು. ಹೈಕೋರ್ಟ್ ಶಾನುಭೋಗರ ಅನೌಪಚಾರಿಕವಾದ ಅಧಿಕಾರವನ್ನು ಮೊಟಕುಗೊಳಿಸುವ ತೀರ್ಪನ್ನು ಕೊಟ್ಟಿತು. ಇದರ ಕಾರಣ ಮತ್ತು ಪರಿಣಾಮವನ್ನು ಕುರಿತು ಸದನದಲ್ಲಿ ಗೋಪಾಲಗೌಡರು ಈ ಮುಂದಿನಂತೆ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

ಹಳೆ ಮೈಸೂರಿನಲ್ಲಿ ಈ ಪಟೇಲ್ ಶ್ಯಾನುಭೋಗರುಗಳು ತಮ್ಮ ವಂಶಪಾರಂಪರ್ಯವಾಗಿ ಬಂದ ಹಕ್ಕನ್ನು ರದ್ದುಪಡಿಸಿದ್ದಾರೆಂದು ಹೈಕೋರ್ಟಿನಲ್ಲಿ ಒಂದು ಕೇಸನ್ನು ಹಾಕಿದ್ದರು. ಆದರೆ ಈಗ ಆ ಹಕ್ಕನ್ನು ರದ್ದುಪಡಿಸಿದ್ದರಿಂದ ತಪ್ಪೇನೂ ಆಗಿಲ್ಲವೆಂದು ಹೈಕೋರ್ಟಿನಲ್ಲಿ ನಿರ್ಣಯವಾಗಿದೆ. ಇದರಿಂದ ಹಳೇ ಮೈಸೂರಿನಲ್ಲಿ ಈ ಗ್ರಾಮಾಧಿಕಾರಿಗಳನ್ನು ನೇಮಿಸತಕ್ಕ ವಿಚಾರದಲ್ಲಿ ಸ್ವಲ್ಪ ನಿಧಾನವಾಗಿದೆ. ಇನ್ನು ಬೊಂಬಾಯಿ ಕರ್ನಾಟಕ ಪ್ರಾಂತ್ಯದಲ್ಲಿ ಅನೇಕರನ್ನು ಈಗಾಗಲೇ ನೇಮಕಮಾಡಲಾಗಿದೆ. ಇಲ್ಲಿ ಇನ್ನೂ ನೇಮಕ ಮಾಡದೆ ಇರುವುದರಿಂದ ಕೆಲವಾರು ತೊಂದರೆಗಳು ಉಂಟಾಗಲು ಅವಕಾಶವಾಗಿದೆ. ಹೀಗೆ ನಮ್ಮ ಹಳೇ ಮೈಸೂರಲ್ಲಿ ಈ ಗ್ರಾಮ ನೌಕರರುಗಳ ನೇಮಕದ ಬಗ್ಗೆ ತಡವಾದ್ದರಿಂದ ಈ ಕೆಲಸಗಳು ಏನಾಗಿವೆ, ರೆಕಾರ್ಡುಗಳು ಏನಾಗಿವೆ ಎಂಬ ಒಂದು ಸ್ವಚ್ಛ ಚಿತ್ರ ನಮ್ಮ ಮುಂದೆ ಇಲ್ಲ. ನಮ್ಮ ಭೂಸುಧಾರಣೆಯ ಕಾನೂನು ಕಾರಣಾಂತರಗಳಿಂದ ಜಾರಿಗೆ ಬರುವುದು ನಿಧಾನವಾದ್ದರಿಂದ ಇದು ಜಾರಿಗೆ ಬರುವುದರೊಳಗೆ ಅನೇಕ ಜನ ಗೇಣಿದಾರರಿಗೆ ತುಂಬಾ ಅನ್ಯಾಯವಾಗುವುದೆಂದು ತಿಳಿದು ಬಂದಿದೆ. ಈ ಪಹಣಿ ಲೆಕ್ಕಗಳನ್ನು ಬರೆಯುವಾಗ ಅದರಲ್ಲಿ ಅನೇಕ ಲೋಪದೋಷಗಳಾಗುತ್ತವೆ. ಅವುಗಳಲ್ಲಿ ದೊಡ್ಡದಾದ ಲೋಪದೋಷವೆಂದರೆ ಅನೇಕ ವರ್ಷಗಳಿಂದ ಜಮೀನು ಮಾಡುತ್ತಿರುವ ಗೇಣಿದಾರನ ಹೆಸರನ್ನು ಕೈ ಬಿಟ್ಟು, ಯಾವತ್ತೂ ಕೃಷಿ ಮಾಡದಂತಹ ಜನರ ಹೆಸರನ್ನು ಈ ಪಹಣೀ ಲೆಕ್ಕದಲ್ಲಿ ಸೇರಿಸುತ್ತಿದ್ದಾರೆ. ಇದನ್ನು ಈ ದಿವಸ ತಾವುಗಳೆಲ್ಲರೂ ನೋಡಬಹುದು. ಇದರಿಂದ ಅನೇಕ ಗೇಣಿದಾರರಿಗೆ ಬಹಳ ತೊಂದರೆಯಾಗುತ್ತದೆ.[೧೯]

ವಂಶಪಾರಂಪರ್ಯವಾಗಿ ಶಾನುಭೋಗರು ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದ ಕಾರಣಕ್ಕಾಗಿ ಗೇಣಿಯ ಭೂಮಿಯಲ್ಲಿ ತಾವು ಉಳುಮೆ ಮಾಡದಿದ್ದರೂ ಉಳುಮೆ ಮಾಡುತ್ತಿದ್ದವರ ಹೆಸರುಗಳ ಜಾಗದಲ್ಲಿ ತಮ್ಮ ಹೆಸರುಗಳನ್ನು ನಮೂದಿಸುತ್ತಿದ್ದರು. ಇದರಿಂದ ನಿಜ ಗೇಣಿದಾರರ ಜಾಗದಲ್ಲಿ ಈ ಹುಸಿ ಗೇಣಿದಾರರು ಸೃಷ್ಟಿಯಾಗುತ್ತಿದ್ದರು. ಕೃಷಿ ಭೂಮಿಯ ಮಾಲಿಕತ್ವಕ್ಕೆ ಸಂಬಂಧಿಸಿದ ಬಹಳ ಮುಖ್ಯವಾದ ಸಮಸ್ಯೆಯನ್ನು ಗೋಪಾಲಗೌಡರು ತಮ್ಮ ಮೇಲಿನ ಮಾತುಗಳಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

೫.೧೫. ರಾಷ್ಟ್ರೀಯ ರಜಾ ದಿನಗಳು

ಪ್ರತಿ ವರ್ಷದ ಅಕ್ಟೋಬರ್ ೨ರಂದು ಗಾಂಧೀ ಜಯಂತಿ. ಅಂದು ರಾಷ್ಟ್ರೀಯ ರಜಾ ದಿನ.

ಆದರ ಉದ್ದೇಶ ಗಾಂಧೀಜಿ ಅವರಿಗೆ ಗೌರವ ಕೊಡಬೇಕು ಎಂಬುದು ಒಂದಾದರೆ, ಅವರ ತತ್ವಗಳನ್ನು ಆಚರಣೆಗೆ ತರಬೇಕೆಂಬುದು ಇನ್ನೊಂದು. ಈ ಉದ್ದೇಶದ ಬಗೆಗೆ ಗೋಪಾಲಗೌಡರಿಗೆ ಬಲವಾದ ಗುಮಾನಿಗಳಿವೆ. ಅವರ ಮುಂದಿನ ಮಾತುಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಗಾಂಧಿ ಜಯಂತಿ ವಿಷಯವಾಗಿ ಅವರು ಪ್ರಸ್ತಾಪ ಮಾಡಿದ್ದಾರೆ. ಕಾರ್ಮಿಕ ಸಂಘಗಳ ಬಗ್ಗೆ ಅವರು ಮೇ ದಿನಾಚರಣೆಯ ವಿಷಯದಲ್ಲಿ ತಾಳಿದ ವರ್ತನೆಯ ಬಗ್ಗೆ ಆಗಲೇ ಹೇಳಿದೆ. ಈ ಯುಗದಲ್ಲಿ ಮಹಾತ್ಮಾ ಗಾಂಧೀಜಿಯವರು ಯುಗ ಪ್ರವರ್ತಕರು. ಆದರೆ ಆಡಳಿತ ನಡೆಸುತ್ತಿರುವ ಮಹಾತ್ಮಾ ಗಾಂಧೀಜಿಯವರ ಅಧಿಕೃತ ಅನುಯಾಯಿಗಳು ಎಂದು ಹೇಳತಕ್ಕವರಿಗೆ ಅವರ ವಿಷಯದಲ್ಲಿ ಅಷ್ಟು ಗೌರವ, ನಂಬಿಕೆ ಬಂದಂತೆ ಕಾಣಲಿಲ್ಲ. ಕೇವಲ ಒಂದು ದಿವಸ ರಾಜಘಾಟ್‌ನಲ್ಲಿ ಹೋಗಿ ಆಷಾಡಭೂತಿತನದಿಂದ ಫೋಟೊ ತೆಗೆಸಬೇಕೆನ್ನುವುದಕ್ಕೆ, ರಾಮಧ್ಯಾನ್ ಹಾಡಿ ವರ್ಷಕ್ಕೊಮ್ಮೆ ಚರಕಾ ನೂಲು ತೆಗೆಯತಕ್ಕ ಈ ನಕಲಿ ಗಾಂಧಿವಾದಿಗಳನ್ನು ನೋಡುವುದಕ್ಕೆ ಬಹಳ ದುಃಖಪಡುತ್ತೇನೆ. ಹೇಗೆ ಕಾರ್ಮಿಕ ಸಂಘಗಳು, ಅಂತಹ ಬೋರ್ಡ್ ಹಾಕಿಕೊಂಡಿರತಕ್ಕ ಸಂಘಗಳು ಇವತ್ತು ತಮ್ಮ ನೀತಿ ನಿಲುವನ್ನು ದಿವಾಳಿ ಮಾಡಿಕೊಂಡು ಈ ದೇಶದಲ್ಲಿ ಬದುಕಿಕೊಂಡಿವೆಯೋ ಹಾಗೆಯೇ ಗಾಂಧೀಜಿಯವರ ಹೆಸರಿನಲ್ಲಿ ಬದುಕಿರತಕ್ಕ ಈ ಸರ್ಕಾರಗಳು ಅವರ ಎಲ್ಲಾ ನೆನಪನ್ನು ಕೂಡ ಕಳೆದುಕೊಂಡು ಉಳಿದುಕೊಂಡಿರತಕ್ಕ, ಗಾಂಧಿ ಹೆಸರಿನಲ್ಲಿ ಬದುಕಿಕೊಂಡಿರತಕ್ಕ ಸಂಸ್ಥೆಗಳು ಎಂದು ಹೇಳಬಹುದು. ಮಹಾತ್ಮಾ ಗಾಂಧೀಜಿಯವರ ಜನ್ಮ ದಿನ ಮತ್ತು ಮರಣದ ದಿನ ಈ ಎರಡನ್ನೂ ಕಡ್ಡಾಯವಾಗಿ ಈ ದೇಶದ ಜನ, ಅವರಿಗೆ ಏನಾದರೂ ಕೃತಜ್ಞತೆ ಇರುವುದಾದರೆ ಎಳ್ಳಷ್ಟಾದರೂ ಪ್ರಾಮಾಣಿಕತೆ, ನಂಬಿಕೆ ಇರುವುದಾದರೆ ಈ ದೇಶ ಬದುಕಿ ಬಾಳುವ ತನಕ ಆ ಮಹಾವ್ಯಕ್ತಿಯ ನೆನಪನ್ನು ತಂದುಕೊಳ್ಳುವುದಕ್ಕೆ ಮತ್ತು ಅವರ ತತ್ವಗಳನ್ನು ಈ ದೇಶದ ಜನ ಆಚರಣೆಯಲ್ಲಿ ತರುವುದನ್ನು ಪ್ರಯತ್ನ ಮಾಡಬೇಕು[೨೦] ಎಂದು ವಿಶ್ಲೇಷಿಸಿದ್ದಾರೆ.

ಗಾಂಧೀಜಿ ಮುಂತಾದವರ ಹುಟ್ಟುಹಬ್ಬಗಳ ಆಚರಣೆ ಮಾಡಲಾಗುತ್ತಿದೆ. ಇತ್ತೀಚೆಗಂತೂ ಇದು ಒಂದು ಯಾಂತ್ರಿಕ ಕಾರ್ಯಕ್ರಮವಾಗಿ ಮಾರ್ಪಟ್ಟಿದೆ. ಸರ್ಕಾರಕ್ಕೆ ವರದಿಕೊಡುವ ಭಾಗವಾಗಿ ಹೋಗಿದೆ. ಸಮಾಜವಾದಿ ಚಿಂತಕರಾದ ಗೋಪಾಲಗೌಡರು ಎಷ್ಟೋ ವರ್ಷಗಳ ಹಿಂದೆಯೆ ಇದನ್ನು ಊಹಿಸಿದ್ದರು. ಗಾಂಧಿ ಮುಂತಾದವರ ಜಯಂತಿಯ ದಿನದಂದು ಸರ್ಕಾರಿ ರಜಾ ಘೋಷಣೆ ಮಾಡಲಾಗುತ್ತದೆ. ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಜಯಂತಿ ಮಾಡುವವರ ಭಾವ ಚಿತ್ರಗಳಿಗೆ ಹೂಮಾಲೆ ಹಾಕಲಾಗುತ್ತದೆ. ಆದರೆ ಅವರ ಆದರ್ಶ ಹಾಗೂ ತತ್ವಗಳನ್ನು ಜಾರಿಗೆ ತರಲಾಗದೆ ಅವುಗಳನ್ನು ಮೂಲೆಗುಂಪು ಮಾಡಲಾಗುತ್ತದೆ. ಹಾಗಾದಾಗ ಜಯಂತಿ ಎಂಬುದು ಕೇವಲ ರಜಾ ಘೋಷಣೆಯ ಫಲವಾಗುತ್ತದೆ ಅಷ್ಟೆ. ಅಲ್ಲದೆ ಸರ್ಕಾರಕ್ಕೆ ಇನ್ನಷ್ಟು ಆರ್ಥಿಕ ಹೊರೆಯಾಗುತ್ತದೆ. ಆದುದರಿಂದ ಇಂತಹ ಜಯಂತಿಗಳ ಅರ್ಥವಾದರು ಏನು ಎಂಬುದನ್ನು ಕುರಿತು ಗೌಡರು ಸದನದಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

೫.೧೬ ಪಠ್ಯ ಪುಸ್ತಕಗಳು

ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು ಎಂಬ ಮಾತಿದೆ. ಅಂದರೆ ಇಂದಿನ ಮಕ್ಕಳನ್ನು ನಾಳಿನ ದೇಶದ ಪ್ರಜೆಗಳನ್ನಾಗಿ ರೂಪಿಸುವುದು ಶಿಕ್ಷಣ ವ್ಯವಸ್ಥೆ. ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಕಡೆ ಶಿಕ್ಷಕರು, ಮತ್ತೊಂದು ಕಡೆ ಕಲಿಯುವ ಮಕ್ಕಳು ಮಗದೊಂದು ಕಡೆ ಕಲಿಕೆಯ ಪಠ್ಯ ಸಾಮಗ್ರಿ ಇವು ಮೂರು ಮುಖ್ಯ ಅಂಗಗಳು. ಈ ಮೂರರಲ್ಲಿ ಯಾವುದಾದರೊಂದು ಊನವಾದರೆ ಇಡೀ ಶಿಕ್ಷಣ ವ್ಯವಸ್ಥೆಯ ಉದ್ದೇಶ ಮತ್ತು ಗುರಿ ಈಡೇರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದನದಲ್ಲಿ ಗೋಪಾಲಗೌಡರು ಪಠ್ಯಪುಸ್ತಕಗಳನ್ನು ಕುರಿತು ಈ ಮುಂದಿನಂತೆ ಮಾತನಾಡಿದ್ದಾರೆ. ಪಠ್ಯ ಪುಸ್ತಕಗಳ ವಿಷಯದಲ್ಲಿ ಬಹುಶಃ ದೇಶದ ಎಲ್ಲಾ ಜವಾಬ್ದಾರಿ ಜನರೂ ಕೆಲವು ವೇಳೆ ವಿವೇಚನೆಗೆ ತುತ್ತಾಗಿದ್ದಾರೆಂದು ಅನಿಸುತ್ತದೆ. ಈ ಪಠ್ಯ ಪುಸ್ತಕಗಳ ವಿಷಯದಲ್ಲಿ ವ್ಯಾಪಾರ ಸಂಸ್ಥೆಗಳು ಇವೆ. ಪ್ರಕಟಣೆ ಸಂಸ್ಥೆಗಳು ಇವೆ. ಆ ಪುಸ್ತಕಗಳಿಗೆ ಹೆಸರು ಇಡುವವರು ಬೇರೆ ಇದ್ದಾರೆ. ಅವುಗಳಿಗೆ ಬೆಲೆಯನ್ನು ಗೊತ್ತು ಮಾಡುವವರು ಇದ್ದಾರೆ. ನಮ್ಮ ಕಾಲದಲ್ಲಿ ಇವುಗಳೆಲ್ಲಾ ಇರಲಿಲ್ಲ. ಯಾರ ಮನೆಯಲ್ಲೋ ಓದುವ ಪುಸ್ತಕಗಳನ್ನು ತಂದು ನಾವು ಓದಿಕೊಳ್ಳುತ್ತಿದ್ದೆವು. ಒಂದು ಊರಿನಲ್ಲಿ ಒಬ್ಬ ವಿದ್ಯಾವಂತ ಇದ್ದರೆ ಮಕ್ಕಳಿಗೆ ಪುಸ್ತಕಗಳು ದೊರೆಯುತ್ತಿದ್ದವು. ಹಾಗೆ ಇರುವುದು ಒಳ್ಳೆಯದು.

ಹತ್ತು ಪುಸ್ತಕಗಳನ್ನು ನೋಡಿ ಒಂದು ಪುಸ್ತಕವನ್ನು ಈ ಸಭೆಯಲ್ಲಿ ನಾನು ಬರೆದು ಕೊಡದಿದ್ದರೆ ನಾನು ಗೋಪಾಲಗೌಡನಲ್ಲ. ೧೦ ಪುಸ್ತಕಗಳನ್ನು ತಂದು ಅದರಲ್ಲಿರುವ ಪಾಠಗಳನ್ನು ಹಿಂದು ಮುಂದು ಮಾಡಿ ಒಂದು ಪುಸ್ತಕ ಮಾಡಬಹುದು. ಅದು ಸರಿಯಾದ ಕ್ರಮವೇ? ಮೂಲ ವಿಷಯ ಸಂಶೋಧನೆ ಮಾಡಿ ಯಾರೂ ಪುಸ್ತಕ ಬರೆದಿಲ್ಲ. ಪುಟ, ಹೆಸರು, ಅನುಕ್ರಮ ಚಿತ್ರ ಬದಲಾಯಿಸಿ ಪುಸ್ತಕ ಮಾಡಿ, ಪ್ರಕಾಶನದವರ ಹತ್ತಿರ ಮತ್ತು ಮಾರಾಟಗಾರರ ಬಳಿ ಕೈವಾಡ ನಡೆಸುತ್ತಾರೆ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇದೆಲ್ಲ ನಡೆಯುತ್ತಿಲ್ಲ. ಅಕ್ರಮವು ನಡೆಯುತ್ತಿದೆ ಎಂದು ವ್ಯಸನದಿಂದ ಹೇಳಬೇಕಾಗಿದೆ.ಇದನ್ನು ಕಡಿಮೆ ಮಾಡಬೇಕು, ಪಠ್ಯಪುಸ್ತಕಗಳ ರಾಷ್ಟ್ರೀಕರಣ ಮಾಡುವುದಾಗಿ ಹೇಳುತ್ತೀರಿ. ಜನಜೀವನ ಉತ್ತಮಗೊಳಿಸುವುದಕ್ಕೆ ದೋಷರಹಿತ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಜಗತ್ತಿಗೆ, ಸಮಾಜಕ್ಕೆ ದೊಡ್ಡ ಅಪಾಯ. ತಮಗೆ ಬೇಕಾದ ಕೆಲವರಿಂದ ಪುಸ್ತಕಗಳನ್ನು ಬರೆಸಿ, ಅವರಿಗೆ ಉಪಕಾರ ಮಾಡಿ ಹತ್ತಾರು ಸಾವಿರ ಮಕ್ಕಳಿಗೆ ಹಂಚಿ ಓದಬೇಕೆಂದು ಹೇಳಿದರೆ, ಅವು ಸರಿಯಾಗಿಲ್ಲದಿದ್ದರೆ ಚಳುವಳಿಯನ್ನು ಅದರ ವಿರುದ್ಧ ಮಾಡಬೇಕಾಗುತ್ತದೆ. ಆದುದರಿಂದ ವಿದ್ಯಾ ಸಚಿವರು ಇದನ್ನು ಚೆನ್ನಾಗಿ ಗಮನಿಸಬೇಕು. ಈಗಿನ ರೀತಿ ಸರ್ಕಾರಕ್ಕೆ ಗೌರವ ತರುವಂತಿಲ್ಲ. ಪುನಃ ಪಠ್ಯಪುಸ್ತಕಗಳ ವಿಚಾರದಲ್ಲಿ ಈಗ ನಡೆದಿರುವ ಪ್ರಕರಣಗಳು ನಡೆಯದಂತೆ ತಡೆಮಾಡಬೇಕು. ನುರಿತ ಪಂಡಿತರು, ಜ್ಞಾನಿಗಳು ಅನೇಕರಿದ್ದಾರೆ. ಸಮಾಜ ಜೀವನದಲ್ಲಿ ಆಸಕ್ತಿಯಿರುವವರಿದ್ದಾರೆ. ಮಕ್ಕಳ ವಿಚಾರದಲ್ಲಿ ಮಮತೆಯುಳ್ಳವರಿದ್ದಾರೆ. ಅವರಿಗೆ ಸಂಬಳ, ಭತ್ಯೆ ಕೊಡಬೇಕಾಗಿಲ್ಲ. ಅವರನ್ನು ಕೇಳಿ ಮರ್ಯಾದೆಯಿಂದ ಅವರೊಂದಿಗೆ ಮಾತನಾಡಿ ವ್ಯವಸ್ಥೆ ಮಾಡಿದರೆ ಎಷ್ಟೋ ಒಳ್ಳೆಯದು.

ಪಠ್ಯಪುಸ್ತಕಗಳ ಪರಿಷ್ಕರಣ ಮಾಡುವಾಗ ಒಂದು ಗೊತ್ತಾದ ಕಾರ್ಯಕ್ರಮವನ್ನು ಅನುಸರಿಸಿಕೊಂಡು ಬರಬೇಕು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಇವತ್ತು ಇರತಕ್ಕಂತಹ ಲೋಪದೋಷಗಳನ್ನು, ಕುಂದುಕೊರತೆಗಳನ್ನು ತಾವು ಹೋಗಲಾಡಿಸಿ, ತಮ್ಮ ಆಡಳಿತವನ್ನು ಸರಿಪಡಿಸಿಕೊಳ್ಳಿ ಎಂದು ಹೇಳಿ, ಉಪಾಧ್ಯಾಯರ ಸಂಬಳ ಸಾರಿಗೆಗೆ ವಿಷಯದಲ್ಲಿ ಅವರ ಸೌಲಭ್ಯಗಳನ್ನು ಹೆಚ್ಚಿಸುವ ವಿಷಯದಲ್ಲಿ ಸರ್ಕಾರ ತೀವ್ರ ಗಮನಕೊಡಬೇಕು. ಅವರ ಕೊರತೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು.[೨೧] ಈ ರೀತಿಯಲ್ಲಿ ವಿದ್ಯಾಭ್ಯಾಸ ಕ್ರಮ ಉತ್ತಮಗೊಳ್ಳಬೇಕಾದರೆ ಪಠ್ಯಪುಸ್ತಕ ರಚನೆ ಎನ್ನುವಂಥದ್ದು ಕೂಡ ಬಹಳ ಮುಖ್ಯ ಎಂದು ಅವರು ಭಾವಿಸಿದ್ದರು.

ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಯು ಬ್ರಿಟಿಷರ ಬಳುವಳಿ. ಇತ್ತೀಚೆಗಂತೂ ಶಿಕ್ಷಣವು ವ್ಯಾಪಾರೀಕರಣವಾಗಿದೆ. ಮುಂದುವರೆದು ಅದು ಉದ್ಯಮವಾಗಿದೆ. ಪರಿಸ್ಥಿತಿ ಹೀಗಿರುವಾಗ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ಮಾರ್ಪಡಿಸುವ ವಿಷಯ ಮತ್ತು ಅವುಗಳನ್ನು ರಚಿಸುವ ಕೆಲಸ, ಮುದ್ರಿಸುವ ಕೆಲಸ ಮತ್ತು ಮಾರಾಟ ಮಾಡುವ ಕೆಲಸಗಳೆಲ್ಲವೂ ವಾಣಿಜ್ಯೀಕರಣಗೊಂಡಿವೆ. ಗೋಪಾಲಗೌಡರಿಗೆ ಇದರ ಬಗೆಗೆ ಅತ್ಯಂತ ಸೂಕ್ಷ್ಮವಾದ ಆತಂಕವಿದೆ. ಜೊತೆಗೆ ಪಠ್ಯಪುಸ್ತಕಗಳನ್ನು ಒಂದು ತಲೆಮಾರು ರೂಪಿಸಬೇಕಾದ ರೀತಿಯಲ್ಲಿ ಪರಿಷ್ಕರಿಸಬೇಕಾದ ಅಗತ್ಯದ ಬಗೆಗೆ ಕಾಳಜಿ ಇದೆ. ಗೋಪಾಲಗೌಡರ ಆಲೋಚನೆ ಇಲ್ಲಿ ವಿರಮಿಸುವುದಿಲ್ಲ. ತರಗತಿಗಳಲ್ಲಿ ಪಾಠ ಮಾಡುವ ಅಧ್ಯಾಪಕರ ಆರ್ಥಿಕ ಪರಿಸ್ಥಿತಿಯ ಬಗೆಗೂ ಗೌಡರಿಗೆ ವಿಶೇಷ ಕಾಳಜಿ ಇದೆ. ಹಾಗಾಗಿಯೇ ಅವರು ಉಪಾಧ್ಯಾಯರ ಸಂಬಳ ಹಾಗೂ ಮತ್ತಿತರೆ ಸೌಲಭ್ಯಗಳನ್ನು ಸರ್ಕಾರವು ಹೆಚ್ಚಿಸುವ ಅಗತ್ಯವಿದೆ ಎಂಬ ಮಾತನ್ನು ಒತ್ತಿ ಹೇಳಿದ್ದಾರೆ.

೫.೧೭. ಮಲೆನಾಡು ಪ್ರದೇಶ

ಕರ್ನಾಟಕವು ಬೇರೆ ಬೇರೆ, ಭಿನ್ನ ಭಿನ್ನ ಭೌಗೋಳಿಕ ಪ್ರದೇಶಗಳಿಂದ ಕೂಡಿದೆ. ಒಂದೊಂದು ಭೌಗೋಳಿಕ ಪ್ರದೇಶಕ್ಕೂ ಅದರದ್ದೇ ಆದಂತಹ ವೈಶಿಷ್ಟ್ಯವಿದೆ. ಕರಾವಳಿ, ಮಲೆನಾಡು, ಅರೆಮಲೆನಾಡು ಮತ್ತು ಬಯಲುಸೀಮೆ. ಈ ಭೌಗೋಳಿಕ ಪ್ರದೇಶಗಳ ಬೆಳೆ, ಆಹಾರ, ಉತ್ಪಾದನೆ, ಉಡುಗೆ-ತೊಡಿಗೆ, ಆಚಾರ-ವಿಚಾರ ಇವೆಲ್ಲವೂ ಬೇರೆ ಬೇರೆ. ಇದಕ್ಕೆ ಅನುಗುಣವಾಗಿ ಮಳೆ, ಬೆಳೆ, ಬಿಸಿಲು, ರೋಗ-ರುಜಿನಗಳೂ ಕೂಡ ಬೇರೆ ಬೇರೆ. ಪರಿಸ್ಥಿತಿ ಹೀಗಿರುವಾಗ ಅಭಿವೃದ್ಧಿಯ ಪ್ರಶ್ನೆ ಬಂದಾಗ, ಈ ವೈವಿಧ್ಯಗಳನ್ನು ಪ್ರತ್ಯೇಕವಾಗಿಯೇ ಪರಿಗಣಿಸಬೇಕಾಗುತ್ತದೆ. ಯಾಕೆಂದರೆ ಭೌಗೋಳಿಕವಾಗಿ ಒಂದು ಪ್ರದೇಶದ ಬೇಕು-ಬೇಡಗಳಿಗೂ ಮತ್ತು ಮತ್ತೊಂದು ಪ್ರದೇಶದ ಬೇಕು-ಬೇಡಗಳಿಗೂ ಅಜಗಜಾಂತರ ಇರುತ್ತದೆ. ಇದನ್ನು ಪರಿಗಣಿಸದೇ ಹೋದರೆ ಯಾವುದೋ ಸಮಸ್ಯೆಗೆ ಇನ್ಯಾವುದೋ ಪರಿಹಾರವನ್ನು ಸೂಚಿಸಿದಂತೆ ಆಗುತ್ತದೆ. ಇದು ತಪ್ಪು. ಆಯಾ ಪ್ರದೇಶದ ಅಭಿವೃದ್ಧಿಯು ಅಲ್ಲಿ ಸ್ಥಳೀಯ ಅಗತ್ಯಗಳನ್ನು ಹಾಗೂ ಬೇಡಿಕೆಗಳನ್ನು ಮಾತ್ರ ಅವಲಂಬಿಸಿರುತ್ತವೆ. ಹಳ್ಳಗಳೊ, ನದಿಗಳೋ

ನೆಲೆಸಿರುವ ಗಡಿ ಪ್ರದೇಶವೇ ಆಧಾರವಾಗಿದ್ದರೂ ರಾಜ್ಯಗಳ ರಚನೆಯಾದ ಮೇಲೆ ಒಂದೇ ಭಾಷೆಯನ್ನಾಡುವ ಜನರು ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಹಂಚಿ ಹೋದರು. ಉದಾಹರಣೆಗೆ ಕನ್ನಡ ಭಾಷೆಯನ್ನು ಆಡುವ ಜನರು ಆಂಧ್ರಪ್ರದೇಶದ ವ್ಯಾಪ್ತಿಗೂ, ಕಾಸರಗೋಡಿನ ವ್ಯಾಪ್ತಿಗೂ, ಮಹರಾಷ್ಟ್ರದ ವ್ಯಾಪ್ತಿಗೂ ಸೇರಿಹೋದರು. ಭಾಷಾವಾರು ರಾಜ್ಯಗಳ ರಚನೆಯಾದ ಮೇಲೆ ಭಾಷಿಕರ ಗಡಿ ಪ್ರದೇಶವನ್ನು ಆಧರಿಸಿದ ರಾಜ್ಯಗಳ ವಿಸ್ತರಣೆಯ ರಚನೆ ಸಂಪೂರ್ಣವಾಗಲಿಲ್ಲ. ಇದರ ಬಗೆಗೆ ಚರ್ಚೆ ಇಂದೂ ಕೂಡ ಮುಂದುವರೆದಿದೆ. ಗೋಪಾಲಗೌಡರು ಇಂತಹದ್ದೇ ವಿಷಯವನ್ನು ಕುರಿತು ಸದನದಲ್ಲಿ ಆಡಿರುವ ಮಾತುಗಳು ಮುಂದಿನಂತಿವೆ. ಮುಖ್ಯವಾಗಿ ಸರಕಾರದವರು ಮನಗಾಣಬೇಕಾದ ಅಂಶವೇನೆಂದರೆ, ಕನ್ನಡ ರಾಜ್ಯ ಉದಯವಾಗಿ ಎಂಟು ವರ್ಷಗಳಾದರೂ ಸಂಬಂಧಪಟ್ಟ ಗಡಿ ಪ್ರದೇಶದಲ್ಲಿರುವ ಕನ್ನಡ ಭಾಗಗಳನ್ನು ಇನ್ನೂ ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳದೆ ಇರುವ ವಿಷಯದಲ್ಲಿ ಕಾಲವಿಳಂಬವಾಗುವುದರಿಂದ ಆಯಾಯ ಭಾಗದಲ್ಲಿನ ಕನ್ನಡ ಜನರಿಗೆ ಹೆಚ್ಚಿನ ಹಾನಿ ಉಂಟಾಗಿದೆ. ಮಹಾತ್ಮಾ ಗಾಂಧೀಜಿಯವರು ನಾಗಪುರ ಕಾಂಗ್ರೆಸ್ಸಿನಲ್ಲಿ ಕಾಂಗ್ರೆಸ್ ಸಂಸ್ಥೆಯ ಸಂಘಟನೆಗಾಗಿ ಇದನ್ನು ಉಪಯೋಗಿಸುವುದಕ್ಕೆ ಭಾಷಾವಾರು ಪ್ರಾಂತ ರಚನೆಯನ್ನು ಭಾಷೆಯ ಆಧಾರದ ಮೇಲೆ ಮಾಡಬೇಕೆಂದು ತೀರ್ಮಾನಕ್ಕೆ ಬಂದರು. ಇದಕ್ಕೆ ಕಾರಣವೇನೆಂದರೆ ಈ ದೇಶದ ವಿವಿಧ ರಾಜ್ಯಗಳ ರಚನೆಗೆ ಹಿಂದೆ ಯಾವುದೇ ಒಂದು ವೈಚಾರಿಕ ಹಿನ್ನೆಲೆ ಇರಲಿಲ್ಲ. ಆದುದರಿಂದ ಸ್ವಾತಂತ್ರ್ಯದ ಬೇಡಿಕೆಯ ಜೊತೆಗೆ ರಾಜ್ಯಗಳ ಪುನರ್ನಿರ್ಮಾಣವು ಭಾಷೆಯ ಆಧಾರದ ಮೇಲೆ ನಡೆಯಬೇಕು ಎಂಬ ವಿಷಯ ಸಾಮಾನ್ಯವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಎಲ್ಲರ ಅಭಿಪ್ರಾಯವಾಗಿತ್ತು. ಎಲ್ಲ ರಾಜ್ಯಗಳ ಎಲ್ಲ ಭಾಷೆಯ ಜನರ ಅಭಿಪ್ರಾಯ ಈ ರೀತಿಯಾಗಿತ್ತು ಎಂಬುದನ್ನು ಕಂಡುಕೊಳ್ಳಬಾರದು. ಈ ಸಂದರ್ಭದಲ್ಲಿ ಇದಕ್ಕಾಗಿ ಅನೇಕ ಸಮಿತಿಗಳು ಏರ್ಪಾಡಾಗಿದ್ದವು. ಇದಲ್ಲದೆ ಯಾವ ಯಾವ ರಾಜ್ಯವನ್ನು ಹೇಗೆ ನಿರ್ಮಾಣ ಮಾಡಬೇಕು ಎಂಬುದಕ್ಕೆ ಕೂಡ ಸಾಕಷ್ಟು ಆಂದೋಲನ, ಚರ್ಚೆ ನಡೆದು ಇವತ್ತಿನ ದಿವಸ ರಾಷ್ಟ್ರದಲ್ಲಿ ಈ ಭಾಷೆಯ ಆಧಾರದ ಮೇಲೆ ರಾಜ್ಯ ನಿರ್ಮಾಣ ಮಾಡತಕ್ಕಂತಹ ಕೆಲಸ ಬಹುಮಟ್ಟಿಗೆ ಪೂರ್ತಿಯಾಗಿದೆ. ರಾಜ್ಯ ಪುನರ್ವಿಂಗಡಣೆ ಆಯೋಗದವರು ಕೊಟ್ಟ ವರದಿಯ ಆಧಾರದ ಮೇಲೆ ಕೇಂದ್ರ ಸರಕಾರದವರು ಕಾನೂನು ರಚನೆ ಮಾಡಿದರು ಮತ್ತು ಆ ವಿಧೇಯಕದ ಆಧಾರದ ಮೇಲೆ ಕರ್ನಾಟಕದ ರಾಜ್ಯ ಆಯಿತು. ಆದರೆ ಈ ಕನ್ನಡ ರಾಜ್ಯ ಏರ್ಪಾಡಾಗುವಾಗ ಕೆಲವು ಭಾಗಗಳು ಬೇರೆ ರಾಜ್ಯದಲ್ಲಿ ಕಾರಣಾಂತರದಿಂದ ಉಳಿದುಹೋದವು. ಈ ವಿಷಯದಲ್ಲಿ ಈಗಾಗಲೇ ಈ ಪ್ರದೇಶ ಕರ್ನಾಟಕಕ್ಕೆ ಸೇರಬೇಕು ಎಂದು ಹೇಳಿ ಹೊರಗಡೆ ಉಳಿದಿರತಕ್ಕಂತಹವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉದಾಹರಣೆಗಾಗಿ ಕಾಸರಗೋಡು, ಈ ಒಂದು ಭಾಗವನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳುವ ಬಗ್ಗೆ ನಮ್ಮ ಸರಕಾರ ಹಾಗೂ ಕೇಂದ್ರ ಸರಕಾರ ಸೂಕ್ತ ಕಾರ್ಯಕ್ರಮವನ್ನು ಬೇಗ ತೆಗೆದುಕೊಳ್ಳಬೇಕಾದುದು ಅತ್ಯಗತ್ಯ. ತಾಳವಾಡಿ ಫಿರ್ಕಾ ಬಗ್ಗೆ ಸಹ ಈ ಮಾತು ಹೇಳಬೇಕಾಗುತ್ತದೆ. ಮಡಕಸಿರಾ ಆಂಧ್ರದಲ್ಲಿ ಸೇರಿದೆ. ಅಕ್ಕಲಕೋಟೆ ಮಹಾರಾಷ್ಟ್ರದಲ್ಲಿ

ಸೇರಿದೆ. ಗಡಿ ಉದ್ದಕ್ಕೂ ಕರ್ನಾಟಕದಿಂದ ಹರಿದುಹೋಗಿ ಎಷ್ಟೋ ಗ್ರಾಮಗಳು, ಭಾಗಗಳು ಬೇರೆ ರಾಜ್ಯದಲ್ಲಿ ಉಳಿದು ಹೋಗಿವೆ. ಈ ಭಾಗಗಳನ್ನು ಕರ್ನಾಟಕ ರಾಜ್ಯದಲ್ಲಿ ಸೇರಿಸುವುದಕ್ಕೆ ಗಡಿಗೆ ಸಂಬಂಧಪಟ್ಟ ಟ್ರಿಬ್ಯೂನಲ್ ರಚನೆ ಮಾಡಿ ಅದಕ್ಕೆ ಈ ಕೆಲಸ ವಹಿಸುವುದು ಬಹಳ ಸೂಕ್ತ. ಈ ಕೆಲಸ ಜಾಗ್ರತೆಯಾಗಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲು ಬಯಸುತ್ತೇನೆ.

ಸಮಗ್ರ ಭಾರತದ ಐಕ್ಯತೆ ದೃಷ್ಟಿಯಿಂದ ರಾಜ್ಯಗಳ ಬೆಳವಣಿಗೆ ಮತ್ತು ಐಕ್ಯತೆ ದೃಷ್ಟಿಯಿಂದ ಸಣ್ಣಪುಟ್ಟ ಹೊಂದಾಣಿಕೆಗಳಲ್ಲಿ ಊರಿನ ಉದ್ದಕ್ಕೂ ಇರುವ ಸಮಸ್ಯೆ ಒಂದು ಬೃಹತ್ ಸಮಸ್ಯೆಯಾಗಿ ಇಡೀ ದೇಶಕ್ಕೆ ಕಟು ಪರಿಸ್ಥಿತಿ ಉಂಟಾಗುವುದಾದರೆ, ಆಗ ನಾವು ಆ ಒಂದು ಸಮಸ್ಯೆಯನ್ನು ಇವತ್ತು ಕೆದಕುವುದು ಸೂಕ್ತವಾದುದುಲ್ಲ. ಆದರೆ ಇಂಥ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರದವರೂ, ರಾಜ್ಯ ಸರಕಾರಗಳ ಮುಖ್ಯಮಂತ್ರಿಗಳೂ ಮನಸ್ಸು ಮಾಡಬೇಕು. ದೊಡ್ಡ ವಿಷಯಗಳನ್ನು ಪ್ರಸ್ತಾಪ ಮಾಡುವಾಗ, ಚೀಣಾದ ಆಕ್ರಮಣವನ್ನು ಪ್ರಸ್ತಾಪ ಮಾಡುವಾಗ, ದೇಶದಲ್ಲಿ ಅನ್ನ-ಬಟ್ಟೆ ಸಮಸ್ಯೆಗಳನ್ನು ಮಾತನಾಡುವಾಗ ಅಥವಾ ದೇಶದ ಸಮಗ್ರ ಅಭಿವೃದ್ಧಿಯನ್ನು ಕುರಿತು ಮಾತನಾಡುವಾಗ, ಹೊಂದಾಣಿಕೆ ವಿಷಯ ಸಣ್ಣದಾಗಿ ಕಾಣುತ್ತದೆ. ಆದರೆ ಆ ಭಾಗದಲ್ಲಿ ವಾಸಮಾಡುವ ಜನರ ದೈನಂದಿನ ಸಮಸ್ಯೆಗಳಿಗೆ ಪರಿಹಾರ ನೀಡಬೇಕಾದ್ದು ಎಲ್ಲ ಸರಕಾರಗಳ ಕರ್ತವ್ಯ.

ನಾನು ಭಾಷಾವಾರು ಪ್ರಾಂತ್ಯಗಳ ಪುನರ್ವಿಂಗಡಣೆಯಾಗಬೇಕು ಅಂತ ಮೊದಲಿನಿಂದಲೂ ವಾದ ಮಾಡಿ, ಅದಕ್ಕೆ ಸಾಕಷ್ಟು ಪ್ರಯತ್ನ ಮಾಡಿದವರಲ್ಲಿ ಒಬ್ಬ. ಅಂದಮಾತ್ರಕ್ಕೆ ಯಾವುದೇ ಭಾಷೆಯ ಜನರು ರಾಜ್ಯದಲ್ಲಿದ್ದರೆ, ಆ ಭಾಷೆಯನ್ನು ಆಡದೆ ಇರುವ ರಾಜ್ಯದಲ್ಲಿದ್ದರೆ, ಅವರನ್ನು ಅವರ ಭಾಷೆ ಮಾತನಾಡತಕ್ಕಂತಹ ರಾಜ್ಯಕ್ಕೆ ಸಾಗಿಸಬೇಕೆ ಎಕ್ಸ್‌ಚೇಂಜ್ ಆಫ್ ಪಾಪುಲೇಶನ್ ಆಗಬೇಕೆಂದು ಯಾರಾದರೂ ವಾದ ಮಾಡಿದರೆ ಅದು ಮೂರ್ಖತನದ ವಾದ ಅಂತ ತ್ಯಜಿಸಬೇಕಾಗುತ್ತದೆ.

ಭಾಷೆ ನಿಜವಾಗಿಯೂ ಜೀವಂತ ಸಂಬಂಧವನ್ನು ಇಚ್ಛಿಸುತ್ತದೆ. ದೇಶದಲ್ಲಿ ಭಾಷೆಯ ಆಧಾರದ ಮೇಲೆ ಜನರು ತಮ್ಮ ಜೀವನವನ್ನು ರೂಪಿಸಿಕೊಂಡು ಆಯಾ ಪ್ರದೇಶಗಳಲ್ಲಿ ಸವಲತ್ತುಗಳನ್ನು ಪಡೆಯುತ್ತ ಬಂದಿದ್ದಾರೆ. ಅಂತಹ ನೇರವಾದ ಗೆರೆಯನ್ನು ಇಲ್ಲಿ ಎಳೆಯುವುದಕ್ಕೆ ಶಕ್ಯವಿಲ್ಲ. ಬೆಳಗಾಂ ಹತ್ತಿರ ಇದೆ ಎಂದರೆ ನಾಳೆ ಕೊಲ್ಹಾಪುರ ಇನ್ನೊಂದು ಭಾಗಕ್ಕೆ ಸಮೀಪವಾಗಿದೆ ಎಂದು ಹೇಳಬಹುದು. ಈ ರೀತಿಯಾಗಿ ಇಂತಹ ಅಂಕಿ ಸಂಖ್ಯೆಗಳನ್ನು ತಂದು ತೋರಿಸಿದರೆ ಅದು ತಪ್ಪಾಗುತ್ತದೆ. ಯಾವ ಕಾರಿಡಾರ್ ನಮಗೆ ಬೇಕಿಲ್ಲ ಮತ್ತು ನೇರವಾದ ಯಾವ ಗೆರೆಯೂ ಬೇಕಿಲ್ಲ. ಸಾಮಾನ್ಯವಾಗಿ ದೇಶದ ಜನರೊಡನೆ ಅನುಸರಿಸಿಕೊಂಡು ಹೊಂದಾಣಿಕೆ ಮಾಡಿಕೊಂಡರೆ ಸಾಧ್ಯವಾಗಬಹುದು.[೨೩]

ಭಾಷಿಕರ ಗಡಿಯನ್ನು ಆಧರಿಸಿ ರಾಜ್ಯಗಳು ತಮ್ಮ ಗಡಿಯ ಎಲ್ಲೆಗಳನ್ನು ಸರಿಯಾಗಿ ಗುರುತಿಸಿಕೊಳ್ಳಬೇಕು. ಆದರೆ ಈ ಕಾರಣದಿಂದ ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ

ವಿವಾದ ಹಾಗೂ ವ್ಯಾಜ್ಯಗಳು ನಡೆಯಕೂಡದು. ಏಕೆಂದರೆ ರಾಜ್ಯಗಳಿಗೆ ಭಾಷಿಕ ನೆಲೆಯ ಸ್ವಾಯತ್ತತೆ ಎಷ್ಟು ಮುಖ್ಯವೋ ಅದೇ ರೀತಿಯಲ್ಲಿ ಇಡೀ ಭಾರತದ ಐಕ್ಯತೆಯೂ ಅಷ್ಟೇ ಮುಖ್ಯ. ಒಂದು ಕಡೆ ರಾಜ್ಯಗಳ ಸ್ವಾಯತ್ತತೆ ಮತ್ತೊಂದು ಕಡೆ ದೇಶದ ಐಕ್ಯತೆ ಇವುಗಳನ್ನು ಸರಿಯಾಗಿ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎಂಬುದು ಗೋಪಾಲಗೌಡರ ಆಲೋಚನೆಯಾಗಿತ್ತು. ಗೋಪಾಲಗೌಡರ ಈ ಆಲೋಚನೆ ಅತ್ಯಂತ ದೂರಗಾಮಿಯಾಗಿತ್ತು. ಏಕೆಂದರೆ ಭಾಷಾವಾರು ಪ್ರಾಂತ್ಯಗಳ ರಚನೆ ಸ್ವಾತಂತ್ರ್ಯ ಹೋರಾಟದ ಒಂದು ಮುಖ್ಯ ಭಾಗವಾಗಿತ್ತು. ಇದು ದೇಶದ ಐಕ್ಯತೆಗೆ ಭಂಗ ತರಬಾರದು ಎಂಬುದಾಗಿತ್ತು. ಇದು ಸರಿಯಾದ ದೃಷ್ಟಿಕೋನ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರವು ಸಂಪತ್ತು ಮತ್ತು ಅಧಿಕಾರಗಳನ್ನು ಕೇಂದ್ರೀಕರಿಸಿಕೊಂಡಿದೆ. ಇದು ಆರ್ಥಿಕತೆಗೆ ಮತ್ತು ರಾಜಕೀಯಕ್ಕೆ ಸಂಬಂಧಿಸಿದ್ದು. ಸೈನ್ಯ, ರಾಜ್ಯ, ಖಜಾನೆ, ರಾಜ್ಯದ ಕಂದಾಯ ಇನ್ನಿತರೆ ವಿಷಯಗಳಲ್ಲಿ ಕೇಂದ್ರವು ತನ್ನ ಯಜಮಾನಿಕೆಯನ್ನು ನಡೆಸುತ್ತಿದೆ. ಅನೇಕ ವಿಷಯಗಳಲ್ಲಿ ರಾಜ್ಯಗಳಿಗೆ ಅವುಗಳದ್ದೇ ಆದ ಸ್ವಾಯತ್ತತೆಯೇ ಇಲ್ಲದಂತೆ ಆಗಿದೆ. ಹಾಗಾಗಿ ಇತ್ತೀಚಿನ ವರ್ಷಗಳಲ್ಲಿ ಈಶಾನ್ಯ ಭಾರತದ ಅನೇಕ ರಾಜ್ಯಗಳು ಭಾಷಿಕ ಆಧಾರದ ಮೇಲೆ ಸ್ವಾಯತ್ತ ರಾಜ್ಯಗಳಾಗಲು ಹಕ್ಕೊತ್ತಾಯಗಳನ್ನು ಮಂಡಿಸಿದವು. ಅದಕ್ಕೆ ಸಂಬಂಧಿಸಿದ ಹೋರಾಟಗಳನ್ನು ನಡೆಸಿದವು. ಈ ಹೋರಾಟವು ಒಂದು ಕಡೆ ಸಂವಿಧಾನಬದ್ಧವಾದ ಸಂವಿಧಾನದ ಚೌಕಟ್ಟಿನೊಳಗೆ ನಡೆದರೆ ಮತ್ತೊಂದು ಕಡೆ ವಿಶಾಲವಾದ ಜನಾಂದೋಲನವಾಗಿ ರೂಪಗೊಂಡವು. ಇದರ ಫಲವಾಗಿ ಕೆಲವು ಸ್ವತಂತ್ರ ರಾಜ್ಯಗಳು ಉದಯವಾದವು. ಉದಾಹರಣೆಗೆ ಛತ್ತೀಸ್‌ಗಡ, ಜಾರ್ಖಂಡ್ ಮತ್ತು ತೆಲಂಗಾಣ.

೫.೧೯. ಸಮಾಜದಲ್ಲಿ ಧಾರ್ಮಿಕ ಸಂಸ್ಥೆಗಳು

ಭಾರತೀಯ ಸಮಾಜದಲ್ಲಿ ಮತ-ಧರ್ಮಗಳು ಜನಜೀವನವನ್ನು ಪ್ರಭಾವಿಸುವುದರಲ್ಲಿ ಮತ್ತು ರೂಪಿಸುವುದರಲ್ಲಿ ಅತ್ಯಂತ ಪರಿಣಾಮಕಾರಿಯಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಭಾರತದಲ್ಲಿ ಮತಧರ್ಮಗಳಿಗೆ ಸ್ವತಂತ್ರ ಅಸ್ತಿತ್ವ ಇಲ್ಲ. ಅವೆಲ್ಲವೂ ಬೇರೆ ಬೇರೆ ಜಾತಿ ಸಮುದಾಯಗಳ ನಂಬಿಕೆಯ ದೇವರುಗಳನ್ನು ಅವಲಂಬಿಸಿವೆ. ಎಲ್ಲಿಯವರೆಗೆ ಜನರಿಗೆ ದೇವರ ಮೇಲೆ ನಂಬಿಕೆ ಗಟ್ಟಿಯಾಗಿ ನೆಲೆಯೂರಿರುತ್ತದೆಯೋ ಅಲ್ಲಿಯವರೆಗೂ ಮತಧರ್ಮಗಳು ಸಮಾಜದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಇದನ್ನು ಭಾರತದ ಸಮಾಜವಾದಿ ಚಿಂತನೆ ತನ್ನ ಆಲೋಚನೆಯ ಮೂಲ ಎಳೆಗಳಲ್ಲಿ ಒಂದನ್ನಾಗಿ ಸ್ವೀಕರಿಸಿದೆ. ಸ್ವತಃ ಸಮಾಜವಾದಿ ಚಿಂತಕರಾದ ಗೋಪಾಲಗೌಡರು ಈ ಬಗೆಗಿನ ತಮ್ಮ ಆಲೋಚನೆಗಳನ್ನು ಈ ರೀತಿಯಲ್ಲಿ ವಿವರಿಸಿದ್ದಾರೆ. ನಮ್ಮ ದೇಶದಲ್ಲಿ ಜನಸಂಖ್ಯೆಯಷ್ಟೆ ದೇವರುಗಳ ಸಂಖ್ಯೆಯೂ ಇದೆ ಎಂದು ಹೇಳಬಹುದು. ಮನುಷ್ಯನ ಇತಿಹಾಸದಲ್ಲಿ ಈ ದೈವೀಕಾಂಡ ಬಹಳ ವಿಸ್ತಾರವಾದುದು ಎಂದು ಹೇಳಬಹುದು. ಮನುಷ್ಯ ದೇವರನ್ನು ಯಾವತ್ತು ಸೃಷ್ಟಿ ಮಾಡಿದ ಎಂಬ ತಾರೀಖು ಇತಿಹಾಸದಲ್ಲಿ ಎಲ್ಲಿಯೂ ಖಚಿತವಾಗಿ ದೊರೆಯುವುದಿಲ್ಲ.

ಆ ಭಾವನೆ ಅವನಲ್ಲಿ ಬೆಳೆದು, ಅವನ ದೇವರುಗಳು ಅವನ ಮನಸ್ಸಿನಲ್ಲಿ ರೂಪಗೊಂಡು, ಅವು ಅವನಿಗೆ ಬೇಕಾದಂತೆ ಆಕಾರ ಹೊಂದಿ ಭೂಮಿಯ ಮೇಲೆ ವಾಸಮಾಡುವುದಕ್ಕೆ ಯಾವಾಗ ಪ್ರಾರಂಭ ಮಾಡಿದವು ಎನ್ನುವ ಇತಿಹಾಸ ಕೂಡ ಬಹಳ ಪ್ರಾಕೃತ ಮತ್ತು ಪುರಾತನವಾದುದು. ಬಹುಶಃ ಇವನಂತೆಯೇ ದೇವರ ಹಿಂದೆಯೂ ಅಷ್ಟೇ ಕಲ್ಪಾಂತರ ಕಾಲ ಇದೆ ಎಂದು ಅಂದುಕೊಳ್ಳಬಹುದು. ದೇವರು ಮತ್ತು ಧರ್ಮದ ಹೆಸರಿನಲ್ಲಿ ಮನುಷ್ಯ ಹರಿಸಿದಷ್ಟು ರಕ್ತವನ್ನು ಬೇರೆ ಯಾವ ಉದ್ದೇಶಕ್ಕಾಗಿಯೂ ಹರಿಸಿರಲಾರ ಎಂದು ಅನ್ನಿಸುತ್ತದೆ. ಮತೀಯ ಭಾವನೆಯ ಉತ್ಕಟ ಘರ್ಷಣೆಯಿಂದಾಗಿ ನಮ್ಮ ದೇಶ ಇಬ್ಭಾಗ ಕೂಡ ಆಗಬೇಕಾಯಿತು. ಇದಕ್ಕಾಗಿ ಜನರ ಬಲಿ ಕೂಡ ಆಗಬೇಕಾಯಿತು. ಇವತ್ತು ನಮ್ಮ ಸಮಾಜದಲ್ಲಿ ಹೇಗೆ ಧನಿಕರು, ಬಡವರು ಎನ್ನತಕ್ಕ ಭೇದವಿದೆಯೋ ಹಾಗೆಯೇ ಈ ಧಾರ್ಮಿಕ ವಿಶ್ವದಲ್ಲಿಯೂ ಕೂಡ, ದೇವರುಗಳ ರಾಜ್ಯದಲ್ಲಿಯೂ ಕೋಟ್ಯಾಧೀಶರಾದ ದೇವರುಗಳಿದ್ದಾರೆ. ಹೊತ್ತು ಹೊತ್ತಿಗೆ ತೆಂಗಿನಕಾಯಿ, ನೀರು, ಇಲ್ಲದೆ ಬರೀ ನೀರು ಮತ್ತು ಒಂದು ತುಳಸಿದಳ ತಲೆಯ ಮೇಲೆ ಬಿದ್ದಿರುತ್ತವೆ. ಅಲ್ಲದೆ ಹಾಗೆ ಏನೂ ಬೀಳದೆ ಇತರಕ್ಕ, ನಿರ್ಗತಿಕರಾಗಿರತಕ್ಕ, ರಸ್ತೆಯ ಪಕ್ಕದಲ್ಲಿ ಕೇಳುವವರಿಲ್ಲದೆ ಬಿದ್ದಿರುವ ಎಷ್ಟೋ ದೇವರುಗಳನ್ನು ನೋಡಿ ನಾವು ಕನಿಕರ ಪಡುತ್ತೇವೆ. ಮಾನವ ಸಮಾಜದಲ್ಲಿರುವ ಆರ್ಥಿಕ ಏರುಪೇರುಗಳನ್ನು ಇಲ್ಲಿಯೂ ನಾವು ಕಾಣುತ್ತೇವೆ. ಶ್ರೀಮಂತ ದೇವರುಗಳು ಇವೆ. ಅತಿ ಗರೀಬರಾದ ದೇವರುಗಳೂ ಇವೆ. ಎಷ್ಟೋ ದೇವರುಗಳನ್ನು ನಾವು ಇವತ್ತು ನೋಡಿದರೆ ಗುಡಿ ತಲೆಯ ಮೇಲೆ ಬಿದ್ದು, ಅದೂ ಬಚಾವಾಗದೆ ಉಸಿರು ಕಟ್ಟಿದಂತಾಗುತ್ತದೆ. ಇಂತಹ ದೇವರುಗಳ ಲೆಕ್ಕವನ್ನು ತೆಗೆದು ನೋಡಿದರೆ ಆ ದೇವರುಗಳ ಹೆಸರಿನಲ್ಲಿ ನೂರಾರು ಎಕರೆ ಜಮೀನು ನಾಲ್ಕಾರು ಜಿಲ್ಲೆಗಳಲ್ಲಿರುವುದು ಕಂಡುಬರುತ್ತದೆ. ಮಾನವ ಸಮಾಜದಲ್ಲಿ ಹೇಗೆ ಬಾಯಿ ಇಲ್ಲದೆ ಇರುವ ಜನರ ಬಗ್ಗೆ ಮಾತನಾಡಲು ಆಶಿಸುತ್ತೇನೆಯೋ ಈ ಮಸೂದೆಯ ಸಂಬಂಧದಲ್ಲಿ ಕೂಡ ಅದೇ ರೀತಿ ಹಣಕಾಸಿನ ಬಲದಿಂದ ಸರ್ಕಾರವನ್ನು ಯಾರು ಎದುರಿಸಲಾರರೋ, ಯಾರ ಆಸ್ತಿ ಪಾಸ್ತಿಗಳು ಪರಾಧೀನವಾಗಿ ಹೋಗಿ ಬಿಟ್ಟಿದೆಯೋ, ಯಾರ ತಲೆಯ ಮೇಲೆ ಒಂದು ತುಳಸಿದಳ, ಒಂದು ಹನಿ ಒಳ್ಳೆಯ ಉದಕ ಕೂಡ ಬೀಳುತ್ತಿಲ್ಲವೋ ಅಂಥ ದೇವರ ಕಡೆ ಇವೊತ್ತು ಸರ್ಕಾರ ಗಮನವನ್ನು ಸೆಳೆಯಬೇಕು. ಅಂತಹ ದೇವರನ್ನು ನಾವು ಕೈಬಿಡಬಾರದು ಎಂದು ನಾವು ಇವೊತ್ತು ಹೇಳುತ್ತಿದ್ದೇನೆ.

ಈ ಧಾರ್ಮಿಕ ಕ್ಷೇತ್ರದಲ್ಲಿಯೂ, ದೇವರುಗಳ ರಾಜ್ಯದಲ್ಲಿಯೂ ಕೂಡ ನಾನು ಮೇಲು, ತಾನು ಮೇಲು, ನಿನಗೆ ಒಂದು ತಲೆ ಇದ್ದರೆ ನನಗೆ ಮೂರು ತಲೆ ಇವೆ, ನನಗೆ ಐದು ತಲೆ ಇವೆ, ನನ್ನ ಜನ್ಮದ ಪರಿ ಬೇರೆ, ನನ್ನ ವಿಶ್ವದ ಆಡಳಿತ ಕ್ರಮ ಬೇರೆ ಎಂದು ಹೇಳುತ್ತಾರೆ. ಚಂಡಿ, ಚಾಮುಂಡಿ, ಮೂಕಾಂಬಿಕಾ ಇವರೆಲ್ಲ ಒಂದು ಅಂತಸ್ತಿನಲ್ಲಿದ್ದರೆ; ಅವರ ಅಕ್ಕ ತಂಗಿಯರಾದ ಮಾರಿ, ಮಸಣಿ, ಎಲ್ಲಮ್ಮ ಇವರೆಲ್ಲ ಒಂದೇ ಪೀಳಿಗೆಯವರಾದರೂ ಒಂದೇ ಮನೆತನದಲ್ಲಿ ಹುಟ್ಟಿದವರಾದರೂ ಇವರ ಅಂತಸ್ತೇ ಬೇರೆ. ಇವರಿಗೆ ಗುಡಿ ಇದ್ದರೆ ಪೂಜಾರಿ ಇಲ್ಲ, ಪೂಜಾರಿ ಇದ್ದರೆ ಅವನಿಗೆ ಹೊಟ್ಟೆಗಿಲ್ಲ. ಇವು ಅನಾಥರಾಗಿ ದಾರಿಯಲ್ಲಿ ಹೋಗುವವರನ್ನು ಕೈ ಕೈ

ಬೇಡುತ್ತವೆ. ದಾರಿಯಲ್ಲಿ ಹೋಗುವವರು ಕೈಮುಗಿಯುವುದಕ್ಕೆ ಬದಲಾಗಿ ಅವೇ ಭಕ್ತರನ್ನು ಯಾಚಿಸಬೇಕಾಗಿದೆ. ದೇವರನ್ನು ಕೈಬಿಟ್ಟು ಹೋಗುವಷ್ಟು ಸ್ಥಿತಿ ಬಂದಿದೆ. ತಮ್ಮ ಊರಿನಲ್ಲಿಯೂ ಈ ತರಹ ಅನಾಥರಾಗಿರತಕ್ಕ ದೇವರುಗಳಿರಬಹುದು. ಇದು ನಿಜಕ್ಕೂ ಕನಿಕರದ ವಿಷಯ. ಒಬ್ಬ ಪಂಚಕಜ್ಜಾಯವನ್ನು ತಿಂದರೆ, ಇತರರಿಗೆ ಕೋಳಿ, ಕುರಿ, ಕೋಣ, ಎಮ್ಮೆ. ಒಂದೊಂದು ಸಲ ವಿಸ್ಮಯವಾಗುತ್ತದೆ. ಒಂದೊಂದು ಸಲ ಗಾಬರಿಯಾಗುತ್ತದೆ. ಇಲ್ಲಿ ಏನೋ ಕಾನೂನು-ಕಾಯಿದೆ ನಾವು ಮಾಡಬಹುದು; ಗೊಂದಲದಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ಹಾಗೆಯೇ ಯೋಚನೆ ಮಾಡುವಾಗ ದೇವರ ಸ್ಥಿತಿಯೂ ಅದೇ ರೀತಿ ಇರುವಂತೆ ಕಾಣುತ್ತದೆ. ನಾವು ನಿಜಕ್ಕೂ ಲೌಕಿಕವಾಗಿ ವಿಮರ್ಶಿಸುವುದಕ್ಕೆ ಈ ಸಭೆಯಲ್ಲಿ ಸೇರಿದ್ದರೂ ಆಧ್ಯಾತ್ಮಿಕ ಪ್ರಪಂಚವನ್ನು, ಅಲೌಕಿಕ ಬದುಕನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ದೇವರ ರಕ್ಷಣೆ ಮಾಡುವುದಕ್ಕೆ ಇದ್ದಂತಹ ಮನುಷ್ಯರು ಆ ದೇವರ ಹೆಸರನ್ನೇ ತಮ್ಮ ಹೆಸರನ್ನಾಗಿಟ್ಟುಕೊಂಡು ಎರಡು ಮೂರು ತಲೆಮಾರಿನಲ್ಲಿ ಆ ದೇವರ ಹೆಸರಿನ ಖಾತೆಯನ್ನು ತಮ್ಮ ಹೆಸರಿಗೆ ಬದಲಾಯಿಸಿಕೊಂಡಿದ್ದಾರೆ. ಇದು ಬಹಳ ನಡೆದಿದೆ. ಇನ್ನು ಕೆಲವು ಕಡೆ ವಾದ ಇರಬಹುದು, ದೇವರ ಮೇಲೆ ಕೇಸು ಹಾಕಿ, ಅದಕ್ಕೆ ಸೇರಿದ ಆಸ್ತಿ ಯಾರಿಗೆ ಸೇರಬೇಕು? ಅದಕ್ಕೆ ಹಕ್ಕುದಾರರು ಯಾರು? ಎಂದು ಅನೇಕ ಕಡೆ ವಿವಾದಗಳು ಬಂದಿವೆ. ಇದು ನಡೆಯುತ್ತಾ ಇರುತ್ತದೆ. ದೇವರಿಗೆ ಇಷ್ಟವಿಲ್ಲದೇ ಇದ್ದರೂ ಪೂಜಾರಿಗಳು ಅವರ ಇಚ್ಛೆಯ ಪ್ರಕಾರ ನಡೆಸಿಕೊಂಡು ಹೋಗುತ್ತಾರೆ. ಸುಪ್ರೀಂಕೋರ್ಟ್‌ಗೂ ಹೋಗುತ್ತಾರೆ. ಅದು ಕಾನೂನು ಮೂಲಕ ಹೋಗತಕ್ಕದ್ದು. ವ್ಯಕ್ತಿ ಇದ್ದ ಕಡೆ ವಿವಾದ ಬರುತ್ತದೆ. ಅದರಂತೆ ಧಾರ್ಮಿಕ ಸಂಸ್ಥೆಗಳೂ ಬರುತ್ತವೆ. ಈ ಮಸೂದೆಯಿಂದ ನಾನು ಬಯಸುವುದು ಎರಡು ವಿಷಯಗಳನ್ನು ಏನೆಂದರೆ ಆಯಾಯಾ ಸಂಸ್ಥೆಗಳು ಹಣ, ಆಸ್ತಿ ಪಾಸ್ತಿಗಳು ಏನೇನನ್ನು ಹೊಂದಿದ್ದವು ಈಗ ಆ ಸಂಸ್ಥೆಗಳಿಗೆ ಸೇರಿರತಕ್ಕ ಆಸ್ತಿಪಾಸ್ತಿಗಳು ಮತ್ತು ಬಂಗಾರ ಇತ್ಯಾದಿಗಳು ಪರಭಾರೆ ಆಗದೇ ಇರುವ ರೀತಿಯಲ್ಲಿ ಈ ಕಾನೂನು ಆ ದೇವರುಗಳಿಗೆ ಮತ್ತು ಸಂಸ್ಥೆಗಳಿಗೆ ರಕ್ಷಣೆ ಕೊಡುತ್ತವೆ ಮತ್ತು ಕೊಡಬೇಕು ಎನ್ನುವುದು ಒಂದನೆಯದು. ಎರಡನೆಯದು ಪರಸ್ಪರ ಒಬ್ಬರನ್ನೊಬ್ಬರು ನಂಬಿ ಕುಳಿತಿರುವ ದೇವರು ಮತ್ತು ಭಕ್ತರು. ನಾನು ಮನುಷ್ಯನ ಅಭಿವೃದ್ಧಿಯ ಕಡೆಗೆ ಈ ಸಂಸ್ಥೆಗಳು ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ಹೇಳುವವನು. ಈ ರೀತಿ ಆಗಬೇಕೆನ್ನುವುದು ಎರಡನೆಯ ಬಯಕೆ. ಹೆಚ್ಚಾಗಿ ವಿದ್ಯಾಸಂಸ್ಥೆಗಳಿಗೆ ಹಣವನ್ನು ಒದಗಿಸಬಹುದು. ಮತ್ತು ಚೈನಾ ಗಡಿಯಲ್ಲಿ ನಡೆಯತಕ್ಕ ಹೋರಾಟಕ್ಕೆ ಚಿನ್ನವನ್ನು ಮತ್ತು ಹಣವನ್ನು ಒದಗಿಸಬಹುದು. ಏಕೆಂದರೆ ರಾಷ್ಟ್ರ ರಕ್ಷಣೆ ನಮಗೆಷ್ಟು ಅಗತ್ಯವೋ ಹಾಗೆಯೇ ದೇವರುಗಳಿಗೂ ಅಷ್ಟೇ ಅಗತ್ಯ. ಅದಕ್ಕೂ ಹಣವನ್ನು ಹೊಂದಿಸಬಹುದು. ಬಲಾತ್ಕಾರ ಮಾಡಿ ಕಿತ್ತುಕೊಳ್ಳಬೇಕೆಂದು ಹೇಳುವುದಿಲ್ಲ. ರಾಷ್ಟ್ರ ಕಂಗೆಟ್ಟು ಭಕ್ತರು ದಿಕ್ಕೆಟ್ಟು ಕುಳಿತಾಗ ಯಾವ ಧಾರ್ಮಿಕ ಸಂಸ್ಥೆಯೂ ರಾಷ್ಟ್ರದ ಮತ್ತು ತನ್ನ ಭಕ್ತರ, ಜನತೆಯ ಹಿತವನ್ನು ಅಲಕ್ಷಿಸಿ ತನ್ನ ಹಿತವನ್ನೇ ಗಮನಿಸುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಈಗ ನಮ್ಮ ರಾಜ್ಯದಲ್ಲಿ ದೇವರುಗಳಿವೆ, ಎಷ್ಟು ಆಸ್ತಿಯಿದೆ, ಎಷ್ಟು ಜನ ಭಕ್ತಾದಿಗಳಿದ್ದಾರೆ, ಯಾರು ಭಕ್ತಾದಿಗಳಿಗೆ ಹಿಂಸೆ ಕೊಡುತ್ತಿದ್ದಾರೆ. ಯಾವ ಯಾವ ದೇವರಲ್ಲಿ ಎಷ್ಟೆಷ್ಟು ಚಿನ್ನ ಇದೆ ಎಂಬುದೆಲ್ಲ ಲೆಕ್ಕದಲ್ಲಿರಬೇಕು. ಈ ಚಿನ್ನದ ದೆಶೆಯಿಂದ ದೇವರಿಗೂ ಬೀಗ ಬಿದ್ದಿದೆ. ನಾನೊಂದು ಸಾರಿ ತಿರುಪತಿಗೆ ಹೋಗಿದ್ದೆ. ಅಲ್ಲಿ ದೇವರನ್ನು ಕೋಣೆಯಲ್ಲಿ ಕೂಡಿಸಿ, ಬಲವಾದ ಕಬ್ಬಿಣದ ಸಲಾಕಿ ಬಾಗಿಲನ್ನು ಮಾಡಿಸಿ, ಅದಕ್ಕೆ ಬಲವಾದ ಒಂದು ಕಬ್ಬಿಣದ ಬೀಗ ಹಾಕಿದ್ದರು. ಸಾಮಾನ್ಯವಾಗಿ ಆ ಬಾಗಿಲನ್ನು ತೆಗೆಯುವುದೇ ಇಲ್ಲವಂತೆ, ಯಾರಾದರೂ ಅಂಥ ದೊಡ್ಡ ಮನುಷ್ಯರು ಬಂದಾಗ ಮಾತ್ರ ಯಾರೋ ಒಬ್ಬರು ಸ್ನಾನ ಮಾಡಿ ಬಟ್ಟೆ ಹಾಕಿಕೊಂಡು ಬಂದು ಆ ಬೀಗವನ್ನು ತೆಗೆದು ದೇವರಿಗೆ ಪೂಜೆ ಮಾಡಿ ಮತ್ತೆ ಹಾಗೇ ಬೀಗ ಹಾಕಿಬಿಡುತ್ತಾರಂತೆ. ಅದನ್ನೆಲ್ಲ ನೋಡಿದಾಗ, ಜನರಿಗೆ ಈ ದೇವರಲ್ಲಿ ಭಕ್ತಿಯಿಲ್ಲವೋ ಅಥವಾ ದೇವರಿಗೆ ಈ ಜನರಲ್ಲಿ ವಿಶ್ವಾಸವಿಲ್ಲವೋ ಎಂಬ ಅಭಿಪ್ರಾಯಗಳು ಬಂದು ಆ ದೇವರ ಬಗ್ಗೆ ನಾನು ಬಹಳ ಮರುಕಪಟ್ಟೆನು. ಅಂತೂ ನಾನು ಸಹ ಒಂದು ನಮಸ್ಕಾರ ಮಾಡಿ ಬಂದೆ. ದೇವರಿಗಿಂತ ಚಿನ್ನದ ಮೇಲೆ ಅಷ್ಟು ಆಸೆಯಿದ್ದರೆ ಆ ದೇವರು ತನಗೆ ಭಕ್ತ ಬೇಡ ಎಂದು ಹೇಳಲಿ. ಇಲ್ಲವೆ ದೇವರಿಗೆ ಭಕ್ತಬೇಕಾಗಿದ್ದರೆ ಆ ಚಿನ್ನವನ್ನಾದರೂ ಬೇಡ ಎಂದು ಹೇಳಬೇಕು.ಈ ಎರಡೂ ಇದ್ದಲ್ಲಿ ಬಹಳ ತಾಪತ್ರಯ. ದುಡ್ಡಿದ್ದ ದೇವರಿಗೆ ಕೋಟಿಗಟ್ಟಲೆ ಭಕ್ತರಿರುತ್ತಾರೆ. ಬಂಗಾರದ ನೆಪದಿಂದ ಆ ದೇವರಮುಖಕ್ಕೆ ಬೀಗ ಹಾಕಿದ್ದಾರೆ. ನಾವೀಗ ಈ ದೇವರುಗಳನ್ನು ಸೆರೆಯಿಂದ ಮುಕ್ತಿ ಕಾಣಿಸಬೇಕಾಗಿದೆ. ಈ ಕಾನೂನಿನ ಮುಖ್ಯ ಉದ್ದೇಶ ಭಕ್ತಿಗೆ ಒಂದು ನಿಯಂತ್ರಣ ಮಾಡಬೇಕೆಂದಲ್ಲ, ದೇವರ ಹೆಸರಿನಲ್ಲಿ ಭಕ್ತರಿಂದ ವಸೂಲಾಗತಕ್ಕ ಹಣವೇನಿದೆಯೋ ಅದನ್ನು ಸದ್ವಿನಿಯೋಗ ಆಗುವ ಬಗ್ಗೆ ಒಂದು ನಿಯಂತ್ರಣ ಮಾಡಬೇಕೆಂಬುದು. ಈ ವಿಚಾರದಲ್ಲಿ ಸರ್ಕಾರದವರು ನಿಗಾವಹಿಸಿ ಒಳ್ಳೆಯ ರೀತಿಯಲ್ಲಿ ಇವು ತಮ್ಮ ಆಡಳಿತವನ್ನು ನಡೆಸಿಕೊಂಡು ಹೋಗುವಂತೆ ಅವಕಾಶ ಕಲ್ಪಿಸಿಕೊಡುವುದು ಉಚಿತ ಎಂದು ನಾನು ಭಾವಿಸುತ್ತೇನೆ.[೨೪]

ಭಾರತೀಯ ಸಮಾಜದಲ್ಲಿ ದೇವರು, ದೇವರನ್ನು ಕುರಿತ ನಂಬಿಕೆ ಮತ್ತು ಆಚರಣೆಗಳು ಹಾಗೂ ಮತಧರ್ಮಗಳು ಬಹಳ ಮುಖ್ಯವಾಗಿ ಆರ್ಥಿಕತೆಯನ್ನು ಅವಲಂಬಿಸಿವೆ. ಆರ್ಥಿಕತೆಯನ್ನು ಹೊರತುಪಡಿಸಿ ಭಾರತದಲ್ಲಿ ದೇವರು, ಆಚರಣೆ ಹಾಗೂ ಮತಧರ್ಮಗಳಿಗೆ ಅಸ್ತಿತ್ವವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ನಂಟಿದೆ. ಹಾಗಾಗಿ ದೇವರ ಮೇಲಿನ ನಂಬಿಕೆ, ಪೂಜೆ, ಆಚರಣೆ ಇವೆಲ್ಲವೂ ಆರ್ಥಿಕ ಶೋಷಣೆಯ ಸಾಧನೆಗಳೇ ಆಗಿವೆ. ಆರ್ಥಿಕ ಅಸಮಾನತೆಯನ್ನು ಇವೆಲ್ಲವೂ ನಿರಂತರವಾಗಿ ಬೆಂಬಲಿಸುತ್ತಾ, ಪೋಷಿಸುತ್ತಾ ಬರುತ್ತಿವೆ. ದೇವರು, ಅವುಗಳ ಪೂಜೆ ಹಾಗೂ ಅವುಗಳ ಮೇಲಿನ ನಂಬಿಕೆಗಳು ಆರ್ಥಿಕ ಶೋಷಣೆಯ ಹಾದಿಯಲ್ಲೇ ಪರಿಣಾಮಕಾರಿಯಾಗಿ ನಡೆಯುತ್ತಿವೆ ಇವೆರಡಕ್ಕೂ ಅವಿನಾಭಾವ ಸಂಬಂಧವಿದೆ. ಗೋಪಾಲಗೌಡರ ಮೇಲಿನ ಮಾತುಗಳಲ್ಲಿ ಇವುಗಳ ನಡುವೆ ಇರುವ ಸಂಬಂಧಗಳ ಸ್ವರೂಪ ಹಾಗೂ ಸಾಮಾಜಿಕವಾಗಿ ಅವುಗಳ ಪರಿಣಾಮದ ಸ್ವರೂಪದ ಆಳವಾದ ಜೊತೆಗೆ ಅಷ್ಟೇ ಸರಳವಾದ ವಿಶ್ಲೇಷಣೆ ಇದೆ.

ಟಿಪ್ಪಣಿಗಳು

೧. ಕೋಣಂದೂರು ವೆಂಕಪ್ಪಗೌಡ (ಸಂ), ೧೯೮೧, **ಜೀವಂತಜ್ವಾಲೆ**, ಪು. ೨೨

೨. ಶಾಮೈಥಾಳ್ (ಲೇ), ೧೯೮೧, 'ಚುನಾವಣೆಯ ಕಣದಲ್ಲಿ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೧೩೬

೩. **ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್**, ೧೯೫೬ ಏಪ್ರಿಲ್ ೨, **ವ್ಯಾಲ್ಯೂಂ-೧೪, ಪಾರ್ಟ್-೩**, ಪು. ೧೪೫೫-೧೪೫೬

೪. **ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್**, ೧೯೫೫ ಏಪ್ರಿಲ್ ೧೨, **ವ್ಯಾಲ್ಯೂಂ-೧೨, ಪಾರ್ಟ್-೩**, ಪು. ೨೦೮೯

೫. ಎಸ್.ಆರ್. ಬೊಮ್ಮಾಯಿ (ಲೇ), ೧೯೮೧, 'ಮೋಹಕ ವ್ಯಕ್ತಿತ್ವದ ಮಾತಿನ ಗಾರುಡಿಗ', ಕೋಣಂದೂರು ವೆಂಕಪ್ಪಗೌಡ (ಸಂ) **ಜೀವಂತಜ್ವಾಲೆ**, ಪು. ೨೨೭,

೬. ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ., ೨೦೧೦, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೪೭೬

೭. ಕೋಣಂದೂರು ಲಿಂಗಪ್ಪ, ೧೯೭೧, **ಶಾಸನಸಭೆಯಲ್ಲಿ ಶಾಂತವೇರಿ**, ಪು. ೨೭-೨೮

೮. ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ., ೨೦೧೦, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೪೭೮

೯. ಕೋಣಂದೂರ ಲಿಂಗಪ್ಪ, ೧೯೭೧, **ಶಾಸನಸಭೆಯಲ್ಲಿ ಶಾಂತವೇರಿ**, ಪು. ೩೦

೧೦. **ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್**, ೧೯೫೪ ಮಾರ್ಚ್ ೧೮, **ವ್ಯಾಲ್ಯೂಂ-೧೦, ಪಾರ್ಟ್-೩**, ಪು. ೯೪೪

೧೧. **ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್**, ೧೯೬೭ ಡಿಸೆಂಬರ್ ೨೧, **ವ್ಯಾಲ್ಯೂಂ-೮, ಪಾರ್ಟ್-೧-೮**, ಪು. ೪೩೯

೧೨. **ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್**, ೧೯೬೪ **ಮಾರ್ಚ್** ೧೨, **ವ್ಯಾಲ್ಯೂಂ-೪**, ಸಂ. ೧೩, ಪು. ೧೦೦೦

೧೩. **ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್**, ೧೯೫೪ ಮಾರ್ಚ್ ೨೦, **ವ್ಯಾಲ್ಯೂಂ-೧೦, ಪಾರ್ಟ್-೩**, ಪು. ೧೦೩೫

೧೪. **ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್**, ೧೯೬೪ **ಮಾರ್ಚ್** ೧೨, **ವ್ಯಾಲ್ಯೂಂ-೪**, ಸಂ. ೧೩, ಪು. ೯೯೮-೯೯೯

೧೫. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೭ ಡಿಸೆಂಬರ್ ೨೧, ವ್ಯಾಲ್ಯೂಂ-೮, ನಂ. ೧-೮, ಪು. ೪೩೭

೧೬. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩ ಸೆಪ್ಟಂಬರ್ ೦೯, ವ್ಯಾಲ್ಯೂಂ-೩, ನಂ. ೪೧, ಪು. ೩೨೧೧-೩೨೧೪

೧೭. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೪ ಏಪ್ರಿಲ್ ೦೧, ವ್ಯಾಲ್ಯೂಂ-೧೦, ಪಾರ್ಟ್-೪, ನಂ. ೩೩-೪೮, ಪು. ೧೬೧೪

೧೮. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೩ ಏಪ್ರಿಲ್ ೦೧, ವ್ಯಾಲ್ಯೂಂ-೯, ಪು. ೧೪೯೯-೧೫೦೧

೧೯. ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ. ೨೦೧೦, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೫೪೧-೫೪೨

೨೦. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩ ಮಾರ್ಚ್ ೩೦, ವ್ಯಾಲ್ಯೂಂ-೩, ನಂ. ೨೫, ಪು. ೨೧೧೯-೨೧೨೦

೨೧. ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ. ೨೦೧೦, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೫೧೦-೫೧೧

೨೨. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೪ ಜನವರಿ ೧೬, ವ್ಯಾಲ್ಯೂಂ-೧೦, ಪು. ೨೨೦-೨೨೧

೨೩. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೪ ಜೂನ್ ೨೭, ವ್ಯಾಲ್ಯೂಂ-೪, ನಂ. ೪೧-೪೬, ಪು. ೨೯೭೩-೨೯೮೦

೨೪. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩ ಸೆಪ್ಟಂಬರ್ ೧೧, ವ್ಯಾಲ್ಯೂಂ-೩, ನಂ. ೪೯, ಪು. ೩೩೩೮-೩೩೪೩

ಅಧ್ಯಾಯ: ಆರು

ಕರ್ನಾಟಕದ ಆರ್ಥಿಕತೆಯ ನೆಲೆಗಳು ಹಾಗೂ ಸಮಾಜವಾದಿ ಚಿಂತನೆ

೬.೧. 'ರಾಜಧನ ರದ್ಧತಿ'ಯನ್ನು ಕುರಿತ ಆಲೋಚನೆ (ಚಿಂತನೆ)

೬.೨. 'ಭೂ ಸೇನೆ'ಯನ್ನು ಕುರಿತ ದೂರದರ್ಶಿತ್ವ

೬.೩. 'ಸಮಾನ ಸಂಬಳ'ದ ಚಿಂತನೆ

೬.೪. 'ಬ್ಯಾಂಕ್' ಬಗೆಗಿನ ನಿಲುವು

೬.೫. ರಾಷ್ಟ್ರೀಕೃತ ಸಾರಿಗೆ (ಸಾರಿಗೆಯ ರಾಷ್ಟ್ರೀಕರಣ)

೬.೬. ಲೆವಿ ವ್ಯವಸ್ಥೆ

೬.೭. ಕೈಗಾರಿಕೆಗಳ ಸ್ವರೂಪ ಕುರಿತು

೬.೮. ತೆರಿಗೆ ನೀತಿ

೬.೯. ನೀರಾವರಿ

೬.೧೦. ಬರಗಾಲದ ಸಮಸ್ಯೆ

೬.೧೧. ಸಹಕಾರ

೬.೧೨. 'ಪಾನ ನಿರೋಧ'ದ ಬಗೆಗೆ

೬.೧೩. 'ಅರಣ್ಯ ಭೂಮಿ' ಕುರಿತು

೬.೧೪. ಕೋಲಾರದ ಚಿನ್ನದ ಗಣಿ

೬.೧೫. ಭೂಮಿ ಸಮಾಜದ ಸ್ವತ್ತು

೬.೧೬. ಧೂಮಪಾನ ಕುರಿತು

೬.೧೭. ಶರಾವತಿ ಯೋಜನೆ

ಅಧ್ಯಾಯ: ಆರು

ಕರ್ನಾಟಕದ ಆರ್ಥಿಕತೆಯ ನೆಲೆಗಳು ಹಾಗೂ ಸಮಾಜ

ಆಧುನಿಕ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತದ ಅವಧಿಯಲ್ಲಿ ಗೋಪಾಲಗೌಡ ಅವರು ಸದನವನ್ನು ಮೂರು ಬಾರಿ ಪ್ರವೇಶ ಮಾಡಿದರು. ಸದನದ ಮಾತುಕತೆಯಲ್ಲಿ ಗೌಡರು ಸಮಾಜದ ಅನೇಕ ಮಹತ್ವದ ವಿಷಯಗಳನ್ನು ಕುರಿತು ಚರ್ಚೆ ಮಾಡಿದರು. ರಾಜ್ಯದ ಆರ್ಥಿಕ ಸಮಸ್ಯೆ ಇರಬಹುದು. ರಾಜಕೀಯ ಸಮಸ್ಯೆ ಇರಬಹುದು, ಧಾರ್ಮಿಕ ಸಮಸ್ಯೆ ಇರಬಹುದು, ಇಲ್ಲವೆ ಶೈಕ್ಷಣಿಕ ಸಮಸ್ಯೆ ಇರಬಹುದು. ಇವೆಲ್ಲವನ್ನು ಕುರಿತು ಸಮಾಜವಾದಿ ದೃಷ್ಟಿಕೋನದ ಹಿನ್ನೆಲೆಯಲ್ಲಿ ಚರ್ಚೆ ಮಾಡಿದರು. ಪ್ರಸ್ತುತ ಈ ಅಧ್ಯಾಯದಲ್ಲಿ ಗೋಪಾಲಗೌಡರು ಸದನದಲ್ಲಿ ಮಾತನಾಡಿದ ಕರ್ನಾಟಕದ ಆರ್ಥಿಕತೆಯ ಬಗೆಗಿನ ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಈ ಅಧ್ಯಾಯದ ಚೌಕಟ್ಟಿನ ದೃಷ್ಟಿಯಿಂದ ಸದನದಲ್ಲಿ ಅವರು ಆಡಿದ ಮಾತುಗಳನ್ನು ಈ ಕೆಳಗಿನಂತೆ ವಿಷಯವಾರು ವಿಂಗಡಣೆ ಮಾಡಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಅವುಗಳು ಈ ಮುಂದಿನಂತಿವೆ. ರಾಜಧನ ರದ್ಧತಿ, ಭೂ ಸೇನೆ, ಸಮಾನ ಸಂಬಳ, ಬ್ಯಾಂಕ್ ರಾಷ್ಟ್ರೀಕರಣ, ರಾಷ್ಟ್ರೀಕೃತ ಸಾರಿಗೆ, ಲೆವಿ ವ್ಯವಸ್ಥೆ, ಕೈಗಾರಿಕೆಗಳು, ತೆರಿಗೆ ನೀತಿ, ನೀರಾವರಿ, ಬರಗಾಲದ ಸಮಸ್ಯೆ, ರೈತರ ಹಕ್ಕು ಮತ್ತು ರೈತರ ನೀರಿನ ಹಕ್ಕು, ಸಹಕಾರ, ಪಾನ ನಿರೋಧ, ಅರಣ್ಯ ಭೂಮಿ, ಕೋಲಾರದ ಚಿನ್ನದ ಗಣಿ, ಬೆಲೆಗಳ ಸ್ಥಿರೀಕರಣ.

೬.೧. 'ರಾಜಧನ ರದ್ಧತಿ'ಯನ್ನು ಕುರಿತ ಆಲೋಚನೆ (ಚಿಂತನೆ)

ಸ್ವಾತಂತ್ರ್ಯ ನಂತರದಲ್ಲಿ ದೇಶೀಯ ಸಂಸ್ಥಾನಗಳು ಆಯಾ ರಾಜ್ಯ ಸರ್ಕಾರದೊಂದಿಗೆ ವಿಲೀನಗೊಂಡವು. ಈ ರೀತಿ ವಿಲೀನಗೊಂಡ ನಂತರ ಪರಿಹಾರಾರ್ಥವಾಗಿ ರಾಜಮಹಾರಾಜರಿಗೆ ಮಾಶಾಸನವನ್ನು ರಾಜಧನವಾಗಿ ರಾಜ್ಯ ಸರ್ಕಾರಗಳು ಕೊಡಬೇಕಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸಮಾನರು. ಮಹಾರಾಜರಲ್ಲಿ ಇದ್ದುದು ಪ್ರಜೆಗಳು ಸೃಷ್ಟಿ ಮಾಡಿದಂತಹ ಪ್ರಜಾಸಂಪತ್ತೇ ಹೊರತು, ಮಹಾರಾಜರು ಗಳಿಸಿದ ಪಿತ್ರ ಸಂಪತ್ತು ಅಲ್ಲ ಎಂದು ಶಾಂತವೇರಿ ಗೋಪಾಲಗೌಡರು ಸದನದಲ್ಲಿ ತಮ್ಮ ವಾದವನ್ನು ಮಂಡಿಸಿ ಅದರಲ್ಲಿ ಯಶಸ್ವಿಯಾದರು. ಈ ಕುರಿತು ಅವರ ಅಭಿಪ್ರಾಯ ಹೀಗಿದೆ. ನಮ್ಮಲ್ಲಿ ಈಗ ಏಕ ನಾಯಕತ್ವ ಕೊನೆಗೊಂಡಿದ್ದರೂ ಇವೊತ್ತು ನಾವು ಈ

ಬಡತನ ಮತ್ತು ಹಣದ ಒಂದು ಕೊರತೆಯಿಂದ ತೊಳಲುತ್ತಿದ್ದರೂ ರಾಜ ಪ್ರಮುಖರಿಗೆ ೨೪ ಲಕ್ಷ ರೂಪಾಯಿಗಳ ಒಂದು ಮಾಶಾಸನವನ್ನು ಕೊಡುತ್ತಾ ಇದ್ದೇವೆ. ನನ್ನ ದೃಷ್ಟಿಯಲ್ಲಿ ಅದನ್ನು ಕೂಡ ನಿಲ್ಲಿಸಬೇಕಾದದ್ದು ದೇಶದ ಹಿತದೃಷ್ಟಿಯಿಂದ ಕ್ಷೇಮ ಎಂದು ಹೇಳಬೇಕಾಗಿದೆ" ಎಂದು ಬಡತನ ಹಾಗೂ ಹಣದ ಕೊರತೆಯಿಂದ ಬಳಲುತ್ತಿರುವ ಸನ್ನಿವೇಶವನ್ನು ಗೋಪಾಲಗೌಡರು ತಮ್ಮ ಮಾತುಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಮುಖ್ಯವಾದುದು. ಇವತ್ತು ರಾಜಕಾರಣ ಮಾಡುವವರು ಜನರು ಅನುಭವಿಸುವ ಬಡತನ ಹಾಗೂ ರಾಜ್ಯ ಬೊಕ್ಕಸದ ಹಣದ ಕೊರತೆಯನ್ನು ಗಮನಿಸುವುದೇ ಇಲ್ಲ. ಯಾಕೆಂದರೆ ಇವೆರಡೂ ಅವರಿಗೆ ಬೇಕಾಗಿಲ್ಲ. ಯಾರು ಪ್ರಜೆಗಳ ಕ್ಷೇಮದ ಬಗೆಗೆ ಆಲೋಚನೆ ಮಾಡುತ್ತಾರೊ ಅವರು ಮಾತ್ರ ಗೋಪಾಲಗೌಡರ ಹಾಗೆ ಆಲೋಚನೆ ಮಾಡಲು ಸಾಧ್ಯ. ಕೇವಲ ರಾಜರನ್ನು ಯಾಂತ್ರಿಕವಾಗಿ ವಿರೋಧಿಸುವ ಕಾರಣಕ್ಕೆ ಗೋಪಾಲಗೌಡರು ರಾಜಧನ ಪದ್ಧತಿಯನ್ನು ವಿರೋಧಿಸಿಲ್ಲ ಎಂಬುದು ಬಹಳ ಮುಖ್ಯವಾದ ಸಂಗತಿ. ಅವರ ಮಾತುಗಳಲ್ಲಿ ಆಳವಾದ ಚಿಂತನೆ ಇದೆ ರಚನಾತ್ಮಕವಾದ ಅನನ್ಯತೆ ಇದೆ.

೬.೨. 'ಭೂ ಸೇನೆ'ಯನ್ನು ಕುರಿತ ದೂರದರ್ಶಿತ್ವ

ಇವತ್ತು ಭೂ ಸೇನೆ ನಿಗಮ ಎಲ್ಲರಿಗೂ ಚಿರಪರಿಚಿತವಾಗಿದೆ. ಇದು ಮಾಡುವ ಕಾಮಗಾರಿಯ ಬಗೆಗೆ ವಿಶ್ವಾಸ ಹಾಗೂ ನಂಬಿಕೆಗಳು ಉಂಟಾಗಿವೆ. ಆದರೆ ಇಂತಹದೊಂದು ಭೂ ಸೇನೆಯನ್ನು ಸರಕಾರವು ಸ್ಥಾಪನೆ ಮಾಡಬೇಕು ಎಂದು ಶಾಂತವೇರಿ ಗೋಪಾಲಗೌಡರು ಬಹಳ ಹಿಂದೆಯೇ ಅಂದರೆ ದಿನಾಂಕ ೨೩.೦೫.೧೯೫೫ರಂದು ಸದನದಲ್ಲಿ ಪ್ರಸ್ತಾಪ ಮಾಡಿದ್ದರು ಎಂಬುದು ನಮಗೆ ಆಶ್ಚರ್ಯ ಹುಟ್ಟಿಸುತ್ತದೆ. ಶಾಂತವೇರಿ ಗೋಪಾಲಗೌಡರಿಗೆ ಎಷ್ಟೊಂದು ದೂರದೃಷ್ಟಿತ್ವ ಇತ್ತು ಎಂಬುದನ್ನು ಇದು ಸೂಚಿಸುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸಗಳನ್ನು ಮಾಡಲು ಸರ್ಕಾರದವರು ಒಂದು ಭೂ ಸೈನ್ಯವನ್ನು ಸಂಸ್ಥಾನದಲ್ಲಿ ರಚನೆ ಮಾಡಬೇಕು[೨] ಎಂದು ಅವರು ಅಭಿಪ್ರಾಯಪಡುತ್ತಾರೆ. ಏಕೆಂದರೆ ನಮ್ಮಲ್ಲಿ ಕೆಲಸಗಾರರ ಕೊರತೆ ಬಹಳವಾಗಿದೆ. ಲಕ್ಕವಳ್ಳಿಯಂತಹ ಊರಿನಲ್ಲಿ ಕೊಯಮತ್ತೂರು, ಸೇಲಂ ಮುಂತಾದ ಕಡೆಗಳಿಂದ ಕಾರ್ಮಿಕರು ಬಂದು ಕೆಲಸ ಮಾಡುತ್ತಾರೆ. ಅವರಿಗೆ ನಿಲ್ಲುವುದಕ್ಕೆ ನೆಲೆಯಿರುವುದಿಲ್ಲ. ಕಾಲರಾ ಮುಂತಾದ ರೋಗಗಳಿಂದ ನರಳುತ್ತಾರೆ. ಮೈಸೂರು ದೇಶದವರು ಶರೀರ ಶ್ರಮಕ್ಕೆ ಅಷ್ಟಾಗಿ ಬೆಲೆ ನೀಡಿರುವುದಿಲ್ಲವೆಂಬ ಅಂಶವನ್ನು ಗೋಪಾಲಗೌಡರು ಇಲ್ಲಿ ನಿರ್ಭಿಡೆಯಿಂದ ಪ್ರತಿಪಾದಿಸಿರುವುದನ್ನು ಕಾಣುತ್ತೇವೆ. ಇಂತಹ ಕಠಿಣ ಶ್ರಮಜೀವಿಗಳ ಕೊರತೆಯನ್ನು ನೀಗಿಸುವುದಕ್ಕೆ ಭೂ ಸೇನೆಯನ್ನು ರಚನೆ ಮಾಡಿ ಅಗತ್ಯವಿದ್ದ ಸ್ಥಳಗಳಲ್ಲಿ ಸಾರ್ವಜನಿಕ ಸೇವಾ ಇಲಾಖೆಯ ಕೆಲಸಗಳು ನಡೆಯಬೇಕೋ ಅಲ್ಲಿ ಅವರಿಗೆ ಅವಕಾಶ ಕೊಡಬೇಕು. ಬುಲ್‌ಡೋಜರುಗಳು, ಟ್ರಾಕ್ಟರುಗಳನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡಲು ಇವರನ್ನು ಉಪಯೋಗಿಸಿಕೊಂಡರೆ ಸಾಧ್ಯವಾಗುತ್ತದೆ. ಈ ಕಾರಣಗಳಿಂದ ಭೂ ಸೈನ್ಯದ ವಿಚಾರವನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ ಎಂಬ ಮನವಿಯನ್ನು ಗೋಪಾಲಗೌಡರು ಸದನಕ್ಕೆ ಮಾಡಿರುವುದನ್ನು ಈ ಸಂದರ್ಭದಲ್ಲಿ ಕಾಣುತ್ತೇವೆ.

೬.೩. 'ಸಮಾನ ಸಂಬಳ'ದ ಚಿಂತನೆ

ಸಮಾಜವಾದಿ ರಾಜಕಾರಣವು ಸಂಬಳದ ಸಮಾನತೆಯ ಬಗೆಗೂ ಆಲೋಚನೆ ಮಾಡಬೇಕಾಗುತ್ತದೆ. ಶಾಂತವೇರಿ ಗೋಪಾಲಗೌಡರು ಈ ಬಗ್ಗೆಯೂ ಆಲೋಚನೆ ಮಾಡಿದ್ದರು. ಇದನ್ನು ಅವರ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು. ಸಧ್ಯ ಚಾಲ್ತಿಯಲ್ಲಿರುವ ಸಂಬಳದ ರಚನೆ ಸುಮಾರು ೧೯ನೆಯ ಶತಮಾನದ ಕಾಲದಿಂದ ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಮಧ್ಯೆ ಅಲ್ಲಿ ಇಲ್ಲಿ ಕೆಲವು ಸಮಿತಿಗಳ ಶಿಫಾರಸಿನ ಮೇಲೆ ಅಲ್ಪಸ್ವಲ್ಪ ಬದಲಾವಣೆಯಾಗಿವೆ. ಆದರೂ ಸ್ವರೂಪದಲ್ಲಿ ಮೂಲಭೂತವಾಗಿ ಯಾವ ಬದಲಾವಣೆಯೂ ಆಗಿಲ್ಲವೆಂದೇ ಹೇಳಬಹುದಾಗಿದೆ. ಇಂಡಿಯಾ ಸರ್ಕಾರದವರೂ ಈ ಬಗ್ಗೆ ಹಿಂದೆ ಅನೇಕ ಕಮಿಟಿಗಳನ್ನು ಸ್ಥಾಪನೆ ಮಾಡಿದ ಪರಿಣಾಮವಾಗಿ ೧೯೬೪ರಲ್ಲೇ ಶ್ರೀನಿವಾಸಾಚಾರ್ ಅವರ ಕಮಿಟಿ ಅಸ್ತಿತ್ವಕ್ಕೆ ಬಂದಿತು. ಆ ಸಂದರ್ಭದಲ್ಲಿ ಗೋರ್‌ವಾಲ್ ಅವರು ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದರು. ಈ ವರದಿಗಳೆಲ್ಲವನ್ನೂ ನಾವು ನೋಡಿರುವುದರಲ್ಲೇ ಕೇಂದ್ರ ಸರ್ಕಾರದ ಸಂಬಳ ಸಾರಿಗೆಗಳಿಗೂ ರಾಜ್ಯ ಸರ್ಕಾರಗಳ ಸಂಬಳ ಸಾರಿಗೆಗಳಿಗೂ ಬಹಳ ಅಂತರವಿರುವುದು ಕಂಡುಬರುತ್ತದೆ ಎನ್ನುವುದರ ಮೂಲಕ ಗೋಪಾಲಗೌಡರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಬಳ ಸಾರಿಗೆಗಳ ವಿಷಯದಲ್ಲಿ ತಾರತಮ್ಯವಿರುವುದನ್ನು ಎತ್ತಿ ತೋರಿಸಿರುವುದನ್ನು ನೋಡಬಹುದಾಗಿದೆ.

ಗೋಪಾಲಗೌಡರು Basic living wages ಅಂದರೆ ಮೂಲಭೂತ ಜೀವನ ನಡೆಸಲು ಬೇಕಾಗುವ ವೇತನದ ವಿಷಯವನ್ನು ಕುರಿತು ಮಾತನಾಡುತ್ತಾರೆ. ಈ ಹಿನ್ನೆಲೆಯಲ್ಲಿ ಇಂದು ಚನ್ನಬಸಪ್ಪನವರು ಸಲಹೆ ಮಾಡಿರುವ ಹಾಗೆ ಮಾನ್ಯ ಮಾಜಿ ದಿವಾನರುಗಳ ಪೆನ್‌ಷನ್‌ಗಳನ್ನು ಇಳಿಸಬೇಕೆಂಬ ಸಲಹೆಯನ್ನು ಗೋಪಾಲಗೌಡರು ನೀಡುತ್ತಾರೆ. ಆ ಮೂಲಕ ಸುಮಾರು ೪೦,೦೦೦ ರೂಪಾಯಿಗಳನ್ನು ಉಳಿತಾಯ ಮಾಡಬಹುದಾಗಿದೆ ಎನ್ನುತ್ತಾರೆ. ಮುಂದುವರೆದು ಶ್ರೀಮನ್ಮಹಾರಾಜರ ಪ್ರೀವಿಪರ್ಸನ್ನು ಕಡಿಮೆ ಮಾಡುವುದರಿಂದಲೂ ಹಣ ಉಳಿತಾಯ ಮಾಡಬಹುದೆಂದು ಹೇಳುತ್ತಾರೆ. ಸರ್ಕಾರದವರಿಗೆ, ಮುಖ್ಯಮಂತ್ರಿಗಳಿಗೆ ಮನಸ್ಸಿದ್ದರೆ ಏನು ಬೇಕಾದರೂ ಮಾಡಬಹುದು. Socialistic Pattern of Societyಯನ್ನು ಜಾರಿಗೆ ತರುವುದಾಗಿ ಉದ್ಘೋಷಣೆ ಮಾಡಿರುವುದನ್ನು ಈ ಸಂದರ್ಭದಲ್ಲಿ ಗೌಡರು ನೆನಪಿಸುತ್ತಾರೆ. ಸರ್ಕಾರವು ಆ ದಿಕ್ಕಿನಲ್ಲಿಯೇ ಹೋಗುತ್ತೇವೆಂದು ಹೇಳಿದ್ದರಿಂದ, ಮೊದಲನೆಯದಾಗಿ ಈಗಿರುವ ಒಂದಕ್ಕೆ ೨೦೦ರಷ್ಟು ೨೫೦ರಷ್ಟಿರುವ ಸಂಬಳಗಳ ಅಂತರವನ್ನು ಒಂದಕ್ಕೆ ಹತ್ತರಷ್ಟಾದರೂ ಇರುವಂತೆ ಮಾಡುವುದಕ್ಕೆ ಪ್ರಯತ್ನ ಮಾಡಲು ಒತ್ತಾಯಿಸುತ್ತಾರೆ. ಕನಿಷ್ಟ ಸಂಬಳ ೧೦೦ ರೂಪಾಯಿ ಗರಿಷ್ಟ ಸಂಬಳ ೧,೦೦೦ ರೂಪಾಯಿಯೆಂಬುದು ಈಗಿರತಕ್ಕ ಸಂಸ್ಥಾನದ ಮತ್ತು ಕೇಂದ್ರದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿದೆಯೆನ್ನಬಹುದು. ಆದ್ದರಿಂದ ಸರ್ಕಾರದವರು ಈ ರೀತಿ ಮಾಡಿ ಮೊದಲು ಒಂದು ಮಾದರಿ ಹಾಕಿಕೊಟ್ಟರೆ, ಬೇರೆ Section ಗಳಲ್ಲಿಯೂ ಸಂಬಳ ಸಾರಿಗೆಗಳನ್ನು ಗೊತ್ತು ಮಾಡುವಾಗ, ಕಾರ್ಮಿಕರ ಜೀವನ ವೆಚ್ಚಕ್ಕೆ ಸರಿಯಾಗಿ ಸಂಬಳ ನಿಗದಿ ಮಾಡುವಾಗ ಇದನ್ನು ಮೂಲಭೂತವಾಗಿಟ್ಟುಕೊಂಡು

ಮುಂದುವರಿಯುವುದಕ್ಕೆ ಬಹಳ ಅನುಕೂಲವಾಗುತ್ತದೆ. ಈ ಕುರಿತಂತೆ, ಸರ್ಕಾರದವರು ಹಣವನ್ನು ಹೆಚ್ಚಿಸಿಕೊಳ್ಳತಕ್ಕ ಬಗ್ಗೆ ಎಲ್ಲೆಲ್ಲಿ Economy measures ಜಾರಿಗೆ ತರಬಹುದೋ ಅಲ್ಲಿ ಜಾರಿಗೆ ತಂದು; ಸಂಸ್ಥಾನದ ಆಡಳಿತ ವರ್ಗದಲ್ಲಿರತಕ್ಕ ಅಸಂತೃಪ್ತಿಯನ್ನು ಹೋಗಲಾಡಿಸುವುದು ಮತ್ತು ಮಾನವೀಯತೆಯ ಹಾಗೂ ಧಾರ್ಮಿಕ ದೃಷ್ಟಿಯಿಂದ ಈ ಪರಿಸ್ಥಿತಿಯನ್ನು ತೊಡೆದು ಹಾಕುವುದು ಅತ್ಯಗತ್ಯ[೩] ಎನ್ನುವ ಮಾತುಗಳ ಮೂಲಕ ಗೋಪಾಲಗೌಡರು ಅಂದಿನ ಸರ್ಕಾರದ ಆಡಳಿತ ವರ್ಗದಲ್ಲಿರುವ ಜನರ ಅಸಂತೃಪ್ತಿಯನ್ನು ಹೋಗಲಾಡಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಸರಿಯಾದ ಕೆಲಸಕ್ಕೆ ನ್ಯಾಯೋಚಿತ ವೇತನ ಎಂಬುದು ಫ್ರಾನ್ಸಿನ ಮಹಾಕ್ರಾಂತಿಯ ಮುಖ್ಯ ತತ್ವವಾಗಿತ್ತು. ಮನುಷ್ಯ ಸಮಾಜ ಕೆಲಸ ಮಾಡುವುದರಿಂದ ನಡೆಯುತ್ತಿದೆ. ಮಾಡಿದ ಕೆಲಸಕ್ಕೆ ನ್ಯಾಯೋಚಿತವಾದ ಪ್ರತಿಫಲವನ್ನು ಪಡೆಯಬೇಕಾಗುತ್ತದೆ ಮತ್ತು ಕೊಡಬೇಕಾಗುತ್ತದೆ. ಕೆಲಸ ಯಾವುದೇ ಇರಬಹುದು ಅದನ್ನು ಎಲ್ಲಿಯಾದರೂ ಮಾಡಿರಬಹುದು. ಆದರೆ ಕೆಲಸ ಮಾಡಿದವರಿಗೆ ನ್ಯಾಯೋಚಿತ ಸಂಬಳ ಕೇಳುವ ಹಕ್ಕು ಇರಲೇ ಬೇಕು. ಇದು ಇಲ್ಲದಿದ್ದರೆ ಕೆಲಸ ಮಾಡಲು ಬಳಸುವ ಶ್ರಮವನ್ನು ಶೋಷಣೆ ಮಾಡಿದಂತೆ ಆಗುತ್ತದೆ. ಶ್ರಮದ ಈ ಶೋಷಣೆಯಿಂದ ಸಮಾಜದಲ್ಲಿ ಆರ್ಥಿಕ ಏರುಪೇರು, ಶ್ರೇಣೀಕರಣ, ಬಡವ ಶ್ರೀಮಂತ ಎಂಬ ವರ್ಗಗಳು ಹುಟ್ಟುತ್ತವೆ. ಇದು ಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಹಾಗೂ ಶೋಷಣೆಗಳನ್ನು ಮುಂದುವರೆಸುತ್ತವೆ. ಸಮಾಜವಾದಿ ಆಲೋಚನೆಯ ಗೋಪಾಲಗೌಡರು ಸಮಾಜದ ಮುನ್ನಡೆಗೆ ಅಗತ್ಯವಾಗಿರುವ ಸಂಪತ್ತನ್ನು ಸೃಷ್ಟಿ ಮಾಡುವ ದುಡಿಮೆಗಾರರ ಪರವಾಗಿ ಮಾತನಾಡಿರುವುದು ನ್ಯಾಯೋಚಿತವಾಗಿದೆ.

೬.೪. 'ಬ್ಯಾಂಕ್' ಬಗೆಗಿನ ನಿಲುವು

೧೯೬೯ರಲ್ಲಿ ಆಗಿನ ಕೇಂದ್ರ ಸರ್ಕಾರವಾಗಿದ್ದ ಕಾಂಗ್ರೆಸ್ ಸರ್ಕಾರವು ಅದುವರೆಗೆ ಖಾಸಗಿ ವಲಯದಲ್ಲಿದ್ದ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿತು. ಇದು ಭಾರತದ ಬ್ಯಾಂಕುಗಳ ಚರಿತ್ರೆಯಲ್ಲಿ ಮತ್ತು ಹಣಕಾಸಿನ ವಹಿವಾಟಿನ ನೆಲೆಯಲ್ಲಿ ಒಂದು ಚಾರಿತ್ರಿಕವಾದ ಮಹತ್ವದ ತಿರುವು. ಕಾಂಗ್ರೆಸ್ ಸರ್ಕಾರವು ಇದನ್ನು ತನಗೆ ತಾನೇ ಮಾಡಲಿಲ್ಲ. ಇದಕ್ಕೆ ಹಿನ್ನೆಲೆಯಾಗಿ ಜನತೆಯ ನೆಲೆಯಲ್ಲಿ, ಕಾರ್ಮಿಕರ ನೆಲೆಯಲ್ಲಿ ಮತ್ತು ಭಾರತ ಹಾಗೂ ಕರ್ನಾಟಕದ ಸಮಾಜವಾದಿ ನೆಲೆಯಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂಬ ಸಾಮಾನ್ಯ ಒತ್ತಾಯಗಳು ಬರತೊಡಗಿದವು. ಈ ಹಿನ್ನೆಲೆಯಲ್ಲಿ ಗೋಪಾಲಗೌಡರು ದಿನಾಂಕ ೦೯.೦೩.೧೯೬೪ರಂದು ಸದನದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವನ್ನು ಕುರಿತು ಈ ರೀತಿಯಲ್ಲಿ ಮಾತನಾಡಿದ್ದಾರೆ. ಆ ಕಾಲಘಟ್ಟದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬ್ಯಾಂಕುಗಳನ್ನು ಬಿಟ್ಟರೆ ಮತ್ಯಾವ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಇರಲಿಲ್ಲ. ಜನಪರವಾಗಿ ಬ್ಯಾಂಕುಗಳು ವ್ಯವಹಾರವನ್ನು ನಿರ್ವಹಿಸಲು ಜನಪರವಾದ ಅರ್ಥವ್ಯವಸ್ಥೆಯ ಅಗತ್ಯವಿತ್ತು. ಆ ದಿಕ್ಕಿನಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಒಂದು ಮಹತ್ವದ ಹೆಜ್ಜೆಯಾಗಿತ್ತು. ಬ್ಯಾಂಕುಗಳ ರಾಷ್ಟ್ರೀಕರಣ ಆಗಬೇಕು ಎನ್ನುವ ಬೇಡಿಕೆ ಇದ್ದ ಸಂದರ್ಭದಲ್ಲಿ ಗೋಪಾಲಗೌಡರು

ಒತ್ತಾಯ ಪೂರ್ವಕವಾಗಿ ಎಲ್ಲಾ ಖಾಸಗಿ ಬ್ಯಾಂಕುಗಳ ವ್ಯವಹಾರವನ್ನೂ ಸರ್ಕಾರ ವಶಪಡಿಸಿಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಾರೆ. ಆದರೆ ಕೇಂದ್ರದವರು ಇನ್ನೂ ಡೋಲಾಯಮಾನವಾಗಿದ್ದಾರೆ. ರಾಜ್ಯ ಸರ್ಕಾರದವರಂತೂ ಕೆಲವು ಖಾಸಗಿ ಬ್ಯಾಂಕುಗಳೊಡನೆ ವ್ಯವಹರಿಸುವಾಗ ಆ ಬ್ಯಾಂಕುಗಳ ಮರೆಹೋಗುವ ಪರಿಸ್ಥಿತಿ ಅಂದು ಎದುರಾಗಿತ್ತು. ಇಂದು ರಾಜ್ಯ ಸರ್ಕಾರದವರು ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಕೇಂದ್ರದ ಒತ್ತಾಯವನ್ನು ತರಬೇಕು. ನಿಜಲಿಂಗಪ್ಪನವರು ಭುವನೇಶ್ವರದಿಂದ ಬರುವ ದಾರಿಯಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಬೇಕಾಗಿಲ್ಲ ಎಂದು ಹೇಳಿದಾಗ ತಾನು ಪತ್ರಿಕೆಯಲ್ಲಿ ಓದಿದ ಘಟನೆಯನ್ನು ಗೋಪಾಲಗೌಡರು ನೆನಪಿಸಿಕೊಳ್ಳುತ್ತಾರೆ. ನಿಜಲಿಂಗಪ್ಪನವರು ಭುವನೇಶ್ವರದ ತೀರ್ಮಾನಕ್ಕೆ ತದ್ವಿರುದ್ಧವಾಗಿ ಅವರು ಹೇಳಿಕೆಯನ್ನು ನೀಡಬಹುದೇ? ಸಮಾಜದಲ್ಲಿ ಖಾಸಗಿಯವರು ಬಂಡವಾಳವನ್ನು ದೇಶದಲ್ಲಿ ಬೆಳೆಸಿದ್ದಾರೆ. ಆ ಬೆಳೆಯನ್ನು ದರಿದ್ರರಿಗೆ ಹಂಚುವುದರ ಮೂಲಕ ಸಮಾಜವಾದ ಬರತಕ್ಕದ್ದಲ್ಲ ಎನ್ನುವುದು ಗೋಪಾಲಗೌಡರ ಅಭಿಪ್ರಾಯವಾಗಿರುತ್ತದೆ. ಇದೇ ಚರ್ಚೆಯನ್ನು ಮುಂದುವರೆಸುತ್ತಾ, ಮುಂದುವರಿದಿರತಕ್ಕ ಅಮೇರಿಕಾ ಮತ್ತು ರಷ್ಯಾ ಮುಂತಾದ ರಾಷ್ಟ್ರಗಳಿಂದ ಸಾಮಾನುಗಳನ್ನಾಗಲೀ ಯಂತ್ರೋಪಕರಣಗಳನ್ನಾಗಲೀ, ಆಹಾರವಸ್ತುಗಳನ್ನಾಗಲೀ ಅಥವಾ ನೇರವಾಗಿ ಹಣವನ್ನಾಗಲೀ ತಂದು ನಮ್ಮ ದೇಶದಲ್ಲಿರತಕ್ಕ ೪೫ ಕೋಟಿ ದರಿದ್ರರಿಗೆ ಹಂಚಿ ಊಟದ ವ್ಯವಸ್ಥೆ ಮಾಡುವುದರಿಂದ ಈ ದೇಶವನ್ನು ಸಮಾಜವಾದದ ರಾಷ್ಟ್ರವನ್ನಾಗಿ ಮಾಡಿ ಆರ್ಥಿಕಾಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಚೆನ್ನಾಗಿ ಮನಗಾಣಬೇಕಾಗಿದೆ. ಇವೊತ್ತು ಖಾಸಗಿ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡತಕ್ಕ ಕಾರ್ಯವನ್ನು ಕೈಗೊಳ್ಳುವುದಕ್ಕೆ ಕೇಂದ್ರದವರು ಮುಂದೆ ಬರುತ್ತಾ ಇಲ್ಲ ಎಂದು ಗೋಪಾಲಗೌಡರು ವಿಷಾದ ವ್ಯಕ್ತಪಡಿಸುತ್ತಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಸಮಾಜದಲ್ಲಿ ಸಮಾನತೆಯ ಸಮಾಜವಾದಿ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದು ಹೇಗೆ ಎಂಬುದು ಸಮಾಜವಾದಿ ರಾಜಕಾರಣದ ಬಹುಮುಖ್ಯವಾದ ಆಶಯ ಮತ್ತು ತತ್ವ. ಒಂದು ದೇಶದಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಅಂತರವನ್ನು ಕಡಿಮೆ ಮಾಡಿ ಅವರಲ್ಲಿ ಸಮಾನತೆಯಯನ್ನು ಸ್ಥಾಪನೆ ಮಾಡಬೇಕಾದರೆ ಶ್ರೀಮಂತ ದೇಶಗಳಿಂದ ಸಂಪತ್ತನ್ನೋ, ಆಹಾರ ವಸ್ತುಗಳನ್ನೋ ಅಥವಾ ಹಣವನ್ನೋ ತಂದು ಸಮಾನವಾಗಿ ಹಂಚುವುದರಿಂದ ನಿರ್ಮಾಣ ಮಾಡಬಹುದೇ? ಇದು ಸಾಧ್ಯವಿಲ್ಲ ಮತ್ತು ಈ ಮೂಲಕ ಸಮಾನತೆಯನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲ. ಸಮಾಜವಾದಿ ಚಿಂತನೆಯ ಗೋಪಾಲಗೌಡರು ತಮ್ಮ ಮೇಲಿನ ಮಾತುಗಳಲ್ಲಿ ಈ ಅಂಶವನ್ನು ಒತ್ತಿ ಹೇಳಿದ್ದಾರೆ. ಹಾಗಿದ್ದರೆ ಮುಂದೇನು ಮಾಡಬೇಕು? ಇದು ಬಹಳ ಮುಖ್ಯವಾದ ಪ್ರಶ್ನೆ. ಅಸಮಾನತೆಯ ಸಮಾಜದಲ್ಲಿ ಸಮಾನತೆಯನ್ನು ನಿರ್ಮಾಣ ಮಾಡಬೇಕು ಎಂಬುದು ಜಗತ್ತಿನ ಕಮ್ಯುನಿಸ್ಟರ ಮುಖ್ಯ ಧ್ಯೇಯ ಮತ್ತು ಆಶಯ. ಇದಕ್ಕಾಗಿ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಕ್ರಾಂತಿಕಾರಿ ಕಮ್ಯುನಿಸ್ಟರು ರಾಜಕೀಯ ಕ್ರಾಂತಿಗಳನ್ನು ನಡೆಸಿದರು. ಭಾರತದ

ಸಮಾಜವಾದಿಗಳು ಇಂತಹ ರಾಜಕೀಯ ಕ್ರಾಂತಿಯನ್ನು ಬಯಸಿದವರಲ್ಲ. ಆದರೆ ಸಮಾಜದಲ್ಲಿ ಸಮಾನತೆ ಸ್ಥಾಪನೆ ಆಗಬೇಕು ಎಂಬ ಆಶಯವನ್ನು ಹೊಂದಿದವರು. ಇದನ್ನು ಆಗು ಮಾಡುವ ವಿಧಾನಗಳು ಯಾವುವು ಎಂಬುದನ್ನು ಕುರಿತು ಇವರು ಆಲೋಚನೆ ಮಾಡಿದರು. ಇಂತಹ ರಾಜಕೀಯ ಚಿಂತನೆಯ ಫಲವಾಗಿ ಖಾಸಗಿ ವಲಯದ ಆರ್ಥಿಕ ಸಂಸ್ಥೆಗಳನ್ನು ಮತ್ತು ಖಾಸಗಿ ವಲಯದ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂಬುದು ಭಾರತದ ಹಾಗೂ ಕರ್ನಾಟಕದ ಸಮಾಜವಾದಿಗಳ ಮುಖ್ಯ ಧ್ಯೇಯವಾಗಿತ್ತು. ಈ ದೃಷ್ಟಿಯಲ್ಲಿ ಗೋಪಾಲಗೌಡರು ಸದನದಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

೬.೫. ರಾಷ್ಟ್ರೀಕೃತ ಸಾರಿಗೆ (ಸಾರಿಗೆಯ ರಾಷ್ಟ್ರೀಕರಣ)

೧೯೪೭ರಲ್ಲಿ ಭಾರತವು ಸ್ವತಂತ್ರ ರಾಷ್ಟ್ರವಾಯಿತು. ೧೯೫೦ರಲ್ಲಿ ಭಾರತವು ಗಣರಾಜ್ಯವಾಯಿತು. ಈ ಎರಡು ರಾಜಕೀಯ ಬೆಳವಣಿಗೆಗಳು ಭಾರತದ ಸಾಮಾಜಿಕ ಮತ್ತು ರಾಜಕೀಯ ಬದುಕಿನಲ್ಲಿ ಸಮಾನತೆಯನ್ನು ನಿರ್ಮಾಣ ಮಾಡುತ್ತವೆ ಹಾಗೂ ನಿರ್ಮಾಣ ಮಾಡಬೇಕು ಎಂಬುದು ಸಾಮಾನ್ಯ ಭಾರತೀಯರ ದೊಡ್ಡ ಕನಸಾಗಿತ್ತು ಹಾಗೂ ಆಸೆಯಾಗಿತ್ತು. ಆಯಾ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಸಮಾಜದಲ್ಲಿ ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಕಾರ್ಯೋನ್ಮುಖವಾಗಬೇಕಿತ್ತು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಬಡತನ ನಿವಾರಣೆಯಾಯಿತೇ? ಅಸಮಾನತೆ ನಿವಾರಣೆಯಾಯಿತೇ? ಇದು ಇವತ್ತಿನ ಪ್ರಶ್ನೆ ಮಾತ್ರವಲ್ಲ, ಸ್ವಾತಂತ್ರ್ಯೋತ್ತರ ಭಾರತದ ಕೇವಲ ಒಂದೇ ದಶಕದಲ್ಲಿ ಹೋದ ಪ್ರಶ್ನೆ. ಹಾಗಾಗಿಯೇ ಇಂತಹ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ರೈತರು, ಕಾರ್ಮಿಕರು ಮತ್ತು ಕಮ್ಯುನಿಸ್ಟರು ಅನೇಕ ಹೋರಾಟ ಮತ್ತು ಚಳವಳಿಗೆ ಮುಂದಾದರು. ಇಂತಹ ಪರಿಸ್ಥಿತಿಯಲ್ಲಿ ಆಯಾ ಸರ್ಕಾರಗಳು ಖಾಸಗಿ ವಲಯದ ಕೆಲವು ಉದ್ಯಮಗಳನ್ನು ಸರ್ಕಾರದ ವ್ಯಾಪ್ತಿಗೆ ಒಳಪಡಿಸಲು ಮುಂದಾದವು. ಇದರ ಪರಿಣಾಮವಾಗಿ ೬೦ರ ದಶಕದ ಕೊನೆಯಲ್ಲಿ ಹಾಗೂ ೭೦ರ ದಶಕದ ಆರಂಭದಲ್ಲಿ ಈ ಬಗೆಯ ಬೆಳವಣಿಗೆಗಳು ಅತ್ಯಂತ ನಿಚ್ಚಳವಾಗಿ ಕಂಡವು. ಗೋಪಾಲಗೌಡರು ಸದನದಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಯಾವ ಸಾಮಾಜಿಕ ಆಶಯದ ಮೇಲೆ ತಮ್ಮ ಮಹತ್ವದ ವಿಚಾರಗಳನ್ನು ಮಂಡಿಸಿದರೋ ಅದೇ ರೀತಿಯಲ್ಲಿ ಖಾಸಗಿ ವಲಯದಲ್ಲಿದ್ದ ಸಾರಿಗೆ ವ್ಯವಸ್ಥೆಯನ್ನು ಕೂಡ ರಾಷ್ಟ್ರೀಕರಣ ಮಾಡಬೇಕು ಎಂದು ಮಾತನಾಡಿದರು. ಅವರ ಅಭಿಪ್ರಾಯಗಳನ್ನು ಈ ರೀತಿ ಕ್ರೋಢೀಕರಿಸಬಹುದಾಗಿದೆ: ಪ್ರಸ್ತುತ ಸಾರಿಗೆ ಸಮರ್ಪಕವಾಗಿಲ್ಲದಿರುವುದು ಮಾತ್ರವಲ್ಲ ತುಂಬ ಅವ್ಯವಸ್ಥೆಯಿಂದ ಕೂಡಿದ್ದು, ಬೆಂಗಳೂರು ಸಾರಿಗೆ ವ್ಯವಸ್ಥೆಯನ್ನು ನಂಬಿಕೊಂಡಿರುವ ಪ್ರಯಾಣಿಕರಿಗೆ ಬಹಳ ಸಲ ಕಾಲಕ್ಕೆ ಸರಿಯಾಗಿ ಅವರು ತಮ್ಮ ಉದ್ದೇಶಿತ ಸ್ಥಳಗಳಿಗೆ ಹೋಗಿ ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಗೋಪಾಲಗೌಡರು ಸಾರಿಗೆ ಪ್ರಯಾಣಿಕರ ಬಗೆಗೆ ಕಾಳಜಿ ವ್ಯಕ್ತಪಡಿಸುತ್ತಾರೆ. ಎರಡು ಲಕ್ಷ ಜನರು ಕನಿಷ್ಠ ಪಕ್ಷ ಎರಡು ಲಕ್ಷ ಕೆಲಸ ಮಾಡುವ

ಗಂಟೆಗಳಾದರೂ ಬಸ್‌ಸ್ಟಾಪುಗಳಲ್ಲಿ ಪ್ರತಿದಿನ ನಷ್ಟವಾಗುತ್ತದೆ. ಬರೀ ಹಣದ ನಷ್ಟವಲ್ಲ. ಎರಡು ಲಕ್ಷ ಪ್ರಯಾಣಿಕರು ಬಸ್ ನಿಲ್ದಾಣಗಳಲ್ಲಿ ಬಸ್‌ಗಾಗಿ ಗಂಟೆಗಟ್ಟಲೆ ಕಾಯುತ್ತಿರುತ್ತಾರೆ. ಗೋಪಾಲಗೌಡರು ಅದನ್ನು ಲೆಕ್ಕ ಹಾಕಿ ಕನಿಷ್ಠತಮ ರಾಷ್ಟ್ರೀಯ ನಷ್ಟವನ್ನು ಲೆಕ್ಕಹಾಕಿರುತ್ತಾರೆ. ಒಬ್ಬ ಮನುಷ್ಯ ಒಂದು ಕಡೆಯಿಂದ ಹೋಗಿಬರುವ ಟ್ರಿಪ್ಪಿನಲ್ಲಿ ಕಾಯುವುದರಿಂದ ೨ ಲಕ್ಷ ಮ್ಯಾನ್ ಅವರ್ (ಮಾನವ ಸಮಯ) ಕನಿಷ್ಠ ನಷ್ಟವಾಗುತ್ತದೆ. ಇದು ಹಣಕ್ಕಿಂತ ಬಹಳ ದೊಡ್ಡ ನಷ್ಟವಾಗಿರುತ್ತದೆ. ಅಲ್ಲದೆ ಕೆಂಪೇಗೌಡ ರಸ್ತೆಯಲ್ಲಿ ಆರು ಗಂಟೆಯ ನಂತರ ಕಾಯುವಾಗ ತಲೆಮೇಲೆ ಕಾಗೆಗಳು ಪಾಯಿಖಾನೆ ಮಾಡುತ್ತವೆ. ಆ ತೊಂದರೆಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ ಆ ಕಷ್ಟವನ್ನೆಲ್ಲಾ ಕೂಡಿಸಿಕೊಂಡು ಬಿ.ಟಿ.ಎಸ್. ಮೇಲೆ ದಾವ ಹಾಕುವುದಕ್ಕೆ ಆಗುವುದಿಲ್ಲ ಎಂದು ಹೇಳುವ ಮೂಲಕ ಮಾತಿನ ಚಟಾಕೆಯನ್ನು ಹಾರಿಸುತ್ತಾರೆ. ಇದನ್ನೆಲ್ಲಾ ನಮ್ಮ ಜನ ಸಹಿಸಿಕೊಳ್ಳುತ್ತಾರೆ, ಆದರೆ ಅದು ಅವರಿಗೆ ಹೊಳೆಯುವುದಿಲ್ಲ. ಅದೆಲ್ಲಾ ಮಾಡಿದರೆ ನಿಮಗೆ ಕೆಲಸ ಮಾಡುವುದು ತೀರಾ ಕಷ್ಟವಾಗುತ್ತದೆ. ಆದ್ದರಿಂದ ಸಣ್ಣ ಪುಟ್ಟ ತೊಂದರೆಗಳನ್ನು ಅವರು ಹೇಳುವುದಕ್ಕೆ ಹೋಗುವುದಿಲ್ಲ. ನಿಲ್ದಾಣದಲ್ಲಿ ಜೇಬುಗಳ್ಳರಿಂದ ಆಗತಕ್ಕಂತಹ ನಷ್ಟ, ಊಟಕ್ಕೆ ಬರುತ್ತೇನೆಂದು ಹೇಳಿ ಕಾಲಕ್ಕೆ ಸರಿಯಾಗಿ ಹೋಗುವುದಕ್ಕೆ ಆಗದೆ ಇರುವುದು, ಇಂಥವುಗಳನ್ನೆಲ್ಲ ದೊಡ್ಡದು ಮಾಡಿ ಹೇಳುವುದು ಸಭ್ಯತೆಯಲ್ಲ ಎನ್ನುವುದು ಗೋಪಾಲಗೌಡರ ಅಭಿಪ್ರಾಯವಾಗಿರುತ್ತದೆ.

ಮುಂಬೈ ಕರ್ನಾಟಕದಲ್ಲಿ ಮತ್ತಿತರ ಕಡೆಗಳಲ್ಲಿ ರಸ್ತೆ ಸಾರಿಗೆಯನ್ನು ರಾಷ್ಟ್ರೀಕರಣ ಮಾಡಿದ್ದಾರೆ. ನಮ್ಮಲ್ಲಿ ಮಂಗಳೂರು ಮತ್ತು ಹಳೇ ಮೈಸೂರಿನ ಕೆಲವು ಭಾಗಗಳಲ್ಲಿ ರಾಷ್ಟ್ರೀಕರಣ ಮಾಡಿಲ್ಲ. ಒಂದು ಆಪಾದನೆಯನ್ನು ಸರ್ಕಾರದ ಮೇಲೆ ಮಾಡುವ ಉದ್ದೇಶವನ್ನು ಗೋಪಾಲಗೌಡರು ಹೊಂದಿರುತ್ತಾರೆ. ಈ ಭಾಗಗಳಲ್ಲಿ ಕೆಲವು ದೊಡ್ಡ ಮೋಟಾರ್ ಕಂಪನಿಗಳು ಅಸ್ತಿತ್ವದಲ್ಲಿವೆ; ಅವು ಸಾಕಾದಷ್ಟು ಪ್ರಭಾವಶಾಲಿ ಜನರಿಂದ ಕೂಡಿವೆ. ಮೈಸೂರು ಸರ್ಕಾರದ ಮೇಲೆ ಗಣನೀಯವಾದ ಪ್ರಮಾಣದಲ್ಲಿ ಅವು ಪ್ರಭಾವವನ್ನು ಬೀರುವ ಶಕ್ತಿಯನ್ನು ಪಡೆದಿವೆ. ಆ ಕಾರಣದಿಂದಲೇ ಈ ರಾಷ್ಟ್ರೀಕರಣ ಮಾಡತಕ್ಕ ಕೆಲಸ ಕುಂಠಿತವಾಗುತ್ತಾ ಮುಂದೆ ಮುಂದೆ ಹೋಗುತ್ತಾ ಇದೆ ಮತ್ತು ಆ ದಿಕ್ಕಿನಲ್ಲಿ ಮೈಸೂರು ಸರ್ಕಾರ ಹೋಗುವುದಕ್ಕೆ ಹೆದರುತ್ತಾ ಇದೆ ಅಥವಾ ಮುಲಾಜನ್ನು ಇಟ್ಟುಕೊಂಡಿದೆ ಎಂದು ಈ ಆಪಾದನೆಯನ್ನು ಮಾಡುವುದು ಉಚಿತ ಎನ್ನುವುದು ಅವರ ಮಾತಿನ ಒಟ್ಟು ಸಾರಾಂಶವಾಗಿದೆ. ಈ ಹಿನ್ನೆಲೆಯಲ್ಲಿ ಇವತ್ತು ಸರ್ಕಾರದ ಪರವಾಗಿ ಮಾನ್ಯ ಸಚಿವರು ಬಹಳ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ರಾಷ್ಟ್ರೀಕರಣದ ಬಗ್ಗೆ ಹೇಳಿಕೆಯನ್ನು ಕೊಡಬೇಕು; ಎಷ್ಟು ಕಾಲಾವಧಿ ಹಿಡಿಯಬಹುದು? ಈ ವ್ಯವಸ್ಥೆಯನ್ನು ಅವರು ಹೇಗೆ ನಡೆಸಿಕೊಂಡು ಹೋಗುವವರಿದ್ದಾರೆ. ನಷ್ಟವನ್ನು ಹೇಗೆ ತುಂಬಿಕೊಡುವವರಿದ್ದಾರೆ ಮತ್ತು ಈ ವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದಕ್ಕೆ ಅವರಿಂದ ಯಾವ ಸ್ಪಷ್ಟವಾದ ಉತ್ತರವೂ ಇವೊತ್ತು ನಮಗೆ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಅಲ್ಲದೆ ಆಡಳಿತದ

ಹಿತದೃಷ್ಟಿಯಿಂದ ಕಾರ್ಪೋರೇಷನ್ ಮಾಡಿದಾಗಲೂ ಇಲ್ಲಿ ಓಡಾಡುವ ಜನರು ಸಾರ್ವಜನಿಕರು. ಅವರ ಹಣವನ್ನು ಇದರಲ್ಲಿ ವಿನಿಯೋಗಿಸಿದ್ದೇವೆ? ಈ ಬಗ್ಗೆ ಸರ್ಕಾರವನ್ನು ಸಾರ್ವಜನಿಕರೆಲ್ಲರೂ ಕೇಳುವುದಕ್ಕೆ ಹೆಚ್ಚು ಬಾಧ್ಯತೆಗಳನ್ನು ಹೊಂದಿರುತ್ತಾರೆ. ಈ ವಿಷಯದಲ್ಲಿ ಮಾನ್ಯ ಸಭೆಗೆ ಉತ್ತರ ದೊರಕಬೇಕಾಗುತ್ತದೆ. ಅದು ಬಹಳ ಅಗತ್ಯ ಮತ್ತು ಮುಖ್ಯವಾಗಿದೆ" ಎನ್ನುವ ಮಾತುಗಳು ಗೋಪಾಲಗೌಡರು ಸಾರ್ವಜನಿಕರ ಪರವಾದ ನಿಲುವುಗಳಿಗೆ ಸಾಕ್ಷಿಯಾಗಿವೆ.

ಸಾರಿಗೆ ಇಲಾಖೆ ನಡೆಯುತ್ತಿರುವುದು ರೈತರು ಕೊಡುವ ಕಂದಾಯದ ಸಾರ್ವಜನಿಕ ಹಣಕಾಸಿನ ಮೂಲಕ. ಆದರೆ ಅದರ ನಿರ್ವಹಣೆ ಆಗ ಖಾಸಗಿ ವಲಯದವರಲ್ಲಿ ಇತ್ತು. ಅದರಿಂದಾಗಿ ಪ್ರಯಾಣಿಕರ ಅಗತ್ಯಗಳನ್ನು ಅವರು ಪೂರೈಸುವ ಕಡೆಗೆ ತಮ್ಮ ಗಮನವನ್ನು ಕೊಡುತ್ತಿರಲಿಲ್ಲ. ಇದನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಗೋಪಾಲಗೌಡರು ಕರ್ನಾಟಕದ ಸಾರಿಗೆ ವ್ಯವಸ್ಥೆಯನ್ನು ರಾಷ್ಟ್ರೀಕರಣ ಮಾಡಬೇಕು ಎಂಬ ಒತ್ತಾಯವನ್ನು ಸದನಲದಲ್ಲಿ ಮಾಡಿದರು. ಮುಂದುವರೆದು ಮಾತನಾಡಿದ ಅವರು ಕೇಂದ್ರ ಸರ್ಕಾರವು ಕೂಡ ಇದರ ಬಗೆಗೆ ಗಮನ ಹರಿಸಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಈಗ ಸಾರಿಗೆ ವ್ಯವಸ್ಥೆಯು ಎರಡು ವಲಯಗಳಲ್ಲಿ ಹಂಚಿ ಹೋಗಿದೆ. ಒಂದು ಸರ್ಕಾರಿ ವಲಯ ಇನ್ನೊಂದು ಖಾಸಗಿ ವಲಯ. ಪ್ರಯಾಣಿಕರು ತಮ್ಮ ಆರ್ಥಿಕತೆ ಮತ್ತು ಇನ್ನಿತರೆ ಅನುಕೂಲಗಳಿಗಾಗಿ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುದು ಬೇರೆ ಪ್ರಶ್ನೆ. ಆದರೆ ಗೋಪಾಲಗೌಡರ ಮಾತುಗಳ ಮುಖ್ಯ ಹಿತಾಸಕ್ತಿ ಏನಾಗಿತ್ತು ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ನೋಡುವ ಅಗತ್ಯವಿದೆ. ಪ್ರಯಾಣಿಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದು ಸಾರಿಗೆ ವ್ಯವಸ್ಥೆಯ ಮುಖ್ಯ ಕೆಲಸ. ಆದರೆ ಜನರು ತಮ್ಮ ಪ್ರಯಾಣವನ್ನು ಶುರುಮಾಡುವ ಸಲುವಾಗಿ ತಮ್ಮನ್ನು ಸಾಗಿಸುವ ಸಂಪರ್ಕದ ವಾಹನಗಳು ಹೊರಡುವ ಸಮಯಕ್ಕಾಗಿ ಗಂಟೆಗಟ್ಟಲೆ ಬಸ್‌ಸ್ಟ್ಯಾಂಡ್‌ಗಳಲ್ಲಿ ಕಾಯಬೇಕಾಗುತ್ತದೆ. ಹಾಗೆ ಕಾಯುವಾಗ ಅವರು ದೊಡ್ಡ ಪ್ರಮಾಣದ ಗಂಟೆಗಳನ್ನು ಯಾವುದೇ ಉತ್ಪಾದನೆ ಇಲ್ಲದೆ ಕಳೆಯಬೇಕಾಗುತ್ತದೆ. ಅನೇಕ ಸಲ ಪ್ರಯಾಣ ಮಾಡುವ ಅವಧಿಗಿಂತ ಪ್ರಯಾಣ ಮಾಡಲು ಕಾಯಬೇಕಾದ ಅವಧಿಯೇ ದೊಡ್ಡ ಪ್ರಮಾಣದಲ್ಲಿ ಇರುತ್ತದೆ. ಹೀಗೆ ಬಸ್‌ಸ್ಟ್ಯಾಂಡ್‌ಗಳಲ್ಲಿ ಪ್ರಯಾಣಿಕರು ಕಾಯುವ ಗಂಟೆಗಳನ್ನು ಒಂದು ವೇಳೆ ಅವರು ಕೆಲಸಕ್ಕೋ, ದುಡಿಮೆಗೋ, ಉತ್ಪಾದನೆಗೋ ಬಳಸಿದ್ದೇ ಆದರೆ ದೇಶದಲ್ಲಿ ಅದೆಷ್ಟು ಗಂಟೆಯ ಕೆಲಸ ಆಗಬಹುದಿತ್ತು? ಇದು ಇವತ್ತಿಗೂ ಕೂಡ ನಮ್ಮ ಮುಂದೆ ಕಟು ವಾಸ್ತವದ ಸಂಗತಿಯಾಗಿ ಕುಹಕವಾಡುತ್ತಾ ಮುಂದುವರೆದಿದೆ. ಅಂದರೆ ಇವತ್ತು ಬಸ್‌ಸ್ಟ್ಯಾಂಡುಗಳಲ್ಲಿ ಅಪಾರ ಪ್ರಮಾಣದ ಗಂಟೆಗಳು ವಿನಾಕಾರಣ ವ್ಯಯ ಆಗುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಗೋಪಾಲಗೌಡರು ಮೇಲಿನ ಮಾತುಗಳನ್ನು ಸುಮಾರು ೫೬ ವರ್ಷಗಳ ಹಿಂದೆ ಆಡಿದ್ದಾರೆ. ಒಂದು ವೇಳೆ ಗೋಪಾಲಗೌಡರೇನಾದರು ಈ ಕಾಲದಲ್ಲಿ ಬದುಕಿದ್ದು ಬೆಂಗಳೂರಿನ

ಕೇಂದ್ರ ಬಸ್‌ನಿಲ್ದಾಣವನ್ನೋ ರಾಜ್ಯದ ಇನ್ನಿತರೆ ಖಾಸಗಿ ಬಸ್‌ನಿಲ್ದಾಣಗಳನ್ನೋ ನೋಡಿದ್ದರೆ ಅವರು ಸಮಾಧಾನದಲ್ಲಿ ಆಡಿರುವ ಅಂದಿನ ಮಾತುಗಳು ಇಂದು ಬಹುಶಃ ಅತ್ಯಂತ ಆಕ್ರೋಶದಲ್ಲಿ ಬರುತ್ತಿದ್ದವು.

೬.೬. ಲೆವಿ ವ್ಯವಸ್ಥೆ

ಅನೇಕ ವರ್ಷಗಳ ಹಿಂದೆ ಮಲೆನಾಡು ಭಾಗದಲ್ಲಿ ಭತ್ತವನ್ನು ಬೆಳೆದ ರೈತರು ತಾವು ಹೊಂದಿದ್ದ ಭತ್ತದ ಜಮೀನಿನ ಪ್ರಮಾಣವನ್ನು ಆಧರಿಸಿ ಇಂತಿಷ್ಟು ಪ್ರಮಾಣದ ಭತ್ತವನ್ನು ಸ್ಥಳೀಯ ವ್ಯವಸಾಯ ಸಹಕಾರ ಸಂಘಗಳಿಗೆ ಕೊಡಬೇಕಿತ್ತು. ಆ ಸಂಘದವರು ಪಡೆದಂತಹ ಭತ್ತಕ್ಕೆ ಸರ್ಕಾರಿ ದರಲ್ಲಿ ರೈತರಿಗೆ ಹಣವನ್ನು ನೀಡುತ್ತಿದ್ದರು. ರೈತರಿಂದ ಪಡೆದ ಭತ್ತವನ್ನು ಇಲ್ಲವೆ ಅದರಿಂದ ಅಕ್ಕಿ ಮಾಡಿಸಿ ಅಕ್ಕಿಯನ್ನು ಹೆಚ್ಚಿನ ಲಾಭವಿಲ್ಲದೆ ಪಡಿತರ ರೂಪದಲ್ಲಿ ವಿತರಣೆ ಮಾಡುತ್ತಿದ್ದರು. ಇದರಿಂದ ಒಂದು ಕಡೆ ಭತ್ತವನ್ನು ಕೊಟ್ಟ ರೈತರಿಗೂ ಮತ್ತೊಂದು ಕಡೆ ಪಡಿತರ ಪಡೆಯುತ್ತಿದ್ದವರಿಗೂ ಅನುಕೂಲವಿತ್ತು. ಇಲ್ಲಿ ದಿಡೀರ್ ಲಾಭ ಎನ್ನುವುದು ಇರಲಿಲ್ಲ. ಅಂದರೆ ಒಬ್ಬರು ಬೆಳದದ್ದು ಇನ್ನೊಬ್ಬರ ಪಡಿತರವಾಗಿ ಅನ್ನವಾಗಿ ಹಂಚಲ್ಪಡುತ್ತಿತ್ತು. ಇದು ಒಂದು ರೀತಿಯಲ್ಲಿ ದೇಶೀ ವಿಧಾನದ ಅತಿ ಲಾಭವಿಲ್ಲದೆ ಜೊತೆಗೆ ಅತಿ ನಷ್ಟವೂ ಇಲ್ಲದೆ ನಡೆದುಕೊಂಡು ಹೋಗುತ್ತಿತ್ತು. ಇದನ್ನು ಲೆವಿ ಎಂದು ಕರೆಯುತ್ತಿದ್ದರು. ಭತ್ತ ಬೆಳೆಯುತ್ತಿದ್ದ ಪ್ರತಿಯೊಬ್ಬ ರೈತರು ಕಡ್ಡಾಯವಾಗಿ ತಮ್ಮ ಬೆಳೆಯ ಇಂತಿಷ್ಟು ಭತ್ತವನ್ನು ಲೆವಿಗೆ ಹಾಕುತ್ತಿದ್ದರು. ಭತ್ತವನ್ನು ಬೆಳೆಯುತ್ತಿದ್ದ ರೈತರಲ್ಲಿ ವರ್ಗ ಶ್ರೇಣೀಕರಣಗಳು ಇದ್ದವು. ೧. ಭಾರೀ ಶ್ರೀಮಂತ ಭೂ ಮಾಲೀಕರು ೨. ಮಧ್ಯಮ ವರ್ಗದ ಭೂ ಮಾಲೀಕರು ಮತ್ತು ೩. ಸಣ್ಣ ಹಿಡುವಳಿದಾರ ರೈತರು. ಈ ಮೂರು ವರ್ಗಗಳ ರೈತರಲ್ಲಿ ಶ್ರೀಮಂತ ಭೂ ಮಾಲೀಕರಿಗೆ ಮತ್ತು ಮಧ್ಯಮ ವರ್ಗದ ಭೂ ಮಾಲೀಕರಿಗೆ ತಾವು ಬೆಳೆದ ಭತ್ತವನ್ನು ಲೆವಿಗೆ ಕೊಡುವ ಆಸಕ್ತಿ ಮತ್ತು ಅಗತ್ಯ ಕಡಿಮೆಯಾಗತೊಡಗಿತು. ಯಾಕೆಂದರೆ ತಾವು ಬೆಳೆದ ಭತ್ತವನ್ನು ಲೆವಿಗೆ ಹಾಕಿದರೆ ಸಿಗುವ ಹಣಕ್ಕಿಂತ ಅದನ್ನು ಖಾಸಗಿ ವ್ಯಾಪಾರಿಗಳಿಗೆ ಮಾರಿದರೆ ಹೆಚ್ಚಿನ ಪ್ರಮಾಣದ ಹಣ ಬರುತ್ತಿತ್ತು. ಈ ಕಾರಣದಿಂದ ಸರ್ಕಾರವು ಲೆವಿ ಪದ್ಧತಿಯನ್ನು ತೆಗೆದು ಹಾಕುವ ನಿರ್ಧಾರಕ್ಕೆ ಬರುತ್ತಿತ್ತು. ಅಂತಹ ಸಂದರ್ಭದಲ್ಲಿ ಗೋಪಾಲಗೌಡರು ಸದನದಲ್ಲಿ ಲೆವಿಯನ್ನು ಕುರಿತು ಮಾತನಾಡಿದ ವಿಚಾರಗಳನ್ನು ಗಮನಿಸಬಹುದು. ಗೋಪಾಲಗೌಡರು ಶಿಸ್ತುಬದ್ಧ ಆರ್ಥಿಕ ವ್ಯವಸ್ಥೆಯನ್ನು ನಂಬುತ್ತಾರೆ, ಒಪ್ಪುತ್ತಾರೆ. ಅಂದು ಈ ಕಂಟ್ರೋಲನ್ನು ತೆಗೆದು ಹಾಕುವುದರ ಮೂಲಕ ಜನರಿಗೆ ತಿನ್ನಲಿಕ್ಕೆ ಅನ್ನವಿಲ್ಲದೆ ಅವರುಗಳನ್ನೆಲ್ಲಾ ಭಿಕ್ಷುಕರ ಕಾಲೋನಿಗೆ ಸೇರಿಸಬೇಕೆಂಬ ಮಾತುಗಳನ್ನು ಅವರು ಒಪ್ಪುವುದಿಲ್ಲ. ಜನರಿಗೆ ಅತ್ಯಗತ್ಯವಾಗಿ ಅವಶ್ಯಕವಿರತಕ್ಕ ಅನ್ನ, ಬಟ್ಟೆ ಮತ್ತು ಒಂದು ವಸತಿ ಸೌಕರ್ಯ ಇಷ್ಟನ್ನು ಪ್ರತಿಯೊಬ್ಬ ದೇಶದ ಪ್ರಜೆಗೂ ಕಲ್ಪಿಸಿಕೊಡತಕ್ಕದ್ದು ಪ್ರತಿಯೊಂದು ನಾಗರಿಕ ಸರ್ಕಾರದ ಕರ್ತವ್ಯವಾಗಿರುತ್ತದೆ. ದೇಶದ ಆರ್ಥಿಕ ಸ್ಥಿತಿಯು ತೀರ ಹದಗೆಟ್ಟು ಹೋಗಿ ಜನರು ತಮ್ಮ ಜೀವನಕ್ಕೆ ಮಳೆ ಬೆಳೆಗಳೇ ಮುಖ್ಯ

ಕಾರಣವೆಂದು ಒಂದು ಅಸಂಬದ್ಧ ನಂಜಿಕೆಗೆ ಗುರಿಯಾಗಿ, ತಿನ್ನಲಿಕ್ಕಿಲ್ಲದೆ ದೇಶದಲ್ಲಿ ಎಲ್ಲಿ ನೋಡಲಿ ಅಸಮಾಧಾನವೇ ಎದ್ದು ಕಾಣುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ನಿಟ್ಟಿನಲ್ಲಿ ಪರಿಸ್ಥಿತಿಯ ನೈಜಸ್ವರೂಪ ಹೀಗಿರುವಾಗ ಇದಕ್ಕೆ ಹೀಗಿರುವಾಗ ಇದಕ್ಕೆ ಒಂದು ಸೋಗುಹಾಕಿಕೊಂಡು, ಜನರಿಗೆ ತಿನ್ನಲು ಸಾಕಷ್ಟು ಆಹಾರ ಸಾಮಗ್ರಿಗಳನ್ನು ಒದಗಿಸಲು ಸಾಮರ್ಥ್ಯವಿಲ್ಲದೆ ಈ ದಿವಸ ಈ ಕಂಟ್ರೋಲುಗಳನ್ನು ಸಡಿಲ ಮಾಡುತ್ತೇವೆಂದು ಹೇಳುತ್ತಿರುವುದನ್ನು ನೋಡಿದರೆ, ದೇಶದಲ್ಲಿ ಅತಿಜಾಗ್ರತೆಯಾಗಿ ಸಂಭವಿಸಲಿರುವ ದೊಡ್ಡ ಕ್ಷಾಮದ ಮಾರಿಗೆ ದೇಶದ ಜನತೆಯನ್ನು ಬಲಿಗೊಡಲು ಇದೊಂದು ಸನ್ನಾಹವೆಂದು ಕಂಡುಬರುತ್ತಿದೆ[೬] ಎಂದು ಮುಂದೆ ಬರಲಿರುವ ಭೀಕರ ದುಸ್ಥಿತಿಯನ್ನು ಕುರಿತು ಗೋಪಾಲಗೌಡರು ಎಚ್ಚರಿಸುತ್ತಿರುವುದನ್ನು ಈ ಮಾತುಗಳಲ್ಲಿ ಕಾಣಬಹುದಾಗಿದೆ.

ಲೆವಿ ಪದ್ಧತಿಯಿಂದ ಸ್ಥಳೀಯ ವ್ಯವಸಾಯ ಸೇವ ಸಹಕಾರಿ ಸಂಘಗಳಲ್ಲಿ ಪಡಿತರ ಪಡೆಯುತ್ತಿದ್ದ ಸಾಮಾನ್ಯ ಜನರ ದೈನಂದಿನ ಆಹಾರದ ಅಗತ್ಯಗಳು ಅವರ ಆರ್ಥಿಕ ಪರಿಸ್ಥಿತಿಯಲ್ಲಿ ನಡೆದುಕೊಂಡು ಹೋಗುತ್ತಿದ್ದವು. ಆ ಸಂದರ್ಭದಲ್ಲಿ ಸೊಸೈಟಿಯಿಂದ ಕೊಂಡು ತರುವ ಅಕ್ಕಿಯ ದರಕ್ಕಿಂತ ಅಂಗಡಿಗಳಲ್ಲಿ ಕೊಂಡು ತರುವ ಅಕ್ಕಿ ದರ ಹೆಚ್ಚಾಗಿರುತ್ತಿತ್ತು. ಈ ಕಾರಣದಿಂದ ಜನಸಾಮಾನ್ಯರು ಸೊಸೈಟಿಯ ಅಕ್ಕಿಯನ್ನೇ ಅವಲಂಬಿಸಿದ್ದರು. ಲೆವಿಗೆ ಭತ್ತ ಹಾಕುವ ಸರ್ಕಾರದ ಕಂಟ್ರೋಲ್ ಏನಿತ್ತೋ ಅದನ್ನು ಸಡಿಲಗೊಳಿಸಲು ಸರ್ಕಾರ ಮುಂದಾದಾಗ ಅದರಿಂದ ಮುಂದೆ ಉಂಟಾಗಬಹುದಾದ ಆಹಾರದ ಸಮಸ್ಯೆ ಏನು ಎಂಬುದನ್ನು ಗೋಪಾಲಗೌಡರ ಮೇಲಿನ ಮಾತುಗಳು ನಮಗೆ ವಿಷದಪಡಿಸುತ್ತವೆ. ಗೋಪಾಲಗೌಡರಿಗೆ ಅತ್ಯಂತ ದೂರಗಾಮಿ ಆಲೋಚನೆ ಇತ್ತು ಎಂಬುದನ್ನು ಅವರ ಮೇಲಿನ ಮಾತುಗಳು ಸೂಚಿಸುತ್ತವೆ. ಯಾಕೆಂದರೆ ಇವತ್ತು ರೈತರು ತಾವು ಬೆಳೆದ ಭತ್ತವನ್ನು ಲೆವಿಗೆ ಕೊಡುವ ಕಂಟ್ರೋಲನ್ನು ಸರ್ಕಾರ ಸಂಪೂರ್ಣ ತೆಗೆದುಹಾಕಿದೆ. ಜಾಗತೀಕರಣದ ಆರ್ಥಿಕ ವ್ಯವಸ್ಥೆಯಲ್ಲಿ ಮಾರುಕಟ್ಟೆಯ ಎಲ್ಲಾ ವಲಯಗಳು ಸಂಪೂರ್ಣ ಖಾಸಗೀಕರಣಗೊಂಡಿವೆ. ಹಾಗಾಗಿ ಆಹಾರವನ್ನು ಒಳಗೊಂಡಂತೆ ಒಂದು ಗುಂಡು ಪಿನ್ನನ್ನು ಕೂಡ ಇವತ್ತು ಖಾಸಗಿ ಉದ್ಯಮಗಳು ಉತ್ಪಾದನೆ ಮಾಡಿ ಕೇವಲ ಅವರ ಲಾಭಕ್ಕಾಗಿ ಮಾತ್ರ ಮಾರಾಟ ಮಾಡುತ್ತಿವೆ. ಇದರಿಂದಾಗಿ ದೀನ ದಲಿತರ ಹಾಗೂ ಬಡವರ ದೈನಂದಿನ ಅಗತ್ಯಗಳನ್ನು ಪೂರೈಸಿಕೊಳ್ಳಲು ಇವರು ದಿನನಿತ್ಯ ಹೆಣಗಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹದ್ದನ್ನು ಅದೆಷ್ಟೋ ವರ್ಷಗಳ ಹಿಂದೆಯೇ ಗೋಪಾಲಗೌಡರು ಊಹಿಸಿದ್ದರು ಎಂಬುದು ಒಂದು ಕಡೆ ಅವರ ಸಾಮಾಜಿಕ ಕಳಕಳಿಯನ್ನು ಮತ್ತೊಂದು ಕಡೆ ಅವರ ದೂರಗಾಮಿ ಆಲೋಚನೆಯನ್ನು ತೋರಿಸುತ್ತದೆ.

೬.೭. ಕೈಗಾರಿಕೆಗಳ ಸ್ವರೂಪ ಕುರಿತು

ಸಮಾಜವು ಹಲವು ಬಗೆಯ ಉತ್ಪಾದನೆಯ ವಸ್ತುಗಳ ಬಳಕೆಯಿಂದ ನಡೆಯುತ್ತಿದೆ. ಉದಾಹರಣೆಗೆ ಕೃಷಿಯ ಉತ್ಪನ್ನಗಳು, ತೋಟಗಾರಿಕೆಯ ಉತ್ಪನ್ನಗಳು, ಮೀನುಗಾರಿಕೆಯ ಉತ್ಪನ್ನಗಳು,

ಕೈಗಾರಿಕಾ ಉತ್ಪನ್ನಗಳು, ಗುಡಿಕೈಗಾರಿಕೆಯ ಉತ್ಪನ್ನಗಳು ಮತ್ತು ಇವತ್ತಿನ ಜಾಗತೀಕರಣದ ಸಂದರ್ಭದ ಹಣಕಾಸು ಬಂಡವಾಳ ಉತ್ಪನ್ನಗಳು ಇವುಗಳಿಂದ ಸಮಾಜ ನಡೆಯುತ್ತಿದೆ. ಭಾರತದ ಸಾಂಪ್ರದಾಯಿಕವಾಗಿ ಕೃಷಿ ಪ್ರಧಾನವಾದ ದೇಶ ಮತ್ತು ಗುಡಿ ಕೈಗಾರಿಕೆಗಳ ಹಾಗೂ ಕರಕುಶಲ ಕರ್ಮಿಗಳ ದೇಶ. ಇಂತಹ ದೇಶಕ್ಕೆ ಬ್ರಿಟಿಷರ ಆಗಮನವು ಒಂದು ಕಡೆ ಬಂಡವಾಳವನ್ನು ಮತ್ತೊಂದು ಕಡೆ ಬೃಹತ್ ಕೈಗಾರಿಕೆಗಳನ್ನು ತಂದಿತು. ಕೈಗಾರಿಕಾ ಉತ್ಪಾದನೆಗಳ ಬಳಕೆಯು ದೊಡ್ಡ ಮಾರುಕಟ್ಟೆಗಳನ್ನು ಮತ್ತು ಬೃಹತ್ ಪ್ರಮಾಣದ ಗ್ರಾಹಕರನ್ನು ನಿರ್ಮಾಣ ಮಾಡಿತು. ಇನ್ನೊಂದು ಅರ್ಥದಲ್ಲಿ ಈ ವಸ್ತುಗಳ ಬಳಕೆಯನ್ನು ಆಧುನಿಕತೆ ಎಂದು ಕರೆಯಲಾಯಿತು. ಇದರ ಪರಿಣಾಮವಾಗಿ ಕರಕುಶಲ ಕರ್ಮಿಗಳು ಮರೆಯಾದರು ಮತ್ತು ಗುಡಿ ಕೈಗಾರಿಕೆಗಳು ಕೆಲವೇ ಕೆಲವು ಸಮಯದಲ್ಲಿ ಕಾಣೆಯಾದವು. ಮನೆ ಬಳಕೆಯ ವಸ್ತುಗಳನ್ನು ಬಿದಿರುಗಳಿಂದ ತಯಾರಿಸಲಾಗುತ್ತಿತ್ತು. ಯಾವಾಗ ಕೈಗಾರಿಕಾ ಉತ್ಪಾದನೆಗಳು ಬಂದವೋ ಆಮೇಲೆ ಬಿದಿರಿನ ತಯಾರಿಕೆಯ ವಸ್ತುಗಳ ಬಳಕೆಯ ಜಾಗದಲ್ಲಿ ಪ್ಲಾಸ್ಟಿಕ್, ಫೈಬರ್ ಮತ್ತು ಕಬ್ಬಿಣದ ವಸ್ತುಗಳು ಸ್ಥಾನವನ್ನು ಪಡೆದುಕೊಂಡವು. ಇದರ ಪರಿಣಾಮ ಅತ್ಯಂತ ಖಚಿತ ಮತ್ತು ಸ್ಪಷ್ಟ, ತಮ್ಮ ಜೀವನೋಪಾಯಕ್ಕಾಗಿ ಬಡ ಕುಶಲಕರ್ಮಿಗಳು ಹಾಗೂ ಗುಡಿಕೈಗಾರಿಕೆಯ ತಯಾರಕರು ತಮ್ಮ ಕೆಲಸವನ್ನೇ ಕಳೆದುಕೊಂಡರು. ಅವರು ಅಘೋಷಿತ ರೂಪದಲ್ಲಿ ನಿರುದ್ಯೋಗಿಗಳಾದರು. ಇಡೀ ಭಾರತದಾದ್ಯಂತ ಈ ಆರ್ಥಿಕ ಪರಿಸ್ಥಿತಿ ನಿರ್ಮಾಣವಾಯಿತು. ಗುಡಿ ಕೈಗಾರಿಕೆಗಳು ಮತ್ತು ಕರಕುಶಲ ಕರ್ಮಿಗಳು ಎಷ್ಟು ಪ್ರಮಾಣದಲ್ಲಿ ಮತ್ತು ಎಷ್ಟು ಬೇಗ ಮೂಲೆ ಸೇರುತ್ತಾರೋ ಅದಕ್ಕೆ ವಿರುದ್ಧವಾಗಿ ಬೃಹತ್ ಕೈಗಾರಿಕೆಗಳು ಬೆಳೆಯತೊಡಗಿದವು ಮತ್ತು ವಿಸ್ತರಿಸತೊಡಗಿದವು. ಈ ಅಪಾಯವನ್ನು ಮತ್ತು ಸಾಮಾನ್ಯ ಜನರ ಆರ್ಥಿಕ ಸಂಕಟವನ್ನು ಮುಂದಾಗಿ ಆಲೋಚನೆ ಮಾಡಿದ್ದ ಗೋಪಾಲಗೌಡರು ಇದಕ್ಕೆ ಸಂಬಂಧಪಟ್ಟಂತೆ ೧೯೫೩ ಮಾರ್ಚ್ ೨೬ರಂದು ಸದನದಲ್ಲಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗೃಹ ಕೈಗಾರಿಕೆಗಳ ವಿಚಾರ ತಿಳಿಸಬೇಕೆಂದರೆ, ಇವು ಈಗಾಗಲೇ ಅನೇಕ ಜನರ ಕೈಬಿಟ್ಟು ಹೋಗಿವೆ. ನಮ್ಮಲ್ಲಿ ಗೃಹ ಕೈಗಾರಿಕೆಗೆ ಅತ್ಯಗತ್ಯವಾದ ಬೆತ್ತ, ಬಿದಿರು, ಬೆಂಡು, ಗಂಧ ಇತ್ಯಾದಿ ಕಚ್ಚಾ ಮಾಲುಗಳು ಹೇರಳವಾಗಿ ದೊರೆಯುತ್ತಿವೆ. ಓಲೆಗರಿ ನಮ್ಮಲ್ಲಿ ವಿಶೇಷವಾಗಿದೆ. ಚೈನಾ, ಜಪಾನ್ ದೇಶಗಳಲ್ಲಿ ತಯಾರಿಸುವಂತಹ ಛತ್ರಿಗಳನ್ನು ನಾವೂ ಸಹ ಇಲ್ಲಿ ಈ ಓಲೆ ಗರಿಗಳಿಂದ ತಯಾರಿಸಬಹುದು. ನಮ್ಮ ಮಲೆನಾಡಿನಲ್ಲಿ ಈಗಲೂ ಈ ಓಲೇ ಗರಿಗಳ ಛತ್ರಿ ಚಾಲ್ತಿಯಲ್ಲಿರುತ್ತವೆ. ಹೀಗೆ ನಮ್ಮಲ್ಲಿ ಅನೇಕ ಗೃಹ ಕೈಗಾರಿಕೆಗಳಿಗೆ ಅತ್ಯವಶ್ಯಕವಾದ ಕಚ್ಚಾ ಮಾಲು ದೊರೆಯುತ್ತಿದ್ದರೂ ಜನರು ಅವುಗಳಿಂದ ಯಾವ ಉತ್ಪತ್ತಿಯನ್ನೂ ಪಡೆಯದೆ ಹಾಳಾಗುತ್ತಿದ್ದಾರೆ[೭] ಎಂಬ ವಾಸ್ತವ ಪರಿಕಲ್ಪನೆಯ ಜೊತೆಗೆ ವಿಷಾದವನ್ನು ಗೋಪಾಲಗೌಡರು ಈ ಮಾತುಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಇದಕ್ಕೆಲ್ಲಾ ಮೂಲ ಕಾರಣ ಜನರಿಗೆ ಉತ್ತೇಜನ ನೀಡುವವರಿಲ್ಲ ಎಂಬುದು ಅವರ

ಗಟ್ಟಿಯಾದ ನಿಲುವಾಗಿದೆ. ನಮ್ಮ ದೇಶದ ಮಾಲುಗಳಿಗೆ ಮಾನ್ಯತೆ ಇಲ್ಲ. ಹೀಗಾಗಿ ನಮ್ಮ ದೇಶ ಮುಂದುವರಿಯಲು ಸಾಧ್ಯವಿಲ್ಲ. ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬದಲ್ಲಿ ಗುಡಿಗಾರರು ಗಂಧದ ಮರದಲ್ಲಿ ಅನೇಕ ಸಾಮಾನುಗಳನ್ನು ಮತ್ತು ತೀರ್ಥಹಳ್ಳಿಯ ಕವಲೇದುರ್ಗದಲ್ಲಿ ಬಳಪದ ಕಲ್ಲಿನ ಗಡಿಗೆ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಹೀಗೆ ಯಾವ ಯಾವ ಪ್ರದೇಶದಲ್ಲಿ ಕಚ್ಚಾ ಮಾಲು ಅಗ್ಗವಾಗಿ ದೊರೆಯುತ್ತವೆಯೋ ಅಂತಹ ಕಡೆಗಳಲ್ಲಿ ಜನರು ಈಗಲೂ ಕೂಡ ಅವರಿಗೆ ಮೊದಲಿನಿಂದಲೂ ತಿಳಿದುಬಂದಿರತಕ್ಕಂತಹ ಒಂದು ಕ್ರೂಡ್ ರೀತಿಯಲ್ಲಿ ಕೆಲವು ಸಾಮಾನುಗಳನ್ನು ತಯಾರು ಮಾಡುತ್ತಿದ್ದಾರೆ. ಆದರೆ ಈ ಕೈಗಾರಿಕೆಯನ್ನು ಇಂಪ್ರೂ ಮಾಡಬೇಕಾದರೆ ಅವರಿಗೆ ಬಂಡವಾಳ ಬೇಕು. ಇಂತಹ ಸಂದರ್ಭದಲ್ಲಿ ಸರ್ಕಾರದವರು ಅವರಿಗೆ ಕೊಂಚ ಮಟ್ಟಿಗೆ ಬಂಡವಾಳವನ್ನು ಒದಗಿಸುವುದು ಒಳ್ಳೆಯದು ಎಂದು ಗೃಹಕೈಗಾರಿಕೆಗಳಿಗೆ, ಕುಲಕಸುಬುಗಳಿಗೆ ಸರ್ಕಾರದ ಪ್ರೋತ್ಸಾಹ ಎಷ್ಟು ಮುಖ್ಯವಾದುದು ಎಂಬುದು ಗೋಪಾಲಗೌಡರ ಈ ಚರ್ಚೆಯ ಸಾರವಾಗಿದೆ.

ಸಮಾಜವಾದಿ ರಾಜಕಾರಣವು ಸಹಜವಾಗಿ ಜನರ ಪರವಾಗಿರುತ್ತದೆ. ಜನರ ಪರವಾಗಿ ಇರುವುದು ಎಂದರೆ ಜನರ ದುಡಿಮೆಯ ಪರವಾಗಿರುವುದು ಎಂದು ಅರ್ಥ. ಜನರ ದುಡಿಮೆಯ ಪರವಾಗಿರುವುದು ಎಂದರೆ ಜನರ ಉತ್ಪಾದನೆಯ ಪರವಾಗಿರುವುದು ಎಂದು ಅರ್ಥ. ಆದರೆ ಇಲ್ಲಿಯ ಬಹಳ ಮುಖ್ಯವಾದ ಸಮಸ್ಯೆ ಎಂದರೆ ಜನರು ಮಾಡುವ ಉತ್ಪಾದನೆಯು ಕನಿಷ್ಠ ಉತ್ಪಾದನೆಯ ವೆಚ್ಚವಾದ ಬಂಡವಾಳವನ್ನು ಬೇಡುತ್ತದೆ. ಈ ಬಂಡವಾಳವನ್ನು ದುಡಿಯುವ ಜನರು ಎಲ್ಲಿಂದ ತರಬೇಕು ಎಂಬುದು. ಒಂದು ಇದು ಕೂಡು ಬಂಡವಾಳದಿಂದ ಸಾಧ್ಯವಾಗಬಹುದು; ಇಲ್ಲ ಎನ್ನುವುದಾದರೆ ಸರಕಾರವೇ ಇದನ್ನು ಭರಿಸಬೇಕಾಗುತ್ತದೆ. ಗೋಪಾಲಗೌಡರ ಆಲೋಚನೆ ಇದ್ದುದು ಸರಕಾರವೇ ಜನರ ಗುಡಿ ಕೈಗಾರಿಕೆಗೆ ಬೇಕಾದ ಬಂಡವಾಳವನ್ನು ಭರಿಸಬೇಕು ಎಂಬುದಾಗಿತ್ತು. ಜನರ ಉತ್ಪಾದನೆಯ ವಸ್ತುಗಳ ಮಾರಾಟದ ಪ್ರಶ್ನೆಯೂ ಬರುತ್ತದೆ. ಇದು ಮಾರುಕಟ್ಟೆಯ ಪ್ರಶ್ನೆಯೂ ಹೌದು. ಈ ಬಗೆಗೆ ಗೋಪಾಲಗೌಡರು ಆಲೋಚಿಸಿದಂತೆ ಕಾಣುವುದಿಲ್ಲ.

೬.೮. ತೆರಿಗೆ ನೀತಿ

ಯಾವುದೇ ಸರ್ಕಾರವು ತನ್ನ ಸಂಪನ್ಮೂಲಗಳಿಗಾಗಿ ಜನರ ಮೇಲೆ ವಿವಿಧ ಬಗೆಯ ತೆರಿಗೆಗಳನ್ನು ಹಾಕುತ್ತದೆ. ತೆರಿಗೆ ಯಾವುದೇ ರೂಪದ್ದಿರಲಿ, ಹಾಗೆ ತೆರಿಗೆಯನ್ನು ವಿಧಿಸುವಾಗ ಆಯಾ ಆಳುವ ಸರ್ಕಾರಗಳು ಜನರ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಗಳನ್ನು ಗಂಭೀರವಾಗಿ ಪರಿಗಣಿಸಿ ಅದರ ಆಧಾರದ ಮೇಲೆ ತೆರಿಗೆಗಳನ್ನು ಹಾಕಬೇಕಾಗುತ್ತದೆ. ಇದು ಜನರ ನೆಲೆಯಿಂದ ತೆರಿಗೆ ರೂಪುಗೊಳ್ಳುವ ದೃಷ್ಟಿಕೋನ ಮತ್ತು ವಿನ್ಯಾಸಕ್ಕೆ ಸಂಬಂಧಿಸಿದ ಸಂಗತಿ. ಆದರೆ ಎಷ್ಟೋ ಸಲ ಸರ್ಕಾರ ಜನರ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಗಳನ್ನು ಮುಖ್ಯವಾಗಿ ಪರಿಗಣಿಸದೇ ತೆರಿಗೆಗಳನ್ನು ವಿಧಿಸುತ್ತದೆ. ನೀತಿ ನಿಯಮಗಳ ನಿರೂಪಕರು ಇದನ್ನು ಕುರಿತು ಆಲೋಚಿಸಬೇಕಾಗುತ್ತದೆ.

ಆದರೆ ಅನೇಕ ಸಲ ಜನಪ್ರತಿನಿಧಿಗಳಿಗೆ ಇದರ ಬಗೆಗೆ ಕಾಳಜಿ ಇರುವುದಿಲ್ಲ ಮತ್ತು ಆಸಕ್ತಿಯೂ ಇರುವುದಿಲ್ಲ. ಆದರಿಂದಾಗಿ ತೆರಿಗೆಗಳನ್ನು ರೂಪಿಸುವಾಗ ಆರ್ಥಿಕ ಏರುಪೇರುಗಳನ್ನು ಮುಖ್ಯವೆಂದು ಪರಿಗಣಿಸದಿರುವ ಸಾಧ್ಯತೆಯೇ ಜಾಸ್ತಿ. ಇದನ್ನು ಕುರಿತು ಗೋಪಾಲಗೌಡರು ಸದನದಲ್ಲಿ ಈ ರೀತಿ ಪ್ರಸ್ತಾಪಿಸಿದ್ದಾರೆ.

ತೆರಿಗೆ ಹಾಕುವಾಗ, ಪ್ರಗತಿಪರವಾದ ಆರ್ಥಿಕ ಪದ್ಧತಿಯನ್ನು ದೇಶದಲ್ಲಿ ರೂಢಿಸಿಕೊಂಡು ಬರುವಾಗ, ಮೂಲಭೂತವಾಗಿ ಅನುಸರಿಸಬೇಕಾದ ಕೆಲವು ನಿಯಮಗಳಿವೆ. ಅವುಗಳನ್ನು ಅಸರಿಸಬೇಕು. ಇಂತಹ ಹೆಜ್ಜೆಯನ್ನಿಡುವುದಕ್ಕೆ ದುರದೃಷ್ಟವಶಾತ್ ನಮ್ಮ ಕಾಂಗ್ರೆಸ್ ಸರ್ಕಾರಗಳು ಈ ಹೊತ್ತು ಸಿದ್ಧವಾಗಿಲ್ಲ. ಮಿಶ್ರ ಆರ್ಥಿಕ ಪದ್ಧತಿಯನ್ನು ನಡೆಸಿಕೊಂಡು ಹೋಗುವುದರಲ್ಲಿ ಕಾಲ ವ್ಯರ್ಥ ಮಾಡಿಕೊಂಡು ಬಂದಿವೆ. ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯ ಅಗತ್ಯವಿದೆ. ಇದರ ಬಗ್ಗೆ ಎಷ್ಟು ಪರಿಹಾರ ಕೊಡಬೇಕೆಂಬುದಲ್ಲಿ ಕಾಲ ವ್ಯಯವಾಗುತ್ತಿದೆ[೮] ಎನ್ನುತ್ತಾರೆ. ಇದರಿಂದಲೇ ಈ ಹೊತ್ತು 'ಕ್ಯಾಪಿಟಲ್ ಲೆವಿ', 'ಡೆತ್ ಡ್ಯೂಟಿ' ಹಾಕುವುದೇ ಆಗಲಿ, ಮೈಸೂರು ಬ್ಯಾಂಕು ಅಂತಹ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡುವುದೇ ಆಗಲಿ, ಇಂತಹ ಮೂಲಭೂತ ಬದಲಾವಣೆ ಮಾಡುವಂತಹ, ದೇಶದ ಆರ್ಥಿಕ ಸ್ಥಿತಿಯನ್ನು ಭದ್ರವಾಗಿ ಕಟ್ಟುವಂತಹ ನೀತಿಯನ್ನನುಸರಿಸಿಕೊಂಡು ಬರುತ್ತಿಲ್ಲ ಎಂಬ ವಿಷಾದ ಅವರ ಮಾತುಗಳಲ್ಲಿರುವುದನ್ನು ಗಮನಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಹಣ ಬೇಕಾದರೂ ಕೂಡ ಸೇಲ್ಸ್ ಟ್ಯಾಕ್ಸಿನಂತಹ ಸಾಮಾನ್ಯ ಜನತೆಯ ಮೇಲೆ ಬೀಳುವ, ಸಾರ್ವತ್ರಿಕವಾಗಿ ಕಿರುಕುಳ ಕೊಡುವ ಕೆಲವು ತೆರಿಗೆಗಳನ್ನು ಜಾರಿಗೆ ತರುವುದಾಗಿದೆ ಎಂದು ಹೇಳುವ ಮೂಲಕ ತೆರಿಗೆ ಪದ್ಧತಿಯ ಸಾಧಕ-ಬಾಧಕಗಳನ್ನು ಸದನದಲ್ಲಿ ತೆರೆದಿಡುತ್ತಾರೆ.

ಸರ್ಕಾರದವರಿಗೆ ಯಾವಾಗಲೂ ಹಣದ ಅಡಚಣೆ ಇದ್ದೇ ಇರುವುದರಿಂದ ಅವರಿಗೆ ಬೇಕಾಗತಕ್ಕ ಹಣಕ್ಕಾಗಿ ಯಾವುದೋ ಒಂದು ತೆರಿಗೆ ಹಾಕಿ ಬಿಡುತ್ತಾರೆ. ಈಗ ಅವರು ಹಾಕಿರತಕ್ಕ ಸೇಲ್ಸ್‌ಟ್ಯಾಕ್ಸ್ ಎಂಬ ತೆರಿಗೆ ಶ್ರೀಮಂತರು ಮೊದಲುಗೊಂಡು ಕೇವಲ ನಿರ್ಗತಿಕರಾಗಿರುವವರ ಮೇಲೆಲ್ಲಾ ಬೀಳುವಂತಹದ್ದಾಗಿದೆ, ಇದೊಂದು ದುರಂತದ ಸಂಗತಿ. ಹೀಗೆ, ಇವರು ಅಂದರೆ ಸರ್ಕಾರದವರು ವಿವೇಚನೆ ಇಲ್ಲದೆ ಇರತಕ್ಕ ತೆರಿಗೆಗಳನ್ನು ಆಗಿಂದಾಗ್ಗೆ ಜಾರಿಗೆ ತರುತ್ತಲೇ ಇರುವುದರಿಂದ ದೇಶದಲ್ಲಿರತಕ್ಕ ಜನರ ಸ್ಥಿತಿಗತಿಗಳು ತೀರಾ ಕೆಟ್ಟು ಹೋಗಿರುವುದರತ್ತ ಗಮನ ಸೆಳೆಯುತ್ತಾರೆ.

ಮತ್ತೊಂದು ಕಡೆ ದೇಶದಲ್ಲಿ ಪಾನ ನಿರೋಧವನ್ನು ಜಾರಿಗೆ ತರುತ್ತೇವೆಂದು ಹೇಳಿ ಈ ಸೇಲ್ಸ್‌ಟ್ಯಾಕ್ಸನ್ನು ಜನರ ಮೇಲೆ ಹೇರಿದ ನಂತರ ಅದನ್ನು ದೇಶಾದ್ಯಂತವೂ ಜಾರಿಗೆ ತಾರದೆ ಹಾಗೆಯೇ ಕೈ ಬಿಟ್ಟಿದ್ದಾರೆ. ಅದರಿಂದ ಜನರಿಗೆ ಉಂಟಾಗುತ್ತಿರುವ ಕಿರುಕುಳಗಳನ್ನಂತೂ ಹೇಳತೀರದಾಗಿದೆ. ಹೀಗೆ ಒಂದು ಕಡೆ ಜನರಿಗೆ ತುಂಬ ಕಿರುಕುಳ ಆದವು. ಮತ್ತೊಂದು ಕಡೆ ಸರ್ಕಾರಕ್ಕೆ ಬರುತ್ತಿದ್ದಂತಹ ಅಪಾರ ಆದಾಯಕ್ಕೂ ಕಲ್ಲು ಬಿತ್ತು. ಹೀಗೆ ಯಾವ ಒಂದು

ವಿಚಾರವನ್ನೇ ತೆಗೆದುಕೊಳ್ಳಲಿ, ಈ ಕಾಂಗ್ರೆಸ್ ಸರ್ಕಾರದಲ್ಲಿ ಒಂದು ನಿರ್ದಿಷ್ಟವಾದ ನೀತಿಯಿಲ್ಲವೆಂಬುದು ಎಂಬ ಅಂಶವನ್ನು ಮನವರಿಕೆ ಮಾಡುತ್ತಾ ಆ ಪಕ್ಷದವರನ್ನು ಕಟುಟೀಕೆಗೆ ಗುರಿಪಡಿಸಿರುವುದನ್ನು ಗೋಪಾಲಗೌಡರ ಇಂತಹ ಮಾತುಗಳು ಸ್ಪಷ್ಟಪಡಿಸುತ್ತವೆ. ಜನರ ತಾರತಮ್ಯ ನೋಡದೆ ಈ ಸರ್ಕಾರ ಕೆಲಸ ಮಾಡುತ್ತಿದೆ. ಈ ತೆರಿಗೆ ತಾರತಮ್ಯವನ್ನು ಕುರಿತು ಸರ್ಕಾರದವರು ಯಾವ ತೆರಿಗೆಯನ್ನೇ ಹಾಕಲಿ ಅದು ನಿರ್ಗತಿಕರು ಮತ್ತು ಬಡವರ ಮೇಲೆ ಬೀಳತಕ್ಕದ್ದಾಗಿರುತ್ತದೆಯೇ ಹೊರತು ಶ್ರೀಮಂತರ ಮೇಲೆ ಅಷ್ಟಾಗಿ ಬೀಳುತ್ತಿಲ್ಲ. ಕಾರಣವೇನೆಂದರೆ, ಆ ಶ್ರೀಮಂತರ ಮೇಲೆ ಬೀಳುವ ತೆರಿಗೆಗಳನ್ನು ಹಾಕಿದರೆ, ಅವರಿಗೆಲ್ಲಿ ಕೋಪ ಬಂದು ಈ ಸರ್ಕಾರವನ್ನು ಉರುಳಿಸಿ ಬಿಡುತ್ತಾರೋ ಎಂಬ ಒಂದು ದೊಡ್ಡ ಹೆದರಿಕೆಯಿಂದ ಅವರ ಮೇಲೆ ತೆರಿಗೆಗಳನ್ನು ಹಾಕಲು ಈ ಸರ್ಕಾರ ಹಿಂಜರಿಯುತ್ತಿರುವುದು ಕಂಡುಬರುತ್ತದೆ ಎನ್ನುವ ಅವರ ಮಾತುಗಳು ಒಂದು ಕಡೆ ಬಡವರ ಪರವಾಗಿದ್ದರೆ, ಇನ್ನೊಂದು ಕಡೆ ಶ್ರೀಮಂತರನ್ನು ಓಲೈಸುವ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವಂತೆ ಕಂಡುಬರುತ್ತವೆ.

ಸರಕಾರವು ಜನರ ಮೇಲೆ ಎರಡು ರೀತಿಯ ತೆರಿಗೆಗಳನ್ನು ಹಾಕುತ್ತದೆ. ಒಂದು ಸಾಮಾನ್ಯ ಕಡ್ಡಾಯ ತೆರಿಗೆ, ಮತ್ತೊಂದು ವಿಶೇಷ ತೆರಿಗೆ. ಸಾಮಾನ್ಯ ಕಡ್ಡಾಯ ತೆರಿಗೆಯಲ್ಲಿ ಜನರ ಆರ್ಥಿಕ ಪರಿಸ್ಥಿತಿಯನ್ನು ಮೂಲ ಮಾನದಂಡವಾಗಿ ಪರಿಗಣಿಸುವುದಿಲ್ಲ. ವಿಶೇಷ ತೆರಿಗೆಯಲ್ಲಿ ಇದನ್ನು ಪರಿಗಣಿಸಬೇಕಾಗುತ್ತದೆ. ಅನೇಕ ಸಲ ವಿಶೇಷ ತೆರಿಗೆಯಲ್ಲೂ ಕೂಡ ಇದನ್ನು ಪರಿಗಣಿಸದಿರುವ ಸಾಧ್ಯತೆ ಇರುತ್ತದೆ. ಇದರ ಬಗೆಗೆ ಗೋಪಾಲಗೌಡರಿಗೆ ಆತಂಕ ಮತ್ತು ಅಸಹನೆ ಎರಡೂ ಇವೆ. ಅವರ ಮೇಲಿನ ಮಾತುಗಳಲ್ಲಿ ಇದು ಅತ್ಯಂತ ನಿಚ್ಚಳವಾಗಿ ಪ್ರತಿಬಿಂಬಿತವಾಗಿದೆ.

೬.೯. ನೀರಾವರಿ

ಕರ್ನಾಟಕದಲ್ಲಿ ನೀರಾವರಿ ವ್ಯವಸ್ಥೆಯ ಬಗೆಗೆ ಒಂದು ಸರಿಯಾದ ನೀತಿ ನಿರೂಪಣೆ ಇಲ್ಲ. ಜೊತೆಗೆ ಸಂಪನ್ಮೂಲವನ್ನು ಯಾರೂ ಹೇಗೆ ಬಳಸಿಕೊಳ್ಳಬೇಕು ಎಂಬುದರ ಬಗೆಗೂ ಖಚಿತವಾದ ಯೋಜನೆಗಳಿಲ್ಲ. ಹೀಗಿರುವುದರಿಂದ ಹರಿಯುವ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟುವುದಾಗಲಿ, ಅಣೆಕಟ್ಟುಗಳಿಗೆ ಕಾಲುವೆಗಳನ್ನು ನಿರ್ಮಿಸಿ ನೀರನ್ನು ಸರಬರಾಜು ಮಾಡುವುದಕ್ಕಾಗಲೀ ನ್ಯಾಯೋಚಿತವಾದ ರೂಪುರೇಷೆಗಳು ಇಲ್ಲ. ಇದರಿಂದಾಗಿ ನೀರಾವರಿಯ ಉಪಯೋಗ ಪಡೆಯುವುದರಲ್ಲಿ ಒಂದು ಕಡೆ ತಾರತಮ್ಯವೂ, ಮತ್ತೊಂದು ಕಡೆ ಅಪವ್ಯಯವೂ ಆಗುತ್ತಿದೆ. ಇದರ ಬಗೆಗೆ ಗೋಪಾಲಗೌಡರಿಗೆ ಆಳವಾದ ಎಚ್ಚರಿಕೆ ಮತ್ತು ಆ ಬಗೆಗೆ ಖಚಿತವಾದ ತಿಳುವಳಿಕೆ ಇತ್ತು ಇದನ್ನು ಅವರ ಮುಂದಿನ ಮಾತುಗಳ ನಿರೂಪಣೆಯಲ್ಲಿ ಗಮನಿಸಬಹುದಾಗಿದೆ.

ನೀರಾವರಿ ಯೋಜನೆಗಳ ಬಗ್ಗೆ ಮೈಸೂರು ಸರ್ಕಾರ ತನ್ನ ವಿಳಂಬ ನೀತಿಯನ್ನು ಅನುಸರಿಸಿಕೊಂಡಿರುವುದಲ್ಲದೆ, ಕೃಷ್ಣಾ ಗೋದಾವರಿ ನೀರನ್ನು ಪಡೆದುಕೊಳ್ಳುವ ವಿಷಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಗೋಪಾಲಗೌಡರು ವಿಷಾದದಿಂದ ಹೇಳುತ್ತಾರೆ.

ಆಲಮಟ್ಟಿಯಲ್ಲಿ ಮೊದಲು ಕೃಷ್ಣಾನದಿಗೆ ಅಣೆಕಟ್ಟನ್ನು ಕಟ್ಟುತ್ತೇವೆ ಎಂದು ಬಿಜಾಪುರಕ್ಕೆ ಹೋದಾಗ ಮುಖ್ಯಮಂತ್ರಿಗಳು ಹೇಳುತ್ತಾರೆ. ಲೋಕೋಪಯೋಗಿ ಶಾಖೆ ಮಂತ್ರಿಗಳು ಗುಲ್ಬರ್ಗದವರು. ಅವರು ನಾರಾಯಣಪುರದಲ್ಲಿ ಕಟ್ಟಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆಂದು ಕಾಣುತ್ತದೆ. ಎರಡು ಕಡೆಗಳಲ್ಲಿಯೂ ಏಕಕಾಲದಲ್ಲಿ ಅಡಿಗಲ್ಲನ್ನು ಹಾಕಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದೂ ಹೇಳುತ್ತಾರೆ. ನೂರು ಕೋಟಿ ರೂಪಾಯಿಗಿಂತ ಹೆಚ್ಚು ವೆಚ್ಚ ಮಾಡತಕ್ಕ ದೊಡ್ಡ ಯೋಜನೆಯ ಬಗ್ಗೆ ಇಷ್ಟು ತಾತ್ಸಾರ ಮನೋಭಾವನೆಯನ್ನು ಹೊಂದಿದ್ದರೆ ಈ ಯೋಜನೆ ಎಷ್ಟರಮಟ್ಟಿಗೆ ಸಾರ್ಥಕವಾದೀತು ಎನ್ನುವುದರ ಸಾಧಕ-ಬಾಧಕಗಳನ್ನು ಸರ್ಕಾರ ಯೋಚನೆ ಮಾಡಬೇಕು ಎನ್ನುವ ಸಲಹೆಯನ್ನು ನೀಡಿರುವುದನ್ನು ಇಲ್ಲಿ ಕಾಣುತ್ತೇವೆ. ನಾರಾಯಣಪುರದಲ್ಲಿ ಆಗಬೇಕು ಎನ್ನುವುದರ ಬಗ್ಗೆ ಪ್ಲಾನಿಂಗ್ ಕಮಿಷನ್ ಸರ್ಕಾರದವರ ಅಭಿಪ್ರಾಯವೂ ಇದ್ದ ಹಾಗೆ ಕಾಣುತ್ತದೆ. ನಾರಾಯಣಪುರದಲ್ಲಿ ಆಣೆಕಟ್ಟನ್ನು ಕಟ್ಟುವುದರಿಂದ ಮುಂದೆ ಹೆಚ್ಚು ನೀರು ದೊರೆತು ಆಲಂಪುರ ಮತ್ತು ಗದ್ವಾಲಕ್ಕೆ ಸೇರಿದ ಅನೇಕ ಸಹಸ್ರಾರು ಎಕರೆಗಳಿಗೆ ನೀರು ಹರಿಯುತ್ತದೆ. ಯಾವತ್ತೂ ಕ್ಷಾಮ ಡಾಮರಗಳಿಗೆ ತುತ್ತಾಗತಕ್ಕ ಬಿಜಾಪುರದ ಭಾಗಗಳಿಗೆ ನೀರು ಕಡಿಮೆಯಾಗುತ್ತದೆ. ನಮಗೆ ಈಗಾಗಲೇ ಕೇಂದ್ರ ಸರ್ಕಾರದವರು ಏನು ನೀರಿನ ಹಂಚಿಕೆಯನ್ನು ಮಾಡಿದ್ದಾರೆಯೋ ಅದರಲ್ಲಿ ಬಹುಭಾಗ ನೀರು ಪುನಃ ಆಂಧ್ರಕ್ಕೆ ಹೋಗುವುದರಲ್ಲಿದೆ ಎನ್ನುವ ಸಂಗತಿಗಳನ್ನು ಸದನಕ್ಕೆ ಮನವರಿಕೆ ಮಾಡಿಕೊಟ್ಟಿರುವುದನ್ನು ಗೋಪಾಲಗೌಡರ ಈ ಮಾತುಗಳು ತಿಳಿಸುತ್ತವೆ.

ಮಹಾರಾಷ್ಟ್ರದವರಿಗೆ ಕೂಡ ಮತ್ತಷ್ಟು ನೀರನ್ನು ಕೊಡುತ್ತೇವೆ ಎಂದು ಕೇಂದ್ರದವರು ಒಪ್ಪಿಕೊಂಡಿದ್ದಾರೆ. ನಮಗೆ ಯಾವ ಯಾವ ನದಿಗಳಿಂದ ಎಷ್ಟೆಷ್ಟು ನೀರು ಬರುತ್ತದೆಯೋ ಅದನ್ನು ಕೊಟ್ಟುಬಿಡಿ ಎಂದು ಸರ್ಕಾರದವರು ಕೇಳುತ್ತಿದ್ದಾರೆ. ಆದರೆ ನಿಮ್ಮ ಹತ್ತಿರ ಅಂದರೆ ಸರ್ಕಾರದವರ ಹತ್ತಿರ ಯಾವ ಯಾವ ಯೋಜನೆಗಳು ಸಿದ್ಧವಾಗಿವೆ? ಅದಕ್ಕೆ ಬೇಕಾದ ಹಣವಿದೆಯೇ? ಸಿಬ್ಬಂದಿ ಇದೆಯೇ? ದಕ್ಷತೆ ಇದೆಯೇ? ಇದ್ದರೆ, ಆ ಪ್ರಕಾರ ಕೆಲಸವನ್ನು ಪ್ರಾರಂಭ ಮಾಡಿ, ಕ್ಲಿಯರೆನ್ಸ್ ಕೊಡುತ್ತೇವೆ ಎಂದು ಕೇಂದ್ರ ಸರ್ಕಾರದವರು ಹೇಳುತ್ತಾರೆ. ನೀರಿನ ಹಂಚಿಕೆಯ ವಿಷಯದಲ್ಲಿ ಅರ್ಬಿಟ್ರೇಷನ್‌ಗೆ ಕೇಳಿ ಎಂದರೆ ಆ ರೀತಿ ಕೇಳುವುದಕ್ಕೆ ತಯಾರಿಲ್ಲ. ಶರಾವತಿಯಲ್ಲಿ ನಡೆದ ವಿಚಾರಗಳಿಂದ ಮುಖ ಉಳಿಸಿಕೊಳ್ಳಬೇಕಾಗಿತ್ತು. ಅದಕ್ಕೋಸ್ಕರ ಕೇಂದ್ರದಿಂದ ರಾಯರು ಬಂದಾಗ, ಅವರನ್ನು ಶರಾವತಿಗೆ ಕರೆದುಕೊಂಡು ಹೋಗಿ ಅದರ ಬಗ್ಗೆ ಅವರಿಂದ ಒಂದು ಸರ್ಟಿಫಿಕೇಟನ್ನು ಪಡೆದುಕೊಂಡಿರುವ ವಿಷಯವನ್ನು ಗೋಪಾಲಗೌಡರು ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತಾರೆ. ಆದರೆ ಕೃಷ್ಣಾ ಗೋದಾವರಿ ನೀರಿನ ಬಗ್ಗೆಯಾಗಲೀ ನೀರಾವರಿ ಯೋಜನೆಗಳ ಬಗ್ಗೆಯಾಗಲೀ ಮಾತನಾಡಿ ಸರ್ಕಾರದ ಬೇಡಿಕೆಯನ್ನು ಕೇಂದ್ರದವರ ಮುಂದೆ ಇಟ್ಟು ಅವರನ್ನು ಒಪ್ಪಿಸುವುದಕ್ಕೆ ಸಾಧ್ಯವಾಗಲಿಲ್ಲ. ಇಂತಹ ರೀತಿ-ನೀತಿಯನ್ನು ತಾವು ಅನುಸರಿಸಿಕೊಂಡು ಹೋದರೆ ಎಂಥ ದೊಡ್ಡ ಅಪರಾಧವನ್ನು ತಾವು ರಾಜ್ಯಕ್ಕೆ ಮಾಡುತ್ತಿದ್ದೀರಿ, ಮುಂದೆ ಎಂದಾದರೂ ಅದನ್ನು ತಿದ್ದಿಕೊಳ್ಳುವುದಕ್ಕೆ ಸಾಧ್ಯವೇ? ಎನ್ನುವುದನ್ನು ಸರ್ಕಾರ ತುಂಬ ಗಂಭೀರವಾದ ರೀತಿಯಲ್ಲಿ

ವಿಚಾರ ಮಾಡಬೇಕು ಎಂದು ಹೇಳುವ ಮೂಲಕ ಅಂದಿನ ಸರ್ಕಾರದ ನೀತಿನಿಯಮಗಳನ್ನು ಸಾಧಾರವಾಗಿ ಟೀಕೆ ಮಾಡಿರುವುದನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಮೇಲುನೋಟಕ್ಕೆ ಇದು ಸಣ್ಣ ವಿಷಯವೆಂದು ತೋರಬಹುದು. ಆದರೆ ವಾಸ್ತವವಾಗಿ ಅದು ಶಾಶ್ವತವಾಗಿ ಎಷ್ಟೋ ತಲೆಮಾರುಗಳಿಗೆ ಬರತಕ್ಕ ಪ್ರಶ್ನೆ. ಆದುದರಿಂದ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಕೇಂದ್ರದವರ ಜೊತೆಯಲ್ಲಿ ತಾವು ಕುಳಿತುಕೊಂಡು, ಸಂಬಂಧಪಟ್ಟ ಬೇರೆ ರಾಜ್ಯಗಳವರ ಜೊತೆಯಲ್ಲಿ ಕುಳಿತು, ತಮ್ಮ ಹಿಸ್ಸೆಗೆ ಎಷ್ಟು ನೀರು ಬರಬೇಕೋ ಅದನ್ನು ತೀರ್ಮಾನ ಮಾಡದೆ ಹೋದರೆ ಬಹಳ ದೊಡ್ಡ ಅನಾಹುತವನ್ನು ಈ ರಾಜ್ಯಕ್ಕೆ ಮಾಡುತ್ತಿದ್ದೀರಿ ಎಂದು ಗೋಪಾಲಗೌಡರು ರಾಜ್ಯ ಸರ್ಕಾರದ ನಿಲುವುಗಳ ಬಗೆಗೆ ಅಸಮಧಾನವನ್ನು ಇಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

ವಿದ್ಯುಚ್ಛಕ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಶರಾವತಿ ವಿದ್ಯುತ್ ಯೋಜನೆಯಲ್ಲಿ ಅನೇಕ ಲೋಪದೋಷಗಳಿವೆ. ಕೋಟ್ಯಾಂತರ ರೂಪಾಯಿಗಳಷ್ಟು ಸಾರ್ವಜನಿಕ ಹಣ ಅಲ್ಲಿ ವ್ಯರ್ಥವಾಗಿದೆ, ದುರುಪಯೋಗವಾಗಿದೆ ಎಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಗೋಪಾಲಗೌಡರು ಪ್ರತಿಪಾದಿಸುತ್ತಾರೆ. ಕೂಡಲೇ ವಿಚಾರ ಮಾಡುತ್ತೇವೆಂದೂ, ಅದರ ಬಗ್ಗೆ ಒಂದು ಶ್ವೇತಪತ್ರವನ್ನು ಪ್ರಕಟಣೆ ಮಾಡುತ್ತೇವೆಂದೂ ಸರ್ಕಾರದವರು ಹೇಳಿರುತ್ತಾರೆ. ಆದರೆ ಅದನ್ನು ಈವರೆಗೂ ಕೊಡುವುದಕ್ಕೆ ಸರಕಾರಕ್ಕೆ ಸಾಧ್ಯವಾಗಿಲ್ಲ. ಇದುವರೆಗೆ ಅಲ್ಲಿ ನಡೆದಿರುವ ಕೆಲಸದಲ್ಲಿ ಅನೇಕ ಲೋಪದೋಷಗಳಿವೆ; ಇನ್ನೂ ಆಗುತ್ತಿವೆ. ತಲಕಳಲೆ ಮತ್ತು ಮಳಲಿ ಜಲಾಶಯಗಳನ್ನು ಮಂತ್ರಿಗಳು ಉದ್ಘಾಟನೆ ಮಾಡಿದರು. ಏಕೆ ಮಾಡಿದರು, ಯಾವ ದೃಷ್ಟಿಯಿಂದ ಮಾಡಿದರು ಎನ್ನುವುದು ಯಾರಿಗೂ ಗೊತ್ತಿಲ್ಲ. ಈ ಹೊತ್ತು ಚೀಫ್ ಇಂಜನಿಯರು ನಿವೃತ್ತರಾಗಬೇಕೆಂದಿದೆ. ಇನ್ನೊಬ್ಬರು ನಿವೃತ್ತರಾದರು. ಇವರು ಯಾವ ಕಂಟ್ರಾಕ್ಟರ ಮೇಲೆ ಉಸ್ತುವಾರಿ ಮಾಡಬೇಕಾಗಿತ್ತೋ ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಈ ಕಾರಣದಿಂದ, ಅನೇಕ ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ವಿಶೇಷ ಸಿಬ್ಬಂದಿಯನ್ನು ನೇಮಕ ಮಾಡಿ ಅಲ್ಲಿ ಸ್ವಲ್ಪ ಸಿಮೆಂಟು, ಇಲ್ಲ ಸ್ವಲ್ಪ ಕಬ್ಬಿಣ ಲಾರಿಗಳಲ್ಲಿ ಸಾಗಿ ಹೋಗುತ್ತಿದ್ದುದನ್ನು ಹಿಡಿದು ಆಮೇಲೆ ಯಾವುದೋ ಬರುವುದು ತಡವಾಯಿತು, ಅದಕ್ಕಾಗಿ ಸರಿಮಾಡಿಕೊಂಡೆವು ಎಂದು ಶಹಭಾಸ್‌ಗಿರಿ ಬಂದಿದೆ ಎಂದು ಹೇಳಿದರು. ಈ ವ್ಯವಹಾರದಲ್ಲಿ ಎಲ್ಲವೂ ಸರಿಯಾಗಿ ನಡೆದಿದೆ ಎಂದು ಯಾರೂ ಹೇಳುವಂತಿಲ್ಲ. ಆದುದರಿಂದ ಅಲ್ಲಿ ಲೋಪದೋಷಗಳೇನು ನಡೆದಿವೆಯೋ ಅದನ್ನು ಇನ್ನು ಮುಂದಾದರೂ ನಿವಾರಿಸಿ ಸರಿಯಾಗಿ ಕೆಲಸ ನಡೆಸಬೇಕು. ಸರಕಾರ ತನ್ನ ಮಾತನ್ನು ಉಳಿಸಿಕೊಳ್ಳಲಿ. ಪ್ರಾಮಾಣಿಕವಾಗಿ ಕೆಲಸ ನಡೆಸಿಕೊಂಡು ಹೋಗಲು ವ್ಯವಸ್ಥೆ ಮಾಡುತ್ತಾರೆಂದು ಆಶಿಸುತ್ತೇನೆ[೧೦] ಎಂದು ಹೇಳುವ ಮೂಲಕ ರಾಜ್ಯಸರ್ಕಾರದ ಆಡಳಿತ ನೀತಿ ಮತ್ತು ಸಿಬ್ಬಂದಿಗಳ ಲಾಭಕೋರತನಗಳ ಬಗೆಗೆ ಗೋಪಾಲಗೌಡರು ಟೀಕಿಸಿರುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿ ಹಲವು ಜಲಾಶಯಗಳಿವೆ. ಜಲಾಶಯಗಳ ನಿರ್ಮಾಣ, ನೀರಿನ ಸರಬರಾಜು, ಅಲ್ಲಿನ ಕೆಲಸಗಾರರಿಗೆ ಸಂಬಳ ಇತ್ಯಾದಿಯಾಗಿ ಅನೇಕ ಬಗೆಯ ಖರ್ಚುಗಳು ಬರುತ್ತವೆ. ಆದರೆ

ಜಲಾಶಯಗಳ ನಿರ್ಮಾಣದ ಹಿಂದಿನ ತತ್ವಗಳಾಗಲಿ, ಸರಬರಾಜಿನ ಹಿಂದಿನ ಉದ್ದೇಶಗಳಾಗಲೀ ಜನರಿಗೆ ಮತ್ತು ಇಡಿಯಾಗಿ ನೀರಾವರಿಗೆ ನ್ಯಾಯ ಒದಗಿಸುವಂತಿಲ್ಲ. ಇದಕ್ಕೆ ಕಾರಣವೇನೆಂದರೆ ಜನಪ್ರತಿನಿಧಿಗಳ ಬೇಜವಾಬ್ದಾರಿತನ ಮತ್ತು ಕೆಲಸಗಾರರ ಭ್ರಷ್ಟತನ. ಇವೆರಡೂ ಸೇರಿ ಕರ್ನಾಟಕದ ನೀರಾವರಿಯು ಪ್ರಾಮಾಣಿಕವಾಗಿ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳದಂತಹ ಪರಿಸ್ಥಿತಿಯಲ್ಲಿದೆ. ಈ ಅಂಶವನ್ನು ಗೋಪಾಲಗೌಡರ ಮೇಲಿನ ಉಲ್ಲೇಖಿತ ಮಾತುಗಳು ನಮಗೆ ಮನವರಿಕೆ ಮಾಡುತ್ತಿವೆ.

೬.೧೦. ಬರಗಾಲದ ಸಮಸ್ಯೆ

ಕೃಷಿ ಉತ್ಪಾದನೆಗೆ ಅಥವಾ ಕೃಷಿಯ ಬೆಳೆಗೆ ಅಗತ್ಯವಾಗಿ ಸಹಜವಾದ ಮಳೆ ಸಕಾಲದಲ್ಲಿ ಆಗಬೇಕು. ಒಂದು ವೇಳೆ ಇದಕ್ಕೆ ಸಕಾಲದಲ್ಲಿ ಮಳೆ ಆಗದಿದ್ದರೆ ಅದಕ್ಕೆ ಬರಗಾಲ ಎಂದು ಕರೆಯುತ್ತಾರೆ. ಈ ಬರಗಾಲದಿಂದ ಸಮಾಜದ ಯಾವ ವರ್ಗದವರಿಗೆ ನಷ್ಟವಾಗುತ್ತದೆ ಮತ್ತು ಯಾವ ವರ್ಗದವರು ಆತಂಕಕ್ಕೆ ಒಳಗಾಗುತ್ತಾರೆ ಎಂಬುದು ಬಹಳ ಮುಖ್ಯವಾದ ಅಂಶ. ಗೋಪಾಲಗೌಡರು ಈ ಹಿನ್ನೆಲೆಯಲ್ಲಿ ಸದನದಲ್ಲಿ ಬರಗಾಲವನ್ನು ಕುರಿತು ಮಾತನಾಡಿದ್ದಾರೆ. ಅವರ ಮಾತುಗಳ ಸಾರವನ್ನು ಈ ಮುಂದಿನಂತೆ ಗ್ರಹಿಸಲಾಗಿದೆ.

ರಾಜ್ಯದ ಹಲವಾರು ಪ್ರದೇಶಗಳಲ್ಲಿ ಇನ್ನೂ ಸಾಕಷ್ಟು ಮಳೆ ಬಿದ್ದಿಲ್ಲ. ಕೆಲವು ಕಡೆ ಏನೂ ಮಳೆ ಬಿದ್ದಿಲ್ಲ. ಹಿಂದೆ ಇದ್ದಂಥ ಅಭಾವ ಪರಿಸ್ಥಿತಿ ಈಚೆಗೆ ಬಹಳ ಉತ್ಕಟವಾಗಿದೆ ಎಂಬ ವರದಿಗಳನ್ನು ಕೇಳುತ್ತಾ ಇದ್ದೇವೆ. ಕೆಲವು ಕಡೆಗಳಲ್ಲಿ ಆಹಾರ ದೊರೆಯದೆ ಉಪವಾಸ ಬಿದ್ದ ಜನರು ಸತ್ತಿರತಕ್ಕ ವರದಿಗಳು ಕೂಡ ಬಂದಿವೆ. ಚನ್ನಗಿರಿ ತಾಲೂಕಿನಲ್ಲಿ ಹೋದ ತಿಂಗಳೂ ಅಂತಹ ಒಂದು ವರದಿ ಬಂತು. ಆಮೇಲೆ ಅದು ನಿಜವಲ್ಲ ಎಂದು ಹೇಳಿ ಜಿಲ್ಲಾಧಿಕಾರಿಗಳು ಒಂದು ವರದಿಯನ್ನು ಕೊಡುತ್ತಾರೆ. ಉಪವಾಸ ಬಿದ್ದು ಹೊಟ್ಟೆಗೆ ಇಲ್ಲದೆ ಸತ್ತದ್ದು ಇಲ್ಲ ಎಂದು ಅವರ ವರದಿಯ ಸಾರವಾಗಿರುತ್ತದೆ. ಈಚೆಗೆ ಕಡೂರು ತಾಲ್ಲೂಕಿನಿಂದ ಬಂದ ಎರಡು ವರದಿಗಳ ಪ್ರಕಾರ, ಒಬ್ಬ ಗರ್ಭಿಣಿ ಸ್ತ್ರೀ ತನ್ನ ಎರಡು ಮಕ್ಕಳ ಜೊತೆಯಲ್ಲಿ ಕೆರೆಯಲ್ಲಿ ಹಾರಿ ಪ್ರಾಣ ಬಿಟ್ಟಳು. ಎರಡು ಮೂರು ದಿವಸದ ಮೇಲೆ ಆ ಹೆಣಗಳು ಮೇಲೆ ಬಂದವು ಎಂದು ವರದಿಯಾಗಿರುತ್ತದೆ. ಇನ್ನೊಂದು ಕಡೆ ಗಂಜಿಯಲ್ಲಿ ವಿಷ ಬೆರೆಸಿ ತಾನು ತನ್ನ ಮಕ್ಕಳೂ ಎಲ್ಲಾ ತಿಂದು ಪ್ರಾಣ ಬಿಟ್ಟಿರುತ್ತಾರೆ. ಅದು ಕೂಡ ಕಡೂರು ತಾಲ್ಲೂಕಿನಲ್ಲೇ ಆದದ್ದು. ಇತ್ತೀಚೆಗೆ ನಡೆದ ಘಟನೆ, ಮಕ್ಕಳು ಮತ್ತು ಮಹಿಳೆ ತೀರಿಹೋದದ್ದು ಆ ಗಂಡ ಹೇಗೆ ಆಸ್ಪತ್ರೆಗೆ ಹೋಗಿ ಬದುಕಿ ಬಂದ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಮದರಾಸ್ ಕೂಡ ಈ ರೀತಿಯಾಗಿ ಹೊಟ್ಟೆಗಿಲ್ಲದ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುವುದು ದಿನನಿತ್ಯದ ಸ್ಥಿತಿಯಾಗಿದೆ. ಇಲ್ಲಿ ಒಂದು ವರದಿ ಇದೆ. ೪೦ ವರ್ಷದ ಒಬ್ಬಳು ಸ್ತ್ರೀ ತನ್ನ ಮೂವರು ಮಕ್ಕಳೊಂದಿಗೆ ಕ್ರೋಂ ಪೇಟೆ ಕಾಂಜೀವರಂ ಪ್ಯಾಸೆಂಜರ್ ಟ್ರೈನ್‌ಗೆ ಸಿಕ್ಕಿ ಅವರೆಲ್ಲರೂ ಸತ್ತು ಹೋದರು ಎಂದು ವರದಿ ಬಂದಿದೆ. ನಮ್ಮ ದೇಶದಲ್ಲಿ ಈ ರೀತಿಯಾಗಿ ಜನ

ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿ, ಇದು ಬಹಳ ಜನರಿಗೆ ವಿಶೇಷವಾಗಿ ಕಾಣುವುದಿಲ್ಲ. ಕಾರಣ ನಾವು ಎಲ್ಲಿ ಹೋದರೂ ಬಸ್ ಸ್ಟ್ಯಾಂಡ್‌ನಲ್ಲಾಗಲಿ, ರೈಲ್ವೇ ಸ್ಟೇಷನ್‌ನಲ್ಲಾಗಲಿ ಅಥವಾ ಹೋಟೆಲ್‌ನಲ್ಲಾಗಲಿ ಬೀದಿಯಲ್ಲಾಗಲಿ, ಅಪಾರ ಸಂಖ್ಯೆಯಲ್ಲಿ ಭಿಕ್ಷೆ ಬೇಡುವವರನ್ನು ನೋಡುತ್ತೇವೆ. ಅದು ಒಂದು ವರ್ಗ ಎಂದು ಹೇಳುವ ಮೂಲಕ ಗೋಪಾಲಗೌಡರು ನೊಂದ ವರ್ಗದವರ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತಾರೆ. ದಿನವಿಡೀ ದುಡಿದು ಅಥವಾ ದುಡಿಮೆಯಿಲ್ಲದೆ ಬೇಡಿ ತಿನ್ನುವ ಅರೆ ಹೊಟ್ಟೆ ಊಟ ಮಾಡತಕ್ಕ ಜನರ ಸಂಖ್ಯೆ ನಮ್ಮ ದೇಶದಲ್ಲಿ ಹೆಚ್ಚಾಗಿದೆ ಎಂಬುದು ಅವರ ನಿಲುವಾಗಿರುತ್ತದೆ. ಲೋಹಿಯಾ ಅವರು ಮೊನ್ನೆ ಪಾರ್ಲಿಮೆಂಟಿನಲ್ಲಿ ಹೇಳಿದ ಹಾಗೆ ಎರಡು ದೊಡ್ಡ ಆಘಾತಗಳನ್ನು ದೇಶ ಎದುರಿಸುತ್ತಾ ಇದೆ. ಒಂದು ಪ್ರಕೃತಿಯ ಪ್ರಕೋಪಕ್ಕೆ ಒಳಗಾಗಿ ಹೋದ ವರ್ಷ ಹಿಂಗಾರು ಮಳೆ ಬಾರದೆ ದೇಶದ ಬಹು ಭಾಗದಲ್ಲಿ ಮುಖ್ಯವಾದ ಎಲ್ಲಾ ಬೆಳೆಗಳೂ ನಾಶವಾದದ್ದು, ಅದರಿಂದಾಗಿ ಆಹಾರ ಉತ್ಪನ್ನಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಮತ್ತೊಂದು ಜೂನ್ ೬ನೆಯ ತಾರೀಕು ಕೇಂದ್ರ ಸರ್ಕಾರದವರು ರೂಪಾಯಿನ ಬೆಲೆಯಲ್ಲಿ ೩೬.೫ ಪರ್ಸೆಂಟ್‌ನಷ್ಟು ಇಳಿಸಿದ್ದು ಅಥವಾ ಅಪಮೌಲ್ಯ ಮಾಡಿದ್ದು. ಈ ಎರಡೂ ಒಟ್ಟುಗೂಡಿ ಇವತ್ತು ದೇಶದಲ್ಲಿ ಪ್ರತಿಯೊಂದು ಜೀವನಾವಶ್ಯಕ ವಸ್ತುವಿನ ಬೆಲೆಯೂ, ಹಿಂದೆ ಎಂದೂ ಎಲ್ಲೂ ಕಂಡರಿಯದ ರೀತಿಯಲ್ಲಿ ಏರುತ್ತಾ ಇದೆ’’ ಎಂಬ ಮಾತುಗಳ ಮೂಲಕ ಲೋಹಿಯಾ ಅವರು ಸಂಸತ್ತಿನಲ್ಲಿ ತಿಳಿಯಪಡಿಸಿದ ವಿಷಯಗಳನ್ನು ಗೋಪಾಲಗೌಡರು ಇಲ್ಲಿ ಉಲ್ಲೇಖಿಸಿರುವುದನ್ನು ನೋಡಬಹುದಾಗಿದೆ.

ಬರಗಾಲದಿಂದ ಸಮಾಜದ ಯಾವ ವರ್ಗದವರಿಗೆ ನಷ್ಟ ಸಂಭವಿಸುತ್ತದೆ ಎಂಬುದು ಬಹಳ ಮುಖ್ಯವಾದ ಸಂಗತಿ. ಯಾಕೆಂದರೆ ಬರಗಾಲವು ಪ್ರಕೃತಿಯ ವೈಪರಿತ್ಯವನ್ನು ಆಧರಿಸಿರುತ್ತದೆ. ಇದನ್ನು ಹೊರಗಡೆಯಿಂದ ನೋಡಿದಾಗ ಬರಗಾಲದ ಪರಿಣಾಮವು ಎಲ್ಲರಿಗೂ ಒಂದೇ ರೀತಿ ಆಗುತ್ತದೆ ಎಂದು ಎನಿಸುತ್ತದೆ. ಆದರೆ ಒಂದು ಸಮಾಜದಲ್ಲಿ ಬಡವರು ಮತ್ತು ಶ್ರೀಮಂತರು ಎಂಬ ವರ್ಗ ಶ್ರೇಣೀಕರಣಗಳು ಇದ್ದಾಗ ಇದರ ನಷ್ಟಕ್ಕೆ ಒಳಗಾಗುವವರು ಕಡು ಬಡವರೇ ಹೊರತು ಶ್ರೀಮಂತರಲ್ಲ. ಬರಗಾಲ ಬಂದಾಗ ಶ್ರೀಮಂತರಿಗೆ ಉಣ್ಣುವ ಊಟಕ್ಕೆ ಕೊರತೆ ಆಗುವುದಿಲ್ಲ. ಆದರೆ ಬಡವರಿಗೆ ತುತ್ತು ಅನ್ನಕ್ಕೂ ಸಂಚಕಾರ ಬರುತ್ತದೆ. ಇದಿಷ್ಟು ಮಾತ್ರವೇ ಅಲ್ಲ. ರಾಷ್ಟ್ರದ ಒಟ್ಟಾರೆ ಆದಾಯವನ್ನಾಧರಿಸಿ ಕರೆನ್ಸಿಯ ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಬರಗಾಲದಂತಹ ಸಂದರ್ಭದಲ್ಲಿ ರಾಷ್ಟ್ರದ ಒಟ್ಟಾರೆ ಉತ್ಪಾದನೆಯಲ್ಲಿ ಅಥವಾ ಆದಾಯದಲ್ಲಿ ಏರು ಪೇರು ಆಗುತ್ತದೆ. ಇದರ ಪರಿಣಾಮವು ಆಯಾ ದೇಶದ ಒಟ್ಟು ಆರ್ಥಿಕತೆಯ ಮೇಲೆ ಆಗುತ್ತದೆ. ಇದರಿಂದ ಹಣದುಬ್ಬರ ಏರ್ಪಡಬಹುದು, ಆರ್ಥಿಕ ಮುಗ್ಗಟ್ಟು ಸಂಭವಿಸಬಹುದು. ಮುಂದುವರೆದು ಕರೆನ್ಸಿಯ ಮೌಲ್ಯವೇ ಬಿದ್ದು ಹೋಗಬಹುದು. ಒಂದು ವೇಳೆ ಕರೆನ್ಸಿಯ ಮೌಲ್ಯ ಏನಾದರು ಬಿದ್ದು ಹೋದರೆ ಆಗ ಕೊಳ್ಳುವ ವಸ್ತುಗಳ ಬೆಲೆಗಳು ಗಗನಕ್ಕೆ ಏರುತ್ತವೆ. ಇದನ್ನು ನಾವು ಇತ್ತೀಚಿನ

ಜಾಗತೀಕರಣದ ವರ್ಷಗಳಲ್ಲಿ ಕಂಡುಬರುವ ಒಂದು ವಿದ್ಯಮಾನವಾಗಿದೆ ಎಂದು ಗೋಪಾಲಗೌಡರು ಸದನದ ಗಮನ ಸೆಳೆಯುತ್ತಾರೆ. ಇಂತಹ ಮತ್ತೊಂದು ಭೀಕರ ಪರಿಸ್ಥಿತಿಯನ್ನು ೧೯೩೧ರ ಮಹಾ ಆರ್ಥಿಕ ಮುಗ್ಗಟ್ಟಿನಲ್ಲಿ ಮತ್ತು ೧೯೬೬ರ ಭೀಕರ ಬರಗಾಲದ ಬಿಕ್ಕಟ್ಟಿನಲ್ಲಿ ನಾವು ಕಂಡಿರುವುದಾಗಿ ಗೋಪಾಲಗೌಡರು ತಿಳಿಸುತ್ತಾರೆ. ಇಂತಹ ಸಂದರ್ಭದಲ್ಲಿ ಬಡವರಿಗೆ ದೈನಂದಿನ ಅಗತ್ಯಗಳನ್ನು ಪೂರೈಸುವ ವಸ್ತುಗಳನ್ನು ಕೊಂಡುಕೊಳ್ಳಲು ಆಗುವುದಿಲ್ಲ. ಇದು ಸಂಭವಿಸುವುದು ಮೂಲತಃ ಬರಗಾಲದಿಂದ. ಆದರೆ ಇದೇ ಪರಿಸ್ಥಿತಿ ಶ್ರೀಮಂತರಿಗೆ ಬರುವುದಿಲ್ಲ. ಮಹಾ ಆರ್ಥಿಕ ಮುಗ್ಗಟ್ಟಿನ ಸಂದರ್ಭದಲ್ಲಿ ಅರ್ಥಾತ್ ಬರಗಾಲದ ಸಂದರ್ಭದಲ್ಲಿ ಬಡವರಿಗೆ ತುತ್ತು ಅನ್ನಕ್ಕೆ ಸಂಚಕಾರ ಬರುತ್ತದೆ. ಆದರೆ ಶ್ರೀಮಂತರಿಗೆ ಬರುವುದಿಲ್ಲ, ಹೆಚ್ಚೆಂದರೆ ಇವರಿಗೆ ಇವರ ಆನುಷಂಗಿಕ ಅಗತ್ಯಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಸಮತೋಲನ ಏರ್ಪಡದೇ ಹೋಗಬಹುದು ಅಥವಾ ತಮ್ಮ ಲಾಭದ ಪ್ರಮಾಣದಲ್ಲಿ ಸಾಮಾನ್ಯ ಇಳಿಕೆ ಕಾಣಬಹುದು ಎಂದು ಸಮಾಜವಾದಿ ಚಿಂತಕರಾದ ಗೋಪಾಲಗೌಡರು ಬರಗಾಲ ಕುರಿತು ಮಾತನಾಡುವಾಗ ಸಮಾಜದ ಅಂಚಿನಲ್ಲಿರುವ ಬಡವರ ಬಗೆಗಿನ ಕಾಳಜಿಯಿಂದ ಮಾತನಾಡಿರುವುದು ಮೇಲಿನ ಮಾತುಗಳಲ್ಲಿ ಗೋಚರವಾಗುತ್ತಿದೆ.

ಅನೇಕ ಸಲ ಆಳುವ ಸರ್ಕಾರ ಬರಗಾಲದ ಸಂದರ್ಭದ ಭೀಕರ ಪರಿಸ್ಥಿತಿಯನ್ನು ಎದುರಿಸಲಾಗದೆ ನಿಜ ಪರಿಸ್ಥಿತಿಗೆ ವಿರುದ್ಧವಾದ ಅಂಕಿ ಅಂಶಗಳನ್ನು ಮತ್ತು ವರದಿಗಳನ್ನು ರೂಪಿಸಿ ಬಿಡುತ್ತದೆ. ಈ ಅಂಶದ ಕಡೆಗೂ ಗೋಪಾಲಗೌಡರು ಈ ಮೇಲಿನ ತಮ್ಮ ಉಲ್ಲೇಖಿತ ಮಾತುಗಳಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ. ಅದು ಏನೆಂದರೆ ಬರಗಾಲದಿಂದ ಸಾವು ನೋವು ಸಂಭವಿಸಿರುತ್ತದೆ. ಆದರೆ ಅಂತಹ ಸಾವುಗಳನ್ನು ಬರಗಾಲದ ಕಾರಣಕ್ಕಾಗಿಯೇ ಸಾವು ಸಂಭವಿಸಿದವು ಎಂದು ವರದಿ ಮಾಡಿದರೆ ಸರ್ಕಾರವು ತನ್ನ ಕಾರ್ಯ ವಿಫಲತೆಯನ್ನು ತಾನಾಗಿಯೇ ಹೇಳಿಕೊಂಡಂತಾಗುತ್ತದೆ. ಈ ಕಾರಣಕ್ಕಾಗಿ ಸರ್ಕಾರಗಳು ನಿಜಸ್ಥಿತಿಯನ್ನು ಮುಚ್ಚಿಟ್ಟು ಸುಳ್ಳು ವರದಿಗಳನ್ನು ರೂಪಿಸುತ್ತವೆ. ಅಂದರೆ ಬರಗಾಲದಿಂದ ಜನರು ಸಾವಿಗೆ ತುತ್ತಾಗಿದ್ದರೂ ಕೂಡ ಅವರ ಸಾವು ಬರಗಾಲದಿಂದ ಸಂಭವಿಸುವುದಿಲ್ಲ ಎಂಬ ಅಭಿಪ್ರಾಯವನ್ನು ಅವು ರೂಪಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ಬಡ ರೈತರುಗಳು ಮಾಡಿದ ಸಾಲ ಮತ್ತು ಅದನ್ನು ತೀರಿಸಲಾಗದ ಹಿನ್ನೆಲೆಯಲ್ಲಿ ಅವರು ಮಾಡಿಕೊಂಡಿರಬಹುದಾದ ಆತ್ಮಹತ್ಯೆಗಳ ವರದಿಗಳ ಕುರಿತಂತೆ ಇರುವ ವಿವಿಧ ವಿವರಗಳನ್ನು ನೆನೆಯಬಹುದು. ಅಂದರೆ ಸಾವಿಗೆ ಖಚಿತವಾಗಿ ಇದೇ ಕಾರಣವೆಂದು ತಿಳಿಯಲಾಗದ ಪರಿಸ್ಥಿತಿಯಲ್ಲಿ ಜನರು ಇರುವುದನ್ನು ಕಾಣುತ್ತೇವೆ.

೬.೧೧. ಸಹಕಾರ

ಸಹಕಾರ ಎನ್ನುವುದು ಎಲ್ಲರೂ ಎಲ್ಲರಿಗಾಗಿ ಎಂದು. ಆದರೆ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿ ಬದಲಾಗಿದೆ. ಎಲ್ಲರೂ ಒಬ್ಬರಿಗಾಗಿ, ಒಬ್ಬರಿಗಾಗಿ ಎಲ್ಲರೂ ಎಂಬಂತಾಗಿದೆ. ಸಹಕಾರ ಎಂಬುದು ಎಲ್ಲಿರುತ್ತದೊ ಅಲ್ಲಿ ಶೋಷಣೆ ಎಂಬುದು ಇರುವುದಿಲ್ಲ. ಶೋಷಣೆ ಎಲ್ಲಿರುತ್ತದೊ ಅಲ್ಲಿ ಸಹಕಾರ

ಇರುವುದಿಲ್ಲ; ಅಲ್ಲಿ ಏನಿದ್ದರೂ ಸಾಹುಕಾರಿಕೆ ಇರುತ್ತದೆ. ಇದನ್ನು ಶಾಂತವೇರಿ ಗೋಪಾಲಗೌಡರು ಸರಿಯಾಗಿ ಗುರುತಿಸಿದ್ದರು. ಅವರ ಮುಂದಿನ ಮಾತುಗಳು ಇದನ್ನು ಸಾಬೀತುಪಡಿಸುತ್ತವೆ. ಈ ಸಹಕಾರ ಎಂಬ ಪದ ಇವೊತ್ತು 'ಸಾಹುಕಾರ' ಎನ್ನುವ ಪದ ಆಗಿ ಮಾರ್ಪಾಡಾಗಿದೆ[೨] ಎಂದು ಹೇಳುವ ಮೂಲಕ ಸಹಕಾರ ಪದದ ಅರ್ಥ ಹೇಗೆ ಬದಲಾಗಿದೆ ಎಂಬುದನ್ನು ಮಾರ್ಮಿಕವಾಗಿ ತಮ್ಮ ಈ ಮಾತುಗಳ ಮೂಲಕ ಅವರು ಪ್ರತಿಪಾದಿಸುತ್ತಾರೆ. ಇದಕ್ಕೆ ಸಾಕಾದಷ್ಟು ಆಧಾರಗಳು ಇವೆ ಎನ್ನುತ್ತಾರೆ. ಹಿಂದೆ ಕೂಡಾ ಸಹಕಾರ ಪದ್ಧತಿ ಇತ್ತು. ನಮಗೆ ಕಂಡ ಹಾಗೆ ಹಿಂದೆ ನಮ್ಮ ದೇಶದಲ್ಲಿ ಹಣಕಾಸಿನ ಚಲಾವಣೆ ತೀರ ಕಡಿಮೆ ಇತ್ತು ಎಂದು ಗೊತ್ತಾಗುತ್ತದೆ. ಮತ್ತು ಟ್ರಸ್ಟೀಷಿಪ್ ಇತ್ತು ಎಂಬುದನ್ನು ಕೂಡಾ ನೋಡಿದ್ದೇವೆ, ಅದಕ್ಕೆ ನಿದರ್ಶನವಾಗಿ ಈಗಲೂ ಕೂಡ ಕೆಲವು ಮಠಗಳು ಇತ್ಯಾದಿ ಇತ್ಯಾದಿ ಸಂಸ್ಥೆಗಳನ್ನು ನಾವು ನೋಡುತ್ತೇವೆ. ಒಂದು ಕಡೆ ಒಂದು ಸಂಸ್ಥೆ ಹಣವನ್ನು ಶೇಖರಿಸಿ ಇಡತಕ್ಕದ್ದು; ಅದನ್ನು ಸಮಾಜದ ಎಲ್ಲ ಉಪಯೋಗಕ್ಕೆ, ಎಲ್ಲರ ಅಭಿವೃದ್ಧಿಗಾಗಿ ಕೆಲವರು ಖರ್ಚು ಮಾಡತಕ್ಕದ್ದು. ಇದು ಸಹಕಾರ ತತ್ವದ ಮೂಲವಾಗಿ ಬಂದಿದೆ. ಅನಂತರದಲ್ಲಿ ಕ್ರಮವಾಗಿ ಇದು ಸಡಿಲವಾಗುತ್ತ ಬಂದು ಮೊದಲಿನ ಆರ್ಥಿಕ ವ್ಯವಸ್ಥೆ ಏನಿತ್ತೋ ಅದು ಬದಲಾಗಿ ಪಾಲುಗಾರಿಕೆ ಬೆಳೆದು ಬಂದು 'ಸಹಕಾರ' ಎನ್ನುವುದು 'ಸಾಹುಕಾರ' ಎನ್ನುವ ಸ್ಥಾನವನ್ನು ಪಡೆಯುತ್ತಿದೆ. ಹೀಗೆ ನಮ್ಮ ಪ್ರಾಚೀನರು ಹಣದ ಚಲಾವಣೆಯಿಲ್ಲದ ಸಂದರ್ಭದಲ್ಲಿ ವಸ್ತು ವಿನಿಮಯದ ಮೂಲಕ ಅಥವಾ ತಮಗೆ ಸರಿಕಂಡ ಪದ್ಧತಿಯ ಮೂಲಕ ಸಹಕಾರ ಮನೋಭಾವದಿಂದ ಸಮಾಜದಲ್ಲಿ ಕೊಡುಕೊಳುವಿಕೆಯಲ್ಲಿ ಭಾಗಿಯಾಗಿದ್ದ ವಿಷಯವನ್ನು ಗೋಪಾಲಗೌಡರು ಇಲ್ಲಿ ಪ್ರಸ್ಥಾಪಿಸಿರುವುದನ್ನು ಕಾಣುತ್ತೇವೆ.

೬.೧೨. 'ಪಾನ ನಿರೋಧ'ದ ಬಗೆಗೆ

ಇವತ್ತು ರಾಜ್ಯ ಸರಕಾರಕ್ಕೆ ಅಬಕಾರಿ ಇಲಾಖೆಯು ಸಂಪತ್ತಿನ ಆಗರವಾಗಿದೆ. ರಾಜ್ಯ ಬೊಕ್ಕಸಕ್ಕೆ ಈ ಇಲಾಖೆಯಿಂದ ದೊಡ್ಡ ಮೊತ್ತದ ರೆವಿನ್ಯೂ ಬರುತ್ತದೆ. ಬಡಜನರಿಗೆ, ನಿರ್ಗತಿಕರಿಗೆ ಅನ್ನ ಕೊಡದ ಸರಕಾರಗಳು ವಾದ್ಯವನ್ನಂತೂ ಕೊಡುತ್ತವೆ. ಇದರಲ್ಲಿ ಯಾವುದೇ ಹಿಂದೆ ಮುಂದೆ ಆಲೋಚನೆ ಮಾಡುವುದಿಲ್ಲ. ಜನರಿಗೆ ಕೊಡುವ ಮದ್ಯಪಾನವು ಜನರ ಆರೋಗ್ಯದ ಮೇಲೆ ಯಾವ ದುಷ್ಪರಿಣಾಮವನ್ನು ಬೀರುತ್ತದೆ ಅಥವಾ ಬೀರುವುದಿಲ್ಲ ಇತ್ಯಾದಿ ಯಾವ ಆಲೋಚನೆಯನ್ನೂ ಮಾಡುವುದಿಲ್ಲ. ಆದರೆ ಶಾಂತವೇರಿ ಗೋಪಾಲಗೌಡರು ಈ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಿದ್ದರು. ಅವರ ಮುಂದಿನ ಮಾತುಗಳ ಒಟ್ಟು ಸಾರ ಹೀಗಿದೆ : ಈಗ ನಾವು ಈ ಮಾದಕ ಪಾನೀಯ ಸೇವನೆ ಮಾಡತಕ್ಕ ಜನರ ಬಗ್ಗೆ ಮಾಡಿರತಕ್ಕ ಕಾನೂನು ಅಷ್ಟು ಸರಿಯಾಗಿದ್ದಂತೆ ಕಂಡುಬರುವುದಿಲ್ಲ ಎಂಬುದು ಅವರ ಅನಿಸಿಕೆಯಾಗಿದೆ. ಕೆಲವು ಮಾದಕ ಪದಾರ್ಥಗಳನ್ನು ಸೇರಿಸಿ ತಯಾರು ಮಾಡತಕ್ಕ ವಸ್ತುಗಳ ಬಗ್ಗೆ, ಈ ಮಾದಕ ವಸ್ತುಗಳು ಯಾವುದೇ ಆಗಿರಲಿ, ಗಾಂಜಾನೇ ಆಗಿರಲಿ, ಹೊಗೆಸೊಪ್ಪೇ ಆಗಿರಲಿ, ಶೇಂದಿಯೇ ಆಗಿರಲಿ ಅಥವಾ ಶರಾಬೇ ಆಗಿರಲಿ

ಈ ಪೈಕಿ ಯಾವ ವಸ್ತುವಾದರೂ ಆಗಿರಬಹುದು. ಅದನ್ನು ತಯಾರು ಮಾಡುವ ಮೂಲದಿಂದ ಹಿಡಿದು ಅವುಗಳನ್ನು ತಯಾರು ಮಾಡುವ ವಸ್ತುಗಳು, ಅವುಗಳನ್ನು ತಯಾರು ಮಾಡುವ ಕ್ರಮ ಹಾಗೂ ತಯಾರು ಮಾಡುವ ಸ್ಥಳ ಮತ್ತು ಕಾಲ ಈ ಅಂಶಗಳನ್ನೆಲ್ಲಾ ಗಣನೆಯಲ್ಲಿ ಇಟ್ಟುಕೊಂಡು ಇದನ್ನು ಯಾರು ಉಪಯೋಗಿಸಬೇಕು ಎಂಬುದನ್ನೆಲ್ಲಾ ಮೊದಲು ಕಾನೂನಿನಲ್ಲಿ ಅಳವಡಿಸಬೇಕು. ಈ ವಸ್ತುಗಳ ಮಾರಾಟದಿಂದ ನಮ್ಮ ರಾಜ್ಯಕ್ಕೆ ಬರುವ ವರಮಾನ, ಈ ಸಾಮಾನುಗಳ ಮಾರಾಟದಿಂದ ಅಥವಾ ಇವುಗಳ ಸೇವನೆಯಿಂದ ಅಂದರೆ ಇವುಗಳ ತಯಾರಿಕೆಯಿಂದಲೇ ರಾಜ್ಯಕ್ಕೆ ಹಣ ಬರಬಹುದು. ಇಲ್ಲವೆ ಇವುಗಳನ್ನು ಮಾರಾಟ ಮಾಡುವುದರಿಂದ ರಾಜ್ಯಕ್ಕೆ ವರಮಾನ ಬರಬಹುದು ಅಥವಾ ಇವುಗಳ ತಯಾರಿಕೆಯಿಂದಲಾದರೂ ರಾಜ್ಯಕ್ಕೆ ಹಣ ಬರಬಹುದು. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಒಂದು ಸಮಗ್ರವಾದ ಕಾನೂನನ್ನು ನಾವೀಗ ತಯಾರಿಸಬೇಕಾದ ಅಗತ್ಯವಿದೆಯೆಂಬುದನ್ನು ಗೋಪಾಲಗೌಡರು ಸದನಕ್ಕೆ ಈ ಮೂಲಕ ಮನವರಿಕೆ ಮಾಡಿಕೊಡುತ್ತಿರುವುದನ್ನು ಕಾಣುತ್ತೇವೆ. ಈ ಅಂಶಗಳನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ನಮ್ಮ ಪಾನ ನಿರೋಧದ ಕಾನೂನನ್ನು ಮಾರ್ಪಾಡು ಮಾಡಿಕೊಳ್ಳಬೇಕು. ಇದೇ ವಿಚಾರವನ್ನು ಕುರಿತು ಡಾ. ರಾಮಮನೋಹರ ಲೋಹಿಯಾ ಅವರು ಮಾತನಾಡಿದ ಕೆಲವು ಸಾಲುಗಳನ್ನು ಹೀಗೆ ಉಲ್ಲೇಖಿಸುತ್ತಾರೆ. ನಮ್ಮ ದೇಶದಲ್ಲಿ ಜನರಿಗೆ ಎಲ್ಲಿಯವರೆಗೆ ತಿನ್ನಲಿಕ್ಕೆ ಅನ್ನ, ಉಡಲಿಕ್ಕೆ ಬಟ್ಟೆ ಇಲ್ಲದಂತಹ ದರಿದ್ರಾವಸ್ಥೆಯಲ್ಲಿರುತ್ತೇವೆಯೋ ಅಲ್ಲಿಯವರೆಗೆ ನಾವು ಈ ಮಾದಕ ವಸ್ತುಗಳನ್ನು ಯಾವ ಕಾರಣಕ್ಕೇ ಆಗಲಿ ಲಗ್ಜುರಿ ವಸ್ತುಗಳೆಂದು ಪರಿಗಣಿಸಿ, ಅವುಗಳನ್ನು ಈ ಅಪಿಟೈಟ್ ಇತ್ಯಾದಿ ಯಾವುದೇ ಕಾರಣವಾಗಲಿ ಇವುಗಳನ್ನು ಉಪಯೋಗಿಸಬಾರದೆಂದು ಹೇಳಿದ್ದಾರೆ[೧೩] ಎಂದು ಹೇಳುವ ಮೂಲಕ ಪಾನನಿರೋಧದ ಬಗೆಗೆ ತಮ್ಮ ಅನಿಸಿಕೆಗಳಿಗೆ ರಾಮಮನೋಹರ ಲೋಹಿಯಾ ಅವರ ಚಿಂತನೆಗಳನ್ನು ಸಮರ್ಥನೆಗಾಗಿ ನೀಡಿರುವುದು ಇಲ್ಲಿ ಕಂಡುಬರುತ್ತದೆ. ಮದ್ಯಪಾನದಿಂದ ಅನೇಕ ಬಡ ಸಂಸಾರಗಳು ಹಾಳಾಗುತ್ತವೆಂದು ಹೇಳಿ ಇದರ ಬಗ್ಗೆ ಒಂದು ಭಯಾನಕ ಚಿತ್ರವನ್ನೇ ಅವರು ನಮ್ಮ ಮುಂದೆ ತೆರೆದಿಡುತ್ತಾರೆ.

ಶಾಂತವೇರಿ ಗೋಪಾಲಗೌಡರು ತಮ್ಮ ಮೇಲಿನ ಮಾತುಗಳಲ್ಲಿ ಮದ್ಯಪಾನವನ್ನು ಮಾದಕ ವಸ್ತು ಎಂದು ಕರೆದಿದ್ದಾರೆ. ಇದು ಬಹಳ ಮುಖ್ಯವಾದ ಮಾತು. ಯಾಕೆಂದರೆ ಒಂದು ವಸ್ತುವಿಗೆ ನಾವು ಯಾವ ಹೆಸರು ಇಡುತ್ತೇವೆ ಎಂಬುದನ್ನು ಅವಲಂಬಿಸಿ ಅದರ ಉಪಯೋಗದ ಉದ್ದೇಶವು ರೂಪುಗೊಳ್ಳುತ್ತದೆ. ಹಾಗಾಗಿಯೇ ಮದ್ದಿಗೆ ಔಷಧಿ ಎಂದೂ, ಔಷಧಿಗೆ ಮದ್ದು ಎಂದೂ ಹೆಸರಿಟ್ಟು ಕರೆಯಲು ಸಾಧ್ಯವಿಲ್ಲ. ಶಾಂತವೇರಿ ಗೋಪಾಲಗೌಡರು ತಮ್ಮ ಮಾತುಗಳಲ್ಲಿ ಪಾನವನ್ನು ಮಾದಕ ವಸ್ತು ಎಂದು ಕರೆದಿದ್ದಾರೆ. ಜೊತೆಗೆ ಅದರ ಉತ್ಪಾದನೆ, ಅದರ ಬಳಕೆ, ಅದರಿಂದ ಜನರ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳನ್ನು ಕುರಿತು ಚರ್ಚೆ ಮಾಡಿದ್ದಾರೆ. ಬಡತನವೇ ತುಂಬಿರುವ ಸಮಾಜದಲ್ಲಿ ಜೀವನದ ಮೂಲಭೂತ ಅವಶ್ಯಕತೆಗಳು ಈಡೇರದಿರುವಾಗ ಸರ್ಕಾರ

ಮದ್ಯಪಾನಕ್ಕೆ ಕಾನೂನುರೀತ್ಯ ಅವಕಾಶ ಮಾಡಿಕೊಡುವುದು ಪ್ರಭುತ್ವದ ವಿರುದ್ಧ ಜನರು ಹೋರಾಡಬಹುದಾದ ಕೆಚ್ಚನ್ನು ತಣ್ಣಗಾಗಿಸುವ ಹುನ್ನಾರ ಕೂಡ ಇರಬಹುದು. ಏಕೆಂದರೆ ಮದ್ಯಪಾನದ ವ್ಯಸನಕ್ಕೆ ಒಳಗಾದವರು ತಮ್ಮನ್ನು ತಾವೇ ನಿಯಂತ್ರಿಸಿಕೊಳ್ಳಲು ಸಾಧ್ಯವಿಲ್ಲದಿರುವಾಗ ಯಾವ ಸರ್ಕಾರವನ್ನು ಅವರು ನಿಯಂತ್ರಿಸಲು ಸಾಧ್ಯ

೬.೧೩. 'ಅರಣ್ಯ ಭೂಮಿ' ಕುರಿತು

ನಮ್ಮಲ್ಲಿ ಜಾರಿಯಲ್ಲಿರುವ ಅನೇಕ ಕಾನೂನುಗಳು ಬ್ರಿಟೀಶರ ಕೊಡುಗೆಯವು. ಅದರಲ್ಲೂ ರೆವಿನ್ಯೂ ಮತ್ತು ಅರಣ್ಯ ಇಲಾಖೆಯ ಕಾನೂನುಗಳು ಅವರ ಅಭಿವೃದ್ಧಿ ಪರಿಕಲ್ಪನೆಯ ಪಡಿಯಚ್ಚುಗಳೇ ಆಗಿವೆ. ಅವರ ಅಭಿವೃದ್ಧಿ ಪರಿಕಲ್ಪನೆಗೆ ಅನುಗುಣವಾಗಿ ಇಲ್ಲಿನ ಇಲಾಖೆಗಳನ್ನು ರೂಪಿಸಲಾಗಿದೆ. ಮನುಷ್ಯರಿಗೆ ಕಾಡುಗಳು, ಅರಣ್ಯಗಳು ಬಹಳ ಮುಖ್ಯ. ಇವು ಇಲ್ಲದೇ ಇದ್ದರೆ ಬದುಕೇ ದುಸ್ತರವಾಗುತ್ತದೆ. ಆದರೆ ಇವುಗಳನ್ನು ಅಳಿಸುವ ಇಲ್ಲವೆ ಉಳಿಸುವ ಕಾರ್ಯಯೋಜನೆಗಳನ್ನು ಕಾಡುಗಳ ಬಗೆಗೆ, ಅರಣ್ಯಗಳ ಬಗೆಗೆ ಕಿಂಚಿತ್ ಕಾಳಜಿ ಇಲ್ಲದ ರಾಜಕಾರಣಿಗಳು ರೂಪಿಸುತ್ತಿರುತ್ತಾರೆ. ಆದರೆ ಶಾಂತವೇರಿ ಗೋಪಾಲಗೌಡರು ಕಾಡುಗಳ ಬಗೆಗೆ, ಅರಣ್ಯಗಳ ಬಗೆಗೆ ಮತ್ತು ಅವುಗಳನ್ನು ಪಾಲನೆ-ಪೋಷಣೆ ಮಾಡುವ ಬಗೆಗೆ ಪ್ರಾಮಾಣಿಕವಾದ ಕಾಳಜಿ ಹೊಂದಿದ್ದರು. ಅವರ ಮುಂದಿನ ಮಾತುಗಳು ಇದನ್ನು ದೃಢಪಡಿಸುತ್ತವೆ. ಸರ್ಕಾರದವರು ಅರಣ್ಯ ಭೂಮಿಗೆ ಸಂಬಂಧಪಟ್ಟ ಹಾಗೆ ಹೊಸ ಕಾನೂನನ್ನು ಮಾಡಿದ್ದಾರೆ. ಅರಣ್ಯವನ್ನು ವಿಸ್ತಾರ ಮಾಡುವುದನ್ನು ಅರಣ್ಯ ಇಲಾಖೆಯವರು ಮಾಡಬೇಕು. ನಮ್ಮಲ್ಲಿ ಅರಣ್ಯವನ್ನು ಬೆಳೆಸುವುದು ಒಂದು ದೊಡ್ಡ ಕೆಲಸವಾಗಿದೆ. ಸರ್ಕಾರದವರು ಅಧಿಕೃತವಾಗಿ ಮರಗಳನ್ನು ಕಡಿದು ಕಾರ್ಖಾನೆಗಳಿಗೆ ಸಾಗಿಸುತ್ತಾರೆ. ಅದೇ ರೀತಿ ಮರಗಳ ಕಳ್ಳಸಾಗಾಣಿಕೆದಾರರು ಕಾನೂನುಬಾಹಿರವಾಗಿ ಅರಣ್ಯವನ್ನು ಕಡಿದು ಕಡಿದು ಧ್ವಂಸ ಮಾಡಿದ್ದಾರೆ. ಇದನ್ನು ಮಲೆನಾಡಿನಲ್ಲಿ ಹೋಗಿ ಯಾರಾದರೂ ನೋಡಿದರೆ ಗೊತ್ತಾಗುತ್ತದೆ. ಯಾರಾದರೂ ಹಿಂದೆ ಮಲೆನಾಡಿಗೆ ಹೋಗಿ ಇದ್ದು ಬಂದಿರುವ ನೌಕರರು, ಈಗ ಅಲ್ಲಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಮಂಡಗದ್ದೆಯ ಸುತ್ತಮುತ್ತ ಎಲ್ಲಿ ನೋಡಿದರೂ ಅರಣ್ಯವೆಲ್ಲಾ ಕಣ್ಮರೆಯಾಗಿದೆ. ಅದು ಈಗ ಬಯಲುಸೀಮೆ ಕಂಡ ಹಾಗೆ ಕಾಣುತ್ತದೆ. ಕಾಡೆಲ್ಲಾ ಧ್ವಂಸವಾಗಿರುವುದರಿಂದ ಮಳೆ ಕಡಿಮೆಯಾಗಿದೆ ಎಂದು ಹೇಳಿರುವುದು ಒಪ್ಪತಕ್ಕ ವಿಚಾರವಾಗಿರುತ್ತದೆ. ಭದ್ರಾವತಿಯಲ್ಲಿಯೂ ಸುತ್ತಮುತ್ತ ೩೦-೪೦ ಮೈಲು ಇದ್ದಂತಹ ಕಾಡನ್ನೆಲ್ಲಾ ಕಡಿದು ನುಂಗಿ ನೀರು ಕುಡಿದಿದ್ದಾರೆ. ಅದು ಕಾಗದದ ಕಾರ್ಖಾನೆಗಳಿಗೆ ಧ್ವಂಸವಾಗಿದೆ. ಅರಣ್ಯ ಇಲಾಖೆಯವರು ಬಹಳ ಸಂತೋಷದಿಂದ ಎರಡೂವರೆ ಕೋಟಿ ರೂಪಾಯಿಗಳ ಆದಾಯ ಬಂದಿದೆ ಎಂದು ಹೇಳುವ ಮಾತುಗಳು ನಾಡಿನ ಸಂಪತ್ತಿನ ಬಗೆಗೆ ಕುರಿತು ಹೇಳಿದ ಹೆಮ್ಮೆಯ ಮಾತುಗಳಾಗುವುದಿಲ್ಲ ಎಂಬುದು ಗೋಪಾಲಗೌಡರ ಅಭಿಪ್ರಾಯವಾಗಿದೆ. ೨೦ ವರ್ಷಗಳ ಅವಧಿಯಲ್ಲಿ ಇಷ್ಟು ಆಯಿತು. ಅರಣ್ಯ ಇಲಾಖೆಯವರು ಸಾಗವಾನಿ ಮತ್ತು ಹೆಚ್ಚಿಗೆ ಬೆಲೆ ಬಾಳತಕ್ಕ ಕೆಲವು ಮರಗಳನ್ನು ಮಾರಾಟ ಮಾಡುವುದರಲ್ಲಿ

ಕೆಲವು ಮೋಸ ನಡೆದಿರುವುದರ ಬಗ್ಗೆ ಗೋಪಾಲಗೌಡರು ನೇರ ಆರೋಪ ಮಾಡುತ್ತಾರೆ. ಹೆಚ್ಚಿಗೆ ಬೆಲೆ ಬಾಳತಕ್ಕ ಕೆಲವು ಮರಗಳನ್ನು ಮತ್ತು ನಾಟಾಗಳನ್ನು ಸಾಮಿಲ್ಲುಗಳಿಗೆ, ಕಾರ್ಖಾನೆಗಳಿಗೆ ಅರಣ್ಯ ಇಲಾಖೆಯವರು ಮಾರಾಟ ಮಾಡಿದ್ದಾರೆ ಎಂದು ಹೇಳುವ ಮೂಲಕ ಅವರ ಕೃತ್ಯಗಳನ್ನು ಸದನದ ಮುಂದೆ ಬಯಲಿಗೆಳೆದಿರುವುದನ್ನು ಇಲ್ಲಿ ಕಾಣಬಹುದಾಗಿದೆ.ಬೆಲೆಬಾಳುವ ಮರಗಳನ್ನು ಮಾರ್ಕೆಟ್ ರೇಟ್‌ಗಿಂತ ಜಾಸ್ತಿ ಕೊಟ್ಟಿದ್ದಾರೆಯೋ ಹೇಗೆ ಎಂಬುದನ್ನು ಪರಿಶೀಲಿಸಬೇಕು ಎಂಬ ಸಲಹೆಯನ್ನು ನೀಡುತ್ತಾರೆ. ಇದರಿಂದ ಏನೂ ಲಾಭವಿಲ್ಲ. ಗಂಧದ ಮರ ಮಾರಾಟವಾಗುತ್ತಿದೆ. ಹೊಸದಾಗಿ ಕಾಡು ಮಾಡುತ್ತೇವೆಂದು ಹೇಳಿ, ಕಾಡು ಕಡಿದುಹಾಕಿ, ನಾಟಾ ಹೊತ್ತುಕೊಂಡು ಹೋಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಿಜವಾಗಿಯೂ ಅರಣ್ಯ ಸಂಪತ್ತು ದೇಶದಲ್ಲಿ ಹೆಚ್ಚಾಗಬೇಕು; ಹಸಿರು ಬೆಳೆಸಬೇಕು. ಸಂಪತ್ತು ಹೆಚ್ಚಿಸಬೇಕು ಇದು ಅವಶ್ಯಕ[೪೪] ಎಂದು ಹೇಳಿರುವ ಗೋಪಾಲಗೌಡರ ಈ ಸಾಲುಗಳು ನಾಡಿನ ಪ್ರಾಕೃತಿಕ ಸಂಪತ್ತನ್ನು ಕುರಿತು ವ್ಯಕ್ತಪಡಿಸಿದ ಕಾಳಜಿಯ ಮಾತುಗಳಾಗಿವೆ.

೬.೧೪. ಕೋಲಾರದ ಚಿನ್ನದ ಗಣಿ

ಸಮಾಜವಾದಿ ರಾಜಕಾರಿಣಿಯಾದವನು ಇಡೀ ದೇಶದ ಉತ್ಪಾದನೆ, ಅದರ ಲಾಭ-ನಷ್ಟ ಮುಂತಾದುವುಗಳ ಬಗ್ಗೆ ಚಿಂತಿಸಬೇಕಾಗುತ್ತದೆ. ಕೋಲಾರದ ಚಿನ್ನದ ಗಣಿಯ ಬಗ್ಗೆ ಶಾಂತವೇರಿ ಗೋಪಾಲಗೌಡರ ವಿಚಾರಗಳು ಹೀಗಿದ್ದವು. ಇದನ್ನು ಅವರ ಮುಂದಿನ ಮಾತುಗಳ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದಾಗಿದೆ : ಚಿನ್ನ ನಮ್ಮ ಆರ್ಥಿಕ ಸ್ಥಿತಿಗೆ ಅಮೂಲ್ಯವಾದ ಆಧಾರ, ಇದರ ಮೇಲೆ ನಮ್ಮ ಆರ್ಥಿಕ ಸುಭದ್ರತೆ ನಿಂತಿದೆ. ಇದರಿಂದ ನಾವು ಒಂದು ದೇಶದ ಆರ್ಥಿಕ ಸುಭದ್ರತೆಯನ್ನು ಅಳೆಯುತ್ತೇವೆ ಎಂಬುದನ್ನು ಬಿಡಿಸಿ ಹೇಳಬೇಕಾದ ಅವಶ್ಯಕತೆಯಿಲ್ಲ ಎಂಬುದು ಗೋಪಾಲಗೌಡರ ಅಭಿಮತವಾಗಿದೆ. ಕಾರಣಾಂತರಗಳಿಂದ ಇಂದು ಕೋಲಾರದ ಚಿನ್ನದ ಗಣಿ ಜಾನ್ ಟೇಲರ್ ಕಂಪನಿಯ ವಶದಲ್ಲಿದೆ. ಇದು ಒಂದು ಬ್ರಿಟಿಷ್ ಕಂಪನಿಯಾಗಿದೆ. ಈ ಮೂಲ ಕೈಗಾರಿಕೆಯನ್ನು ಸುಮಾರು ಮೂರು ಶತಮಾನಗಳಿಂದ ಈ ಕಂಪನಿಯವರು ಶೋಷಣೆ ಮಾಡಿಕೊಂಡು ಬಂದಿದ್ದಾರೆ. ಅವರು ಈ ಉದ್ಯಮದಲ್ಲಿ ತೊಡಗಿದ್ದಾರೆ. ಮೂಲ ಬಂಡವಾಳದ ಸುಮಾರು ೨೫ರಷ್ಟು ಲಾಭವನ್ನು ಕೂಡ ಪಡೆದುಕೊಂಡು ಬಂದಿದ್ದಾರೆ. ಈ ಕೈಗಾರಿಕೆಯಿಂದ ಮೈಸೂರು ಸರ್ಕಾರಕ್ಕೆ ಸ್ವಲ್ಪಮಟ್ಟಿಗೆ 'ರಾಯಲ್ಟಿ' ರೂಪದಲ್ಲಿ ಮತ್ತು ಇತರ ರೂಪಗಳಲ್ಲಿ ಹಣ ಬರುತ್ತಿತ್ತು. ಈಚೆಗೆ ಕಳೆದ ಎರಡು ಮೂರು ವರ್ಷಗಳಿಂದ ಬರುತ್ತಿದ್ದ ಹಣ ಕಡಿಮೆಯಾಗುತ್ತಾ ಬಂದಿರುವುದನ್ನು ಗೋಪಾಲಗೌಡರು ಗಮನಿಸಿದ್ದಾರೆ. ಅವರು ಈ ಹಿಂದೆ ಇದಕ್ಕೆ ಸಂಬಂಧಪಟ್ಟ ವರದಿಯನ್ನು ಕುರಿತು ಚರ್ಚೆ ಮಾಡುವಾಗ ಕೂಲಂಕಷವಾಗಿ ವಿಮರ್ಶೆ ಮಾಡಿರುತ್ತಾರೆ. ಇದಕ್ಕೆ ಕಂಪನಿಯವರು ನಾನಾ ಕಾರಣಗಳನ್ನು ದೇಶದ ಮುಂದೆ, ಸರ್ಕಾರದ ಮುಂದೆ ಇಟ್ಟಿದ್ದುದು ಈಗ ಇತಿಹಾಸ. ಇದರಲ್ಲಿ ಮುಖ್ಯವಾಗಿ ನಾವು ಪರಿಶೀಲನೆಗೆ ಅಥವಾ ಗಣನೆಗೆ ತೆಗೆದುಕೊಳ್ಳಬೇಕಾದ ಕೆಲವು ಮೂಲಭೂತ ಅಂಶಗಳಿವೆ. ಮೊದಲನೆಯದಾಗಿ ನಮ್ಮ ದೇಶ ಸ್ವಾತಂತ್ರ್ಯವನ್ನು ಪಡೆದಿದೆ. ಪರದೇಶದ ಬಂಡವಾಳದಿಂದ ಪಡೆದುಕೊಂಡು ಹೋಗತಕ್ಕ ಕೈಗಾರಿಕೆಗಳ ಬಗ್ಗೆ ನಾವು ಒಂದು ನಿರ್ದಿಷ್ಟವಾದ

ನಿಲುವು ಅಥವಾ ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ. ಇದು ಬಹು ಮುಖ್ಯವಾದ ಚಿನ್ನದ ಕೈಗಾರಿಕೆಯಾಗಿದೆ. ಇದರ ವಿಷಯದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಸರ್ಕಾರ ಕೊಡಬೇಕು ಎನ್ನುವುದು ಗೋಪಾಲಗೌಡರ ನಿಲುವಾಗಿರುತ್ತದೆ. ಅಲ್ಲದೆ ಇದು ಪರದೇಶದ ಕಂಪನಿಯಾಗಿದ್ದರೂ ತಾನು ಸರ್ಕಾರದೊಡನೆ ಯಾವ ಒಂದು ಒಪ್ಪಂದವನ್ನು ಮಾಡಿಕೊಂಡಿತ್ತೊ ಅದನ್ನು ಪರಿಪಾಲನೆ ಮಾಡದೇ ಹೋಯಿತು. ಹಿಂದೆಯೇ ಮುಖ್ಯಮಂತ್ರಿಗಳು ಹೇಳಿರುವ ಹಾಗೆ, ಆ ಕಂಪನಿ ಅದನ್ನು ಮರೆಯಿತು, ಆಚರಣೆಗೆ ತರಲಿಲ್ಲ ಎಂಬುದಕ್ಕೆ ಅನೇಕ ನಿದರ್ಶನಗಳಿವೆಯೆಂದು ಅವರು ಸದನಕ್ಕೆ ತಿಳಿಯಪಡಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ "ಈ ಕಂಪನಿಯವರು ಮುಂದುವರಿಸಿಕೊಂಡು ಹೋಗುವುದು ಯಾವ ರೀತಿಯಲ್ಲಿಯೂ ಲಾಭದಾಯಕವಲ್ಲ, ಸೂಕ್ತವಲ್ಲ, ದೇಶಕ್ಕೆ ಹಿತಕಾರಿಯಲ್ಲ ಎಂಬುದನ್ನು ಮನಗಂಡಿದ್ದೇವೆ. ಈ ದಿನ ಈ ಗಣಿಗಳಿಗೆ ಸಂಬಂಧಪಟ್ಟ ವಿಷಯ ಕೇಂದ್ರಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಕೇಂದ್ರದವರೂ ಕೂಡ ಈ ನಿಲುವನ್ನು ನಿರ್ಧಾರವನ್ನು ಒಪ್ಪುತ್ತಾರೆಂಬ ಭರವಸೆ ನಮಗಿದೆ"[೫] ಎಂದು ಹೇಳುವ ಮೂಲಕ ಕೋಲಾರದ ಚಿನ್ನದ ಗಣಿಯನ್ನು ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ಇಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣುತ್ತೇವೆ.

೬.೧೫. ಭೂಮಿ ಸಮಾಜದ ಸ್ವತ್ತು

ಭೂಮಿ ಮತ್ತು ಅದರ ಒಡೆತನವನ್ನು ಕುರಿತ ಚರ್ಚೆಗಳು, ವಾದಗಳು ಬಹು ಹಿಂದಿನಿಂದಲೂ ಪ್ರಚಲಿತದಲ್ಲಿವೆ. ಭಾರತದ ಸಂದರ್ಭದಲ್ಲಿ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗಿನ ಕಾಲಘಟ್ಟದಲ್ಲಿ ಭೂ ಒಡೆತನದ ವಿಚಾರಗಳು ಮತ್ತೆ ಮತ್ತೆ ಚರ್ಚೆಗೆ ಒಳಗಾಗುತ್ತವೆ. ಆ ಚರ್ಚೆಯ ಒಟ್ಟು ಸಾರವೆಂದರೆ, ಭೂಮಿಯು ಆಳುವವರಿಗೆ ಸೇರತಕ್ಕದ್ದು ಎನ್ನುವುದು ಅರಿವಿಗೆ ಬರುತ್ತದೆ. ಜನರು ಭೂಮಿಯನ್ನು ಭೋಗಿಸುತ್ತಿದ್ದು, ತಮ್ಮ ತಮ್ಮ ಹೆಸರಿನಲ್ಲಿ ನೋಂದಾವಣೆ ಮಾಡಿಸಿಕೊಂಡು ತಮ್ಮದೆಂದು ತಿಳಿದುಕೊಂಡಿರುತ್ತಾರೆ. ಇದು ಲೋಕ ಸತ್ಯ. ಆದರೆ ಕೊನೆಯ ಕ್ಷಣದಲ್ಲಿ ಭೂಮಿಯನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳುವ ಅಂತಿಮ ಹಕ್ಕನ್ನು ಹೊಂದಿರುತ್ತಾರೆ ಎನ್ನುವುದು ವಾಸ್ತವದ ಸತ್ಯವೆನ್ನಬಹುದಾಗಿದೆ. ಈ ಹಿನ್ನೆಲೆಯಲ್ಲಿ ಭೂಮಿಯು ಯಾರ ಸ್ವತ್ತು ಎನ್ನುವ ಪ್ರಶ್ನೆಯು ಸದನದಲ್ಲಿ ತಲೆಯೆತ್ತಿದಾಗ ಗೋಪಾಲಗೌಡರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ ಭೂಮಿ ಒಂದು ಆಸ್ತಿಯ ಪಟ್ಟಿಯಲ್ಲಿ ಸೇರಿರುವುದೂ ತಪ್ಪು ಎಂದು ಕಾಣುತ್ತದೆ. ಭೂಮಿಯನ್ನು ಆಸ್ತಿಪಟ್ಟಿಯಿಂದ ಭಂದಮುಕ್ತ ಮಾಡಬೇಕು. ಅದು ಉತ್ಪತ್ತಿಯ ಸಾಧನವಾಗಿರುವುದರಿಂದ ಯಾರು ಭೂಮಿಯನ್ನು ಉಳುಮೆ ಮಾಡುತ್ತಾರೋ, ಯಾರು ಭೂಮಿಯ ಮೇಲೆ ಕೃಷಿ ಮಾಡಿ, ಕೆಲಸ ಮಾಡಿ ಅದರಿಂದ ಉತ್ಪನ್ನವನ್ನು ಮಾಡುತ್ತಾರೋ, ಆ ಉತ್ಪನ್ನ ಅವರ ಸ್ವತ್ತು ಆಗಿರಬೇಕು; ಭೂಮಿ ಮಾರತಕ್ಕ ಕೊಳ್ಳತಕ್ಕಂತಹ ಒಂದು ವಸ್ತುವಾಗಿರಬಾರದು. ಮನುಷ್ಯನ ಅಸ್ತಿತ್ವಕ್ಕೆ ಅದು ಬಲಿಯಾಗಬಾರದು ಎಂಬ ಒಂದು ನೀತಿಯನ್ನು ನಾವು ಇಟ್ಟುಕೊಳ್ಳುವುದು ಬಹಳ ಉಚಿತ ಎಂದು ಕಾಣುತ್ತದೆ ಎನ್ನುತ್ತಾರೆ. ಮುಂದುವರೆದು ನಮ್ಮ ದೇಶದಲ್ಲಿ ಈ ಭೂಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಮೂರು ಮಾರ್ಗಗಳಿವೆ ಎಂದು ಹೇಳುತ್ತಾರೆ.

೧. ಕಮ್ಯೂನಿಸ್ಟರ ತೆಲಂಗಾಣ ಮಾರ್ಗ

೨. ಕಾನೂನು ಮಾಡಿ ಭೂಮಿಯನ್ನು ಸಮಾನವಾಗಿ ಹಂಚಿಕೆ ಮಾಡತಕ್ಕ ಮಾರ್ಗ

೩. ಇತ್ತೀಚೆಗೆ ವಿನೋಬಾ ಭಾವೆಯವರು ಆಚರಣೆಗೆ ತಂದಿರತಕ್ಕ ಭೂಮಿಯನ್ನು ಇದ್ದವರಿಂದ ದಾನವಾಗಿ ತೆಗೆದುಕೊಂಡು ಇಲ್ಲದವರಿಗೆ ಹಂಚಿಕೆ ಮಾಡತಕ್ಕ ಮಾರ್ಗ

ಈ ಮೂರು ಮಾರ್ಗಗಳನ್ನು ನಾವು ನೋಡಿದ್ದೇವೆ. ಇಂದು ಕಾನೂನು ಮಾರ್ಗ ಮತ್ತು ಹಿಂಸೆಯನ್ನು ಮಾಡಿ ಕ್ರಾಂತಿಯನ್ನೆಬ್ಬಿಸುವ ಮಾರ್ಗ ಇವೆರಡನ್ನೂ ಬಿಟ್ಟು ವಿನೋಬಾ ಭಾವೆಯವರು ಭೂಮಿಯ ಮಾಲೀಕರಿಂದ ತಮ್ಮ ಭೂಮಿಯ ಒಂದು ಭಾಗವನ್ನು ದಾನವಾಗಿ ಕೊಡಿ ಎಂದು ಕೇಳುತ್ತಾ ಇದ್ದಾರೆ. ಇದನ್ನೆಲ್ಲಾ ನಾವು ಯೋಚನೆ ಮಾಡಿ ನೋಡುವುದಾದರೆ, ಇವೊತ್ತು ಭೂಮಿಯ ಸಮಸ್ಯೆ ಹಿಂದಿಗಿಂತ ಉತ್ಕಟವಾಗಿದೆ ಎಂದು ವೇದ್ಯವಾಗುತ್ತದೆ. ಆದ್ದರಿಂದ ಮೈಸೂರು ಸಂಸ್ಥಾನದಲ್ಲಿ ಒಂದು ಪ್ರಗತಿಯನ್ನು ಸಾಧಿಸಬೇಕಾದರೆ ಬರೀ ಒಂದು ಟೆನೆನ್ಸಿ ಕಾನೂನು ಅಥವಾ ರದ್ದಿಯಾತಿ ಮಸೂದೆ ಮಾಡಿ ನಾವು ಸ್ವಸ್ತವಾಗಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ವಾಸ್ತವ ವಿಚಾರವನ್ನು ಗೋಪಾಲಗೌಡರು ಪ್ರತಿಪಾದಿಸುತ್ತಾರೆ. ಅಥವಾ ಅಷ್ಟಕ್ಕೇ ಕೈಬಿಟ್ಟರೆ ನಮ್ಮ ರೈತರ ಅಭಿವೃದ್ಧಿ ಆಯಿತು ಅಥವಾ ಭೂಮಿಯ ಸಮಸ್ಯೆ ಪರಿಹಾರವಾಯಿತು ಎಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ನಮ್ಮ ಸಂಸ್ಥಾನದಲ್ಲಿ ಯಾರಿಗೇ ಆಗಲಿ ಅವರ ಕುಟುಂಬಕ್ಕೆ ಅನುಸಾರವಾಗಿ ಎಷ್ಟು ಭೂಮಿಯನ್ನು ಅವರ ಸ್ವಂತ ಶ್ರಮದಿಂದ ಉಳುಮೆ ಮಾಡಬಹುದೋ ಅಷ್ಟು ಭೂಮಿಗಿಂತ ಹೆಚ್ಚಿಗೆ ಭೂಮಿ ಯಾರೂ ಇಟ್ಟುಕೊಳ್ಳತಕ್ಕದ್ದಲ್ಲ. ಅದೆಲ್ಲಾ ಸರ್ಕಾರಕ್ಕೆ ಸೇರಬೇಕು. ಭೂಮಿ ಸಮಾಜದ ಸ್ವತ್ತು ಆಗಿರಬೇಕು. ಭೂಮಿ ಮಾಡತಕ್ಕವನು ಆ ಭೂಮಿಯಿಂದ ಬರತಕ್ಕ ಉತ್ಪನ್ನವನ್ನು ಮಾತ್ರ ಪಡೆದು ಅದನ್ನು ಅನುಭವಿಸತಕ್ಕ ಒಂದು ವ್ಯವಸ್ಥೆ ಏರ್ಪಡಬೇಕು. ಇದಕ್ಕೆ ಹೆಚ್ಚಿನ ವಿರೋಧ ದೇಶದಲ್ಲಿ ಇದೆ ಎಂದು ಗೋಪಾಲಗೌಡರು ಭಾವಿಸಿಕೊಂಡಿರುವುದಿಲ್ಲ.

ಭೂಮಿ ಮಾರತಕ್ಕ, ಕೊಳ್ಳತಕ್ಕ ವಸ್ತು ಆಗಬಾರದು. ಯಾರು ಕೃಷಿ ಮಾಡುತ್ತಾರೋ ಅವರಿಗೆ ಎಷ್ಟು ಕೃಷಿ ಮಾಡುವುದಕ್ಕೆ ಸಾಮರ್ಥ್ಯವಿದೆಯೋ ಅಷ್ಟು ಮಾತ್ರ ಭೂಮಿ ಕೊಡಬೇಕು. ಯಾವೊತ್ತು ಕೃಷಿ ಮಾಡುವುದಕ್ಕೆ ಅವರಿಂದ ಸಾಧ್ಯವಾಗುವುದಿಲ್ಲವೋ ಆವೊತ್ತು ಆ ಭೂಮಿ ಅವರ ಕೈಯಲ್ಲಿರಬಾರದು, ಸರ್ಕಾರಕ್ಕೆ ಸೇರಬೇಕು. ಇತರರು ಯಾರು ಅಲ್ಲಿ ಕೃಷಿ ಮಾಡತಕ್ಕವರು ರೈತರು ಇರುತ್ತಾರೋ ಅವರಿಗೆ ಕೊಡಬೇಕು. ಹೀಗೆ ಭೂಮಿ ಕೃಷಿಗೆ ಯೋಗ್ಯವಾದ ಒಂದು ಸಾಧನವಾಗಿ ಉಳಿಯಬೇಕೇ ಹೊರತು ಮಾರಿಕೊಳ್ಳಲು ಇರತಕ್ಕ ಒಂದು ಆಸ್ತಿಯಾಗಿರಬಾರದು[೧] ಎಂಬ ಹೇಳಿಕೆಯನ್ನು ಸದನಕ್ಕೆ ನೀಡುವುದರ ಮೂಲಕ ಭೂಮಿಯ ಸ್ವತ್ತಿನ ಬಗೆಗೆ ತಮ್ಮ ನಿಲುವನ್ನು ಗೋಪಾಲಗೌಡರು ವ್ಯಕ್ತಪಡಿಸುತ್ತಾರೆ. ಮುಂದುವರೆದು ಇದೇ ಕಾರಣದಿಂದ ಇಂದು ನಾವು ಮುಖ್ಯವಾಗಿ ಮೈಸೂರು ಸಂಸ್ಥಾನದಲ್ಲಿ ಒಂದು ಸರ್ವೇ ನಡೆಸಬೇಕು. ಉಳುವುದಕ್ಕೆ ಯೋಗ್ಯವಾದ

ಭೂಮಿ ಎಷ್ಟಿದೆ. ಹಿಡುವಳಿಯಲ್ಲಿ ತಕ್ಕ ಭೂಮಿ ಎಷ್ಟು, ಭೂಮಿ ಇಲ್ಲದೇ ಇರತಕ್ಕವರ ಸಂಖ್ಯೆ ಎಷ್ಟು ಎಂಬ ಅಂಕಿ ಅಂಶಗಳನ್ನೆಲ್ಲಾ ಸಂಗ್ರಹಿಸಿ ಅನಂತರದಲ್ಲಿ ಒಂದು ಕಾನೂನನ್ನು ತರುವುದರಿಂದ ಭೂಮಿ ಒಂದೇ ಸಮಾನವಾಗಿ ಹಂಚಿಕೆಯಾಗಿ ಅದರಿಂದ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆಗ ದೇಶದಲ್ಲಿ ಒಂದು ಹೊಸ ಚೈತನ್ಯ ಉಂಟಾಗುತ್ತದೆ. ರೈತರು ಭೂಮಿಯನ್ನು ರೂಢಿಸಿಕೊಳ್ಳುವುದಕ್ಕೂ ಮತ್ತು ಅನೇಕ ವಿಧವಾದ ಸಾಮಾಜಿಕ ಅಭಿವೃದ್ಧಿ ಯೋಜನೆಗಳಲ್ಲಾಗಲಿ, ನೀರಾವರಿ ಕಾಮಗಾರಿಗಳ ಯೋಜನೆಗಳಲ್ಲಾಗಲಿ, ಇನ್ನಾವುದಾದರೂ ಕಾರ್ಯಕ್ರಮಗಳಲ್ಲಾಗಲಿ ರೈತರು ಮುಂದೆ ಬಂದು ಆಸಕ್ತಿಯಿಂದ ಭಾಗವಹಿಸುವುದಕ್ಕೂ ಅನುಕೂಲಕರವಾದ ವಾತಾವರಣ ನಿರ್ಮಾಣವಾಗುತ್ತದೆ. ಆದ್ದರಿಂದ ತಾನೇ ತಾನಾಗಿ ಅವರ ಜೀವನ ಉತ್ತಮಗೊಳ್ಳುತ್ತದೆ ಹೊರತು ಇಲ್ಲದೇ ಹೋದರೆ ನಾವು ದೇಶದ ಅಭಿವೃದ್ಧಿಗೆ ಯಾವ ಕಾರ್ಯಕ್ರಮವನ್ನು ಕೈಗೊಂಡರೂ ಕೂಡ ಯಶಸ್ವಿಯಾಗುವುದಿಲ್ಲ. ಬಹುಸಂಖ್ಯಾತ ರೈತರಿಗೆ ಎಲ್ಲಿಯ ತನಕ ಅವರ ಜೀವನಕ್ಕೆ ಆಧಾರವಾಗಿರತಕ್ಕ ಭೂಮಿ ಅವರ ಕೈಯಲ್ಲಿರುವುದಿಲ್ಲವೋ ಅಲ್ಲಿಯ ತನಕ ನಾವು ಯಾವ ರೀತಿಯ ಸಹಾಯ ಮಾಡುತ್ತೇವೆ ಎಂದರೂ ಅದು ಬರಿ ಮಾತಾಗುತ್ತದೆಯೆ ಹೊರತು ಕಾರ್ಯತಃ ಅವರಿಗೆ ಅನುಕೂಲಕರವಾಗಿ ಪರಿಣಮಿಸುವುದಿಲ್ಲ. ಅದರಿಂದ ದೇಶದ ಅಭಿವೃದ್ಧಿ ಆಗುವುದಿಲ್ಲ ಎಂದು ಹೇಳಿ ಈ ಒಂದು ನಿರ್ಣಯವನ್ನು ತಾವೆಲ್ಲರೂ ಸಮರ್ಥಿಸಬೇಕು. ಮತ್ತು ಸರ್ಕಾರದವರು ಕೂಡಲೇ ಭೂಮಿಯನ್ನು ಸಮಾನವಾಗಿ ಹಂಚುವುದಕ್ಕೆ ಒಂದು ಒಂದು ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಬೇಕೆಂದು ಕೇಳಿಕೊಳ್ಳುತ್ತಾ ತಮ್ಮ ನಿರ್ಣಯವನ್ನು ಸಭೆಯ ಮುಂದೆ ಗೋಪಾಲಗೌಡರು ಮಂಡಿಸುತ್ತಾರೆ.

ಭೂಮಿ ಪ್ರಕೃತಿದತ್ತವಾದ ವಸ್ತು. ಅದರಲ್ಲಿ ನಮ್ಮೆಲ್ಲರ ಅಸ್ತಿತ್ವ ಅಡಗಿದೆ. ಆರ್ಥಿಕ ದೃಷ್ಟಿಯಿಂದ ಭೂಮಿ ಉತ್ಪಾದನಾಂಗಗಳಲ್ಲಿ ಪ್ರಮುಖವಾದುದು. ಅದರಲ್ಲೂ ಭಾರತ ಕೃಷಿ ಪ್ರಧಾನವಾದ ದೇಶ. ಒಂದು ದೃಷ್ಟಿಯಿಂದ ಗೌಡರ ಮಾತು ಬರೀ ನಮ್ಮ ರಾಜ್ಯಕ್ಕೆ ಮಾತ್ರವಲ್ಲದೆ ಸಮಸ್ತ ಭಾರತಕ್ಕೆ ಅನ್ವಯವಾಗುವಂತದ್ದು. ಭೂಮಿಯನ್ನು ಕುರಿತಂತೆ ಅವರ ಚಿಂತನೆ ಅಭೂತಪೂರ್ವವಾಗಿರುವಂತೆ ತೋರುತ್ತದೆ. ೧೯೫೦ರ ದಶಕದ ಹೊತ್ತಿಗಾಗಲೆ ಜನಸಂಖ್ಯೆ ಹೆಚ್ಚಿ ಭೂಮಿಯ ಮೇಲೆ ಸಾಕಷ್ಟು ಒತ್ತಡ ಬಂದಿತ್ತು. ಭೂಮಿಗೆ ಮತ್ತು ರೈತರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅವರು ನೋಡುವ ದೃಷ್ಟಿಕೋನ ವಿಶಿಷ್ಟವಾದುದು. ಭೂಮಿ ಒಂದು ಮಾರಾಟದ ವಸ್ತುವಾಗಬಾರದು ಮತ್ತು ಕೃಷಿ ಮಾಡುವ ಯೋಗ್ಯತೆಗೆ ಅನುಸಾರವಾಗಿ ವ್ಯವಸಾಯದ ಭೂಮಿ ರೈತರಲ್ಲಿ ಇರಬೇಕು ಮತ್ತು ಹೆಚ್ಚುವರಿ ಭೂಮಿಯನ್ನು ಸರಕಾರ ತೆಗೆದುಕೊಂಡು ವ್ಯವಸಾಯ ಆಸಕ್ತ ಭೂರಹಿತರಿಗೆ ಹಂಚಬೇಕು ಎಂಬುದು ಸಮಾಜವಾದಿ ಧೋರಣೆಯಾಗಿ ಕಂಡರೂ ಅಂತರ್ಯದಲ್ಲಿ ಭಿನ್ನವಾಗಿ ತೋರುತ್ತದೆ. ಕಾರಣ ಸಮಾಜವಾದದಲ್ಲಿ ಭೂಮಿಯ ಸಮಾನ ಹಂಚಿಕೆಯ ತತ್ವ ಇದೆ. ಆದರೆ ಸಮತಾವಾದದಲ್ಲಿ ಭೂಮಿಯ ಒಡೆತನ ರಾಜ್ಯಕ್ಕೆ ಸೇರಿರುತ್ತದೆ. ಇಲ್ಲಿ ಆಸಕ್ತರು ಅಗತ್ಯವಿರುವಷ್ಟು ಭೂಮಿಯಲ್ಲಿ ವ್ಯವಸಾಯ ಮಾಡಬೇಕು ಮತ್ತು ಆ ವೃತ್ತಿಯನ್ನು ನಿಲ್ಲಿಸಿದರೆ ಭೂಮಿಯನ್ನು ಮಾರದೇ ಸರಕಾರಕ್ಕೆ

ಬಿಟ್ಟುಕೊಡಬೇಕು ಎಂಬುದು ಗೋಪಾಲಗೌಡರ ಚಿಂತನೆಯ ವಿಶಿಷ್ಟ ಧಾಟಿಯಾಗಿದೆ. ಭೂಮಿಯ ಮೇಲೆ ಹುಟ್ಟಿದ ಮನುಷ್ಯರೆಲ್ಲರಿಗೆ ಪೂರಕವಾಗಿ ಆಹಾರ ಸಿಗಬೇಕಾದರೆ ಭೂಮಿಯನ್ನು ಒಂದು ಸಮಗ್ರ ಉತ್ಪಾದನಾ ಘಟಕವಾಗಿ ನೋಡಬೇಕು ಮತ್ತು ಆಹಾರೋತ್ಪಾದನೆಯಲ್ಲಿ ತೊಡಗುವ ಜನರು ಸಾಂದರ್ಭಿಕವಾಗಿ ಕೃಷಿಕರಾಗಿರುತ್ತಾರೆ ಎನ್ನುವ ಗೌಡರ ಮಾತು ನಮ್ಮನ್ನು ಚಿಂತನೆಗೆ ತೊಡಗಿಸುತ್ತದೆ. ಏಕೆಂದರೆ ಇಂದು ರೈತರೆಂದು ಹೇಳಿಕೊಳ್ಳುವ ಅನೇಕರು ರೈತಾಪಿ ಕಾರ್ಯದಲ್ಲೇ ತೊಡಗಿಕೊಂಡಿಲ್ಲ. ಆದರೆ ವ್ಯವಸಾಯ ಭೂಮಿಯ ಮಾಲಿಕರಾಗಿದ್ದಾರೆ. ವಿಪರೀತ ಏರಿರುವ ಜನಸಂಖ್ಯೆ ಇರುವ ಇಂದಿನ ದಿನಮಾನಗಳಲ್ಲಿ ಕೃಷಿ ಭೂಮಿಯನ್ನು ಉತ್ಪಾದನೇತರ ಚಟುವಟಿಕೆಗಳಿಗಾಗಿ ಬಳಸುತ್ತಿರುವ ನಮ್ಮ ಸರ್ಕಾರ ಮತ್ತು ಸಮಾಜ ಗೋಪಾಲಗೌಡರ ಮಾತನ್ನು ನೆನಪಿಸಿಕೊಂಡು ಭೂಮಿಯ ಬಗ್ಗೆ ಬೇರೆ ರೀತಿಯಾಗಿ ತೊಡಗಿಸಿಕೊಳ್ಳುವ ಅಗತ್ಯವಿದೆ.

೬.೧೬. ಧೂಮಪಾನ ಕುರಿತು

ಧೂಮಪಾನ ಒಂದು ಸಾಮಾಜಿಕ ಪಿಡುಗಾಗಿದೆ. ಅದರಿಂದ ಅನೇಕ ಜನ ದುರ್ಮರಣವನ್ನು ಹೊಂದುತ್ತಿರುವುದು ಹಿಂದಿನಿಂದಲೂ ಕಂಡುಬರುತ್ತಿದೆ. ಒಂದೆಡೆ ಧೂಮಪಾನದ ಮೂಲ ವಸ್ತುವಾದ ತಂಬಾಕಿನ ಉತ್ಪನ್ನ ಮತ್ತು ಮಾರಾಟಗಳು ಸರ್ಕಾರ ಮತ್ತು ರೈತ ಇವರಿಬ್ಬರಿಗೂ ಲಾಭದಾಯಕವಾದ ಪರಿಣಾಮಗಳನ್ನು ಉಂಟುಮಾಡುತ್ತವೆ ನಿಜ. ಆದರೆ ಅದರ ಸೇವನೆಯಿಂದ ಸಾಮಾನ್ಯ ಜನರು ತಮ್ಮ ಆರೋಗ್ಯವನ್ನು ಹಾಳುಗೆಡವಿಕೊಳ್ಳುವುದು ಒಂದು ಅನಾರೋಗ್ಯಕರ ಸಾಮಾಜಿಕ ವಾತಾವರಣದ ನಿರ್ಮಾಣಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಗೋಪಾಲಗೌಡರು ಸದನದಲ್ಲಿ ಧೂಮಪಾನವನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಇಲ್ಲಿ ಪರಾಮರ್ಶಿಸಲಾಗಿದೆ. ಅವರ ಭಾಷಣದ ಹೊತ್ತಿಗಾಗಲೇ ವಿಧಾನಪರಿಷತ್ತಿನಲ್ಲಿ ಧೂಮಪಾನವನ್ನು ಕುರಿತಂತೆ ಮಸೂದೆಯೊಂದು ಸಭೆಯ ಮುಂದಿನ ಪರಿಶೀಲನೆಗೆ ಅಂಗೀಕಾರವಾಗಿರುತ್ತದೆ. ಈ ಮಸೂದೆ ಹಳೆಯ ಮೈಸೂರಿನ ವಿಭಾಗದಲ್ಲಿ ಮತ್ತು ಕೊಡಗಿನಲ್ಲಿ ಜಾರಿಯಲ್ಲಿದೆ. ಉಳಿದ ಮುಂಬೈ, ಹೈದರಾಬಾದು ಮತ್ತು ಮದರಾಸು ಈ ಭಾಗಗಳಲ್ಲಿ ಬಂದಿಲ್ಲ. ಅದರಿಂದಾಗಿ ಎಲ್ಲಾ ಕಡೆಗಳಲ್ಲಿಯೂ ಈ ಒಂದು ಕಾನೂನನ್ನು ಅನ್ವಯಿಸಬೇಕು ಎನ್ನುವ ಕಾರಣದಿಂದ ಈ ಮಸೂದೆಯನ್ನು ತಂದಿದ್ದೇನೆ ಎಂದು ಸರಕಾರದವರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಪರಮೇಶ್ವರಪ್ಪನವರು ಹೇಳಿದ ಹಾಗೆ ತಾವೂ ಒಬ್ಬ ಧೂಮಪಾನದ ಚಟ ಇರುವ ಒಬ್ಬ ಮನುಷ್ಯ. ಆದ್ದರಿಂದ ಚಟ ಇರುವ ಒಬ್ಬ ಮನುಷ್ಯನಿಗೆ ಇದರ ಕಷ್ಟ ಗೊತ್ತಿದೆಯೇ ಹೊರತು ಸೇದದೇ ಇರುವವರಿಗೆ ಇದು ಏನು ಎಂದು ಹೇಳುವುದು ಕಷ್ಟವಾಗಿದೆ ಎಂದು ಗೋಪಾಲಗೌಡರು ತಿಳಿಸುತ್ತಾರೆ. ಶ್ರೀಮಾನ್ ಮುಕ್ಕಣ್ಣಪ್ಪನವರೂ ಕೂಡ ಹಿಂದೆ ಸೇದುತ್ತಿದ್ದರು, ಬಹುಶಃ ಈಗ ಇಲ್ಲದಿರಬಹುದು. ಅದರಿಂದ ಸೇದುವವರನ್ನು ಕಂಡರೆ ಅವರು ಹರಿಹಾಯುತ್ತಾರೆ ಮತ್ತು ವಿರೋಧಿಸುತ್ತಾರೆ. ನಾನು ಪೈಪು ಸೇದುವಾಗ ನನಗೆ ತಂಬಾಕನ್ನು ಕೊಡಿಸುವುದಕ್ಕಾಗಿ ಅವರೇ ಕರೆದುಕೊಂಡು ಅದಕ್ಕೆ ಹಣ ಕೂಡ ಕೊಟ್ಟು ಸೇದಿಸಿದ್ದೂ

ಉಂಟು. ಕೆಲವು ಸಲ ರಾಜೀ ಕೂಡ ಮಾಡಬೇಕಾಗುತ್ತದೆ. ಸಹಬಾಳ್ವೆ ಎನ್ನುವ ಮಾತನ್ನು ನಿಜವಾದ ಜೀವನದಲ್ಲಿಯೂ ಅನುಸರಿಸಿಕೊಂಡು ಹೋಗುವ ಪ್ರಯತ್ನದಲ್ಲಿ ಇಂತಹವುಗಳನ್ನೆಲ್ಲಾ ಸಹಿಸಿಕೊಂಡು ಹೋಗಬೇಕು ಎನ್ನುತ್ತಾ, ಈ ತಂಬಾಕು ಸೇವನೆ ಒಳ್ಳೆಯದು ಅಥವಾ ಅನಿವಾರ್ಯ ಎಂದು ಹೇಳುವ ಧಾಷ್ಟ್ಯವನ್ನು ತಾವು ವ್ಯಕ್ತಪಡಿಸುವುದಿಲ್ಲ ಎಂದು ಗೋಪಾಲಗೌಡರು ತಿಳಿಸುತ್ತಾರೆ. ಧೂಮಪಾನಕ್ಕೆ ಕಾರಣವಾದ ನಿಕೋಟಿನ್ ಅನ್ನು ಶ್ರೀಮತಿ ನಿಕೊಟೀನಾ ಎಂದು ಏನು ಕರೆಯುತ್ತೀರೋ, ಅವಳ ಪ್ರಭಾವಕ್ಕೆ ಒಳಗಾಗದೆ ಇರುವಂತಹವರು ಬಹಳ ಅಲ್ಪಸಂಖ್ಯಾತರು ಇದ್ದಾರೆ ಎಂದು ಅವರು ಕಾವ್ಯಾತ್ಮಕವಾಗಿ ಹೇಳುತ್ತಾರೆ. ಅದರ ಉಪಯೋಗ ಬೇರೆ ಬೇರೆ ರೀತಿಯಲ್ಲಿರುವುದನ್ನು ಪ್ರಜೆಗಳ ರೂಢಿಯಿಂದ ತಿಳಿಯಬಹುದು. ಅವಳು ಅಂದರೆ 'ನಿಕೋಟಿನಾ' ಸಿಗರೇಟಿನ ರೂಪದಲ್ಲಿರಬಹುದು, ಬೀಡಿಯ ರೂಪದಲ್ಲಿರಬಹುದು, ಚುಟ್ಟಾದ ರೂಪದಲ್ಲಿರಬಹುದು, ಹಾಗೇ ನಾನು ಸೇದುವ ಪೈಪಿನ ರೂಪದಲ್ಲಿಯೂ ಇರಬಹುದು. ಮಾನ್ಯ ಸದಸ್ಯರುಗಳೆಲ್ಲಾ ಈ ಅದೃಷ್ಟಹೀನರಾದ ತಂಬಾಕು ಸೇದುವವರಿಗೆ ಶಿಕ್ಷೆ ವಿಧಿಸುತ್ತೇವೆ ಎಂದು ಹೇಳುತ್ತಾರೆ. ಅಲ್ಲದೆ ಈಗ ಬೇರೆ ರೀತಿಯಲ್ಲಿ ಮೂಗಿನೊಳಕ್ಕೆ ಉಂಡುಂಡೆಯಾಗಿ ನಶ್ಯವನ್ನು ಹಾಕುವವರನ್ನು ನೋಡುತ್ತೇನೆ. ಅವರಿಗೆ ಇದರಲ್ಲಿ ಯಾವ ಕಾನೂನೂ ಇಲ್ಲ. ಈ ತರಹದ ತಾರತಮ್ಯವನ್ನು ಮಾಡಿರುವುದನ್ನು ನೋಡಿ ನಾವು ಸಹಿಸುವುದಕ್ಕಾಗುವುದಿಲ್ಲ. ಮತ್ತು ಇದನ್ನು ತಿನ್ನತಕ್ಕವರೂ ಇದ್ದಾರೆ, ಕೈಯಿಂದ ಮೂಸಿ ನೋಡುವವರೂ ಇದ್ದಾರೆ, ಸೇದುವವರು ಸೇದುತ್ತಾರೆ. ಹೀಗಿರುವುದರಿಂದ ಈ ತಂಬಾಕು ವಿಷಯದಲ್ಲಿ ಇಷ್ಟು ನಿಕೃಷ್ಟ ಭಾವನೆಯನ್ನು ತಾಳುವುದು ಸಾಧುವಲ್ಲ ಎಂದು ಹೇಳುವ ಮೂಲಕ ತಂಬಾಕಿನ ಬಗೆಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಿರುವುದು ಈ ಮಾತುಗಳ ಮೂಲಕ ತಿಳಿಯುತ್ತದೆ.

ತಂಬಾಕು ವ್ಯಾಪಾರದ ದೃಷ್ಟಿಯಿಂದ, ಬೆಳೆಯತಕ್ಕ ರೈತನ ದೃಷ್ಟಿಯಿಂದ ಬಹಳ ದೊಡ್ಡ ಉದ್ಯಮವಾಗಿ, ಉದ್ಯೋಗವೂ ಆಗಿ ಪರಿಣಮಿಸಿದೆ. ತಂಬಾಕನ್ನು ದೇಶವಿದೇಶಗಳಲ್ಲಿ ತರಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತಿರುವುದನ್ನು ಸರಕಾರ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಿಲ್ಲವೆಂದು ತಿಳಿದುಬರುತ್ತದೆ. ಕಾನೂನು ಮಾಡುವುದರಲ್ಲಿ ಕಾನೂನು ಮಾಡಬೇಕು ಎನ್ನುವುದರಲ್ಲಿ ನೀತಿಯೇನೋ ಒಳ್ಳೆಯದು. ಆದರೆ ಯಾವ ತಪ್ಪನ್ನೂ ಮಾಡದೆ ಇರುವ ಒಬ್ಬ ಸೇದುವವನಿಗೆ, ಅವನು ಯಾವ ತಪ್ಪನ್ನೂ ಮಾಡದೇ ಇರುವಾಗ ಇಂತಹ ಭಯವಾಗುವಂತಹ ದಂಡ ಎನ್ನುವುದು ನೀತಿಯೇ? ಧೂಮಪಾನ ಸೇವನೆ ಮಾಡುತ್ತಿರುವವನನ್ನು ಬಂಧಿಸಿ ಎಷ್ಟು ದಿನಗಳವರೆಗೆ ಸೆರೆಮನೆಯಲ್ಲಿ ಇಡಬೇಕು ಎನ್ನುವುದನ್ನು ಈ ಕಾನೂನು ಸ್ಪಷ್ಟಪಡಿಸುವುದಿಲ್ಲ. ಹಾಗೇನೂ ವಿಚಾರ ಮಾಡದೆ ಹೋದರೆ ಒಂದು ಸಾರಿ ಒಂದು ರೀತಿಯಾಗಿ ಶಿಕ್ಷೆ ಮಾಡುವುದು ಇನ್ನೊಂದು ಸಾರಿ ಬೇರೆ ರೀತಿ ಎನ್ನುವುದು ಸರಿಯಲ್ಲ. ಇದರಿಂದ ಒಂದು ರೀತಿಯಾದ ವಿಕೋಪವುಂಟಾಗಲು ಅವಕಾಶವಾಗುತ್ತದೆ ಎನ್ನುತ್ತಾರೆ ಗೋಪಾಲಗೌಡರು. ಟಾಲ್‌ಸ್ಟಾಯ್‌ರವರಂತಹ ಮಹಾತ್ಮರು ಕೂಡ ಸಿಗರೇಟನ್ನು, ಹೊಗೆಸೊಪ್ಪನ್ನು ಸೇವನೆ ಮಾಡುತ್ತಿದ್ದುದು ಮಾತ್ರವಲ್ಲ. ಆಲ್ಕೋಹಾಲನ್ನೂ ಸೇವನೆ ಮಾಡುತ್ತಿದ್ದರು. ಆಲ್ಕೋಹಾಲ್‌ನ

ಸೇವನೆಯಿಂದ ನರಗಳ ಬಲಗಳು ಬಲಹೀನತೆಯಾಗುತ್ತದೆ. ಇದರಿಂದ ಮನುಷ್ಯನು ಬಲಹೀನನಾಗುತ್ತಾನೆ ಎಂದು ಅವರೂ ಹೇಳುತ್ತಿದ್ದರು. ತಾವೂ ಹೇಳಬಹುದು. ತಂಬಾಕು ಸೇದುವುದರಿಂದ ಮಂಕಾಗಿ ಕೆಡುಕಾಗುತ್ತದೆ ಎಂದೂ ಹೇಳುತ್ತಾರೆ. ನಾನು ಯಾರನ್ನೂ ಸೇದುತ್ತಿದ್ದಾರೆ ಅದು ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಈ ಕಾನೂನು ನಮ್ಮ ಹಳೆಯ ರಾಜ್ಯದಲ್ಲಿದೆ. ಇದನ್ನು ಸಾಮಾನ್ಯ ಜನರಿಗೆ 'ಹುಡ್ ವಿಂಕ್' ಮಾಡುವುದಕ್ಕಾಗಿ ತಂದಂತಿದೆ. ಸಿನಿಮಾದಲ್ಲಿ ಯಾವನೋ ಒಬ್ಬ ಮರೆಯಾಗಿ ಸೇದುತ್ತಿರುವುದನ್ನು ನೋಡಿಯೂ ನೋಡದ ಹಾಗೆ ಅಲ್ಲಿರುವ ಪೊಲೀಸಿನವರು ಏನೋ ಪಾಪ ಸೇದಿಕೊಳ್ಳಲಿ ಬೀಡಿ, ಎನ್ನುತ್ತಾನೆ. ಬೀಡಿ ಸೇದುವವನಿಗೆ ಅಲ್ಲಿ ಆಗದವನೊಬ್ಬನಿದ್ದರೆ ಅವನು ಕೂಡಲೇ ಪೊಲೀಸಿನವರಿಗೆ ಹೇಳಿಬಿಡುತ್ತಾನೆ. ಆದರೆ ಈಗಿರತಕ್ಕ ಪೊಲೀಸು ಕಾನ್ಸ್ಟೇಬಲ್ಲುಗಳಲ್ಲಿ ಸಾಮಾನ್ಯವಾಗಿ ಸೇದದೇ ಇರತಕ್ಕವರಿಲ್ಲ. ಎಲ್ಲೋ ಕೆಲವರು ಸೇದದೇ ಇರಬಹುದು. ಆದುದರಿಂದ ಈ ಕಾನೂನನ್ನು ಸಾಯಿಸುವುದಕ್ಕೆ ತಂದಂತೆ ತೋರುತ್ತದೆ. ಇನ್ಸ್‌ಪೆಕ್ಷನ್ ಮಾಡುವ ಕೆಲಸವನ್ನೂ ಹೆಚ್ಚಿ, ಇನ್ನೊಂದು ಹೆಜ್ಜೆ ಮುಂದೆ ಹೋಗಿ ಸೇದುವವರಿಗೆ ಶಿಕ್ಷೆಯನ್ನೂ ವಿಧಿಸಬಹುದು ಎಂದು ಹೇಳಿದರೆ ಸ್ವೇಚ್ಛೆಯಾಗಿ ಕಲಹ ಮಾಡಲು ಅವಕಾಶ ಕೊಟ್ಟಂತಾಗುತ್ತದೆ. ಇಂತಹ ನೀತಿಯನ್ನನುಸರಿಸಿ ಕಾನೂನನ್ನು ಮಾಡುವುದರಿಂದ ಇದನ್ನು ಎನ್‌ಫೋರ್ಸ್ ಮಾಡಬೇಕೆಂದರೆ ಅದೊಂದು ಬಹಳ ದೊಡ್ಡ ಪ್ರಶ್ನೆಯಾಗುತ್ತದೆ ಎಂದು ಗೋಪಾಲಗೌಡರು ಹೇಳುತ್ತಾರೆ. ಅವರು ಧೂಮಪಾನವನ್ನು ಆರಂಭದಲ್ಲಿ ವಿರೋಧಿಸಿದಂತೆ ಕಂಡುಬಂದರೂ ವಾಸ್ತವವಾಗಿ ಧೂಮಪಾನ ಕಾಯಿದೆಯನ್ನೇ ವಿರೋಧಿಸುತ್ತಿದ್ದಾರೇನೋ ಎಂಬ ಭಾವನೆ ಅವರ ಮಾತುಗಳಿಂದ ವ್ಯಕ್ತವಾಗುವುದನ್ನು ಗಮನಿಸಬಹುದಾಗಿದೆ.

ಧೂಮಪಾನ ನಿಷೇಧವು ಮಾನವನ ವೈಯಕ್ತಿಕ ಸ್ವಾತಂತ್ರ್ಯ ಹರಣ ಎಂಬ ಅಭಿಪ್ರಾಯವನ್ನು ಗೋಪಾಲಗೌಡರು ಹೊಂದಿದ್ದಾರೆ ಎಂಬ ಸಂದೇಹ ಮೂಡುತ್ತದೆ. ಅವರೇ ಹೇಳುವ ಹಾಗೆ, ಹೀಗೆ ಶೋಧನೆ ಮಾಡುತ್ತ ಹೋದರೆ ಮನುಷ್ಯನನ್ನು ನಿಯಮಾವಳಿಗಳ ಮಧ್ಯೆ ಬಿಗಿಯುವುದಕ್ಕೆ ಹೋದರೆ ಯಾರು ಯಾರನ್ನು ಎಲ್ಲಿ ಬಂಧಿಸಬೇಕು, ಏನೇನನ್ನು ಕೋರ್ಟುಗಳಿಗೆ ತರಬೇಕು ಅನ್ನುವುದನ್ನು ಊಹಿಸಲು ಕೂಡ ಸಾಧ್ಯವಿಲ್ಲ ಎನ್ನುತ್ತಾರೆ. ಸಹಬಾಳ್ವೆಯ ತತ್ವವನ್ನು ಇಟ್ಟುಕೊಂಡು ಬೇರೆಯವರ ಸಿಟ್ಟನ್ನು ಸ್ವಲ್ಪ ಸಹಿಸಿಕೊಳ್ಳಬೇಕಾಗುತ್ತದೆ. ಶಿಕ್ಷೆಯನ್ನು ವಿಧಿಸಿದರೆ ಸೇದತಕ್ಕ ಜನರೆಲ್ಲರು ಸೇದದೇ ಇರುವವರ ದೃಷ್ಟಿಯಲ್ಲಿ ಅಪರಾಧಿಗಳು. ಇವರು ನಮ್ಮನ್ನು ಕಡೆಗಣಿಸುವುದೇ ಸರಿ. ಈ ಸೇದುವುದರಲ್ಲಿ ಏನೋ ಒಂದು ಉಪಶಾಂತಿ ಇರಬೇಕು. ಇಲ್ಲದಿದ್ದರೆ ಇಷ್ಟು ಜನರು ಸೇದುವುದಕ್ಕೆ ಕೈಹಾಕುತ್ತಾ ಇರಲಿಲ್ಲ. ಇದರಿಂದ ಎಷ್ಟು ಹಣ ಖರ್ಚು, ಶರೀರಕ್ಕೂ ಅನೇಕ ಸಲ ತೊಂದರೆಗಳಿವೆ, ಕ್ಯಾನ್ಸರ್ ರೋಗ ಕೂಡ ಬರುತ್ತದೆ ಎಂದು ಹೆದರಿಸುತ್ತಾರೆ[೨] ಎಂದು ಹೇಳುವುದನ್ನು ಗಮನಿಸಿದರೆ ಗೋಪಾಲಗೌಡರು ಧೂಮಪಾನದ ಪರವಾಗಿಯೇ ಮಾತನಾಡುತ್ತಿದ್ದಾರೆ ಎಂಬ ಅಭಿಪ್ರಾಯ ಮೂಡುತ್ತದೆ.

ಮತ್ತಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ, ಧೂಮಪಾನ ಕುರಿತಂತೆ ಸದನದಲ್ಲಿ ವ್ಯಕ್ತವಾಗಿರುವ ಗೌಡರ ಅಭಿಪ್ರಾಯ ದ್ವಂದ್ವದಿಂದ ಕೂಡಿದೆ. ಉಳಿದಂತೆ ನಿಖರವಾಗಿ ಮಾತನಾಡುವ ಅವರಲ್ಲಿ ಈ ವಿಚಾರದಲ್ಲಿ ಒಂದಿಷ್ಟು ಗೊಂದಲವಿದ್ದಂತೆ ತೋರುತ್ತದೆ. ಏಕೆಂದರೆ ೧೯೫೬ರ ಹೊತ್ತಿಗಾಗಲೇ ಏಕೀಕರಣಗೊಂಡಿದ್ದ ನಮ್ಮ ರಾಜ್ಯವನ್ನು ೧೯೭೩ರಲ್ಲಿ ಇನ್ನೂ ಹೈದರಾಬಾದಿನ ಕರ್ನಾಟಕ, ಬಾಂಬೆ ಕರ್ನಾಟಕ, ಮದ್ರಾಸ್ ಕರ್ನಾಟಕ ಇತ್ಯಾದಿಯಾಗಿ ಹೇಳುವುದು ಆಶ್ಚರ್ಯವನ್ನು ಹುಟ್ಟಿಸುತ್ತದೆ. ಧೂಮಪಾನ ನಿಷೇಧವನ್ನು ಕುರಿತಂತೆ ರಾಜ್ಯ ಸರ್ಕಾರ ಸಮಗ್ರ ರಾಜ್ಯಕ್ಕೆ ಅನ್ವಯವಾಗುವಂತೆ ನಿರ್ಧಾರ ತೆಗೆದುಕೊಳ್ಳಲು ಮಾತ್ರ ಸಾಧ್ಯ. ಹೀಗಿರುವಾಗ ಹಳೆಯ ಮೈಸೂರು ಭಾಗದಲ್ಲಿ ಬಿಟ್ಟು ಉಳಿದೆಡೆ ಧೂಮಪಾನ ನಿಷೇಧವಾಗಿಲ್ಲ ಎಂದು ಹೇಳುವ ಮಾತು ಸೋಜಿಗ ಹುಟ್ಟಿಸುತ್ತದೆ. ತಂಬಾಕಿನ ಮತ್ತೊಂದು ರೂಪವಾದ ನಷ್ಯವನ್ನು ಕುರಿತು ಅದನ್ನು ಉಪಯೋಗಿಸುವವರ ಮೇಲೂ ಕ್ರಮ ತೆಗೆದುಕೊಳ್ಳದೆ ಕೇವಲ ಧೂಮಪಾನಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಗೌಡರ ತಕರಾರು ಇದೆ. ಆದರೆ ಗಮನಿಸಬೇಕಾದ ಅಂಶವೆಂದರೆ, ಧೂಮಪಾನ ಮಾಡುವವರು ಮಾತ್ರ ಹೊಗೆಯನ್ನು ಸೇವಿಸದೆ, ಅವರು ಬಿಟ್ಟ ಹೊಗೆಯನ್ನು ಸುತ್ತಮುತ್ತ ಇರುವ ಇತರರೂ ಸೇವಿಸಬೇಕಾಗುತ್ತದೆ. ಇವರನ್ನು 'ಪ್ಯಾಸ್ಯೂಸ್ಮೋಕರ್ಸ್' ಎಂದು ಕರೆಯುತ್ತಾರೆ. ಆದ್ದರಿಂದ 'ಪ್ಯಾಸ್ಯೂಸ್ಮೋಕಿಂಗ್' ನೇರವಾದ ಧೂಮಪಾನಕ್ಕಿಂತ ಹೆಚ್ಚು ಅಪಾಯಕಾರಿಯಾದದ್ದು. ಈ ನಿಟ್ಟಿನಲ್ಲಿ ಧೂಮಪಾನ ನಿಷೇಧ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಸ್ವಾಗತಾರ್ಹವಾದುದು. ಟಾಲ್‌ಸ್ಟಾಯ್ ಅವರ ಉದಾಹರಣೆಯನ್ನು ಕೊಡುತ್ತಾ ಅವರಲ್ಲಿ ಧೂಮಪಾನ, ಮದ್ಯಪಾನ, ಇವುಗಳ ಅಭ್ಯಾಸವಿತ್ತೆಂದು ಗೌಡರು ಉಲ್ಲೇಖಿಸಿ, ಧೂಮಪಾನವನ್ನು ಸಮರ್ಥಿಸವಂತೆ ಕಾಣುತ್ತಾರೆ. ವಾಸ್ತವದ ಸಂಗತಿಯೆಂದರೆ, ಆ ಅಭ್ಯಾಸವನ್ನೆಲ್ಲ ಇಟ್ಟುಕೊಂಡಿದ್ದ ಟಾಲ್‌ಸ್ಟಾಯ್ ಸೃಜನಶೀಲ ಲೇಖಕರಾಗಿದ್ದರು ಮತ್ತು ಸಂತನಂತೆ ಬದುಕಿದ್ದರು. ಈ ವಾಸ್ತವದ ಹಿನ್ನೆಲೆಯಲ್ಲಿ ನೋಡಿದರೆ ನಮ್ಮ ಸಮಾಜದಲ್ಲಿ ಇರುವ ಎಲ್ಲಾ ಧೂಮಪಾನಿಗಳು ಸಂತರಲ್ಲ ಮತ್ತು ಲೇಖಕರಲ್ಲ. ಆದ್ದರಿಂದ ಟಾಲ್‌ಸ್ಟಾಯ್ ಉದಾಹರಣೆಯ ಮೂಲಕ ಮಾರಕ ರೋಗಕಾರಕವಾದ ಧೂಮಪಾನವನ್ನು ಸಮರ್ಥಿಸುವುದು ಅಂದು ಅಷ್ಟೇ ಅಲ್ಲ ಇಂದು ಕೂಡ ಸರಿಯಾದ ಧೋರಣೆಯಂತೆ ತೋರುವುದಿಲ್ಲ. ಆದರೆ ಪರಿಸ್ಥಿತಿಯ ವ್ಯಂಗ್ಯವೊಂದನ್ನು ಗೌಡರು ನಮ್ಮ ಮುಂದೆ ಇಡುತ್ತಾರೆ. ಅದೆಂದರೆ, ಧೂಮಪಾನವನ್ನು ನಿಷೇಧಿಸುವ ಸರ್ಕಾರ ತಂಬಾಕನ್ನು ಆಮದು ಮಾಡಿಕೊಳ್ಳುವ ಅಗತ್ಯ ಏನಿದೆ? ಇದು ಸರ್ಕಾರದ ದ್ವಂದ್ವ ನೀತಿಯೇ ಅಥವಾ ವಿರೋಧಾಭಾಸವೇ ಎಂಬುದನ್ನು ಅಂದಿನ ವಿವೇಕಿ ನಾಗರೀಕರು ಹೇಗೆ ಅವಲೋಕಿಸಿರಬಹುದು ಎಂಬುದು ಕುತೂಹಲದ ಸಂಗತಿಯಾಗಿದೆ

೬.೧೬. ಶರಾವತಿ ಯೋಜನೆ

'ಶರಾವತಿ ಬೃಹತ್ ವಿದ್ಯುತ್ ಯೋಜನೆಯು' ಅಂದಿನ ಕರ್ನಾಟಕ ಸರ್ಕಾರದ ಒಂದು ದೊಡ್ಡ ಯೋಜನೆಯಾಗಿತ್ತು. ಅದರ ಅನುಷ್ಠಾನದಿಂದ ಕರ್ನಾಟಕದ ಬಹುತೇಕ ಭಾಗಗಳಿಗೆ ವಿದ್ಯುತ್ ಸರಬರಾಜು ಮಾಡುವ ಉದ್ದೇಶವನ್ನು ಹೊಂದಲಾಗಿತ್ತು. ಅದರ ಉದ್ದೇಶ ಗುರಿಗಳು

ಈಡೇರಿದವು ನಿಜ. ಆದರೆ ಅಂದಿನ ಸಂದರ್ಭದಲ್ಲಿ ಕಾಮಗಾರಿ ನಡೆದ ಸಮಯದಲ್ಲಿ ಅನೇಕ ಅವ್ಯವಹಾರಗಳು ನಡೆದಿವೆ ಎಂಬ ವರದಿಗಳು ಕೇಳಿಬಂದವು. ಈ ವಿಷಯವು ಸದನದಲ್ಲಿ ಪ್ರಶ್ನೋತ್ತರಗಳಿಗೆ ಗ್ರಾಸವಾಯಿತು. ಈ ಹಿನ್ನೆಲೆಯಲ್ಲಿ ಆ ಯೋಜನೆಯ ಕಾಮಗಾರಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಆಪಾದನೆ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರ ಮೇಲೆ ಬಂದಿತ್ತು. ಆ ಕುರಿತಂತೆ ಗೋಪಾಲಗೌಡರು ತಮ್ಮ ನಿಲುವುಗಳನ್ನು ಸದನದಲ್ಲಿ ಈ ಮುಂದಿನಂತೆ ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಇಲ್ಲಿ ಪರಾಮರ್ಶಿಸಲಾಗಿದೆ.

'ಶರಾವತಿಯ ಬಗ್ಗೆ ವಿಚಾರಣೆಯನ್ನು ಮಾಡಬೇಕೆಂದು ಕೇಳಿದ್ದೇವೆ, ವಿಚಾರಣೆಯನ್ನು ಮಾಡಬೇಕು, ನ್ಯಾಯಾಂಗ ವಿಚಾರಣೆಯನ್ನು ಮಾಡಬೇಕು. ಇದನ್ನು ಎಲ್ಲ ಜವಾಬ್ದಾರಿಯಿಂದ ಗೋಪಾಲಗೌಡರು ಹೇಳುತ್ತಾರೆ. ದೇಶದ ಎಲ್ಲ ಜನರ ಪರವಾಗಿ ಹೇಳುತ್ತಾ, ವಿಚಾರಣೆಯನ್ನು ಮಾಡಬೇಕು. ಶ್ರೀಮಾನ್ ನೆಹರೂ ಅವರು ಪ್ರಧಾನಮಂತ್ರಿಯಾಗಿ ಶರಾವತಿ ವ್ಯವಹಾರ ಎಲ್ಲಾ ಸರಿಯಾಗಿ ನಡೆಯುತ್ತಾ ಇದೆ ಎಂದು ಹೇಳತಕ್ಕ ಸರ್ಟಿಫಿಕೇಟನ್ನು ಗೋಪಾಲಗೌಡರು ನಿರಾಕರಿಸುತ್ತಾರೆ. ಇದರ ಬಗ್ಗೆ ಅವರು ಸರ್ಟಿಫಿಕೇಟ್ ಕೊಟ್ಟು ಈ ವ್ಯವಹಾರದಲ್ಲಿ ಏನು ಕೆಡುತ್ತಾ ಇಲ್ಲ ಎಂದು ಹೇಳಿದರೆ ಈ ದೇಶದಲ್ಲಿ ಒಪ್ಪತಕ್ಕವರು ಯಾರೂ ಇಲ್ಲ. ಇದರ ಬಗ್ಗೆ ವಿಚಾರಣೆ ಆಗಬೇಕು, ನ್ಯಾಯಾಂಗ ವಿಚಾರಣೆಯಾಗಬೇಕು. ೨೫ ಕೋಟಿ ರೂಪಾಯಿನ ಈ ಒಂದು ಪ್ರಾಜೆಕ್ಟು ನೂರು ಕೋಟಿಯವರೆಗೆ ತಲುಪಬಹುದು ಎಂದು ಹಲವರು ಹೇಳುತ್ತಾರೆ. ಇದು ಹೇಗೆ ಸಾಧ್ಯ ಎಂಬುದು ಅವರ ಪ್ರಶ್ನೆಯಾಗಿತ್ತು. ಇದು ನೂರು ಕೋಟಿ ರೂಪಾಯಿ ಆಗಬಹುದು ಎಂದು ಇದು ಹೇಗೆ ನೂರು ಕೋಟಿ ರೂಪಾಯಿ ಆಯಿತು? ಏಕೆ ಆಗಬೇಕು? ಇಷ್ಟು ವಿಳಂಬ ಏಕೆ ಆಯಿತು? ಇಷ್ಟು ಜನ ದೊಡ್ಡ ದೊಡ್ಡ ಕಂಟ್ರ್ಯಾಕ್ಟರುಗಳಿಗೆ ಯಾವ ರೀತಿ ಕಂಟ್ರ್ಯಾಕ್ಟ್ ಕೊಡಲಾಯಿತು, ಕೊಟ್ಟಾದ ಮೇಲೆ ತಾರಾ ಪೊರೆ ಅವರಿಗೆ ಅವರು ಹೇಳಿದ ರೇಟಿಗಿಂತ ಎಂದರೆ ೭೦ ರೂಪಾಯಿ ಇದ್ದದ್ದನ್ನು ೧೪೦ ರೂಪಾಯಿನಂತೆ ಹೇಗೆ ಕೊಟ್ಟಿರಿ? ಎಂಬ ಪ್ರಶ್ನೆಗಳನ್ನು ಗೋಪಾಲಗೌಡರು ಸದನದಲ್ಲಿ ಎತ್ತುತ್ತಾರೆ. ಇವೆಲ್ಲಾ ಊಹಾಪೋಹ, ಕಥೆ ಮಾತಲ್ಲ, ನಾವು ಹುಟ್ಟಿಸಿ ಹೇಳಿದ್ದಲ್ಲ ಸರ್ಕಾರದವರು ಮಾಡಿದ್ದು, ಸರ್ಕಾರದ ಅಧಿಕಾರಿಗಳು ಮಾಡುತ್ತಾ ಇರುವುದು, ಸರ್ಕಾರದವರು ಖಜಾನೆಯಿಂದ ಹಣವನ್ನು ಪ್ರತಿದಿವಸ ಕೊಡುತ್ತಾ ಇರುವುದು. ಆದ್ದರಿಂದ ಹಿಂದಿನ ಸಲವೂ ಹೇಳಿದೆ ನಿಜಲಿಂಗಪ್ಪನವರು ಯಾವ ವ್ಯಾಮೋಹವೂ ಇಲ್ಲದೇ ಯಾವ ದಾಕ್ಷಿಣ್ಯವೂ ಇಲ್ಲದೆ, ಯಾವ ಮುಲಾಜೂ ಇಲ್ಲದೇ ಈ ಕಾಮಗಾರಿ ವಿಷಯದಲ್ಲಿ ವಿಚಾರಣೆಯನ್ನು ಏರ್ಪಡಿಸಿ ಸಾರ್ವಜನಿಕರ ಮುಂದೆ ಇಟ್ಟು ಅವರ ಮೇಲೆ ಹೊರಿಸಿರತಕ್ಕ ಆಪಾದನೆಗಳನ್ನು ತೊಳೆದುಕೊಳ್ಳಬೇಕು ಎಂಬುದು ಗೋಪಾಲಗೌಡರ ಅಭಿಮತವಾಗಿತ್ತು. ತಮ್ಮ ಹಿತದೃಷ್ಟಿಯಿಂದ ಮತ್ತು ದೇಶದ ಹಿತದೃಷ್ಟಿಯಿಂದ ಎಂದು ಅವತ್ತೇ ಹೇಳಿದೆ. ಅದಕ್ಕೆ ಅವರು ನಾನು ಫೈಲ್ ತರಿಸಿಕೊಂಡು ನೋಡುತ್ತೇನೆ ಎಂದ ನಿಜಲಿಂಗಪ್ಪನವರ ಅರ್ಥ ಏನು? ಶಿವಮೊಗ್ಗಾದಲ್ಲಿ ಅಣೆಕಟ್ಟು ಬಹಳ ಚೆನ್ನಾಗಿದೆ ಎಂದು ಹೇಳಿದರೆ ನನಗೆ ನಿಜಲಿಂಗಪ್ಪನವರಿಗೆ ಅರ್ಥವಾಗತಕ್ಕ ಅಣೆಕಟ್ಟು ಅದಲ್ಲ. ಯಾರೋ ಹೇಳುತ್ತಾ

ಇದ್ದರು ಶರಾವತಿಗೆ ಕಳುಹಿಸಿದ ಸಿಮೆಂಟು ಗೋವಾದಲ್ಲಿ ಮಾರಾಟವಾಗುತ್ತಾ ಇತ್ತು, ಬೆಂಗಳೂರಿನಲ್ಲಿ ಮನೆಗಳಿಗೆ ಉಪಯೋಗವಾಗುತ್ತಾ ಇದೆ ಎಂದು. ಶರಾವತಿಯಲ್ಲಿ ಉಪಯೋಗವಾಗಬೇಕಾದ ಕಬ್ಬಿಣ ದೇಶದಲ್ಲಿ ಎಲ್ಲೆಲ್ಲಿಗೆ ಹೋಗಿದೆ ಎಂಬುದನ್ನು ನೋಡಿದ್ದೀರೇನು? ಇದು ನಮಗೂ ಅರ್ಥವಾಗುವುದಿಲ್ಲ ನಿಮಗೂ ಅರ್ಥವಾಗುವುದಿಲ್ಲ. ಆದ್ದರಿಂದ "ಈ ವಿಷಯದಲ್ಲಿ ಯಾವಾಗಲೂ ಬಾಯಿ ಬಡಿದು, ಮುಸುಕನ್ನು ಎಳೆದು ಪ್ರಧಾನಿಯವರಿಂದ ಸರ್ಟಿಫಿಕೇಟ್ ಪಡೆದುಕೊಳ್ಳತಕ್ಕ ವ್ಯವಹಾರವನ್ನು ಖಂಡಿತ ಮಾಡಕೂಡದು ಈ ವ್ಯವಹಾರದ ಬಗ್ಗೆ ವಿಚಾರಣೆ ನಡೆಯಲೇಬೇಕು ಎಂದು ಹೇಳಿ ನಾನು ಈ ಸಭೆಯಲ್ಲಿ ಒತ್ತಾಯಪೂರ್ವಕವಾಗಿ ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ"[೮] ಎಂದು ಶರಾವತಿ ವಿದ್ಯುತ್‌ಯೋಜನೆಯ ಕಾಮಗಾರಿಯ ವಿಷಯದಲ್ಲಿ ನಡೆದ ಅವ್ಯವಹಾರವನ್ನು ಕುರಿತು ವಿಚಾರಣೆ ನಡೆಸುವಂತೆ ಒತ್ತಾಯ ಮಾಡಿದವರಲ್ಲಿ ಗೋಪಾಲಗೌಡರು ಪ್ರಮುಖರು.

ಅಭಿವೃದ್ಧಿಯ ಅಂಗವಾಗಿ ಮೈಸೂರು ರಾಜ್ಯದಲ್ಲಿ ಗೃಹೋಪಯೋಗಕ್ಕಾಗಿ ಮತ್ತು ಕೈಗಾರಿಕೆಗಳಿಗಾಗಿ ವಿದ್ಯುತ್ತನ್ನು ಉತ್ಪಾದಿಸಿ ಸರಬರಾಜು ಮಾಡಬೇಕಾದ ಅಗತ್ಯವನ್ನು ಅಂದಿನ ಸರ್ಕಾರ ಕಂಡುಕೊಂಡಿತ್ತು. ಶರಾವತಿಯಂತ ಬೃಹತ್ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸುವಾಗ ಇದ್ದ ಅಂದಾಜು ವೆಚ್ಚಕ್ಕಿಂತ ಎರಡು ಪಟ್ಟಿಗೂ ಮೀರಿ ಆದಂತಹ ಖರ್ಚು ಮತ್ತು ಅನುಷ್ಠಾನದಲ್ಲಿ ಆದ ವಿಳಂಬ ಇವುಗಳ ಬಗ್ಗೆ ಗೋಪಾಲಗೌಡರು ಅಸಮಧಾನದಿಂದ ಸಾರ್ವಜನಿಕವಾಗಿ ಧ್ವನಿ ಎತ್ತಿದ್ದಾರೆ. ಸಾರ್ವಜನಿಕ ಕಾರ್ಯಕ್ರಮಗಳು ಪ್ರಾಮಾಣಿಕತೆಯಿಂದ ಕೂಡಿರಬೇಕು ಮತ್ತು ಅವು ಪಾರದರ್ಶಕವಾಗಿರಬೇಕು ಎಂಬುದು ಅವರ ಆಗ್ರಹ. ಅವರ ಮಾತುಗಳನ್ನು ಗಮನಿಸಿದಾಗ ಶರಾವತಿ ಯೋಜನೆಯ ನಿರ್ಮಾಣದ ಕಾರ್ಯದಲ್ಲಿ ಆಗಿರಬಹುದಾದ ಭ್ರಷ್ಟಾಚಾರದ ವಿರುದ್ಧ ಅವರು ಹರಿಹಾಯ್ದಿದ್ದಾರೆ ಎಂಬುದು ಸ್ಪಷ್ಟ.

ಶರಾವತಿ ಡ್ಯಾಂ ನಿರ್ಮಾಣದ ಪೂರ್ವದಲ್ಲಿ ಸ್ವಚ್ಛಂದವಾಗಿ ಹರಿಯುತ್ತಿದ್ದ ಶರಾವತಿಯನ್ನು ಕಂಡು ಸರ್.ಎಂ. ವಿಶ್ವೇಶ್ವರಯ್ಯನವರು 'ವಾಟ್ ಎ ನ್ಯಾಷನಲ್ ವೇಸ್ಟ್' ಎಂದು ಉದ್ಗಾರ ತೆಗೆದಿದ್ದರಂತೆ. ಆದರೆ ಡ್ಯಾಂನ ನಿರ್ಮಾಣದ ಹಂತದಲ್ಲಿ ಆಗಿರಬಹುದಾದ ಅಪವ್ಯಯ ಮತ್ತು ನಡೆದಿರಬಹುದಾದ ಭ್ರಷ್ಟಾಚಾರ ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಿದಂತೆ ಅಲ್ಲವೇ? ಎಂಬ ಸಂಶಯ ಯಾರಿಗಾದರೂ ಬರುತ್ತದೆ. ಮೇಲಿನ ವಿಚಾರವನ್ನು ಗಮನಿಸಿದಾಗ ಇದು ಪರಿಸ್ಥಿತಿಯ ವ್ಯಂಗ್ಯದಂತೆ ತೋರುತ್ತದೆ.

ಪ್ರಸ್ತುತ ಅಧ್ಯಾಯದಲ್ಲಿ ಶಾಂತವೇರಿ ಗೋಪಾಲಗೌಡರು ಸದನದಲ್ಲಿ ರಾಜಧನ ಪದ್ಧತಿ, ಭೂಸೇನೆ, ಮದ್ಯಪಾನ ವಿರೋಧ, ಶರಾವತಿ ವಿದ್ಯುತ್ ಮುಂತಾದ ಅನೇಕ ವಿಷಯಗಳ ಮೇಲೆ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಎಲ್ಲ ನಿಲುವುಗಳನ್ನೂ ಒಪ್ಪಲೇಬೇಕೆಂದೇನಿಲ್ಲ. ಅಂದಿನ ಸಮಯ, ಸನ್ನಿವೇಶಗಳಿಗೆ ಅನುಗುಣವಾಗಿ ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಿಸಿದ್ದಾರೆ. ಅವರ ಒಟ್ಟು ಪ್ರತಿಪಾದನೆಯ ಅಂಶಗಳನ್ನು ಗಮನಿಸಿದಾಗ ಅವರ ನೀತಿನಿಯಮಗಳೆಲ್ಲವೂ ಜನಪರವಾಗಿವೆ ಎಂಬ ಅಂಶವನ್ನು ಇಲ್ಲಿ ಮನಗಾಣಬಹುದಾಗಿದೆ.

ಟಿಪ್ಪಣಿಗಳು

೧. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೨ ಜೂನ್ ೩೦, ವ್ಯಾಲ್ಯೂಂ-೭, ಪಾರ್ಟ್ ೦೧, ಪು. ೫೦೦

೨. ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೫ ಮಾರ್ಚ್ ೨೩, ವ್ಯಾಲ್ಯೂಂ-೧೨, ಪಾರ್ಟ್ ೦೨, ಪು. ೧೪೫೩

೩. ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೫ ಏಪ್ರಿಲ್ ೨೩, ವ್ಯಾಲ್ಯೂಂ-೧೨, ಪಾರ್ಟ್ ೦೩, ಪು. ೨೮೧೨-೨೮೧೩

೪. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೬೪ ಮಾರ್ಚ್ ೦೯, ವ್ಯಾಲ್ಯೂಂ-೪, ಸಂ. ೧೦, ಪು. ೭೪೦-೭೪೧

೫. ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ. ೨೦೧೦, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೪೯೫-೪೯೮

೬. ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೨ ಅಕ್ಟೋಬರ್ ೨೩, ವ್ಯಾಲ್ಯೂಂ-೮, ಸೆಕೆಂಡ್ ಸೆಷನ್, ಸೆಕೆಂಡ್ ಲೆಜಿಸ್ಲೇಟಿವ್ ಅಸೆಂಬ್ಲಿ, ಪು. ೨೬೭

೭. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೩ ಮಾರ್ಚ್ ೨೬, ವ್ಯಾಲ್ಯೂಂ-೯, ಸಂ. ೧೫-೨೮, ಪು. ೧೧೦೫

೮. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೨ ಅಕ್ಟೋಬರ್ ೨೪, ವ್ಯಾಲ್ಯೂಂ-೮, ಪು. ೩೪೮-೩೪೯

೯. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೬೪ ಫೆಬ್ರವರಿ ೨೯, ವ್ಯಾಲ್ಯೂಂ-೪, ಸಂ. ೧-೪, ೪ನೇ ಸೆಷನ್, ಪು. ೧೮೮-೧೮೯

೧೦. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೬೬ ಆಗಸ್ಟ್ ೦೩, ವ್ಯಾಲ್ಯೂಂ-೬, ಸಂ. ೧೩, ಪು. ೭೯೦

೧೧. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೪ ಅಕ್ಟೋಬರ್ ೨೩, ವ್ಯಾಲ್ಯೂಂ-೧೧, ೫ನೇ ಸೆಷನ್, ಸೆಕೆಂಡ್ ಲೆಜಿಸ್ಲೇಟಿವ್ ಅಸೆಂಬ್ಲಿ, ಪು. ೭೨೪

೧೨. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೬೪ ಮಾರ್ಚ್ ೧೯, ವ್ಯಾಲ್ಯೂಂ-೪, ಪಾರ್ಟ್ ೦೨, ಪು. ೧೪೦೮-೧೪೦೯

೧೩. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೬೭ ಜುಲೈ ೦೪, ವ್ಯಾಲ್ಯೂಂ-೩, ಸಂ. ೧-೧೦, ಪು. ೪೯೫

೧೪. ಕೋಣಂದೂರು ಲಿಂಗಪ್ಪ, ೧೯೭೧, ಶಾಸನಸಭೆಯಲ್ಲಿ ಶಾಂತವೇರಿ, ಪು. ೬೯-೭೦

೧೫. ಅದೇ, ಪು. ೪೨-೪೪

೧೬. ಮೈಸೂರ್ ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೆಟ್ಸ್, ೧೯೬೩, ಸೆಪ್ಟಂಬರ್, ೨೭, ವ್ಯಾಲ್ಯೂಂ ೩, ನಂ. ೬೧, ಪು. ೪೧೬೭-೪೧೭೦

೧೭. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೆಟ್ಸ್, ೧೯೬೩, ಅಕ್ಟೋಬರ್ ೦೮, ವ್ಯಾಲ್ಯೂಂ ೩, ನಂ. ೬೬, ಪು. ೪೮೦೩

೧೮. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೆಟ್ಸ್, ೧೯೬೩, ಅಕ್ಟೋಬರ್ ೦೮, ವ್ಯಾಲ್ಯೂಂ ೩, ನಂ. ೬೬, ಪು. ೪೮೨೩

ಅಧ್ಯಾಯ: ಏಳು

ಕರ್ನಾಟಕದ ಸಮಾಜ, ಸಂಸ್ಕೃತಿ ಹಾಗೂ ಸಂಘರ್ಷಗಳು

೭.೧. ಜಾತೀಯತೆ ಹಾಗೂ ಸಮಾಜ

೭.೨. ನಿಮ್ನ ವರ್ಗಗಳ ಸನ್ನಿವೇಶ-ಚಿಂತನೆ ಹಾಗೂ ಸಂಘರ್ಷಗಳು

೭.೩. ಶಿಕ್ಷಣ-ಪ್ರಾಥಮಿಕ ವಿದ್ಯಾಭ್ಯಾಸ-ವಿಶ್ವವಿದ್ಯಾಲಯಗಳು

೭.೪. ಸಂಸ್ಕೃತಿ ಪ್ರಚಾರ

೭.೫. ಧರ್ಮ

೭.೬. ಖಾದಿ

೭.೭. ಕರ್ನಾಟಕ ಏಕೀಕರಣ

ಅಧ್ಯಾಯ: ಏಳು

ಕರ್ನಾಟಕದ ಸಮಾಜ, ಸಂಸ್ಕೃತಿ ಹಾಗೂ ಸಂಘರ್ಷಗಳು

೭.೧. ಜಾತೀಯತೆ ಹಾಗೂ ಸಮಾಜ

ಭಾರತವು ಹಲವು ಭಿನ್ನ ಭಿನ್ನ ಜಾತಿಗಳಿಂದ ಕೂಡಿರುವ ದೇಶ. ಇಲ್ಲಿ ಒಂದೊಂದು ಜಾತಿಯೂ ಪ್ರತ್ಯೇಕ ಮತ್ತು ಭಿನ್ನ. ಒಂದು ಜಾತಿಯ ಆಹಾರ, ಉಡುಗೆ, ತೊಡುಗೆ ಬೇರೆ ಬೇರೆ. ಒಂದು ಜಾತಿಗೂ ಮತ್ತೊಂದು ಜಾತಿಗೂ ನಡುವೆ ಅನೇಕ ಕಾರಣಗಳಿಗಾಗಿ ಪ್ರತ್ಯೇಕ ಪ್ರತ್ಯೇಕ ಗೋಡೆಗಳನ್ನು ನಿರ್ಮಾಣ ಮಾಡಲಾಗಿದೆ. ಇದರಿಂದಾಗಿ ಇಲ್ಲಿನ ಜಾತಿಪದ್ಧತಿ ಎಂಬುದು ಜಾತಿಗಳ ಅಸಮಾನತೆಯ ಆಗರವಾಗಿದೆ. ಇಲ್ಲಿ ಜಾತಿಯ ಅಸಮಾನತೆಯು ಅಸಮಾನತೆಯ ಶ್ರೇಣೀಕರಣಕ್ಕೆ ಒಳಗಾಗಿದೆ. ಹಾಗಾಗಿ ಜಾತಿಯ ಈ ಶ್ರೇಣೀಕರಣದಲ್ಲಿ ಮೇಲು-ಕೀಳು ಎಂಬ ಸಾಮಾಜಿಕ ಅಂತಸ್ತುಗಳನ್ನು ನಿರ್ಮಾಣ ಮಾಡಲಾಗಿದೆ. ಜಾತಿಯ ಸಾಮಾಜಿಕ ಏಣಿಶ್ರೇಣಿಯಲ್ಲಿ ಮೇಲಿರುವ ಜಾತಿಗಳನ್ನು ಮೇಲುಜಾತಿಗಳು ಎಂದೂ, ಈ ಏಣಿಶ್ರೇಣಿಯಲ್ಲಿ ಕೆಳಗಿರುವ ಜಾತಿಗಳನ್ನು ಕೆಳಜಾತಿಗಳೆಂದೂ ಕರೆಯಲಾಗಿದೆ. ಎಲ್ಲಾ ಮೇಲುಜಾತಿಗಳ ಜನರು ಕೆಳಜಾತಿಗಳನ್ನು ಅಗೌರವ ಮತ್ತು ಅವಮಾನದಿಂದ ಕಾಣುತ್ತಾರೆ. ಇದಕ್ಕೆ ವಿರುದ್ಧವಾಗಿ ಎಲ್ಲಾ ಕೆಳಜಾತಿಗಳ ಜನರು ಮೇಲುಜಾತಿಗಳ ಜನರಿಗೆ ಗೌರವ ಕೊಡುತ್ತಾರೆ ಹಾಗೂ ಮರ್ಯಾದೆ ಕೊಡುತ್ತಾರೆ. ಇದಕ್ಕೆ ಯಾವ ಸಾಮಾಜಿಕ ಕಾರಣವೂ ಇಲ್ಲ; ಯಾವ ತರ್ಕವೂ ಇಲ್ಲ. ಅಂದರೆ ಕೆಲವು ಜಾತಿಗಳ ಜನರು ಉಳಿದ ಜಾತಿಗಳ ಜನರಿಗೆ ವಿನಾಃ ಕಾರಣ ಗೌರವ ಕೊಡುವುದು ಇದಕ್ಕೆ ವಿರುದ್ಧವಾಗಿ ಗೌರವವನ್ನು ಪಡೆದ ಜನರೇ ಗೌರವ ಕೊಟ್ಟವರನ್ನು ಅಗೌರವದಿಂದ ಮತ್ತು ಅವಮಾನದಿಂದ ಕಾಣುವುದು ಭಾರತೀಯ ಸಮಾಜದಲ್ಲಿ ಮಾತ್ರ ರೂಢಿಯಲ್ಲಿದೆ.

ಕವಿಗಳು, ಸಾಮಾಜಿಕ ಚಿಂತಕರು ಈ ವಿರೋಧಾಭಾಸವನ್ನು ಗುರುತಿಸಿದ್ದಾರೆ ಮತ್ತು ವಿರೋಧಿಸಿದ್ದಾರೆ. ಕೆಳಜಾತಿಗಳ ಮೇಲೆ ವಿನಾಃ ಕಾರಣ ನಡೆಸಲಾಗುತ್ತಿರುವ ಈ ಅಪಮಾನವನ್ನು ಮಹಾತ್ಮಾ ಗಾಂಧಿ ಅವರು ಒಂದು ಅಪರಾಧ ಎಂದು ಕರೆದರು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ಜಾತಿ ಅಸಮಾನತೆಯ ವಿರುದ್ಧ ದೊಡ್ಡ ಮಟ್ಟದ ಹೋರಾಟವನ್ನು

ನಡೆಸಿದರು. ಅದಕ್ಕಿಂತಲೂ ಹೆಚ್ಚಾಗಿ ಭಾರತದಲ್ಲಿ ಜಾತಿಗಳು ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಆಳವಾದ ಹಾಗೂ ಗಂಭೀರವಾದ ಸಂಶೋಧನೆಯನ್ನು ಅವರು ಮಾಡಿದರು.

ಭಾರತೀಯ ಸಮಾಜದಲ್ಲಿನ ಶ್ರೇಣೀಕೃತ ವ್ಯವಸ್ಥೆ ಮತ್ತು ಸಾಮಾಜಿಕ ಬದಲಾವಣೆಗಳ ಕುರಿತು ಸಮಾಜಶಾಸ್ತ್ರಜ್ಞರು, ರಾಜಕೀಯ ಚಿಂತಕರು, ಸಮಾಜ ಸುಧಾರಕರು ಎಲ್ಲಾ ಕಾಲದಲ್ಲೂ ಆಲೋಚನೆ ಮಾಡುತ್ತಾ ಬಂದಿದ್ದಾರೆ. ಜಾತಿ, ವರ್ಗ ಮತ್ತು ಲಿಂಗ ಅಸಮಾನತೆ ಮಾತ್ರವೇ ಅಲ್ಲದೆ ಶಿಕ್ಷಣ, ವೃತ್ತಿ, ಭಾಷೆ, ಜನಾಂಗೀಯತೆ, ಗ್ರಾಮೀಣ ಸಮುದಾಯ, ಪ್ರಾಂತ್ಯ, ಧರ್ಮ ಮತ್ತು ನಗರೀಕರಣ ಹಾಗೂ ಕೈಗಾರಿಕರಣಗಳನ್ನು ಒಳಗೊಂಡಿರುವ ಆಧುನೀಕರಣ ಪ್ರಕ್ರಿಯೆಯು ಈ ರಾಷ್ಟ್ರದಲ್ಲಿ ಅಧಿಕಾರದ ಹಂಚಿಕೆಯಲ್ಲಿ ವಹಿಸುವ ಪಾತ್ರವನ್ನು ಕುರಿತ ಅಂಶಗಳೂ ಸಹ ಪ್ರಸ್ತುತ ಚರ್ಚೆಯ ಭಾಗಗಳಾಗಿವೆ. ಅನೇಕ ಚಿಂತಕರು ಜಾತಿ ಅಥವಾ ಲಿಂಗ ಅಥವಾ ಜನಾಂಗೀಯ ಅಥವಾ ವರ್ಗ ಆಧರಿಸಿರುವ ವಿಶ್ಲೇಷಣಾ ಮಾರ್ಗವನ್ನೇ ಆಯ್ದುಕೊಂಡಿದ್ದಾರೆ. ಆದರೆ ರಾಮಮನೋಹರ ಲೋಹಿಯಾ ಅವರು ಅಂತರ್ವರ್ಗೀಯ ವಿಶ್ಲೇಷಣೆಯ ಮುಖಾಂತರ ಅಸಮಾನತೆ, ಹೊರದೂಡುವಿಕೆ ಮತ್ತು ಶೋಷಣೆಗಳನ್ನು ಸಮಕಾಲೀನ ಭಾರತದ ಸಂದರ್ಭದಲ್ಲಿ ಅರ್ಥೈಸಿಕೊಂಡರು.

ನಾಗರಿಕತೆಯ ಪ್ರತಿರೋಧಕ್ಕೆ ಸಂಬಂಧಪಟ್ಟಂತೆ ಗಾಂಧಿಯ ಚಿಂತನೆಯನ್ನು ಸ್ವೀಕರಿಸಿದ ರಾಮಮನೋಹರ ಲೋಹಿಯಾ ಜಾತಿಯ ವಿಷಯದಲ್ಲಿ ಮಾತ್ರ ಗಾಂಧಿ ಮತ್ತು ಗಾಂಧಿವಾದಿಗಳ ಚಿಂತನೆಯಿಂದ ದೂರ ಉಳಿದರು. ಜಾತಿ, ಲಿಂಗ ಮತ್ತು ಬಡತನದಂತಹ ಸಮಸ್ಯೆಗಳ ಒಟ್ಟು ಚಿತ್ರಣ ದೇಶದ ಮುಂದಿರಬೇಕೆಂದರು. ಜಾತಿ, ವರ್ಗ ವ್ಯವಸ್ಥೆಯ ವಿರುದ್ಧ ಎಲ್ಲಾ ಮಹಿಳೆಯರ, ಅಸ್ಪೃಶ್ಯರ, ಆದಿವಾಸಿಗಳ, ಮುಸ್ಲಿಮ್ ಮತ್ತು ಕ್ರೈಸ್ತರಲ್ಲಿನ ದಮನಿತರ ಮತ್ತು ದ್ವಿಜರಲ್ಲಿಯೂ ಬಡವರಾಗಿದ್ದವರ ಐಕ್ಯರಂಗವನ್ನು ಕಟ್ಟುವ ಕುರಿತು ರಾಮಮನೋಹರ ಲೋಹಿಯಾ ಆಶಾವಾದಿಯಾಗಿದ್ದರು. ಇವರಿಂದ ಪ್ರಭಾವಿತರಾಗಿದ್ದ ಶಾಂತವೇರಿ ಗೋಪಾಲಗೌಡರು ಇದೇ ದಾರಿಯಲ್ಲಿ ನಡೆದು ಬಂದಿದ್ದಾರೆ.

ಜಾತಿಯ ಅಸಮಾನತೆ, ವರ್ಗ ಅಸಮಾನತೆ ಹಾಗೂ ಲಿಂಗ ತಾರತಮ್ಯಗಳ ಬಗ್ಗೆ ಶಾಂತವೇರಿ ಗೋಪಾಲಗೌಡ ಅವರು ತಮ್ಮದೇ ಆದ ವೈಚಾರಿಕತೆಯನ್ನು ಹಾಗೂ ತಮ್ಮದೇ ಆದ ಧೋರಣೆಯನ್ನು ರೂಪಿಸಿಕೊಂಡರು. ಅವರು ಶಾಸಕರಾಗಿದ್ದಾಗ ಸದನದ ಒಳಗೂ ಹಾಗೂ ಹೊರಗೂ ಈ ವಿಚಾರಗಳ ಜಿಜ್ಞಾಸೆಗೆ ತಮ್ಮನ್ನು ತಾವು ತೊಡಗಿಸಿಕೊಂಡರು. ೧೯೬೯ ಮಾರ್ಚ್ ೨೫ರಂದು ಶಾಂತವೇರಿ ಗೋಪಾಲಗೌಡರು ಸದನದಲ್ಲಿ ಮಾಡಿದ್ದ ಭಾಷಣವನ್ನು ಈ ಹಿನ್ನೆಲೆಯಲ್ಲಿ ಇಲ್ಲಿ ಪ್ರಸ್ತಾಪಿಸಲಾಗುತ್ತದೆ.

ಇಂದು ಜನತೆ ವರ್ಣ ವರ್ಗಗಳನ್ನು ರಚನೆ ಮಾಡಿಕೊಂಡು, ಪ್ರತಿ ವರ್ಷವೂ ಜನನಾಯಕರಾದವರು ಏನು ಸಮಾಜ ಸುಧಾರಣಾ ಕಾರ್ಯಮಾಡಿದ್ದಾರೆ? ಎಂಬ ಪ್ರಶ್ನೆಗಳನ್ನು

ಗೋಪಾಲಗೌಡರು ಎತ್ತುತ್ತಾರೆ. ವರ್ಣಗಳನ್ನು ರಚನೆ ಮಾಡಿಕೊಂಡಿರುವ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ಡಾ. ಲೋಹಿಯಾ ಅವರು ವರ್ಣ ಮತ್ತು ವರ್ಗ ಎನ್ನುವುದಕ್ಕೆ ಕ್ಯಾಸ್ಟ್ ಈಸ್ ಆ್ಯನ್ ಇಮ್ಮೊಬೈಲ್ ಕ್ಲಾಸ್, ಕ್ಲಾಸ್ ಈಸ್ ಎ ಮೊಬೈಲ್ ಕ್ಯಾಸ್ಟ್ ಎಂದು ಹೇಳಿದ್ದಾರೆ. ಆ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು. ಇಂದು ಸಮಾಜವಾದದ ಮಾತು ಹೇಳುವುದಾದರೆ ವರ್ಗಗಳನ್ನು ಮತ್ತು ವರ್ಣಗಳನ್ನು ತೊಡೆದು ಹಾಕುವಂತಹ ದಾರಿಯಲ್ಲಿ ಹೋಗದಿದ್ದರೆ ಸಮಾಜವಾದವನ್ನು ತರುವುದು ದೂರದ ಕನಸಾಗಿಯೇ ಉಳಿಯುತ್ತದೆ ಎಂಬ ವಿಷಯಗಳನ್ನು ಸದನದಲ್ಲಿ ಅವರು ಪ್ರಸ್ತಾಪಿಸಿದ್ದಾರೆ. ವರ್ಣಪದ್ಧತಿಯು ಅಂದು ಗಾಢವಾಗಿದ್ದ ಸಮಯದಲ್ಲಿಯೂ ಒಂದು ಕ್ರಾಂತಿಕಾರಕ ಘಟನೆಯನ್ನು ಗೋಪಾಲಗೌಡರು ತಮ್ಮ ಅನುಭವದಲ್ಲಿ ಬಂದಿದ್ದನ್ನು ಇಲ್ಲಿ ಉಲ್ಲೇಖಿಸುತ್ತಾರೆ.

ಇತ್ತೀಚೆಗೆ ನಾನು ಯಳಂದೂರಿಗೆ ಹೋಗಿದ್ದೆ. ಅಲ್ಲಿ ಸವರ್ಣ ಹಿಂದೂಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದನ್ನು ನೋಡಿ ನನಗೆ ಆಶ್ಚರ್ಯ ಆಯಿತು. ಮತ್ತು ಅಲ್ಲಿ ಹರಿಜನರಿಗೆ ಭೂಮಿ ಕಾಣಿ ಇದ್ದುದನ್ನು ನೋಡಿದೆ. ಅವರು ರೇಷ್ಮೆ ಗೂಡನ್ನು ತೆಗೆಯುತ್ತಾ ಇದ್ದುದನ್ನು ನಾನು ನೋಡಿದೆನು. ನಾನು ರಾಜ್ಯದಲ್ಲಿ ಅನೇಕ ಕಡೆ ನೋಡಿದ್ದೇನೆ. ಅದರೆ ಇಂತಹ ಅಪೂರ್ವವಾದ ಸವರ್ಣ ಹಿಂದೂಗಳು ಮತ್ತು ಹರಿಜನರು ಜೊತೆಯಲ್ಲಿ ಇದ್ದುದ್ದನ್ನು ನಾನು ನೋಡಲಿಲ್ಲ. ಅಲ್ಲಿ ಅವರು ಈ ರೀತಿ ಇರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯ್ತು[೧] ಎನ್ನುತ್ತಾರೆ. ಇಂದು ಇಂತಹ ಘಟನೆಗಳು ಅಪರೂಪವೇನಲ್ಲ, ಅವು ಸಾಮಾನ್ಯ ಸಂಗತಿಗಳೆನ್ನಿಸಿವೆ. ಆದರೆ ಅಂದಿನ ಕಾಲಘಟ್ಟದಲ್ಲಿ ಸವರ್ಣೀಯರು ಮತ್ತು ಹರಿಜನರ ಸಹಬಾಳ್ವೆ ಅಷ್ಟು ಸುಲಭದ ಮಾತಾಗಿರಲಿಲ್ಲ ಎನ್ನುವುದನ್ನು ಇಲ್ಲಿ ಗಮನಾರ್ಹ ಅಂಶವಾಗಿದೆ.

ಹಿಂದಿನ ಕಾಲದಲ್ಲಿ ನಮ್ಮಲ್ಲಿ ಜೀತ ಪದ್ಧತಿ ಇತ್ತು. ಆಗ ಹರಿಜನರು ಜಮೀನ್ದಾರರ ಮನೆಯಲ್ಲಿ ಜೀತ ಮಾಡುವುದರ ಜೊತೆಗೆ ಅವರಲ್ಲಿ ಮದುವೆಯಾದಾಗ ಅವರ ಮನೆಗೆ ಹರಿಜನರ ಕುಟುಂಬಗಳನ್ನು ಬಳುವಳಿಯಾಗಿ ಕಳುಹಿಸುತ್ತಿದ್ದರು ಎಂಬ ವಿಷಯವನ್ನು ಗೋಪಾಲಗೌಡರು ಪ್ರಸ್ತಾಪಿಸುತ್ತಾರೆ. ಹರಿಜನರು ಜಮೀನ್ದಾರನ ಮನೆಯಲ್ಲಿ ಜೀತಕ್ಕೆ ಇದ್ದುಕೊಂಡು, ಅವರಿಗೆ ಗುಲಾಮಗಿರಿ ಮಾಡುತ್ತಿದ್ದರು. 'ಗುಲಾಮ' ಎಂದರೆ ಯಾರಿಗೆ ಯಜಮಾನನನ್ನು ಬದಲಾಯಿಸುವ ಅಧಿಕಾರ ಇರುವುದಿಲ್ಲವೋ ಅವರನ್ನು ಗುಲಾಮ ಎಂದು ಹೇಳುತ್ತಾರೆ. ಈ ರೀತಿಯ ಜೀತ ಪದ್ಧತಿ ನಮ್ಮ ರಾಜ್ಯದಲ್ಲಿ ಈಗಲೂ ಇದೆ. ಈ ಪದ್ಧತಿಯನ್ನು ತೆಗೆಯುವುದು, ಅಸ್ಪೃಶ್ಯತೆಯನ್ನು ನಿರ್ಮೂಲನ ಮಾಡುವುದು ಈ ಪ್ರಶ್ನೆ ಕೇವಲ ಕಾಗದದ ಮೇಲಿದೆ. ಅದು ಇನ್ನೂ ಜೀವಂತವಾಗಿಯೇ ಇದೆ. ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಹರಿಜನರಿಗೆ ಪ್ರವೇಶವಿಲ್ಲ. ದೇವಸ್ಥಾನಗಳಲ್ಲಿ ಪ್ರವೇಶ ಇಲ್ಲ. ಈ ಕುರಿತಂತೆ ನಮ್ಮ ಸನಾತನ ಚಿಂತಕರು ಮಾಡಿದ ಚಳುವಳಿಗಳನ್ನು ಕುರಿತು ತಮ್ಮದೇ ಆದ ರೀತಿಯಲ್ಲಿ ಅವರು ವ್ಯಾಖ್ಯಾನಿಸುತ್ತಾರೆ.

ಬುದ್ಧ, ಬಸವಣ್ಣ ಮತ್ತು ಮಹಾತ್ಮಾ ಗಾಂಧೀಜಿಯವರು ಮಾಡಿದಂತಹ ಚಳವಳಿ ಏನಿವೆ ಅವು ಇನ್ನು ಹಾಗೆಯೇ ಉಳಿದಿವೆ. ಆ ಚಳವಳಿಯ ಪರಿಣಾಮ ಏನೂ ಆಗಿಲ್ಲ. ಸವರ್ಣ ಹಿಂದೂಗಳಲ್ಲಿ ಅವರ ಮನಸ್ಸು ಮತ್ತು ಹೃದಯದಲ್ಲಿ ತಲೆಯ ಯಾವುದೋ ಒಂದು ಭಾಗದಲ್ಲಿ ಅಸ್ಪೃಶ್ಯತೆ ಎನ್ನುವುದು ನಾಟಿಕೊಂಡು ಕುಳಿತುಬಿಟ್ಟಿದೆ. ಹಿಂದೂ ಸಮಾಜದವರ, ತಲೆಯಲ್ಲಿ ಅಸ್ಪೃಶ್ಯತೆ ಎನ್ನತಕ್ಕಂತಹ 'ಕೆಟ್ಟ ಹುಳು' ಏನಿದೆ ಅದನ್ನು ಕಿತ್ತು ಹಾಕಬೇಕು. ಆದ್ದರಿಂದ ನಾವು ವರ್ಣರಹಿತ ಮತ್ತು ವರ್ಗರಹಿತವಾದ ಸಮಾಜ ನಿರ್ಮಾಣಕ್ಕೆ ನಿರ್ದಿಷ್ಟವಾದ ಹೆಜ್ಜೆಯನ್ನು ಇಡಬೇಕಾಗುತ್ತದೆ. ಈ ಬಗ್ಗೆ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು.[೨] ಈ ಮಾತುಗಳ ಮೂಲಕ ಜಾತಿರಹಿತ ಮತ್ತು ವರ್ಗರಹಿತ ಸಮಾಜದ ನಿರ್ಮಾಣದ ಕನಸನ್ನು ಅವರು ಹೊಂದಿದ್ದರೆಂಬುದು ವಿದಿತವಾಗುತ್ತದೆ.

ರಾಜ್ಯಾಂಗದಲ್ಲಿ ಹೇಳಿರುವ ಹಾಗೆ ದೇಶದಲ್ಲಿ ಬಹಳ ಹಿಂದುಳಿದ ಜನ ಇದ್ದಾರೆ. ಅವರಿಗೆ ಒಂದು ವಿಶೇಷವಾದ ಸವಲತ್ತನ್ನು ಕೊಡಬೇಕೆಂದು ಅಂಬೇಡ್ಕರ್ ಅವರು ಬಹಳ ವಾದ ಮಾಡಿ ಹರಿಜನರಿಗೆ ವಿಶೇಷವಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಲೋಹಿಯಾ ಅವರು ಸಮಾನ ಅವಕಾಶಗಳನ್ನು ಕಲ್ಪಿಸಿಕೊಡದಿದ್ದರೆ, ವಿಶೇಷವಾದ ಸವಲತ್ತುಗಳನ್ನಾದರೂ ಕೊಡಬೇಕು ಎಂದು ಹೇಳಿದ್ದಾರೆ.ಈ ದೃಷ್ಟಿಯಿಂದ ಹರಿಜನರಿಗೆ, ದೀನದಲಿತರಿಗೆ ವಿಶೇಷವಾದ ಸವಲತ್ತನ್ನು, ಸೌಲಭ್ಯವನ್ನು ಸರ್ಕಾರದವರು ಒದಗಿಸಿಕೊಡಬೇಕು ಎಂದು ಸದನದಲ್ಲಿ ಶಾಂತವೇರಿ ಗೋಪಾಲಗೌಡರು ಮಾತನಾಡಿದರು. ಈ ದೇಶದಲ್ಲಿ ಶ್ರೀಮಂತ ಬಡವ ಎನ್ನುವ ಭೇದ ಇಲ್ಲದಂತೆ ಮಾಡುವುದಕ್ಕೆ ಎಲ್ಲರೂ ಪ್ರಯತ್ನಪಡಬೇಕು ಎಂದಿದ್ದಾರೆ. ಈ ದೇಶದಲ್ಲಿ ಶ್ರೀಮಂತ ಬಡವ ಎನ್ನುವ ಭೇದ ಭಾವ ಮಾತ್ರವಲ್ಲ, ವರ್ಣಭೇದ, ಜಾತಿಭೇದ ಎನ್ನುವುದು ಸಾವಿರಾರು ವರ್ಷಗಳಿಂದ ಇದೆ. ಇದನ್ನು ನಿರ್ಮೂಲನ ಮಾಡಲು ಎಲ್ಲರೂ ಪ್ರಯತ್ನ ಮಾಡಬೇಕೆಂಬುದು ಗೋಪಾಲಗೌಡರ ಸಮಾಜವಾದಿ ಚಿಂತನೆಯಾಗಿತ್ತು.

'ಷೆಡ್ಯೂಲ್ ಕ್ಯಾಸ್ಟ್' ಪಟ್ಟಿಯನ್ನು ತಯಾರಿಸಲು ಕೇಂದ್ರ ಸರ್ಕಾರದವರು ಒಂದು 'ಕಮಿಷನ್' ನೇಮಕ ಮಾಡಿದ್ದರು. ಆ ಕಮಿಷನ್ನಿನವರು ಎಲ್ಲಾ ಕಡೆಗೂ ಬಂದು ಹೋಗಿದ್ದಾರೆ. ಆದರೆ ಅಸ್ಪೃಶ್ಯತೆ ಎಲ್ಲಾ ಕಡೆ ಇನ್ನೂ ಜೀವಂತವಾಗಿದೆ. ಭಾರತದ ಹೆಚ್ಚಿನ ಹಳ್ಳಿಗಳಲ್ಲಿ ಜಾತಿ ಪದ್ಧತಿ ಇಂದೂ ಅಸ್ತಿತ್ವದಲ್ಲಿದೆ. ಭಾರತದಲ್ಲಿ ೯೦% ಜನತೆ ಊಟ, ಬಟ್ಟೆಯಿಲ್ಲದೆ ದರಿದ್ರಾವಸ್ಥೆಯಲ್ಲಿದ್ದಾರೆ. ಹರಿಜನರನ್ನು ಮುಟ್ಟಿದರೆ ಸ್ನಾನಮಾಡಬೇಕು, ಅವರ ಜೊತೆಯಲ್ಲಿ ಮಾತನಾಡಿದರೆ ಮೈಲಿಗೆಯಾಗುತ್ತದೆ ಎನ್ನುವ ಸ್ಥಿತಿ ಇದೆ. ಇಂತಹ ಅನಿಷ್ಟ ಪದ್ಧತಿಯನ್ನು ಕಾನೂನುಬದ್ಧವಾಗಿ ತೊಡೆದುಹಾಕಬೇಕು. ಬಡತನದಲ್ಲಿರುವವರಿಗೆ ದೀನದಲಿತರಿಗೆ ವಿಶೇಷವಾದ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಿ ಕೊಡಬೇಕು. ಶಿಕ್ಷಣವಿಲ್ಲದಿದ್ದರೆ ಸ್ವಾಭಿಮಾನ ಹುಟ್ಟುವುದಿಲ್ಲ, ಗುಲಾಮಗಿರಿ ಪದ್ಧತಿ ನಿರ್ನಾಮವಾಗುವುದಿಲ್ಲ. ಸ್ವಾಭಿಮಾನ ಜಾಗೃತವಾಗದ ಹೊರತು ಶೋಷಿತ ಜನಾಂಗದವರು

ಸಾಮಾಜಿಕ, ಆರ್ಥಿಕ ಅನ್ಯಾಯದ ವಿರುದ್ಧ ಹೋರಾಡಲು ಸಾಧ್ಯವಾಗುವುದಿಲ್ಲ. ಮಾನವ ಹಕ್ಕುಗಳು ದೊರಕುವುದಿಲ್ಲ. ಎಲ್ಲರೂ ಈ ಜಾತಿ, ಮತ ಮತ್ತು ವರ್ಗಗಳ ಕೊಳಚೆಯಿಂದ ಹೊರಬಂದು ಸಮಾನತೆಯ ಸಮಾಜವನ್ನು ಕಟ್ಟಬೇಕೆಂಬುದು ಶಾಂತವೇರಿ ಗೋಪಾಲಗೌಡರ ಚಿಂತನೆಯಾಗಿತ್ತು.

ಸಜೀವವಾಗಿ ಹರಿಜನರನ್ನು ಸುಡುವುದು, ಕೊಲ್ಲುವುದು, ಗರಗಸದಲ್ಲಿ ಕೊಯ್ಯುವುದು ಇತ್ಯಾದಿ ನಡೆಯುತ್ತಿದೆ. ಇದನ್ನೆಲ್ಲಾ ನೋಡಿಕೊಳ್ಳಲು ಪೊಲೀಸಿನವರಿದ್ದಾರೆ ಎಂದು ಸರ್ಕಾರದವರು ಹೇಳಿದರೆ ಸಾಲದು. ಅದನ್ನೆಲ್ಲಾ ತಡೆಗಟ್ಟಲು ಸರ್ಕಾರದವರು ಒಂದು ವ್ಯವಸ್ಥೆ ಮಾಡಬೇಕು ಎಂದು ಅವರು ಆಗ್ರಹಿಸುತ್ತಾರೆ. ಇಲ್ಲದಿದ್ದರೆ ದೇಶದಲ್ಲಿ ಇದೇ ರೀತಿ ಹರಿಜನರ ಮೇಲೆ ಶೋಷಣೆ, ಇತ್ಯಾದಿ ಕೃತ್ಯಗಳು ನಡೆಯುತ್ತಿದ್ದಲ್ಲಿ ಭೀಮಸೇನೆಯಂತಹ ಸೇನೆಗಳು ಹುಟ್ಟಿಕೊಂಡು ದೇಶದಲ್ಲಿ ಮಹಾಕ್ರಾಂತಿ, ರಕ್ತಕ್ರಾಂತಿಯಾಗಲು ಅವಕಾಶ ನೀಡಿದಂತಾಗುತ್ತದೆ ಎಂಬ ಅಂಶಗಳನ್ನು ಸದನಕ್ಕೆ ಮನವರಿಕೆ ಮಾಡಿಕೊಟ್ಟಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಹಿಂದೂ ಮುಸ್ಲಿಮರ ನಡುವೆ ಗಲಾಟೆಗಳು ಆಗಿದ್ದಲ್ಲಿ ರಕ್ತ ಹರಿಯುತ್ತದೆ, ಇದೇ ತರಹ ಹರಿಜನರನ್ನು ಹೆಚ್ಚು ಹೆಚ್ಚು ಶೋಷಣೆ ಮಾಡುತ್ತಾ ಸಾಗಿದ್ದಲ್ಲಿ ರಕ್ತ ಹರಿಯುತ್ತದೆ. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯಲ್ಲಿ ಒಬ್ಬ ಗ್ರಾಮ ಸೇವಕನು ತನ್ನ ಪ್ರಾಣಕ್ಕೆ ಆಪತ್ತು ಇದೆ ಎಂದು ಪೊಲೀಸರ ಗಮನಕ್ಕೆ ತಂದನು. ಪೊಲೀಸರು ಆತನ ರಕ್ಷಣೆಗೆ ಹೋಗುವ ಮೊದಲೇ ಆ ಗ್ರಾಮ ಸೇವಕನ ಕೊಲೆಯಾಗಿತ್ತು. ಅಂದರೆ ಪೊಲೀಸರ ರಕ್ಷಣಾ ವ್ಯವಸ್ಥೆಯೇ ಸರಿಯಿಲ್ಲ[೩] ಎಂಬುದು ಶಾಂತವೇರಿಯವರ ಅಭಿಪ್ರಾಯ. ರಾಮಮನೋಹರ ಲೋಹಿಯಾ ಅವರ ಪ್ರಕಾರ ಹರಿಜನರು, ಗಿರಿಜನರು, ಮುಸ್ಲಿಮರು, ಸ್ತ್ರೀಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷ ಅವಕಾಶ ಕಲ್ಪಿಸಿಕೊಡಬೇಕು. ಇಂದು ಜಾತಿಯ ಹೆಸರಿನಲ್ಲಿ ಶೋಷಣೆ ನಡೆಯುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅಸ್ಪೃಶ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಅವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಬ್ರಾಹ್ಮಣರಲ್ಲಿಯೂ ಸಹ ಬಡವರು ಇದ್ದಾರೆ. ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಮುಂತಾದ ಜಾತಿಯವರು ಮುಂದುವರೆದಿರುವುದರಿಂದ ಅವರಿಗೆ ಸರ್ಕಾರಿ ಸೌಲತ್ತುಗಳಲ್ಲಿ ಶೇ.೪ರಷ್ಟು ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಉಳಿದ ಶೇ.೯೬ರಷ್ಟು ಸೌಲತ್ತುಗಳನ್ನು ಇನ್ನಿತರೆ ಹಿಂದುಳಿದ ಪಂಗಡದವರಿಗೆ ಸಿಗುವಂತೆ ಕಲ್ಪಿಸಿಕೊಡಬೇಕು. ಶಾಲೆಗಳಲ್ಲಿ ಕೆಲವು ಹಿಂದುಳಿದ ಜಾತಿಗಳಿಗೆ ಸೇರಿರುವ ಮಕ್ಕಳಿಂದ ೨೦-೩೦ ರೂಪಾಯಿಗಳಷ್ಟು ಶುಲ್ಕವನ್ನು ವಸೂಲು ಮಾಡುತ್ತಿರುವುದರಿಂದ ಕೆಲವು ಮಕ್ಕಳು ಶಾಲೆಯನ್ನೇ ಬಿಡುವಂತಹ ಪರಿಸ್ಥಿತಿ ಇದೆ. ಇನ್ನು ಕೆಲವು ಶಾಲೆಗಳಲ್ಲಿ ಹಿಂದುಳಿದ ಜಾತಿಗೆ ಸೇರಿರುವ ಮಕ್ಕಳನ್ನು ಹಿಂದಿನ ಬೆಂಚ್‌ನಲ್ಲಿ ಕೂರಿಸುತ್ತಾರೆ. ವೈದ್ಯರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿಯೂ ಪಕ್ಷಪಾತ ನೀತಿಯನ್ನು ಅನುಸರಿಸಲಾಗುತ್ತಿದೆ. ಹಿಂದುಳಿದ ಜನಾಂಗದವರಿಗೆ ಅಕ್ಷರ ಜ್ಞಾನದ ಅಗತ್ಯವಿರುವುದರಿಂದ, ಒಂದು ಅಕ್ಷರ ಸೇನೆಯನ್ನು

ಏರ್ಪಾಡು ಮಾಡಬೇಕೆಂಬುದು ಗೋಪಾಲಗೌಡ ಅವರ ಅಭಿಪ್ರಾಯವಾಗಿತ್ತು. ಈ ಕುರಿತು ಮುಖ್ಯಮಂತ್ರಿಗಳಿಗೂ ಅವರು ಪತ್ರ ಬರೆದಿದ್ದರು.

ಶಾಂತವೇರಿ ಗೋಪಾಲಗೌಡ ಅವರ ಹೋರಾಟ, ಚಳವಳಿ ಮತ್ತು ಸದನದಲ್ಲಿ ಅವರು ಮಾಡಿದ ಭಾಷಣ ಇವಿಷ್ಟನ್ನು ಮಾತ್ರ ಪರಿಗಣಿಸಿ ಅವರನ್ನು ಮೌಲ್ಯಮಾಪನ ಮಾಡುವುದು ಒಂದು ವಿಧಾನ. ಈ ವಿಧಾನ ಸರಿಯೂ ಹೌದು. ಆದರೆ ಇದರ ಜೊತೆಗೆ ಗೋಪಾಲಗೌಡ ಅವರ ಅಂತರಿಕ ವ್ಯಕ್ತಿತ್ವದ ಮುಖಗಳನ್ನು ಮತ್ತು ಅವರ ಸ್ವಭಾವವನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಮಲೆನಾಡಿನ ಜನರ ಮೇಲೆ ಶಾಂತವೇರಿ ಗೋಪಾಲಗೌಡ ಅವರು ಮಲೆನಾಡಿನ ಸಾಮಾನ್ಯ ಜನರ ಜೊತೆಯಲ್ಲಿ ಮಿಳಿತವಾಗುತ್ತಿದ್ದರು. ಇವರು ರಾಜ್ಯಮಟ್ಟದ ನಾಯಕರಾಗಿ, ರಾಮಮನೋಹರ ಲೋಹಿಯಾ ಅವರ ಮರಣಾ ನಂತರ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರೂ ತಮ್ಮ ಬದುಕಿನ ಹೆಚ್ಚಿನ ಸಮಯವನ್ನು ಮಲೆನಾಡಿನ ಸಾಮಾನ್ಯ ಜನರ ಸಂಗಡದಲ್ಲಿ ಕಳೆದರು. ಇಲ್ಲಿ ಕೆಳಜಾತಿ, ಉನ್ನತ ಜಾತಿ ಎಂಬ ತಾರತಮ್ಯ ಮಾಡದೆ ಎಲ್ಲಾ ಜಾತಿ, ಧರ್ಮ, ವರ್ಗದವರ ಭಾವನೆಗಳನ್ನು ಮೀರಿ ಜಾತ್ಯತೀತ ತಳಹದಿಯ ಮೇಲೆ ಬಾಳಿದರು. ಸಹಜೀವನ, ಸಹಬಾಳ್ವೆ, ಸರಳ ನಡೆನುಡಿ, ಅಂತರ್‌ಜಾತಿ ಮದುವೆ ಇತ್ಯಾದಿಗಳಿಗೆ ಹೆಚ್ಚು ಒತ್ತು ನೀಡಿದರು.

೭.೨. ನಿಮ್ನ ವರ್ಗಗಳ ಸನ್ನಿವೇಶ-ಚಿಂತನೆ-ಏಳಿಗೆ

ಶಾಂತವೇರಿ ಗೋಪಾಲಗೌಡರು ಮಲೆನಾಡಿನ ಜನರಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸಿದರು. ಹಣಕ್ಕಾಗಿ ಅಥವಾ ಯಾವುದೇ ಆಮಿಷಕ್ಕಾಗಿ ತಾವು ನಂಬಿದ ಸಮಾಜವಾದಿ ಸಿದ್ಧಾಂತಗಳನ್ನು ಇವರು ಕೈಬಿಡಲಿಲ್ಲ. ಇವರ ವ್ಯಕ್ತಿತ್ವದಿಂದ ಪ್ರಭಾವಿತರಾದ ನೂರಾರು ಯುವಕರು ಮಲೆನಾಡಿನ ಭಾಗದಲ್ಲಿದ್ದಾರೆ. ಗೋಪಾಲಗೌಡರು ಈ ರಾಜ್ಯದ ದಲಿತ ಜನರ ಕಣ್ಣೀರನ್ನು ಒರೆಸಲು, ಅವರ ಬಾಳನ್ನು ಹಸನಾಗಿಸಲು ಸ್ವಂತ ಸುಖ, ಸೌಕರ್ಯಗಳನ್ನು ಬದಿಗೊತ್ತಿ ಕೆಲಸ ಮಾಡಿದರು. ತಮಗಾಗಿ ರಾಜಕೀಯದಿಂದ ಏನನ್ನೂ ಇವರು ಪಡೆಯಲಿಲ್ಲ. ತಮ್ಮ ವ್ಯಕ್ತಿತ್ವದಿಂದ, ಸರಳ ಸೌಜನ್ಯದಿಂದ ದಲಿತರ ಅಭಿಮಾನವನ್ನು ಗಳಿಸಿದರು. ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು, ಹೋರಾಟದ ಶಿಸ್ತನ್ನು ಬೆಳೆಸಿದರು. ಅವರೆಂದೂ ಜಾತಿವಾದಿಗಳಾಗಿರಲಿಲ್ಲ. ಜಾತಿವಾದದ ದೃಷ್ಟಿಯಿಂದ ಯಾವುದೇ ಸಮಸ್ಯೆಗಳನ್ನು ಅವರು ನೋಡಿದವರಲ್ಲ.

ಶಾಂತವೇರಿ ಗೋಪಾಲಗೌಡರು ಸಮಾಜದಲ್ಲಿ ಇರುವ ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ದಲಿತರ ಬಗ್ಗೆ ಅಗಾಧವಾದ ಕಾಳಜಿ ಹೊಂದಿದ್ದರು. ಇದಕ್ಕೆ ಪುರಾವೆಯಾಗಿ ಅನೇಕ ಘಟನೆಗಳನ್ನು ಉಲ್ಲೇಖಿಸಿ ಚರ್ಚಿಸಬಹುದು. ೧೯೫೪ರಲ್ಲಿ ಶಿಕಾರಿಪುರದ ತಾಳಗುಂದದಲ್ಲಿ ದಲಿತ ವರ್ಗದ ಮಹಿಳೆಯ ಮೇಲೆ ಪೊಲೀಸರು ಅತ್ಯಾಚಾರ ನಡೆಸಿದ್ದರು. ಆಗ ಪಾನನಿರೋಧ ಜಾರಿಯಲ್ಲಿ ಇತ್ತು. ಆದರೂ ಆ ಸಂದರ್ಭದಲ್ಲಿ ಕೆಲವರು ಕುಡಿಯುತ್ತಿದ್ದರು. ಇದು ಪೊಲೀಸರ

ಗಮನಕ್ಕೆ ಬಂತು. ಪೊಲೀಸರು ತಾಳಗುಂದಕ್ಕೆ ಹೋದರು. ಈ ಪೊಲೀಸರು ಭೋವಿ ಜನಾಂಗದವರನ್ನು (ಕುಡಿದ ಅಮಲಿನಲ್ಲಿ ಇದ್ದವರನ್ನು) ಮತ್ತು ಅಲ್ಲಿನ ಮಹಿಳೆಯರನ್ನು ವಿನಾ ಕಾರಣ ಹೊಡೆದರು.ಇದರಿಂದ ಆ ಜನರು ಸಿಟ್ಟಿಗೆದ್ದರು.ಅವರು ಪೊಲೀಸರನ್ನು ಥಳಿಸಿದರು. ಜಿಲ್ಲಾ ವರಿಷ್ಠಾಧಿಕಾರಿಯ ಮೇಲೂ ಧಾಳಿ ನಡೆಸಿದರು. ಇಷ್ಟೆಲ್ಲಾ ಆದ ನಂತರ ಜಿಲ್ಲಾ ರಕ್ಷಣಾಧಿಕಾರಿ ನೂರಾರು ಪೊಲೀಸ್ ಪಡೆಯೊಡನೆ ತಾಳಗುಂದದ ಮೇಲೆ ದಾಳಿ ಮಾಡಿದರು. ಈ ಸನ್ನಿವೇಶದಲ್ಲಿ ಅಲ್ಲಿನ ಪುರುಷರೆಲ್ಲಾ ಊರನ್ನು ತೊರೆದರು.ಆದರೆ ಪೊಲೀಸ್ ಪಡೆ ದಲಿತರ ಮನೆಗಳಿಗೆ ನುಗ್ಗಿ ಇದ್ದ ಅಲ್ಪಸ್ವಲ್ಪ ವಸ್ತುಗಳನ್ನೆಲ್ಲಾ ದೋಚಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿತು. ೨೨ ದಿನ ನಿರಂತರವಾಗಿ ಆ ಹಳ್ಳಿಯ ಜನರ ಮೇಲೆ ಹಲ್ಲೆ ನಡೆಯಿತು. ಈ ವಿಚಾರವು ಶಾಂತವೇರಿ ಗೋಪಾಲಗೌಡರ ಗಮನಕ್ಕೆ ಬಂದಿತು. ಗೋಪಾಲಗೌಡರ ಸ್ನೇಹಿತರಾಗಿದ್ದ 'ಸತ್ಯ' ಎಂಬ ಪತ್ರಿಕೆಯ ಸುದ್ದಿಗಾರರಾಗಿದ್ದ ಸೀತಾರಾಮ ಅಯ್ಯಂಗಾರರ ಮನೆಗೆ ಹೋಗಿ ಅತ್ಯಾಚಾರಕ್ಕೆ ಒಳಗಾಗಿದ್ದ ಮಹಿಳೆಯರಿಗೆ ಪೊಲೀಸಿನವರು ಕೊಟ್ಟಿರುವ ಹಿಂಸೆಯ ಬಗ್ಗೆ ಸ್ಪಷ್ಟವಾಗಿ ಗೌಡರು ಮನವರಿಕೆ ಮಾಡಿಕೊಂಡು ಈ ಪ್ರಮುಖ ವಿಚಾರವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿ ಚರ್ಚಿಸಿದರು.

೧೯೫೩ ಏಪ್ರಿಲ್ ೭ ರಂದು ನಿಮ್ನ ವರ್ಗದ ಏಳಿಗೆ ಕುರಿತು ಸದನದಲ್ಲಿ ಆಡಿದ ಮಾತುಗಳು ಅವರ ಸಮಾಜವಾದಿ ಚಿಂತನೆಗೆ ಸಾಕ್ಷಿಯಾಗಿವೆ. ನಮ್ಮ ಸಮಾಜದಲ್ಲಿ ಈ ನಿಮ್ನ ಪಂಗಡಗಳವರು, ದಲಿತರು ಮತ್ತು ದೀನರೂ ಕೂಡ ಆಗಿದ್ದಾರೆ. ಇದನ್ನು ಮನಗಂಡು ಭಾರತ ರಾಜ್ಯಾಂಗದಲ್ಲಿ ಇನ್ನು ೧೦ ವರ್ಷಗಳ ತನಕ ಅವರಿಗೆ ವಿಶೇಷ ಸೌಲಭ್ಯಗಳನ್ನು ಮತ್ತು ಅವಕಾಶಗಳನ್ನು ಕಲ್ಪಿಸಿಕೊಟ್ಟು ಅವರ ಅಭಿವೃದ್ಧಿಯನ್ನು ಇತರ ಜನಾಂಗಗಳ ಮಟ್ಟಕ್ಕೆ ತರಬೇಕೆಂದು ಉದ್ದೇಶಿಸಲಾಗಿದೆ. ಈ ಹಿಂದುಳಿದ ಪಂಗಡದವರಲ್ಲಿ ಇಲ್ಲಿಯ ತನಕ ಬಹುಮಂದಿ ಕೃಷಿಯ ಜೀವನ ಮಾಡುತ್ತಿದ್ದರೂ ಅವರಿಗೆ ಸ್ವಂತ ವ್ಯವಸಾಯಕ್ಕೆ ಭೂಮಿಯಿಲ್ಲ. ಆದುದರಿಂದ ಅವರಲ್ಲಿರತಕ್ಕವರೆಲ್ಲರೂ ಪೂರಾ ಭೂಹೀನ ಕೃಷಿ ಕಾರ್ಮಿಕರಾಗಿದ್ದಾರೆ. ಆದುದರಿಂದ ಅವರು ತಮ್ಮದೇ ಆದಂತಹ ಒಂದು ಕುಲಕಸಬನ್ನು ಅವಲಂಬಿಸಿಕೊಂಡು ಬರುತ್ತಿದ್ದಾರೆ. ಮತ್ತೆ ಕೆಲವರು ಇತರ ಸಣ್ಣಪುಟ್ಟ ಬೇರೆ ಬೇರೆ ವ್ಯಾಪ್ತಿಯಿರತಕ್ಕ ವೃತ್ತಿಗಳನ್ನು ಅವಲಂಬಿಸಿಕೊಂಡು ಬರುತ್ತಿದ್ದಾರೆ. ಹಿಂದೂ ಸಮಾಜವನ್ನು ನೋಡಿದರೆ ಕುಷ್ಠರೋಗದಿಂದ ಕೈಕಾಲು ಕೊಳೆತು ಹೋದ ಒಬ್ಬ ಮನುಷ್ಯನಿದ್ದಂತೆ ಕಾಣುತ್ತದೆ ಎಂಬ ಗೋಪಾಲಗೌಡರ ಮಾತುಗಳು ಅಂದಿನ ಪರಿಸ್ಥಿತಿಗೆ ಕನ್ನಡಿ ಹಿಡಿದಂತಹ ಮಾತುಗಳಾಗಿರುವುದನ್ನು ಗಮನಿಸಬಹುದಾಗಿದೆ. ಮುಂದುವರೆದು, ಹಿಂದುಳಿದ ಜನಾಂಗದವರು ಶತ ಶತಮಾನಗಳಿಂದಲೂ ತುಳಿಯಲ್ಪಟ್ಟು, ಕೆಳಕ್ಕೆ ಒತ್ತಲ್ಪಟ್ಟು ಕಡೆಗೆ ಈ ಜನಾಂಗವನ್ನೇ ಯಾರೂ ಮುಟ್ಟಲೂಬಾರದೆಂದು ಮಾಡಿರತಕ್ಕಂತಹ ಜನಾಂಗಗಳ ಸಂಖ್ಯೆ ಸಾವಿರಗಟ್ಟಲೆ ಅಪಾರವಾಗಿದೆ. ನಮ್ಮ ದೇಶದ ಈ ಪ್ರಜಾಪ್ರಭುತ್ವದ ಯಶಸ್ಸು ಇದರ ಮೇಲೆಯೂ ಅವಲಂಬಿಸಿರುತ್ತದೆಂದು ಹೇಳಿದರೂ ಹೇಳಬಹುದು. ಹೀಗೆ ನೂರಾರು ವರ್ಷಗಳಿಂದ ಈ

ಒಂದು ಜನಾಂಗ ಇತರ ಜನಾಂಗಗಳವರ ಅಭಿವೃದ್ಧಿಗೆ ಕೊಟ್ಟಿರತಕ್ಕಂತಹ ಸಾಲವನ್ನು ತೀರಿಸುವುದಕ್ಕೆ ನಾವೆಲ್ಲರೂ ತೆರಬೇಕಾದ ಋಣ ಬಹಳವಾಗಿದೆಯೆಂದು ಹೇಳುತ್ತೇನೆ. ತಾವು ಯಾವ ಒಂದು ಪಟ್ಟಣಕ್ಕೇ ಹೋಗಲಿ ಅಥವಾ ಒಂದು ಊರಿಗೆ ಹೋಗಲಿ ಅಲ್ಲಿ ಒಂದು ಹೊಲಗೇರಿ ಇದ್ದೇ ಇರುತ್ತದೆ. ಇದು ನಿಮ್ಮ ಹಿಂದೂ ಸಂಸ್ಕೃತಿಗೆ ಒಂದು ಕಳಂಕಪ್ರಾಯವಾಗಿದೆ[9] ಎಂದು ಹೇಳುವ ಮೂಲಕ ಹಿಂದೂ ಸಂಸ್ಕೃತಿಯಲ್ಲಿ ಇರಬಹುದಾದ ಲೋಪದೋಷಗಳನ್ನು ಕುರಿತು ದನಿಯೆತ್ತಿರುವುದು ಇಲ್ಲಿ ಕಂಡುಬರುತ್ತದೆ.

ಶಾಂತವೇರಿ ಗೋಪಾಲಗೌಡರ ಪ್ರಕಾರ ನಿಮ್ಮ ವರ್ಗದ ಜನತೆಯನ್ನು ಇತರ ಮೇಲುವರ್ಗದ ಹಿಂದೂಗಳು ಎಲ್ಲಿಯತನಕ ಮೇಲ್ಮಟ್ಟಕ್ಕೆ ಎತ್ತುವುದಿಲ್ಲವೋ ಅಲ್ಲಿಯವರೆಗೆ ನಮ್ಮ ದೇಶ ಮುಂದುವರಿಯಲು ಖಂಡಿತಾ ಸಾಧ್ಯವಿಲ್ಲ ಎನ್ನುವುದಾಗಿತ್ತು. ನಮ್ಮ ದೇಶದಲ್ಲಿ ಇಂದು ಆರ್ಥಿಕ ಮತ್ತು ಸಾಮಾಜಿಕ ಎರಡೂ ಬಹಳ ಜಿಗುಟಾದ ಸಮಸ್ಯೆಗಳಿವೆ. ಎಲ್ಲಾ ಸಮಸ್ಯೆಗಳಿಗೆ ಆರ್ಥಿಕ ಸಮಸ್ಯೆಯೇ ಮೂಲಾಧಾರ.ಸಾಮಾಜಿಕ ಸಮಸ್ಯೆಗಳೂ ಸಹ ಅಷ್ಟೇ ಮೂಲಭೂತವಾಗಿದೆ. ಆದುದರಿಂದ ಈ ಪ್ರಮುಖ ಸಮಸ್ಯೆಗಳನ್ನು ಹೋಗಲಾಡಿಸಬೇಕೆಂದರೆ ಭಾರತ ಸಂವಿಧಾನದಲ್ಲಿ ನಿಮ್ಮ ವರ್ಗದವರಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಟ್ಟು ಅವರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳಾಗಿ ಬರಲು ಅವಕಾಶ ನೀಡಬೇಕು. ಹಾಗೆ ಮಾಡದೇ ಇದ್ದಲ್ಲಿ ಈ ಸಮಸ್ಯೆಗಳಿಂದ ಆ ವರ್ಗ ಮುಕ್ತರಾಗಲು ಸಾಧ್ಯವಿಲ್ಲ ಎಂಬುದು ಗೋಪಾಲಗೌಡರ ಚಿಂತನೆಯಾಗಿತ್ತು. ಅದಕ್ಕಾಗಿ ಜನತೆ ಹೆಚ್ಚಿನ ಗಮನ ಹರಿಸಬೇಕು ಮತ್ತು ವಿಧಾನಸಭೆಗಳು ಕಾನೂನು ಪ್ರಕಾರ ಆ ಜನತೆಗೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅವುಗಳೆಲ್ಲವನ್ನು ಕೊಡುವಂತೆ ಮಾಡಬೇಕು. ಇದು ಯಾವುದೇ ಸರ್ಕಾರವಿರಬಹುದು, ಇದು ಅವುಗಳ ಕರ್ತವ್ಯ ಎಂಬುವುದು ಗೋಪಾಲಗೌಡರ ವಾದವಾಗಿತ್ತು. ಮಲೆನಾಡು ಪ್ರದೇಶದಲ್ಲಿರುವ 'ದೀವರು' ಎಂದು ಕರೆಯುವ ಜನಾಂಗದವರೂ ಸಹ ಷೆಡ್ಯೂಲ್ ಪಂಗಡಗಳವರಿಗೆ ಒದಗಿಸಿರುವಂತಹ ಎಲ್ಲಾ ಸೌಲಭ್ಯಗಳನ್ನು ತಮಗೂ ನೀಡಬೇಕೆಂದು ಒತ್ತಾಯಿಸುತ್ತಿದ್ದರೂ ಅವರು ಹಾಗೆ ಹೇಳತಕ್ಕದ್ದು ಅಷ್ಟು ಹಿತಕರವಲ್ಲ. ಆದಾಗ್ಯೂ ಅವರಲ್ಲಿ ದಲಿತರೂ, ದೀನರೂ ಇದ್ದಾರೆ. ಮಲೆನಾಡಿನಲ್ಲಿ ಇವರನ್ನೇ ಹರಿಜನರಂತೆ ಕಾಣಲಾಗುತ್ತಿದೆ. ಆ ಜನಾಂಗದವರಿಗೆ ಸಿಗಬೇಕಾದ ಗೌರವಗಳು ಸಿಗುತ್ತಿಲ್ಲ ಎಂಬುದು ಗೌಡರ ಅಭಿಪ್ರಾಯ.

ಮಲೆನಾಡಿನಲ್ಲಿ ಜೀತಪದ್ಧತಿ ಇದೆ.ಒಬ್ಬ ವ್ಯಕ್ತಿಗೆ ಮದುವೆಯಾಗಲು ಶ್ರೀಮಂತರು ಆರ್ಥಿಕ ಸಹಾಯ ಮಾಡಿದರೆ ಅವನು, ಅವನ ಹೆಂಡತಿ, ಅವನ ಮಕ್ಕಳು ಎಲ್ಲರೂ ಅವರ ಸ್ವತ್ತು. ಚರಸ್ವತ್ತು ಇದ್ದ ಹಾಗೆ. ಇಂತಹದ್ದು ಸಮಾಜದಲ್ಲಿ ಇವೊತ್ತಿಗೂ ಇದೆಯೆಂದು ಹೇಳಿದರೆ ನಾವು ಪ್ರಜಾಪ್ರಭುತ್ವಯುಗದಲ್ಲಿದ್ದೇವೆಯೇ ಅಥವಾ ಪ್ರಜಾಪ್ರಭುತ್ವವನ್ನು ಆಚರಿಸುತ್ತಿದ್ದೇವೆಯೇ ಎಂದು ಹೇಳಲಿಕ್ಕೂ ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಈಗಲೂ ಸಹ ದೇವಸ್ಥಾನಗಳಿಗೆ ದಲಿತರು ಹೋಗುವುದಾಗಲಿ, ದಲಿತರು ಸವರ್ಣ ಹಿಂದೂಗಳ ಬಾವಿಗಳನ್ನು ಉಪಯೋಗಿಸುವುದಾಗಲಿ; ಅವರನ್ನು ಸಮಭಾವದಿಂದ ಕಾಣುವುದಾಗಲಿ ಎಲ್ಲೂ ಇಲ್ಲ. ಅದೆಲ್ಲ ಕಾನೂನಿನ ಪುಸ್ತಕದಡಿಯಲ್ಲಿಯೇ ಹೊರತು ಕಾರ್ಯತಃ

ಬಂದಿಲ್ಲ, ಅದನ್ನು ಕಾರ್ಯರೂಪಕ್ಕೆ ತರಲೂ ಹಲವರು ಅಡ್ಡಿಪಡಿಸುತ್ತಾರೆ ಎಂದು ಗೌಡರು ಸದನದಲ್ಲಿ ಮಾತನಾಡಿದ್ದಾರೆ.

ಮೇಲ್ವರ್ಗದ ಜನತೆ ದೀನದಲಿತರನ್ನು ದುಡಿಸಿಕೊಂಡು ಸರಿಯಾಗಿ ಸಂಬಳ ಕೊಡುವುದಿಲ್ಲ. ಸಮಾಜದಲ್ಲಿ ಅವರನ್ನು ಪ್ರಗತಿಯಾಗಲು ಬಿಡುತ್ತಿಲ್ಲ. ಇದನ್ನರಿತು ಶೋಷಿತ ಜನರನ್ನು ಮೇಲುಮಟ್ಟಕ್ಕೆ ತರುವ ಪ್ರಯತ್ನ ಮಾಡಬೇಕು. ಈ ಸಂದರ್ಭದಲ್ಲಿ ಒಂದು ಸಮಿತಿಯನ್ನು ಏರ್ಪಾಡು ಮಾಡಿ ಅವರು ಎಲ್ಲೆಲ್ಲಿ ಉದ್ಯೋಗದಲ್ಲಿದ್ದಾರೆ ಎಂಬುದನ್ನು ಕಂಡುಹಿಡಿಯಬೇಕು. ಇನ್ನು ತಾಂಡಾಗಳಲ್ಲಿ ವಾಸ ಮಾಡುವ ಲಂಬಾಣಿಗರನ್ನು ಸಮಾಜದಲ್ಲಿ ಮೂಲೆಗುಂಪು ಮಾಡಲಾಗಿರುವುದರತ್ತ ಸದನದ ಗಮನವನ್ನು ಸೆಳೆಯುತ್ತಾರೆ. ಹಿಂದುಳಿದ ಜನಾಂಗದವರು ನಮ್ಮ ಜೊತೆ ಸೇರಿ ನಾವು ಮಾಡತಕ್ಕ ಕೆಲಸ ಕಾರ್ಯದಲ್ಲಿ, ನಮ್ಮ ಯೋಜನೆಗಳಲ್ಲಿ ಭಾಗವಹಿಸದೆ ಹೋದರೆ ದೇಶ ಏಳಿಗೆಯಾಗುವುದಿಲ್ಲ. ಅವರು ಸಮಾಜದಲ್ಲಿ ಡ್ರಾಗ್ ಆಗಿ ಹಿಂದಕ್ಕೆ ಎಳೆಯತಕ್ಕ ಶಕ್ತಿಯಾಗಿ ಉಳಿಯುತ್ತಾರೆ. ಆದುದರಿಂದ ಈ ಸಮಸ್ಯೆಯನ್ನು ಬಿಡಿಸದೆ ಯಾವ ಪ್ರಗತಿಯೂ ಸಾಗುವುದಕ್ಕೆ ಸಾಧ್ಯವೇ ಇಲ್ಲ. ದೇಶದಲ್ಲಿ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಎಷ್ಟು ಪ್ರಯತ್ನವನ್ನು ಮಾಡಬೇಕೋ ಅಷ್ಟು ಪ್ರಯತ್ನವನ್ನು ಬಹಳ ಮುಖ್ಯವಾಗಿ ಮೊದಲು ಮಾಡಬೇಕೆಂದು ನನ್ನ ಒತ್ತಾಯಪೂರ್ವಕವಾದ ವಿನಂತಿ." ಗೋಪಾಲಗೌಡರ ಈ ಮಾತುಗಳು ಹಿಂದುಳಿದ ಜಾತಿ, ವರ್ಗಗಳ ಜನರ ಬದುಕಿಗೆ ಬೆಳಕು ನೀಡಬಲ್ಲವುಗಳಾಗಿವೆ ಎಂಬುದು ವಾಸ್ತವವಾಗಿದೆ.

ಈ ಮೇಲಿನ ಸಮಸ್ಯೆಗಳನ್ನು ಶಾಂತವೇರಿ ಗೋಪಾಲಗೌಡರು ಸದನದಲ್ಲಿ ಮಾತನಾಡಲು ಪ್ರಮುಖ ಕಾರಣ ನಿಮ್ನವರ್ಗಗಳ ಪ್ರತಿನಿಧಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಅವರು ಅವೆಲ್ಲ ಸಮಸ್ಯೆಗಳ ಕುರಿತು ಸಭೆಯಲ್ಲಿ ಹಲವು ಬಾರಿ ಚರ್ಚಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿರುವ ನಿಮ್ನವರ್ಗಗಳ ಬಗ್ಗೆ ಸರ್ವೆ ನಡೆಸಿ ಅವರ ಉದ್ಯೋಗ, ಅವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಗೊತ್ತು ಮಾಡಿಕೊಂಡು ಕಾನೂನು ರೀತಿಯಲ್ಲಿ ಅವರಿಗಿರುವ ಸೌಲಭ್ಯಗಳನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕೆಂಬ ಚಿಂತನೆ ಗೋಪಾಲಗೌಡರದ್ದಾಗಿತ್ತು.

೭.೩. ಶಿಕ್ಷಣ–ಪ್ರಾಥಮಿಕ ವಿದ್ಯಾಭ್ಯಾಸ–ವಿಶ್ವವಿದ್ಯಾಲಯಗಳು

ಶಿಕ್ಷಣವು ಯಾವುದೆ ಸಮಾಜದಲ್ಲಿ ಅರಿವಿನ ಬೆಳಕು.ಅದು ಸಾಮಾಜಿಕ ಶಕ್ತಿ. ಶಿಕ್ಷಣವು ಕತ್ತಲೆಯಲ್ಲಿ ಇದ್ದವರಿಗೆ ಬೆಳಕು. ಇದು ಬಲಹೀನರಿಗೆ ಶಕ್ತಿಶಾಲಿ ಅಸ್ತ್ರ. ಹಾಗಾಗಿಯೇ ಜೋತಿಭಾಪುಲೆ, ಮಹಾತ್ಮ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್ ಮುಂತಾದವರು ಸಮಾಜಕ್ಕೆ ಶಿಕ್ಷಣವು ಒಂದು ಚಾಲಕ ಶಕ್ತಿ ಎಂಬುದನ್ನು ಒತ್ತಿ ಹೇಳಿದರು. ಬ್ರಿಟೀಷರು ಭಾರತವನ್ನು ಆಳುತ್ತಿದ್ದ ಕಾಲದಲ್ಲಿ ಅವರು ಭಾರತದಲ್ಲಿ ಶಾಲೆಗಳನ್ನು ತೆರೆದರು. ಈ ಶಾಲೆಗಳಲ್ಲಿ ಭಾರತದ ಎಲ್ಲಾ ಜಾತಿಯವರು ಶಿಕ್ಷಣ ಪಡೆಯಬಹುದಾಗಿತ್ತು. ಆದರೆ ಭಾರತದಲ್ಲಿ ಪಾರಂಪರಿಕವಾಗಿದ್ದ ಗುರುಕುಲ ಶಿಕ್ಷಣ

ಪದ್ಧತಿಯಲ್ಲಿ ಬ್ರಾಹ್ಮಣರಿಗೆ ಮಾತ್ರ ಪ್ರವೇಶ ಇತ್ತು. ಸ್ವಾತಂತ್ರ ನಂತರ ಭಾರತದಲ್ಲಿ ಕ್ರೈಸ್ತ ಮಿಶನರಿಗಳು ಶಾಲೆ ಕಾಲೇಜುಗಳನ್ನು ಆರಂಭಿಸಿದರು. ಮತ್ತು ಈಗಲೂ ಅವುಗಳನ್ನು ನಡೆಸುತ್ತಿದ್ದಾರೆ. ಇವುಗಳಲ್ಲಿ ಭಾರತದ ಯಾವುದೆ ಜಾತಿಯ ಜನರು ಶಿಕ್ಷಣ ಪಡೆಯಬಹುದು. ಶಿಕ್ಷಣದಿಂದ ಬದುಕಿನ ಅರಿವು ಆಗುತ್ತದೆ. ಸಮಾಜದಲ್ಲಿ ಮುಚ್ಚಿಡಲಾಗಿರುವ ಅನೇಕ ಒಳಸಂಗತಿಗಳು ಗೊತ್ತಾಗುತ್ತವೆ. ಸಮಾಜದಲ್ಲಿ ಇರುವ ಜಾತಿ ಅಸಮಾನತೆ, ವರ್ಗ ಅಸಮಾನತೆ ಮತ್ತು ಲಿಂಗ ಅಸಮಾನತೆಗಳು ಆಧುನಿಕ ಶಿಕ್ಷಣ ಪಡೆದ ತಲೆಮಾರಿಗೆ ಬಹಳ ಸ್ಪಷ್ಟವಾದವು. ಈ ಕಾರಣಕ್ಕಾಗಿ ಆಧುನಿಕ ಶಿಕ್ಷಣ ಪಡೆದ ಪ್ರಗತಿಪರ ತಲೆಮಾರು ನಿರ್ಮಾಣವಾಯಿತು. ಮ್ಯಾಕ್ಸಿಂ ಗಾರ್ಕಿ ಅವರು ರಷ್ಯದ ಜಗತ್ ಪ್ರಸಿದ್ಧ ಬರಹಗಾರರು. ಅವರ 'ತಾಯಿ' ಎಂಬ ಕಾದಂಬರಿ ಜಗತ್ ಪ್ರಸಿದ್ಧವಾದುದು. ಈ ಕಾದಂಬರಿಯಲ್ಲಿ ಕಾದಂಬರಿಯ ನಾಯಕಿ ತಾಯಿ ಹೋರಾಟಗಾರರಿಗೆ ಶಿಕ್ಷಣ ಕಲಿಸುತ್ತಾಳೆ. ಅದರಿಂದ ಶಿಕ್ಷಣ ಕಲಿತವರಿಗೆ ರಷ್ಯದ ಸಮಾಜದಲ್ಲಿ ಅಸ್ತಿತ್ವದಲ್ಲಿ ಇದ್ದ ಅಸಮಾನತೆ ಮತ್ತು ಅನ್ಯಾಯಗಳು ಅರಿವಿಗೆ ಬಂದವು. ಇದರಿಂದ ಮುಂದೆ ಅವರು ಸಂಘಟಿತರಾದರು. ಚಳವಳಿಯನ್ನು ಕಟ್ಟಿದರು. ಇದು ರಷ್ಯದ ಕ್ರಾಂತಿಗೆ ಮುನ್ನುಡಿಯಾಯಿತು. ಇದು ಕಾದಂಬರಿಯ ಒಳಗಿನ ವಿವರವೂ ಹೌದು; ಜೊತೆಗೆ ರಷ್ಯದ ಸಾಮಾಜಿಕ ವಾಸ್ತವವೂ ಹೌದು. ಇದೇ ರೀತಿಯ ವಸ್ತು ಮತ್ತು ನಿರೂಪಣೆಯನ್ನು ಕನ್ನಡದ ಪ್ರಗತಿಶೀಲ ಕಾದಂಬರಿಕಾರರಾದ ನಿರಂಜನ ಅವರ 'ಚಿರಸ್ಮರಣೆ' ಕಾದಂಬರಿಯಲ್ಲೂ ಕಾಣುತ್ತೇವೆ. ಅಂದರೆ ಸಮಾಜದಲ್ಲಿ ಶಿಕ್ಷಣಕ್ಕೆ ಎಷ್ಟೊಂದು ಮಹತ್ವ ಇದೆ ಎಂಬುದನ್ನು ಇವು ತೋರಿಸುತ್ತವೆ. ಜೊತೆಗೆ ತುಳಿತಕ್ಕೆ ಒಳಗಾಗಿರುವ ಜನರಿಗೆ ಶಿಕ್ಷಣವು ಅವರ ಬದುಕನ್ನು ಬದಲಾಯಿಸಲು ಮತ್ತು ಸ್ವಾಭಿಮಾನದಿಂದ ಬದುಕಲು ದೊಡ್ಡ ಶಕ್ತಿ ಎಂಬುದನ್ನು ಇವು ತೋರಿಸುತ್ತವೆ. ಈ ಹಿನ್ನೆಲೆಯಲ್ಲಿ ಶಾಂತವೇರಿ ಗೋಪಾಲಗೌಡ ಅವರ ವಿಚಾರಗಳನ್ನು ಗಮನಿಸಬಹುದು. ಪ್ರಾಥಮಿಕ ಶಿಕ್ಷಣ ಮತ್ತು ಅದರ ನ್ಯೂನ್ಯತೆಗಳನ್ನು ಕುರಿತು ಶಾಂತವೇರಿ ಗೋಪಾಲಗೌಡರು ೧೯೫೨ ಜುಲೈ ೫ರಂದು ಸದನದಲ್ಲಿ ಮಾತನಾಡಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಈಗಾಗಲೇ ನಮಗೆ ಗೊತ್ತಿರುವಂತೆ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ನ್ಯೂನ್ಯತೆಗಳಿವೆ. ಇವುಗಳನ್ನು ಪರಿವರ್ತನೆ ಮಾಡಬೇಕು. ರಾಷ್ಟ್ರ ನಿರ್ಮಾಣ ಮಾಡುವ ವಿದ್ಯಾಭ್ಯಾಸ ನಮ್ಮ ಮಕ್ಕಳಿಗೆ ಬೇಕೆಂದು ಕಳೆದ ಮೂವತ್ತು ನಲವತ್ತು ವರ್ಷಗಳಿಂದ ಅನುಭವಶಾಲಿಗಳೂ ಮೇಧಾವಿಗಳೂ ತಜ್ಞರೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸ ಎಲ್ಲರಿಗೂ ದೊರಕಬೇಕು. ಅದು ಕಂಪಲ್ಸರಿ ಮತ್ತು ಯೂನಿವರ್ಸಲ್ ಆಗಿರಬೇಕೆಂಬ ತತ್ವವನ್ನು ರಾಜ್ಯಾಂಗ ರಚನೆ ಮಾಡಿದವರು ಒಪ್ಪಿದ್ದಾರೆ. ಇದನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದಾರೆ. ಇದು ಎಷ್ಟು ಚೊಕ್ಕಟವಾಗಿ, ಗಟ್ಟಿಯಾಗಿ, ಆದರ್ಶಪೂರ್ಣವಾಗಿದ್ದರೆ ಇದರ ಮೇಲೆ ಕಟ್ಟುವ ರಾಷ್ಟ್ರ ಕೂಡ ಅಷ್ಟೇ ಭದ್ರವಾಗಿರುತ್ತದೆ ಎಂದು ವ್ಯಕ್ತಪಡಿಸಿರುವ ಅಭಿಪ್ರಾಯಗಳು ವಿದ್ಯಾಭ್ಯಾಸದ ಅನುಕೂಲಗಳು ಎಲ್ಲವರ್ಗದವರಿಗೂ, ಎಲ್ಲ ಜಾತಿಗಳವರಿಗೂ ಸಮಾನವಾಗಿ ದೊರೆಯಬೇಕೆಂಬುದನ್ನು ಪ್ರತಿಪಾದಿಸುವಂಥವುಗಳಾಗಿವೆ.

ಶಾಂತವೇರಿ ಗೋಪಾಲಗೌಡರ ಪ್ರಕಾರ ಬಜೆಟ್‌ನಲ್ಲಿ ೨೫%ರಷ್ಟು ಹಣ ವಿದ್ಯಾಭ್ಯಾಸದ ಬಾಬಿಗೆ ಹೋಗಿದೆ. ಆದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಎಷ್ಟು ಮೊಬಲಗನ್ನು ಖರ್ಚು ಮಾಡಬೇಕಿತ್ತೋ ಅಷ್ಟು ಖರ್ಚು ಮಾಡಲು ಆಗಿರುವುದಿಲ್ಲ. ಪ್ರಾಥಮಿಕ ಶಿಕ್ಷಣದಲ್ಲಿ ಹಲವು ನ್ಯೂನ್ಯತೆಗಳಿವೆ ಎನ್ನುವ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಶಿಕ್ಷಣದ ಜೊತೆಗೆ ಶಿಕ್ಷಣವನ್ನು ಹೇಳುವ ಶಿಕ್ಷಕರ ಬಗೆಗೆ ಹಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. ಪ್ರಾಥಮಿಕ ಶಾಲೆಯ ಶಿಕ್ಷಕರ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ. ಶಿಕ್ಷಣದಲ್ಲಿ ಮಾರ್ಪಾಡು ಮಾಡಲು ಮಾರ್ಗಗಳನ್ನು ಕಂಡುಹಿಡಿಯಬೇಕು. ಇದಕ್ಕೆ ಬೇಕಾದ ಹಣವನ್ನು ಎಲ್ಲಿಂದ ತರಬೇಕು? ಯಾವ ರೀತಿ ಸಾಧ್ಯ. ಉಪಾಧ್ಯಾಯರ ಆರ್ಥಿಕ ಅಂತಸ್ತನ್ನು, ಜ್ಞಾನದ ಅಂತಸ್ತನ್ನು ಹೆಚ್ಚಿಸುವುದಕ್ಕೆ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದು ಜಟಿಲ ಸಮಸ್ಯೆಯಾಗಿದೆ ಎಂದು ಹೇಳುತ್ತಾ, "ಶಿಕ್ಷಕರು ಸ್ವಲ್ಪ ಮಾತ್ರ ಓದಿ ಜೀವನಕ್ಕೆ ಇನ್ನೇನು ಉಪಾಯವಿಲ್ಲದೆ ಹೊಟ್ಟೆ ಹೊರೆಯಲು ಬರುವವರು. ಇದನ್ನೇ ಜೀವನಕ್ಕಾಗಿ ಅವಲಂಬಿಸಿರುವವರೂ, ಇಂತಹವರೇ ಹೆಚ್ಚು ಸಂಖ್ಯೆಯಲ್ಲಿ ಕಾಣುತ್ತಾರೆ. ಇದೇ ಮುಂದುವರಿದರೆ ರಾಷ್ಟ್ರದ ಏಳಿಗೆ ಆಗುವುದಿಲ್ಲ. ಮಕ್ಕಳಿಗೆ ಬಾಲ್ಯದಲ್ಲಿ ನೀಡುವ ವಿದ್ಯೆ ಬಹಳ ಮುಖ್ಯವಾದುದು. ಅದಕ್ಕೆ "ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನ" ಎಂದು ತಮ್ಮ ಕಾಲದ ಶಿಕ್ಷಣ ಪದ್ಧತಿಯನ್ನು ಇಲ್ಲಿ ನೆನಪಿಸಿಕೊಳ್ಳುತ್ತಾರೆ. ನಮ್ಮಲ್ಲಿ three R's ಎಂದು ಏನು ಹೇಳುತ್ತೇವೆಯೋ ಎಂದರೆ, Reading, Writing and Rithamatic ಅವುಗಳನ್ನು ನಮ್ಮ ಹಿರಿಯರು ಚೆನ್ನಾಗಿ ಓದಿದ್ದರು. ಪ್ರಸ್ತುತ ಗೋಪಾಲಗೌಡರ ಚಿಂತನೆಯಲ್ಲಿ ಶಿಕ್ಷಕರು ಹೊಟ್ಟೆ ಹೊರೆಯಲು ಮಾತ್ರ ಶಿಕ್ಷಕ ವೃತ್ತಿಗೆ ಬರುವವರು ಎಂದು ಹೇಳಿರುವ ಮಾತನ್ನು ನಾವು ಮತ್ತೊಮ್ಮೆ ಪರಾಮರ್ಶೆಗೆ ಒಳಪಡಿಸುವ ಅಗತ್ಯವಿದೆ ಎಂದೆನ್ನಿಸುತ್ತದೆ. ಗೋಪಾಲಗೌಡರ ಸಂದರ್ಭದಲ್ಲಿದ್ದ ಶಿಕ್ಷಣವ್ಯವಸ್ಥೆಯು ಅಸಮರ್ಪಕವಾದುದು, ಅವರಿಗಿಂತ ಪೂರ್ವದಲ್ಲಿದ್ದ ಶಿಕ್ಷಣ ಪದ್ಧತಿ ಸರಿಯಾದುದು ಎಂಬುದು ಅವರ ನಿಲುವಾಗಿದೆ. ಅದಕ್ಕೆ ಸಾಕ್ಷಿಯೆಂಬಂತೆ, ನಮ್ಮ ಕಾಲದಲ್ಲಿ ೨೧ರವರೆಗಿನ ಮಗ್ಗಿ ಕೂಡ ಬರುವುದಿಲ್ಲ. ೧೯ರ ಎಂಟರೆಷ್ಟೆಂದರೆ ೧೯ನ್ನು ೮ನ್ನು ಗುಣಾಕಾರ ಲೆಕ್ಕ ಹಾಕಿಕೊಂಡು ಮಾಡುವ ಸ್ಥಿತಿ ಬಂದಿದೆ. ಇದು ಮೂಲದಲ್ಲಿರುವ ನ್ಯೂನ್ಯತೆಯನ್ನು ತೋರಿಸುತ್ತದೆ. ಇದನ್ನು ಹೋಗಲಾಡಿಸಬೇಕೆಂದರೆ ಹಿಂದೆ ನಾವು ಕೇಳಿರುವಂತೆ ಗುರುಕುಲಾಶ್ರಮದಲ್ಲಿ ಶಿಕ್ಷಣ ಪಡೆಯುತ್ತಿರುವಾಗ ಗುರುಗಳು ತಮ್ಮ ಆಶ್ರಮದಲ್ಲಿ ಶಿಷ್ಯರಿಗೆ ಪಾಠ ಯಾವ ರೀತಿ ಹೇಳಿಕೊಟ್ಟ ಶಿಷ್ಯರಲ್ಲಿ ಜ್ಞಾನವನ್ನು ಬೆಳೆಸುತ್ತಿದ್ದರೋ ಹಾಗೆ ಅಂತಹ ಶಿಕ್ಷಣದ ಮೇಲೆ ಮಕ್ಕಳು ಜ್ಞಾನವನ್ನು ರೂಢಿಸಿಕೊಂಡು ಬರುವಂತೆ ಮಾಡಬೇಕು" ಎಂದು ಹೇಳಿರುವುದನ್ನು ನೋಡಿದರೆ, ಗುರುಕುಲ ಶಿಕ್ಷಣ ಪದ್ಧತಿಯನ್ನು ಗೋಪಾಲಗೌಡರು ಒಪ್ಪಿಕೊಂಡಿದ್ದರೆಂಬ ಅಂಶ ಈ ಮೂಲಕ ಸ್ಪಷ್ಟವಾಗುತ್ತದೆ.

ಇಂದು ನೀಡುತ್ತಿರುವ ವಿದ್ಯಾಭ್ಯಾಸ ವಿದ್ಯಾಭ್ಯಾಸವೇ ಅಲ್ಲ. ಇದನ್ನು ಮೂಲಭೂತವಾಗಿ ಬದಲಾಯಿಸಬೇಕಾಗಿದೆ. ಶಿಕ್ಷಕ ವೃತ್ತಿಯಲ್ಲಿರುವ ಹಲವರು ತಮ್ಮ ಜೀವನೋಪಾಯಕ್ಕಾಗಿ ಇಂದು

ಈ ವೃತ್ತಿಯನ್ನವಲಂಬಿಸಿದ್ದಾರೆ. ಶಿಕ್ಷಕರಿಗೆ ಟಿ.ಸಿ.ಎಚ್. ಎಂದು ಒಂದು ಟ್ರೈನಿಂಗ್ ಕೊಡುತ್ತಿದ್ದರೂ, ಅದರಲ್ಲಿ ಉತ್ತೀರ್ಣರಾಗಬೇಕು, ಇಲ್ಲದಿದ್ದಲ್ಲಿ ಮುಂದಿನ ಬಡ್ತಿ ವಗೈರೆಗಳು ಸಿಕ್ಕುವುದಿಲ್ಲ ಎನ್ನುವ ನಿರ್ಬಂಧವಿರುವುದರಿಂದ ಅವರು ಓದುತ್ತಿದ್ದಾರೆ. ಈ ರೀತಿಯ ವಿದ್ಯೆಯಿಂದ ನಮ್ಮ ಯುವಜನರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತವಾಗಿ ಬದಲಾಯಿಸಿ ನಮ್ಮ ವಿದ್ಯಾಭ್ಯಾಸವನ್ನು ಹೊಸದಾಗಿ ಮಾರ್ಪಾಡು ಮಾಡಬೇಕಾಗಿದೆ ಎಂಬ ಶೈಕ್ಷಣಿಕ ಚಿಂತನೆ ಗೋಪಾಲಗೌಡರದ್ದು.

ಶಿಕ್ಷಕರ ವೃತ್ತಿ ಪವಿತ್ರವಾದುದು. ಉಳಿದ ಎಲ್ಲ ವೃತ್ತಿಗಳಿಗಿಂತ ಇದು ಭಿನ್ನವಾದುದು. ಇತರ ವೃತ್ತಿಗಳನ್ನು ಮಾಡುವವರಲ್ಲಿ ಕೆಲವು ಲೋಪದೋಷಗಳು ಕಂಡುಬರಬಹುದಾದರೂ ಅವುಗಳನ್ನು ಕಡೆಗಣಿಸಬಹುದು. ಆದರೆ ಶಿಕ್ಷಕ ವೃತ್ತಿಯನ್ನು ಮಾಡುವವರು ಸಮಚಿತ್ತರೂ, ಶುದ್ಧಾತ್ಮರೂ ಆಗಿರಬೇಕಾದುದು ಒಂದು ಅಪೇಕ್ಷಣೀಯ ಅಂಶ. ಈ ನಿಟ್ಟಿನಲ್ಲಿ ಗೋಪಾಲಗೌಡರು ಈ ಕುರಿತು ಬೆಳಕು ಚೆಲ್ಲಿರುವುದನ್ನು ಇಲ್ಲಿ ನೋಡಬಹುದಾಗಿದೆ. ಉಪಾಧ್ಯಾಯ ವೃತ್ತಿಗೆ ಬರುವವರಿಗೆ ಮಕ್ಕಳ ಹಸುವಿನಂತಹ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಗುಣವಿರಬೇಕು. ಮಕ್ಕಳ ಕೋಮಲ ಬುದ್ಧಿ ವಿಕಾಸವಾಗುವಂತೆ, ಅವರನ್ನು ಹೆದರಿಸದೆ ಚಿಕ್ಕಮಕ್ಕಳಿಗೆ ಅವರ ಮನಸ್ಸನ್ನರಿತುಕೊಂಡು ಪಾಠ ಹೇಳತಕ್ಕಂತಹ ಚೈತನ್ಯವಿರುವವರು, ಅಂದರೆ ಮನಶಾಸ್ತ್ರವನ್ನು ಬಲ್ಲಂತಹ ಹೆಚ್ಚಿನ ಪ್ರಪಂಚ ಜ್ಞಾನವುಳ್ಳವರನ್ನೇ ನೇಮಕ ಮಾಡಿಕೊಳ್ಳಬೇಕು ಎಂಬ ಅಪೇಕ್ಷಣೀಯ ಗುಣವನ್ನು ಗೋಪಾಲಗೌಡರು ಹೊಂದಿರುವುದನ್ನು ಇಲ್ಲಿ ಕಾಣಬಹುದು. ಇಂತಹ ವಿವೇಕಶಾಲಿಗಳು ಶಾಲೆಗಳಲ್ಲಿ ಇಲ್ಲದಿರುವುದರಿಂದಲೇ ಇಂದು ಮಕ್ಕಳು ಪಾಠ ಶಾಲೆಗಳಿಗೆ ಹೋಗಬೇಕೆಂದರೆ ಹೆದರಿ ಕಳ್ಳ ಬೀಳುವುದು ಇತ್ಯಾದಿಗಳು ನಡೆಯುತ್ತಿವೆ. ವಿದ್ಯಾಭ್ಯಾಸ ಕ್ರಮದಲ್ಲಿ ಗಣನೀಯ ಬದಲಾವಣೆಗಳಾಗಬೇಕು ಎಂಬ ವಿಚಾರದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಈ ಮುಂದಿನಂತೆ ವ್ಯಕ್ತಪಡಿಸಿರುವುದನ್ನು ಇಲ್ಲಿ ನೋಡಬಹುದಾಗಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಕ್ರಮವನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಇದಕ್ಕಾಗಿ ಮುನಿಸಿಪಾಲಿಟಿ, ಪಂಚಾಯಿತಿಗಳಿಂದ ಹಣವನ್ನು ಒದಗಿಸಬೇಕು. ದೇಶದಾದ್ಯಂತ ಸಮಗ್ರವಾಗಿ ವಸೂಲಿ ಮಾಡುತ್ತಿರುವ ಕಂದಾಯದ ಕಾಲದಲ್ಲಿ ರೂಪಾಯಿ ಒಂದಕ್ಕೆ ಎರಡಾಣೆಗಳಂತೆ ಎಜುಕೇಷನ್‌ಸೆಸ್ ಎಂಬುದಾಗಿ ವಸೂಲು ಮಾಡಲಾಗುತ್ತಿದೆ. ಹಳ್ಳಿ ಜನರಿಂದ ಲಕ್ಷಾಂತರ ರೂಪಾಯಿಗಳನ್ನು ವಸೂಲು ಮಾಡಿಕೊಂಡಾಗ್ಯೂ ಅವರಿಗೆ ನ್ಯಾಯವಾದ ರೀತಿಯಲ್ಲಿ ಅಗತ್ಯವಾಗಿ ತಾವು ಕೊಡಬೇಕಾದ ಪ್ರಾಥಮಿಕ ಶಿಕ್ಷಣವನ್ನೇ ಒಂದು ಕ್ರಮದಲ್ಲಿ ದೊರೆಯುವಂತೆ ಮಾಡಲು ಒಂದು ಯೋಜನೆಯನ್ನು ತಯಾರಿಸಬೇಕು. ಯಾವ ಯಾವ ವಿದ್ಯಾಭ್ಯಾಸಕ್ಕೆ ಎಷ್ಟೆಷ್ಟು ಹಣ ವಿನಿಯೋಗಿಸಬೇಕು, ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕು ಎಂದು ಯೋಜಿಸಬೇಕು. ವಿದ್ಯಾರ್ಥಿಗಳಿಗೆ ಅಗತ್ಯವಿರುವಷ್ಟು ಪಾಠ ಶಾಲೆಗಳಿಲ್ಲ. ಶಿಕ್ಷಣದಲ್ಲಿ ನ್ಯೂನ್ಯತೆಗಳಿವೆ. ಉಪಾಧ್ಯಾಯರನ್ನು ನೇಮಿಸಿಕೊಳ್ಳುವಾಗ ಉತ್ತಮ ಮಟ್ಟದ ಜ್ಞಾನವಿರುವವರನ್ನು ನೇಮಿಸಿಕೊಳ್ಳುವ ಏರ್ಪಾಡು ಮಾಡಬೇಕು.[5]

೧೯೬೩ ಸೆಪ್ಟಂಬರ್ ೭ರಂದು ಸದನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕುರಿತು ಮಾತನಾಡುತ್ತಾ, ದೇಶದಲ್ಲಿ ಸ್ವಾತಂತ್ರ್ಯಾ ನಂತರ ಅನಾದರಕ್ಕೆ ಈಡಾಗಿರುವ ಒಂದು ವಿಷಯವೆಂದರೆ ಅದು ವಿದ್ಯಾಭ್ಯಾಸ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿಗಳನ್ನು ಮತ್ತು ಆ ಕ್ಷೇತ್ರದಲ್ಲಿ ನಾವು ಸ್ವಾತಂತ್ರ್ಯ ನಂತರದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸುವುದಾದರೆ, ಅದು ಬಹಳಮಟ್ಟಿಗೆ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಿಲ್ಲ[೯] ಎಂಬುದು ಅವರಿಗೆ ನಿರಾಶೆಯನ್ನು ತಂದಿರುವ ವಿಷಯವಾಗಿರುತ್ತದೆ.

ದೇಶದಲ್ಲಿನ ರಾಜ್ಯಾಂಗದಲ್ಲಿ ಆರು ವರ್ಷ ತುಂಬಿದ ಎಲ್ಲಾ ಮಕ್ಕಳಿಗೂ ಉಚಿತವಾಗಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲೇಬೇಕೆಂಬ ನಿರ್ದೇಶನ ಎಲ್ಲಾ ರಾಜ್ಯಗಳಿಗೂ ಇದ್ದರೂ ಸಹ ಅದನ್ನು ಯಥಾವತ್ತಾಗಿ ಪರಿಪಾಲನೆ ಮಾಡುತ್ತಿಲ್ಲವೆಂದು ಗೋಪಾಲಗೌಡರು ಸರ್ಕಾರವನ್ನು ಆರೋಪಿಸುತ್ತಾರೆ. ನಮ್ಮ ರಾಜ್ಯದಲ್ಲಿ ಹಿಂದೆ ಸಹ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ದೊರಕಬೇಕೆಂಬ ಪ್ರಯತ್ನ ನಡೆದಿತ್ತು.ಆದರೆ ಈಗ ರಾಜ್ಯದಲ್ಲಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ಏನೊಂದು ನೀತಿಯನ್ನನುಸರಿಸುತ್ತಾ ಬಂದಿದ್ದಾರೋ ಅದು ಸ್ವತಃ ತನಗೆ ತಾನೇ ಮೋಸ ಮಾಡಿಕೊಳ್ಳತಕ್ಕ ಒಂದು ಪದ್ಧತಿ[೧೦] ಎಂದು ಹೇಳುವ ಮೂಲಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀತಿಯ ಲೋಪದೋಷಗಳನ್ನು ಈ ಮೂಲಕ ಸದನದ ಮುಂದೆ ತೆರೆದಿಡುತ್ತಾರೆ. ಹಾಗೂ ಈ ವಿಷಯವನ್ನು ಶಿಕ್ಷಣ ಸಚಿವರು ಗಮನಿಸಬೇಕು ಎಂದು ಆಗ್ರಹಿಸುತ್ತಾರೆ. ಆರು ವರ್ಷ ತುಂಬಿದ ಎಲ್ಲಾ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗಳಿಗೆ ಸೇರಿಸುವ ಕ್ರಮ ಪ್ರಸ್ತುತ ಹಾಲಿ ಸರ್ಕಾರ ಯೋಜನೆಯಲ್ಲಿಲ್ಲ. ಯೋಜನೆಯಲ್ಲಿದ್ದರೂ ಅವರು ಅದನ್ನು ಕಾರ್ಯಗತ ಮಾಡುವ ಕ್ರಮಗಳನ್ನು ತೆಗೆದುಕೊಂಡಿಲ್ಲ. ಯಾವ ವಿದ್ಯಾರ್ಥಿ ಶಾಲೆಗೆ ಸೇರುತ್ತಾನೋ ಆತನು ಸೇರಿದ ದಿವಸದಿಂದ ಶಾಲೆಯನ್ನು ಬಿಟ್ಟು ಹೋಗುವಷ್ಟು ದಿವಸ ಮಾತ್ರ ಆತನಿಗೆ ಉಚಿತವಾದ ಶಿಕ್ಷಣ ದೊರೆಯುತ್ತದೆ. ಒಂದೆರಡು ವರ್ಷಗಳ ನಂತರ ಆ ವಿದ್ಯಾರ್ಥಿ ಬಡತನ ಇತ್ಯಾದಿ ಕಾರಣಗಳಿಂದಾಗಿ ಶಾಲೆಯನ್ನು ಬಿಟ್ಟರೆ ಆತ ಎಲ್ಲಿಗೆ ಹೋದ? ಏನು ಮಾಡುತ್ತಿದ್ದಾನೆ? ಎಂಬುದರ ಬಗ್ಗೆ ಸರ್ಕಾರ ಗಮನ ಕೊಡುತ್ತಿಲ್ಲ. ಬಹಳ ಕಡೆ ೭ ರಿಂದ ೧೦ ವರ್ಷದ ಮಕ್ಕಳು ಶಾಲೆಗೆ ಹೋಗಲು ಅವಕಾಶವಿರುವುದಿಲ್ಲ. ಅದಕ್ಕೆ ಕಾರಣ ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಪ್ರೌಢ ಶಿಕ್ಷಣ ಪದ್ಧತಿಯಲ್ಲಿ ಬಡವರಿಗೆ ಉಚಿತವಾಗಿ ಶಿಕ್ಷಣ ದೊರೆಯುತ್ತಿದೆ ಎನ್ನುವುದಾದರೆ ಅದಕ್ಕೆ ಎಷ್ಟು ಹಣವನ್ನು ಹೆಚ್ಚಾಗಿ ಒದಗಿಸಬೇಕು ಎಂಬುದನ್ನು ಹಣಕಾಸಿನ ಸಚಿವರು ವಿಚಾರ ಮಾಡಬೇಕಾಗುತ್ತದೆ. ವಿದ್ಯಾಭ್ಯಾಸ ಇತರ ಎಲ್ಲಾ ಹಣ ತೊಡಗಿಸತಕ್ಕ ಯೋಜನೆಗಳಿಗಿಂತ ಹೆಚ್ಚು ಫಲವನ್ನು ಕೊಡತಕ್ಕದ್ದು, ಶಾಶ್ವತವಾದದ್ದು ಮತ್ತು ಭದ್ರವಾದದ್ದು. ಪ್ರೊಫೆಸರ್ ನಾಲಬ್ರೇತ್ ಅವರು ಹಿಂದೆ ನಮ್ಮ ದೇಶದಲ್ಲಿ ಅಮೇರಿಕದ ರಾಯಭಾರಿಯಾಗಿದ್ದವರು ಒಂದು ಮಾತನ್ನು ಹೇಳುತ್ತಾರೆ: ವಿದ್ಯಾಭ್ಯಾಸದಲ್ಲಿ ತಂದೆ

ತಾಯಿಗಳು ಅಥವಾ ರಾಜ್ಯ ತೊಡಗಿಸತಕ್ಕ ಹಣ, ಅದು ಕೇವಲ ಖರ್ಚು ಮಾತ್ರ ಆಗುವುದಿಲ್ಲ. ಅದು ಹಣವನ್ನು ತೊಡಗಿಸತಕ್ಕ ಯೋಜನೆ ಎಂದಾಗುತ್ತದೆ ಎಂದು. ಅದರ ಫಲಗಳು ಶೀಘ್ರವಾಗಿ ಮತ್ತು ಒಳ್ಳೆಯ ರೀತಿಯಿಂದ ಬೆಳೆಯುತ್ತವೆ ಎಂದು ಗೋಪಾಲಗೌಡರು ನಾಲಬ್ರೇತ್ ಅವರ ಮಾತುಗಳನ್ನು ಉಲ್ಲೇಖಿಸಿರುವುದು ನಮ್ಮ ಸಂದರ್ಭದಲ್ಲಿ ವಿಚಾರಾರ್ಹವಾದ ಸಂಗತಿಯಾಗಿದೆ.

ಪ್ರಾಥಮಿಕ ವಿದ್ಯಾಭ್ಯಾಸ ಮುಂದಿನ ಎಲ್ಲ ವಿದ್ಯಾಭ್ಯಾಸ ಪದ್ಧತಿಗಳಿಗೂ ಅಡಿಗಲ್ಲಾಗಿರುತ್ತದೆ. ಅದರ ಮಹತ್ವವನ್ನು ಗೋಪಾಲಗೌಡರು ಈ ಮುಂದಿನಂತೆ ತಿಳಿಸುತ್ತಾರೆ. ಪ್ರಾಥಮಿಕ ವಿದ್ಯಾಭ್ಯಾಸ ಎಷ್ಟು ಒಳ್ಳೆಯ ರೀತಿಯಲ್ಲಿ ನಡೆಯುತ್ತದೆಯೋ ಅದರ ಆಧಾರದ ಮೇಲೆ ಮುಂದಿನ ಮಕ್ಕಳ ಭವಿಷ್ಯ ನಿಂತಿರುತ್ತದೆ. ಹಳ್ಳಿಗಳಲ್ಲಿನ ಪರಿಸ್ಥಿತಿ, ಅಲ್ಲಿನ ಪಾಠ ಪ್ರವಚನಗಳನ್ನು ಗಮನಿಸಿದರೆ ಅಲ್ಲಿನ ಮಕ್ಕಳ ಸ್ಥಿತಿಗತಿ ನಿಜಕ್ಕೂ ಕರುಣಾಜನಕವಾಗಿದೆ. ಮಳೆಗಾಲದಲ್ಲಿ ಮಲೆನಾಡಿನ ಮಕ್ಕಳು ಶಾಲೆಗಳಿಗೆ ಹೋಗುವ ಸನ್ನಿವೇಶವನ್ನು ನೆನೆದರೆ ದುಃಖವಾಗುತ್ತದೆ. ಮಳೆಗಾಲದಲ್ಲಿ ಮಲೆನಾಡಿನ ಕೆಲವು ಭಾಗಗಳಲ್ಲಿ ಮಕ್ಕಳು ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ತೂಗುಸೇತುವೆ (ಮಲೆನಾಡಿನಲ್ಲಿ ಸಾರ ಎನ್ನುತ್ತಾರೆ) ಮೇಲೆ ನಡೆದು ಶಾಲೆಗೆ ನಡೆದುಬರುತ್ತಾರೆ. ನಮ್ಮ ರಾಜ್ಯದ ಎಷ್ಟೋ ಶಾಲೆಗಳ ಕಟ್ಟಡಗಳು ಸುಸ್ಥಿತಿಯಲ್ಲಿಲ್ಲ. ಕೆಲವು ಕಡೆ ಖಾಸಗಿ ಜನರ ಜಗುಲಿಯ ಮೇಲೆ, ಕೋಣೆಯಲ್ಲಿ, ಅಂಗಳದಲ್ಲಿ ಶಾಲೆಗಳನ್ನು ನಡೆಸತಕ್ಕ ಸಂದರ್ಭಗಳು ಒದಗಿಬರುತ್ತವೆ. ಶಾಲೆ ಕಟ್ಟಡ ಕಟ್ಟುವ ವಿಷಯದಲ್ಲಿ ಸರ್ಕಾರದ ನಿಯಮಗಳು ಎಷ್ಟೋ ಬಾರಿ ಪ್ರಶ್ನಾರ್ಹವಾಗಿರುತ್ತವೆ. ಕೆಲವು ಹಳ್ಳಿಗಳ ಶಾಲಾ ಕಟ್ಟಡಗಳಲ್ಲಿ ಕಿಟಕಿ ಬಾಗಿಲು ಮಕ್ಕಳ ತಲೆಯ ಮೇಲೆ ಬೀಳುವ ದುಸ್ಥಿತಿಯಲ್ಲಿವೆ. ಉಪಾಧ್ಯಾಯರು ಮತ್ತು ಮಕ್ಕಳ ಮೇಲೆ ಅದು ಬಿದ್ದು ಹೋಗುವ ತನಕ ಗ್ರಾಮಪಂಚಾಯಿತಿಯವರೂ, ಸರಕಾರದವರೂ ಹಾಗೆಯೇ ಇರುತ್ತಾರೆ. ಇದು ಹಳ್ಳಿಯ ಅಸಂಗತ ಪರಿಸ್ಥಿತಿ ಇಂತಹದನ್ನು ತಾವು ನೋಡಿರುವುದಾಗಿ ಗೋಪಾಲಗೌಡರು ಇಲ್ಲಿ ಸಭೆಗೆ ತಿಳಿಸುತ್ತಾರೆ. ಅಲ್ಲದೆ ಸರ್ಕಾರದ ತಲೆಯಲ್ಲಿ ಬುದ್ಧಿಯಿಲ್ಲ ಎಂದರೆ ನನ್ನ ತಲೆಯಲ್ಲಿ ಇದೆ. ಅದನ್ನು ಸ್ವಲ್ಪ ದಾನವಾಗಿ ಕೊಡುತ್ತೇನೆ ಎಂದು ಸರ್ಕಾರಕ್ಕೆ ಹೇಳುವಷ್ಟು ಛಾತಿ ಅಥವಾ ವಿಶಾಲ ಮನೋಭಾವ ದೊಡ್ಡವರು ಮತ್ತು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕುಳಿತಿರುವ ಅಧಿಕಾರಿಗಳಿಗೆ ಬರಬೇಕು[೧೧] ಎಂದು ಹೇಳಿರುವ ಮಾತುಗಳನ್ನು ಗಮನಿಸಿದರೆ ಅವು ಇಂದಿನ ಪರಿಸ್ಥಿತಿಗೆ ಹೆಚ್ಚು ಅನ್ವಯವಾಗುವಂತಿವೆ ಎಂದು ಹೇಳಬಹುದಾಗಿದೆ.

ಶಾಲೆಗಳಲ್ಲಿ ಪಾಠ ಕಲಿಯುವ ಮಕ್ಕಳ ಸಂಖ್ಯೆಗಳನ್ನು ಕುರಿತು ಸದನದಲ್ಲಿ ಚರ್ಚೆಯಾಗುತ್ತದೆ. ಆ ಸಂದರ್ಭದಲ್ಲಿ ಗೋಪಾಲಗೌಡರು, ಮಕ್ಕಳ ಸಂಖ್ಯೆ ೧೯ ಇರಬಹುದು; ಶಾಲೆ ತೆಗೆಯಲಿಕ್ಕೆ ೨೦ ಜನ ಹುಡುಗರು ಇಲ್ಲ ಎಂದು ಶಾಲೆ ತೆಗೆಯದೇ ಹೋದರೆ ಆ ೧೯ ಮಕ್ಕಳ ಗತಿ ಏನು? ಕೆಲವು ಸಲ ಕಾನೂನಿಗೆ ಕಣ್ಣು ಇರುವುದಿಲ್ಲ. ಇಂತಹ ಕಾನೂನುಗಳನ್ನು ಜನರ ಮುಂದೆ ಹಿಡಿಯುವುದರಿಂದ ಏನು ಪ್ರಯೋಜನ? ೧೯ ಮಕ್ಕಳನ್ನು ಕೊಡುವ ಹಳ್ಳಿಯೇ ಆದಾಗ ೨೦

ಮಕ್ಕಳು ಇಲ್ಲ ಎಂದು ಶಾಲೆ ತೆರೆಯದಿದ್ದರೆ ೧೯ ಮಕ್ಕಳು ಬೇರೆ ಕಡೆ ಹೋಗಿ ಊಟ ಎಲ್ಲಿ ಮಾಡಬೇಕು? ಅವರಿಗೆ ವಿದ್ಯಾಭ್ಯಾಸ ಹೇಗೆ ಕೊಡಿಸಬೇಕು? ಈ ಒಂದು ಸಂದರ್ಭವನ್ನು ತಾವು ತಪ್ಪಿಸಿಕೊಂಡು ಹೊಣೆಗಾರಿಕೆಯನ್ನು ತೀರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸ ಪಡೆಯುವ ಹಳ್ಳಿಯ ಮಕ್ಕಳಿಗೆ ಕೆಲವು ವಿಶೇಷ ಸೌಲಭ್ಯಗಳನ್ನು ಕೊಡಲಿಕ್ಕಾಗಿ ಹಣವನ್ನು ಮೀಸಲಿಟ್ಟಿದ್ದರೂ, ಆ ಯೋಜನೆ ಕೆಲವು ಸಂದರ್ಭದಲ್ಲಿ ಪ್ರಚಾರಾರ್ಥಯೋಜನೆ ಆಗಿರುತ್ತದೆಯೇ ವಿನಃ ನಿಜವಾಗಿಯೂ ಜನರಿಗೆ ಇದರಿಂದ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ ಎಂದು ಹೇಳುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟ ಹಣ ಪೋಲಾಗುವುದರ ಕುರಿತು ಸದನದ ಗಮನಸೆಳೆದಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಇನ್ನು ಕೆಲವು ಮಕ್ಕಳಿಗೆ ಬಟ್ಟೆ ಕೊಡುವ ವ್ಯವಸ್ಥೆ ಇದ್ದರೂ ಅದು ಸಮರ್ಪಕವಾಗಿರುವುದಿಲ್ಲ. ಹಳ್ಳಿಗಾಡಿನಲ್ಲಿರುವ ಹಲವು ತಂದೆ-ತಾಯಿಗಳಿಗೆ ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಆ ಮಕ್ಕಳಿಗೆ ಪುಸ್ತಕ, ಬಟ್ಟೆ, ಸೀಸದ ಕಡ್ಡಿ, ಫೀಜು, ಕೈಗೆ ಎರಡಾಣೆ ಇಷ್ಟನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ. ಕೆಲವು ಕಡೆ ಹರಿಜನ ಮಕ್ಕಳು ಶಾಲೆಗೆ ಹೋಗಲು ಬಟ್ಟೆಯೇ ಇರುವುದಿಲ್ಲ. ಆರು ವರ್ಷ ತುಂಬಿದಾಕ್ಷಣ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂಬುದು ಕಡ್ಡಾಯವಾಗಿದ್ದರೂ ಇದರ ಬಗ್ಗೆ ಸರ್ಕಾರ ಸರಿಯಾಗಿ ಸರ್ವೆ ಮಾಡಿರುವುದಿಲ್ಲ ಎಂಬ ಆಪಾದನೆಯನ್ನು ಅವರು ಈ ಸಂದರ್ಭದಲ್ಲಿ ಮಾಡಿರುವುದನ್ನು ನೋಡಬಹುದು.

'ಮಿಡ್ ಡೇ ಮೀಲ್' ಯೋಜನೆಯು ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಉಪಹಾರದ ರೀತಿಯಲ್ಲಿ ಕೊಡುವ ವ್ಯವಸ್ಥೆಯಾಗಿರುತ್ತದೆ. ವಾಸ್ತವವಾಗಿ ಇದು ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಉನ್ನತ ಮಟ್ಟದ ಯೋಜನೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆದರೆ ಅಲ್ಲಿರುವ ಅವ್ಯವಸ್ಥೆಯ ಬಗೆಗೆ ಗೋಪಾಲಗೌಡರು ದನಿಯೆತ್ತುತ್ತಾರೆ. ಮಧ್ಯಾಹ್ನ ಮಕ್ಕಳಿಗೆ ಕೊಡುವ ಊಟ ಅಷ್ಟು ಚೆನ್ನಾಗಿರುವುದಿಲ್ಲ, ಕೆಲವು ಕಡೆ ಕೊಡುವ ಪದಾರ್ಥಗಳು ತಿನ್ನಲು ಯೋಗ್ಯವಾಗಿರುವುದಿಲ್ಲ. ಬಡವರ ಮಕ್ಕಳು ಇದನ್ನು ತಿಂದು ಅಪೆಂಡಿಸೈಟಿಸ್ ಎನ್ನುವ ರೋಗಕ್ಕೆ ತುತ್ತಾಗುತ್ತಿದ್ದಾರೆ. ಆದ್ದರಿಂದ 'ಈ ಮಿಡ್‌ಡೇ ಮೀಲ್' ಪ್ರಚಾರ ಸಾಧನವಾಗಿದೆ ಹೊರತು, ಇದು ಅಂತಃಕರಣಪೂರ್ವಕವಾಗಿ ನಿಷ್ಠೆಯಿಂದ ಕಾರ್ಯಗತವಾಗುತ್ತಿಲ್ಲ. ಈ ಯೋಜನೆ ಸಫಲವಾಗಬೇಕೆಂಬ ಕಳಕಳಿಯ ಉದ್ದೇಶವಿಲ್ಲ ಇದನ್ನು ಆದಷ್ಟು ಬೇಗ ಸರಿಪಡಿಸಬೇಕು. ಅಮೇರಿಕಾ ದೇಶದವರು ನಮ್ಮ ಶಾಲೆಯ ಮಕ್ಕಳಿಗೆ ಹಾಲಿನ ಪುಡಿ ಕಳುಹಿಸುತ್ತಿದ್ದಾರೆ. ಆದರೆ ಉದಾರವಾಗಿ ಕೊಟ್ಟಿರತಕ್ಕಂತಹ ಹಾಲಿನ ಪುಡಿಯನ್ನು ಮಾರಾಟ ಮಾಡಿಕೊಂಡು ಹಣ ಸಂಪಾದಿಸುವ ಅಧೋಗತಿಯ ಮಟ್ಟಕ್ಕೆ ನಮ್ಮ ಜನರಿದ್ದಾರೆ ಎಂದು ಹೇಳುವಲ್ಲಿ ಗೋಪಾಲಗೌಡರ ಅಸಮಧಾನ ಇಲ್ಲಿ ಪ್ರಕಟವಾಗುತ್ತದೆ. ಒಳ್ಳೆಯ ಸದುದ್ದೇಶದಿಂದ ಕೊಟ್ಟಿರತಕ್ಕ ಹಾಲಿನ ಪುಡಿಯನ್ನು ಈ ರೀತಿ ದುರುಪಯೋಗ ಪಡಿಸಿಕೊಳ್ಳುವುದು ಸರಿಯಲ್ಲ. ಹಾಲಿನ ಪುಡಿ, ಮಧ್ಯಾಹ್ನದ ಊಟ, ಬಟ್ಟೆ ಇವುಗಳನ್ನು ಹಂಚುವಾಗ

ಗ್ರಾಮ ಪಂಚಾಯಿತಿಯ ಸದಸ್ಯರು, ಉಪಾಧ್ಯಾಯರು ಹಾಜರು ಇರಬೇಕು[೧೨] ಎಂಬ ಅವರ ನಿಲುವು ಒಪ್ಪತಕ್ಕದ್ದಾಗಿದೆ.

ಮಲೆನಾಡಿಗರಾದ ಗೋಪಾಲಗೌಡರು ಮಕ್ಕಳ ವಿದ್ಯಾಭ್ಯಾಸ ಕುರಿತಂತೆ ಅವರು ಎದುರಿಸುತ್ತಿದ್ದ ಸಮಸ್ಯೆಗಳನ್ನು ತುಂಬಾ ಹತ್ತಿರದಿಂದ ವಾಸ್ತವದ ನೆಲೆಗಟ್ಟಿನಲ್ಲಿ ನೋಡಿದ್ದಾರೆ. ಮಲೆನಾಡಿನಲ್ಲಿ ಅಂದಿನ ಸಮಸ್ಯೆಗಳು ಇಂದೂ ಮುಂದುವರೆದಿದೆ. ೨೦೧೮ರ ಮಳೆಗಾಲದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಒಂದು ಗ್ರಾಮದಲ್ಲಿ ಸಂಕದ ಮೇಲೆ ಶಾಲೆಗೆ ನಡೆದುಹೋಗುತ್ತಿದ್ದ ಹೆಣ್ಣು ಮಗುವೊಂದು ನೀರು ಪಾಲಾಗಿದ್ದುದ್ದನ್ನು ಇಲ್ಲಿ ನೆನೆಯಬಹುದು. ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಸರ್ಕಾರಿ ಶಾಲೆಗಳಲ್ಲಿ ವಿಸ್ತೃತವಾಗಿ ಹಮ್ಮಿಕೊಳ್ಳಲಾಗಿದ್ದರೂ ಆಹಾರದ ಗುಣಮಟ್ಟದ ಬಗ್ಗೆ ಆಗಾಗ್ಗೆ ದೋಷಾರೋಪಗಳನ್ನು ಕೇಳುತ್ತಿರುತ್ತೇವೆ. ಇದು ಮಕ್ಕಳ ಆರೋಗ್ಯದ ಮೇಲೆ ಮಾಡುವ ದುಷ್ಪರಿಣಾಮವನ್ನು ಯಾರೂ ಊಹಿಸಬಹುದು. ೧೯೫೫ರಲ್ಲಿ ಮುಂಗಾರು ಮಳೆ ಜೂನ್‌ನಿಂದ ಅಕ್ಟೋಬರ್ ತಿಂಗಳವರೆಗೆ ಬರುತ್ತಿತ್ತೆಂದು ಗೌಡರ ಮಾತುಗಳಿಂದ ವೇದ್ಯವಾಗುತ್ತದೆ. ಆದರೆ ಈಗ ಕಾಡುಗಳ ನಾಶವಾಗಿ ಮಳೆಗಾಲದಲ್ಲಿ ಸ್ಥಿತ್ಯಂತರವನ್ನು ನೋಡುತ್ತೇವೆ. ಮಲೆನಾಡಿನಲ್ಲಿ ಅಗತ್ಯವಾದ ಮಳೆ ಬಾರದೆ 'ವರತೆ' ಏಳದೆ ಮಲೆನಾಡು ಬರಡಾಗುತ್ತಿದೆ. ರಾಜಕೀಯ ಮುತ್ಸದ್ದಿಯಾಗಿದ್ದ ಗೋಪಾಲಗೌಡರು ಎಷ್ಟೊಂದು ಸೂಕ್ಷ್ಮವಾಗಿ ಸಮಸ್ಯೆಗಳನ್ನು ನೋಡುತ್ತಿದ್ದರು ಎಂಬುದಕ್ಕೆ ಅವರ ಮಾತುಗಳೇ ಸಾಕ್ಷಿ.

೧೯೫೫ ಅಕ್ಟೋಬರ್ ೧೦ರಂದು ಸದನದಲ್ಲಿ ವಿಶ್ವವಿದ್ಯಾಲಯಗಳನ್ನು ಕುರಿತು ಮಾತನಾಡಿದ್ದಾರೆ. ಈ ದಿವಸ ಈ ವಿಶ್ವವಿದ್ಯಾಲಯಗಳಲ್ಲಿ (ಮೈಸೂರು) ಕೆಲಸ ಮಾಡುತ್ತಿರುವ ಪ್ರೊಫೆಸರುಗಳನ್ನು ಮತ್ತು ಅಧ್ಯಾಪಕರುಗಳನ್ನು ತಾವು ಒಂದು ತಾಲ್ಲೂಕಾಫೀಸಿನ ಗುಮಾಸ್ತರನ್ನು ಕಾಣುವಂತೆ ಕಾಣುತ್ತಿದ್ದೀರಿ. ಇವರಿಗೆ ಒಬ್ಬ ಗುಮಾಸ್ತನಿಗಿರುಷ್ಟು ಕೂಡ ಸ್ವಾತಂತ್ರ್ಯವಿಲ್ಲ. ಹಿಂದೆಯೂ ಹಾಗೆ ನಡೆಯುತ್ತಿತ್ತು.ಇಂದೂ ಹಾಗೆ ನಡೆಯುತ್ತಿದೆ. ಹಿಂದೆ ಯಾವ ರೀತಿ ಈ ಬೋಧಕರನ್ನು ಬಂದೀಖಾನೆಗೆ ಹಾಕಿದ್ದವರಂತೆ ಕಾಣುತ್ತಿದ್ದರೋ ಈಗಲೂ ಅದೇ ರೀತಿ ಕಾಣುವುದಾದರೆ ಮುಂದೆ ನಮಗೆ ಯಾವ ವಿಧದಲ್ಲೂ ಕ್ಷೇಮವಿರುವುದಿಲ್ಲ. ಬನಾರಸ್ ಯೂನಿವರ್ಸಿಟಿ, ಉಸ್ಮಾನಿಯಾ ಯೂನಿವರ್ಸಿಟಿ ಮತ್ತು ಧಾರವಾಡ ಇತ್ಯಾದಿ ಅನೇಕ ಕಡೆಗಳಲ್ಲಿ ಯೂನಿವರ್ಸಿಟಿಗಳಿವೆ. ಅಲ್ಲೆಲ್ಲ ಆ ಅಧ್ಯಾಪಕರಿಗೆ, ಉಪಾಧ್ಯಾಯರುಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದಕ್ಕೆ ಅವಕಾಶವಿದೆ. ಹಾಗೆ ಮಾಡುವುದರಿಂದ ದೇಶಕ್ಕೇನೂ ಗಂಡಾಂತರವಾಗಲಾರದು.[೧೩] ಗೋಪಾಲಗೌಡರ ಈ ಮಾತುಗಳು ಅಂದಿನ ಕಾಲಸಂದರ್ಭದಲ್ಲಿ ಪ್ರೊಫೆಸರ್‌ಗಳು ಮತ್ತು ಅಧ್ಯಾಪಕರುಗಳ ಶೋಚನೀಯ ಪರಿಸ್ಥಿತಿಯನ್ನು ತೆರೆದಿಡುತ್ತವೆ.

ಗೋಪಾಲಗೌಡರ ವೈಚಾರಿಕ ಹಿತಾಸಕ್ತಿ ಬಹಳ ವಿಶಾಲವಾದುದು.ಅವರು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗಿನ ಶಿಕ್ಷಣದ ಸಾಮಾಜಿಕ ಪರಿಣಾಮ ಮತ್ತು ಉದ್ದೇಶ ಏನಾಗಿರಬೇಕು

ಎಂಬ ಬಗ್ಗೆ ಆಲೋಚನೆ ಮಾಡಿದ್ದಾರೆ. ಶಿಕ್ಷಣದ ಗುರಿ ಕೇವಲ ಅಕ್ಷರ ಕಲಿಸುವುದು ಆಗಬಾರದು. ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾರ್ಪಡಿಸಿದರೆ ಸಾಲದು. ಅವರು ಸಮಾಜವನ್ನು ನೋಡುವ ದೃಷ್ಟಿಕೋನವನ್ನು ನಿರ್ಮಾಣ ಮಾಡಬೇಕು.ಜೊತೆಗೆ ಸಮಾಜದ ಬಗೆಗೆ ಸ್ವತಂತ್ರವಾಗಿ ಆಲೋಚನೆ ಮಾಡುವಂತೆ ಆಗಬೇಕು.

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು ಮುಖ್ಯ ಪಾತ್ರವಹಿಸುವಂತೆ ವಿದ್ಯಾರ್ಥಿಗಳು ಅಷ್ಟೇ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ವಿದ್ಯಾರ್ಥಿಗಳಿದ್ದರೆ ಮಾತ್ರ ಶಿಕ್ಷಕರಿಗೆ ಕೆಲಸ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಶಿಕ್ಷಣ ಮತ್ತು ಭವಿಷ್ಯಗಳ ಬಗ್ಗೆ ಗೋಪಾಲಗೌಡರು ಈ ಸಂದರ್ಭದಲ್ಲಿ ದನಿಯೆತ್ತಿ ಮಾತನಾಡಿದ್ದಾರೆ. ಅವರ ಪ್ರಕಾರ ವಿದ್ಯಾರ್ಥಿಗಳಿಗೆ, ಸಮಾಜಕ್ಕೆ ಶಿಕ್ಷಣದ ಫಲ ಸಂಪೂರ್ಣವಾಗಿ ದೊರೆಯಬೇಕಾದರೆ ವಿಶ್ವವಿದ್ಯಾಲಯಗಳಲ್ಲಿ ಯಾವ ರೀತಿ ಶಿಕ್ಷಣ ನಡೆಯಬೇಕೋ ಆ ರೀತಿ ನಡೆಯಬೇಕು. ಇದು ನಮ್ಮ ಆರ್ಥಿಕ ದೃಢತೆಯ ಮೇಲೆ ನಿಂತಿದೆ. ವಿಶ್ವವಿದ್ಯಾಲಯಗಳು ಕೇವಲ ನಿತ್ಯ ಜೀವನಕ್ಕಾಗಿ ವಿದ್ಯಾರ್ಥಿಗಳನ್ನು ತಯಾರಿಸುವಂತೆ ಆಗಬಾರದು. ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದರೆ ಇಂತಿಷ್ಟು ದರ್ಜೆಯ ಕೆಲಸ ದೊರೆಯುತ್ತದೆ ಎನ್ನುವ ಮನೋಭಾವ ಈ ವಿಶ್ವವಿದ್ಯಾಲಯಗಳ ಶಿಕ್ಷಣದಲ್ಲಿ ಇರಬಾರದು. ವಿದ್ಯಾವಂತರಿಗೆ ಹೆಚ್ಚಿನ ಗೌರವ ದೊರೆಯುವಂತಾಗಬೇಕು. ಜ್ಞಾನಾರ್ಜನೆ ಮಾಡಿರತಕ್ಕವರ ದೃಷ್ಟಿ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಕಡೆ ಓಡಬೇಕಾಗಿದೆ. ಹಲವರು ಜೀವನೋಪಾಯಕ್ಕೆ ಅಂದರೆ ಉದ್ಯೋಗಕ್ಕಾಗಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ವಿಶ್ವವಿದ್ಯಾಲಯಗಳಿಂದ ಹೊರಗೆ ಬಂದವರ ದೃಷ್ಟಿ ಹೀಗಿರಬಾರದು. ವಿದ್ಯಾವಂತರಾಗಿರುವರು ವಿದ್ಯೆ ಇಲ್ಲದವರಿಗೆ ತಮ್ಮ ವಿದ್ಯೆಯನ್ನು ದಾನ ಮಾಡಬೇಕು. ಸಮಾಜದಲ್ಲಿ ವಿಶ್ವವಿದ್ಯಾಲಯಗಳನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಅದಿಲ್ಲದಿದ್ದರೆ ನಮಗೆ ಸ್ಫೂರ್ತಿ ಬರುವುದಿಲ್ಲ ಮತ್ತು ಸ್ವತಂತ್ರವಾಗಿ ವಿಚಾರ ಮಾಡುವ ಶಕ್ತಿ ಬರುವುದಿಲ್ಲ[೧೪] ಎಂಬ ಮಾತುಗಳು ವಿದ್ಯೆ ಮತ್ತು ವಿದ್ಯಾದಾನದ ಬಗೆಗಿನ ಮಹತ್ವವನ್ನು ಸಾರುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯದ ಸಂದರ್ಭದಲ್ಲಿ ಗೌಡರು ಆಡಿರುವ ಮಾತು ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹದ್ದು. ಸ್ವಾತಂತ್ರ್ಯವಿರದ ವಾತಾವರಣದಲ್ಲಿ ಸೃಜನಶೀಲತೆ ಪ್ರಖರವಾಗಿ ಪ್ರಕಟವಾಗಲು ಸಾಧ್ಯವಿಲ್ಲ. ಸೃಜನಶೀಲತೆಯೇ ಜ್ಞಾನ ಮತ್ತು ಸಂಶೋಧನೆಯ ಮೂಲ. ಉನ್ನತ ವಿದ್ಯಾಭ್ಯಾಸದ ಗುರಿ ಕೇವಲ ಉದ್ಯೋಗಕ್ಕಾಗಿ ಪದವೀಧರರನ್ನು ಸೃಷ್ಟಿ ಮಾಡುವುದು ಅಲ್ಲ. ಸಮಾಜಕ್ಕೆ ಮತ್ತು ಮಾನವಕುಲಕೋಟಿಗೆ ಆಸ್ತಿಯಾಗುವಂತಹ ಜ್ಞಾನಿಗಳನ್ನು ಬೆಳೆಸುವುದು ಉನ್ನತ ವಿದ್ಯಾಭ್ಯಾಸದ ಗುರಿ. ವಿದ್ಯಾವಂತರು ಸ್ವಾರ್ಥಿಗಳಾಗದೆ ತತ್ವಜ್ಞಾನವನ್ನು ಇತರರೊಂದಿಗೆ ಹಂಚಿಕೊಂಡು ಸಮಾಜದ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬ ಅಂಶವನ್ನು ಗೌಡರು ದೃಢವಾಗಿ ಹೇಳಿದ್ದಾರೆ.

ವಿದ್ಯಾರ್ಥಿ ಸಂಘಗಳನ್ನು ಕುರಿತು ಗೋಪಾಲಗೌಡರು ತಮ್ಮದೇ ಆದ ವಿಚಾರಗಳನ್ನು ಹೊಂದಿದ್ದರು. ಯಾಕೆಂದರೆ ವಿದ್ಯಾರ್ಥಿಗಳು ಎರಡು ರೀತಿಯಲ್ಲಿ ಬೆಳೆಯುತ್ತಾರೆ ಹಾಗೂ ಎರಡು ರೀತಿಯಲ್ಲಿ ಬೆಳೆಯಬೇಕು. ಒಂದು ತರಗತಿಗಳ ಒಳಗೆ; ಮತ್ತೊಂದು ತರಗತಿಗಳ ಹೊರಗೆ. ತರಗತಿಗಳ ಪಾಠದಿಂದ ಅವರು ಅಂಕಪಟ್ಟಿಗಳನ್ನು ಪಡೆಯುತ್ತಾರೆ.ಆದರೆ ತರಗತಿಗಳ ಹೊರಗಿನಿಂದ ಅವರು ಕಲಿಯವುದು ಇದಕ್ಕಿಂತ ಹೆಚ್ಚಿನದು ಇರುತ್ತದೆ. ಅದು ಅವರ ಬದುಕಿನ ಉದ್ದಕ್ಕೂ ಒಂದಿಲ್ಲ ಒಂದು ರೀತಿಯಲ್ಲಿ ಊರುಗೋಲಾಗಿ ಬರುತ್ತದೆ. ಅದು ಅವರ ಬದುಕಿನ ಅನುಭವದ ಭಾಗವಾಗುತ್ತದೆ. ಅವರಿಗೆ ಸಾಮಾಜಿಕ ಎಚ್ಚರಿಕೆಯನ್ನು ಮತ್ತು ಸಾಮಾಜಿಕ ಜಾಗೃತಿಯನ್ನು ತಂದುಕೊಡುತ್ತದೆ. ಈ ದೃಷ್ಟಿಯಲ್ಲಿ ವಿದ್ಯಾರ್ಥಿಗಳ ಸಂಘದ ಪಾತ್ರ ಬಹಳ ಮುಖ್ಯವಾದುದು. ವಿದ್ಯಾರ್ಥಿ ಸಂಘದಲ್ಲಿ ವಿದ್ಯಾರ್ಥಿಗಳು ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಬಹಳಷ್ಟನ್ನು ಕಲಿಯುತ್ತಾರೆ. ಈ ಪಾಠವನ್ನು ಇವರು ತರಗತಿಗಳ ಒಳಗಿನ ಸಿಲೆಬಸ್‌ಗಳಲ್ಲಿ ಅಥವಾ ಅವರು ಬರೆಯುವ ಪರೀಕ್ಷೆಗಳಲ್ಲಿ ಕಲಿಯಲು ಆಗುವುದಿಲ್ಲ. ಇಂದಿನ ವಿದ್ಯಾರ್ಥಿಗಳು ಮುಂದಿನ ರಾಜಕಾರಣಿಗಳಾಗುತ್ತಾರೆ. ಈ ದೂರದೃಷ್ಟಿ ಗೋಪಾಲಗೌಡರಿಗೆ ಇತ್ತು. ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿ ಸಂಘಗಳು ವಿದ್ಯಾರ್ಥಿಗಳ ವ್ಯಕ್ತಿತ್ವದ ವಿಕಾಸಕ್ಕೆ ಪೂರಕವಾಗಿರಬೇಕು. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಬೆಳೆಯಬೇಕು. ಆದರೆ ವಿದ್ಯಾರ್ಥಿ ಸಂಘಗಳು ರಾಜಕೀಯ ಪಕ್ಷಗಳ ಆಡಂಬೋಲವಾದರೆ ಇಂದು ನಾವು ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಕಾಣುವಂತೆ ಗೊಂದಲದ ವಾತಾವರಣ ನಿರ್ಮಾಣವಾಗುತ್ತದೆ. ಗುಣಪೂರ್ಣ ವಿದ್ಯಾಭ್ಯಾಸವನ್ನು ಪಡೆಯುವ ವಿಚಾರಗಳು ದೂರ ಉಳಿದು, ಕೇವಲ ರಾಜಕೀಯ ವಿಚಾರಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ಈ ಪರಿಸ್ಥಿತಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಬೇಕೆ? ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಈ ದೃಷ್ಟಿಯಲ್ಲಿ ಗೋಪಾಲಗೌಡರು, ೧೯೫೭ರ ಅಕ್ಟೋಬರ್ ೧೮ರಂದು, ಸದನದಲ್ಲಿ ವಿದ್ಯಾರ್ಥಿ ಸಂಘಗಳ ಸಾಮಾಜಿಕ ಹಾಗೂ ರಾಜಕೀಯ ಪಾತ್ರವನ್ನು ಕುರಿತು ಹೀಗೆ ಮಾತನಾಡಿದ್ದರು.

ಸಹಸ್ರಾರು ಜನ ವಿದ್ಯಾರ್ಥಿಗಳು ಒಂದೊಂದು ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಾ ಇರುತ್ತಾರೆ. ಅವರೆಲ್ಲರೂ ಪ್ರತ್ಯೇಕ ಪ್ರತ್ಯೇಕ ತರಗತಿಗಳಿಗೆ ಸೇರಿರುತ್ತಾರೆ. ಅವರು ಅಲ್ಲಿ ವಿದ್ಯಾಭ್ಯಾಸ ಮಾಡುತ್ತಾರೆ. ಎರಡರಿಂದ ಮೂರು ವರ್ಷಗಳ ಕಾಲ ಒಂದೇ ಕಾಲೇಜಿನಲ್ಲಿ ಓದಿದರೂ ಸಹ ಅವರಿಗೆ ನೇರವಾದ ಪರಿಚಯಕ್ಕಾಗಲೀ, ಪರಸ್ಪರ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಕ್ಕಾಗಲಿ ಅವಕಾಶ ಬಹಳ ಕಡಿಮೆ ಇರುತ್ತದೆ. ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ ನಡೆಯುವ ಸಂದರ್ಭದಲ್ಲಿ ಕಾಂಗ್ರೆಸ್ ವಿದ್ಯಾರ್ಥಿಗಳಿಗೆ ಕರೆಕೊಡುತ್ತಿತ್ತು. ಆದರೆ ಸ್ವಾತಂತ್ರ್ಯೋತ್ತರದಲ್ಲಿ ವಿದ್ಯಾರ್ಥಿಗಳಿಗೆ ಯಾವತ್ತೂ ಏನೂ ಪ್ರದರ್ಶನಗಳನ್ನು ಮಾಡಬಾರದೆನ್ನುವ ಅಭಿಪ್ರಾಯ ವ್ಯಕ್ತಪಡಿಸಲಾಯಿತು. ಈ ರೀತಿ ಅಧಿಕಾರಿಗಳ ಮುಖಾಂತರ ಇದು ಕಾರ್ಯರೂಪಕ್ಕೆ ಬಂದು, ಇಂದು ವಿದ್ಯಾರ್ಥಿಗಳ ಸಂಘಗಳಿರಬಾರದು. ಅವು ಏನೂ ಕೆಲಸ ಮಾಡಬಾರದು ಎಂದು ಈ ರೀತಿ ಕಡ್ಡಾಯ ಉಂಟಾಗಿದೆ. ಇದು ಒಳ್ಳೆಯದಲ್ಲ. ವಿದ್ಯಾರ್ಥಿಗಳಲ್ಲಿ ಒಂದು ಸೌಹಾರ್ದ, ಸಂಪರ್ಕದ ಪರಿಚಯಗಳು ಬೆಳೆದುಬರುವುದಕ್ಕೆ

ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಕ್ಕೆ ತರಗತಿಯ ಹೊರಗಡೆ ಒಂದು ವೇದಿಕೆ ಮತ್ತು ಒಂದು ಸ್ಥಳವಿರಬೇಕು. ವಿದ್ಯಾರ್ಥಿ ಯೂನಿಯನ್‌ಗಳಿಗೆ ಪ್ರತ್ಯೇಕ ಕಟ್ಟಡಗಳಿರಬೇಕು, ಹೊರಗಡೆಯ ಚಟುವಟಿಕೆಗಳಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕು. ಈ ಮೂಲಕ ವಿದ್ಯಾರ್ಥಿಗಳ ಹಿತ ಕಾಪಾಡಬೇಕು[೧೫] ಎಂಬ ಅಭಿಪ್ರಾಯದ ಮಾತುಗಳು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಹೇಳಿದ ಹಿತವಚನಗಳಾಗಿರುವುದನ್ನು ಗಮನಿಸಬಹುದಾಗಿದೆ.

೭.೪. ಸಂಸ್ಕೃತಿ ಪ್ರಚಾರ

ಸಮಾಜಕ್ಕೆ, ಸಮುದಾಯಗಳಿಗೆ ಸಂಸ್ಕೃತಿ ಬೇಕು. ಹಾಗೆ ನೋಡಿದರೆ ಪ್ರತಿಯೊಂದು ಸಮಾಜಕ್ಕೂ ಸಮುದಾಯಗಳಿಗೂ ಅವುಗಳದ್ದೆ ಆದಂತಹ ಸಂಸ್ಕೃತಿ ಇದ್ದೇ ಇರುತ್ತದೆ. ಇದರ ಜೊತೆಗೆ ಪ್ರಜಾಪ್ರಭುತ್ವದ ಸರಕಾರವು ತನ್ನ ವ್ಯಾಪ್ತಿಯಲ್ಲಿ ಸಂಸ್ಕೃತಿ ಪೋಷಣೆ ಕೊಡಬೇಕಾಗುತ್ತದೆ. ಆದರೆ ಅದರ ಅಗತ್ಯ ಎಷ್ಟು, ಅದರ ಸ್ವರೂಪ ಯಾವುದು ಎಂಬುದರ ಎಚ್ಚರಿಕೆ ಪ್ರತಿಯೊಂದು ಸರಕಾರಕ್ಕೂ ಇರಲೇಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಗೋಪಾಲಗೌಡ ಅವರು ಸದನದಲ್ಲಿ ಈ ವಿಷಯವನ್ನು ಕುರಿತು ಹೀಗೆ ಮಾತಾಡಿದ್ದಾರೆ. ಇದನ್ನು ಪೂರ್ಣ ದೃಷ್ಟಿಯಿಟ್ಟು ಯಾವ ಕಡೆಯಿಂದ ನೋಡಿದರೂ ಮನುಷ್ಯನ ಜೀವಾಧಾರಕ್ಕೆ ಅನ್ನಮಯ ಕೋಶ ಮುಖ್ಯ ಆಧಾರವಾದುದಾಗಿದೆ. ಈ ತುತ್ತಿನ ಚೀಲ ಬರಿದಾಗಿದ್ದರೆ ಪ್ರಾಣಪಕ್ಷಿಯು ಹಾರಿಹೋಗುತ್ತದೆ. ಅನ್ನ ಅಥವಾ ಆಹಾರದ ಆಧಾರದ ಮೇಲೆ ಪ್ರಾಣ, ಪ್ರಾಣದ ಆಧಾರದ ಮೇಲೆ ಜ್ಞಾನ ಅಥವಾ ವಿದ್ಯಾ ಈ ಮೂರರ ನಂತರವೇ ವಿಜ್ಞಾನ. ಇದರಿಂದಾಗಿ ಸಂತೋಷ ಅಥವಾ ಆನಂದ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ರಾಷ್ಟ್ರದಲ್ಲಿ ಕ್ಷಾಮಡಾಮರಗಳಿದ್ದು, ಜನ ಅನ್ನಕ್ಕಾಗಿ ಬಳಲುತ್ತಿದ್ದರೆ, ಸರ್ಕಾರದವರು ಭಾರತ ಓದಿ, ರಾಮಾಯಣ ಓದಿ, ಹರಿದಾಸರ ಕಥೆಗಳನ್ನು ಕೇಳಿ, ಶಿವಶರಣರ ವಚನಗಳನ್ನು ಹಾಡಿ ಎನ್ನುವುದು ಹಾಸ್ಯಾಸ್ಪದ. ಈ ರೀತಿಯ ದುರಾದೃಷ್ಟ ನಮ್ಮ ದೇಶಕ್ಕೆ ಬಂದಿರುವುದೇ? ಇಂತಹ ಅನೀತಿಯಂತ ಸರ್ಕಾರ ಇನ್ನೂ ಅಸ್ತಿತ್ವದಲ್ಲಿದೆಯೇ? ಇಂದು ಸಂಸ್ಕೃತಿಯನ್ನು ನಾವು ಪುನರುದ್ಧಾರ ಮಾಡುತ್ತೇವೆಂದು ಹೇಳಿಕೊಂಡು ಕೂಗುತ್ತಾ ಹಳ್ಳಿಗಳಲ್ಲಿ ಅಥವಾ ಊರುಗಳಲ್ಲಿ ಹೋಗುತ್ತಿದ್ದರೆ, ಅದು ಕೇವಲ ಹೊಗಳುಭಟ್ಟರ ಕೂಟವಾಗುತ್ತದೆ. ಅಲ್ಲಿ ನಡೆಯುವುದನ್ನು ನೋಡಿದರೆ ನನಗೊಂದು ಪದ್ಯ ಸಮಯೋಚಿತವಾಗಿ ಜ್ಞಾಪಕಕ್ಕೆ ಬರುತ್ತದೆ. ಏನೆಂದರೆ

'ಒಂಟೆಗಳ ಮದುವೆಯಲ್ಲಿ ಕತ್ತೆಗಳೆ ನಾಯಕರು
ತಮತಮಗೆ ಹೊಗಳಿಕೊಳ್ಳುವವರು ಏನ್ರೂಪಮೇನ್ಗಾನವೆಂದು

ಅನ್ನಕೊಡಿ, ಬಟ್ಟೆಕೊಡಿ, ಮನೆ ಕಟ್ಟಿಕೊಡಿ ಎಂದು ಜನತೆ ಪರಿತಪಿಸುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಸರ್ಕಾರ ಸಂಸ್ಕೃತಿ ಪ್ರಚಾರ ಮಾಡಹೊರಟರೆ ಇನ್ನು ಅದಕ್ಕಿಂತ ವಿಕಟ ಅಟ್ಟಹಾಸ ಬೇರೆಯಿದೆಯೇ? ರೋಂ ದೇಶ ಉರಿಯುತ್ತಿರುವಾಗ ನೀರೋ ಪಿಟೀಲು ಬಾರಿಸುತ್ತಿದ್ದನಂತೆ[೧೬] ಎಂಬಂತಾಗಿದೆ ದೇಶದ ಸ್ಥಿತಿ ಎನ್ನುತ್ತಾರೆ.

ಗೋಪಾಲಗೌಡರು ಕೇವಲ ರಾಜಕಾರಣಿಯಾಗಿರದೇ ಭಾರತದ ಆಧ್ಯಾತ್ಮದ ಹಿನ್ನೆಲೆಯಲ್ಲಿ ಬದುಕನ್ನು ವಿಶ್ಲೇಷಿಸುವ ಪ್ರಯತ್ನ ಮಾಡದ್ದಾರೆ. ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ ಮತ್ತು ಆನಂದಮಯ ಕೋಶ ಇವುಗಳ ಬಗ್ಗೆ ಮಾತನಾಡಿದ್ದಾರೆ. ಅನ್ನವೇ ನಮ್ಮ ಅಸ್ತಿತ್ವದ ಮೂಲ. ಅನ್ನವಿರದೆ ಸಂಸ್ಕೃತಿಯೂ ಸೇರಿದಂತೆ ನಾವು ಏನನ್ನೂ ಸಾಧಿಸಲು ಸಾಧ್ಯವಿಲ್ಲ. ವಿವೇಕಾನಂದರು ಹೇಳಿದಂತೆ ಮೊದಲು ಜನತೆಗೆ ಅನ್ನ ಕೊಡಿ. ಆನಂತರ ತತ್ವಜ್ಞಾನವನ್ನು ಬೋಧಿಸಿ ಎನ್ನುವ ಮಾತಿನ ಒಳದನಿ ಗೌಡರ ಮಾತಿನಲ್ಲಿ ಅಡಕವಾಗಿದೆ. ಮೂಲಭೂತ ಅವಶ್ಯಕತೆಗಳನ್ನೇ ಈಡೇರಿಸದ ಸರ್ಕಾರ ಸಂಸ್ಕೃತಿಯ ಪ್ರಚಾರಕ್ಕೆ ಹೊರಡುವುದು ಹಾಸ್ಯಾಸ್ಪದ. 'ಹೊಟ್ಟೆಗೆ ಹಿಟ್ಟಿರದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎನ್ನುವ ಗಾದೆ ಮಾತು ಇಲ್ಲಿ ಸಮಯೋಚಿತವಾಗಿದೆ. ಸತ್ಯದ ನೆಲೆಗಟ್ಟನ್ನು ಬಿಟ್ಟು ಹುಸಿ ಸಂಸ್ಕೃತಿಯ ಪ್ರಚಾರದಲ್ಲಿ ತೊಡಗುವವರನ್ನು ಗೌಡರು ಗೇಲಿ ಮಾಡಿದ್ದಾರೆ. ಅದಕ್ಕೆ ಪುಷ್ಟಿಕೊಡುವಂತೆ ಸಂಸ್ಕೃತದ ಶ್ಲೋಕವೊಂದನ್ನು ಉದ್ದರಿಸಿದ್ದಾರೆ.

ಉಷ್ಟ್ರಾಣಾಂಚ ವಿವಾಹೇಷ ಗೀತಂ ಗಾಯಂತಿ ಗಾರ್ಧ ಪಾಹ ।
ಪರಸ್ಪರಂ ಪ್ರಶಂಸಂತಿ ಅಹೋರೂಪಂ ಅಹೋಗುಣಹಃ ॥

(ಒಂಟೆಗಳು ವಿವಾಹ ವಾಗುತ್ತಿವೆ. ಕತ್ತೆಗಳು ಸಂಗೀತವನ್ನು ಹಾಡುತ್ತಿವೆ. ಪರಸ್ಪರರು ಪ್ರಶಂಸೆಯಲ್ಲಿ ತೊಡಗಿದ್ದಾರೆ. ಒಂಟೆಗಳ ರೂಪವನ್ನು ಕತ್ತೆಗಳು ಹೊಗುಳುತ್ತಿವೆ. ಕತ್ತೆಗಳ ಸಂಗೀತವನ್ನು ಒಂಟೆಗಳು ಪ್ರಶಂಸಿಸುತ್ತಿವೆ) ಹೀಗೆ ಅಗತ್ಯವಾಗಿ ಮಾಡಬೇಕಾಗಿರುವ ಕಾರ್ಯದ ಹೊರತಾಗಿ ಅಸಂಬದ್ಧವಾದ ವಿಚಾರಗಳಲ್ಲಿ ತೊಡಗುವವರನ್ನು ಅಂತಹವರೇ ಸಮರ್ಥಿಸುತ್ತಾರೆ ಎಂದು ಹೇಳಿ ಗೌಡರು ಸರ್ಕಾರದ ಕಣ್ತೆರೆಸುವ ಪ್ರಯತ್ನ ಮಾಡಿರುತ್ತಾರೆ.

೭.೫. ಧರ್ಮ

ಸದನದಲ್ಲಿ ರಾಜಕೀಯ ವಿಷಯಗಳ ಚರ್ಚೆಯ ಜೊತೆಗೆ, ಆಡಳಿತ ವಿಷಯಗಳ ಚರ್ಚೆಯ ಜೊತೆಗೆ, ಶಿಕ್ಷಣದ ಬಗೆಗೆ, ಸಾಮಾಜಿಕ ವಿಷಯಗಳ ಬಗೆಗೆ ಚರ್ಚೆಗಳು ಬರುತ್ತವೆ. ಗೋಪಾಲಗೌಡರು ೧೯೫೪, ಏಪ್ರಿಲ್ ೧ ರಂದು ಸದನದಲ್ಲಿ ಧರ್ಮವನ್ನು ಕುರಿತು ಹೀಗೆ ಮಾತಾಡಿದ್ದಾರೆ. ಧರ್ಮ ಎಲ್ಲಾ ಕಾಲದಲ್ಲೂ ಇರುವಂತಹದ್ದು. ಆದರೆ ಎಂದು ನಮ್ಮ ಆಚಾರದಲ್ಲಿ, ಪ್ರತಿನಿತ್ಯದ ಆಚಾರದಲ್ಲಿ ವಿಚಾರಶೂನ್ಯವಾಗುತ್ತಾ ಹೋಗುತ್ತದೆಯೋ ಅಂದಿನ ಆಚಾರ ಗೊಡ್ಡು ಸಂಪ್ರದಾಯವಾಗುತ್ತದೆ. ಅದರ ಹಿಂದೆ ಇರತಕ್ಕ ಭಾವನೆ ಮೂಢ ಭಾವನೆಯಾಗುತ್ತದೆ. ವಿಚಾರಹಿತವಾದ ಆಚಾರವನ್ನು ಇಂದು ನಾವು ಅನುಸರಿಸುತ್ತಾ ಇದ್ದೇವೆ. ಸಮಾಜದಲ್ಲಿ ಹೆಚ್ಚಾಗಿ ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ, ಸ್ವಾತಂತ್ರ್ಯ ಇರಬೇಕು. ಧರ್ಮ ಪ್ರತಿಯೊಬ್ಬ ಮನುಷ್ಯನ ವೈಯಕ್ತಿಕ ಒಂದು ಭಾವ. ಆದ್ದರಿಂದ ಒಂದು ಧರ್ಮಕ್ಕೆ ಉತ್ತೇಜನ ಕೊಟ್ಟು, ಮತ್ತೊಂದು ಧರ್ಮವನ್ನು ಹಳಿಯಬಾರದು[೧೭] ಎಂದು ವ್ಯಕ್ತಪಡಿಸಿರುವ ಅವರ ಅಭಿಪ್ರಾಯಗಳು ಧಾರ್ಮಿಕತೆಯ ಬಗೆಗಿನ ವಿಶಾಲ ಮನೋಭಾವವನ್ನು ಪ್ರಕಟಪಡಿಸುತ್ತವೆ.

ಗೋಪಾಲಗೌಡರ ಪ್ರಧಾನವಾದ ವೈಚಾರಿಕ ಭೂಮಿಕೆ ಸಾಮಾಜಿಕ ಹಾಗೂ ಆರ್ಥಿಕ ನೆಲೆಯ ಸಮಾನತೆಯನ್ನು ಪ್ರತಿಪಾದನೆ ಮಾಡುವುದು ಮತ್ತು ಅದನ್ನು ಸರಿಯಾದ ವಿಧಾನದಲ್ಲಿ ಕಾರ್ಯರೂಪಕ್ಕೆ ತರುವುದಾಗಿತ್ತು. ಹಾಗಾಗಿ ಅವರು ಶಿಕ್ಷಣದ ಬಗೆಗೆ ಮಾತಾಡಲಿ, ಧರ್ಮದ ಬಗೆಗೆ ಮಾತಾಡಲಿ ಅಲ್ಲಿ ಈ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಕುರಿತು ಮಾತಾಡಿದ್ದಾರೆ. ಮೇಲಿನ ಉಲ್ಲೇಖದಲ್ಲಿ ಗೌಡರು ಬಹಳ ಮುಖ್ಯವಾದ ಒಂದು ಅಂಶವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಯಾವುದು ಎಂದರೆ, ಧರ್ಮದ ಆಚರಣೆಯು ವ್ಯಕ್ತಿಯ ವೈಯಕ್ತಿಕ ನೆಲೆಗೆ ಸಂಬಂಧಿಸಿದ್ದು ಎಂಬುದು.ಅದು ವ್ಯಕ್ತಿಯ ವೈಯಕ್ತಿಕ ಭಾವ ಎಂಬುದು. ಇವತ್ತು ಧರ್ಮವನ್ನು ರಾಜಕೀಯಗೊಳಿಸಲಾಗಿದೆ. ಧರ್ಮದ ವ್ಯಾಪ್ತಿ ಮತ್ತು ಅದರ ಕೆಲಸವನ್ನು ವ್ಯಕ್ತಿಗಳ ನೆಲೆಯಿಂದ ಹಾಗೂ ಸಮುದಾಯಗಳ ನೆಲೆಯಿಂದ ವಿಸ್ತಾರಗೊಳಿಸಿ ಅದನ್ನು ರಾಜಕೀಯಗೊಳಿಸಲಾಗಿದೆ. ಇದರಿಂದ ಸಾಮಾಜಿಕ ಬದುಕಿನಲ್ಲಿ ಆಗಬಾರದ ಅನಾಹುತಗಳು ಆಗುತ್ತಿವೆ. ನಡೆಯಬಾರದ ಅನ್ಯಾಯಗಳು ನಡೆಯುತ್ತಿವೆ. ರಾಜಕೀಯ ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ಮತ ಕೇಳುವಾಗ ಧರ್ಮದ ವಿಷಯವನ್ನು ಪ್ರಧಾನವಾಗಿ ಇಟ್ಟುಕೊಂಡು ಮತ ಕೇಳುವಂತಹ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ನಿಜವಾಗಿಯೂ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕ ಮಾಡುವ ಅಗತ್ಯ ಇದೆ. ಧರ್ಮವನ್ನು ರಾಜಕೀಯಗೊಳಿಸಿರುವುದರಿಂದ ಒಂದು ಧರ್ಮದ ಜನರಿಗೂ ಮತ್ತೊಂದು ಧರ್ಮದ ಜನರಿಗೂ ಸಹಬಾಳ್ವೆಯ ಬದಲು ಹಗೆತನವು ಬೆಳೆಯುತ್ತಿದೆ. ಭಿನ್ನ ಧರ್ಮದ ಜನರ ನಡುವೆ ಹಗೆತನವನ್ನು, ಶತೃತ್ವವನ್ನು ರಾಜಕೀಯ ಪಕ್ಷಗಳು ನಿರ್ಮಾಣ ಮಾಡಿವೆ. ಜನರ ನಡುವೆ ಧರ್ಮದ ಹೆಸರಿನಲ್ಲಿ ದ್ವೇಷ, ಅಸೂಯೆ, ಹಗೆತನ, ಶತೃತ್ವ ಹುಟ್ಟುವಂತೆ ಮಾಡಿದ್ದಾರೆ. ಒಂದು ಧರ್ಮದ ಜನರು ತಮಗೆ ಅಗತ್ಯವೆನಿಸಿದ್ದನ್ನು ಕೇಳಿದಾಗ, ನಿಮಗೆ ಕೊಟ್ಟರೆ ಬೇರೆ ಧರ್ಮದವರೂ ಕೇಳುತ್ತಾರೆ ಎಂದು ನೆಪ ಹೇಳಿ ಅಭಿವೃದ್ಧಿ ಕಾರ್ಯಗಳಿಂದ ನುಣುಚಿಕೊಳ್ಳುತ್ತಿವೆ. ಹಾಗಾಗಿ ಸುಮಾರು ೬೪ ವರ್ಷಗಳ ಹಿಂದೆಯೇ ಗೋಪಾಲಗೌಡರು ಆಲೋಚನೆ ಮಾಡಿದ್ದಾರೆ ಎಂಬುದು ಅವರ ರಾಜಕೀಯ ಚಿಂತನೆಯ ದೂರದೃಷ್ಟಿಯನ್ನು ತೋರಿಸುತ್ತದೆ.

೭.೬. ಖಾದಿ

ಖಾದಿಯು ನಾವು ಉಟ್ಟುಕೊಳ್ಳುವ ಒಂದು ಬಗೆಯ ಬಟ್ಟೆ. ಅದನ್ನು ಹತ್ತಿಯಿಂದ ಉತ್ಪಾದನೆ ಮಾಡುತ್ತಾರೆ. ಇದು ಪ್ರಧಾನವಾಗಿ ರೈತರು ಬೆಳೆಯುವ ಬೆಳೆ. ಇಂದು ಮಾರುಕಟ್ಟೆಯಲ್ಲಿ ನೈಲಾನ್, ಟೆರಿಕಾಟ್, ಟೆರಿಉಲ್, ರೇಷ್ಮೆ ಮುಂತಾದ ಹಲವು ಮಾದರಿಯ ಬಟ್ಟೆಗಳಿವೆ. ಅವೆಲ್ಲ ಬಳಸಲು ಅತಿ ನುಣುಪು. ಹಾಗಾಗಿ ಇವತ್ತಿನ ಜನರು ಆ ಬಟ್ಟೆಗಳಿಗೇ ಸಹಜವಾಗಿ ಆಕರ್ಷಿತರಾಗುತ್ತಿದ್ದಾರೆ. ಖಾದಿ ಬಟ್ಟೆಯು ನುಣುಪು ಅಲ್ಲ. ಇವನ್ನು ನಿರ್ವಹಣೆ ಮಾಡುವುದು ಬಹಳ ಸುಲಭ ಅಲ್ಲ. ಯಾಕೆಂದರೆ ಖಾದಿ ಬಟ್ಟೆಗಳನ್ನು ತೊಳೆದಾಗಲೆಲ್ಲ ಕಡ್ಡಾಯವಾಗಿ ಇಸ್ತ್ರಿ ಮಾಡಲೇಬೇಕು. ಇಲ್ಲದಿದ್ದರೆ ಅವು ಸುಕ್ಕು ಸುಕ್ಕು ಆಗುತ್ತವೆ. ಆದರೆ ಗೋಪಾಲಗೌಡರು ಖಾದಿಯನ್ನು ಕೇವಲ ಒಂದು ಬಟ್ಟೆ

ಎಂದು ನೋಡಿಲ್ಲ. ಗೋಪಾಲಗೌಡರ ಆಲೋಚನೆಗಳಿಗೆ ಮಹಾತ್ಮಾ ಗಾಂಧಿ ಅವರು ಪ್ರಧಾನ ಪ್ರೇರಣೆ. ಗಾಂಧೀಜಿ ಅವರು ಭಾರತದಲ್ಲಿ ಬ್ರಿಟೀಶರ ವಿರುದ್ಧ ಹೋರಾಟ ಮಾಡುತ್ತಿದ್ದ ಕಾಲದಲ್ಲಿ ಒಂದು ತಂತ್ರವಿಧಾನವಾಗಿ ಖಾದಿಯನ್ನು ಪರ್ಯಾಯವಾಗಿ ಪ್ರತಿಪಾದನೆ ಮಾಡಿದರು. ಯಾಕೆಂದರೆ ಬ್ರಿಟೀಶರಿಗೆ ಖಾದಿಯು ಒಳ್ಳೆಯ ಮಾರುಕಟ್ಟೆಯನ್ನು ತರುವ ಸ್ಥಿತಿಯಲ್ಲಿ ಇರಲಿಲ್ಲ. ಅವರು ತಮ್ಮ ಉತ್ಪಾದನೆಗಳನ್ನು ತಂದು ಇಲ್ಲಿ ಮಾರುಕಟ್ಟೆಯನ್ನು ನಿರ್ಮಾಣ ಮಾಡಿದ್ದರು. ಹಾಗಾಗಿ ಗಾಂಧೀಜಿ ಅವರು ಬ್ರಿಟೀಶರ ವಸ್ತುಗಳನ್ನು ವಿರೋಧಿಸುವುದು, ಸುಡುವುದು ಮುಂತಾದ ಹೋರಾಟಗಳಿಗೆ ಕರೆ ಕೊಡುತ್ತಿದ್ದರೆ.ಇದಕ್ಕೆ ಪರ್ಯಾಯವಾಗಿ ಖಾದಿಯನ್ನು ಬಳಸಬೇಕೆಂದು, ಉಡಬೇಕೆಂದು ಅದಕ್ಕಿಂತ ಮುಖ್ಯವಾಗಿ ಹತ್ತಿಯನ್ನು ಬೆಳೆಯಬೇಕು ಎಂದು ಪ್ರತಿಪಾದನೆ ಮಾಡುತ್ತಿದ್ದರು ಹಾಗೂ ಇದಕ್ಕೆ ಸಂಬಂಧಿಸಿದ ಜಾಗೃತಿಯನ್ನು ಮೂಡಿಸುತ್ತಿದ್ದರು. ಗಾಂಧೀಜಿಯವರ ಈ ನಡೆ ಗೋಪಾಲಗೌಡರ ಮೇಲೆ ತೀವ್ರ ಪ್ರಭಾವವನ್ನು ಬೀರಿದೆ. ಆದರೆ ಗಾಂಧೀಜಿ ಅವರು ಪ್ರತಿಪಾದನೆ ಮಾಡಿದ್ದ ಖಾದಿಯ ಅಗತ್ಯಕ್ಕೂ ಮತ್ತು ಗೋಪಾಲಗೌಡರು ಮಾಡಿರುವ ಖಾದಿಯ ಅಗತ್ಯದ ಸ್ವರೂಪಕ್ಕೂ ಬಹಳ ವ್ಯತ್ಯಾಸ ಇದೆ. ಇದನ್ನು ಅವರ ಮಾತುಗಳಲ್ಲೇ ಗಮನಿಸಬಹುದು. ಖಾದಿ ಉಡುಗೆ ತೊಡುಗೆಯ ಮೂಲೋದ್ದೇಶವನ್ನು ಬಿಟ್ಟು (ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ) ಕೇವಲ ತೋರಿಕೆಗೆ, ಸ್ವಾರ್ಥ ಸಾಧನೆಗಾಗಿ ಮತ್ತು ಅನ್ಯ ಉದ್ದೇಶಗಳಿಗಾಗಿ ಖಾದಿಯನ್ನು ತೊಡುವವರ ಬಗ್ಗೆ ಗೌಡರು ವ್ಯಂಗ್ಯವಾಡಿದ್ದಾರೆ.

ಖಾದಿ ಉತ್ಪಾದನೆ ಒಂದು ಉದ್ಯೋಗ, ಒಂದು ಗ್ರಾಮ ಕೈಗಾರಿಕೆ, ಒಂದು ಗೃಹ ಕೈಗಾರಿಕೆ.[೧೮] ಖಾದಿ ಕೈಗಾರಿಕೆ ಮತ್ತು ಇತರ ಗ್ರಾಮ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಒಂದು ಬೋರ್ಡನ್ನು ವ್ಯವಸ್ಥಿತವಾಗಿ ರಚನೆ ಮಾಡಬೇಕು ಎನ್ನುವುದು ಗೋಪಾಲಗೌಡರ ಆಶಯವಾಗಿರುತ್ತದೆ. ಕಾಂಗ್ರೆಸ್ ಪಕ್ಷ ಪ್ರಾರಂಭದಿಂದಲೂ ಖಾದಿಯನ್ನು ತನ್ನ ಅಧಿಕೃತ ವೇಷಭೂಷಣವನ್ನಾಗಿ ಮಾಡಿಕೊಂಡು ಬಂದಿದ್ದರಿಂದ ಅದು ರಾಜಕೀಯ ಸಮಸ್ಯೆಯಾಗಿದೆ. ನಮ್ಮ ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಖಾದಿಯನ್ನು ಹಾಕಿದವರೆಲ್ಲ ಸಾಮಾನ್ಯವಾಗಿ ಅಧಿಕಾರದಲ್ಲಿರತಕ್ಕ ವರ್ಗಕ್ಕೆ ಸೇರಿದವರು ಎಂದು ಭಾವಿಸುವಂತಾಗಿದೆ. ಕೆಲವರಿಗೆ ಖಾದಿ ಹಾಕಿದವರನ್ನು ನೋಡಿ ಭಯವೂ ಆಗುತ್ತದೆ. ಮತ್ತೆ ಕೆಲವರಿಗೆ ಸಿಟ್ಟು ಬರುತ್ತದೆ. ಇದಕ್ಕೆ ಕಾರಣ ಕೆಲವರು ಖಾದಿ ಹಾಕಿದವರು ತಪ್ಪು ಮಾಡಿರುತ್ತಾರೆ. ಕೆಲವರು ಬ್ಲಾಕ್ ಮಾರ್ಕೆಟ್ ವ್ಯಾಪಾರ ಮಾಡುತ್ತಿದ್ದುದೇ ಇದಕ್ಕೆ ಕಾರಣವಾಗಿದೆ. ಇನ್ನು ಕೆಲವರು ಬೇರೆ ಬೇರೆ ಉದ್ಯೋಗ ಮಾಡುತ್ತಿದ್ದು, ಕೆಲವು ಜನರು ಖಾದಿ ಉಡುಪನ್ನು ಅನುಕರಣೆ ಮಾಡುವುದಕ್ಕೆ ಧರಿಸುತ್ತಿದ್ದರು. ಎಷ್ಟೋ ಜನ ಕಾಂಗ್ರೆಸ್ ಪಕ್ಷದವರು ಯಾವುದಾದರು ಪರ್ಮಿಟ್ ಇತ್ಯಾದಿ ಅನುಕೂಲಗಳನ್ನು ಹೊಂದಲು ಖಾದಿ ಹಾಕುತ್ತಿದ್ದೇನೆಂದು ಎಷ್ಟೋ ಸಲ ನನ್ನ ಕಿವಿಗೆ ಬೀಳುವ ಹಾಗೆ ಹೇಳಿದ ಘಟನೆಗಳನ್ನು ಈ ಮೂಲಕ ಸದನದಲ್ಲಿ ಗೋಪಾಲಗೌಡರು ನೆನಪಿಸಿಕೊಳ್ಳುತ್ತಾರೆ.

೭.೭. ಕರ್ನಾಟಕ ಏಕೀಕರಣ

ಕರ್ನಾಟಕದ ಏಕೀಕರಣದ ಬಗೆಗೆ ಗೋಪಾಲಗೌಡರು ತಮ್ಮದೇ ಆದ ವಿಚಾರಗಳನ್ನು ಹೊಂದಿದ್ದರು. ಇವರ ಆಲೋಚನೆಗಳು ಹಾಗೂ ಇವರು ಸದದನಲ್ಲಿ ಆಡಿದ ಮಾತುಗಳು ನಮ್ಮ ಕಾಲದ ರಾಜಕಾರಣಿಗಳಿಗೂ ಮುಖ್ಯವಾಗಿವೆ. ಈ ಹಿನ್ನೆಲೆಯಲ್ಲಿ ಗೋಪಾಲಗೌಡರ ಮಾತುಗಳು ಮುಖ್ಯಮಂತ್ರಿ ಚಂದ್ರು ಅವರು ಸಂಪಾದನೆ ಮಾಡಿರುವ ಕೃತಿಯಲ್ಲಿ ಹೀಗೆ ಉಲ್ಲೇಖಗೊಂಡಿವೆ. ೧೯೫೨ರಲ್ಲಿ ನಡೆದ ಮಹಾಚುನಾವಣೆಯಲ್ಲಿ ಸಾಗರ-ಹೊಸನಗರ ಕ್ಷೇತ್ರದಿಂದ ಗೋಪಾಲಗೌಡರು ಅಂದಿನ ಮೈಸೂರು ರಾಜ್ಯ ವಿಧಾನಸಭೆಗೆ ಚುನಾಯಿತರಾದರು. ವಿಧಾನಸಭೆಯಲ್ಲಿನ ಗೋಪಾಲಗೌಡರ ಭಾಷಣಗಳು ಎಲ್ಲಾ ಪಕ್ಷಗಳ ಸದಸ್ಯರ ಮೆಚ್ಚುಗೆ ಗಳಿಸಿತ್ತು. ವಿಧಾನಮಂಡಲದ ಕಾರ್ಯಕಲಾಪಗಳು ಕನ್ನಡದಲ್ಲೇ ಜರುಗಬೇಕೆಂದು ಅವರು ತೀವ್ರವಾಗಿ ಆಗ್ರಹ ಮಾಡುತ್ತಿದ್ದರು. ಗೋಪಾಲಗೌಡರು ಕಟ್ಟಾ ಕರ್ನಾಟಕವಾದಿಗಳು, ಏಕೀಕರಣವಾಗದ ಹೊರತು ಕನ್ನಡಿಗರ ಹಾಗೂ ಕನ್ನಡದ ಉದ್ಧಾರವಿಲ್ಲವೆಂದು ನಂಬಿದ್ದವರು. ಹಳೆಯ ಮೈಸೂರು ಭಾಗದಿಂದ ಈ ಬಗ್ಗೆ ಅಚಲವಾಗಿ ನಿಂತ ದೂರದೃಷ್ಟಿಯ ಧೀಮಂತ. ಹಂಚಿಹೋಗಿದ್ದ ಕನ್ನಡ ನಾಡನ್ನು ಒಂದುಗೂಡಿಸಿದ ಶಿಲ್ಪಿಗಳಲ್ಲಿ ಅಗ್ರಗಣ್ಯರು[೧೯] ಎಂಬ ಪ್ರಸ್ತುತ ಹೇಳಿಕೆಗಳು ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಗೋಪಾಲಗೌಡರು ವಹಿಸಿದ ಪಾತ್ರವನ್ನು ಮನವರಿಕೆ ಮಾಡಿಕೊಡುತ್ತವೆ.

೧೯೫೩ ಜುಲೈ ೨೩ ರಂದು ಶಾಂತವೇರಿ ಗೋಪಾಲಗೌಡರು ಸದನದಲ್ಲಿ ಮಾತನಾಡುವಾಗ ಆಂಧ್ರ ರಾಜ್ಯ ನಿರ್ಮಾಣದ ಬಗ್ಗೆ ಪ್ರಸ್ತಾಪಿಸುತ್ತಲೇ ಕರ್ನಾಟಕ ಪ್ರಾಂತ ರಚನೆ ಬಗ್ಗೆ ಧ್ವನಿ ಎತ್ತಿದ್ದರು. ಆಂಧ್ರ ಪ್ರಾಂತ ನಿರ್ಮಾಣದಲ್ಲಿ ಪೊಟ್ಟಿ ಶ್ರೀರಾಮುಲು ಅವರ ಹೋರಾಟ, ನಂತರದಲ್ಲಿ ಆದ ಬೆಳವಣಿಗೆಯಿಂದ ಆಂಧ್ರ ಪ್ರಾಂತ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸುವ ಸಂದರ್ಭ ಬಂದಿರುವಾಗಲೇ ಶಾಂತವೇರಿ ಗೋಪಾಲಗೌಡರು ಕನ್ನಡಿಗರ ಒಂದು ಬೇಡಿಕೆಯಾದ ಮತ್ತು ಎಲ್ಲರಿಂದಲೂ ಮಾನ್ಯವಾಗಿರತಕ್ಕ ಕರ್ನಾಟಕ ಪ್ರಾಂತ ರಚನೆಯನ್ನು ಕೇಂದ್ರ ಸರ್ಕಾರದವರು ಬದಿಗೊತ್ತಿ ಕನ್ನಡಿಗರಿಗೆ ದ್ರೋಹವೆಸಗಿದ್ದಾರೆ ಎಂದು ಆಗ್ರಹಿಸುತ್ತಾರೆ. ಪ್ರಾಂತ್ಯಗಳನ್ನು ಪುನಃ ಹಂಚಿಕೆ ಮಾಡತಕ್ಕಂತಹ ವಿಷಯವನ್ನು ವಿಳಂಬ ಮಾಡುವುದರಿಂದ ದೇಶದಲ್ಲಿ ಶಾಂತಿಭಂಗ ಉಂಟಾಗುವುದಲ್ಲದೆ ಅಕ್ಕಪಕ್ಕದ ಪ್ರಾಂತ್ಯಗಳಲ್ಲಿ ಮತ್ತು ಅಣ್ಣತಮ್ಮಂದಿರಂತಿರುವ ತಮಿಳು, ತೆಲುಗು, ಕನ್ನಡ, ಮಲೆಯಾಳ, ಮಹಾರಾಷ್ಟ್ರದ ಹಿಂದಿ ಜನರಲ್ಲಿ ಘರ್ಷಣೆ ಉಂಟಾಗಿ ದಕ್ಷಿಣ ಭಾರತದಲ್ಲಿ ಹೆಚ್ಚಿನ ಒಡಕುಂಟಾಗುತ್ತದೆ. ಆಂಧ್ರ ಪ್ರಾಂತ್ಯ ನಿರ್ಮಾಣ ಅಲ್ಲಿಯ ರಾಜಕೀಯ ಮುಖಂಡರ ಹಾಗೂ ಎಚ್ಚೆತ್ತ ಜನತೆಯಿಂದ ಮೊದಲಾಯಿತೆಂದು ಇಟ್ಟುಕೊಂಡರೂ ಸಹ ಕನ್ನಡಿಗರೇನೂ ತಮ್ಮ ಬೇಡಿಕೆಯನ್ನು ಕೈಬಿಟ್ಟಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಸದನಕ್ಕೆ ಕನ್ನಡಿಗರ ಧೋರಣೆಯನ್ನು ಮನವರಿಕೆ ಮಾಡಿಕೊಟ್ಟಿರುವುದನ್ನು ಕಾಣುತ್ತೇವೆ. ಕನ್ನಡಿಗರು ಜಾಗೃತವಾಗಿಲ್ಲವೆಂದು ತಿಳಿದುಕೊಳ್ಳಬಾರದು. ಅಲ್ಲದೆ, ಅವರ ಬೇಡಿಕೆ ಆಂಧ್ರಕ್ಕಿಂತ ಹೆಚ್ಚು ಮಾನ್ಯತೆ ಮಾಡಲ್ಪಟ್ಟಿದೆ. ಮತ್ತು

ಹೆಚ್ಚು ಸುಲಭವಾಗಿ ಸಾಧಿಸಲು ಸಾಧ್ಯವಾದ ಸಮಸ್ಯೆಯಾಗಿದೆ. ಕೇಂದ್ರದವರು ಆಂಧ್ರ ಪ್ರಾಂತ್ಯ ನಿರ್ಮಾಣ ಮಾಡಿ ಅದನ್ನು ನಾವು ಪ್ರಾಯೋಗಿಕವಾಗಿಟ್ಟುಕೊಂಡು ಅದರಿಂದೇನು ಪರಿಣಾಮವುಂಟಾಗುತ್ತದೆಂಬುದನ್ನು ಪರೀಕ್ಷಿಸಿ ಅನಂತರ ಕರ್ನಾಟಕ ಪ್ರಾಂತ್ಯ ರಚನೆಗೆ ಮನಸ್ಸು ಮಾಡುತ್ತೇವೆಂದು ಹೇಳುವ ವಾದ ಕನ್ನಡಿಗರಿಗೆ ವಂಚನೆ ಮಾಡುವ ವಾದಕ್ಕೆ ಗೋಪಾಲಗೌಡರು ಅಸಮ್ಮತಿ ವ್ಯಕ್ತಪಡಿಸುತ್ತಾರೆ. ಏಕೆಂದರೆ ಆಂಧ್ರ ಪ್ರಾಂತ್ಯದ ಆಗುಹೋಗಿನ ಮೇಲೆ ಕನ್ನಡ ಪ್ರಾಂತ್ಯ ರಚನೆ ನಿಂತಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ್ಯ ರಚನೆಯ ಬಗ್ಗೆಯೂ ಹೆಚ್ಚು ತೀವ್ರವಾದ ಗಮನ ಮತ್ತು ಆಸಕ್ತಿ ವಹಿಸಿ ಮುಂದಿನ ಅಕ್ಟೋಬರ್ ಒಂದನೆಯ ತಾರೀಖು ಆಂಧ್ರ ಪ್ರಾಂತ್ಯ ರಚನೆಯಾಗುವ ಹೊತ್ತಿಗೆ ಕನ್ನಡ ಪ್ರಾಂತ್ಯ ರಚನೆಯನ್ನು ಸಾಧ್ಯಮಾಡಿಕೊಡಬೇಕೆಂದು ನಾನು ಸೂಚಿಸುತ್ತೇನೆ[೨೦] ಎಂದು ಸದನಕ್ಕೆ ಆಗ್ರಹಿಸುತ್ತಿರುವುದನ್ನು ನಾವಿಲ್ಲಿ ನೋಡಬಹುದು.

ಶಾಂತವೇರಿ ಗೋಪಾಲಗೌಡರ ಅವರ ಮಾತು ಕರ್ನಾಟಕ ಏಕೀಕರಣದ ಬಗ್ಗೆ ಇವರಿಗಿದ್ದ ಕಾಳಜಿಯನ್ನು ತಿಳಿಸುತ್ತದೆ. ಸದನದಲ್ಲಿ ಮುಂದುವರಿದು ಈ ರೀತಿ ಮಾತನಾಡಿದ್ದಾರೆ. ಕರ್ನಾಟಕ ಪ್ರಾಂತ್ಯ ರಚನೆಯಾದರೆ ದಕ್ಷಿಣ ಭಾರತದ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆ, ಕೊಳ್ಳೇಗಾಲ, ನೀಲಗಿರಿ ಮುಂತಾದ ಮದ್ರಾಸ್ ಪ್ರಾಂತ್ಯದಲ್ಲಿ ಉಳಿಯುವ ಮತ್ತು ಇತರ ಕನ್ನಡ ಪ್ರದೇಶಗಳನ್ನು ಸೇರಿಸುವುದಲ್ಲದೆ ಮುಂಬೈ ಪ್ರಾಂತದಲ್ಲಿನ ಕಾರವಾರ ಮತ್ತು ಧಾರವಾಡ ಜಿಲ್ಲೆಗಳು ಮುಂತಾದ ಕನ್ನಡ ಪ್ರದೇಶಗಳನ್ನು ಮತ್ತು ಹೈದರಾಬಾದಿನಲ್ಲಿರುವ ಕನ್ನಡ ಪ್ರದೇಶಗಳನ್ನು, ಕೊಡಗರನ್ನು ಸೇರಿಸಿ ಕರ್ನಾಟಕ ಪ್ರಾಂತ್ಯವನ್ನು ಆಗುಮಾಡಿಸಬೇಕು. ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರುವುದು ಕರ್ನಾಟಕ ಪ್ರಾಂತ್ಯ ರಚನೆಗೆ ಒಂದು ಮಹಾದ್ವಾರ ತೆರೆದಂತಾಗಿದೆ. ಇದೊಂದು ಐತಿಹಾಸಿಕ ಘಟನೆಯೆಂದು ನಾನು ತಿಳಿದುಕೊಂಡಿದ್ದೇನೆ[೨೧] ಎಂದು ತಮ್ಮ ನಿಲುವನ್ನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾರೆ.

ಶಾಂತವೇರಿ ಗೋಪಾಲಗೌಡರ ಅಭಿಪ್ರಾಯದಂತೆ ನಮ್ಮ ದೇಶದಲ್ಲಿ ಆಂಗ್ಲ ಭಾಷೆಯನ್ನೇ ಉಪಯೋಗಿಸುತ್ತಾ ಬಂದಿದ್ದೇವೆ. ಅದೇ ಆಡಳಿತ ಭಾಷೆಯಾಗಿದೆ. ಹೀಗಿರುವಾಗ ಭಾಷೆಯ ಆಧಾರದ ಮೇಲೆ ಒಂದು ಪ್ರದೇಶವನ್ನು ಹಂಚುವಾಗ ಭಾವೋದ್ರೇಕಗಳಿಗೆ ಅವಕಾಶ ಕೊಡುವುದು ಸರಿಯಲ್ಲ. ಆದುದರಿಂದ ಜನಕ್ಕಾಗಿ, ನಮ್ಮ ಸಂಸ್ಕೃತಿಗಾಗಿ, ನಮ್ಮ ಭಾಷೆಗಾಗಿ, ನಮ್ಮ ಪ್ರಾಂತ್ಯಕ್ಕಾಗಿ ಹೋರಾಟ ಮಾಡುವಾಗ, ವಾದ ಮಾಡುವಾಗ ಅಥವಾ ಆ ವಾದವನ್ನು ಪ್ರತಿಪಾದನೆ ಮಾಡುವಾಗ ಆ ವಾದವನ್ನೇ ಮುಂದುವರಿಸಿಕೊಂಡು ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳುವಾಗ ತೆಲುಗು, ತಮಿಳು ಅಥವಾ ಮರಾಠ ಜನರನ್ನು ಕೆರಳಿಸದಿರುವ ವಿಧಾನವನ್ನು ಅನುಸರಿಸಬೇಕಾಗುತ್ತದೆ.

ನನ್ನ ಪ್ರಾಂತ್ಯ, ನನ್ನ ಭಾಷೆ, ನನ್ನ ಜನ ಎಂಬ ವಾದ ಪ್ರಾರಂಭ ಮಾಡಿದರೂ ಸಹ, ಅದೇ ಕಾಲದಲ್ಲಿ ಒಂದು ವಿಶ್ವ, ಒಂದು ರಾಷ್ಟ್ರ, ಒಂದು ಜನಾಂಗ ಎಂಬ ಭಾವನೆಯನ್ನು ಮರೆಯಲು ಸಾಧ್ಯವಿಲ್ಲ. ಇದು ಈ ಸಂದರ್ಭದಲ್ಲಿ ಒಂದು ಸಣ್ಣ ಪ್ರದೇಶಕ್ಕಾಗಿ ಅಥವಾ

ಇನ್ನಾವುದೇ ಕ್ಷುಲ್ಲಕ ವಿಷಯಕ್ಕಾಗಿ ರಕ್ತವನ್ನು ಬಿಸಿಮಾಡಿಕೊಂಡು ಒಬ್ಬರು ಇನ್ನೊಬ್ಬರ ಮೇಲೆ ಕಿಡಿಕಾರತಕ್ಕ ಸ್ವಭಾವವನ್ನು ಕಡಿಮೆ ಮಾಡಬೇಕು, ಬಿಟ್ಟುಬಿಡಬೇಕು; ಇಲ್ಲದಿದ್ದರೆ ನಮ್ಮ ಮಾರ್ಗದಲ್ಲಿ ಅನೇಕ ಅಡ್ಡಿ ಆತಂಕಗಳು ಬರುತ್ತವೆ ಎಂಬುದು ಗೋಪಾಲಗೌಡ ನಿಲುವು.

ಆಂಧ್ರ ಜನತೆಗೆ ತಮ್ಮದೇ ಆದ ಒಂದು ಪ್ರಾಂತ್ಯವನ್ನು ರಚಿಸಿಕೊಂಡು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸಿಕೊಳ್ಳುವ ಒಂದು ಸುಯೋಗ ಬಂದಿದ್ದರೂ ಸಹ ಇಂದಿನ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಒಂದು ಸುವ್ಯವಸ್ಥಿತವಾದ ರಾಜ್ಯ ನೆಲೆಯಾಗಿ ನಿಂತು ಆಡಳಿತ ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಅವರಿಗೆ ಅಡ್ಡಿ ಆತಂಕಗಳಿವೆ. ಆದುದರಿಂದ ಅಕ್ಕಪಕ್ಕದ ಬಾಂಧವರೂ, ಕೇಂದ್ರ ಸರ್ಕಾರದವರೂ ಎಲ್ಲಾ ರೀತಿಯಲ್ಲಿಯೂ ಅವರಿಗೆ ಸಹಕಾರ ನೀಡಿದ ಸೌಲಭ್ಯಗಳನ್ನೊದಗಿಸಿ ಕೊಡಬೇಕಾದುದು ಅತ್ಯಗತ್ಯ" ಎಂದು ಪ್ರತಿಪಾದಿಸುತ್ತಾರೆ.

ಪ್ರಸ್ತುತ ಹೇಳಿಕೆಯು ಶಾಂತವೇರಿ ಗೋಪಾಲಗೌಡರ ಹೃದಯ ವೈಶಾಲ್ಯತೆಯನ್ನು ತೋರಿಸುತ್ತದೆ. ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಅದರಂತೆ ನೂತನ ಪ್ರಾಂತ್ಯಗಳ ರಚನೆ ಮಾಡಲು ಹೊರಟರೆ ಅದರಿಂದ ಹಲವು ಎಡರು ತೊಡರುಗಳುಂಟಾಗುತ್ತವೆ. ಚರಿತ್ರೆಯನ್ನು ಮಾನವರೇ ನಿರ್ಮಿಸುವವರಿದ್ದಾರೆ. ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ಹೊಸ ಪ್ರಾಂತ್ಯಗಳನ್ನು ಆಡಳಿತ, ಸಂಸ್ಕೃತಿ, ಭಾಷೆ ಮತ್ತು ದೂರದೃಷ್ಟಿಯಿಂದ, ಪೂರ್ಣ ರಾಷ್ಟ್ರದ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡಿಕೊಳ್ಳುವುದು ಒಳ್ಳೆಯದು ಎಂಬುದು ಗೋಪಾಲಗೌಡರ ಅಭಿಪ್ರಾಯ. ೧೯೨೦ರಲ್ಲಿ ಭಾಷೆಯ ಆಧಾರದ ಮೇಲೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸಮಿತಿಗಳ ರಚನೆಯಾಯಿತು. ಈ ಸಂದರ್ಭದಲ್ಲಿಯೇ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂದಿತು. ನಂತರದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಹೋರಾಟ ಮತ್ತು ಜನತೆಯ ಸಂಘಟನೆ, ಸ್ವಾತಂತ್ರ್ಯ ಸಂಘಟನೆಯೊಡನೆ ಮುಂದುವರಿಯಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಹ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ತತ್ವವನ್ನು ಒಪ್ಪಿಕೊಂಡಿತು. ಈ ಕುರಿತು ಜನರಿಗೆ ಆಶ್ವಾಸನೆಯನ್ನು ಕೊಟ್ಟಿತ್ತು. ಈ ರೀತಿ ರಾಷ್ಟ್ರ ಅಥವಾ ದೇಶದ ಪುನರ್‌ರಚನೆಯು ಭಾಷೆಯ ಆಧಾರದ ಮೇಲೆ ಆಗಬೇಕೆಂಬ ಅಭಿಪ್ರಾಯದ ಮೇಲೆ ರಾಷ್ಟ್ರದಲ್ಲಿ ಹೆಚ್ಚಿನ ಒತ್ತಡ ಬಂದಿತು.

೧೯೩೦ರಲ್ಲಿ ಮೈಸೂರಿನಲ್ಲಿ ಜರುಗಿದ್ದ ೧೬ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಆಲೂರ ವೆಂಕಟರಾಯರು ಮೈಸೂರಿಗರನ್ನು ಏಕೀಕರಣದ ಬಗ್ಗೆ ಆಡಿದ ಪ್ರೇರೇಪಣೆಯ ಮಾತುಗಳನ್ನು ಗೋಪಾಲಗೌಡರು ಇಲ್ಲಿ ನೆನಪಿಸಿಕೊಡುತ್ತಾರೆ. ಏಕೀಕರಣದ ಚರಿತ್ರೆಯಲ್ಲಿ ೧೯೪೬ರ ಆಗಸ್ಟ್‌ನಲ್ಲಿ ನಡೆದ ಅಖಿಲ ಕರ್ನಾಟಕ ಮಹಾಧಿವೇಶನ ಬಹಳ ಮಹತ್ವದ್ದು. ಏಕೆಂದರೆ ಇದಕ್ಕೆ ಮೊದಲು ನಡೆದ ಅಧಿವೇಶನಗಳೆಲ್ಲವೂ ಮೈಸೂರು ಸಂಸ್ಥಾನದ ಹೊರಗೆ ನಡೆದದ್ದು.ಇದು ಹಳೆಯ ಮೈಸೂರಿನ ದಾವಣಗೆರೆಯಲ್ಲಿ ನಡೆದ ಮೊಟ್ಟಮೊದಲ ಏಕೀಕರಣದ ಮಹಾಧಿವೇಶನವೂ ಹೌದು. ಅಂತೆಯೇ

ಕೊನೆಯೂ ಹೌದು. ಈ 'ಕರ್ನಾಟಕಸ್ವರ ಮಹಾಸಭೆ'ಗೆ ಕರ್ನಾಟಕ ಏಕೀಕರಣ ಸಂಘ ಹಾಗೂ ಕೆ.ಪಿ.ಸಿ.ಸಿ.ಗಳೆರಡೂ ಕಾರಣ[೨೩] ಎಂದು ಹೇಳುತ್ತಾರೆ.

೧೯೪೭ ಆಗಸ್ಟ್ ೧೫ರಂದು ಭಾರತವು ಬ್ರಿಟಿಷ್ ವಸಾಹತುಶಾಹಿ ಆಡಳಿತದಿಂದ ಮುಕ್ತಿ ಹೊಂದಿದ ನಂತರ ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ಪುನರ್‌ವಿಂಗಡಣೆ ಮಾಡುವ ಜವಾಬ್ದಾರಿಯನ್ನು ಹೊತ್ತಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಹಲವು ಸವಾಲುಗಳಿದ್ದವು. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಸರಕಾರ ಬಹಳ ಸಂತೋಷದಿಂದ ಆಗಸ್ಟ್ ೧೫ರ ದಿನವನ್ನು ಆಚರಿಸಲು ಇಚ್ಚಿಸಲಿಲ್ಲ. ಭಾರತದ ಒಕ್ಕೂಟವನ್ನು ಸೇರಲು ಒಪ್ಪಿಗೆ ಕೊಟ್ಟಿದ್ದ ಮೈಸೂರು ಮಹಾರಾಜರ ಬದಲಾದ ಈ ಧೋರಣೆ ಮೈಸೂರಿನ ಕಾಂಗ್ರೆಸ್ ಪಕ್ಷಕ್ಕೆ ಸರಿ ಕಾಣಲಿಲ್ಲ. ಇದರ ಪರಿಣಾಮವೇ ಮೈಸೂರು ಚಲೋ ಚಳವಳಿ. ಹಲವು ಸಾವು ನೋವುಗಳಾಗಿ ಕೊನೆಗೆ ಮೈಸೂರು ಕಾಂಗ್ರೆಸ್‌ನೊಂದಿಗೆ ಸಂಧಾನಗಳು ಏರ್ಪಟ್ಟು ೨೪.೧೦.೧೯೪೭ರಂದು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿಯವರು ಪ್ರಪ್ರಥಮ ಮುಖ್ಯಮಂತ್ರಿಗಳಾದರು.

ಈ ನಂತರ ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಏರಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಸ್ವಾತಂತ್ರ್ಯಕ್ಕೆ ಮೊದಲು ನೀಡಿದ್ದ ಆಶ್ವಾಸನೆಯ ಬಗ್ಗೆ ಮೌನತಾಳಿತ್ತು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಅಧಿಕಾರಕ್ಕೆ ಬಂದಿದ್ದರೂ ಮೈಸೂರಿಗರು ಶಾಸನ ಸಭೆಯಲ್ಲಿ ಏಕೀಕರಣದ ಬಗ್ಗೆ ನಿರ್ಣಯವನ್ನು ಅಂಗೀಕರಿಸಲಿಲ್ಲ. ಈ ನಡುವೆ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಭಾಷಾ ಚಳವಳಿ ತೀವ್ರವಾಗಿತ್ತು. ೧೯೪೯ರಲ್ಲಿ ಜೆ.ವಿ.ಪಿ. ಕಮಿಟಿಯು ಆಂಧ್ರಪ್ರದೇಶದ ರಚನೆಗೆ ಹೆಚ್ಚಿನ ಒಲವು ಹಾಗೂ ಆದ್ಯತೆಯನ್ನು ಕೊಟ್ಟಿತ್ತು. ಈ ಸಮಿತಿಯ ವರದಿಯು ಕನ್ನಡಿಗರ ಭಿನ್ನ ರೀತಿಯ ಪ್ರತಿಕ್ರಿಯೆಗೆ ಕಾರಣವಾದವು. ಇದರ ಜೊತೆಗೆ ಉತ್ತರ ಕರ್ನಾಟಕದ ವೀರಶೈವರು ಏಕೀಕರಣದಿಂದಾಗಿ ಪ್ರಾಬಲ್ಯರಾಗುವರೆಂಬ ಹಾಗೂ ಅಧಿಕಾರದ ಚುಕ್ಕಾಣಿ ಹಿಡಿಯುವರೆಂಬ ಗುಮಾನಿ, ಆಂತಕಗಳು ಮೈಸೂರಿನ ಒಕ್ಕಲಿಗ–ಗೌಡರಲ್ಲಿ ಬಹಿರಂಗಗೊಂಡವು. ಹೀಗೆ ಆಂತಕಪಟ್ಟವರಲ್ಲಿ, ಎಚ್.ಕೆ. ವೀರಣ್ಣಗೌಡ, ಕಡಿದಾಳ್ ಮಂಜಪ್ಪ, ಕೆ.ವಿ. ಶಂಕರಗೌಡ, ಹುಚ್ಚಮಾಸ್ತಿಗೌಡ ಮೊದಲಾದವರು ಪ್ರಮುಖರು.ಇಂತಹ ವಿಷಮ ಪರಿಸ್ಥಿತಿಗಳನ್ನು ಹೋಗಲಾಡಿಸಲು ಶಾಂತವೇರಿ ಗೋಪಾಲಗೌಡರು ಅನೇಕ ಪ್ರಯತ್ನಗಳನ್ನು ಮಾಡಿದರು. ಆದರೆ ಏಕೀಕರಣಕ್ಕೆ ಪರವಾಗಿದ್ದ ಎ.ಜೆ. ರಾಮಚಂದ್ರರಾವ್, ಎಚ್.ಜಿ. ದಾಸಪ್ಪ ಮೊದಲಾದ ಮೈಸೂರುವಾದಿಗಳು ಸಹ ಕಟ್ಟಾ ವಿರೋಧಿಗಳಾಗಿ ಮಾರ್ಪಟ್ಟದ್ದು ವಿರೋಧಾಭಾಸವೇ ಸರಿ[೨೪] ಎಂದು ಹೇಳುವ ಅವರು ಹಲವಾರು ನಾಯಕರ ಭಿನ್ನ ಅಭಿಪ್ರಾಯಗಳಿಗೆ ಧ್ವನಿಗೊಡದೆ ಕರ್ನಾಟಕದ ಏಕೀಕರಣಕ್ಕೆ ತಮ್ಮ ಸಮ್ಮತವನ್ನು ಸಾರುವ ಮೂಲಕ ಏಕೀಕರಣ ಚಳುವಳಿಯಲ್ಲಿ ಮಹತ್ವದ ವ್ಯಕ್ತಿಯಾಗಿ ಬಿಂಬಿತವಾದದ್ದು ಈಗ ಇತಿಹಾಸವಾಗಿದೆ.

ದಿನಾಂಕ ೨೩.೦೨.೧೯೫೪ರಂದು ರಾಜ್ಯ ಪುನರ್ ವಿಂಗಡಣಾ ಆಯೋಗವು ಪತ್ರಿಕಾ ಪ್ರಕಟಣೆಯ ಮೂಲಕ ರಾಜ್ಯ ಪುನರ್ ವಿಂಗಡಣೆಯ ಸಮಸ್ಯೆಯ ಬಗೆಗೆ ಆಸಕ್ತಿ ಇರಿಸಿಕೊಂಡಿದ್ದ

ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳಿಂದ ಲಿಖಿತ ಮನವಿಗಳನ್ನು ಕೋರಿತು. ಇದೇ ವೇಳೆಯಲ್ಲಿ ಕರ್ನಾಟಕದ ಉಗಮಕ್ಕೆ ಸಂಬಂಧಿಸಿದ ವಾದ ವಿವಾದಗಳು ನಡೆಯುತ್ತಿದ್ದವು. ೫.೩.೧೯೫೫ ರಂದು ಶಾಸನಸಭೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದವರು ವಿಶೇಷವಾಗಿ ಶಾಂತವೇರಿ ಗೋಪಾಲಗೌಡರು ಮೈಸೂರು ಕಾಂಗ್ರೆಸ್ಸಿಗರು ಫಜಲ್ ಆಲಿ ಆಯೋಗಕ್ಕೆ ಭಿನ್ನ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಪ್ರಸ್ತಾಪಿಸಿದ್ದಾರೆ. ಅಲ್ಲದೆ ಶೇಷಾದ್ರಿ ಸಮಿತಿಯ ವರದಿಯಲ್ಲಿನ ಏಕೀಕರಣಕ್ಕಿರುವ ಆರ್ಥಿಕ ತೊಡಕಿನ ಅಂಶಗಳು ಮುಖ್ಯ ಕಾರಣ ಎಂಬುದನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಶಾಂತವೇರಿ ಗೋಪಾಲಗೌಡರು ಏಕೀಕರಣದ ತುರ್ತನ್ನು ಹಾಗೂ ಶೇಷಾದ್ರಿ ವರದಿಯ ಅಂಕಿ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಪ್ರಾಂತ್ಯಗಳ ಪುನರ್ವಿಂಗಣೆಗೆ ಬರೀ ಆರ್ಥಿಕ ಅಂಶ ಒಂದೇ ಸಾಲದು ಎನ್ನುವುದು ಬಹಳ ಮುಖ್ಯವಾದದ್ದು. ಹೊರಗಡೆಯಿಂದ ಕನ್ನಡ ಪ್ರಾಂತ್ಯಗಳು ಆರ್ಥಿಕವಾಗಿ ಶ್ರೀಮಾನ್ ಲಕ್ಕಪ್ಪನವರು ಹೇಳಿದ ಹಾಗೆ ಹಿಂದುಳಿದಿರುವ ಅಂಶ ನಿಜ. ಅವರು 'ಬಹಳ' ಎಂಬ ಶಬ್ದವನ್ನು ಉಪಯೋಗಿಸಿದರು. ಆದರೆ 'ಬಹಳ' ಎಂಬ ಶಬ್ದ ತುಂಬ ಆದುದು. ನನ್ನ ದೃಷ್ಟಿಯಲ್ಲಿ ಅವು 'ಬಹಳ ಹಿಂದುಳಿದಿವೆ' ಎಂದು ಹೇಳಿದ ಶಬ್ದ ಅಷ್ಟು ಸೂಕ್ತವಾಗಿ ತೋರಲಿಲ್ಲ. ಅಲ್ಲದೆ ನಾನು ಮುಖ್ಯವಾಗಿ ಹೇಳುವುದೇನೆಂದರೆ ಅದು ಸರ್ಪ್ಲಸ್ ಪ್ರದೇಶವೇ, ಡಿಫಿಸಿಟ್ ಪ್ರದೇಶವೇ ಎಂಬ ಪ್ರಶ್ನೆಯೇ ನಮ್ಮನ್ನು ಬಾಧಿಸಕೂಡದು. ಕಾರಣ ಮೈಸೂರು ಸಂಸ್ಥಾನವೇ ಈ ಹೊತ್ತು ೪೯ ಲಕ್ಷ ರೂಪಾಯಿಗಳ ಡಿಫಾಸಿಟ್ ಇಟ್ಟುಕೊಂಡಿದೆ. ಅಲ್ಲದೆ ಇಂಡಿಯಾ ದೇಶದಲ್ಲಿ ಈ ಹೊತ್ತು ಇರತಕ್ಕ ಪರಿಸ್ಥಿತಿಯನ್ನು ನೋಡುವುದಾದರೆ ಪಾರ್ಲಿಮೆಂಟಿನ ಬಡ್ಜೆಟ್ಟು ಮತ್ತು ಎಲ್ಲಾ ಪ್ರಾಂತಗಳ ಬಡ್ಜೆಟ್ಟುಗಳೂ ಕೊರತೆಯ ಬಡ್ಜೆಟ್ಟುಗಳೇ ಆಗಿವೆ. ಆದ್ದರಿಂದ ಕರ್ನಾಟಕದ ಜನರು ಒಂದು ಆಡಳಿತಕ್ಕೆ ಒಳಪಡಬೇಕೆ ಬೇರೊಂದು ಪ್ರಾಂತ್ಯವನ್ನು ನಿರ್ಮಾಣ ಮಾಡಬೇಕೆ ಎನ್ನುವ ಸಂದರ್ಭದಲ್ಲಿ ಹಣದ ಪ್ರಶ್ನೆ ನಮ್ಮ ಮುಂದೆ ನಿಲ್ಲುವುದೇ ಇಲ್ಲ ಎಂದು ತಮ್ಮ ಅಭಿಪ್ರಾಯವನ್ನು ಈ ಮಾತುಗಳ ಮೂಲಕ ಗೋಪಾಲಗೌಡರು ಸ್ಪಷ್ಟಪಡಿಸುತ್ತಾರೆ. ಅವರ ದೃಷ್ಟಿಯಲ್ಲಿ ಹಣಕಾಸಿನ ದೃಷ್ಟಿಯೇ ಪ್ರಮುಖವಾದುದಲ್ಲ. ಕರ್ನಾಟಕದ ಏಕೀಕರಣವೆಂಬುದು ಒಂದು ಭಾವನಾತ್ಮಕ ಸಂಬಂಧದ ನೆಲೆಗಟ್ಟು ಎಂಬುದು ಅವರ ಅಭಿಮತವಾಗಿತ್ತು. ಈ ಹಿನ್ನೆಲೆಯಲ್ಲಿ ಈ ಹೊತ್ತು ನಾವು ಹಣವನ್ನು ಹಂಚಿಕೊಳ್ಳುವುದಕ್ಕೆ ಮಾತ್ರ ನಿಂತಿಲ್ಲ. ಬಹುಕಾಲ ಬದುಕಿ ಬಾಳುವುದಕ್ಕೆ ಅದೊಂದು ಸಾಧನವೇ ಹೊರತು ಅದೇ ಒಂದು ಗುರಿಯಲ್ಲ. ಕನ್ನಡ ಜನರು ಮೈಸೂರಿನೊಡನೆ ಸೇರುವುದಾದರೆ ಅಥವಾ ಮೈಸೂರು ಸೇರಿದ ಒಂದು ಕನ್ನಡ ಪ್ರಾಂತ್ಯವಾದರೆ ನಮ್ಮ ಆಶೋತ್ತರಗಳು ಮುಗಿದು ಅದೇ ಅಂತಿಮ ಗುರಿಯೆಂದು ನಾವು ಭಾವಿಸುವುದಿಲ್ಲ. ಆ ಪ್ರದೇಶದಲ್ಲಿರುವ ಜನರ ಬಾಳು ಹಸನಾಗಬೇಕಾದರೆ ಅವರೂ ಮುಂದೆ ಬಾಳಿ ಬದುಕಿ ಅಭಿವೃದ್ಧಿಯಾಗಬೇಕಾದರೆ ಒಂದು ಪ್ರಾಂತ್ಯವಾಗುವುದರ ಅವಶ್ಯಕತೆ ಇದೆ[೨೫] ಎಂದು ಹೇಳುವುದರ ಮೂಲಕ ಕರ್ನಾಟಕದ ಸಮಗ್ರತೆಯ ಕಲ್ಪನೆ ಈ ಪ್ರಸ್ತುತದ ಹೇಳಿಕೆಗಳಲ್ಲಿ ಅಭಿವ್ಯಕ್ತಗೊಂಡಿದೆ.

ಈ ಮೇಲಿನಂತೆ ಅಭಿಪ್ರಾಯಪಟ್ಟ ಶಾಂತವೇರಿ ಗೋಪಾಲಗೌಡರು ಹಲವರ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸಿದರು. ಇದರ ಪರಿಣಾಮದಿಂದ ಹಲವರು ತಮ್ಮ ನಾಯಕರ ಅಥವಾ ಜಾತಿ ಮುಂದಾಳುಗಳ ಪರಿವರ್ತಿತ ಹೇಳಿಕೆಗಳ ಬಗ್ಗೆ ಮರು ಚಿಂತನೆ ಮಾಡಿದರು. ತತ್ಪರಿಣಾಮವಾಗಿ ಏಕೀಕರಣಕ್ಕೆ ಮೈಸೂರಿಗರು ನಿಧಾನವಾಗಿ ಸಮ್ಮತಿಸಲಾರಂಭಿಸಿದರು.

ಫಜಲ್ ಅಲಿ ಆಯೋಗದ ವರದಿಯಂತೆ ಮೈಸೂರು ಸಂಸ್ಥಾನಕ್ಕೆ ಕರ್ನಾಟಕವೆಂದು ಹೆಸರಿಡಲು ಪ್ರಯತ್ನಿಸಲಾಗಿದ್ದು, ಈ ವಿಚಾರಕ್ಕೆ ಸಂಬಂಧಿಸಿದಂತೆ ವಾದ ವಿವಾದಗಳ ಜೊತೆಗೆ ಕರ್ನಾಟಕ ನಾಮಕರಣ ಗೊತ್ತುವಳಿಯನ್ನು ಮತಗಣನೆಗೆ ಹಾಕಲಾಯಿತು. ಹಲವು ಮೈಸೂರಿನ ಕಾಂಗ್ರೆಸ್ಸಿಗರು ಕರ್ನಾಟಕ ಎಂಬ ಹೆಸರಿಗೆ ವಿರುದ್ಧ ಮತ ಹಾಕುವುದಾಗಿ ಬಹಿರಂಗಪಡಿಸಿದರು. ಈ ಸಂದರ್ಭದಲ್ಲಿ ಅಂದರೆ (೨.೪.೧೯೫೬) ಶಾಂತವೇರಿ ಗೋಪಾಲಗೌಡರು ಕರ್ನಾಟಕ ಎಂಬ ಹೆಸರನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟಿದ್ದು ಬಹುಮುಖ್ಯ.

ಈ ಸಂದರ್ಭವನ್ನು ರಾವ್ ಬಹದ್ದೂರ್ ಅವರು ಗೋಪಾಲಗೌಡರು ಅಂದಾನಪ್ಪ ದೊಡ್ಡ ಮೇಟಿಯವರು ಮಂಡಿಸಿದ ಗೊತ್ತುವಳಿಗೆ ಸೋಲೆಂಬುದು ಅಸಂಭವ, ಹಳೆ ಮೈಸೂರಿನ ಕಾಂಗ್ರೆಸ್ ಸದಸ್ಯರು ವಿರುದ್ಧ ಮತ ಹಾಕಿದರೂ ಸಮಾಜವಾದಿಗಳು ಗೊತ್ತುವಳಿಗೆ ಅನುಕೂಲ ಮತ ಹಾಕುವರು. ಆದುದರಿಂದ ಗೊತ್ತುವಳಿ ಬಿದ್ದು ಹೋಗುವುದೆಂಬ ಭಯಕ್ಕೆ ಅವಕಾಶವಿಲ್ಲ. ಅದು ಬಹುಮತದಿಂದ ಪಾಸಾಗುವಂತೆ ನಾನು ನೋಡಿಕೊಳ್ಳುವೆ[೨೬] ಎಂದು ಹೇಳಿದ್ದರು ಎಂದು ನೆನಪು ಮಾಡಿಕೊಂಡಿರುತ್ತಾರೆ.

ಫಜಲ್‌ಆಲಿ ಆಯೋಗದ ವರದಿಯ ನಂತರ ಲೋಕಸಭೆ ಮತ್ತು ರಾಜ್ಯಸಭೆಗಳೆರಡು ಆಯಾ ರಾಜ್ಯಗಳಿಂದ ಬಂದ ಅಭಿಪ್ರಾಯಗಳನ್ನು ಪರಿಶೀಲಿಸಿ ಪರಿಷ್ಕರಿಸಿದ ಮಸೂದೆಯನ್ನು ಅಂಗೀಕರಿಸಿದವು. ಈ ಮಸೂದೆಯು ೩೧.೮.೫೬ರಂದು ರಾಷ್ಟ್ರಪತಿಗಳ ಸಹಿಯೊಂದಿಗೆ ಕಾಯಿದೆ ಆಯಿತು. ಈ ಕಾಯಿದೆಯ ಅನುಸಾರವಾಗಿ ೧.೧೧.೧೯೫೬ ರಂದು ಹೊಸ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಕನ್ನಡ ನಾಡನ್ನು ಮೈಸೂರು ರಾಜ್ಯವೆಂದು ಕರೆದದ್ದು ಮೈಸೂರಿಗರಿಗೆ ಸಂತಸ ತಂದರೆ, ಇನ್ನಾವ ಕನ್ನಡ ಪ್ರದೇಶಗಳ ಜನರೂ ಇದನ್ನು ಇಷ್ಟಪಟ್ಟಿರಲಿಲ್ಲ. ಮೈಸೂರು ಸಂಸ್ಥಾನದ ಕೆಂಗಲ್ ಹನುಮಂತಯ್ಯ, ಶಾಂತವೇರಿ ಗೋಪಾಲಗೌಡ ಮೊದಲಾದವರಿಗೆ ನಾಮಕರಣ ಅಸಮಾಧಾನವಾಗಿತ್ತು. ಕೆಲವರು ಈ ಹೆಸರಿನಲ್ಲೇನಿದೆ ಎಂದು ಹೇಳುತ್ತಿದ್ದಾರೆ. ನೂತನ ಪ್ರಾಂತ್ಯಕ್ಕೆ ಮೈಸೂರೆಂದು ಕರೆಯುವುದಕ್ಕೆ ಬದಲಾಗಿ ಕರ್ನಾಟಕ ಎಂದು ಹೆಸರಿಸುವುದಕ್ಕೆ ಅವರೇಕೆ ಒಪ್ಪುತ್ತಿಲ್ಲವೋ ಅದು ನನಗೆ ಅರ್ಥವಾಗುತ್ತಿಲ್ಲ[೨೭] ಎಂದು ಗೋಪಾಲಗೌಡರು ವಿಷಾದ ವ್ಯಕ್ತಪಡಿಸಿರುವುದಾಗಿದೆ.

ಒಟ್ಟಾರೆ ಶಾಂತವೇರಿ ಗೋಪಾಲಗೌಡರ ಪ್ರಕಾರ ಒಂದು ಭಾಷೆಯನ್ನಾಡುವ ಜನತೆಯಿರುವ ಒಂದು ಪ್ರದೇಶ, ಯಾವುದೋ ಕಾರಣಗಳಿಂದ ಬೇರೆ ಬೇರೆ ಪ್ರಾಂತಗಳಾಗದೆ ಅಖಂಡ ಕರ್ನಾಟಕ

ನಿರ್ಮಾಣವಾಗಬೇಕು. ಅದಕ್ಕೆ ಎಲ್ಲರ ಸಹಕಾರ ಇರಬೇಕು ಎಂಬುದು ಗೋಪಾಲಗೌಡರ ಸ್ಪಷ್ಟ ನಿಲುವು ಮತ್ತು ಇದಕ್ಕಾಗಿ ಅಹರ್ನಿಶಿ ಪ್ರಯತ್ನ ಪಟ್ಟವರು.

ಗೋಪಾಲಗೌಡರು ಅಖಂಡ ಕರ್ನಾಟಕವಾದಿಗಳಾಗಿದ್ದರೂ ಸಹ ಒಮ್ಮೆ ಚನ್ನಪಟ್ಟಣದ ಸಾರ್ವಜನಿಕ ಸಭೆಯೊಂದರಲ್ಲಿ 'ಕರ್ನಾಟಕ ಒಡೆಯುವುದರ' ಅಪಸ್ವರ ಎತ್ತಿದ್ದರು. ಅದು ಪತ್ರಿಕೆಗಳಲ್ಲಿ ಪ್ರಚಾರ ಪಡೆಯಿತು. ಆಗ ಅಂದಿನ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಶಾಸನಸಭೆಯಲ್ಲಿ 'ಕೆಲವು ಸ್ವಾರ್ಥಿಗಳು ಕರ್ನಾಟಕವನ್ನು ಒಡೆದು ಎರಡು ಮಾಡಬೇಕು' ಎಂದು ಹೊರಟಿದ್ದಾರೆ ಎಂದು ಮಾತನಾಡಿದರು. ಆಗ ಗೋಪಾಲಗೌಡರು, ನೀವು ಹೇಳುವ ಮಾತು ಸರಿಯಲ್ಲ, ಹಾಗೆ ಹೇಳುವವರ ಮಾತಿನಲ್ಲಿ ಸತ್ಯಾಂಶವಿದೆ. ಅವರು ಏಕೆ ಕರ್ನಾಟಕ ಒಡೆಯಬೇಕು ಎಂದು ಹೇಳುತ್ತಾರೆ? ಅವರ ಮಾತಿನಲ್ಲಿ ದೋಷವಿರಬಹುದು, ಆದರೆ ಸತ್ಯವಿಲ್ಲವೆಂದಲ್ಲ. ಮನೆಯ ಯಜಮಾನ ತಪ್ಪುದಾರಿಯಲ್ಲಿ ನಡೆದರೆ ಆಗ ಮನೆಯವರೆಲ್ಲ ಆತನನ್ನು ಪ್ರಶ್ನಿಸುತ್ತಾರೆ. ಹೀಗೆಯೇ ಆಡಳಿತ ಕ್ರಮ ಮುಂದುವರಿದರೆ ಮನೆಯು ಒಡೆಯುತ್ತದೆ ಎಂದು ಎಚ್ಚರಿಸುತ್ತಾರೆ. "ರಾಜ್ಯಭಾರವು ಈ ರೀತಿ ಮುಂದುವರಿದರೆ ಇಂದಲ್ಲದಿದ್ದರೆ ನಾಳೆ ಹೊಸ ಕರ್ನಾಟಕ, ಹಳೆ ಕರ್ನಾಟಕ ಅಂತ ಒಡೆಯಬೇಕಾಗುತ್ತದೆ. ಗೋಪಾಲಗೌಡರು ಕರ್ನಾಟಕವನ್ನು ಒಡೆಯುವುದಕ್ಕೆ ಹೊರಟಿದ್ದಾರೆ ಎಂದು ತಾವು ಹೇಳಬಹುದು.ನಾನು ಕರ್ನಾಟಕಕ್ಕಾಗಿ ಹೋರಾಡಿದವನು, ದುಡಿದವನು. ನನ್ನ ಜೀವವಿರುವವರೆಗೂ ಹೋರಾಡಿ ಅಖಂಡತ್ವಕ್ಕಾಗಿ ಶ್ರಮಿಸುತ್ತೇನೆ[೨೮] ಎಂದು ಪ್ರತಿಪಾದಿಸಿದ್ದಾರೆ.

ಮುಂದೆ ಡಿ. ದೇವರಾಜ ಅರಸು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ (೧೯೭೩) ಕೆ.ಎಚ್. ಪಾಟೀಲ್, ಶಂಕರಅಳ್ವ, ಎಚ್. ಸಿದ್ದವೀರಪ್ಪ ಮುಂತಾದ ಮುಖಂಡರ ಪ್ರಯತ್ನದಿಂದ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾಯಿತು. ಏಕೀಕರಣಕ್ಕೆ ತಮ್ಮನ್ನು ತಾವು ಮುಡುಪಾಗಿರಿಸಿದ ಶಾಂತವೇರಿ ಗೋಪಾಲಗೌಡರು ಈ ಸಂದರ್ಭದಲ್ಲಿ ಇಲ್ಲದಿದ್ದು ನೋವಿನ ಸಂಗತಿಯೆಂದೇ ಭಾವಿಸಬೇಕು.

ಕರ್ನಾಟಕದ ಏಕೀಕರಣ ಕುರಿತಂತೆ ಗೋಪಾಲಗೌಡರಿಗೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಆಳವಾದ ಅರಿವಿತ್ತು. ಅಖಂಡವಾಗಿ ಅದು ಮುಂದುವರೆಯುವುದರಲ್ಲಿ ಅವರಿಗೆ ಅಸಾಮಾನ್ಯ ಒಲವಿತ್ತು ಎಂಬುದಕ್ಕೆ 'ಬಹುಕಾಲ ಬದುಕಿ ಬಾಳುವುದಕ್ಕೆ ಅದೊಂದೇ (ಏಕೀಕರಣ) ಸಾಧನವೇ ಹೊರತು ಅದೇ ಒಂದು ಗುರಿಯಲ್ಲ' ಎಂಬ ಮಾತೇ ಸಾಕ್ಷಿ. ವಿವಿಧ ಆಡಳಿತ ವಲಯಗಳಲ್ಲಿ ಕನ್ನಡ ಪ್ರದೇಶಗಳು ಮತ್ತು ಕನ್ನಡವನ್ನು ಮಾತನಾಡುವ ಜನತೆ ಹಂಚಿಹೋಗುವ ಪೂರ್ವದಲ್ಲಿ 'ಕರ್ನಾಟಕ' ಸಾಂಸ್ಕೃತಿಕ ಅಸ್ಮಿತೆಯ ಪ್ರತೀಕವಾಗಿತ್ತು. ಆದುದರಿಂದ ಇಪ್ಪತ್ತನೆಯ ಶತಮಾನದಲ್ಲಿ ನಡೆದ ಕರ್ನಾಟಕ ಏಕೀಕರಣ ಚಳವಳಿಯ ಸಂದರ್ಭದಲ್ಲಿ 'ಕರ್ನಾಟಕ' ಪದವನ್ನು ಉಳಿಸಿಕೊಳ್ಳುವಲ್ಲಿ ಗೋಪಾಲಗೌಡರಿಗೆ ವಿಶೇಷವಾದ ಪ್ರೀತಿ ಮತ್ತು ಕಾಳಜಿ ಇತ್ತು. ನಮ್ಮ ರಾಜ್ಯದ ಏಕೀಕರಣಕ್ಕೆ ಶ್ರಮಿಸಿದ ಕೆಲವೇ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಗೋಪಾಲಗೌಡರೂ

ಒಬ್ಬರು. ಸಮಗ್ರ ಕರ್ನಾಟಕದ ಸಮಾನ ಅಭಿವೃದ್ಧಿಯಲ್ಲಿ ಕರ್ನಾಟಕದ ಹಿತ ಅಡಗಿದೆ. ಇದಕ್ಕೆ ವಿರುದ್ಧವಾದ ಬೆಳವಣಿಗೆಗಳು ಆದಲ್ಲಿ ರಾಜ್ಯದ ಏಕತೆಯಲ್ಲಿ ಒಡಕುಂಟಾಗಬಹುದು ಎಂಬುದಕ್ಕೆ ಇತ್ತೀಚೆಗೆ ಆದ ಆಂಧ್ರಪ್ರದೇಶ ರಾಜ್ಯದ ವಿಭಜನೆಯೇ ಸಾಕ್ಷಿ. 'ಉತ್ತರ ಕರ್ನಾಟಕ' ಮತ್ತು 'ದಕ್ಷಿಣ ಕರ್ನಾಟಕ' ಎನ್ನುವ ಭಾವನೆ ಹೊರಟುಹೋಗಿ 'ಕರ್ನಾಟಕದ ಉತ್ತರ' ಮತ್ತು 'ಕರ್ನಾಟಕದ ದಕ್ಷಿಣ' ಎನ್ನುವ ರೀತಿಯಲ್ಲಿ ಕರ್ನಾಟಕವನ್ನು ಉಳಿಸಿಕೊಂಡಾಗ, ಗೋಪಾಲಗೌಡರೂ ಸೇರಿದಂತೆ ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಎಲ್ಲರ ಶ್ರಮ ಸಾರ್ಥಕವಾಗುತ್ತದೆ.

ಆಡಳಿತ ಭಾಷೆ ಮಸೂದೆ (ಆಡಳಿತ ಭಾಷೆಯಾಗಿ ಕನ್ನಡ)

೧೯೫೬ರ ಸಂದರ್ಭದಲ್ಲಿ ರಾಜ್ಯಗಳ ಪುನರ್‌ವಿಂಗಡಣೆಯಾದಾಗ ಹಿಂದಿನ ಮೈಸೂರು ಪ್ರಾಂತ್ಯ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಇತರ ರಾಜ್ಯಗಳ ರೀತಿಯಲ್ಲಿ ಇದೂ ಕೂಡ ಮೈಸೂರು ಪ್ರಾಂತ್ಯವಾಯಿತು. ತದನಂತರ ಹಲವು ಕವಿಗಳ, ಸಾಹಿತಿಗಳ ಮತ್ತು ರಾಜಕೀಯ ಮುಖಂಡರುಗಳ ನಿರಂತರ ಹೋರಾಟದಿಂದಾಗಿ ೧೯೫೭ ನವೆಂಬರ್ ಒಂದರಂದು 'ಕರ್ನಾಟಕ' ಎಂಬ ಅಧಿಕೃತ ನಾಮಕರಣವನ್ನು ಸಾಂಕೇತಿಕವಾಗಿ ಮಾಡಲಾಯಿತು. ಇದಕ್ಕೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸು ಅವರ ಶ್ರಮವೂ ಇತ್ತು. ಆದರೆ ಈ ಸಂದರ್ಭಕ್ಕಿಂತ ಪೂರ್ವದಲ್ಲಿ ಶಾಂತವೇರಿ ಗೋಪಾಲಗೌಡರು ಮರಣ ಹೊಂದಿದರು.

ಶಾಂತವೇರಿ ಗೋಪಾಲಗೌಡರಿಗೆ ಕನ್ನಡ ಆಡಳಿತ ಭಾಷೆಯಾಗಬೇಕು; ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ, ಸಾಮಾನ್ಯ ಜನತೆ ಆಡಳಿತವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಕಡ್ಡಾಯವಾಗಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು; ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಕನ್ನಡದಲ್ಲಿಯೇ ಬೋಧನಾ ಪದ್ಧತಿ ಅಳವಡಿಸಬೇಕು ಎಂಬುದು ಇವರ ಅಭಿಪ್ರಾಯವಾಗಿತ್ತು.

೧೯೬೫ ಮಾರ್ಚ್ ೧೨ ರಂದು ಸದನದಲ್ಲಿ ಮಾತನಾಡುತ್ತಾ ತಮ್ಮ ಕನ್ನಡ ಪ್ರೇಮವನ್ನು ಈ ರೀತಿ ವ್ಯಕ್ತಪಡಿಸಿರುತ್ತಾರೆ.

ಭಾಷೆಯ ವಿಷಯವಾಗಿ ಅವರು ಅನೇಕ ಸಾರಿ ಮಾತನಾಡಿದ್ದಾರೆ. ಜಡ್ಜ್‌ಮೆಂಟನ್ನು ಇಂಗ್ಲಿಷಿನಲ್ಲಿ ಬರೆದು ಜನರನ್ನು ಗಲ್ಲಿಗೆ ಹಾಕುವುದು ಬೇಡ, ಕನ್ನಡದಲ್ಲೇ ಆ ಜಡ್ಜ್‌ಮೆಂಟನ್ನು ಬರೆದು ಆ ಶಿಕ್ಷೆಯನ್ನು ಕೊಡಬಹುದಲ್ಲ? ಕನ್ನಡದಲ್ಲಿ ಹೇಳಿದ್ದನ್ನು ಜಡ್ಜಿ ಇಂಗ್ಲಿಷಿನಲ್ಲಿ ಬರೆದುಕೊಳ್ಳುವಾಗ ಏನು ಬೇಕಾದರೂ ಬರೆದುಕೊಳ್ಳಬಹುದು. ಕನ್ನಡದಲ್ಲಿ ಒಬ್ಬ ಮನುಷ್ಯ ನನ್ನನ್ನು ದೊಣ್ಣೆಯಿಂದ ಹೊಡೆದನೆಂದು ಹೇಳುತ್ತಾನೆ. ಆಗ ಜಡ್ಜ್ ಅದನ್ನು ಹಿ ವಾಸ್ ಹಿಟ್ ಬೈ ಎ ಸ್ಟಿಕ್ ಎಂದು ಬರೆದುಕೊಳ್ಳಬಹುದು. ಇನ್ನೊಬ್ಬನು ಹತ್ತು ಕಾಲ್ನಡಿಗಳು ಇವೆ ಎಂದು ಹೇಳುತ್ತಾನೆ. ಇಂತಹದ್ದನ್ನೆಲ್ಲಾ ತರ್ಜುಮೆ ಮಾಡುವುದಕ್ಕಾಗುವುದಿಲ್ಲ ಎಂದು ಸದನದಲ್ಲಿ ತಮ್ಮ ವಾದವನ್ನು ಮಂಡಿಸುತ್ತಾರೆ. ಮುಂದುವರೆದು, ಜನರ ದಿನಬಳಕೆಯ ಭಾಷೆ ಯಾವುದಿದೆಯೋ

ಅದರಲ್ಲೇ ಜಡ್ಜ್‌ಮೆಂಟನ್ನು ಬರೆಯುವಂತೆ ಮಾಡುವುದೊಳ್ಳೆಯದು. ಇಲ್ಲವಾದರೆ ಇದರಿಂದ ಅನೇಕ ಸಂದರ್ಭದಲ್ಲಿ ಕೆಟ್ಟ ಪರಿಣಾಮವಾಗಬಹುದು[೩೯] ಎಂಬ ಎಚ್ಚರಿಕೆಯನ್ನೂ ನೀಡಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ. ಗೋಪಾಲಗೌಡರ ಪ್ರಕಾರ ವಕೀಲರು ಕನ್ನಡದಲ್ಲಿ ವಾದ ಮಾಡಿ ಸಾಕ್ಷಿದಾರರು ಕನ್ನಡದಲ್ಲಿ ಮಾತನಾಡಿರುವುದನ್ನು ಇಂಗ್ಲಿಷಿಗೆ ಭಾಷಾಂತರಿಸುವಾಗ ಬಹಳಷ್ಟು ತಪ್ಪುಗಳಾಗುವ ಸಾಧ್ಯತೆ ಇದೆ. ಈ ಕಾರಣದಿಂದ ಕರ್ನಾಟಕದ ನ್ಯಾಯಾಲಯಗಳು ಕನ್ನಡದಲ್ಲಿಯೇ ತೀರ್ಪು ನೀಡುವುದು ಸೂಕ್ತ ಎಂಬುವುದು ಇವರ ಬಲವಾದ ನಂಬಿಕೆಯಾಗಿತ್ತು.

ತನ್ನ ಮಾತೃಭಾಷೆಯಲ್ಲಿ ಮಾತನಾಡಬೇಡ ಎಂದು ಯಾವುದಾದರೂ ಸರ್ಕಾರ ಅಥವಾ ಯಾರಾದರೂ ದೇಶದಲ್ಲಿ ಒತ್ತಾಯಪಡಿಸಿದರೆ ನನಗೆ ಸಿಟ್ಟು, ನನ್ನ ನಾಲಿಗೆಯನ್ನು ಕತ್ತರಿಸಿದಷ್ಟು ನೋವು ಆಗುತ್ತದೆ. ಬೇರೆ ಕಡೆಯಲ್ಲಿ ಹೋದಾಗಲೂ ನನ್ನ ಭಾಷೆಯಲ್ಲಿ ಮಾತನಾಡಬಹುದು[೪೦] ಎಂಬ ವಾತಾವರಣ ಇರುವುದು ಸೂಕ್ತ.

ಎಂಬ ಈ ಮೇಲಿನ ಮಾತನ್ನು ಸದನದಲ್ಲಿ ೧೯೭೦, ಫೆಬ್ರವರಿ ೨೫ ರಂದು ಆಡಿದ್ದಾರೆ. ಇದೂ ಸಹ ಅವರ ಭಾಷಾಭಿಮಾನವನ್ನು ತೋರಿಸುತ್ತದೆ.

ಶಾಂತವೇರಿ ಗೋಪಾಲಗೌಡರ ಅಪ್ಪಟ ಕನ್ನಡದ ಅಸ್ಖಲಿತ ವಾಗ್ಮಿತೆಯ ವಾಹಿನಿ ಬತ್ತದಿರಲಿ! ಅದನ್ನು ಅಳವಡಿಸಿಕೊಂಡವರ ಸಂಖ್ಯೆ ಹೆಚ್ಚಿ, ಕನ್ನಡಕ್ಕೆ ಕಳೆಯೇರಲಿ; ಕನ್ನಡ ಗೆಲ್ಲಲಿ![೪೧] ಎನ್ನುವ ವೆಂಕಪ್ಪಗೌಡರು,

ಶಾಂತವೇರಿ ಗೋಪಾಲಗೌಡರು ಹೊಸಗನ್ನಡ ಹೇಗೋ ಹಾಗೆ ಹಳೆಗನ್ನಡವನ್ನು ಆಳವಾಗಿಯೇ ಅಧ್ಯಯನ ಮಾಡಿದ್ದರು. ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳನ್ನು ಗಮಕಿಗಳು ಓದುವುದಕ್ಕಿಂತ ಅವರು ಭಾವಪೂರ್ಣವಾಗಿ ಓದುತ್ತಿದ್ದರು. ಬೇಂದ್ರೆಯವರ ಕುರುಡು ಕಾಂಚಾಣ, ಬೆಳದಿಂಗಳ ನೋಡಾ ಮುಂತಾದ ಅನೇಕ ಕವಿತೆಗಳನ್ನು ಇಡಿಯಿಡಿಯಾಗಿ ಭಾವನಿರ್ಭರತೆಯಿಂದ ಹಾಡುತ್ತಿದ್ದರು. ಹಾಗೆಯೇ ಅಡಿಗರು, ರಾಮಾನುಜ, ಶೌರಿ ಮುಂತಾದವರ ಕೃತಿಗಳ ಅರ್ಥವಿಶೇಷಗಳನ್ನು ವಿವರಿಸಿ ಹೇಳುತ್ತಿದ್ದರು. ಗೌಡರು ಕಟ್ಟಾ ಕನ್ನಡದ ಅಭಿಮಾನಿಗಳು. ಶಿಕ್ಷಣ ಮಾಧ್ಯಮ, ಆಡಳಿತ ಭಾಷೆ ಇವು ಕನ್ನಡ ಆಗಬೇಕು ಎಂದು ಕನಸು ಕಾಣುತ್ತಿದ್ದರು. ಅವರ ಕನ್ನಡದ ಶೈಲಿ ಸುಲಭವಾಗಿತ್ತು. ೧೯೫೨ರಿಂದ ೫೭ರವರೆಗೆ ಅವರು ವಿಧಾನಸಭಾ ಸದಸ್ಯರಾಗಿದ್ದಾಗ ಅವರ ಭಾಷಣಗಳನ್ನು ಎದುರಿಗೇ ಕೇಳುತ್ತಿದ್ದವರು ಕವಿ ಪು.ತಿ.ನ. ಅವರು ೧೯೬೨ರಲ್ಲಿ ಗೌಡರು ಪುನಃ ಗೆದ್ದಾಗ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಪತ್ರ ಬರೆದರು. ಅದರಲ್ಲಿ ಗೌಡರ ಭಾಷಾ ಪ್ರೌಢಿಮೆಯನ್ನು, ಶೈಲಿಯ ಸುಭಗತೆಯನ್ನು ಪ್ರಶಂಸಿಸಿದ್ದರು[೪೨] ಎಂದು ಪ್ರತಿಪಾದಿಸಿದ್ದಾರೆ.

ಇನ್ನು ಶಾಂತವೇರಿ ಗೋಪಾಲಗೌಡರು ಸದನದಲ್ಲಿ ಮಾತನಾಡಲು ಪ್ರಾರಂಭಿಸಿದರೆ ಪಕ್ಷಭೇದ ಮರೆತು ಎಲ್ಲಾ ಸದಸ್ಯರು ಹಾಜರಿರುತ್ತಿದ್ದರಂತೆ.

ಕನ್ನಡ ಭಾಷೆಯಲ್ಲಿ ಅವರು ಮಾತನಾಡಿದರೆ ಕೇಳುವವರ ಕಿವಿಗೆ ಇಂಪು, ಬಳಸುವ ಕನ್ನಡ ನುಡಿಗಳು ಕನ್ನಡತನಕ್ಕೆ ಹೆಮ್ಮೆ ತರುವಂತಹವುಗಳು. ವಿಧಾನಸಭೆಯಲ್ಲಿ ಗೌಡರು ಮಾತನಾಡಲು ಪ್ರಾರಂಭಿಸಿದರೆ ಸದಸ್ಯರು ಮತ್ತು ಪ್ರೇಕ್ಷಕರು ಕಿವಿ ನಿಮಿರಿ ಕೇಳುತ್ತಿದ್ದರು. ಅವರು ಮಾತನಾಡಲು ಎದ್ದು ನಿಂತರೆ ಆ ವ್ಯಕ್ತಿ ಗಾಂಭೀರ್ಯದಲ್ಲಿ, ಕನ್ನಡ ನಾಡು ನುಡಿಗಳ ಗುರುತು ಮೂರ್ತಿವೆತ್ತಂತಿರುತ್ತಿತ್ತು[೩೩] ಎಂದು ಗೋಪಾಲಗೌಡರನ್ನು ಹೊಗಳಿದ್ದಾರೆ.

ಇನ್ನು ಶಾಂತವೇರಿ ಗೋಪಾಲಗೌಡರ ಕನ್ನಡ ಪ್ರೇಮಕ್ಕೆ ಇನ್ನೊಂದು ಉತ್ತಮ ಉದಾಹರಣೆಯೆಂದರೆ, ವಿಧಾನಸೌಧದ ಒಳಗೆ ವಿಧಾನಸಭೆಯ ಅಧಿವೇಶನದ ಸನ್ನಿವೇಶದಲ್ಲಿ ರಾಜ್ಯಪಾಲರ ಭಾಷಣದ ಪ್ರತಿ ಆಂಗ್ಲ ಭಾಷೆಯಲ್ಲಿ ಇದ್ದುದರಿಂದ ತೀವ್ರ ನೊಂದ ಗೋಪಾಲಗೌಡರು, ಕನ್ನಡಕ್ಕೆ ಅವಮಾನವಾಗಿದೆ ಎಂದು ಅದನ್ನು ಸಹಿಸದೆ ರಾಜ್ಯಪಾಲರ ಭಾಷಣದ ಪ್ರತಿಯನ್ನು ಸದನದ ಒಳಗೆ ನೆಲಕ್ಕೆ ಹಾಕಿ ಕಾಲಿನಲ್ಲಿ ತುಳಿದು ಕನ್ನಡಿಗರ ಸ್ವಾಭಿಮಾನ ಮತ್ತು ಕನ್ನಡ ಭಾಷೆಯ ಬಗ್ಗೆ ಅವರಿಗಿದ್ದ ಗೌರವವನ್ನು ವ್ಯಕ್ತಪಡಿಸಿದ್ದಾರೆ.

ಗೋಪಾಲಗೌಡರು ಕೇವಲ ರಾಜಕೀಯ ಮುತ್ಸದ್ಧಿಯಾಗಿರದೇ ಅವರೊಬ್ಬ ಸಾಂಸ್ಕೃತಿಕ ವ್ಯಕ್ತಿಯಾಗಿದ್ದರು. ಬಹುಮುಖ ಪ್ರತಿಭೆಯ ವ್ಯಕ್ತಿಯಾಗಿದ್ದ ಅವರು ತಮ್ಮನ್ನು ಹಲವಾರು ಉತ್ತಮ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಇಂತಹ ಅಪರೂಪದ ನಾಯಕರ ಹೆಸರನ್ನು ತೀರ್ಥಹಳ್ಳಿಯ ಜನತೆ ತೀರ್ಥಹಳ್ಳಿಯಲ್ಲಿ ನಿರ್ಮಾಣವಾಗಿರುವ ಸುಂದರ ರಂಗಮಂದಿರಕ್ಕೆ ಇಟ್ಟು ಗೌರವಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಾಹಿತ್ಯ, ಸಂಗೀತ ಮತ್ತು ಕಾವ್ಯಗಳಲ್ಲಿ ಅವರಿಗೆ ವಿಶೇಷವಾದ ಅಭಿರುಚಿ ಇತ್ತು. ರಾಜಕಾರಣಿಗಳಿಗೆ ಇಂತಹ ಅಪರಿಮಿತ ಸಾಂಸ್ಕೃತಿಕ ಒಲವು, ಇತಿಹಾಸಪ್ರಜ್ಞೆಗಳು ಯಾವ ಕಾಲಕ್ಕೂ ಪ್ರಸ್ತುತವಾದವುಗಳು. ಇಂತಹ ಅನನ್ಯ ಗುಣವಿಶೇಷಗಳಿಂದಲೇ ಶಾಂತವೇರಿ ಗೋಪಾಲಗೌಡರು ತಮ್ಮ ಮಾತುಗಳನ್ನು ಸದನದಲ್ಲಿ ನ್ಯಾಯವಾದಿಗಳ ರೀತಿಯಲ್ಲಿ ಮಂಡಿಸಿರುವುದನ್ನು ಕಾಣಬಹುದಾಗಿದೆ. ಸದನದಲ್ಲಿ ಅವರು ಮಂಡಿಸಿದ ವಿಚಾರಸರಣಿಗಳಲ್ಲಿ ಸಾಂಸ್ಕೃತಿಕ ಚಿಂತನೆಗಳು, ಕನ್ನಡ ನಾಡುನುಡಿಯ ಚಿಂತನೆಗಳನ್ನು ಹಲವು ಆಯಾಮಗಳಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಗುರುತಿಸಿಕೊಳ್ಳಲಾಗಿದೆ.

ಟಿಪ್ಪಣಿಗಳು

೧. ಶಾಂತವೇರಿ ಗೋಪಾಲಗೌಡ (ಲೇ), ೧೯೮೧, 'ಮಹಾಕ್ರಾಂತಿಗೆ ಆಹ್ವಾನ', ಕೋಣಂದೂರು ವೆಂಕಪ್ಪಗೌಡ (ಸಂ), ಜೀವಂತ ಜ್ವಾಲೆ, ಪು. ೧೨೯

೨. ಅದೇ, ಪು. ೧೩೦

೩. ಅದೇ, ಪು. ೧೩೧

೪. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೩ ಏಪ್ರಿಲ್ ೦೭, ವ್ಯಾಲ್ಯೂಂ-೯, ಪು. ೧೬೮೮-೧೬೮೯

೫. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೩ ಏಪ್ರಿಲ್ ೦೭, ವ್ಯಾಲ್ಯೂಂ-೯, ಪು. ೧೬೮೯-೧೬೯೦

೬. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೨ ಜುಲೈ, ೦೫, ವ್ಯಾಲ್ಯೂಂ-೭, ಪಾರ್ಟ್ ೦೨, ಪು. ೭೮೫-೭೮೬

೭. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೨ ಜುಲೈ, ೦೫, ವ್ಯಾಲ್ಯೂಂ-೭, ಪಾರ್ಟ್ ೦೨, ಪು. ೭೮೬

೮. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೨ ಜುಲೈ, ೦೫, ವ್ಯಾಲ್ಯೂಂ-೭, ಪಾರ್ಟ್ ೦೨, ಪು. ೭೮೭

೯. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩ ಸೆಪ್ಟಂಬರ್ ೦೭, ವ್ಯಾಲ್ಯೂಂ-೩, ನಂ. ೪೬, ಪು. ೩೧೩೧

೧೦. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩ ಸೆಪ್ಟಂಬರ್ ೦೭, ವ್ಯಾಲ್ಯೂಂ-೩, ನಂ. ೪೬, ಪು. ೩೧೩೧-೩೧೩೨

೧೧. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩ ಸೆಪ್ಟಂಬರ್ ೦೭, ವ್ಯಾಲ್ಯೂಂ-೩, ನಂ. ೪೬, ಪು. ೩೧೩೨

೧೨. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩ ಸೆಪ್ಟಂಬರ್ ೦೭, ವ್ಯಾಲ್ಯೂಂ-೩, ನಂ. ೪೬, ಪು. ೩೧೩೪-೩೧೪೧

೧೩. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೬೫೫, ಅಕ್ಟೋಬರ್ ೧೦, ವ್ಯಾಲ್ಯೂಂ-೧೩, ಪು. ೫೩-೫೪

೧೪. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೬೫೫, ಅಕ್ಟೋಬರ್ ೧೦, ವ್ಯಾಲ್ಯೂಂ-೧೩, ಪು. ೭೭-೭೮

೧೫. ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೬ ಅಕ್ಟೋಬರ್ ೧೮, ವ್ಯಾಲ್ಯೂಂ-೧೪, ಪಾರ್ಟ್-೦೪, ಪು. ೨೪೩೫

೧೬. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೩ ಮಾರ್ಚ್ ೧೧, ವ್ಯಾಲ್ಯೂಂ-೧೧, ಸಂ. ೧-೧೪, ಪು. ೧೫೯

೧೭. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೪ ಏಪ್ರಿಲ್ ೦೧, ವ್ಯಾಲ್ಯೂಂ-೧೦, ಪಾರ್ಟ್-೦೪, ಸಂ. ೩೩-೪೮, ಪು. ೧೬೧೪-೧೬೧೫

೧೮. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೬ ಸೆಪ್ಟಂಬರ್ ೨೮, ವ್ಯಾಲ್ಯೂಂ-೧೪, ಪಾರ್ಟ್-೦೪, ಪು. ೨೧೬೪

೧೯. ಮುಖ್ಯಮಂತ್ರಿ ಚಂದ್ರು (ಪ್ರಸಂ.), ಗೋಪಾಲರಾವ್ ಎಚ್.ಎಸ್. (ಸಂ), ೨೦೧೪, **ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು**, ಪು. ೩೮೬

೨೦. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೩ ಜುಲೈ ೨೩, ವ್ಯಾಲ್ಯೂಂ-೦೯, ಪಾರ್ಟ್-೦೫, ಪು. ೨೫೫೩-೨೫೫೪

೨೧. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೩ ಜುಲೈ ೨೩, ವ್ಯಾಲ್ಯೂಂ-೦೯, ಪಾರ್ಟ್-೦೫, ಪು. ೨೫೫೪

೨೨. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೩ ಜುಲೈ ೨೩, ವ್ಯಾಲ್ಯೂಂ-೦೯, ಪಾರ್ಟ್-೦೫, ಪು. ೨೫೫೫

೨೩. ಗೋವಿಂದರಾಜು ಸಿ.ಆರ್., ೨೦೦೫, **ಕರ್ನಾಟಕ ಏಕೀಕರಣ ಹಾಗೂ ನಾಮಕರಣ**, ಪು. ೪೦

೨೪. ಅದೇ, ಪು. ೪೮

೨೫. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೫ ಮಾರ್ಚ್ ೦೫, ವ್ಯಾಲ್ಯೂಂ-೧೨, ಪಾರ್ಟ್-೦೧, ಪು. ೬೧೫-೬೧೬

೨೬. ಗೋವಿಂದರಾಜು ಸಿ.ಆರ್., ೨೦೦೫, **ಕರ್ನಾಟಕ ಏಕೀಕರಣ ಹಾಗೂ ನಾಮಕರಣ**, ಪು. ೮೦

೨೭. ಲೆಜಿಸ್ಲೇಟಿವ್ ಅಸೆಂಬ್ಲಿ ಡೀಬೇಟ್ಸ್, ೧೯೫೬ ಏಪ್ರಿಲ್ ೦೨, ವ್ಯಾಲ್ಯೂಂ-೧೪, ಪಾರ್ಟ್-೦೩, ಪು. ೧೪೫೩

೨೮. ಕೋಣಂದೂರು ವೆಂಕಪ್ಪಗೌಡ (ಲೇ), ೧೯೮೧, 'ಶಾಂತವೇರಿಯಿಂದ ಶಾಸನಸಭೆಗೆ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೨೯-೩೦

೨೯. ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ., ೨೦೧೧, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೫೩೦

೩೦. **ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೦ ಫೆಬ್ರವರಿ ೨೫, ವ್ಯಾಲ್ಯೂಂ-೨೪, ನಂ-೦೩,** ಪು. ೨೧೨

೩೧. ಸಿದ್ದಯ್ಯ ಪುರಾಣಿಕ (ಲೇ), ೧೯೮೧, 'ಕನ್ನಡದ ಅಸ್ಖಲಿತವಾಣಿ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೧೬೧

೩೨. ಗುಂಡುರಾವ್ ಬಿ.ಎಸ್. (ಲೇ), ೧೯೮೧, 'ಬೆಳೆಯಬಹುದಾಗಿದ್ದ ಬೋಧಿ ವೃಕ್ಷ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೧೯೨

೩೩. ಬಸವಲಿಂಗಪ್ಪ ಬಿ. (ಲೇ), ೧೯೮೧, 'ನಿರ್ಮಲ ವ್ಯಕ್ತಿ', ಕೋಣಂದೂರು ವೆಂಕಪ್ಪಗೌಡ (ಸಂ), **ಜೀವಂತಜ್ವಾಲೆ**, ಪು. ೨೩೭

ಅಧ್ಯಾಯ : ಎಂಟು

ಸಮಕಾಲೀನ ಸಂದರ್ಭದಲ್ಲಿ ಗೋಪಾಲಗೌಡರ ಸಮಾಜವಾದಿ ಚಿಂತನೆಗಳ ಪ್ರಸ್ತುತತೆ

ಅಧ್ಯಾಯ : ಎಂಟು

ಸಮಕಾಲೀನ ಸಂದರ್ಭದಲ್ಲಿ ಗೋಪಾಲಗೌಡರ ಸಮಾಜವಾದಿ ಚಿಂತನೆಗಳ ಪ್ರಸ್ತುತತೆ

ಪ್ರಾಚೀನ ಕಾಲದಿಂದಲೂ ಭಾರತವು ರಾಜಪ್ರಭುತ್ವಕ್ಕೆ ಒಳಪಟ್ಟ ಆಡಳಿತ ವ್ಯವಸ್ಥೆಯನ್ನು ಹೊಂದಿದ ದೇಶವಾಗಿದೆ. ಬ್ರಿಟಿಷರ ವಸಾಹತುಶಾಹಿಗೆ ಒಳಪಡುವ ಮುನ್ನ ಮತ್ತು ಬ್ರಿಟಿಷರ ಆಡಳಿತ ಸಂದರ್ಭದಲ್ಲಿಯೂ ಇದೇ ವ್ಯವಸ್ಥೆ ಮುಂದುವರೆದಿದೆ. ಸ್ವಾತಂತ್ರ್ಯಾ ನಂತರ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಿದ ನಂತರ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇವು ಪ್ರಜಾಪ್ರಭುತ್ವದ ಮೌಲ್ಯಗಳಾಗಿವೆ. ವಾಸ್ತವವಾಗಿ ಇವುಗಳ ಅನುಷ್ಠಾನದಲ್ಲಿ ನಮ್ಮ ಆಡಳಿತ ವ್ಯವಸ್ಥೆಯು ಪೂರ್ಣವಾಗಿ ಯಶಸ್ವಿಯಾಗಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉಂಟಾಗುವ ತಾರತಮ್ಯಗಳು, ಅನ್ಯಾಯ, ಅಕ್ರಮಗಳಿಗೆ ಕಡಿವಾಣ ಹಾಕುವ ಸಲುವಾಗಿ ವಿವಿಧ ಸಂಘಟನೆಗಳು ಪ್ರತಿಭಟನೆ, ಚಳವಳಿಗಳ ಮೂಲಕ ಸಕ್ರಿಯವಾದವು. ಈ ನಿಟ್ಟಿನಲ್ಲಿ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಸಮಾಜವಾದಿ ಚಳವಳಿಯ ಚಿಂತನೆಗಳು ವಿಶೇಷವಾಗಿ ಮಲೆನಾಡಿನ ಪರಿಸರದಲ್ಲಿ ಹೆಚ್ಚು ಕ್ರಿಯಾಶೀಲವಾಗಿರುವುದು ಕಂಡುಬರುತ್ತದೆ. ಶಾಂತವೇರಿ ಗೋಪಾಲಗೌಡರು ತಮ್ಮ ಸಮಾಜವಾದಿ ಸಿದ್ಧಾಂತದ ಚಿಂತನೆಗಳನ್ನು ತಮ್ಮ ಅಧಿಕಾರಾವಧಿಯ ಕಾಲಘಟ್ಟದಲ್ಲಿ ಜನತೆಯ ಮುಂದಿಟ್ಟರು. ಅವರ ಚಿಂತನೆಗಳು ಬಹುತೇಕ ಬಡವರ, ಅಸ್ಪೃಶ್ಯರ, ದೀನ-ದಲಿತರ, ಶ್ರಮಿಕ ವರ್ಗದವರ ಪರವಾಗಿ ಇದ್ದುದರಿಂದ ಆ ವರ್ಗದ ಜನರಿಗೆ ಇಷ್ಟವಾದವು. ಅಧಿಕಾರಶಾಹಿ ಮತ್ತು ಬಂಡವಾಳಶಾಹಿ ವ್ಯಕ್ತಿತ್ವಗಳಿಗೆ ಅವರ ಚಿಂತನೆಗಳು ಅಪಥ್ಯವಾಗಿದ್ದಂತೂ ಸತ್ಯ. ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಚಿಂತನೆಗಳು ನಮ್ಮ ಸಂದರ್ಭದಲ್ಲಿ ಎಷ್ಟು ಪ್ರಸ್ತುತವಾಗಿವೆ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಪ್ರತಿಯೊಂದು ಹೋರಾಟ, ಚಳವಳಿ, ಆಂದೋಲನಗಳು, ಪ್ರತಿಭಟನೆಗಳು ಒಂದು ನಿರ್ದಿಷ್ಟ ಸಮಸ್ಯೆ, ನಿರ್ದಿಷ್ಟ ಕಾಲಘಟ್ಟಕ್ಕೆ ಸೀಮಿತಗೊಂಡು ತಮ್ಮ ಕಾರ್ಯ ಸಾಧನೆ ಮಾಡಿಕೊಳ್ಳುತ್ತವೆ. ಈ ಮೊದಲು ಜರುಗಿದ ಸಮಸ್ಯೆಗಳು ಮುಂದೊಂದು ಕಾಲಘಟ್ಟದಲ್ಲಿ ಮತ್ತೊಮ್ಮೆ ಪುನರಾವರ್ತನೆಗೊಂಡಾಗ

ಮತ್ತೆ ಅವೇ ಚಳವಳಿಗಳು ಪುರಾವರ್ತನೆಗೊಳ್ಳುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಗೆ ಮಾರ್ಗೋಪಾಯಗಳಾದ ಪ್ರತಿಭಟನೆಗಳು, ಆಂದೋಲನಗಳು ಒಂದು ರೀತಿಯಲ್ಲಿ ಕಾರ್ಯಕಾರಣ ಸಂಬಂಧವನ್ನು ಹೊಂದಿರುವುದನ್ನು ಕಾಣುತ್ತೇವೆ. ಸ್ವಾತಂತ್ರ್ಯಾನಂತರದ ಭಾರತದ ರಾಜಕಾರಣವನ್ನು ಗಮನಿಸಿದರೆ ಅರಿವಾಗುತ್ತದೆ. ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಮತ್ತು ಉದ್ದೇಶಗಳು ಸ್ವಾತಂತ್ರ್ಯಾನಂತರದ ಭಾರತದಲ್ಲಿಯೂ ಮುಂದುವರೆದಿದ್ದನ್ನು ಗಮನಿಸಬಹುದು. ಆದರೆ ಕಾಲಾನಂತರದಲ್ಲಿ ಕಾಂಗ್ರೆಸ್‌ನ ರಾಜಕಾರಣ ಜಡ್ಡುಗೊಂಡಾಗ ಸಮಾಜವಾದಿ ಚಿಂತನೆ ಮುನ್ನೆಲೆಗೆ ಬಂದಿತು ಎನ್ನಬಹುದು. ರಾಮಮನೋಹರ ಲೋಹಿಯಾ ಅವರು ಭಾರತದ ರಾಜಕಾರಣಕ್ಕೆ ಹೊಸ ಆಶಾಕಿರಣವಾಗಿ ಗೋಚರಿಸಿದರು. ಇನ್ನೊಂದೆಡೆ ಮಾರ್ಕ್ಸ್‌ವಾದಿ ರಾಜಕಾರಣ ಮತ್ತು ಆಂದೋಲನಗಳು ಕೂಡ ಅಂದಿನ ರಾಜಕಾರಣವನ್ನು ಪ್ರಭಾವಿಸುತ್ತಲೇ ಇದ್ದವು. ಗಾಂಧಿವಾದಿ, ಅಂಬೇಡ್ಕರ್‌ವಾದಿ, ಮಾರ್ಕ್ಸ್‌ವಾದಿ, ಲೋಹಿಯಾವಾದಿ ಚಿಂತನೆಗಳು ಭಾರತೀಯ ರಾಜಕಾರಣವನ್ನು ಪ್ರಭಾವಿಸುತ್ತ ಪ್ರಜಾಪ್ರಭುತ್ವ ವ್ಯವಸ್ಥೆ ಸಂಕೀರ್ಣವಾಗಿ ರೂಪುಗೊಳ್ಳುವಂತೆ ಮಾಡಿದವು. ಕರ್ನಾಟಕದ ಸಂದರ್ಭದಲ್ಲಿ ಕಾಂಗ್ರೆಸ್ ರಾಜಕಾರಣಕ್ಕೆ ಪರ್ಯಾಯವಾಗಿ ರೂಪುಗೊಂಡ ದಾರಿ ಗೋಪಾಲಗೌಡರ ಮೂಲಕ ತೆರೆದುಕೊಂಡಿತು. ರಾಜಕಾರಣ ಅಂದರೆ ಅದು ಕೇವಲ ರಾಜಕೀಯ ಅಧಿಕಾರ ಮಾತ್ರವಲ್ಲ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ರಚನೆಗಳ ಸಮಗ್ರ ಬದಲಾವಣೆ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಸಮಾಜದ ಎಲ್ಲಾ ವರ್ಗ, ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರೆತರೆ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗಬಲ್ಲದು. ಇಲ್ಲದಿದ್ದಲ್ಲಿ ಅದು ಊಳಿಗಮಾನ್ಯ ವ್ಯವಸ್ಥೆಯ ಮುಂದುವರಿಕೆಯೇ ಆಗುತ್ತದೆ. ಅಂದರೆ ಬಲಿಷ್ಠ ಜಾತಿಯ ಜನರೆ ಪ್ರಜಾಪ್ರಭುತ್ವವನ್ನು ನಿಯಂತ್ರಿಸುತ್ತಾರೆ. ಇಂಥ ಶಕ್ತಿಗಳ ಕೈಯ ಅಧಿಕಾರ ದೇಶದ, ನಾಡಿನ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗಲಾರದು ಎಂಬುದು ಗೋಪಾಲಗೌಡ ಸೇರಿದಂತೆ ಎಲ್ಲಾ ಸಮಾಜವಾದಿಗಳ ನಿಲುವಾಗಿತ್ತು. ಈ ಹಿನ್ನೆಲೆಯಲ್ಲಿ ಶಾಂತವೇರಿ ಗೋಪಾಲಗೌಡರು ತಮ್ಮ ಸಮಾಜವಾದಿ ಸಿದ್ಧಾಂತದ ಭೂಮಿಕೆಯನ್ನೊಳಗೊಂಡ ಹೋರಾಟಗಳನ್ನು ರೂಪಿಸಿಕೊಂಡರು. ಅವರ ಹೋರಾಟದ ಕಾರ್ಯವ್ಯಾಪ್ತಿಯು ಆರಂಭದಲ್ಲಿ ಶಿವಮೊಗ್ಗ ಜಿಲ್ಲೆಯ ಕಾಗೋಡು, ಸಾಗರ ಮುಂತಾದ ಮಲೆನಾಡಿನ ಪ್ರದೇಶಗಳನ್ನು ಗುರಿಯನ್ನಾಗಿಸಿಕೊಂಡಿತ್ತು. ಅವರ ಚಿಂತನೆಯ, ಹೋರಾಟದ ಪ್ರತಿಫಲನಗಳನ್ನು ಕರ್ನಾಟಕದ ಇತರ ಪ್ರದೇಶಗಳಲ್ಲಿಯೂ ಕಾಣಬಹುದಾಗಿದೆ.

ನಾವೀಗ ಪ್ರಜಾಪ್ರಭುತ್ವ ಸರ್ಕಾರದ ಆಡಳಿತ ಪದ್ಧತಿಯಲ್ಲಿದ್ದೇವೆ. ಪ್ರಜಾಪ್ರಭುತ್ವ ಸರ್ಕಾರದ ರೂಪುರೇಷೆಗಳು ಮತ್ತು ಸಮಾಜವಾದಿ ಸಿದ್ಧಾಂತದ ರೂಪುರೇಷೆಗಳು ತೀರ ಭಿನ್ನ ನೆಲೆಗಳಲ್ಲಿ ರೂಪುಗೊಂಡಿರುವುದಿಲ್ಲ. ಪ್ರಜಾಪ್ರಭುತ್ವ ಸಿದ್ಧಾಂತವು ರಾಜಕೀಯ ಸಮಾನತೆಯ ಮೇಲೆ ನೆಲೆಗೊಂಡಿದೆ. ಹಾಗೆಂದ ಮಾತ್ರಕ್ಕೆ ಮಾನವಪರ, ಸಮಾಜಪರ ಕಾಳಜಿಗಳು ಇಲ್ಲವೆಂದಲ್ಲ. ಅವುಗಳಿಗೆ ಪ್ರತ್ಯೇಕ ಸ್ಥಾನಮಾನಗಳು ಒದಗಿವೆ. ಸಮಾಜವಾದಿ ಸಿದ್ಧಾಂತವು ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯ

ಮೇಲೆ ಸ್ಥಾಪಿತಗೊಂಡಿದೆ. ಈ ನಿಟ್ಟಿನಲ್ಲಿ ಈ ಎರಡೂ ಸಿದ್ಧಾಂತಗಳು ಇಂದಿನ ಪ್ರಜಾಪ್ರಭುತ್ವದಲ್ಲಿ ಹಾಸುಹೊಕ್ಕಾಗಿವೆಯೇ?

ಸಮಾಜವಾದಿ ಸಿದ್ಧಾಂತದ ಪ್ರತಿಪಾದಕರಾದ ರಾಮಮನೋಹರ ಲೋಹಿಯಾ ಅವರು ಶಾಂತವೇರಿ ಗೋಪಾಲಗೌಡರ ಮೇಲೆ ಅಪಾರ ಪ್ರಭಾವವನ್ನು ಬೀರಿದವರು. ಅವರ ಚಿಂತನೆಗಳು ಗೋಪಾಲಗೌಡರಿಗೆ ಸ್ಫೂರ್ತಿಯ ನೆಲೆಗಳಾಗಿದ್ದವು. ಲೋಹಿಯಾ ಅವರು ಭಾರತದ ಸಮಾಜವಾದಿ ಆಂದೋಲನವನ್ನು ಕಟ್ಟಲು ಯತ್ನಿಸಿದ ಪ್ರಜಾಸತ್ತಾತ್ಮಕ ಒಕ್ಕೂಟದ ರಾಜಕಾರಣದ ರೂಪುರೇಷೆಗಳನ್ನು ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ೧೯೫೨ರಲ್ಲಿ ಲೋಹಿಯಾ ಅವರು ಮಾಡಿದ ಭಾಷಣವೊಂದರಲ್ಲಿ, ಭಾರತದ ಸಮಾಜವಾದ ತನ್ನ ವಸಾಹತೋತ್ತರ ಚಾರಿತ್ರಿಕ ಪರಿಪ್ರೇಕ್ಷ್ಯದಲ್ಲಿ ಸ್ವಾಯತ್ತತೆಯನ್ನು ಗಳಿಸಿಕೊಳ್ಳುವುದು ಹೇಗೆ ಹಾಗೂ ಯುರೋಪಿಗಿಂತ ಭಿನ್ನವಾದ ಸಮಾಜಗಳಲ್ಲಿ ನಡೆಯುತ್ತಿರುವ ಸಮಾಜವಾದಿ ಚಿಂತನೆ ಮತ್ತು ಕ್ರಿಯಾಚರಣೆಗಳೊಂದಿಗೆ ಅದು ತನ್ನನ್ನು ಜೋಡಿಸಿಕೊಳ್ಳುವ ರೀತಿ ಯಾವುದು?[೧] ಎಂಬ ವ್ಯಾಪಕವಾದ ಚಿಂತನೆಗಳನ್ನು ಹರಿಯಬಿಟ್ಟರು. ಕಾಂಗ್ರೆಸ್ ಪಕ್ಷದೊಂದಿಗಿನ ಸಹಭಾಗಿತ್ವದ ವಿಚಾರದಲ್ಲಿ ಭಾರತದ ಸಮಾಜವಾದಿ ಆಂದೋಲನವು ೧೯೫೩ ಕಾಲಘಟ್ಟದಲ್ಲಿ ಹಿನ್ನಡೆಯನ್ನು ಅನುಭವಿಸಿತು. ೧೯೫೩ರಲ್ಲಿ ತಿರುವಾಂಕೂರ್ -ಕೊಚ್ಚಿನ್ ಪ್ರದೇಶದಲ್ಲಿ ಅಧಿಕಾರ ವಹಿಸಿಕೊಂಡ ಸಮಾಜವಾದಿ ಸರಕಾರ ಪ್ರತಿಭಟನೆ ನಡೆಸುತ್ತಿದ್ದ ಜನರ ಗುಂಪಿನ ಮೇಲೆ ಗುಂಡು ಹಾರಿಸಿ ಜನಾಂದೋಲನವನ್ನು ಹತ್ತಿಕ್ಕಿದ ಘಟನೆಯನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಇಂಥ ಘಟನೆಗಳು ಮತ್ತೆ ಮರುಕಳಿಸದಂತೆ ಎಚ್ಚರಿಕೆ ವಹಿಸುವುದರ ಮೂಲಕ ಸಮಾಜವಾದಿ ಪಕ್ಷವು ಅಂದು ತನ್ನ ಪ್ರಸ್ತುತತೆಯನ್ನು ಜೀವಂತವಾಗಿರಿಸಿಕೊಂಡಿದ್ದನ್ನು ಸ್ಮರಿಸಬಹುದಾಗಿದೆ. ಲೋಹಿಯಾ ನಾಯಕತ್ವದಲ್ಲಿ ಸಮಾಜವಾದಿ ಪಕ್ಷವು ಜಾತಿನಿರ್ಮೂಲನೆಗೆ ಸಂಬಂಧಿಸಿದಂತೆ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಸಾಮಾಜಿಕ ಸ್ತರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳು, ಇತರ ಹಿಂದುಳಿದ ಜಾತಿಗಳು, ಹಿಂದುಳಿದ ಅಲ್ಪಸಂಖ್ಯೆಯ ಸಮುದಾಯಗಳು ಹಾಗೂ ಮಹಿಳೆಯರನ್ನು ಒಳಗೊಳ್ಳುವ ಒಂದು ಸೂತ್ರವನ್ನು ನಿರ್ಮಿಸಿತ್ತು. ಈ ಸೂತ್ರದ ಅನ್ವಯ ಎಲ್ಲ ಹಿಂದುಳಿದ ಸಮುದಾಯಗಳಿಗೆ ಒಟ್ಟಾಗಿ ಅರವತ್ತು ಪ್ರತಿಶತ ಮೀಸಲಾತಿಯನ್ನು ಸಮಾಜವಾದಿ ಪಕ್ಷ ಪ್ರತಿಪಾದಿಸಿತು. ಇದರಿಂದಾಗಿ ಸಮಾಜವಾದಿ ಪಕ್ಷಕ್ಕೆ ವಿಶೇಷವಾಗಿ ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಹಿಂದುಳಿದ ಜಾತಿಗಳ ಸಮರ್ಥನೆ ದೊರೆಯಿತು. ಸಮಾಜವಾದಿ ಪಕ್ಷದ ಇಂತಹ ನೀತಿಗಳು ದಲಿತರ ಪರವಾಗಿದ್ದು, ಅವರ ಭವಿಷ್ಯದ ಅಭಿವೃದ್ಧಿಗೆ ನೀಡಲಾದ ಕೊಡುಗೆಗಳಂತಿದ್ದವು. ಸಮಾಜವಾದಿ ಸಿದ್ಧಾಂತದ ಇಂತಹ ನಿಲುವುಗಳು ಕರ್ನಾಟಕದ ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಸಿದ್ಧಾಂತದ ಪ್ರತಿಪಾದನೆಗೆ, ಅನುಸರಣೆಗೆ ಅಗಾಧ ತಳಹದಿಯನ್ನು ನಿರ್ಮಿಸಿಕೊಟ್ಟವು ಎಂದರೆ ತಪ್ಪಾಗುವುದಿಲ್ಲ.

ಈ ಎಲ್ಲ ಘಟನೆಗಳ ಒಟ್ಟು ಪರಿಣಾಮವು ಗೋಪಾಲಗೌಡರ ಸಮಾಜವಾದಿ ಚಳವಳಿಗೆ, ಸಿದ್ಧಾಂತಕ್ಕೆ, ಅನುಷ್ಠಾನಗಳಿಗೆ ಸಶಕ್ತಿಯನ್ನು ನೀಡಿತು. ಶಾಂತವೇರಿ ಗೋಪಾಲಗೌಡರ ಹೋರಾಟದ

ಆರಂಭಿಕ ಹೆಜ್ಜೆಗಳನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಕಾಣಬಹುದು. ಅಂಚೆಡಬ್ಬಗಳನ್ನು ಕಿತ್ತು ಹಾಕುವುದು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿ ಹಾಕುವುದು ಮುಂತಾದ ಪ್ರತಿಭಟನೆಗಳನ್ನು ಮಾಡಿ ಜೈಲುವಾಸ ಕಂಡರು. ಜೈಲಿನಲ್ಲಿದ್ದು ಸ್ವಾತಂತ್ರ್ಯ ಹೋರಾಟಗಾರರಾದ ಕೆ.ಟಿ. ಭಾಷ್ಯಂ, ಸಿದ್ಧಯ್ಯ, ಕುಮಾರನ್, ಕೆ.ಸಿ.ರೆಡ್ಡಿ ಮುಂತಾದವರ ಸೇವೆ ಮಾಡುವುದರ ಮೂಲಕ ಅವರ ಸ್ನೇಹವನ್ನು ಸಂಪಾದಿಸಿಕೊಂಡರು. ಕಾರ್ಲ್‌ಮಾರ್ಕ್ಸ್, ಲಿಯೋಟಾಲ್‌ಸ್ಟಾಯ್, ಜಯಪ್ರಕಾಶ್ ನಾರಾಯಣ, ಮಹಾತ್ಮಾಗಾಂಧಿ, ಲೋಹಿಯಾ ಅವರ ಜೀವನ ಸಿದ್ಧಾಂತಗಳಿಂದ ಗೋಪಾಲಗೌಡರು ಸ್ಫೂರ್ತಿಯನ್ನು ಪಡೆದುಕೊಂಡರು. ಸ್ವಾತಂತ್ರ್ಯ ಹೋರಾಟದ ಜೊತೆಗೆ ಸಮಾಜಸೇವೆ ಅವರ ಪ್ರವೃತ್ತಿಯಾಗತೊಡಗಿತು. ಬರಬರುತ್ತಾ ಸಮಾಜಸೇವೆಯೇ ಅವರ ಜೀವನದ ಮುಖ್ಯ ಸಿದ್ಧಾಂತವಾಗಿ ಮಾರ್ಪಟ್ಟಿತು.

ಶಾಂತವೇರಿ ಗೋಪಾಲಗೌಡರು ತೀರಿಕೊಂಡ ನಂತರವೂ ಕರ್ನಾಟಕದ ಹಲವು ಘಟ್ಟಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಲೇ ಇದ್ದಾರೆ. ಅವರ ಬಗ್ಗೆ ಬಹುತೇಕ ಅಭಿಮಾನ, ಮೆಚ್ಚುಗೆಗಳು ಅಲ್ಲಲ್ಲಿ ವಿಮರ್ಶಾತ್ಮಕ ಪ್ರತಿಕ್ರಿಯೆಗಳು, ಅವರ ಸುತ್ತ ನಡೆದ ಕುತೂಹಲಕರ ಘಟನೆಗಳು ಕೇಳಿ ಬರುತ್ತಲೇ ಇರುತ್ತವೆ. ಇವತ್ತಿಗೂ ಶಿವಮೊಗ್ಗ ಜಿಲ್ಲೆಯಲ್ಲಿ ಹಾಗೂ ಸಮಾಜವಾದ ಸ್ಪರ್ಶವಿರುವ ಕರ್ನಾಟಕದ ಭಾಗಗಳಲ್ಲಿ ಗೋಪಾಲಗೌಡರ ನೆನಪು ಹಸಿರಾಗಿದೆ. ಗೋಪಾಲಗೌಡರು ಇಂದಿಗೂ ಕರ್ನಾಟಕದ ಆದರ್ಶ ರಾಜಕಾರಣ ಹಾಗೂ ಸಾಮಾಜಿಕ ಚಳವಳಿಗಳ ಸ್ಫೂರ್ತಿಗಳಾಗಿ ಉಳಿದಿದ್ದಾರೆ[8] ಎಂಬ ನಟರಾಜ ಹುಳಿಯಾರ ಅವರ ಮಾತುಗಳು ಗೋಪಾಲಗೌಡರು ಮತ್ತು ಅವರ ಸಿದ್ಧಾಂತದ ಬಗೆಗೆ ಹೇಳಿರುವ ಅಭಿಮಾನದ ಮಾತುಗಳಾಗಿವೆ.

ಸಮಾಜದಲ್ಲಿರುವ ಕಳಂಕಗಳನ್ನು ತೊಡೆದು ಹಾಕದಿದ್ದರೆ ಸ್ವಾತಂತ್ರ್ಯ ಅರ್ಥಪೂರ್ಣವಾಗಲಾರದು ಎಂಬುದು ಗೋಪಾಲಗೌಡರು ಅಂದು ಕಂಡುಕೊಂಡ ವಾಸ್ತವವಾಗಿತ್ತು. ಈ ನಿಟ್ಟಿನಲ್ಲಿ ಶಿವಮೊಗ್ಗದಲ್ಲಿ ಹರಿಜನರೊಡನೆ ದೇವಾಲಯ ಪ್ರವೇಶಿಸಲು ಯತ್ನಿಸಿದ್ದರು. ಆರಗದ ವಿರಕ್ತಮಠದಲ್ಲಿ ಹರಿಜನರಿಗಾಗಿ ರಾತ್ರಿ ಶಾಲೆಗಳನ್ನು ನಡೆಸುತ್ತಿದ್ದರು. ವಯಸ್ಕರ ಶಿಕ್ಷಣ ಶಾಲೆಯನ್ನು ನಡೆಸುವುದು, ಸ್ವ-ಉದ್ಯೋಗ, ಖಾದಿ ನೂಲು ತೆಗೆಯುವುದು ಇವುಗಳ ಕಡೆಗೆ ಗಮನಹರಿಸಿದರು. ಸಮಾಜವಾದಿಗಳು ಜಾತ್ಯಾತೀತರಾಗಿರಬೇಕು ಎಂಬುದು ಅವರ ಆಶಯವಾಗಿತ್ತು. ಹಾಗಾಗಿ ಅಂತರ್‌ಜಾತಿ ಮದುವೆಗೆ ಒಪ್ಪಿ ಕಡಿದಾಳ್ ಮಂಜಪ್ಪನವರ ಮಿತ್ರರಾದ ಧಾರವಾಡದ ವಕೀಲರ ಮಗಳು ಸೋನಕ್ಕನನ್ನು ಮದುವೆಯಾದರು. ಹೀಗೆ ತಮ್ಮ ಜೀವನದ ನಿಲುವುಗಳನ್ನು ಶಾಂತವೇರಿ ಗೋಪಾಲಗೌಡರು ಸಮಾಜವಾದಿ ಚಿಂತನೆಗಳ ಹಿನ್ನೆಲೆಯಲ್ಲಿ ಹೇಗೆ ಕಟ್ಟಿಕೊಂಡರು ಎಂಬುದನ್ನು ಈ ಮೂಲಕ ಗ್ರಹಿಸಬಹುದಾಗಿದೆ.

ಇವೊತ್ತು ಸಮಾಜವಾದದ ಮಾತು ಹೇಳುವುದಾದರೆ, 'ವರ್ಗಗಳನ್ನು ಮತ್ತು ವರ್ಣಗಳನ್ನು ತೊಡೆದು ಹಾಕುವಂತಹ ದಾರಿಯಲ್ಲಿ ಹೋಗದಿದ್ದರೆ, ಸಮಾಜವಾದವನ್ನು ತರುವುದು ದೂರದ ಕನಸಾಗಿಯೇ ಉಳಿಯುತ್ತದೆ. ಜೀತಪದ್ಧತಿ ನಮ್ಮ ರಾಜ್ಯದಲ್ಲಿ ಈಗಲೂ ಇದೆ. ಈ ಪದ್ಧತಿಯನ್ನು

ತೆಗೆಯುವುದು, ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವುದು ಈ ಪ್ರಶ್ನೆ ಕೇವಲ ಕಾಗದದ ಮೇಲಿದೆ. ಅದು ಇನ್ನೂ ಜೀವಂತವಾಗಿಯೇ ಇದೆ. ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಹರಿಜನರಿಗೆ ಪ್ರವೇಶವಿಲ್ಲ. ದೇವಸ್ಥಾನಗಳಲ್ಲಿ ಅವರಿಗೆ ಪ್ರವೇಶವಿಲ್ಲ. ಬುದ್ಧ, ಬಸವ ಮತ್ತು ಮಹಾತ್ಮಗಾಂಧಿಯವರು ಮಾಡಿದಂತಹ ಚಳವಳಿ ಏನಿವೆ ಅವು ಇನ್ನೂ ಹಾಗೆಯೇ ಉಳಿದಿವೆ. ಆ ಚಳವಳಿಯ ಪರಿಣಾಮ ಇನ್ನೂ ಆಗಿಲ್ಲ. ಹಿಂದೂಗಳಲ್ಲಿ ಅವರ ಮನಸ್ಸು ಮತ್ತು ಹೃದಯದಲ್ಲಿ, ತಲೆಯ ಯಾವುದೋ ಒಂದು ಭಾಗದಲ್ಲಿ ಅಸ್ಪೃಶ್ಯತೆ ಎನ್ನುವುದು ನಾಟಿಕೊಂಡು ಕುಳಿತುಕೊಂಡು ಬಿಟ್ಟಿದೆ. ಅದನ್ನು ತೊಡೆದು ಹಾಕುವಂತಹ ಪ್ರಯತ್ನವನ್ನು ಮಾಡಬೇಕು' ಎಂಬ ಗೋಪಾಲಗೌಡರ ಸಾಮಾಜಿಕ ಕಳಕಳಿಯು ಇಂದಿಗೂ ಪ್ರಸ್ತುತವಾದುದ್ದಾಗಿದೆ. ಮಳೆ ಬಿಟ್ಟರೂ ಮರದ ಹನಿ ಬಿಡದು ಎಂಬ ಗಾದೆಯಂತೆ ಅಸ್ಪೃಶ್ಯತೆ, ಜೀತಪದ್ಧತಿ, ಅಸ್ಪೃಶ್ಯರಿಗೆ ದೇವಸ್ಥಾನದ ಪ್ರವೇಶವಿಲ್ಲದಿರುವುದು, ವರ್ಗತಾರತಮ್ಯಗಳು ಇಂದಿಗೂ ಹಲವು ಕಡೆ ಪಳಿಯುಳಿಕೆಯ ರೂಪದಲ್ಲಿ ಜೀವಂತವಾಗಿವೆ. ಅವುಗಳ ಮೂಲೋತ್ಪಾದನೆ ಮಾಡುವ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರು ಈ ಹಿಂದೆ ನಡೆಸಿದ ಚಳವಳಿಗಳನ್ನು ನಮ್ಮ ಸಂದರ್ಭದಲ್ಲಿಯೂ ಮತ್ತೆ ಮತ್ತೆ ನಡೆಸಬೇಕಾದ ತುರ್ತು ನಮ್ಮ ಮುಂದಿರುವುದನ್ನು ಕಾಣುತ್ತೇವೆ.

ಪ್ರಸ್ತುತ ಪ್ರಜಾಪ್ರಭುತ್ವವನ್ನು ಗಮನಿಸಿದರೆ ದೇಶ ಎತ್ತ ಸಾಗುತ್ತಿದೆ ಎಂದು ಚಿಂತೆಯಾಗುತ್ತದೆ. ಸಮಾಜವಾದಿ ಮೌಲ್ಯಗಳನ್ನು ಒಂದು ಮಟ್ಟಿಗಾದರೂ ಅಳವಡಿಸಿಕೊಂಡಿದ್ದ ಪ್ರಜಾಪ್ರಭುತ್ವ ಇಂದು ಅವುಗಳನ್ನು ಬಿಟ್ಟುಕೊಡುತ್ತಿದೆ. ಉಳ್ಳವರ ಅಧಿಕಾರ ಎಂಬುದು ಸ್ಥಾಪಿತವಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು, ಬಂಡವಾಳಶಾಹಿಗಳು, ಬಲಿಷ್ಠ ವರ್ಗಗಳ ಹಿತಾಸಕ್ತಿಯೇ ಪ್ರಧಾನವಾದಂತೆ ಕಾಣುತ್ತಿದೆ. ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳು ಭಾರತೀಯ ಪ್ರಜಾಪ್ರಭುತ್ವವನ್ನು ಸಾಕಷ್ಟು ಬದಲಾಯಿಸಿವೆ. ಈ ಹಿನ್ನೆಲೆಯಲ್ಲಿ ಸಮಾಜವಾದಿ ಮೌಲ್ಯಗಳು ಮರೀಚಿಕೆಯಾದಂತೆ ಕಾಣುತ್ತಿವೆ. ಕರ್ನಾಟಕದ ರಾಜಕಾರಣವೂ ಇದಕ್ಕೆ ಹೊರತಲ್ಲ. ಬಂಡವಾಳಶಾಹಿ ಮೌಲ್ಯಗಳೇ ಇಂದು ವಿಜೃಂಭಿಸುತ್ತಿವೆ. ಸಾಮಾನ್ಯ ಜನರ ಆಶೋತ್ತರಗಳು ಪ್ರಭುತ್ವದ ಮುಖ್ಯ ಭಾಗವಾದಂತೆ ಕಾಣುತ್ತಿಲ್ಲ. ನಮ್ಮ ರಾಜಕಾರಣಿಗಳು ಕೇವಲ ಅಧಿಕಾರಕ್ಕಾಗಿ ರಾಜಕಾರಣ ಎಂದು ಭಾವಿಸಿದಂತಿದೆ. ಮೀಸಲಾತಿಯ ಪರಿಣಾಮದಲ್ಲಿ ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದ, ಬುಡಕಟ್ಟು, ಮಹಿಳಾ ಪ್ರತಿನಿಧಿಗಳು ಆಯ್ಕೆಯಾಗುತ್ತಿದ್ದರೂ ತಮ್ಮ ವರ್ಗಹಿತಾಸಕ್ತಿಯನ್ನು ಕಾಪಾಡುವಲ್ಲಿ ಸೋಲುತ್ತಿದ್ದಾರೆ. ಬದಲಾಗಿ ಬಂಡವಾಳಶಾಹಿ ಹಿತಾಸಕ್ತಿಯೇ ತಮ್ಮ ಹಿತಾಸಕ್ತಿಯಾಗಿ ಪರಿಭಾವಿಸಿಕೊಂಡಿದ್ದಾರೆ.

ಕಳೆದ ೨೫ ವರ್ಷದ ರಾಜಕಾರಣ ಮತ್ತೊಂದು ಭಿನ್ನ ಮಗ್ಗುಲಿಗೆ ಹೊರಳಿರುವುದು ಕಾಣುತ್ತದೆ. ಯಾವ ಜಾತಿ, ಧರ್ಮ, ರಾಜಕಾರಣದ ಮುಖ್ಯ ಭೂಮಿಕೆ ಬರುವುದನ್ನು ಸ್ವಾತಂತ್ರ್ಯ ನಂತರದಲ್ಲಿ ವಿರೋಧಿಸಲಾಗಿತ್ತೋ ಅದು ಇಂದು ಘಟಿಸುತ್ತಿದೆ. ಮೇಲು ಜಾತಿ, ವರ್ಗ ಮತ್ತು ಧರ್ಮದ ಹಿತಾಸಕ್ತಿಗಳು ರಾಜಕಾರಣದ ಕೇಂದ್ರ ಸ್ಥಾನಕ್ಕೆ ಬಂದು ಬಹು ಸಮುದಾಯಗಳ

ಹಿತಾಸಕ್ತಿಯನ್ನು ಮರೆಮಾಚಿವೆ. ಧರ್ಮಾಧಾರಿತ ರಾಜಕಾರಣ ಮುಂಚೂಣಿಗೆ ಬಂದಿದ್ದು, ರಾಷ್ಟ್ರೀಯ ಹಿತಾಸಕ್ತಿಗಳೆಂದು ಕೆಲವು ಸಂಕೇತಗಳನ್ನು ಮುನ್ನೆಲೆಗೆ ತಂದಿದೆ. ನಿಜಕ್ಕೂ ಬಹುಸಂಖ್ಯಾತ ರೈತರು, ಕಾರ್ಮಿಕರ ಹಿತಾಸಕ್ತಿಗಳನ್ನು ಕಡೆಗಣಿಸಲಾಗಿದೆ. ನಿರುದ್ಯೋಗ, ಬಡತನ ನಿರ್ಮೂಲನೆ, ಆರೋಗ್ಯ, ಶಿಕ್ಷಣ ಮುಂತಾದ ಸಂಗತಿಗಳು ನಿರ್ಲಕ್ಷಿಸಲ್ಪಟ್ಟಿವೆ. ಅಂದರೆ ಸಮಾಜವಾದಿ ಆಶಯಗಳು ಮತ್ತು ಮೌಲ್ಯಗಳು ಮೂಲೆಗುಂಪಾಗಿವೆ ಎನ್ನಬಹುದು. ಆದ್ದರಿಂದಲೇ ಸಮಾಜದ ದೊಡ್ಡ ಸಮುದಾಯದ ಆಶೋತ್ತರಗಳು ಆಳುವ ಪ್ರಭುತ್ವದ ಕಾರ್ಯಸೂಚಿಯಾಗಬೇಕಾದರೆ, ಅದನ್ನು ಪ್ರತಿಪಾದಿಸುವ ರಾಜಕೀಯ ಸಿದ್ಧಾಂತಗಳು ಮುಂಚೂಣಿಗೆ ಬರಬೇಕಿದೆ. ಈ ಹಿನ್ನೆಲೆಯಲ್ಲಿ ಗೋಪಾಲಗೌಡರ ಚಿಂತನೆ, ಬರಹ, ಆಶಯಗಳು ಇಂದಿಗೂ ಪ್ರಸ್ತುತವಾಗಬಲ್ಲಿವೆ ಎಂಬುದನ್ನು ರಾಜಕೀಯ ತಜ್ಞರು ಪರಿಶೀಲಿಸಬೇಕಿದೆ. ಇಂದಿನ ರಾಜಕಾರಣಕ್ಕೆ ಪರ್ಯಾಯ ಸೂಚಿಸುವ ಶಕ್ತಿ ಸಮಾಜವಾದಿ ಸಿದ್ಧಾಂತ ಮತ್ತು ಗೋಪಾಲಗೌಡರ ಚಿಂತನೆಗಳಿಗೆ ಇದೆಯೇ ಎಂಬುದನ್ನು ಇನ್ನಷ್ಟು ಆಳವಾಗಿ ಪರಿಶೀಲಿಸಬೇಕಿದೆ. ಆದರೆ ಅಂದು, ಹಿಂದುಳಿದವರಿಗೆ ಮತ್ತು ಬಡಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಕೊಡಿಸುವಲ್ಲಿ ಶಾಂತವೇರಿ ಗೋಪಾಲಗೌಡರು ವಹಿಸಿದ ಪಾತ್ರವು ಹಿರಿದಾದುದು. ಬಡವರು ಗೌರವದಿಂದ ಜೀವನ ನಡೆಸಬೇಕೆಂದು ಅವರು ಆಶಿಸಿದ್ದರು. ಇದ್ದುದನ್ನು ಇದ್ದ ಹಾಗೆ ಹೇಳುವ ನಿಷ್ಠುರವಾದಿಯಾಗಿದ್ದರು. ಸಮಾಜವಾದದ ಬಗೆಗೆ ನಿರಂತರವಾಗಿ ಚಿಂತನೆ ನಡೆಸುತ್ತಿದ್ದರು. ಆ ಸಿದ್ಧಾಂತಕ್ಕೆ ತಮ್ಮನ್ನೇ ತಾವು ಸಮರ್ಪಿಸಿ ಕೊಂಡವರಂತಾಗಿದ್ದರು. ಹೀಗಾಗಿ ಅವರು ಶಾಸನಸಭೆಯಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಸಮಾಜವಾದಿ ತತ್ವಗಳನ್ನು ಪ್ರಚಾರ ಮಾಡುತ್ತಿದ್ದರು.

ಕಾಂಗ್ರೆಸ್ ಪಕ್ಷದಿಂದ ಇವರಿಗೆ ಒಂದು ಬಾರಿ ಮಂತ್ರಿಸ್ಥಾನ ಮತ್ತು ಮುಖ್ಯಮಂತ್ರಿ ಸ್ಥಾನದ ಆಮಿಷ ಬಂದಿತ್ತು. ಆದರೆ ಅದನ್ನು ಇವರು ಒಪ್ಪಿಕೊಳ್ಳಲಿಲ್ಲ. ಅದನ್ನು ಸಾರಾಸಗಟಾಗಿ ತಿರಸ್ಕರಿಸಿದ್ದರು. ಇಂತಹ ಅಧಿಕಾರ ತಿರಸ್ಕಾರದ ಹಿಂದೆ ಗೋಪಾಲಗೌಡರ ಸಮಾಜವಾದಿ ಚಿಂತನೆಯು ಅನಗತ್ಯ ಅಧಿಕಾರದ ಆಸೆಗೆ ಬೀಳದಂತೆ ಭೂಮಿಕೆಯನ್ನು ಒದಗಿಸಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ಆದರೆ ಇಂದಿನ ರಾಜಕಾರಣವನ್ನು ಗಮನಿಸಿದರೆ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವುದು ಕಾಣುತ್ತಿದೆ. ಜನಪ್ರತಿನಿಧಿಯಾಗುವುದೇ ಸ್ವಂತ ಆಸ್ತಿ ಮಾಡಿಕೊಳ್ಳಲು ಎನ್ನುವಂತಾಗಿದೆ. ಹಣ, ಹೆಂಡ ಹಂಚಿ, ಜಾತಿ ಮತ್ತು ತೋಳ್ಬಲದ ಪ್ರಭಾವ ಬೀರಿ ಅಧಿಕಾರಕ್ಕೆ ಬರುವ ವ್ಯಕ್ತಿ ಮತದಾರರನ್ನು ಮರತೆಬಿ ಬಿಡುತ್ತಾನೆ. ಜನರ ಮತ್ತು ಕ್ಷೇತ್ರದ ಅಭಿವೃದ್ಧಿ ಎನ್ನುವುದು ಆತನ ಮುಖ್ಯ ಆದ್ಯತೆಯಾಗುವುದಿಲ್ಲ. ಬದಲಾಗಿ ಪ್ರತಿಯೊಂದು ಅಭಿವೃದ್ಧಿ ಕಾರ್ಯದಲ್ಲಿಯೂ ಕಮಿಷನ್ ಪಡೆಯುವುದು, ಸ್ವ ಜನರ ಹಿತ ಕಾಪಾಡುವುದೇ ಕಾಣುತ್ತದೆ. ಹಣ ಇದ್ದರೆ, ಜಾತಿ ಬಲ ಇದ್ದರೆ ಮಾತ್ರ ಚುನಾವಣೆಯಲ್ಲಿ ಗೆಲ್ಲಬಹುದು ಎಂಬುದು ಬಹಿರಂಗ ಸತ್ಯವಾಗಿದೆ. ಯಾವ ರಾಜಕೀಯ ಪಕ್ಷಗಳು ಇದಕ್ಕೆ ಹೊರತಲ್ಲ. ಹಾಗಾಗಿಯೇ ನಮ್ಮ ಪ್ರಜಾಪ್ರಭುತ್ವದಲ್ಲಿ ಇಂದು ಸಮಾಜವಾದಿ ಮೌಲ್ಯಗಳು ಇವೆಯೇ ಎಂಬ ಪ್ರಶ್ನೆ ಮೂಡುತ್ತದೆ.

೧೯೫೨, ೧೯೬೨ ಮತ್ತು ೧೯೬೭ರಲ್ಲಿ ಗೋಪಾಲಗೌಡರು ಶಾಸಕರಾಗಿದ್ದರು. ಆದರೆ ಯಾವುದೇ ಸಭೆ, ಸಮಾರಂಭಗಳಿಗೆ ಅವರು ಹೋಗುತ್ತಿರಲಿಲ್ಲ. ಸನ್ಮಾನಕ್ಕೆ ಬಳಸುವ ಹಣ ಮತ್ತು ಸಮಯವನ್ನು ಬಡವರ ಏಳಿಗೆಗೆ ಬಳಸಿಕೊಂಡರೆ ಅವರಿಗೆ ಸ್ವಲ್ಪವಾದರೂ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇವರದ್ದಾಗಿತ್ತು. ಸಮಾಜವಾದಿ ತತ್ವ-ನಿಷ್ಠೆಯನ್ನು ಬಿಟ್ಟು, ಸುಳ್ಳು ಆಶ್ವಾಸನೆಗಳನ್ನು ಜನರಿಗೆ ಕೊಟ್ಟು ಅವರನ್ನು ಮೋಸಗೊಳಿಸುವ ಆಲೋಚನೆಗಳು ಅವರ ಜೀವನದಲ್ಲಿ ಸುಳಿಯಲಿಲ್ಲ. ಶಾಸನಸಭೆಯಲ್ಲಿ ತೆರಿಗೆ, ಸಂಸ್ಕೃತಿ ಪ್ರಚಾರ, ರಾಜಧನ ರದ್ಧತಿ, ಕೈಗಾರಿಕೆ, ವಿಕೇಂದ್ರಿಕರಣ, ಭೂ ಸುಧಾರಣೆ, ನಿಮ್ನವರ್ಗದ ಏಳಿಗೆ, ವಿಧಾನ ಪರಿಷತ್ತು, ಜೈಲು, ಧರ್ಮ, ಭೂಮಿ, ಕರ್ನಾಟಕ ಏಕೀಕರಣ, ಕನ್ನಡ ಭಾಷೆ ಇವೇ ಮುಂತಾದ ಗಂಭೀರ ವಿಷಯಗಳನ್ನು ಕುರಿತು ವಿಚಾರ ಮಂಡನೆ ಮಾಡುತ್ತಿದ್ದರು. ಅಂಥ ಸಂಗತಿಗಳು ಅಧಿವೇಶನಗಳಲ್ಲಿ ಗಂಭೀರ ಚರ್ಚೆಗೆ ಒಳಪಟ್ಟು ಸಂಬಂಧಿಸಿದ ಕಾನೂನುಗಳು ರೂಪುಗೊಳ್ಳುತ್ತಿದ್ದವು. ನಂತರ ದಿನದ ರಾಜಕಾರಣ ತಲುಪಿರುವ ಹಂತವನ್ನು ಇಂದಿನ ಅಧಿವೇಶನಗಳನ್ನು ನೋಡಿದರೆ ಗೊತ್ತಾಗುತ್ತದೆ. ಮೊದಲಾಗಿ ಪ್ರತಿಭಾವಂತರು, ಬುದ್ಧಿಜೀವಿಗಳು, ಕ್ಷೇತ್ರ ಪರಿಣಿತರು ಶಾಸನ ಸಭೆಗಳಲ್ಲಿ ಇಲ್ಲವಾಗುತ್ತಿದೆ. ಇನ್ನು ಗಂಭೀರ ಚರ್ಚೆಗಳು ನಡೆಯುವುದಾದರೂ ಹೇಗೆ? ಸಂಬಂಧಿಸಿದ ಕಾನೂನುಗಳು ರೂಪುಗೊಳ್ಳುವಾದಾದರೂ ಹೇಗೆ? ಇದು ಇಂದಿನ ಪ್ರಜಾಪ್ರಭುತ್ವ ತಲುಪಿರುವ ಹಂತವಾಗಿದೆ. ಅಧಿವೇಶನಗಳು ಅಧಿಕಾರಕ್ಕಾಗಿ ಕೈ ಕೈ ಮಿಲಾಯಿಸುವ ಅಬಾಡಗಳಾಗುತ್ತಿವೆಯೇ ಹೊರತು ಗಂಭೀರ ಚರ್ಚೆಯ ತಾಣಗಳಾಗುತ್ತಿಲ್ಲ. ಭಾಷೆ, ಸಂಸ್ಕೃತಿ, ಶಿಕ್ಷಣ, ಉದ್ಯೋಗ, ಅಭಿವೃದ್ಧಿ, ಮೂಲ ಸೌಕರ್ಯಗಳ ಚರ್ಚೆಗಳೇ ಅಪರೂಪವಾಗುತ್ತಿವೆ. ಇಂಥ ಸಂದರ್ಭದಲ್ಲಿ, ಸಮಾಜವಾದಿಗಳು ಸಾಮಾಜಿಕ ಸಂಗತಿಗಳ ಮೇಲೆ ಗಂಟೆಗಟ್ಟಲೆ ನಡೆಸುತ್ತಿದ್ದ ಚರ್ಚೆಗಳ ನೆನಪಾಗುತ್ತದೆ. ಮುಖ್ಯಮಂತ್ರಿಗಳಾದವರು, ಸಮಾಜವಾದಿ ಹಿನ್ನೆಲೆಯ ಕೇವಲ ಶಾಸಕರ ಮಾತುಗಳಿಗೆ ಗಂಭೀರವಾಗಿ ಕಿವಿ ಕೊಡುತ್ತಿದ್ದರು. ಅಂದರೆ ಆ ಶಾಸಕರ ಬೌದ್ಧಿಕ ಶಕ್ತಿ ಅಷ್ಟು ಅಪಾರವಾಗಿರುತ್ತಿತ್ತು. ಇಂದಿನ ಮಂತ್ರಿಗಳಿಗೆ ತಮ್ಮ ಇಲಾಖೆಯ ಕುರಿತು ಕನಿಷ್ಠ ತಿಳುವಳಿಕೆ ಇಲ್ಲದಿರುವುದನ್ನು ನಾವು ನಿತ್ಯ ಕಾಣುತ್ತಿದ್ದೇವೆ. ಒಬ್ಬ ವ್ಯಕ್ತಿ ಒಮ್ಮೆ ಶಾಸಕನಾದರೆ, ಮಂತ್ರಿಯಾದರೆ ಮುಂದಿನ ಐದು ವರ್ಷಗಳಲ್ಲಿ ಅವನ ಆಸ್ತಿ ನೂರುಪಟ್ಟು, ಸಾವಿರಪಟ್ಟು ಹೆಚ್ಚಾಗಿರುತ್ತದೆ. ಆದರೆ ಗೋಪಾಲಗೌಡರು ಶಾಸಕರಾಗಿದ್ದ ಸಂದರ್ಭದಲ್ಲಿಯೂ ಬೆಂಗಳೂರಿನಲ್ಲಿ ಸ್ವಂತ ಮನೆಯನ್ನು ಹೊಂದದೆ ಶಾಸಕರ ಭವನದಲ್ಲಿ ತಮ್ಮ ಜೀವನವನ್ನು ಕಳೆದರು. ದೋಬಿಗೆ ಕೊಡಲು ಹಣವಿರುತ್ತಿರಲಿಲ್ಲ. ಆದ್ದರಿಂದ ತಮ್ಮ ಬಟ್ಟೆಗಳನ್ನು ತಾವೇ ತೊಳೆದುಕೊಳ್ಳುತ್ತಿದ್ದರು. ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯ ಗೋಪಾಲಗೌಡರ ಇಂತಹ ಆದರ್ಶಗಳು ಇಂದಿನ ನಾಯಕರಿಗೆ ಆದರ್ಶಪ್ರಾಯವಾಗಿವೆ.

ಗೋಪಾಲಗೌಡರು ಭ್ರಷ್ಟಾಚಾರದ ವಿರೋಧಿಯಾಗಿದ್ದರು. ಯಾವುದೇ ಅಧಿಕಾರಿಗಳು ಅಥವಾ ರಾಜಕಾರಣಿಗಳು ಭ್ರಷ್ಟಾಚಾರಕ್ಕೆ ಒಳಗಾಗಿದ್ದು ಕಂಡುಬಂದರೆ, ಅವರನ್ನು ಅಲ್ಲಿಯೇ ವಿಚಾರಿಸುತ್ತಿದ್ದರು. ಹರಿಜನ ಮತ್ತು ಗಿರಿಜನರಿಗೆ ಸರಕಾರವು ನೀಡಿರುವ ಸೌಲಭ್ಯಗಳು ಹೆಚ್ಚಾಯಿತೆಂದು ಹೇಳಿದರೆ,

ನೀವು ಹೊಳೆ ದಾಟದ್ದೀರಿ, ಅವರಿನ್ನು ಹೊಳೆಯ ಆಚೆ ದಡದಲ್ಲಿದ್ದಾರೆ. ಓಟದ ಸ್ಪರ್ಧೆ ಇಟ್ಟು ಗುರಿ ಮುಟ್ಟು ಅಂತ ಹೇಳಿದರೆ, ಯಾರು ಮೊದಲು ಗುರಿ ಮುಟ್ಟುತ್ತಾರೆ ಹೇಳಿಸ್ವಾಮಿ" ಎಂದು ನೇರವಾಗಿ ಮತ್ತು ಖಾರವಾಗಿ ಕೇಳುತ್ತಿದ್ದರು. ದಲಿತರ ಬಗೆಗೆ, ಅಸ್ಪೃಶ್ಯರ ಬಗೆಗೆ ಅಪಾರವಾದ ಕಾಳಜಿ ಇಟ್ಟುಕೊಂಡದ್ದನ್ನು ಗೋಪಾಲಗೌಡರ ಈ ಮಾತುಗಳು ಸ್ಪಷ್ಟಪಡಿಸುತ್ತವೆ. ಸಮಾಜವಾದವು ಇಂತಹ ನಿಲುವುಗಳಿಗೆ ಭದ್ರ ಬುನಾದಿಯನ್ನೊದಗಿಸುತ್ತದೆ. ಆದ್ದರಿಂದ ಗೋಪಾಲಗೌಡರ ಈ ತೆರನಾದ ಚಿಂತನೆಗಳು ಇಂದು ಸೈದ್ಧಾಂತಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಪ್ರಸ್ತುತವಾಗಿವೆ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ.

ಪ್ರಸ್ತುತ ರಾಜಕಾರಣದಲ್ಲಿ ಸಮಾಜವಾದಿ ಸಿದ್ಧಾಂತ, ಮಾರ್ಕ್ಸ್‌ವಾದಿ ಸಿದ್ಧಾಂತ, ಗಾಂಧಿವಾದ, ಅಂಬೇಡ್ಕರ್‌ವಾದ ಯಾಕೆ ಅಪ್ರಸ್ತುತವಾಗುತ್ತಿವೆ ಅಥವಾ ಸೋಲುತ್ತಿವೆ ಎಂಬ ಪ್ರಶ್ನೆಗಳು ಗಂಭೀರವಾದವು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಡಕವಾಗಿದ ಸಮಾಜವಾದಿ ಮೌಲ್ಯಗಳು ಏಕೆ ಮುಖರಹಿತವಾಗುತ್ತಿವೆ? ಪ್ರಜಾಪ್ರಭುತ್ವ ಎಲ್ಲಿ ಸೋಲುತ್ತಿದೆ? ಎಂಬ ಪ್ರಶ್ನೆಗಳನ್ನು ಮತ್ತೆ ಮತ್ತೆ ಹಾಕಿಕೊಳ್ಳಬೇಕಿದೆ. ಅತ್ಯಂತ ಜನಪ್ರಿಯವಾಗಿ ರೂಪುಗೊಂಡ ಸಮಾಜವಾದಿ ಸಿದ್ಧಾಂತ ಒಂದು ಕಾಲಕ್ಕೆ ಭಾರತದ ಮಟ್ಟಿಗೆ ಆಶಾಕಿರಣವಾಗಿತ್ತು. ಪರ್ಯಾಯ ರಾಜಕೀಯ ಶಕ್ತಿಯಾಗಿ ರೂಪುಗೊಂಡಿತ್ತು. ಒಂದು ಅರ್ಥದಲ್ಲಿ ಗಾಂಧೀಜಿಯ ಮೌಲ್ಯಗಳು ಮತ್ತು ಮಾರ್ಕ್ಸ್‌ವಾದಿ ಚಿಂತನೆಗಳನ್ನು ಬಹುಸೂಕ್ಷ್ಮವಾಗಿ ಮೈಗೂಡಿಸಿಕೊಂಡಿದ್ದ ಸಮಾಜವಾದ ಪ್ರಜಾಪ್ರಭುತ್ವ ಮತ್ತು ಮಾರ್ಕ್ಸ್‌ವಾದಕ್ಕೆ ಪರ್ಯಾಯ ಎನ್ನಿಸಿಕೊಂಡಿತ್ತು. ಪ್ರಭುತ್ವದಲ್ಲಿ ಸಮಾಜವಾದಿ ಮೌಲ್ಯಗಳು, ಚಿಂತನೆಗಳು ಸ್ಥಾನ ಪಡೆದಿದ್ದವು. ಸಮಾಜವಾದಿ ಸಿದ್ಧಾಂತ ಕೇವಲ ರಾಜಕೀಯ ಸಿದ್ಧಾಂತವಾಗಿರದೆ ಬಹು ಆಯಾಮದ ಸಿದ್ಧಾಂತವಾಗಿ ರೂಪುಗೊಂಡಿತ್ತು. ಭಾಷೆ, ಸಂಸ್ಕೃತಿ, ಸಾಹಿತ್ಯ, ಆರ್ಥಿಕತೆ, ಕೃಷಿ, ಸಿನಿಮಾ, ರಂಗಭೂಮಿ, ಕಲೆ, ಶಿಕ್ಷಣ ಮುಂತಾದ ಕ್ಷೇತ್ರಗಳ ಸಿದ್ಧಾಂತವಾಗಿಯೂ ರೂಪುಗೊಂಡಿತ್ತು. ಹಾಗಾಗಿಯೇ ಸಾಮಾಜಿಕ ಅಭಿವೃದ್ಧಿಗೆ ಸಮಾಜವಾದಿ ಸಿದ್ಧಾಂತ ತನ್ನದೇ ಆದ ಬಹುದೊಡ್ಡ ಕೊಡುಗೆಯನ್ನು ನೀಡಿತು. ಆದರೆ ನಮ್ಮ ಕರ್ನಾಟಕವನ್ನೊಳಗೊಂಡಂತೆ ಭಾರತದ ಪ್ರಜೆಗಳ ಆಶೋತ್ತರಗಳನ್ನು, ನಿಲುವುಗಳನ್ನು ನೋಡಿದಾಗ ಸಮಾಜವಾದಿ ಸಿದ್ಧಾಂತಗಳು ಇಂದಿನ ದಿನಗಳಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದಂತೆ ಕಂಡುಬರುತ್ತವೆ. ನಮ್ಮ ಸಂದರ್ಭದ ಜಾಗತೀಕರಣ, ಉದಾರೀಕರಣ, ಮಾಹಿತಿ ಮತ್ತು ತಂತ್ರಜ್ಞಾನದ ಯುಗದಲ್ಲಿ ೨೦ನೆಯ ಶತಮಾನದ ರಾಜನೀತಿ ಮತ್ತು ಆಡಳಿತಾತ್ಮಕ ಚಿಂತನೆಗಳು ಇಂದು ಎಷ್ಟರಮಟ್ಟಿಗೆ ಉಪಯುಕ್ತವಾಗಿವೆ ಎಂಬುದು ಮತ್ತೆ ಮತ್ತೆ ಕಾಡುವ ಪ್ರಶ್ನೆಯಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ನಾಶ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಮಾಯಾಜಾಲದಲ್ಲಿ ಮಾನವೀಯ ಸಂಬಂಧಗಳ ಬಿರುಕು, ಅಧಿಕಾರ ಲಾಲಸೆ, ಕೊಳ್ಳುಬಾಕ ಸಂಸ್ಕೃತಿ, ಪ್ರಜಾಪ್ರಭುತ್ವದ ಹಿಂದೆ ಕಾಣದ ಕೈಗಳ ರೀತಿಯಲ್ಲಿ ಆಡಿಸುತ್ತಿರುವ ಬಂಡವಾಳಶಾಹಿಗಳ ಆಸೆಬುರುಕುತನಗಳು, ಸ್ವಹಿತಾಸಕ್ತಿಗಳು ಪ್ರಜೆಗಳನ್ನು ಜರ್ಝರಿತವನ್ನಾಗಿ ಮಾಡಿರುವುದು ವಾಸ್ತವವಾಗಿದೆ. ಹಣಕ್ಕಾಗಿ, ಹೆಂಡಕ್ಕಾಗಿ ತಮ್ಮ ಅಮೂಲ್ಯ ಮತಗಳನ್ನು ಮಾರಿಕೊಂಡು ರಾಜಕೀಯ ಪ್ರಜ್ಞೆಯನ್ನೇ

ಕಳೆದುಕೊಳ್ಳುತ್ತಿರುವ ಕೆಲವು ಮತದಾರರು ಇಂಥ ಕಠಿಣ ಮತ್ತು ಸಂದಿಗ್ಧ ಸನ್ನಿವೇಶಗಳಲ್ಲಿ ಸಮಾಜವಾದದ ಚಿಂತನೆಗಳು ಇಂದು ಎಷ್ಟರಮಟ್ಟಿಗೆ ಪ್ರಸ್ತುತವಾಗುತ್ತವೆ ಎನ್ನುವುದು ಚರ್ಚಾಸ್ಪದ ವಿಷಯವೂ ಆಗಿದೆ.

ಪ್ರಸ್ತುತ ಚರ್ಚೆಯ ಹಿನ್ನೆಲೆಯಲ್ಲಿ ಜಿ.ಎಂ. ಪುಟ್ಟಯ್ಯನವರು ಸಮಾಜವಾದವನ್ನು ಕುರಿತು ಹೀಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. "ಇಲ್ಲಿ ಸಮಾಜವಾದಿ ಚಿಂತನೆ, ಹೋರಾಟ ಇತ್ಯಾದಿಗಳು ಇರುವುದಾದರೆ, ಇಲ್ಲಿ ದಲಿತ ಹೋರಾಟ, ಮಹಿಳಾ ಹೋರಾಟ, ಕಾರ್ಮಿಕ ಹೋರಾಟ, ರೈತ ಹೋರಾಟ, ವಿದ್ಯಾರ್ಥಿ ಹೋರಾಟ, ಸ್ಲಂ ಜನರ ಹೋರಾಟ, ನಿರುದ್ಯೋಗಿಗಳ ಹೋರಾಟ, ದಿನಗೂಲಿಗಳ ಹೋರಾಟ ಇವೆಲ್ಲ ಯಾಕೆ ಹುಟ್ಟಿದವು? ಇವು ಯಾಕೆ ಹುಟ್ಟಿದವು ಎಂದರೆ ಇವು ಎದುರಿಸುತ್ತಿರುವ ಮುಖ್ಯ ಸಮಸ್ಯೆಯನ್ನು ಸಮಾಜವಾದ ಮತ್ತು ಸಮಾಜವಾದಿಗಳು ಗುರುತಿಸದೇ ಇರುವ ಕಾರಣಕ್ಕೆ ಇಲ್ಲೇ ನಮಗೆ ತಿಳಿಯುವುದು ಏನೆಂದರೆ, ಸಮಾಜವಾದದ ಮತ್ತು ಸಮಾಜವಾದಿಗಳ ಮುಖ್ಯ ಮಿತಿ. ಇದರ ಜೊತೆಗೆ ಆಲೋಚಿಸಬೇಕಾದ ಸಂಗತಿ ಎಂದರೆ ಸಮಾಜವಾದಿ ಅರಿವನ್ನು ನಾವು ಹೇಗೆ ಬಲಪಡಿಸಬೇಕು ಎನ್ನುವುದು. ಸದ್ಯಕ್ಕೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಸಮಾಜವಾದ ಮತ್ತು ಸಮಾಜವಾದಿ ಎನ್ನುವುದು ಮ್ಯೂಸಿಯಂನ ಪ್ರದರ್ಶನದ ವಸ್ತುವಾಗಿದೆ. ಅದನ್ನು ನೋಡಬಹುದು. ಬಳಸಲು ಆಗುವುದಿಲ್ಲ ಮತ್ತು ಬಳಸಲು ಬರುವುದಿಲ್ಲ"[೬] ಎಂದು ಹೇಳಿರುವ ಮಾತುಗಳು ವಾಸ್ತವಕ್ಕೆ ಹತ್ತಿರವಾಗಿರುವುದನ್ನು ಗಮನಿಸಬಹುದಾಗಿದೆ.

ಒಟ್ಟಾರೆಯಾಗಿ ಸಮಾಜವಾದಿ ಸಿದ್ಧಾಂತ ಮತ್ತು ಗೋಪಾಲಗೌಡರ ಚಿಂತನೆಗಳು ಕರ್ನಾಟಕದ ಸಮಾಜ ಮತ್ತು ರಾಜಕಾರಣವನ್ನು, ರಾಮಮನೋಹರ ಲೋಹಿಯಾ ಅವರ ಚಿಂತನೆಗಳು ಭಾರತೀಯ ರಾಜಕಾರಣವನ್ನು ವ್ಯಾಪಕವಾಗಿ ಪ್ರಭಾವಿಸಿವೆ. ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣವನ್ನು ಬಹುವಾಗಿ ಪ್ರಭಾವಿಸಿದ ಸಿದ್ಧಾಂತಗಳಲ್ಲಿ ಸಮಾಜವಾದಿ ಸಿದ್ಧಾಂತ ಮುಖ್ಯವಾದದ್ದು. ಹಲವು ಇತಿಮಿತಿಗಳ ನಡುವೆಯೂ ಇಂದಿಗೂ ಭಾರತ ಮತ್ತು ಕರ್ನಾಟಕದ ರಾಜಕಾರಣವನ್ನು ಸಮಾಜವಾದಿ ಸಿದ್ಧಾಂತ ಪ್ರಭಾವಿಸುತ್ತಲೇ ಇದೆ ಎಂಬುದನ್ನು ನಾವೆಲ್ಲರು ಒಪ್ಪಿಕೊಳ್ಳಲೇಬೇಕು.

ಶಾಂತವೇರಿ ಗೋಪಾಲಗೌಡರು ಅಂದಿನ ಮೈಸೂರು ಸರ್ಕಾರದ ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಶಾಸಕರಾಗಿ ಭಾಗವಹಿಸಿದ ಸಂದರ್ಭದಲ್ಲಿ ತಾವು ಆರಿಸಿಬಂದ ಕ್ಷೇತ್ರದ ಬಗ್ಗೆ ಮತ್ತು ಒಟ್ಟು ಕನ್ನಡಿಗರ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದರ ಬಗ್ಗೆ ಧ್ವನಿ ಎತ್ತಿರುವುದನ್ನು ಕಾಣಬಹುದಾಗಿದೆ. ತಮ್ಮ ಜನರಬಗೆಗಿನ ಕುಂದುಕೊರತೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಗೋಪಾಲಗೌಡರು ತಳೆದ ನಿಲುವು ಶ್ಲಾಘನೀಯವಾಗಿದೆ. ಬಹುಶಃ ಗೋಪಾಲಗೌಡರು ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡಿರುವುದರಿಂದ ಇಂತಹ ನಿರ್ಭಿಡೆಯಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಕಾರಣವೆನ್ನಬಹುದಾಗಿದೆ. ಈ ಹಿನ್ನೆಲೆಯಲ್ಲಿ ಗೋಪಾಲಗೌಡರು ವಿಧಾನಸಭೆ ಮತ್ತು ವಿಧಾನಪರಿಷತ್ತುಗಳಲ್ಲಿ ತಮ್ಮ ಅಹವಾಲುಗಳನ್ನು

ಮಂಡಿಸಿರುವುದನ್ನು ಇಲ್ಲಿ ಸಾಂದರ್ಭಿಕವಾಗಿ ಗಮನಿಸಬಹುದಾಗಿದೆ. ಸಮಾಜವಾದಿ ಸಿದ್ಧಾಂತದ ಪ್ರಸ್ತುತತೆಯನ್ನು ಕುರಿತು ಚರ್ಚಿಸುವಾಗ ಅವರು ಅಂದು ಮಂಡಿಸಿದ ನಿಲುವುಗಳು, ಅಭಿಪ್ರಾಯಗಳು ಯಾವ ಮಹತ್ವವನ್ನು ಪಡೆದಿದ್ದವು ಎನ್ನುವುದನ್ನು ತಿಳಿದುಕೊಳ್ಳಬಹುದಾಗಿದೆ. ಸರಳವಾಗಿ ಹೇಳಬೇಕೆಂದರೆ ಇಂದಿನ ರೈತರು, ಹಿಂದುಳಿದವರು, ನೆಮ್ಮದಿಯ ಜೀವನ ಅನುಭವಿಸುವುದರ ಹಿಂದೆ ಸಮಾಜವಾದಿ ಚಳವಳಿಗಳ, ಸಮಾಜವಾದಿ ಸಿದ್ಧಾಂತದ ಪಾತ್ರ ಮಹತ್ವವಾದುದು ಎಂದು ಹೇಳಿದರೆ ತಪ್ಪಾಗಲಾರದು.

ಶಾಸನಸಭೆಯಲ್ಲಿ ಜನವರಿ ೧೬, ೧೯೫೪ರಂದು ಶಾಂತವೇರಿ ಗೋಪಾಲಗೌಡರು ತಮ್ಮ ಕಾರ್ಯಕ್ಷೇತ್ರವಾದ ಮಲೆನಾಡಿನ ಜನತೆಯ ಕುಂದುಕೊರತೆಗಳ ಬಗ್ಗೆ ಧ್ವನಿಯೆತ್ತುತ್ತಾರೆ. ಮಲೆನಾಡು ಪ್ರದೇಶ ತನ್ನದೇ ಆದ ಪ್ರಾಕೃತಿಕ ವೈವಿಧ್ಯತೆಯನ್ನು ಹೊಂದಿರುವ ಬಗ್ಗೆ ಮನವರಿಕೆ ಮಾಡಿಕೊಡುತ್ತಾರೆ. ಆ ಪ್ರದೇಶದಲ್ಲಿ ಮಳೆ ಹೆಚ್ಚು, ಅಲ್ಲಿಯ ಜನರು ವಿಶೇಷವಾಗಿ ಮಲೇರಿಯಾ ರೋಗದಿಂದ ಬಳಲುತ್ತಾರೆ. ಉತ್ತಮವಾದ ಸಾರಿಗೆ-ಸಂಪರ್ಕಗಳಿಂದ ಆ ಪ್ರದೇಶವು ವಂಚಿತವಾಗಿದೆ. ಮಲೆನಾಡಿನ ಬಗೆಗೆ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಯಾವ ಬಗೆಯ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲದಿರುವುದು ಖೇದಕರ. ಈ ಮಲೆನಾಡು ಪ್ರಾಂತ್ಯವು ಕಾಫಿ, ಏಲಕ್ಕಿ, ವನ್ಯಸಂಪತ್ತು ಮತ್ತು ಇತರ ಸಂಪತ್ತುಗಳಿಗೆ ತವರುಮನೆಯಾಗಿದೆ. ಮಲೆನಾಡಿನ ಹಿತದೃಷ್ಟಿಯಿಂದ 'ಮಲೆನಾಡು ಅಭಿವೃದ್ಧಿ'ಯು ಅಗತ್ಯವಾದುದೆಂದು ತಮ್ಮ ನಿಲುವನ್ನು ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

ತೆರಿಗೆ ಪದ್ಧತಿಯು ಸಮರ್ಪಕವಾಗಿದ್ದಲ್ಲಿ ಅದನ್ನು ಗೌರವಿಸಬೇಕಾದುದು ಪ್ರಜೆಗಳ ಕರ್ತವ್ಯವಾಗಿರುತ್ತದೆ. ಅನವಶ್ಯಕ ಮತ್ತು ಜನಸ್ನೇಹಿಯಲ್ಲದ ತೆರಿಗೆಗಳು ಜನರ ನೋವಿಗೆ ಮತ್ತು ಆಕ್ರೋಶಕ್ಕೆ ಕಾರಣವಾಗುತ್ತವೆ. ಮಾರ್ಚ್ ೧೯೫೪ರಲ್ಲಿ ತೆರಿಗೆ ನೀತಿಯನ್ನು ಕುರಿತು ವಿಧಾನಸಭೆಯಲ್ಲಿ ಚರ್ಚಿಸುವ ಸಂದರ್ಭದಲ್ಲಿ ಗೋಪಾಲಗೌಡರು ವ್ಯಕ್ತಪಡಿಸಿದ ಅಭಿಪ್ರಾಯವು ಜನಪರವಾಗಿದ್ದುದನ್ನು ಇಲ್ಲಿ ನೆನೆಯಬಹುದು. ಜನರಿಗೆ ಹೊರೆಯಾಗುವ ತೆರಿಗೆಯನ್ನು ಮುಖ್ಯಮಂತ್ರಿಗಳಿಗೆ ತಿಳಿಸಿ ಅದನ್ನು ಕಾವ್ಯಾತ್ಮಕವಾಗಿ ಖಂಡಿಸುವುದನ್ನು ಈ ಮುಂದಿನ ಪದ್ಯವು ತಿಳಿಸುತ್ತದೆ.

"ಅಟ್ಟ ಏರಿದ ಮೇಲೆ ಏಣಿಯ ಹಂಗೇನು?
ಗದ್ದುಗೆಯನ್ನೇರಿದ ಮೇಲೆ ಜನರ ಹಂಗೇನು?
ನಾನು ಸರಕಾರ; ನೀ ಪ್ರಜೆ!
ಕೊಡು ತೆರಿಗೆ ಇಲ್ಲದಿರೆ ನಡೆ ಸೆರೆಮನೆಗೆ
ಎಂದನಾ ಮೈಸೂರ ಮುಖ್ಯಮಂತ್ರಿ"

– ಎಂಬ ಮಾತುಗಳಲ್ಲಿ ಗೋಪಾಲಗೌಡರು ಮುಖ್ಯಮಂತ್ರಿಗಳ ತೆರಿಗೆ ನೀತಿಯನ್ನು ಟೀಕಿಸಿರುವುದನ್ನು ಇಲ್ಲಿ ಮನಗಾಣಬಹುದಾಗಿದೆ.[೭]

ವಿಧಾನಸಭೆಯ ಚರ್ಚೆಯ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರು ಜೈಲಿನ ಖೈದಿಗಳ ಬಗೆಗೆ ಮಾತನಾಡುವಾಗ ಅವರ ಮಾನವಪರ ಕಾಳಜಿಯು ಅಭಿವ್ಯಕ್ತವಾಗಿರುವುದು ಕಂಡುಬರುತ್ತದೆ.

ಅನೇಕ ಜನಪರ ಹೋರಾಟಗಳಲ್ಲಿ, ಚಳವಳಿಗಳಲ್ಲಿ ಭಾಗವಹಿಸಿದ್ದುದರಿಂದ ಗೋಪಾಲಗೌಡರು ಜೈಲಿನವಾಸ ಅನುಭವಿಸುವ ಸಂದರ್ಭಗಳು ಒದಗಿಬಂದಿರುತ್ತವೆ. ಆ ಹಿನ್ನೆಲೆಯಲ್ಲಿ ಜೈಲಿನ ದುರವಸ್ಥೆಯನ್ನು ಕುರಿತು, "ನನ್ನ ಅನುಭವದಲ್ಲಿ ಕಂಡುಬಂದ ಹಾಗೆ ನಮ್ಮ ಜೈಲುಗಳಲ್ಲಿ ಕೈದಿಗಳಿಗೆ ಕೊಡುವ ರಾಗಿಮುದ್ದೆ ಮತ್ತು ಇತರ ಆಹಾರವನ್ನು ಸಾಮಾನ್ಯವಾಗಿ ನಾಯಿಗಳೂ ತಿನ್ನುವುದಿಲ್ಲ. ಅವರು ತಮ್ಮ ಅಪರಾಧಕ್ಕೆ ಶಿಕ್ಷೆಯನ್ನು ಅನುಭವಿಸುವುದಕ್ಕೆ ಅಲ್ಲಿ ಸೇರಿರುತ್ತಾರೆ ನಿಜ. ಆದರೂ ಕೂಡ ಮಾನವೀಯತೆಯ ದೃಷ್ಟಿಯಿಂದ ಯಾವುದೇ ಸರಕಾರ ಆಗಲಿ ಅವರನ್ನು ಆ ರೀತಿ ಕುನ್ನಿಗಳಿಗಿಂತ ಕಡೆಯಾಗಿ ನೋಡಿಕೊಳ್ಳುತ್ತಿರುವುದು ತೀರ ನಿರ್ದಯ, ನಿರ್ಲಕ್ಷ್ಯ ಮತ್ತು ಅಮಾನುಷತೆಯನ್ನು ತೋರಿಸುತ್ತದೆ. ಆದ್ದರಿಂದ ಅವರಿಗೆ ಕಾನೂನು ರೀತ್ಯಾ ಏನು ಕೊಡಬೇಕು ಎಂದಿದೆಯೋ ಅಷ್ಟನ್ನು ಪೂರ್ತಿ ಜೈಲಿನ ಅಧಿಕಾರಿಗಳು ಕೊಡುವಂತೆ ನೋಡಿಕೊಳ್ಳಬೇಕು"[೮] – ಎಂದು ತಮ್ಮ ಅಹವಾಲನ್ನು ಮಂಡಿಸುವುದನ್ನು ಕಾಣುತ್ತೇವೆ.

ಉಳುವ ರೈತರಿಗೆ ಭೂಮಿಯನ್ನು ನೀಡಬೇಕೆನ್ನುವ ವಾದವನ್ನು ರೈತಚಳವಳಿಗಳು, ಸಮಾಜವಾದಿ ಚಳವಳಿಗಳು ಪ್ರಬಲವಾಗಿ ಮಂಡಿಸಿರುವುದನ್ನು ಗಮನಿಸಬಹುದು. ರೈತಚಳವಳಿಯ ಒಂದು ಭಾಗವಾದ ಭೂಮಿಯ ಒಡೆತನ ಕುರಿತಾದ ಗೋಪಾಲಗೌಡರ ನಿಲುವುಗಳು ಕ್ರಿ.ಶ. ೧೯೫೦ರ ದಶಕದಲ್ಲಿ ಮಾತ್ರವಲ್ಲ ಅವು ಇಂದಿಗೂ ಪ್ರಸ್ತುತವಾದವುಗಳೇ ಎನ್ನಬಹುದಾಗಿದೆ. ಏಕೆಂದರೆ ಭೂಮಿಯ ಒಡೆತನದ ಪ್ರಶ್ನೆ ಬಹುಹಿಂದಿನಿಂದಲೂ ಒಂದು ಚರ್ಚೆಯ ವಿಷಯವಾಗಿ ಪರಿಣಮಿಸಿದೆ. ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ಎಂಬ ತತ್ವದ ಹಿನ್ನೆಲೆಯಲ್ಲಿ ನೋಡಿದಾಗ ಭೂಮಿಯ ಮೇಲಿರುವ ಪ್ರತಿಯೊಬ್ಬ ಮನುಷ್ಯನಿಗೂ ಬದುಕುವ ಹಕ್ಕಿದೆ. ತನ್ನದೇ ಆದ ಉಳುವ ಭೂಮಿಯನ್ನು ಹೊಂದುವ ಹಕ್ಕಿದೆ ಎನ್ನುವ ಚಿಂತನೆಯು ವಾಸ್ತವವಾದುದಾಗಿದೆ. ಆದರೆ ಈ ತತ್ವದ ಚಿಂತನೆ ಮತ್ತು ಅನುಷ್ಠಾನಗಳು ಮಾತ್ರ ಬ್ರಿಟಿಷರ ನಂತರದ ಭಾರತದಲ್ಲಿ, ಅದರಂತೆ ಕರ್ನಾಟಕದಲ್ಲಿ ಮುನ್ನೆಲೆಗೆ ಬಂದದ್ದು ಮಾತ್ರ ರೈತಚಳವಳಿ ಮತ್ತು ಸಮಾಜವಾದಿ ಚಳವಳಿಗಳ ಪ್ರಭಾವದಿಂದ ಎನ್ನುವುದರಲ್ಲಿ ಸಂಶಯವಿಲ್ಲ. ನನ್ನ ಅಭಿಪ್ರಾಯದಲ್ಲಿ ಭೂಮಿ ಒಂದು ಆಸ್ತಿಯ ಪಟ್ಟಿಯಲ್ಲಿ ಸೇರಿರುವುದೂ ತಪ್ಪು. ಭೂಮಿಯನ್ನು ಆಸ್ತಿಪಟ್ಟಿಯಿಂದ ಬಂಧಮುಕ್ತ ಮಾಡಬೇಕು. ಅದು ಉತ್ಪತ್ತಿಯ ಸಾಧನವಾಗಿರುವುದರಿಂದ ಯಾರು ಭೂಮಿಯನ್ನು ಉಳುಮೆ ಮಾಡುತ್ತಾರೋ, ಯಾರು ಭೂಮಿಯ ಮೇಲೆ ಕೃಷಿ ಮಾಡಿ, ಕೆಲಸಮಾಡಿ ಅದರಿಂದ ಉತ್ಪನ್ನವನ್ನು ಮಾಡುತ್ತಾರೋ ಆ ಉತ್ಪನ್ನ ಅವರ ಸ್ವತ್ತು ಆಗಿರಬೇಕು; ಭೂಮಿಯು ಮಾರತಕ್ಕ ಮತ್ತು ಕೊಳ್ಳತಕ್ಕಂಥ ಒಂದು ವಸ್ತುವಾಗಿರಬಾರದು' ಎಂಬುದು ಶಾಂತವೇರಿ ಗೋಪಾಲಗೌಡರ ವಾದವಾಗಿದೆ.

ಅರಣ್ಯಪ್ರದೇಶ ಮತ್ತು ಅರಣ್ಯಪ್ರದೇಶದಿಂದ ಉತ್ಪನ್ನವಾಗುವ ವಸ್ತುಗಳು ವಾಸ್ತವವಾಗಿ ಸರ್ಕಾರಕ್ಕೆ ಸೇರಿದವುಗಳಾಗಿರುತ್ತವೆ. ಆದರೆ ಅರಣ್ಯ ಇಲಾಖೆಯವರು ವಿವಿಧ ಕಾರಣಗಳನ್ನು ನೀಡಿ ಅರಣ್ಯವನ್ನು ಬೆಳೆಸುವುದರ ಬದಲಿಗೆ ಪರಿಸರವನ್ನು ಬರಿದು ಮಾಡುತ್ತಾರೆ ಎಂದು ಗೋಪಾಲಗೌಡರು ಆತಂಕ

ವ್ಯಕ್ತಪಡಿಸುತ್ತಾರೆ. ಮಲೆನಾಡಿನ ಮಂಡಗದ್ದೆ ಪರಿಸರದಲ್ಲಿ ಎತ್ತ ನೋಡಿದರೂ ಅರಣ್ಯಭೂಮಿಯು ನಾಶವಾಗುತ್ತಿರುವುದರ ಬಗ್ಗೆ ವಿಧಾನಸಭೆಯಲ್ಲಿ ತಮ್ಮ ಧ್ವನಿಯನ್ನೆತ್ತುತ್ತಾ ಸರ್ಕಾರಕ್ಕೆ ವಾಸ್ತವತೆಯ ಅರಿವನ್ನು ಮೂಡಿಸಲು ಪ್ರಯತ್ನಿಸುತ್ತಾರೆ. ಭದ್ರಾವತಿಯ ಸುತ್ತಮುತ್ತ ಮೂವತ್ತು-ನಲವತ್ತು ಮೈಲು ಇದ್ದಂತಹ ಕಾಡನ್ನೆಲ್ಲ ಕಡಿದು ಭದ್ರಾವತಿಯ ಕಾಗದದ ಕಾರ್ಖಾನೆಗೆ ಸಾಗಿಸುತ್ತಿರುವುದು ಅವರ ಗಮನಕ್ಕೆ ಬರುತ್ತದೆ. ಅರಣ್ಯ ಇಲಾಖೆಯವರು ತಮ್ಮ ಕಾಡಿನ ಮರಗಳನ್ನು ಕಾರ್ಖಾನೆಗೆ ನೀಡಿ ಎರಡೂವರೆ ಕೋಟಿ ರೂಪಾಯಿ ಲಾಭ ಬಂದಿತೆಂದು ಸಂತಸಪಟ್ಟಿದ್ದಾರೆ, ಅದು ಸರಿಯಲ್ಲವೆಂದು ವಿಧಾನಸಭೆಯಲ್ಲಿ ಗೋಪಾಲಗೌಡರು ಅಲ್ಲಗಳೆದಿರುವುದನ್ನು ಕಾಣಬಹುದಾಗಿದೆ. ಅರಣ್ಯಗಳಲ್ಲಿ ಬೆಲೆಬಾಳುವ ಮರಗಳನ್ನು ಲಂಚದ ಆಮಿಷದ ಕಾರಣದಿಂದ ಖಾಸಗಿ ವ್ಯಕ್ತಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಿರುವುದರ ವಿರುದ್ಧವೂ ಗೋಪಾಲಗೌಡರು ಧ್ವನಿಯೆತ್ತುತ್ತಾರೆ. ಅವರ ಈ ಎಲ್ಲ ವಾದಗಳನ್ನು ನೋಡಿದಾಗ ಸರ್ಕಾರಕ್ಕೆ ಸೇರಿದ ಸಂಪತ್ತು ಖಾಸಗಿ ವ್ಯಕ್ತಿಗಳ ಪಾಲಾಗಿ ಹೋಗುವುದಕ್ಕೆ ಅವರ ವಿರೋಧವಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ.

ವಿಧಾನಸಭೆಯಲ್ಲಿ ಗೋಪಾಲಗೌಡರು ಈವರೆಗೆ ಚರ್ಚೆಗೆ ಎತ್ತಿಕೊಂಡಿರುವ ಸಮಸ್ಯೆಗಳ ಕೆಲವು ಮಾದರಿಗಳಷ್ಟೇ ಆಗಿವೆ. ಪ್ರಾಥಮಿಕ ಶಿಕ್ಷಣ, ಆಡಳಿತಭಾಷೆಯಾಗಿ ಕನ್ನಡ, ರಾಷ್ಟ್ರೀಕೃತ ಸಾರಿಗೆ, ಬೀಡಿ ಕೈಗಾರಿಕೆ, ಜೈಲುಸುಧಾರಣೆ, ಮಹಾಜನ್ ಆಯೋಗ, ರಾಷ್ಟ್ರೀಯ ರಜಾದಿನಗಳು, ಪಠ್ಯಪುಸ್ತಕಗಳು, ಭೂದಾನ ಚಳವಳಿ, ಸಮಾಜದಲ್ಲಿ ಧಾರ್ಮಿಕ ಸಂಸ್ಥೆಗಳು, ನೀರಾವರಿ, ಬ್ಯಾಂಕ್ ರಾಷ್ಟ್ರೀಕರಣ, ಬೆಲೆಗಳ ಸ್ಥಿರೀಕರಣ, ಗೋಲಿಬಾರ್, ದಲಿತರು, ಪೋಲೀಸರು, ನ್ಯಾಯಾಂಗ ವ್ಯವಸ್ಥೆ, ಪಾನನಿರೋಧ, ಕರ್ನಾಟಕದ ಗಡಿಭಾಗಗಳು, ಅಭಾವ ಪರಿಸ್ಥಿತಿ, ಬರಗಾಲದ ಸಮಸ್ಯೆ, ಅರಣ್ಯಭೂಮಿ, ಪೋಲೀಸ್ ದೌರ್ಜನ್ಯ, ಗೇಣಿದಾರರ ಸಂಕಷ್ಟ, ಜನತೆ ಮತ್ತು ಜನಭಾಷೆಗಳು, ಜಾತಿ ಮತ್ತು ವರ್ಗರಹಿತ ಸಮಾಜ, ರೈತರ ಹಕ್ಕು, ಮಾತೃಭಾಷೆಯ ಹಕ್ಕು –ಇವೇ ಮುಂತಾದ ಇನ್ನೂ ಹಲವಾರು ವಿಷಯಗಳ ಕಡೆಗೆ ಗಮನಹರಿಸಿದ್ದಾರೆ. ಗೋಪಾಲಗೌಡರು ಈವರೆಗೆ ಮಂಡಿಸಿದ ವಿಷಯಗಳು ಸಮಾಜವಾದದ ಸಿದ್ಧಾಂತಗಳ ಹಿನ್ನೆಲೆಯಲ್ಲಿಯೇ ರೂಪಿತವಾದವುಗಳು ಎನ್ನುವುದು ಸತ್ಯಕ್ಕೆ ಹತ್ತಿರವಾದ ಮಾತಾಗಿದೆ.

ವಸಹಾತೋತ್ತರ ಭಾರತದ ಸಂದರ್ಭದಲ್ಲಿ, ಅದರಂತೆ ಕರ್ನಾಟಕದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯವೆನ್ನುವುದು ಮುನ್ನೆಲೆಗೆ ಬಂದಿರುವ ವಿಚಾರವಾಗಿದೆ. ಸಾಮಾಜಿಕ ಅಸಮಾನತೆ ಇಂದು ನಿನ್ನೆಯ ಸಮಸ್ಯೆಯಾಗಿಲ್ಲ. ಅದು ಪ್ರಾಚೀನ ಕಾಲದಿಂದಲೂ ಮನುಕುಲವನ್ನು ಆವರಿಸಿರುವ ಭೂತದಂತೆ ಕಾಡುವ ಸಮಸ್ಯೆಯಾಗಿದೆ. ಲಿಂಗತಾರತಮ್ಯ, ಜಾತಿ ತಾರತಮ್ಯ, ವರ್ಗ ತಾರತಮ್ಯ, ವರ್ಣತಾರತಮ್ಯಗಳು ಇಪ್ಪತ್ತೊಂದನೆಯ ಶತಮಾನದ ವೈಜ್ಞಾನಿಕ, ವೈಚಾರಿಕ ಯುಗದಿಂದಲೂ ಹೊರತಾಗಿಲ್ಲ. ಅವುಗಳು ಇಂದಿಗೂ ಅಸ್ತಿತ್ವದಲ್ಲಿವೆ. ಅವುಗಳ ಪ್ರಭಾವ, ಪರಿಣಾಮಗಳು ಕಡಿಮೆಯಾಗಿರಬಹುದು. ವರಮಾನ, ಬಂಡವಾಳ, ಉತ್ಪಾದನೆಗಳು ಒಂದು ನಿಟ್ಟಿನಲ್ಲಿ ಈ

ತೆರನಾದ ತಾರತಮ್ಯಗಳಿಗೆ ಮೂಲವೆನ್ನಬಹುದಾಗಿದೆ. ಕ್ರಿ.ಶ. ೧೨ನೆಯ ಶತಮಾನದ ಚಿಂತಕರು ದಾರ್ಶನಿಕರು ವರ್ಗಪ್ರಜ್ಞೆಯ ಬಗೆಗೆ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಬಸವಣ್ಣನವರು ತಮ್ಮದೊಂದು ವಚನದಲ್ಲಿ

"ಹಾಲನೇಮ, ಹಾಲ ಕೆನೆಯ ನೇಮ
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ
ಬೆಣ್ಣೆಯ ನೇಮ ಬೆಲ್ಲದ ನೇಮ
ಅಂಬಲಿಯ ನೇಮದವರಾರನೂ ಕಾಣೆ
ಕೂಡಲಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ನಮ್ಮ ಮಾದಾರ ಚನ್ನಯ್ಯ"

–ಎಂದು ತಿಳಿಸಿದ್ದಾರೆ. ಈ ವಚನದ ವಿಶ್ಲೇಷಣೆಯನ್ನು ಟಿ.ಆರ್. ಚಂದ್ರಶೇಖರ್ ಅವರು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಿರುವುದನ್ನು ಕಾಣುತ್ತೇವೆ. "ಹಾಲು, ಹಾಲ ಕೆನೆ, ಕಿಚ್ಚಡಿ, ಬೆಲ್ಲ, ಬೆಣ್ಣೆಗಳು ಉಳ್ಳವರ ಸಂಗತಿಯಾದರೆ, ಅಂಬಲಿಯು ಇಲ್ಲದವರ ಸಂಗತಿಯಾಗಿದೆ"[೧೦] ಎಂದು ವ್ಯಾಖ್ಯಾನಿಸಿದ್ದಾರೆ. ಈ ಎಲ್ಲ ಸಂಗತಿಗಳನ್ನು ಗಮನಿಸಿದಾಗ ಎಲ್ಲೆಲ್ಲಿ ಜಾತಿ ತಾರತಮ್ಯವಿರುತ್ತದೆಯೋ, ಎಲ್ಲೆಲ್ಲಿ ವರ್ಗ ತಾರತಮ್ಯವಿರುತ್ತದೆಯೋ ಅಲ್ಲಲ್ಲಿ ಸಮಾಜವಾದದ ಸಿದ್ಧಾಂತದ ಚಳವಳಿಗಳು, ಹೋರಾಟಗಳು ಹುಟ್ಟಿಕೊಳ್ಳುತ್ತವೆ. ಈ ನಿಟ್ಟಿನಲ್ಲಿ ನೋಡಿದಾಗ ಮಲೆನಾಡಿನ ಪರಿಸರ, ಇಲ್ಲವೆ ಕರ್ನಾಟಕದ ಒಟ್ಟು ಪರಿಸರದಲ್ಲಿ ಇಂಥ ಅಸಮಾನತೆಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಪಡೆದುಕೊಳ್ಳುತ್ತಲೇ ಸಾಗಿವೆ. ಇವುಗಳು ಎಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತವೆಯೋ ಅಲ್ಲಿಯವರೆಗೆ ಸಮಾಜವಾದದ ಸಿದ್ಧಾಂತ ಮತ್ತು ಆ ಸಿದ್ಧಾಂತದ ಪ್ರತಿಪಾದಕರು, ನಾಯಕರು ಅಸ್ತಿತ್ವದಲ್ಲಿ ಇರುತ್ತಾರೆ ಎಂಬ ಅಭಿಪ್ರಾಯಕ್ಕೆ ಬಂದುನಿಲ್ಲಬಹುದಾಗಿದೆ.

ಶಾಂತವೇರಿ ಗೋಪಾಲಗೌಡರ ವ್ಯಕ್ತಿತ್ವವು ಅವರ ಸಮಕಾಲೀನ ಮತ್ತು ಅವರ ನಂತರದ ಕನ್ನಡ ಸಾಹಿತಿಗಳಲ್ಲಿ, ಚಿಂತಕರಲ್ಲಿ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಗೋಪಾಲಗೌಡರನ್ನು ಒಪ್ಪಿಕೊಳ್ಳುವುದೆಂದರೆ ಒಂದರ್ಥದಲ್ಲಿ ಅವರ ಸಿದ್ಧಾಂತಗಳನ್ನು ಒಪ್ಪಿಕೊಂಡಂತೆಯೇ ಎಂಬುದು ಒಂದು ಬೀಸು ಹೇಳಿಕೆಯಾದರೂ ಅದು ಸತ್ಯಕ್ಕೆ ಹತ್ತಿರವಾದುದು. ಪ್ರಚಂಡ ವಾಗ್ಮಿತ್ವ, ಸರಳ ಬದುಕು, ಬದುಕಿನ ನಿಷ್ಠುರತೆಯ ನಿಲುವುಗಳು, ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಯುವನಾಯಕ –ಇನ್ನೂ ಹಲವಾರು ಅವರ ಗುಣಗಳು, ಬದುಕಿನ ನೀತಿನಿಯಮಗಳು ಇತರರಿಗೆ ಸ್ಫೂರ್ತಿಯಾಗಿರಲು ಸಾಕು. ಎಂ.ನಾಗಪ್ಪ, ಕೆ. ಕೃಷ್ಣಗೋಪಾಲ್, ಕೆ.ಎಂ. ರುದ್ರಪ್ಪ, ವೀರಣ್ಣ ತಿಮ್ಮಾಜಿ, ಉಳ್ಳೂರು ಸುಬ್ಬರಾವ್ ಮುಂತಾದವರಿಗೆ ಗೋಪಾಲಗೌಡರ ಸಮಾಜವಾದಿ ಸಿದ್ಧಾಂತಗಳು ಅಪೇಕ್ಷಣೀಯವಾಗಿದ್ದವೆಂದು ತೋರುತ್ತದೆ. ಅವರ ಒಡನಾಡಿಗಳಾದ ಕುವೆಂಪು, ಪಿ.ಲಂಕೇಶ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಗೋಪಾಲಕೃಷ್ಣ ಅಡಿಗ, ಕಾಗೋಡು ತಿಮ್ಮಪ್ಪ, ಬೆಸಗರಹಳ್ಳಿ

ರಾಮಣ್ಣ, ಜಿ. ಸದಾಶಿವರಾವ್, ಎಸ್. ಬಂಗಾರಪ್ಪ, ಡಿ. ದೇವರಾಜ ಅರಸು, ಇನ್ನೂ ಮುಂತಾದ ಹಲವಾರು ಸಾಹಿತಿಗಳು, ರಾಜಕಾರಣಿಗಳು ಗೋಪಾಲಗೌಡರ ಸಮಾಜವಾದಿ ಸಿದ್ಧಾಂತವನ್ನು ಮೆಚ್ಚಿಕೊಂಡವರೆಂದೇ ಹೇಳಬಹುದಾಗಿದೆ. ಎಸ್. ನಿಜಲಿಂಗಪ್ಪನವರು "ಶಾಂತವೇರಿ ಗೋಪಾಲಗೌಡರ ಬದುಕು, ನಿಷ್ಠೆಯಿಂದ ಕೂಡಿದ ಹೋರಾಟದ ಜೀವನ. ಜನತೆಯ ಸೇವೆಯೇ ತಮ್ಮ ಜೀವನದ ಧ್ಯೇಯವೆಂದು ತಳೆದ ವ್ಯಕ್ತಿ ಅವರು. ಸತ್ಯವನ್ನು ಬಿಟ್ಟು ಸ್ವಲ್ಪವೂ ಅಲುಗದೆ ಅವರು ಬಾಳಿದರು. ಬಡವರು, ದೀನರು, ಕೂಲಿಕಾರರ ಸೇವೆಯು ಅತಿ ಪವಿತ್ರವೆಂದು ತಿಳಿದು ಅವರ ಸೇವೆಗಾಗಿ ದುಡಿದವರು. ಸಾರ್ವಜನಿಕ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಯಾರಿಗೂ ಕಡಿಮೆಯಿಲ್ಲದಂತೆ ಹೋರಾಟ ನಡೆಸಿದರು. ಕನ್ನಡಕ್ಕಾಗಿ ಅದ್ವಿತೀಯರಾಗಿ ದುಡಿದರು. ಸಾರ್ವಜನಿಕ ಸೇವೆಯಲ್ಲಿ ನಿರ್ಭೀತಿ, ಸೇವಾಕಾಂಕ್ಷೆ ಇವುಗಳನ್ನು ತಳಹದಿಯಾಗಿ ಇಟ್ಟುಕೊಂಡಿದ್ದರು ಎಂದು ಅಭಿಮಾನಪೂರ್ವಕವಾಗಿ ಹೇಳಿರುವ ಮಾತುಗಳನ್ನು ಇಲ್ಲಿ ಗಮನಿಸಬಹುದು. ಈ ಎಲ್ಲ ಮಾತುಗಳ ಹಿಂದೆ ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಸಿದ್ಧಾಂತದ ಆದರ್ಶಗಳು, ನಿಲುವುಗಳು ಅಂತರ್ಗತವಾಗಿದ್ದವು ಎಂದು ಮತ್ತೆ ಬಿಡಿಸಿ ಹೇಳಬೇಕಾದ ಅಗತ್ಯವಿಲ್ಲವೆನ್ನಿಸುತ್ತದೆ. ಯು.ಆರ್. ಅನಂತಮೂರ್ತಿಯವರು "ಗೌಡರಿಗೆ ದೀರ್ಘವಾಗಿ ಮಾತಾಡುವುದು ಅಭ್ಯಾಸವಾದದ್ದಕ್ಕೆ ಇನ್ನೊಂದು ಕಾರಣವಿದೆ. ಅವರು ಇಡೀ ಜೀವನವನ್ನು ಕಳೆಯುತ್ತಿರುವುದು ರೈತರ ಜೊತೆ. ಡಾರ್ವಿನ್, ಮಾರ್ಕ್ಸ್, ರಸೆಲ್, ಲೋಹಿಯಾ ತಾನು ಓದಿದ ಎಲ್ಲವನ್ನೂ ರೈತರಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳಬೇಕೆಂದು ತನ್ನ ವಾಗ್ಮಿತೆ ಬೆಳೆಸಿಕೊಂಡವರು ಗೌಡರು. ಯಾವ ಒಂದು ಶಬ್ದದಲ್ಲೂ ತನ್ನ ವಿಚಾರವನ್ನು ಭಟ್ಟಿಯಿಳಿಸಲು ಪ್ರಯತ್ನಿಸದೆ, ತನ್ನೆದುರಿಗಿರುವ ಜನಕ್ಕೆ ಅರ್ಥವಾಗಲೆಂದು, ಶಬ್ದಗಳಿಂದ ಅವರು ದಿಗಿಲು ಬೀಳದಿರಲೆಂದು ಎಲ್ಲವನ್ನೂ ಅತ್ಯಂತ ಸರಳವಾಗಿ ಬಿಡಿಸಿ ಹೇಳುವುದು ಇವರಿಗೆ ಅಭ್ಯಾಸವಾಗಿದೆ." -ಎಂದು ಹೇಳುವ ಮೂಲಕ ಶಾಂತವೇರಿ ಗೋಪಾಲಗೌಡರ ವ್ಯಕ್ತಿತ್ವವನ್ನು ಕುರಿತು ಪ್ರಶಂಸೆಯ ಮಾತುಗಳನ್ನಾಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಈ ನಿಟ್ಟಿನಲ್ಲಿ ಗೋಪಾಲಗೌಡರ ಸಮಾಜವಾದಿ ಸಿದ್ಧಾಂತವನ್ನು ೨೧ನೆಯ ಶತಮಾನದಲ್ಲಿಯೂ ಕುತೂಹಲದಿಂದ ಗಮನಿಸುವ ಮನಸ್ಸುಗಳಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.[೧೧]

ಯುರೋಪಿನಲ್ಲಿ ಉಂಟಾದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಮಾಜವಾದದ ಹುಟ್ಟನ್ನು ಗುರುತಿಸಿಕೊಳ್ಳಲಾಗುತ್ತದೆ. ಕಾಲಾನಂತರದಲ್ಲಿ ಅದು ಜಗತ್ತಿನ ಇತರ ರಾಷ್ಟ್ರಗಳಿಗೆ ತನ್ನ ನೀತಿ ಮತ್ತು ಸಿದ್ಧಾಂತಗಳ ತಳಹದಿಗಳೊಂದಿಗೆ ಆಕರ್ಷಿಸಲ್ಪಟ್ಟಿತು. ಭಾರತದ ಸಂದರ್ಭದಲ್ಲಿ ಶೋಷಣೆರಹಿತ ಸಮಾಜವನ್ನು ಕಟ್ಟುವ ಮೂಲಕ ಹಾಗೂ ಪ್ರಸ್ತುತ ಗುಲಾಮಗಿರಿ, ಅಸಮಾನತೆ ಹಾಗೂ ಅಸಹನೀಯತೆಗಳನ್ನು ತೊಡೆದು ಹಾಕುವ ಮೂಲಕ ಸಮಾಜವಾದ ನಿಜವಾದ ಸ್ವಾತಂತ್ರ್ಯ ಸಮಾನತೆ ಹಾಗೂ ಸಹೋದರಭಾವಗಳನ್ನು ಪೋಷಿಸುವ ಉದ್ದೇಶವನ್ನು ಹೊಂದಿರುತ್ತದೆ.[೧೨] ಹೀಗೆ ಸಮಾಜವಾದವನ್ನು ಕುರಿತು ಭಾರತದ ಸಮಾಜವಾದಿ ಆಂದೋಲನದ ಪಿತಾಮಹರಾದ

ಆಚಾರ್ಯ ನರೇಂದ್ರದೇವರ ಅವರು ನೀಡಿದ ವ್ಯಾಖ್ಯೆಯಿದಾಗಿದೆ. ಈ ವ್ಯಾಖ್ಯಾನವು ನಮ್ಮ ಇಂದಿನ ಸಂದರ್ಭದಲ್ಲಿ ಸಮಾಜವಾದ ಸಿದ್ಧಾಂತದ ಪ್ರಸ್ತುತತೆಯನ್ನು ಕುರಿತು ಚಿಂತನೆಗೆ ಎಡೆಮಾಡಿಕೊಡುತ್ತದೆ. ಅವರು ಹೇಳಿರುವ ಶೋಷಣೆರಹಿತ ಸಮಾಜವು ೨೧ನೆಯ ಶತಮಾನದ ವೈಜ್ಞಾನಿಕ, ವೈಚಾರಿಕ ಯುಗದಲ್ಲಿ ಯಾವ ಬದಲಾವಣೆಗಳನ್ನೂ ಹೊಂದಿಲ್ಲ. ಇಂದಿನ ವಿದ್ಯಾವಂತರು, ನಾಗರಿಕ ಸಮಾಜವು ಶೋಷಣೆ ರಹಿತ ಸಮಾಜವನ್ನು ನಿರ್ಮಿಸಲು ಸಾಧ್ಯವಾಗಿಲ್ಲದಿರುವುದು ವಾಸ್ತವದ ಸಂಗತಿಯಾಗಿದೆ. ಗುಲಾಮಗಿರಿ, ಅಸಮಾನತೆ ಮತ್ತು ಅಸಹನೀಯತೆಗಳು ಇಂದಿನ ಔದ್ಯೋಗಿಕ, ತಾಂತ್ರಿಕ, ಐ.ಟಿ. ಬಿ.ಟಿ. ತಂತ್ರಜ್ಞಾನ ಕ್ಷೇತ್ರಗಳಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ, ಸಾಮಾಜಿಕ ವಲಯದಲ್ಲಿ ಪೂರ್ಣವಾಗಿ ತೊಲಗಿ ಹೋಗಿರುವುದಿಲ್ಲ. ಹಿಂದಿನ ಶೋಷಣೆ, ತಾರತಮ್ಯಗಳು ಇಂದಿನ ಸಂದರ್ಭದಲ್ಲಿ ರೂಪಾಂತರ ಹೊಂದಿರುವುದು ಒಂದು ವಿಪರ್ಯಾಸದ ಸಂಗತಿಯಾಗಿದೆ. ಇಂತಹ ವಿಸಂಗತಿಗಳನ್ನು ತೊಲಗಿಸಲು ಸಮಾಜವಾದ ಸಿದ್ಧಾಂತದ ತತ್ವಗಳು ನಮಗಿಂದು ಪ್ರಸ್ತುತವೆನ್ನಿಸುತ್ತವೆ ಎಂಬ ನಿಲುವಿಗೆ ಬರಬಹುದಾಗಿದೆ.

ಗೋಪಾಲಗೌಡರು ಈ ಕ್ಷಣದ ಪ್ರಸ್ತುತ ರಾಜಕಾರಣದಲ್ಲಿ ಪದೇಪದೇ ನೆನಪಿಸಿಕೊಳ್ಳಬೇಕಾದ ಶಕ್ತಿ ಉಳ್ಳವರು. ೧. ಆಸ್ತಿ ಮಾಡಬಾರದು ೨. ಸರಳವಾಗಿ ಬದುಕಬೇಕು. ೩. ಕಡಿಮೆ ಸಂಬಳ ಪಡೆಯಬೇಕು. ೪. ಕೃಷಿ ಕಾರ್ಮಿಕ; ರೈತ ಇವರ ಕನಿಷ್ಟ ಅಗತ್ಯಗಳು ತತ್‌ಕ್ಷಣ ಈಡೇರಬೇಕು. ಈ ಕಲ್ಪನೆಗಳು ಸಾಕಾರಗೊಳ್ಳುವಂತೆ ಅವರ ಮಾತುಕತೆ, ಡೈರಿ ಬರವಣಿಗೆ, ಶಾಸನ ಸಭೆಯ ಭಾಷಣಗಳು ದಾಖಲೆ ಒದಗಿಸುತ್ತವೆ.

ಗೌಡರು ಉಳುವವನೇ ಹೊಲದೊಡೆಯ ಕಲ್ಪನೆಗೆ ಜೀವ ತುಂಬಿದವರು. ಲೋಹಿಯಾರನ್ನು ಕಾಗೋಡಿಗೆ ಬರುವಂತೆ ಮಾಡಿ ಜೈಲು ಸೇರುವಂತೆ ಮಾಡಿ ರೈತರ, ಗೇಣಿದಾರರ ಪರ ನಿಂತರು. ಈ ವ್ಯಕ್ತಿತ್ವದ ಪರಿಣಾಮದಿಂದಾಗಿಯೇ ೧೯೭೧ ರಲ್ಲಿ ವೀರೇಂದ್ರ ಪಾಟೀಲರು ರಾಜೀನಾಮೆ ಸದ್ದು ಮಾಡಿದಾಗ ಸಮ್ಮಿಶ್ರ ಸರ್ಕಾರದ ನಾಯಕತ್ವಕ್ಕೆ ಇವರ ಹೆಸರು ಬಹುಮತದ ಅಂಗೀಕಾರ ಪಡೆಯುತ್ತಾದರೂ ಗೋಪಾಲಗೌಡರು ಆಸೆ ಪಡಲಿಲ್ಲ. ದುರಾದೃಷ್ಟವಶಾತ್ ಅನಾರೋಗ್ಯವೂ ಕಾಣಿಸಿ ಕೆಲ ತಿಂಗಳಲ್ಲಿ ಅಸ್ತಂಗತರಾದರು.

ಆದರೆ ಸಮಾಜವಾದಿ ಶಕ್ತಿ ಸಮಾಜಕ್ಕೆ, ಮೇಲ್ನೋಟಕ್ಕೆ ಸಡಿಲ ಹೆಣಿಗೆಯಂತೆ ಕಂಡರೂ, ಹಾಗೆ ಕಾಣಲು ಅವರ ಸದಾ ಬಡವರ ಪರ, ಅವರೊಂದಿಗೆ ಬೆರೆಯುವಿಕೆ ಕಾರಣವೇ ಹೊರತು ವಿಲಾಸೀ ಶೈಲಿ ಖಂಡಿತ ಅಲ್ಲ. ಗಾಂಧಿ, ಲೋಹಿಯಾರ ತತ್ವಗಳು ಗೋಪಾಲಗೌಡರಿಗೆ ಪ್ರಭಾವ ಬೀರಿದರೂ 'ಉಳುವವನೇ ಹೊಲದೊಡೆಯ' ಕಾಯ್ದೆ ದೇವರಾಜು ಅರಸು ಕಾಲಕ್ಕೆ ಮಾನ್ಯತೆ ಪಡೆದರೂ ಆ ಮೂಲ ಶಕ್ತಿ ಗೌಡರದ್ದೇ ಆಗಿತ್ತು. ಹಾಗಾಗಿ ಪ್ರಸ್ತುತ ಕೊಳತೆ ರಾಜಕಾರಣದ ಅಪವಿತ್ರ ಮೌಲ್ಯಗಳ ಪಾತಾಳದಲ್ಲಿ, ಅವರ ಜನಪರ ನಿಲುವುಗಳು ಮನನವಾಗಲು ಶಾಸನ ಸಭೆಯ ಅವರ ಭಾಷಣಗಳು ಬಡವರ ಪರ ಉರಿಯುವ ಪಂಜುಗಳಾಗಿವೆ.

ಟಿಪ್ಪಣಿಗಳು

೧. ರಾಜಾರಾಮ ತೋಳ್ಪಾಡಿ, ೨೦೧೧, **ಮತ್ತೆ ಮತ್ತೆ ಲೋಹಿಯಾ**, ಪು. ೪೭

೨. ಅದೇ ಪು. ೪೯

೩. ನಟರಾಜ ಹುಳಿಯಾರ್, ೨೦೧೦, **ಶಾಂತವೇರಿ ಗೋಪಾಲಗೌಡ**, ಪು. ೧೩೪

೪. ಮಂಜುನಾಥ ಕೆ.ಎನ್. (ಲೇ), ೨೦೧೫, 'ಸಮಾಜವಾದಿ ಶಾಂತವೇರಿ ಗೋಪಾಲಗೌಡ', ಮಂಜುನಾಥ ಕೆ.ಎನ್. (ಸಂ), **ಸಮಾಜವಾದದ ಪ್ರಸ್ತುತತೆ: ಕೆಲವು ಚಿಂತನೆಗಳು**, ಪು. ೫೪.

೫. ಕಡಿದಾಳು ಶಾಮಣ್ಣ (ಲೇ), ೨೦೧೦, 'ಅನಿಕೇತನ', ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ. (ಸಂ), **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೧೮

೬. ಮಂಜುನಾಥ ಕೆ.ಎನ್. (ಲೇ), ೨೦೧೫, 'ಸಮಾಜವಾದಿ ಶಾಂತವೇರಿ ಗೋಪಾಲಗೌಡ', ಮಂಜುನಾಥ ಕೆ.ಎನ್. (ಸಂ), **ಸಮಾಜವಾದದ ಪ್ರಸ್ತುತತೆ: ಕೆಲವು ಚಿಂತನೆಗಳು**, ಪು. ೫೨

೭. ಕಾಳೇಗೌಡ ನಾಗವಾರ ಮತ್ತು ಆನಂದಮೂರ್ತಿ ಜಿ.ವಿ. (ಸಂ), ೨೦೧೦, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು.೪೨೫

೮. ಅದೇ ಪು. ೪೨೮

೯. ಅದೇ ಪು. ೪೩೦

೧೦. ಚಂದ್ರಶೇಖರ್ ಟಿ.ಆರ್. (ಲೇ), ೨೦೧೪, 'ಅಭಿವೃದ್ಧಿ ಮತ್ತು ಸಮಾನತೆ', ಬಂದಗದ್ದೆ ರಾಧಾಕೃಷ್ಣ ಹಾಗೂ ಇತರರು (ಸಂ), **ಹೊಸಲೋಕ**, ಪು. ೩೨

೧೧. ಅನಂತಮೂರ್ತಿ ಯು.ಆರ್. (ಲೇ), ೨೦೧೦, 'ಜೀವಂತ ರಾಜಕಾರಣದ ಮಾದರಿ', ಕಾಳೇಗೌಡ ನಾಗವಾರ ಮತ್ತು ಆನಂದಮೂರ್ತಿ ಜಿ.ವಿ. (ಸಂ), **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪು. ೫೩

೧೨. ಬಾಪು ಹೆದ್ದೂರಶೆಟ್ಟಿ, ೨೦೧೩, **ಗಾಂಧಿ-ಅಂಬೇಡ್ಕರ್ ಮತ್ತು ಸಮಾಜವಾದ**, ಪು. ೧೦೬

ಅಧ್ಯಾಯ : ಒಂಬತ್ತು

ತಳೆದ ನಿಲುವುಗಳು

ಅಧ್ಯಾಯ : ಒಂಬತ್ತು

ತಳೆದ ನಿಲುವುಗಳು

ಶಾಂತವೇರಿ ಗೋಪಾಲಗೌಡ ಅವರ ಪ್ರತಿಕ್ರಿಯೆ–ಪ್ರತಿರೋಧ, ಚಳವಳಿ–ಭಾಷಣ, ಕಾರ್ಯ–ಚಟುವಟಿಕೆಗಳೆಲ್ಲವೂ ಕನ್ನಡ–ಕರ್ನಾಟಕದ ಬಗೆಗಿನ ಕಾಳಜಿ ಹಾಗೂ ಸಮಾಜವಾದಿ ಚಿಂತನೆಗಳನ್ನು ಒಳಗೊಂಡಿದ್ದವು. ಗೋಪಾಲಗೌಡ ಅವರ ಜ್ಞಾನಶಕ್ತಿ, ವಿಚಾರ ಮಂಡನೆಯ ಶೈಲಿ ನಾಡಿನ ರಾಜಕಾರಣದ ಚರಿತ್ರೆಯಲ್ಲಿ ದಾಖಲಾರ್ಹ. ಗೋಪಾಲಗೌಡ ಅವರು ಅಂದರೆ ಚಳವಳಿ, ಹೋರಾಟ, ಧೈರ್ಯ, ಹಠ, ಛಲ. ಆದರೆ ತಾಳ್ಮೆ, ಸಹನೆ ದೂರದ ಮಾತು. ಅವರ ಪ್ರಕಾರ ವ್ಯಕ್ತಿ ಮುಖ್ಯ ಅಲ್ಲ, ಸಮಾಜವಾದಿ ಸಿದ್ಧಾಂತವೇ ಮುಖ್ಯ ಹಾಗೂ ದೊಡ್ಡದು.

ಶಾಂತವೇರಿ ಗೋಪಾಲಗೌಡ ಅವರ ಚಿಂತನೆಗಳಿಗೆ ಚಾರಿತ್ರಿಕವಾದ ಹಾಗೂ ಇಂದಿನ ರಾಜಕಾರಣದ ಸಂದರ್ಭದಲ್ಲಿ ಮಹತ್ವವಿದೆ. ಇವರ ಚಿಂತನೆಗಳ ಮರುಶೋಧದಲ್ಲಿ ಕಂಡುಕೊಂಡ ಫಲಿತಗಳು ಈ ಕೆಳಗಿನಂತಿವೆ.

೧. 'ಸಮಾಜವಾದ' ಎಂಬುದು ಕೇವಲ ಚಾರಿತ್ರಿಕ ವಿದ್ಯಮಾನ ಮಾತ್ರವಾಗಿರದೇ ಸಮಕಾಲೀನ ಸಂದರ್ಭದಲ್ಲಿ ಈ ಚಿಂತನೆಗಳು ಅತ್ಯಂತ ಪ್ರಸ್ತುತ ಅನ್ನಿಸಿಕೊಂಡಿವೆ. ಯಾವುದೇ ಆಲೋಚನಾ ಕ್ರಮ ಆಯಾಕಾಲಕ್ಕೆ ತನ್ನ ಪ್ರಸ್ತುತತೆಯನ್ನು ವಿಸ್ತರಿಸಿಕೊಳ್ಳುತ್ತ ಹೋದಂತೆ ಅದು ಜನಪರ ಚಿಂತನಾ ಕ್ರಮವಾಗಿ ನೆಲೆಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಗೋಪಾಲಗೌಡರ ಚಿಂತನೆಗಳಾಗಲೀ ಅವರ ಸಮಾಜವಾದ ಸಂವೇದನೆಗಳಾಗಲೀ ನಮ್ಮ ಬದುಕಿನ ಅಗತ್ಯಗಳಾಗಿ ಹೇಗೆ ಮೈಪಡೆದಿವೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

೨. ಸಮಾಜವಾದ ಎಂಬ ಚಿಂತನಾ ಕ್ರಮವು ಕೇವಲ 'ವ್ಯಕ್ತಿಕೇಂದ್ರಿತ' ನಿಲುವು ಆಗಿರದೇ, ಅದೊಂದು 'ಸಮೂಹಕೇಂದ್ರಿತ' ಚಿಂತನಾ ಕ್ರಮವಾಗಿ ಬೆಳೆದು ಬಂದಿರುವಂತಹದು. ಹಾಗಾಗಿ ಸಮಾಜಗಳನ್ನು ನಿರಂತರವಾಗಿ ಕಾಡುವ ಬಿಕ್ಕಟ್ಟುಗಳ ಬಗೆಗೆ ಈ ಆಲೋಚನಾಕ್ರಮ ಪರಿಹಾರಗಳ ಕಡೆಗೂ ಅಣಿಗೊಳಿಸುವಂಥದ್ದು.

೩. ಜಾತಿ ಪದ್ಧತಿ, ಸಾಮಾಜಿಕ ಅನಿಷ್ಟಗಳು ಹಾಗೂ ಕೋಮುವಾದಿ ನಿಲುವುಗಳು ಹೇಗೆ ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುತ್ತಿರುತ್ತವೆ ಎಂಬುದನ್ನು ವಿಶ್ಲೇಷಿಸುವುದರ ಜೊತೆಗೆ ಅಂತಹ ಅಪಾಯಗಳಿಂದ ಸಮುದಾಯಗಳನ್ನು ಪಾರುಮಾಡುವ ಮೂಲಭೂತ ತಿಳುವಳಿಕೆಗಳು ಗೋಪಾಲಗೌಡರ ಚಿಂತನಗಳಿಂದ, ಸಮಾಜವಾದಿ ಚಿಂತನೆಗಳಿಂದ ಪಡೆದುಕೊಳ್ಳುವ ಬಗೆಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೪. ಅಂಬೇಡ್ಕರ್, ಗಾಂಧಿ ಅವರ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನೆಗಳಲ್ಲಿ ಸಮಾಜವಾದದ ಪ್ರೇರಣೆಗಳು, ಪ್ರಭಾವಗಳು ಅತ್ಯಂತ ಗಾಢವಾಗಿ ಎದ್ದು ಕಾಣುತ್ತವೆ. ಆದ್ದರಿಂದ ಭಾರತದ ಸಂವಿಧಾನದ ಮೂಲ ಆಶಯಗಳಲ್ಲಿಯೇ ಸಮಾಜವಾದಿ ವಿನ್ಯಾಸಗಳು ಪ್ರಖರವಾಗಿವೆ. ಪ್ರಜಾಸತ್ತಾತ್ಮಕ ಧೋರಣೆಗಳನ್ನು ನೆಲೆಗೊಳಿಸುವಲ್ಲಿ ಸಮಾಜವಾದಿ ಚಿಂತನೆ, ಗೋಪಾಲಗೌಡ ಹಾಗೂ ಲೋಹಿಯಾವಾದಿ ಚಿಂತನೆಗಳು ಮಹತ್ವದ್ದಾಗಿವೆ. ಈ ದಿಸೆಯಲ್ಲಿ ತೀರ್ಮಾನಗಳಿಗೆ ಬರಲಾಗಿದೆ.

೫. 'ಊಳಿಗಮಾನ್ಯ ಪದ್ಧತಿ', 'ಭೂ ಮಾಲಿಕ ಪದ್ಧತಿ'ಯಿಂದ ನಮ್ಮ ಸಮಾಜಗಳು ಬಳಲುತ್ತಿದ್ದವು. ಇಂಥ ವ್ಯವಸ್ಥೆಗಳನ್ನು ವಿರೋಧಿಸಿ ಹುಟ್ಟುಹಾಕಲಾದ 'ಕಾಗೋಡು ಸತ್ಯಾಗ್ರಹ'ದಂತಹ ಸಾಮಾಜಿಕ ಚಳವಳಿಗೆ ಸಮಾಜವಾದದ ಚಿಂತನಾ ಕ್ರಮವೇ ಬೆನ್ನೆಲುಬಾಗಿ ನಿಂತದ್ದನ್ನು ಈ ಪ್ರಬಂಧದ ವಿಶ್ಲೇಷಣೆಗಳಲ್ಲಿ ಕಂಡುಕೊಳ್ಳಲಾಗಿದೆ.

೬. ಕರ್ನಾಟಕದ ಸಂದರ್ಭದಲ್ಲಿ 'ಭೂ ಸುಧಾರಣೆ' ಕೈಗೊಳ್ಳಲು ಮತ್ತು 'ಗೇಣಿ ಪದ್ಧತಿ'ಯನ್ನು ನಿವಾರಿಸಲು ಗೋಪಾಲಗೌಡರ ಚಿಂತನೆಗಳು ಹೇಗೆ ಸಹಕಾರಿಯಾದವು, ಪ್ರಜಾಸತ್ತಾತ್ಮಕ ವ್ಯವಸ್ಥೆ ರೂಪುಗೊಳ್ಳುವಲ್ಲಿ ಸಮಾಜವಾದಿ ಚಿಂತನೆಗಳು ಹೇಗೆ ಪ್ರಯೋಜನಕ್ಕೆ ಬಂದವು ಎಂಬುದನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

೭. ಶೋಷಿತ ಸಮುದಾಯಗಳು ಸ್ವ ಅರಿವನ್ನು ಹೊಂದುವಲ್ಲಿ, ಅಂದರೆ ಸಮಾಜದ ರಾಜಕೀಯ, ಸಾಂಸ್ಕೃತಿಕ ಹಾಗೂ ಆರ್ಥಿಕ ರಚನೆಗಳನ್ನು ಅರ್ಥಮಾಡಿಕೊಂಡು ಪ್ರಬಲ ಶಕ್ತಿಗಳ ವಿರುದ್ಧ ಹೋರಾಟ, ಚಳವಳಿ ರೂಪಿಸುವಲ್ಲಿ ಗೋಪಾಲಗೌಡರ ಚಿಂತನೆಗಳು ಹೇಗೆ ಸಹಕಾರಿಯಾಗಿವೆ ಎಂಬುದನ್ನು ಗಮನಿಸಲಾಗಿದೆ.

೮. ಸಾಮಾಜಿಕ ಚಳವಳಿಗಳ ಕಾರಣದಿಂದ ಸಮುದಾಯಗಳು ಪ್ರಜ್ಞೆ, ಅಸ್ತಿತ್ವ, ಅಸ್ಮಿತೆ ಹಾಗೂ ಪ್ರತಿನಿಧೀಕರಣದ ತಿಳವಳಿಕೆಯನ್ನು ಹೇಗೆ ಪಡೆದುಕೊಳ್ಳುತ್ತವೆ. ಆ ಮೂಲಕ ಸಾಮಾಜಿಕ ಮಾನ್ಯತೆ ಪಡೆಯಲು ಹೇಗೆ ಯತ್ನಿಸುತ್ತವೆ ಎಂಬುದನ್ನು ಪ್ರಸ್ತುತ ಸಂಶೋಧನೆಯಲ್ಲಿ ಅರಿತುಕೊಳ್ಳಲಾಗಿದೆ.

೯. ಸಮಾಜವಾದಿ ರಾಜಕಾರಣವು ಏಕಕಾಲಕ್ಕೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಮುದಾಯಗಳಲ್ಲಿ ಹಾಗೂ ಜನರಲ್ಲಿ ಹೇಗೆ ಪಲ್ಲಟಗಳನ್ನು ಉಂಟುಮಾಡಿದವು ಎಂಬುದನ್ನು ಈ ಅಧ್ಯಯನದಲ್ಲಿ ತಲಸ್ಪರ್ಶಿಯಾಗಿ ಶೋಧಿಸಲಾಗಿದೆ.

೧೦. ಅಸಮಾನ ಸಮಾಜ ಹೇಗೆ ತಲೆ ಎತ್ತುತ್ತದೆ. ಆರ್ಥಿಕತೆ ನಿರ್ಧರಿಸುವ ವಿನ್ಯಾಸಗಳು ಹೇಗೆ ಪಕ್ಷಪಾತಿಯಾಗಿರುತ್ತವೆ. ಅದರ ಪರಿಣಾಮವಾಗಿ ಹುಟ್ಟುವ ಸಾಮಾಜಿಕ ರಚನೆಗಳು ಹೇಗೆಲ್ಲ ರೂಪುಗೊಳ್ಳುತ್ತವೆ, ಕರ್ನಾಟಕದ ಸಂದರ್ಭದಲ್ಲಿ ಸಾಮಾಜಿಕ ರಚನೆ ಹೇಗಿದೆ ಎಂಬುದನ್ನು ಗೋಪಾಲಗೌಡರ ಚಿಂತನೆಗಳ ಮೂಲಕ ಅರಿಯುವ ಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

೧೧. ಕರ್ನಾಟಕದ ರಾಜಕಾರಣದ ಸಂದರ್ಭದಲ್ಲಿ ಜಾತಿ ಮತ್ತು ಧರ್ಮದ ಸಂಗತಿಗಳು ಹೇಗೆ ವರ್ತಿಸಿವೆ? ಶೋಷಿತ ಸಮುದಾಯಗಳು ಮತ್ತು ಕೆಳವರ್ಗಗಳು ಅನಾದಿ ಕಾಲದಿಂದಲೂ ಹೇಗೆ ಮುಖ್ಯವಾಹಿನಿಯಿಂದ ದೂರವೇ ಉಳಿದಿವೆ? ಗೋಪಾಲಗೌಡರು ಮತ್ತು ಸಮಾಜವಾದಿ ಚಳವಳಿಯ ಕಾರಣವಾಗಿ ಶೋಷಿತ ಸಮುದಾಯಗಳು ಹೇಗೆ ಮುಂಚೂಣಿಗೆ ಬರುವ ಪ್ರಯತ್ನ ಮಾಡಿವೆ ಎಂಬುದನ್ನು ಈ ಸಂಶೋಧನೆಯ ಫಲಿತಗಳು ತೋರಿಸುತ್ತವೆ.

೧೨. ಹಲವು ಮಾದರಿಯ ಶೋಷಣೆಗಳ ವಿರುದ್ಧ ಜನಪ್ರತಿರೋಧವು ಗೋಪಾಲಗೌಡರ ಚಿಂತನೆಗಳ ಮೂಲಕ ರೂಪುಗೊಂಡ ಬಗೆ ಮತ್ತು ವೈಚಾರಿಕ ತಿಳವಳಿಕೆ ಸಮಾಜದಲ್ಲಿ ಕ್ರಮೇಣವಾಗಿ ಪಸರಿಸಿ ನಾಡಿನ ಬದಲಾವಣೆಗೆ ಕಾರಣವಾದದ್ದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೧೩. ಮುಖ್ಯವಾಗಿ ಮಲೆನಾಡಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕ್ಷೇತ್ರಗಳ ಮೇಲೆ ಗೋಪಾಲಗೌಡ ಚಿಂತನೆಗಳ ಗಾಢ ಪ್ರಭಾವ ಮತ್ತು ಪರಿಣಾಮಗಳನ್ನು ಸಂಶೋಧನೆಯ ಫಲಿತದಲ್ಲಿ ಕಾಣಬಹುದಾಗಿದೆ.

೧೪. ಮಲೆನಾಡು, ಕರ್ನಾಟಕ ಹಾಗೂ ಭಾರತದ ಸಂದರ್ಭದಲ್ಲಿ ಗೋಪಾಲಗೌಡರ ಚಿಂತನೆ, ಬರಹ, ಹೋರಾಟ ಮತ್ತು ರಾಜಕಾರಣಗಳು ಉಂಟುಮಾಡಿದ ಪ್ರೇರಣೆ ಪ್ರಭಾವಗಳನ್ನು ಅರಿಯುವ ಯತ್ನ ಮಾಡಲಾಗಿದೆ. ಹಾಗೆಯೇ ಸಮಕಾಲೀನ ರಾಜಕಾರಣ, ಸಂಘರ್ಷಗಳು ಗೋಪಾಲಗೌಡರನ್ನು ಹೇಗೆ ರೂಪಿಸಿದವು ಎಂಬುದನ್ನು ಸಹ ಅರಿಯಲಾಗಿದೆ. ಅವರ ಚಿಂತನೆಯಲ್ಲಿ ಹಂತಹಂತವಾಗಿ ಆದ ಬದಲಾವಣೆಗಳು, ಅದರ ಕಾರಣಕ್ಕಾಗಿ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಆದ ಬದಲಾವಣೆಗಳನ್ನು ಸಹ ಈ ಅಧ್ಯಯನದ ವಿಶ್ಲೇಷಣೆಗಳು ಮನವರಿಕೆ ಮಾಡಿಕೊಡುತ್ತವೆ.

೧೫. ಈ ಹೊತ್ತಿನ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲು ದಾರಿಗಳು ಮತ್ತು ಗುರಿಗಳು ಶಾಂತವೇರಿ ಗೋಪಾಲಗೌಡರ ಚಿಂತನೆಗಳಲ್ಲಿ ಅಡಕವಾಗಿವೆ. ಉದಾಹರಣೆಗೆ ಪರಿಸರ, ಶಿಕ್ಷಣ, ಶಿಕ್ಷಣ ಮಾಧ್ಯಮ, ಭಾಷೆಯ ಸವಾಲುಗಳು, ನೀರಾವರಿ, ಅರಣ್ಯ ಮೊದಲಾದ ವಿದ್ಯಮಾನಗಳನ್ನು ಕುರಿತ ಬಿಕ್ಕಟ್ಟು ಹಾಗೂ ಸವಾಲುಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯ ಎಂಬುದನ್ನು ಈ ಸಂಶೋಧನಾ ಪ್ರಬಂಧದಲ್ಲಿ ಕಾಣಲಾಗಿದೆ.

ಅನುಬಂಧಗಳು

ಅನುಬಂಧ - ೧

೧. ಪ್ರಾಥಮಿಕ ಆಕರಗಳು

೨. ಪಿಎಚ್.ಡಿ. ಹಾಗೂ ಎಂ.ಫಿಲ್. ಪ್ರಬಂಧಗಳು (ಪ್ರಕಟಿತ ಹಾಗೂ ಅಪ್ರಕಟಿತ)

೩. ಪೂರಕ ಸಾಹಿತ್ಯ

ಅ. ಕನ್ನಡ ಕೃತಿಗಳು

ಆ. ಆಂಗ್ಲ ಕೃತಿಗಳು

ಇ. ಕನ್ನಡ ಸಂಪ್ರಬಂಧಗಳು ಹಾಗೂ ಲೇಖನಗಳು

ಈ. ಇಂಗ್ಲೀಶ್ ಸಂಪ್ರಬಂಧಗಳು ಹಾಗೂ ಲೇಖನಗಳು

೪. ನಿಯತಕಾಲಿಕೆಗಳು, ವಾರಪತ್ರಿಕೆಗಳು ಹಾಗೂ ದಿನಪತ್ರಿಕೆಗಳು

ಅನುಬಂಧ - ೨

ಸಂದರ್ಶನದ ವಿವರಗಳು

ಅನುಬಂಧ - ೩

ಛಾಯಾಚಿತ್ರಗಳು

ಅನುಬಂಧ - ೧

ಆಕರಗಳು

೧. ಪ್ರಾಥಮಿಕ ಆಕರಗಳು

ಅ. ಶಾಂತವೇರಿ ಗೋಪಾಲಗೌಡರ ಲೇಖನಗಳು, ಪತ್ರಗಳು, ಡೈರಿ, ಕೈ ಬರಹ ಇತ್ಯಾದಿ

ಆ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೨

ಇ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೩

ಈ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೪

ಉ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೫

ಊ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೫೬

ಋ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೩

ಎ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೪

ಏ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೬

ಐ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೬೭

ಒ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ೧೯೭೦

೨. ಪಿಎಚ್.ಡಿ. ಹಾಗೂ ಎಂ.ಫಿಲ್. ಪ್ರಬಂಧಗಳು (ಪ್ರಕಟಿತ ಹಾಗೂ ಅಪ್ರಕಟಿತ)

ಪಿಎಚ್.ಡಿ. ಮಹಾಪ್ರಬಂಧಗಳು (ಪ್ರಕಟಿತ ಹಾಗೂ ಅಪ್ರಕಟಿತ)

೧. ಜಗದೀಶ ಆರ್.ಎಂ., ೨೦೧೧, **ಸೋಷಿಯಲಿಸ್ಟ್ ಮೂವ್‌ಮೆಂಟ್ ಇನ್ ಕರ್ನಾಟಕ (೧೯೪೦-೧೯೮೦)**, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨. ರಾಜಾರಾಮ ತೋಳ್ಪಾಡಿ, ೨೦೦೦, **ರಾಮಮನೋಹರ ಲೋಹಿಯಾ-ಎ ಸ್ಟಡಿ**, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೩. ಶಶಿರೇಖ ಕೆ.ಆರ್., ೨೦೦೮, **ಕರ್ನಾಟಕದಲ್ಲಿ ಸಮಜವಾದಿ ಚಳವಳಿ (ಶಿವಮೊಗ್ಗ ಜಿಲ್ಲೆಯ ಒಂದು ಅಧ್ಯಯನ**, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಶಂಕರಘಟ್ಟ, ಕುವೆಂಪು ವಿಶ್ವವಿದ್ಯಾಲಯ.

೪. ಹಣಮಂತ್ರಾಯ, ೨೦೦೯, **ಡಿ. ದೇವರಾಜ ಅರಸು ಹಾಗೂ ಕರ್ನಾಟಕ ರಾಜಕಾರಣ: ಚಿಂತನೆಗಳ ಚಾರಿತ್ರಿಕ ವಿಶ್ಲೇಷಣೆ** (ಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಹಂಪಿ; ಕನ್ನಡ ವಿಶ್ವವಿದ್ಯಾಲಯ.

೫. ಹೊನ್ನಾಂಜಿನಯ್ಯ ಡಿ.ಆರ್, ೨೦೦೪, **ಶಾಂತವೇರಿ ಗೋಪಾಲಗೌಡ: ಸಾಂಸ್ಕೃತಿಕ ಸಂದರ್ಭ ಒಂದು ಅಧ್ಯಯನ** (ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಎಂ.ಫಿಲ್. ನಿಬಂಧಗಳು

೧. ಅನಿತ ಕೆ.ಕೆ, ೨೦೦೮, ಶಾಂತವೇರಿ **ಗೋಪಾಲಗೌಡರ ಸಾಂಪ್ರದಾಯಿಕ ಮತ್ತು ರಾಜಕೀಯ ಜೀವನ** (ಅಪ್ರಕಟಿತ ಎಂ.ಫಿಲ್ ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಉಮೇಶ್ ಎಸ್.ಟಿ, ೨೦೦೮, **ಶಾಂತವೇರಿ ಗೋಪಾಲಗೌಡರ ಸಮಾಜವಾದಿ ತತ್ವ-ನಿಷ್ಠೆ,** (ಅಪ್ರಕಟಿತ ಎಂ.ಫಿಲ್ ನಿಬಂಧ), ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ

೧. **ಕೀರ್ತಿನಾಥ** ಜಿ.ಎಸ್., ೧೯೯೫, **ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಚಳವಳಿಗಳು,** (ಅಪ್ರಕಟಿತ ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಜೋತ್ಸ್ನಾ ಚಂದ್ರಕಾಂತ, ೨೦೦೮, **ಭೂ ಒಡೆತನ ಮತ್ತು ಮಹಿಳೆ (ಗುಲಬರ್ಗಾ ಜಿಲ್ಲೆಯನ್ನು ಅನುಲಕ್ಷಿಸಿ)** (ಅಪ್ರಕಟಿತ ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಮಲ್ಲಿಕಾರ್ಜುನ ಎಂ.ಸಿ, ೨೦೦೭, **ಆಧುನಿಕ ಕಥನ ಸಾಹಿತ್ಯದಲ್ಲಿ ಭೂ ಹೋರಾಟದ ಪ್ರತಿನಿಧೀಕರಣ** (ಅಪ್ರಕಟಿತ ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಮಹಲಿಂಗಪ್ಪ ಹೆಚ್, ೨೦೧೦, **ದಾವಣಗೆರೆ ಪ್ರದೇಶದ ರೈತ ಹೋರಾಟಗಳು** (ಅಪ್ರಕಟಿತ ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ರೇವಿಣ ಡಿ.ಜಿ, ೨೦೦೮, **ಕಡಿದಾಳು ಮಂಜಪ್ಪ: ಮಲೆನಾಡಿನ ಸ್ವಾತಂತ್ರ್ಯೋತ್ತರ ಭೂ ಹೋರಾಟ,** (ಅಪ್ರಕಟಿತ ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಸವಿತ ಬಿ.ಸಿ, ೨೦೦೯, **ರೈತ ಹೋರಾಟಗಾರ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಚಿಂತನೆಗಳ ವಿಶ್ಲೇಷಣೆ** (ಅಪ್ರಕಟಿತ ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಹಣಮಂತ್ರಾಯ, ೨೦೧೦, **ಗುಲಬರ್ಗಾ ಜಿಲ್ಲೆಯ ರೈತ ಚಳವಳಿಗಳು: ಚಾರಿತ್ರಿಕ ಅಧ್ಯಯನ,** (ಅಪ್ರಕಟಿತ ಎಂ.ಫಿಲ್. ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಪೂರಕ ಸಾಹಿತ್ಯ

ಅ. ಕನ್ನಡ ಕೃತಿಗಳು

೧. ಅಂಬಳಿಕೆ ಹಿರಿಯಣ್ಣ, ೧೯೯೯, **ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ**, ಬೆಂಗಳೂರು; ಕನ್ನಡ ಪುಸ್ತಕ ಪ್ರಕಾಶನ

೨. ಅನಂತಮೂರ್ತಿ ಯು.ಆರ್, ೧೯೬೫, **ಸಂಸ್ಕಾರ**, ಸಾಗರ; ಅಕ್ಷರ ಪ್ರಕಾಶನ.

೩. ಅನಂತಮೂರ್ತಿ ಯು.ಆರ್, ೧೯೯೫, **ಆಯ್ದ ಲೇಖನಗಳು**, ಸಾಗರ; ಅಕ್ಷರ ಪ್ರಕಾಶನ

೪. ಅನಂತಮೂರ್ತಿ ಯು.ಆರ್., ೨೦೦೮, **ಭಾರತೀಪುರ**, ಸಾಗರ; ಅಕ್ಷರ ಪ್ರಕಾಶನ.

೫. ಅನಂತಮೂರ್ತಿ ಯು.ಆರ್, ೨೦೧೪, **ಅವಸ್ಥೆ**, ಸಾಗರ; ಅಕ್ಷರ ಪ್ರಕಾಶನ.

೬. ಅನುಪಮಾ ಹೆಚ್.ಎಸ್, ಕೃಷ್ಣ.ಜಿ, ಚಂದ್ರಶೇಖರ್ ಐಜೂರು (ಸಂ), ೨೦೧೦, **ಅಸಮಾನ ಭಾರತ**, ಗದಗ; ಲಡಾಯಿ ಪ್ರಕಾಶನ.

೭. ಅರವಿಂದ ಮಾಲಗತ್ತಿ, ೧೯೮೯, **ದಲಿತ ಸಾಹಿತ್ಯ ಚಳವಳಿಯ ತಾತ್ವಿಕ ಚಿಂತನೆ**, ಬೆಂಗಳೂರು; ಹೊಸದಿಕ್ಕು ಪ್ರಕಾಶನ.

೮. ಅರುಣ್ ಜೋಳದ ಕೂಡ್ಲಿಗಿ, ೨೦೦೬, **ಸೊಂಡೂರು ಭೂ ಹೋರಾಟ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಅಶೋಕ.ಟಿ.ಪಿ (ಸಂ), ೨೦೧೧, **ಕೆ.ವಿ.ಸುಬ್ಬಣ್ಣ ಅವರ ಆಯ್ದ ಲೇಖನಗಳು**, ಸಾಗರ; ಅಕ್ಷರ ಪ್ರಕಾಶನ.

೧೦. ಅಕ್ಷತ.ಕೆ, ೨೦೧೨, **ಕಾಡತೊರೆಯ ಜಾಡು**, ಬೆಂಗಳೂರು; ಅಭಿನವ ಪ್ರಕಾಶನ

೧೧. ಆರ್ಕೆ ಮಣಿಪಾಲ, ೧೯೯೭, **ಸಾಮಾಜಿಕ ಚಳವಳಿಗಳು**, ಬೆಂಗಳೂರು; ನವ ಕರ್ನಾಟಕ ಪ್ರಕಾಶನ.

೧೨. ಇರ್ಫಾನ್‌ಹಬೀಬ್ (ಮೂಲ), ಸುಜ್ಞಾನಮೂರ್ತಿ (ಅನು) ೨೦೧೬, **ಭಾರತ ಚರಿತ್ರೆಯಲ್ಲಿ ರೈತ**, ಗದಗ; ಲಡಾಯಿ ಪ್ರಕಾಶನ.

೧೩. ಇಂದಿರಾ ಆರ್, ೧೯೯೫, **ಭಾರತೀಯ ಸಮಾಜ**, ಬೆಂಗಳೂರು; ಕನ್ನಡ ಪುಸ್ತಕ ಪ್ರಾಧಿಕಾರ.

೧೪. ಇಂದಿರಾ ಕೃಷ್ಣಪ್ಪ (ಸಂ), ೨೦೦೬, **ಪ್ರೊ. ಬಿ. ಕೃಷ್ಣಪ್ಪನವರ ಬರಹಗಳು ಮತ್ತು ಭಾಷಣಗಳು**, ಬೆಂಗಳೂರು; ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್(ರಿ).

೧೫. ಉಮೇಶ್.ಜಿ.ಎನ್, ೨೦೦೯, **ಶಾಂತವೇರಿ ಗೋಪಾಲಗೌಡರ ನೆನಪು**, ಶಿವಮೊಗ್ಗ; ಸೌಪರ್ಣಿಕ ಪ್ರಕಾಶನ

೧೬. ಓಂಕಾರ್‌ಶರದ್ (ಮೂಲ), ಹಸನ್ ನಯೀಂ ಸುರಕೋಡ (ಅನು), ೨೦೧೦, **ಲೋಹಿಯಾ (ಜೀವನ ಚರಿತ್ರೆ)**, ಬಳ್ಳಾರಿ, ಲೋಹಿಯಾ ಪ್ರಕಾಶನ.

೧೭. ಕಕ್ಕಿಲಾಯ ಬಿ.ವಿ., ೨೦೦೩, **ಬರೆಯದ ದಿನಚರಿಯ ಮರೆಯದ ಪುಟಗಳು**, ಬೆಂಗಳೂರು; ನವಕರ್ನಾಟಕ ಪ್ರಕಾಶನ.

೧೮. ಕಡಿದಾಳು ಮಂಜಪ್ಪ, ೧೯೭೦, **ನನಸಾಗದ ಕನಸು**, ಬೆಂಗಳೂರು

೧೯. ಕಡಿದಾಳು ಶಾಮಣ್ಣ, ೨೦೧೧, **ಕಾಡ ತೊರೆಯ ಜಾಡು**(ಆತ್ಮಕತೆ), (ಸಂಗ್ರಹ ಹಾಗೂ ಕೃತಿ ರೂಪ: ಅಕ್ಷತಾ ಕೆ.), ಬೆಂಗಳೂರು; ಅಭಿನವ ಪ್ರಕಾಶನ.

೨೦. ಕಡಿದಾಳು ಶಾಮಣ್ಣ, ೨೦೧೩, **ಆ ದಶಕ**, ಶಿವಮೊಗ್ಗ; ಅಹರ್ನಿಶಿ ಪ್ರಕಾಶನ.

೨೧. ಕಲ್ಲೂರು ಮೇಘರಾಜ(ಸಂ), ೨೦೧೩, **ಪೊನ್ನಮ್ಮಾಳ್**, ಶಿವಮೊಗ್ಗ; ಸಿರಿಗನ್ನಡ ಪುಸ್ತಕ ಮನೆ.

೨೨. ಕಲ್ಲೂರು ಮೇಘರಾಜ (ಸಂ), ೨೦೧೩, **ಗುಬ್ಬಿಗ ಸದಾಶಿವರಾವ್**, ಶಿವಮೊಗ್ಗ; ಸಿರಿಗನ್ನಡ ಪುಸ್ತಕ ಮನೆ.

೨೩. ಕಂಠಿ, ಎನ್.ಎಮ್., ೧೯೯೪, **ರೈತ ಸರ್ಕಾರದ ಸ್ಥಾಪನೆ, ಏಕೆ ಮತ್ತು ಹೇಗೆ?**, ವಿಜಾಪುರ; ಅಮರ ಸಾಹಿತ್ಯ ಪ್ರಕಾಶನ.

೨೪. ಕಾಳೇಗೌಡ ನಾಗವಾರ, ಜಿ.ವಿ.ಆನಂದಮೂರ್ತಿ, ೧೯೯೭, **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫. ಕಾಳೇಗೌಡ ನಾಗವಾರ, ನಟರಾಜ ಹುಳಿಯಾರ್, ೧೯೯೮, **ಉತ್ತರ-ದಕ್ಷಿಣ, (ಡಾ.ಲೋಹಿಯಾ ಸಂಪುಟ-೩)**, ಬೆಂಗಳೂರು; ಕನ್ನಡ ಸಂಸ್ಕೃತಿ ನಿರ್ದೇಶನಾಲಯ.

೨೬. ಕಾಳೇಗೌಡ ನಾಗವಾರ, ಆನಂದಮೂರ್ತಿ.ಜಿ.ವಿ, ೧೯೯೮, **ಸ್ವಾತಂತ್ರ್ಯದ ಅಂತರ್ಜಲ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

೨೭. ಕುಮಾರ್.ಕೆ.ಎಂ, ೨೦೦೮, **ಕರ್ನಾಟಕದಲ್ಲಿನ ರೈತ ಚಳವಳಿ**, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು.

೨೮. ಕುಮಾರ್.ಕೆ.ಎಂ, ೨೦೦೮, **ಕರ್ನಾಟಕದಲ್ಲಿನ ರೈತ ಚಳವಳಿ**, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು.

೨೯. ಕುವೆಂಪು, ೨೦೧೧, **ವಿಚಾರ ಕ್ರಾಂತಿಗೆ ಆಹ್ವಾನ**, ಮೈಸೂರು; ಉದಯರವಿ ಪ್ರಕಾಶನ.

೩೦. ಕೃಷ್ಣರಾವ್ ಸಿ.ಆರ್., ೨೦೧೨, **ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳವಳಿ ನಾನು ಕಂಡಂತೆ**, ಬೆಂಗಳೂರು; ಭಾರತ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ರಾಜ್ಯ ಮಂಡಳಿ.

೩೧. ಕೇಶವ ಎಸ್.ಆರ್., (೨೦೧೦), **ಪ್ರೊ.ಬಿ. ಕೃಷ್ಣಪ್ಪ**, ಪ್ರಸಾರಾಂಗ; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೨. ಕೋಣಂದೂರು ವೆಂಕಪ್ಪಗೌಡ,(ಸಂ), ೧೯೮೧, **ಜೀವಂತ ಜ್ವಾಲೆ**, ಬೆಂಗಳೂರು; ಯಶಸ್ವಿ ಪ್ರಕಾಶನ.

೩೩. ಕೋಣಂದೂರು ಲಿಂಗಪ್ಪ(ಸಂ), ೧೯೮೧, **ಶಾಸನ ಸಭೆಯಲ್ಲಿ ಶಾಂತವೇರಿ**, ಬೆಂಗಳೂರು; ಮಾನಸ ಪ್ರಕಾಶನ.

೩೪. ಕೋಣಂದೂರು ವೆಂಕಪ್ಪಗೌಡ, ೧೯೮೫, **ನವ ಮೈಸೂರು ಶಿಲ್ಪಿ-ಕೆಂಗಲ್ ಹನುಮಂತಯ್ಯ**, ಬೆಂಗಳೂರು; ಯಶಸ್ವಿ ಪ್ರಕಾಶನ.

೩೫. ಕೋಣಂದೂರು ವೆಂಕಪ್ಪಗೌಡ, ೧೯೮೫, **ಪರಿವರ್ತನೆಯ ಹರಿಕಾರ(ಡಿ.ದೇವರಾಜ ಅರಸು ಸ್ಮಾರಕ ಗ್ರಂಥ)**, ಬೆಂಗಳೂರು; ಯಶಸ್ವಿ ಪ್ರಕಾಶನ.

೩೬. ಕೋಣಂದೂರು ವೆಂಕಪ್ಪಗೌಡ, ೧೯೯೪, **ಭೂ ಸುಧಾರಣೆ ಸಾಧಕ (ಹುಚ್ಚಮಸ್ತಿಗೌಡರ ಜೀವನ ಚರಿತ್ರೆ)** ಬೆಂಗಳೂರು; ಮಾನಸ ಪ್ರಕಾಶನ.

೩೭. ಕೋಣಂದೂರು ವೆಂಕಪ್ಪಗೌಡ, ೧೯೯೭, **ಭಾರತದ ಪ್ರಧಾನಿ ದೇವೇಗೌಡ**, ಬೆಂಗಳೂರು; ಯಶಸ್ವಿ ಪ್ರಕಾಶನ.

೩೮. ಕೋಣಂದೂರು ವೆಂಕಪ್ಪಗೌಡ, ೨೦೦೧, **ಕಾಗೋಡು ಹೋರಾಟದ ರೂವಾರಿ-ಗಣಪತಿಯಪ್ಪನವರ ಜೀವನ ಚರಿತ್ರೆ**, ಬೆಂಗಳೂರು; ಯಶಸ್ವಿ ಪ್ರಕಾಶನ.

೩೯. ಕೃಷ್ಣರಾವ್ ಎಂ.ವಿ, ಕೇಶವಭಟ್. ಎಂ, ೧೯೭೦, **ಕರ್ನಾಟಕ ಇತಿಹಾಸ ದರ್ಶನ**, ಬೆಂಗಳೂರು; ಕರ್ನಾಟಕ ಇತಿಹಾಸ ಅಕಾಡೆಮಿ.

೪೦. ಕೃಷ್ಣಪ್ಪ ಬಿ, ೧೯೯೯, **ಚಿಂತನೆಗಳು ಮತ್ತು ಬರಹಗಳು**, ಬೆಂಗಳೂರು; ಕನ್ನಡ ಪುಸ್ತಕ ಪ್ರಾಧಿಕಾರ.

೪೧. ಕೃಷ್ಣ ಅಯ್ಯರ್ ವಿ.ಆರ್, ೧೯೮೪, **ದುರ್ಬಲ ವರ್ಗಗಳವರಿಗೆ ನುಡಿಯಲ್ಲಿ ನ್ಯಾಯ-ನಡೆಯಲ್ಲಿ ಅನ್ಯಾಯ**, ಸಾಗರ; ಅಕ್ಷರ ಪ್ರಕಾಶನ.

೪೨. ಕೌಲಾನಿ ಧರ್ಮಯ್ಯ(ಸಂ), ೨೦೦೨, **ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘದ ಶತಮಾನೋತ್ಸವ ಸಂಸ್ಮರಣ ಗ್ರಂಥ.** (೧೯೦೧-೨೦೦೧), ತೀರ್ಥಹಳ್ಳಿ; ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗರ ಸಂಘ.

೪೩. ಖಾದ್ರಿ ಶಾಮಣ್ಣ, ೧೯೮೪, **ಜನಸೇವಕ ಟಿ.ಆರ್.ಶಾಮಣ್ಣ,** ಬೆಂಗಳೂರು; ಅಭಿನಂದನಾ ಸಮಿತಿ.

೪೪. ಗಿರೀಶ ಜಕಾಪುರೆ, ೨೦೧೩, **ಮಲೆನಾಡ ಗಾಂಧಿ,** ಬೆಂಗಳೂರು; ಅಭಿನವ ಪ್ರಕಾಶನ.

೪೫. ಗೀತಾಚಾರ್ಯ ನಾ, ೧೯೯೯, **ಅಂತರ್‌ಶಿಸ್ತೀಯ ಸಂಶೋಧನಾ ವಿಧಿ ವಿಧಾನ,** ಬೆಂಗಳೂರು; ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.

೪೬. ಗುರುಲಿಂಗಯ್ಯ ಎಂ.ಕೆ, ೨೦೪, **ದುರ್ಬಲರ ಆಶಾಕಿರಣ ದೇವರಾಜ ಅರಸು,** ಬೆಂಗಳೂರು; ಆತ್ಮಜ್ಯೋತಿ ಪ್ರಕಾಶನ.

೪೭. ಗೋಪಾಲಕೃಷ್ಣಯ್ಯ ಕೆ.ಎಸ್, ೧೯೮೨, **ಸಮಾಜವಾದ ಪರಿಚಯ,** ಬೆಂಗಳೂರು; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

೪೮. ಗೋರೂರು ರಾಮಸ್ವಾಮಿ ಅಯ್ಯಂಗಾರ್, ೧೯೯೮, **ನನ್ನ ಸತ್ಯಾನ್ವೇಷಣೆ,** ಅಹಮದಾಬಾದ್; ನವ ಜೀವನ ಪ್ರಕಾಶನ.

೪೯. ಗೋವಿಂದರಾಜು ಸಿ.ಆರ್, ೨೦೦೫, **ಕರ್ನಾಟಕ ಏಕೀಕರಣ ಹಾಗೂ ನಾಮಕರಣ,** ಬೆಂಗಳೂರು; ಕರ್ನಾಟಕ ವಿಧಾನಸಭೆ ಸಚಿವಾಲಯ.

೫೦. ಗೋವಿಂದರಾಜು ಸಿ.ಆರ್., ೨೦೦೬, **ಗೋಕಾಕ್ ವರದಿ,** ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು.

೫೧. ಗೌಡ ವಿ.ಹೆಚ್, ೨೦೦೦, **ಸಮಕಾಲಿನ ಸಂಪದ,** ಸಾಗರ; ಅಕ್ಷರ ಪ್ರಕಾಶನ.

೫೨. ಚಂದ್ರಪ್ಪ ಸಿ., ೨೦೧೨, **ರೈತ ಮತ್ತು ಆದಿವಾಸಿ ಚಳವಳಿ** (ಸ್ವಾತಂತ್ರ್ಯಪೂರ್ವ), ಬೆಂಗಳೂರು; ಮನೋಜ್ ಪಬ್ಲಿಕೇಷನ್ಸ್.

೫೩. ಚಂದ್ರಣ್ಣಗೌಡ ಕೆ.ವಿ, ೧೯೯೯, **ವಿಚಾರವೀಳ್ಯ,** ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್.

೫೪. ಚಂದ್ರಣ್ಣಗೌಡ.ಕೆ.ವಿ, ೨೦೦೦, ಶಾಂತವೇರಿ ಅವರ ಜೀವನ ಸಾಧನೆ, ತುಮಕೂರು; ಏಕೇಶ್ ಪ್ರಕಾಶನ.

೫೫. ಚಂದ್ರಶೇಖರ್ ಎಸ್, ೧೯೮೩, **ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ: ಕೆಲವು ಒಳನೋಟಗಳು,** ಬೆಂಗಳೂರು; ಅಂಕಣ ಪ್ರಕಾಶನ.

೫೬. ಚಂದ್ರಶೇಖರ್.ಎಸ್, ೧೯೯೨, **ಅಂಬೇಡ್ಕರ್ ಮತ್ತು ಗಾಂಧಿ**, ಸಾಗರ; ಅಕ್ಷರ ಪ್ರಕಾಶನ.

೫೭. ಚಂದ್ರಶೇಖರ್.ಎಸ್, ೨೦೦೨, **ಆಧುನಿಕ ಕರ್ನಾಟಕದ ಆಂದೋಲನಗಳು**, ಜಿಳಿಗೆರೆ; ನಮ್ಮ ಪ್ರಕಾಶನ.

೫೮. ಚಂದ್ರಶೇಖರ್ ಎಸ್, ಶಶಿಧರ್ ಎಂ, ೨೦೦೭, **ಕರ್ನಾಟಕ ಚರಿತ್ರೆ : ಇಣುಕು ನೋಟಗಳು**, ಪ್ರಸಾರಾಂಗ; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫೯. ಚಂದ್ರಶೇಖರ ನಂಗಲಿ, ೧೯೯೫, **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಮಾರ್ಕ್ಸ್‌ವಾದಿ ವಿಮರ್ಶೆ**, ಬೆಂಗಳೂರು; ಹನುಮಂತನಗರ, ವೈಶಾಖ ಪ್ರಕಾಶನ

೬೦. ಚಂದ್ರಶೇಖರ ರಾ.ನಂ., ೧೯೯೮, **ಕನ್ನಡ ಹೋರಾಟಗಳು-ಒಂದು ನೋಟ**, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು.

೬೧. ಚಂದ್ರಶೇಖರ ರಾ.ನಂ., ೨೦೦೧, **ಆಧುನಿಕ ಕರ್ನಾಟಕದ ಆತಂಕಗಳು**, ಬೆಳಗಾವಿ; ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ.

೬೨. ಚಂದ್ರಶೇಖರ ಕಂಬಾರ (ಪ್ರ.ಸಂ.), ೨೦೦೭, **ಸಾರೆಕೊಪ್ಪದ ಬಂಗಾರ**(ಎಸ್. ಬಂಗಾರಪ್ಪನವರ ಅಭಿನಂದನಾ ಗ್ರಂಥ), ಬೆಂಗಳೂರು; ಎಸ್. ಬಂಗಾರಪ್ಪನವರ ಅಭಿನಂದನಾ ಸಮಿತಿ.

೬೩. ಚಿದಾನಂದಮೂರ್ತಿ ಎಂ, ೧೯೮೫, **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ**, ಪ್ರಸಾರಾಂಗ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೪. ಚಿನ್ನಸ್ವಾಮಿ ಎನ್. ಸೋಸಲೆ (ಸಂ), ೨೦೧೦, **ಸಮಕಾಲೀನ ಕರ್ನಾಟಕ ಚರಿತ್ರೆ ವಿವಿಧ ಆಯಾಮಗಳು**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೫. ಚಿನ್ನಸ್ವಾಮಿ ಸೋಸಲೆ, ೨೦೧೨, **ಅಂಬೇಡ್ಕರ್‌ವಾದ ಮತ್ತು ಪ್ರಸ್ತುತ ದಲಿತರು**, ಬೆಂಗಳೂರು; ಸಪ್ನ ಬುಕ್ ಹೌಸ್.

೬೬. ಜವರೇಗೌಡ ದೇ., ೧೯೮೫, **ಕರ್ನಾಟದ ರುವಾರಿ** (ಎಸ್.ನಿಜಲಿಂಗಪ್ಪ) ಮೈಸೂರು; ಸಂವಹನ ಪ್ರಕಾಶನ.

೬೭. ಜವರೇಗೌಡ ದೇ., ಕಮಲೇಶ್ ಕೆ.ಆರ್, ೨೦೦೦, **ಮಲೆನಾಡ ಗಾಂಧಿ ಹೆಚ್.ಜಿ. ಗೋವಿಂದೇಗೌಡ**, ಅಭಿನಂಧನಾ ಸಮಿತಿ, ಬೆಂಗಳೂರು.

೬೮. ಜವರೇಗೌಡ ದೇ. (ಪ್ರ.ಸಂ), ೨೦೦೭, **ಬಂಗಾರಪ್ಪ : ಸದನಸ್ಪಂದನ**, ಬೆಂಗಳೂರು; ಬಂಗಾರಪ್ಪ ಅಮೃತ ಮಹೋತ್ಸವ ಸಮಿತಿ.

೬೯. ಜೀವನ್ ಕುಮಾರ್.ಡಿ(ಸಂ), ೨೦೦೭, **ಜಗತ್ತಿನ ಸಮಾಜವಾದದ ಚಿಂತನೆಯಲ್ಲಿ ಮಹಾತ್ಮ ಗಾಂಧೀಜಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರ**, ಪ್ರಸಾರಾಂಗ; ಬೆಂಗಳೂರು ವಿಶ್ವವಿದ್ಯಾಲಯ.

೭೦. ಜೋಶಿ ಜಿ.ವಿ., ೧೯೯೯, **ದಕ್ಷಿಣ ಕನ್ನಡ ಜಿಲ್ಲೆಯ ರೈತ ಹೋರಾಟ**, ಮಂಗಳೂರು; ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ.

೭೧. ತಂಬಂಡ ವಿಜಯ್ ಪೂಣಚ್ಚ, ೧೯೯೯, **ರೈತ ಚಳವಳಿಗಳು**, ಪ್ರಸಾರಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೨. ತ್ಯಾನಚಿದೂರು ಪುಟ್ಟಣ್ಣ ವೈ.ಎಸ್, ೧೯೯೭, **ನಾಕಂಡ ಮಲೆನಾಡು**, ಶಿವಮೊಗ್ಗ; ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ.

೭೩. ತಿಪ್ಪೇಸ್ವಾಮಿ.ಎನ್.ಡಿ(ಸಂ), ೨೦೧೦, **ಲೋಹಿಯಾವಾದಿ ಡಾ.ಎಂ.ನಾಗಪ್ಪ**, ಬೆಂಗಳೂರು; ಪ್ರಗತಿ ಗ್ರಾಫಿಕ್ಸ್.

೭೪. ತಿಮ್ಮನಹಳ್ಳಿ ವೇಣುಗೋಪಾಲ್, ೨೦೧೦, **ರೈತರು: ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳವಳಿ ೧೮೮೧-೧೯೪೭**, ಬೆಂಗಳೂರು, ಧಾತ್ರಿ ಪುಸ್ತಕ.

೭೫. ತೇಜಶ್ರೀ ಜ.ನಾ. ೨೦೧೨, **ಸುರಗಿ**, ಸಾಗರ; ಅಕ್ಷರ ಪ್ರಕಾನ.

೭೬. ದಸ್ತಗಿರಿಸಾಬ್ ದಿನ್ನಿ (ಸಂ), ೨೦೦೮, **ಲೋಹಿಯಾ ಸಾಂಸ್ಕೃತಿಕ ಅನುಸಂಧಾನ**, ಬೆಂಗಳೂರು; ಕರ್ನಾಟಕ ಸಾಹಿತ್ಯ ಅಕಾಡೆಮಿ.

೭೭. ಧನಗೆರೆ ಡಿ.ಎನ್. (ಮೂಲ), ರಾಮಚಂದ್ರ ಉಡುಪ ಹಾಗೂ ಇತರರು (ಅನು), ೨೦೧೨, **ಭಾರತದಲ್ಲಿ ರೈತ ಚಳುವಳಿಗಳು ೧೯೨೦-೧೯೫೦**, ಬೆಂಗಳೂರು; ಕ್ರಿಯಾ ಪ್ರಕಾಶನ.

೭೮. ದೇವನೂರು ಮಹಾದೇವ, ೨೦೧೨, **ಎದೆಗೆ ಬಿದ್ದ ಅಕ್ಷರ**, ಬೆಂಗಳೂರು; ಅಭಿನವ ಪ್ರಕಾಶನ.

೭೯. ದೇವೇಗೌಡ ಟಿ.ಡಿ, ೨೦೦೪, **ಮುಖ್ಯ ರಾಜಕೀಯ ಸಿದ್ಧಾಂತಗಳು**, ಮೈಸೂರು; ಚೇತನ ಬುಕ್ ಹೌಸ್.

೮೦. ದೇವೇಗೌಡ ಟಿ.ಡಿ, ೨೦೦೫, **ರಾಜಕೀಯ ಸಿದ್ಧಾಂತ**, ಮೈಸೂರು, ಚೇತನ ಬುಕ್ ಹೌಸ್.

೮೧. ದೊಡಮನಿ.ಜೆ.ಪಿ (ಸಂ), ೨೦೧೩, **ಜ್ಯೋತಿಬಾ ಪುಲೆ ಮತ್ತು ರೈತ ಚಳುವಳಿ**, ಗದಗ; ಲಡಾಯಿ ಪ್ರಕಾಶನ.

೮೨. ನಟರಾಜ್ ಹುಳಿಯಾರ್, ರಾಮಕೃಷ್ಣ ಎಸ್.ಆರ್, ೨೦೦೦, **ಕಣ್ಣೆದುರಿನ ಪ್ರಶ್ನೆಗಳು (ಡಾ.ಲೋಹಿಯಾ ಸಂಪುಟ-೫)**, ಬೆಂಗಳೂರು; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೮೩. ನಟರಾಜ್ ಹುಳಿಯಾರ್ (ಸಂ), ೨೦೦೩, **ಮಾರ್ಕ್ಸ್, ಗಾಂಧಿ, ಸಮಾಜವಾದ (ಭಾಗ-೧)**, ಬೆಂಗಳೂರು; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೮೪. ನಟರಾಜ್ ಹುಳಿಯಾರ್ (ಸಂ), ೨೦೦೮, **ಹಸಿರು ಸೇನಾನಿ-ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ ಹೋರಾಟ ಮತ್ತು ಚಿಂತನೆ**, ಬೆಂಗಳೂರು; ಚಕ್ರ ಪ್ರತಿಷ್ಠಾನ.

೮೫. ನಟರಾಜ್ ಹುಳಿಯಾರ್, ೨೦೧೦, **ಲಂಕೇಶ್ ಟೀಕೆ-ಟಿಪ್ಪಣಿ**, ಸಂಪುಟ ೧,೨,೩, ಬೆಂಗಳೂರು; ಲಂಕೇಶ್ ಪ್ರಕಾಶನ.

೮೬. ನಟರಾಜ್ ಹುಳಿಯಾರ್ (ಸಂ), ೨೦೧೧, **ರಾಮಮನೋಹರ ಲೋಹಿಯಾ ಚಿಂತನೆ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೭ ನಟರಾಜ್ ಹುಳಿಯಾರ್, ೨೦೧೮, **ಶಾಂತವೇರಿ ಗೋಪಾಲಗೌಡ**, ಹೊಸದೆಹಲಿ; ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

೮೮. ನಂಜುಂಡಯ್ಯ.ಬಿ.ಎನ್, ೧೯೯೮, **ಭಾರತದಲ್ಲಿ ಪ್ರಜಾಸತ್ತೆಯ ವಿಕಾಸ**, ಮೈಸೂರು; ಭಾರತಿ ಪ್ರಕಾಶನ.

೮೯. ನಂಬುದಾರಿ ಪಾಡ್.ಇ.ಎಂ.ಎಸ್, ೧೯೮೨, **ಸಮಾಜವಾದಕ್ಕೆ ಭಾರತದ ದಾರಿ**, ಮೈಸೂರು; ಭಾರತಿ ಪ್ರಕಾಶನ.

೯೦. ನರಸಿಂಹಯ್ಯ.ಹೆಚ್, ೧೯೯೨, **ತೆರೆದ ಮನ**, ಬೆಂಗಳೂರು; ಕ್ರೈಸ್ಟ್ ಕಾಲೇಜ್, ಕನ್ನಡ ಸಂಘ.

೯೧. ನಾಗಭೂಷಣ ಡಿ.ಎಸ್, ೨೦೦೭, **ಮರಳಿ ಬರಲಿದೆ ಸಮಾಜವಾದ**, ಬಳ್ಳಾರಿ; ಲೋಹಿಯಾ ಪ್ರಕಾಶನ.

೯೨. ನಾಗಭೂಷಣ ಡಿ.ಎಸ್., ೨೦೦೮, **ರೈತಭಾರತ: ಅವಸಾನದ ಅಂಚಿನಲ್ಲಿ**, ಬಳ್ಳಾರಿ; ಲೋಹಿಯಾ ಪ್ರಕಾಶನ.

೯೩. ನಾಗಭೂಷಣ ಡಿ.ಎಸ್., ೨೦೦೮, **ಲೋಹಿಯಾ ಸಮಾಜವಾದ ದರ್ಶನ**, ಬೆಂಗಳೂರು; ಕನ್ನಡ ಪುಸ್ತಕ ಪ್ರಾಧಿಕಾರ.

೯೪. ನಾಗಭೂಷಣ ಡಿ.ಎಸ್, ೨೦೦೮, **ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ**, ಮೈಸೂರು; ಅಭಿರುಚಿ ಪ್ರಕಾಶನ.

೯೫. ನಾಗಭೂಷಣ ಡಿ.ಎಸ್. (ಸಂ), ೨೦೧೦, **ಲೋಹಿಯಾ ವ್ಯಕ್ತಿ ವಿಚಾರ ವಿಮರ್ಶೆ**, ಬಳ್ಳಾರಿ; ಲೋಹಿಯಾ ಪ್ರಕಾಶನ.

೯೬. ನಾಗಭೂಷಣ ಡಿ.ಎಸ್., ೨೦೧೨, **ಕಂಡದ್ದು ಕಾಡಿದ್ದು**, ಶಿವಮೊಗ್ಗ; ಗೀತಾಂಜಲಿ ಪುಸ್ತಕ ಪ್ರಕಾಶನ.

೯೭. ನಾಗಭೂಷಣ ಪಾಟೀಲ್, ೨೦೧೩, **ಸಮಾಜವಾದಿ ಚಳುವಳಿ ಮತ್ತು ಆಧುನಿಕ ಕನ್ನಡ ಸಾಹಿತ್ಯ**, ಹೊಸಪೇಟೆ; ಸಖಿ ಪ್ರಕಾಶನ.

೯೮. ನಾಗಭೂಷಣ ಡಿ.ಎಸ್., ೨೦೧೪, **ಲೋಹಿಯಾ ಜೊತೆಯಲ್ಲಿ** , ಶಿವಮೊಗ್ಗ; ಗೀತಾಂಜಲಿ ಪುಸ್ತಕ ಪ್ರಕಾಶನ.

೯೯. ನಾಗಭೂಷಣ ಡಿ.ಎಸ್., (ಸಂ), ೨೦೧೫, **ನಮ್ಮ ಸಮಾಜವಾದಿಗಳು**, ಚಾಮರಾಜನಗರ; ಸಮತ ಪ್ರಕಾಶನ.

೧೦೦. ನಾಗರಾಜು ಟಿ., ೧೯೯೯, **ಸಾಮಾಜಿಕ ಚಳವಳಿಗಳು**, ಮೈಸೂರು; ಭಾರತಿ ಪ್ರಕಾಶನ.

೧೦೧. ನಾಗರಾಜ್ ಎಂ.ಜಿ., ೨೦೦೬, **ಕರ್ನಾಟಕ ರೈತಚಳುವಳಿ–ಸತ್ಯಾಗ್ರಹಗಳು** (ಸಂಪುಟ ೧, ೨, ೩, ೪, ೫, ೬) ಬೆಂಗಳೂರು; ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ವಿಧಾನಸೌಧ.

೧೦೨. ನಾಗರಾಜ ಡಿ.ಆರ್., ನಾಗರಾಜ ಕಿ.ರಂ, ೧೯೮೯, **ಸಮಾಜವಾದಿ ಆಚಾರ್ಯ**, ಬೆಂಗಳೂರು; ಭಾರತ ಯಾತ್ರಾ ಕೇಂದ್ರ.

೧೦೩. ನಾಗಮೋಹನದಾಸ್ ಹೆಚ್.ಎಸ್, ೧೯೯೬, **ಸಮಾಜವಾದಿ**, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್.

೧೦೪. ನಾಗೇಶ್ ಹೆಚ್.ವಿ., ಪುನೀತ್ ಎ.ಇ, ೧೯೮೪, **ಭಾರತದಲ್ಲಿ ರೈತ ಹೋರಾಟಗಳು**, ಧಾರವಾಡ; ಚಂದ್ರನಾಥ ಪ್ರಕಾಶನ.

೧೦೫. ನಾಗೇಶ್ ಎಚ್.ವಿ., ೧೯೯೯, **ಸಾಮಾಜಿಕ ಚಳವಳಿಗಳು**, ಪ್ರಸಾರಾಂಗ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦೬. ನಾಡಕರ್ಣಿ ಎಂ.ವಿ., ೧೯೮೬, **ಕರ್ನಾಟಕ ರೈತ ಹೋರಾಟಗಳು**, ಬೆಂಗಳೂರು; ಪ್ರಿಂಟರ್ ಪ್ರಕಾಶನ.

೧೦೭. ನಾರಾಯಣಸ್ವಾಮಿ ಜ.ಹೋ., ೨೦೦೦, **ಜಯಪ್ರಕಾಶ್ ನಾರಾಯಣ**, ಬೆಂಗಳೂರು; ಕನ್ನಡ ಪುಸ್ತಕ ಪ್ರಾಧಿಕಾರ.

೧೦೮. ನಾರಾಯಣಸ್ವಾಮಿ ಕೆ.ಎಸ್, ೧೯೮೦, **ಗಾಂಧಿ**, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್.

೧೦೯.ನಿಜಲಿಂಗಪ್ಪ.ಜಿ, ೧೯೭೬, **ಕಮ್ಯುನಿಸ್ಟ್ ಮ್ಯಾನಿಫೆಸ್ಟೋ**, ಕೊಟ್ಟೂರು ಪ್ರಕಾಶನ.

೧೧೦.ಪಾಂಗಣ್ಣಾಯ್ಯ ಹೆಚ್.ಆರ್, ಅಚ್ಚುತರಾವ್, ಜಯಪ್ಪಗೌಡ ಡಿ.ಎಸ್, ೧೯೯೮, **ಕೆ.ಹನುಮಂತಯ್ಯ**, ಬೆಂಗಳೂರು; ಕರ್ನಾಟಕ ವಿಧಾನಸಭೆ ಸಚಿವಾಲಯ.

೧೧೧.ಪಾಂಗಣ್ಣಾಯ್ಯ ಹೆಚ್.ಆರ್, ಅಚ್ಚುತರಾವ್, ಜಯಪ್ಪಗೌಡ ಡಿ.ಎಸ್, ೧೯೯೯, **ಶಾಂತವೇರಿ ಗೋಪಾಲಗೌಡ(ಸಂಸದೀಯ ಪಟು ಬದುಕು ಬರಹ ಮಾಲಿಕೆ)**, ಬೆಂಗಳೂರು; ಕರ್ನಾಟಕ ವಿಧಾನಸಭೆ ಸಚಿವಾಲಯ.

೧೧೨.ಪೀರ್‌ಬಾಷ ಬಿ. (ಸಂ), ೨೦೦೭, **ಸಮಾಜವಾದಿ ಹೋರಾಟಗಾರರ ಸಂದರ್ಶನ**, (ಸಂ: ೧,೨) ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೩.ಪೀರ್‌ಬಾಷಾ.ಬಿ, ೨೦೧೨, **ಸಮಾಜವಾದಿ ಹೋರಾಟಗಾರರ ಸಂದರ್ಶನ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೪.ಪುಟ್ಟಣ್ಣ.ವೈ.ಎಸ್, ೧೯೯೧, **ನಾನು ಕಂಡ ಮಲೆನಾಡು**, ಬೆಂಗಳೂರು; ಚಂದ ಪ್ರಿಂಟರ್ಸ್.

೧೧೫.ಪ್ರಭಾಕರ ಎ.ಎಸ್., ಹಾಗೂ ಶ್ರೀಪಾದ ಶೆಟ್ಟಿ (ಸಂ), ೨೦೧೨, **ಲೋಹಿಯಾ: ವರ್ತಮಾನದ ಮುಖಾಮುಖಿ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೬.ಫಾಲ್ ಸ್ವೀಜಿ ಮತ್ತು ಹ್ಯೂಬರ್‌ಮನ್ (ಮೂಲ), ಗೋಪಾಲಕೃಷ್ಣಯ್ಯ ಕೆ.ಎಸ್ (ಲೇ), ೧೯೮೩, **ಸಮಾಜವಾದ ಪರಿಚಯ**, ಪ್ರಸಾರಾಂಗ; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೧೭.ಬರಗೂರು ರಾಮಚಂದ್ರಪ್ಪ, ೧೯೯೩, **ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆ ಪರಿಕಲ್ಪನೆ**, ಬೆಂಗಳೂರು; ಕರ್ನಾಟಕ ಸಾಹಿತ್ಯ ಅಕಾಡೆಮಿ.

೧೧೮.ಬರಗೂರು ರಾಮಚಂದ್ರಪ್ಪ, ೧೯೯೮, **ಸಾಹಿತ್ಯ ಮತ್ತು ರಾಜಕಾರಣ**, ಬೆಂಗಳೂರು; ಕನ್ನಡ ಪುಸ್ತಕ ಪ್ರಾಧಿಕಾರ.

೧೧೯.ಬಸವರಾಜು, ೧೯೮೧, **ಶಿವಮೊಗ್ಗ ರೈತ ಚಳವಳಿ**, ಬೆಂಗಳೂರು; ಸಮುದಾಯ ಪ್ರಕಾಶನ.

೧೨೦.ಬಾಪು ಹೆದ್ದೂರಶೆಟ್ಟಿ, ಹನುಮಂತ, ೧೯೭೯, **ಭಾರತೀಯ ಸಮಾಜವಾದದ ಹೆಜ್ಜೆ ಗುರುತುಗಳು**, ಬೆಂಗಳೂರು; ಜನ ಪ್ರಕಾಶನ.

೧೨೧.ಬಾಪು ಹೆದ್ದೂರಶೇಟ್ಟಿ, ೧೯೮೯, **ಸಮಾಜವಾದ ಜನತಂತ್ರ ಮತ್ತು ಕಮ್ಯುನಿಸಂ**, ಸಾಗರ, ಅಕ್ಷರ ಪ್ರಕಾಶನ.

೧೨೨.ಬೇನಾಳ ಹೆಚ್.ಎಸ್., ೨೦೧೫, **ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್**, ಕಲಬುರಗಿ; ಸಹನಾ ಪ್ರಕಾಶನ.

೧೨೩.ಬೋರಲಿಂಗಯ್ಯ ಹಿ.ಚಿ. (ಸಂ), ೨೦೦೨, **ಕಾಗೋಡು ಚಳುವಳಿ-ಸುವರ್ಣ ಸಂಪುಟ**, ಸಾಗರ; ಮಲೆನಾಡು ಜಾನಪದ ಲೋಕ.

೧೨೪.ಬೋರಲಿಂಗಯ್ಯ ಹಿ.ಚಿ, ಹುಚ್ಚಪ್ಪ ಮಾಸ್ತರ.ಎನ್, ಕಾಗೋಡು ಅಣ್ಣಪ್ಪ, ೨೦೦೪, **ಸಾಧನೆಯ ಹರಿಕಾರ ಕಾಗೋಡು ತಿಮ್ಮಪ್ಪ**, ಸಾಗರ; ಶ್ರೀ ಕಾಗೋಡು ತಿಮ್ಮಪ್ಪ ಅಭಿನಂದನ ಸಮಿತಿ.

೧೨೫.ಬೋರಲಿಂಗಯ್ಯ ಹಿ.ಚಿ. (ಸಂ), ೨೦೦೫, **ಕಾಗೋಡು ಚಳುವಳಿ: ಸುವರ್ಣ ಸಂಪುಟ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨೬.ಭೈರಪ್ಪ ಕೆ., ೨೦೧೨, **ಸಾಮಾಜಿಕ ಚಳವಳಿಗಳು**, ಬೆಂಗಳೂರು; ಸಪ್ನ ಬುಕ್ ಹೌಸ್.

೧೨೭.ಭೈರಪ್ಪ ಕೆ., ೨೦೧೩, **ಸಮಾಜವಾದಿ ಲೋಹಿಯಾ**, ಬೆಂಗಳೂರು; ಸಪ್ನ ಬುಕ್ ಹೌಸ್.

೧೨೮.ಮಂಗ್ಳೂರ ವಿಜಯ, ೨೦೧೦, **ಲೋಹಿಯಾ ಚಿಂತನೆಯ ಪ್ರಸ್ತುತತೆ**, ಬೆಂಗಳೂರು; ಕಾಡುಮಲ್ಲೇಶ್ವರ ಗೆಳೆಯರ ಬಳಗ.

೧೨೯.ಮಂಜುನಾಥ ಕೆ.ಎನ್. (ಸಂ), ೨೦೧೫, ಸಮಾಜವಾದದ ಪ್ರಸ್ತುತತೆ ಕೆಲವು ಚಿಂತನೆಗಳು, ಮೈಸೂರು; ಮೈಸೂರು ಬುಕ್‌ಹೌಸ್.

೧೩೦.ಮಧುಕೇಶ್, ೨೦೦೨, **ಭೂ ಸುಧಾರಣೆಯ ಪಿತಾಮಹ: ಅರಸು**, ದಾವಣಗೆರೆ; ನಾಗಾರ್ಜುನ ಎಂಟರ್‌ಪ್ರೈಸಸ್.

೧೩೧.ಮಲ್ಲಿಕಾರ್ಜುನ ಕೂಡ್ಲಿಗೆರೆ, ೨೦೦೯, **ಭೂ ಸುಧಾರಣೆ ಕಾನೂನು ಪ್ರಕ್ರಿಯೆಗಳು**, ಬೆಂಗಳೂರು; ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ.

೧೩೨.ಮುಜಾಫರ್ ಅಸ್ಸಾದಿ, ೨೦೦೯, **ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ**, ಬೆಂಗಳೂರು; ಪ್ರಗತಿ ಗ್ರಾಫಿಕ್ಸ್.

೧೩೩.ಮೀನಾದೇಶಪಾಂಡೆ, ದತ್ತಾತ್ರಿ ಬಿ.ಕೆ, ೨೦೦೦, **ರಾಜಕೀಯ ಸಿದ್ಧಾಂತ-ಸಮಕಾಲೀನ ಚಿಂತನೆ**, ಬೆಂಗಳೂರು; ಭಾರತೀಯ ವಿದ್ಯಾಭವನ.

೧೩೪.ಮುಖ್ಯಮಂತ್ರಿ ಚಂದ್ರು (ಪ್ರ.ಸಂ), ಗೋಪಾಲರಾವ್ ಎಚ್.ಎಸ್. (ಸಂ), ೨೦೧೨, **ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು**, ಬೆಂಗಳೂರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

೧೩೫.ರಂಗಸ್ವಾಮಿ ಎ. (ಪ್ರ.ಸಂ), ರಾಮಚಂದ್ರಗೌಡ ಹಿ.ಶಿ. (ಸಂ), ೨೦೧೧, **ಕರ್ನಾಟಕದ ರೈತ ಚಳವಳಿ,** ಮೈಸೂರು; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.

೧೩೬.ರವಿಕುಮಾರ್ ಎಸ್.ಎಂ, ೨೦೧೫, **ಕುವೆಂಪು ಕೃತಿಗಳಲ್ಲಿ ಸಾಮಾಜಿಕ ಮತ್ತು ವೈಚಾರಿಕ ಪ್ರಜ್ಞೆ,** ಮೈಸೂರು; ಮಮತ ಪ್ರಕಾಶನ.

೧೩೭.ರಮೇಶ ಜೆ.ಕೆ. (ಸಂ), ೨೦೧೫, **ಕೋಲಿಂ ಕೌತುಕ,** ಶಿವಮೊಗ್ಗ; ಕೋಣಂದೂರು ಲಿಂಗಪ್ಪ ಅಭಿನಂದನ ಸಮಿತಿ.

೧೩೮.ರಮೇಶ ಜೆ.ಕೆ. (ಸಂ), ೨೦೦೧, **ಸ್ಮೃತಿ ಸಂಸ್ಕೃತಿ,** ತೀರ್ಥಹಳ್ಳಿ; ಸಹ್ಯಾದ್ರಿ ಪ್ರಕಾಶನ.

೧೩೯.ರಮೇಶ್ ಸ.ಚಿ. (ಸಂ), ೨೦೧೧, **ಕೃಷಿ: ಪಾರಂಪರಿಕ ಜ್ಞಾನ,** ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೦.ರಹಮತ್ ತರೀಕೆರೆ, ೨೦೦೬, **ಲೋಕವಿರೋಧಿಗಳ ಜೊತೆಯಲ್ಲಿ,** ಬೆಂಗಳೂರು; ಕನ್ನಡ ಸಂಘ, ಕ್ರೈಸ್ಟ್ ಕಾಲೇಜು.

೧೪೧.ರಾಜನ್ ಎಂ.ಎ.ಎಸ್., ೧೯೮೭, **ಕರ್ನಾಟಕದಲ್ಲಿ ಭೂ ಸುಧಾರಣೆ,** ಬೆಂಗಳೂರು; ಐ.ಬಿ.ಹೆಚ್. ಪ್ರಕಾಶನ.

೧೪೨.ರಾಜಶೇಖರ್ ಜಿ., ೧೯೮೦, **ಕಾಗೋಡು ಸತ್ಯಾಗ್ರಹ,** ಸಾಗರ; ಅಕ್ಷರ ಪ್ರಕಾಶನ.

೧೪೩.ರಾಮಕೃಷ್ಣ ಜಿ., ೧೯೮೦, **ಲೆನಿನ್,** ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್.

೧೪೪.ರಾಮಕೃಷ್ಣ ಹೆಚ್.ಟಿ., ೧೯೯೪, **ರಾಜಕೀಯ ಸಿದ್ಧಾಂತ ಮತ್ತು ಚಿಂತಕರು,** ಮೈಸೂರು; ಲಲಿತ ಪ್ರಕಾಶನ.

೧೪೫.ರಾಮಚಂದ್ರೇಗೌಡ ಹಿ.ಶಿ., ಹಾಗೂ ಶೋಭಾ ಸುಂದರೇಶ್ (ಸಂ), ೨೦೦೯, **ರೈತ ಸಹ್ಯಾದ್ರಿ,** ಮೈಸೂರು; ವಿಜಯಲಕ್ಷ್ಮೀ ಪ್ರಕಾಶನ.

೧೪೬.ರಾಮಚಂದ್ರೇಗೌಡ ಹಿ.ಶಿ., ೨೦೧೦, **ರೈತ ಹೋರಾಟ ಸಾಹಿತ್ಯ,** ಮೈಸೂರು; ದಾರಿದೀಪ ಪ್ರಕಾಶನ.

೧೪೭.ರಾಮಚಂದ್ರೇಗೌಡ ಹಿ.ಶಿ., ೨೦೧೧, **ಕರ್ನಾಟಕ ರೈತ ಚಳವಳಿ,** ಮೈಸೂರು; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.

೧೪೮.ರಾಮಭಟ್ಟ ಜಿ.ಎಸ್., ೨೦೧೦, **ನಗರ ಪ್ರಾಂತ್ಯದ ರೈತರ ಬಂಡಾಯ,** ಶಿವಮೊಗ್ಗ; ಕನ್ನಡ ಸಾಹಿತ್ಯ ಪರಿಷತ್ತು.

೧೪೯.ರಾಮಶರ್ಮ ಬಸವಾನಿ, ಶಂಕರನಾರಾಯಣರಾವ್.ಟಿ.ಡಿ. (ಸಂ), ೧೯೯೨, **ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು**, ಶಿವಮೊಗ್ಗ; ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಸಂಘ.

೧೫೦.ರಾಜರಾಮ ತೋಳ್ಪಾಡಿ, ೨೦೧೧, **ಮತ್ತೆ ಮತ್ತೆ ಲೋಹಿಯಾ**, ಶಿವಮೊಗ್ಗ; ಅಹರ್ನಿಶಿ ಪ್ರಕಾಶನ.

೧೫೧.ರಾಮಮನೋಹರ ಲೋಹಿಯಾ (ಮೂಲ), ನಾರಾಯಣಸ್ವಾಮಿ ಜ.ಹೋ. (ಅನು), ೨೦೦೦, **ಭಾರತದ ರೈತ ಮತ್ತು ಇತರ ಲೇಖನಗಳು**, ಮಂಡ್ಯ; ನೆಲಮನೆ ಪ್ರಕಾಶನ.

೧೫೨.ರೆಡ್ಡಿ ಕೆ.ಎನ್., ೨೦೧೪, **ಪಟೇಲ್ ನಾವು ಕಂಡಂತೆ, ಕಂಡಷ್ಟು**, ಗುಲ್ಬರ್ಗಾ, ಎಸ್.ಬಿ.ಇ. ಟ್ರಸ್ಟ್

೧೫೩.ಲಂಕೇಶ್ ಪಿ., ೨೦೦೪, **ಹುಳಿಮಾವಿನ ಮರ** (ಆತ್ಮಕಥನ), ಬೆಂಗಳೂರು; ಪತ್ರಿಕೆ ಪ್ರಕಾಶನ.

೧೫೪.ಲಲಿತಾಂಬ ಇ.ವೈ., ೧೯೭೮, **ನಿರ್ಮಾಣದೆಡೆಗೆ**, ಬೆಂಗಳೂರು; ಜನ ಪ್ರಕಾಶನ.

೧೫೫.ಲಕ್ಷ್ಮಣ್ ತೆಲಗಾವಿ, ೧೯೯೯, **ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫೬.ವಡ್ಡಗೆರೆ ನಾಗರಾಜಯ್ಯ (ಸಂ), ೨೦೧೨, **ಸಮಾಜವಾದಿಗಳ ನೆನಪಿನ ಸಂಪುಟ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫೭.ವಿಜಯ್ ಪೂಣಚ್ಚ ತಂಬಂಡ, ೧೯೯೯, **ರೈತ ಚಳವಳಿಗಳು**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫೮.ವಿಜಯ್ ಪೂಣಚ್ಚ ತಂಬಂಡ, ೨೦೦೯, **ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಮರ್ಶೆ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫೯.ವಿಠ್ಠಲಮೂರ್ತಿ ಆರ್.ಟಿ., ೨೦೦೩, **ರೈತ ಚಳವಳಿ** (ಕರ್ನಾಟಕದ ರಾಜಕೀಯ ಚಿಂತನೆ, ಪ್ರ.ಸಂ. ದೇಜಗೌ), ಬೆಂಗಳೂರು; ಎಸ್. ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ.

೧೬೦.ವಿಲಿಯಂ, ೨೦೦೭, **ಬದುಕು-ಭರವಸೆ**, ಸಾಗರ; ರವೀಂದ್ರ ಪುಸ್ತಕಾಲಯ.

೧೬೧.ವಿಷ್ಣು ನಾಯ್ಕ, ೨೦೦೪, **ದುಡಿಯುವ ಕೈಗಳ ಹೋರಾಟದ ಕಥೆ**, ಅಂಕೋಲಾ; ಡಾ.ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ.

೧೬೨.ವಿಷ್ಣುಮೂರ್ತಿ ಎಚ್.ಸಿ., ೧೯೮೨, **ಗೋಪಾಲಗೌಡ ಡೈರಿ, ಪತ್ರಗಳು ಇತ್ಯಾದಿ**, ಮೈಸೂರು; ಅನನ್ಯ ಪ್ರಕಾಶನ.

೧೬೩.ವಿಷ್ಣುಮೂರ್ತಿ ಎಚ್.ಸಿ, ೧೯೮೨, **ಗೋಪಾಲಗೌಡ ಶಾಂತವೇರಿ**, ಮೈಸೂರು; ಅನನ್ಯ ಪ್ರಕಾಶನ.

೧೬೪.ವಿಷ್ಣುಮೂರ್ತಿ.ಎಚ್.ಸಿ (ಸಂ), ೧೯೯೯, ಗೋಪಾಲಗೌಡ ಶಾಂತವೇರಿ ಅಂತರಂಗ ಬಹಿರಂಗ, ಮೈಸೂರು, ಅನನ್ಯ ಪ್ರಕಾಶನ.

೧೬೫.ಶರ್ಮ ಕೆ.ಎಸ್., ೧೯೮೪, **ಮಾರ್ಕ್ಸ್–ಮಾರ್ಕ್ಸ್‌ವಾದ**, ಬೆಂಗಳೂರು; ಪುರೋಗಾಮಿ ಸಾಹಿತ್ಯ ಪ್ರಕಾಶನ.

೧೬೬.ಶಶಿಧರಭಟ್, ೨೦೦೩, **ಚಳವಳಿಗಳನ್ನು ಹುಟ್ಟುಹಾಕುತ್ತಲೇ, ನಾಶಪಡಿಸುತ್ತಲೇ ಬೆಳೆದವರು (ರಾಜಕಾರಣಿಗಳು ನಾ ಕಂಡಂತೆ)**, ಬೆಂಗಳೂರು; ಸುಮುಖ ಪ್ರಕಾಶನ.

೧೬೭.ಶಾರದಾ ಬಿ.ಎನ್., ೨೦೦೪, **ಸಮಾಜವಾದವೇ ಪರ್ಯಾಯ**, ಬೆಂಗಳೂರು, ಸಂಬುದ್ಧ ಪ್ರಕಾಶನ.

೧೬೮.ಶಿವಪ್ರಕಾಶ್ ಎಂ.ಎಂ. (ಸಂ), ೨೦೦೮, **ಮುತ್ಸದ್ದಿ–ಎಂ.ಪಿ. ಪ್ರಕಾಶ್ ಕುರಿತ ಪತ್ರಿಕಾ ಲೇಖನಗಳ ಸಂಗ್ರಹ**, ಬಳ್ಳಾರಿ; ರಂಗಭಾರತಿ.

೧೬೯.ಶೂದ್ರ ಶ್ರೀನಿವಾಸ್ (ಸಂ), ೨೦೦೬, **ದೇವರಾಜ ಅರಸು ಒಂದು ಅವಲೋಕನ**, ಬೆಂಗಳೂರು; ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

೧೭೦.ಶೇಷಗಿರಿರಾವ್ ಎಲ್.ಎಸ್., ೨೦೦೦, **ಜಯಪ್ರಕಾಶ್ ನಾರಾಯಣ**, ಬೆಂಗಳೂರು; ಸಪ್ನ ಬುಕ್ ಹೌಸ್.

೧೭೧.ಶೋಭಾ ಸುಂದರೇಶ್ (ಸಂ), ೨೦೧೩, **ಎನ್.ಡಿ. ಸುಂದರೇಶ್**, ಶಿವಮೊಗ್ಗ; ಸನ್ಮತಿ ಪ್ರಕಾಶನ.

೧೭೨.ಶ್ರೀನಿವಾಸ ಕಕ್ಕಿಲಾಯ, ೧೯೯೮, **ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ದುಡಿಯುವ ವರ್ಗದ ಪಾತ್ರ**, ಬೆಂಗಳೂರು; ನವ ಕರ್ನಾಟಕ ಪ್ರಕಾಶನ.

೧೭೩.ಶಂಕರ ನಾರಾಯಣರಾವ್ ಎನ್.ಪಿ., ೨೦೦೮, **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು**, ಬೆಂಗಳೂರು; ನವ ಕರ್ನಾಟಕ ಪ್ರಕಾಶನ.

೧೭೪.ಸಂಗಪ್ಪ ಟಿ.ಎಂ., ೧೯೯೯, **ರೈತರ ಧ್ವನಿ ಎನ್.ಡಿ. ಸುಂದರೇಶ್**, ಭದ್ರಾವತಿ; ಲೋಹಿಯಾ ಪ್ರಕಾಶನ.

೧೭೫.ಸದಾನಂದ ಜಿ.ಎಸ್, ೨೦೦೦, **ಕೌಟಿಲ್ಯ**, ಬೆಂಗಳೂರು; ಕನ್ನಡ ಪುಸ್ತಕ ಪ್ರಾಧಿಕಾರ.

೧೭೬.ಸವಿತ ಬಿ.ಸಿ., ೨೦೧೦, **ರೈತ ಹೋರಾಟಗಾರ ಪ್ರೊ. ಎಂ.ಡಿ. ನಂಜುಂಡಸ್ವಾಮಿ**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭೭.ಸವಿತ ಜಿ.ಸಿ., ೨೦೧೭, **ಹಸಿರುಶಾಲು ಬಾರುಕೋಲು,** (ಪ್ರೊ.ಎಂ.ಡಿ.ಎನ್. ಅವರ ಚಿಂತನೆ ಹಾಗೂ ಹೋರಾಟಗಳ ವಿಶ್ಲೇಷಣೆ), ಹೊಸಪೇಟೆ; ಯಾಜಿ ಪ್ರಕಾಶನ.

೧೭೮.ಸತೀಶ್ ಪಾಟೀಲ, ೨೦೦೭, **ಹೆಬ್ಬಳ್ಳಿ ಭೂ ಹೋರಾಟ,** ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭೯.ಸೀತಾರಾಂ ಯೆಚೂರಿ ಹಾಗೂ ಇತರರು, ೨೦೦೨, **ಜಾಗತೀಕರಣದ ಸ್ವರೂಪ,** ಉತ್ತರ ಕನ್ನಡ; ಅಧ್ಯಯನ ಪ್ರಕಾಶನ.

೧೮೦.ಸುಬ್ರಮಣ್ಯ.ವೈ.ಎಸ್ (ಸಂ), ೧೯೮೨, **ಆಚಾರ್ಯ ನರೇಂದ್ರದೇವ,** ಬೆಂಗಳೂರು; ಜನ ಪ್ರಕಾಶನ.

೧೮೧.ಸುಂದರಯ್ಯ ಪಿ. (ಮೂಲ), ಸುಜ್ಞಾನಮೂರ್ತಿ (ಅನು) ೨೦೧೩, **ತೆಲಂಗಾಣ ಹೋರಾಟ,** ಬಳ್ಳಾರಿ; ಪಲ್ಲವ ಪ್ರಕಾಶನ.

೧೮೨.ಸುಬ್ರಹ್ಮಣ್ಯ ವೈ.ಎಸ್. (ಸಂ), ೧೯೮೨, **ಜನತಾಂತ್ರಿಕ ಸಮಾಜವಾದ,** ಬೆಂಗಳೂರು; ಜನ ಪ್ರಕಾಶನ.

೧೮೩.ಸೂರ್ಯನಾಥ ಕಾಮತ್, ೧೯೯೭, **ಏಕೀಕರಣದ ಸಿದ್ಧಿ ಮತ್ತು ಸಾಧನೆ,** ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್.

೧೮೪.ಸೂರ್ಯನಾಥ ಕಾಮತ್ ಮತ್ತು ಲಕ್ಷ್ಮಣ ತೆಲಗಾವಿ (ಸಂ), ೧೯೯೦, **ಇತಿಹಾಸ ದರ್ಶನ,** ಬೆಂಗಳೂರು; ಕರ್ನಾಟಕ ಇತಿಹಾಸ ಅಕಾಡೆಮಿ.

೧೮೫.ಸುರೇಂದ್ರ ಮೋಹನ್ (ಮೂಲ), ಹನುಮಂತ (ಅನು), ೨೦೦೪, **ಸಮಕಾಲೀನ ಸಮಾಜವಾದ,** ಬೆಂಗಳೂರು; ಕ್ರಿಯಾ ಪ್ರಕಾಶನ.

೧೮೬.ಸಿಂಪ್ಸನ್ ಸೋನ್ಸ್(ಅನು), ೧೯೫೮, **ಸಮಾಜವಾದ ಮತ್ತು ಕಮ್ಯುನಿಸಂ,** ಬೆಂಗಳೂರು; ನವ ಕರ್ನಾಟಕ ಪ್ರಕಾಶನ.

೧೮೭.ಹಣಮಂತ್ರಾಯ ದೊಡ್ಡಮನಿ, ೨೦೧೧, **ದೇವರಾಜ ಅರಸು ಮತ್ತು ಕರ್ನಾಟಕ ರಾಜಕಾರಣ,** ಶಿವಮೊಗ್ಗ; ಗೀತಾಂಜಲಿ ಪುಸ್ತಕ ಪ್ರಕಾಶನ.

೧೮೮.ಹನುಮಂತ (ಸಂ), ೧೯೮೧, **ಸಮಾಜವಾದ,** ಬೆಂಗಳೂರು; ಜನ ಪ್ರಕಾಶನ.

೧೮೯.ಹನುಮಂತ (ಸಂ), ೧೯೯೧, **ಸಮಾಜವಾದದೆಡೆಗೆ,** ಬೆಂಗಳೂರು; ಜನ ಪ್ರಕಾಶನ.

೧೯೦.ಹನುಮಂತ (ಸಂಗ್ರಹಾನುವಾದ), ೨೦೦೪, **ಸಮಕಾಲೀನ ಸಮಾಜವಾದ,** ಬೆಂಗಳೂರು; ಕ್ರಿಯಾ ಪ್ರಕಾಶನ.

೧೯೧.ಹನುಮಂತಪ್ಪ ಹೆಚ್.ಆರ್. (ಸಂ), ೨೦೧೨, **ಭಾರತ ರೈತ ಮುಕುಟ ಮಣಿ ಎನ್.ಡಿ. ಸುಂದರೇಶ್**, ಶಿವಮೊಗ್ಗ; ತೆನೆ ಪ್ರಕಾಶನ.

೧೯೨.ಹನುಮಂತಯ್ಯ.ಎಲ್, ೧೯೯೩, **ಅಂಬೇಡ್ಕರ್ ಮತ್ತು ಸಮಕಾಲೀನತೆ**, ಬೆಂಗಳೂರು; ವಾಹಿನಿ ಪ್ರಕಾಶನ.

೧೯೩.ಹಾರೋಗದ್ದೆ ಉಷಾರಮೇಶ್ ನಾಯಕ, ೨೦೦೨, **ಶಿವಮೊಗ್ಗ ಜಿಲ್ಲೆಯ ಶತಮಾನದ ಮಹಾನ್ ಪ್ರತಿಭೆಗಳು**, ಬೆಂಗಳೂರು; ಭೂಮಿಕಾ ಪ್ರಕಾಶನ.

೧೯೪.ಹೆಗ್ಗಡೆ ಡಿ. ಒಡೆಯರ್, ೧೯೮೬, **ಡಾ. ಬಿ.ಆರ್. ಅಂಬೇಡ್ಕರ್‌ರವರ ಸಮಗ್ರ ಚಿಂತನೆ**, ಮಂಗಳೂರು; ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾಲಯ.

೧೯೫.ಹುಚ್ಚಪ್ಪ ಮಾಸ್ತರ್ ಎನ್., ೨೦೦೨, **ಕಾಗೋಡು ಚಳವಳಿ-೫೦ ವರ್ಷ**, ಸಾಗರ; ಕಾಗೋಡು ಚಳವಳಿ ಸುವರ್ಣ ಮಹೋತ್ಸವದ ಸಮಿತಿ.

೧೯೬.ಹೊನ್ನಾಂಜಿನಯ್ಯ ಡಿ.ಆರ್., ೨೦೦೫, **ಸಾಮಾಜಿಕ ಹೋರಾಟದ ಚೈತನ್ಯಗಳು**, ದ್ಯಾಪೇನಹಳ್ಳಿ; ಅನುಪಮ ಪ್ರಕಾಶನ.

೧೯೭.ಹೊನ್ನಾಂಜಿನಯ್ಯ ಡಿ.ಆರ್., ೨೦೦೫, **ಶಾಂತವೇರಿ ಗೋಪಾಲಗೌಡರ ಜೀವನ ಸಾಧನೆ** ...ತುಮಕೂರು; ರಿಪ್ಲಿಕಾ ಪ್ರಕಾಶನ.

೧೯೮.ಕ್ಷೀರಸಾಗರ, ೧೯೯೬, **ದಿಕ್ಕುತಪ್ಪಿದ ಕರ್ನಾಟಕದ ಭೂ ಸುಧಾರಣೆ**, ಬೆಂಗಳೂರು; ಸಿಏಡ್ಸ್ ಪ್ರಕಾಶನ.

ಆ. ಆಂಗ್ಲ ಕೃತಿಗಳು

1. Arora V.K, 1984, **Rama Manohara Lohiya and Socialism in India,** New Delhi; Deep and Deep Publications.

2. Ashok Mehta, 1977, **Reflections on the Socialist Era,** New Delhi; S. Chand and Co.

3. Ashok Mehtha, 1959, **Studies in Asian Socialism,** Bombay; Bharatiya Vidya Bhavan.

4. Ashok Mehtha, 1953, **Socialism and Peasantry,** Bombay; A Praja Socialist Publications.

5. Asim Kumar Chowdary, 1980, **Socialist Movement in India,** Culcutta; Progressive Publishers.

6. Bhuchanan, Francis, 1807, **A Journey from Madras through the Countries of Mysore, Canara and Malabar (Vol-3)**, London; Bulmer and Company.

7. Chandrika Singh, 1987, **Communist and Socialists Movement in India,** Delhi; Mitta.

8. Gandhi M.K, 1966, **Socialism of My Conception,** Bombay; Bharatiya Vidya Bhavan.

9. George Lichteheion, 1970, **A Short History of Socialism**, New York; Pragear Publishers.

10. Jawahar Lal Nehru, 1984, **Independence and Social Revolution,** New Delhi; Vikas Publishing House.

11. Jaya Prakash Narayan, 1934, **Why Socialism, Banaras;** All India Congress Socialist Party.

12. Jayaprakash Narayan, 1980, **A Revolutionary Socialism** (Questioned by Bimal Prasad), New Delhi; Oxford University Press.

13. Joshi P.C, 1975, **Land Reforms in India: Trends and Perspectives,** New Delhi; Allied Publishers.

14. Kamala Gadre, 1966, **Indian way to Socialism,** New Delhi; Vir Publishing House.

15. Krishna Sahai, 1986, **Socialist Movement in India,** New Delhi; Classical Publishing Company.

16. Madhu Dandavate, 1983, **Evolution of Socialist Polices and Perspective 1934-1984,** Bombay; Popular Prakashan.

17. Narendra Deva, 1946, **Socialism and the National Revolution,** Bombay; Padma Publication Ltd.

18. Pai M.R, 1967, **Socialism in India: A Commentary,** Bombay; Popular Prakashan.

19. Ram Manohar Lohia, 1963, **Marx, Gandhi and Socialism**, Hyderabad; Navahind Prakashana.

20. Rao V.K.R.V, 1985, **Indian Socialism: Retrospect and Prospect,** New Delhi; Concept Publication Co.

21. Sampurnanand, 1961, **Indian Socialism,** Bombay; Asia Publishing House.

22. Verma V.P, 1974, **Studies in Hindu Political Thought and its Metaphysial Foundations,** Delhi; Motilal Banarasadas.

ಇ. ಕನ್ನಡ ಸಂಪ್ರಬಂಧಗಳು ಹಾಗೂ ಲೇಖನಗಳು

೧. ಅರುಣ್‌ಪ್ರಕಾಶ್ ಶೆಟ್ಟಿ, ೩೦.೮.೧೯೮೫, **ಕರ್ನಾಟಕದಲ್ಲಿ ರೈತ ಆಂದೋಳನ ಅನಿವಾರ್ಯವೇ...?,** ನಮ್ಮ ನಾಡು, ವಾರ ಪತ್ರಿಕೆ.

೨. ಕಡಿದಾಳ್ ಶಾಮಣ್ಣ, ೧೯೮೯, **ಮೂರನೇ ಶಕ್ತಿ ವೇದಿಕೆ: ಇದು ಕೊನೇ ಅವಕಾಶ,** ಸುದ್ದಿ ಸಂಗಾತಿ, ಮಾಸಿಕ.

೩. ತಾರಾ, ೮.೪.೧೯೮೪, ರಾಜಕೀಯ ಮುಕ್ತ ರೈತ ಸಂಘಟನೆ, ವಾರ ಪತ್ರಿಕೆ.

೪. **ದಲಿತರು ಮತ್ತು ರೈತ ಚಳುವಳಿ ವಿಶೇಷ ಸಂಚಿಕೆ,** ೧೯೮೩, ಪಂಚಮ, ಮಾಸಿಕ.

೫. ದೇವರಾಜ್ ನೇಂಪೆ, ೧೨.೮.೨೦೦೭, **ಅಹಿಂಸಾವಾದಿ ಚಳುವಳಿಗಳ ಹಿನ್ನಡೆಯಿಂದಾಗಿ ಹಿಂಸೆಯ ಒಡಲಾಗಿದೆ ಮಲೆನಾಡು...,** ಕನ್ನಡ ಟೈಮ್ಸ್.

೬. ನಟರಾಜ್ ಹುಳಿಯಾರ್, ಜೂನ್ ೨೦೧೩, **ಪ್ರೊ.ಎಂ.ಡಿ.ಎನ್. ಸಮಾಜವಾದಿ ಚಳವಳಿಗಳ ನಿರಂತರ ಸ್ಫೂರ್ತಿ** (ಸಂ. ಇಂದೂಧರ ಹೊನ್ನಾಪುರ), ಸಂವಾದ ವಿಶೇಷಾಂಕ, ಮಾಸಿಕ, ಸಂಪುಟ ೧೧, ಸಂಚಿಕೆ ೮, ಪು. ೯೦-೧೦೦.

೭. ನಾಗಭೂಷಣ ಡಿ.ಎಸ್., ೨೮.೬.೨೦೦೭, **ಇನ್ನೆಲ್ಲಿ ಆ ತಾಪ.. ಆ ಬೆಳಕು?,** ಅಗ್ನಿ, ವಾರ ಪತ್ರಿಕೆ.

೮. ಪ್ರಕಾಶ್ ಎಂ.ಪಿ., ೧೦.೫.೧೯೮೫, **ರೈತರ ಅಭಿವೃದ್ಧಿಗೆ ಶ್ರಮಿಸುವೆ** (ಸಂದರ್ಶನ: ಕೆ.ಎಂ. ವಿಶ್ವನಾಥ್), ನಮ್ಮ ನಾಡು, ವಾರ ಪತ್ರಿಕೆ.

೯. ಪ್ರಕಾಶ್ ಕಮ್ಮರಡಿ ಟಿ.ಎನ್., ಜುಲೈ-ಡಿಸೆಂಬರ್ ೧೯೮೮, **ರುಜುವಾತು,** ತ್ರೈಮಾಸಿಕ, ಸಂಪುಟ ೧೪, ಸಂಟಿಕೆ ೩೧-೩೨.

೧೦. ಪೋಲಂಕಿ ರಾಮಮೂರ್ತಿ, ೧೮-೨೪.೧೧.೧೯೯೨, **ಒತ್ತಾಯ, ರೈತ ಹೋರಾಟ,** ವಾರ ಪತ್ರಿಕೆ.

೧೧. ಬಾಲಕೃಷ್ಣ ಜಿ.ವಿ., ೫.೨.೧೯೮೪, **ರೈತ ಸಮರ ಸಿಡಿತ,** ತರಂಗ, ಮಾಸಿಕ, ಸಂ.೨, ಸಂ.೬.

೧೨. ಬಿದರಕೋಟಿ ಜಯಸೋಮಣ್ಣ, ೨೫.೧.೧೯೮೫, **ರೈತ ಸಂಘಟನೆಯ ಸವಾಲುಗಳು,** ನಮ್ಮ ನಾಡು, ವಾರ ಪತ್ರಿಕೆ.

೧೩. ಮಲಗೌಡ, ೭-೧೩.೧೦.೧೯೯೨, **ಯಶಸ್ವಿ ಸಂಘಟನೆ ಹೇಗೆ ಸಾಧ್ಯ,** ರೈತ ಹೋರಾಟ, ವಾರ ಪತ್ರಿಕೆ.

೧೪. ಮುಜಾಫರ್ ಅಸ್ಸಾದಿ, ಮೇ ೧೯೯೫, **ಭಾರತದ ಪ್ರಜಾಪ್ರಭುತ್ವ ಮತ್ತು ರೈತ ಹೋರಾಟ-ಬದಲಾಗುತ್ತಿರುವ ಪರಿಕಲ್ಪನೆಗಳು ಹಾಗೂ ಧೋರಣೆಗಳು** (ಸಂ: ಅನಂತಮೂರ್ತಿ ಯು.ಆರ್.) ರುಜುವಾತು, ತ್ರೈಮಾಸಿಕ, ಸಂಪುಟ ೩೯, ಸಂಚಿಕೆ ೨.

೧೫. ರಾಚಂ, ೧೪-೨೦.೨.೧೯೮೮, **ಕರ್ನಾಟಕದಲ್ಲಿ ಸಮರ್ಥ ನಾಯಕರಿದ್ದಾರೆಯೇ?,** ಮಾರ್ದನಿ, ವಾರ ಪತ್ರಿಕೆ.

೧೬. ವರದಿಗಾರರು, ೭-೧೩.೧೦.೧೯೯೨, **ಎನ್.ಡಿ. ಸುಂದರೇಶ್‌ರೊಂದಿಗೆ ಸಂದರ್ಶನ,** ರೈತ ಹೋರಾಟ, ವಾರ ಪತ್ರಿಕೆ.

೧೭. ಶ್ರೀಧರ್ ಕೆ.ಜಿ., ೧೨.೭.೨೦೦೭, **ತುಂಗಾ ಮೂಲ ಚಳುವಳಿಯ ಕೆಲವು ಸಂಗತಿಗಳು,** ಅಗ್ನಿ, ವಾರ ಪತ್ರಿಕೆ.

೧೮. ಸುಂದರೇಶ್ ಎನ್.ಡಿ., ೨೭.೧೦.೧೯೮೫, **ಗುಂಡೂರಾವ್ ಸರ್ಕಾರಕ್ಕಿಂತಲೂ ಈಗಿನ ಸರ್ಕಾರ ಕ್ರೂರ** (ಸಂದರ್ಶನ: ವರದಿಗಾರ), ವಾರ ಪತ್ರಿಕೆ.

೧೯. ಹೊರಬೈಲು ರಾಮಕೃಷ್ಣ, ೩೦.೭.೧೯೯೪, **ಸುಂದರೇಶ್ ಸ್ಮರಣೆ,** ರೈತ ಹೋರಾಟ, ವಾರ ಪತ್ರಿಕೆ.

ಈ. ಇಂಗ್ಲೀಶ್ ಸಂಪ್ರಬಂಧಗಳು ಹಾಗೂ ಲೇಖನಗಳು

1. Muzaffar Assadi, 7.8.2001, **Globalisation and the State: Interrogating the Farmer's Movement in India, Volume: 4,** Number 1, www.gateway.isec.ac.in /JSED/ JSED

2. Muzaffar Assadi, 2004, **New Social movements in Karnataka: History, Strategies and Discourses,** (Movements and Politics in Karnataka, ed: Harish Ramaswamy), Karnataka Journal of Politics), Mysore; Political Science Teachers' Academy, Volume-4, http://books/google/co.in/books?

3. Muzaffar Assadi, May-2005, April-2006, **Retrieving "Civil Society": Reclaiming villages through civil society Activism/Movement in Karnataka,** Journal of Karnataka Studies, (Ed: Vijay Poonacha thambanda), Bi annual, Vol-2, No.2 & 3, No.1, Hampi; Prasanga, Kannada University.

4. **Short history of young socialist league/samajawadi yuwak sabha/ samajawadi yuvjan sabha,** http://lohiatoday.com/socialistmovement/SHYSL. pdf.

೪. ನಿಯತಕಾಲಿಕೆಗಳು, ವಾರಪತ್ರಿಕೆಗಳು ಹಾಗೂ ದಿನಪತ್ರಿಕೆಗಳು

ನಿಯತಕಾಲಿಕೆಗಳು

೧. ಅಗ್ನಿ

೨. ತರಂಗ

೩. ದಿಕ್ಸೂಚಿ

೪. ರೈತ ಹೋರಾಟ

೫. ಲಂಕೇಶ್ ಪತ್ರಿಕೆ

೬. ಸಂಕ್ರಮಣ

೭. ಸಂವಾದ

೮. ಸುಧಾ

೯. ಸುದ್ದಿ ಸಂಗಾತಿ

೧೦. ಸಮೃದ್ಧಿ

೧೧. ಹೊಸತು

ದಿನಪತ್ರಿಕೆಗಳು

೧. ಅಭಿಮಾನಿ

೨. ಆಂದೋಲನ

೩. ಈ ಸಂಜೆ

೪. ಉದಯವಾಣಿ

೫. ಎಚ್ಚರಿಕೆ

೬. ಕನ್ನಡಪ್ರಭ

೭. ಕನ್ನಡಮ್ಮ

೮. ಕ್ರಾಂತಿರಂಗ

೯. ಛಲಗಾರ

೧೦. ಜನವಾಣಿ

೧೧. ಜನವಾಹಿನಿ

೧೨. ಜನವಾರ್ತೆ

೧೩. ನಾವಿಕ

೧೪. ಪ್ರಜಾವಾಣಿ

೧೫. ಮುಕ್ತ ಕರ್ನಾಟಕ

೧೬. ಮುಂಗಾರು

೧೭. ರೈತ ಬಂಧು

೧೮. ವಿಜಯ ಕರ್ನಾಟಕ

೧೯. ವಿಶ್ವವಾಣಿ

೨೦. ಸಂಕ್ರಾಂತಿ

೨೧. ಸಂಯುಕ್ತ ಕರ್ನಾಟಕ

೨೨. ಹಾಯ್ ಬೆಂಗಳೂರು

೨೩. ಹೊಸ ದಿಗಂತ

ಇಂಗ್ಲಿಶ್ ದಿನಪತ್ರಿಕೆಗಳು

೧. ಇಂಡಿಯನ್ ಎಕ್ಸ್‌ಪ್ರೆಸ್

೨. ಡೆಕ್ಕನ್ ಹೆರಾಲ್ಡ್

೩. ದ ಹಿಂದೂಸ್ಥಾನ್ ಟೈಮ್ಸ್

೪. ದ ಹಿಂದೂ

೫. ದ ಟೈಮ್ಸ್ ಆಫ್ ಇಂಡಿಯಾ

ಅನುಬಂಧ–೨

ಸಂದರ್ಶನದ ವಿವರಗಳು

೧. ಕಡಿದಾಳು ಶಾಮಣ್ಣ, ಶಿವಮೊಗ್ಗ

೨. ಕಾ.ಹಿ. ರಾಧಾಕೃಷ್ಣ, ಬೆಂಗಳೂರು

೩. ಚಂದ್ರೇಗೌಡ ಬಿ, ಶಿವಮೊಗ್ಗ

೪. ಚಂದ್ರಶೇಖರಯ್ಯ, ಭದ್ರಾವತಿ

೫. ದಿವಾಕರ, ಶಿವಮೊಗ್ಗ

೬. ನಟರಾಜ, ಶಿವಮೊಗ್ಗ

೭. ಪುಟ್ಟಪ್ಪ, ಶಿವಮೊಗ್ಗ

೮. ರಾಜಾರಾಮ ತೋಳ್ಪಾಡಿ, ಮಂಗಳೂರು

೯. ಸೋನಕ್ಕ ಗೋಪಾಲಗೌಡ, ಬೆಂಗಳೂರು


೧೦. ಸ್ವಾಮಿರಾವ್, ಹೊಸನಗರ

೧೧. ಕಾಗೋಡು ಅಣ್ಣಾಜಿ, ಸಾಗರ


೧೨. ಕೋಣಂದೂರು ಲಿಂಗಪ್ಪ, ಶಿವಮೊಗ್ಗ

೧೩. ನೆಂಪೆ ದೇವರಾಜ್, ತೀರ್ಥಹಳ್ಳಿ

೧೪. ಗಣಪತಿಯಪ್ಪ ಹೆಚ್., ಸಾಗರ




ಶಾಂತವೇರಿ ಗೋಪಾಲಗೌಡ



ಶಾಂತವೇರಿ ಗೋಪಾಲಗೌಡರ ತಾಯಿ ಶೇಷಮ್ಮ



ಶಾಂತವೇರಿ ಗೋಪಾಲಗೌಡ ದಂಪತಿಗಳು
ಮದುವೆ ಸಂದರ್ಭದಲ್ಲಿನ ಛಾಯಾಚಿತ್ರ



ಮಡದಿ ಸೋನಕ್ಕ ಮಕ್ಕಳಾದ ಇಳಾಗೀತಾ ಮತ್ತು ರಾಮಮನೋಹರರೊಂದಿಗೆ ಗೌಡರು



ಪೋಲಿಸರ ಚಕ್ರವ್ಯೂಹದಲ್ಲಿ ಕಾಗೋಡು ರೈತರು



ರಾಜಕೀಯ ಗುರು ಡಾ.ರಾಮಮನೋಹರ ಲೋಹಿಯಾರೊಂದಿಗೆ ಗೋಪಾಲಗೌಡರು



ಡಾ. ಲೋಹಿಯಾರೊಂದಿಗೆ ಗೌಡರು ಮತ್ತು ಜೆ.ಹೆಚ್.ಪಟೇಲ್




ಶಿವಮೊಗ್ಗದಲ್ಲಿ ಸಮಾಜವಾದಿ ಯುವಜನ ಸಭಾ ಮೆರವಣಿಗೆ



ಸಮಾಜವಾದಿಗಳೊಂದಿಗೆ ಸಮಾಲೋಚನೆ : ಜಾರ್ಜ್ ಫರ್ನಾಂಡಿಸ್ ಮತ್ತಿತರರು




ಮೈಸೂರು - ಮಹಾರಾಷ್ಟ್ರ ಗಡಿ ಸಮಸ್ಯೆ ಕುರಿತು ಚರ್ಚಿಸಲು ಸರ್ವಪಕ್ಷ ನಿಯೋಗದ ನಾಯಕರಾಗಿ ಗೋಪಾಲ ಗೌಡರು ರಾಷ್ಟ್ರಪತಿ ವಿ.ವಿ.ಗಿರಿಯವರೊಡನೆ




February 15th, Monday, 1960

ಶಾಂತವೇರಿ ಗೋಪಾಲಗೌಡರ ಹಸ್ತಾಕ್ಷರ



ಶಾಂತವೇರಿ ಗೋಪಾಲಗೌಡರ ಹಸ್ತಾಕ್ಷರ



ಚರಿತ್ರೆ ವಿಭಾಗ